ಕನ್ನಡ ಸಂತರ

ಪರಮಾರ್ಥ ಪಥ

Pathway to God in Kannada Literature

ಡಾ. ಆರ್. ಡಿ. ರಾನಡೆ

ಕನ್ನಡ ಅನುವಾದಕರು

ಶ್ರೀ ಎಂ. ಎಸ್. ದೇಶಪಾಂಡೆ



ಧರ್ಮದರ್ಶನಗಳ ತೌಲನಿಕ ಅಧ್ಯಯನಪೀಠ

ಶ್ರೀ ಗುರುದೇವ ಡಾ. ಆರ್. ಡಿ. ರಾನಡೆ ಮಂದಿರ,

ಹಿಂದವಾಡಿ-ಬೆಳಗಾವಿ

ಕನ್ನಡ ಸಂತರ
ಪರಮಾರ್ಥ ಪಥ

ಕನ್ನಡ ಸಂತರ
ಪರಮಾರ್ಥ ಪಥ

ಲೇಖಕರು
ಡಾ. ಆರ್. ಡಿ. ರಾನಡೆ

ಅನುವಾದಕರು
ಶ್ರೀ ಎಂ. ಎಸ್. ದೇಶಪಾಂಡೆ

ಪ್ರಕಾಶಕರು
ಧರ್ಮ ದರ್ಶನಗಳ ತೌಲನಿಕ ವಿದ್ಯಾಪೀಠ
ಗುರುದೇವ ರಾನಡೆ ಮಂದಿರ, ಹಿಂದವಾಡಿ ಬೆಳಗಾವಿ

KANNADA SANTAR PARMARTHA PATHA : By Dr. R. D. Ranade Published by : Gurudev Ranade Mandir Hindwadi - Belagum.

First Edition 2010

Copies : 1500

Price : Rs. 250/-

© Publisher

Pages : xxiv + 328

Paper used : 70 G.S.M. Maplitho

ಕನ್ನಡ ಸಂತರ ಪರಮಾರ್ಥ ಪಥ : ಲೇಖಕರು ಡಾ. ಆರ್. ಡಿ. ರಾನಡೆ, ಅನುವಾದಕರು : ಶ್ರೀ ಎಂ. ಎಸ್. ದೇಶಪಾಂಡೆ

ಪ್ರಕಾಶಕರು : ಧರ್ಮ ದರ್ಶನಗಳ ತೌಲನಿಕ ಅಧ್ಯಯನ ಪೀಠ
ಗುರುದೇವ ರಾನಡೆ ಮಂದಿರ, ಹಿಂದವಾಡಿ ಬೆಳಗಾವಿ

© ಪ್ರಕಾಶಕರದು

ಪ್ರಥಮ ಮುದ್ರಣ : ೨೦೧೦

ಬೆಲೆ. ರೂ. ೨೫೦/-

ಪ್ರತಿಗಳು : ೧೫೦೦

ಪುಟಗಳು : xxiv + ೩೨೮

ಬಳಸಿದ ಕಾಗದ : ೭೦ ಜಿ.ಎಸ್.ಎಮ್. ಮ್ಯಾಫಲಿಥೋ

ಮುದ್ರಕರು :
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಕಾಗದಗೇರಿ ಓಣಿ, ಗದಗ – 582 101.
✆ : (08372) 237566, 235509 (O) 236578 (R)
Email : chaitanya_offset@yahoo.co.in

ಪ್ರಕಾಶಕರ ಮನೋಗತ

"ಕನ್ನಡ ಸಂತರ ಪರಮಾರ್ಥಪಥ" (Pathway to God in Kannada literature) ಇದು ಆಧುನಿಕ ಭಾರತದ ಶ್ರೇಷ್ಠ ಚಿಂತಕರಾದ ಶ್ರೀ ಗುರುದೇವ ಡಾ. ಆರ್.ಡಿ.ರಾನಡೆಯವರ ಸಾಧನೆ ಚಿಂತನೆ ಹಾಗೂ ಅನುಭಾವದ ಫಲವಾಗಿ ಮೂಡಿ ಬಂದ ಕನ್ನಡ ನಾಡಿನ, ಅನುಭಾವಿಗಳ, ಆತ್ಮವೇತ್ತರ, ಸಂತರ ಜ್ಞಾನಿಗಳ, ಅನುಭಾವದ ಬಗ್ಗೆ ರಚಿಸಿದ ಸಾಹಿತ್ಯದ ಮಂಥನರೂಪದ ಕೃತಿಯಾಗಿದೆ.

ಅಧ್ಯಾತ್ಮ, ಅನುಭಾವದ ತಳಹದಿಯ ಮೇಲೆ ಮಾನವತೆಯ ಏಕತೆ ಹಾಗೂ ತುಲನಾತ್ಮಕ ದೃಷ್ಟಿಕೋನದಿಂದ ವಿವಿಧ ಮತ-ಪಂಥಗಳ ಅಧ್ಯಯನ, ಸಂಶೋಧನೆ ಇವುಗಳಿಂದ ಮೂಡಿಬರುವ "ಸಮನ್ವಯ". ಇದು ಶ್ರೀ ಗುರುದೇವರ ಮಾರ್ಗ. ಈ ವಿನೂತನ ಆಯಾಮವನ್ನು ತತ್ವಶಾಸ್ತ್ರ ಚಿಂತನೆಗೆ ನೀಡಿದವರು ಶ್ರೀ ಗುರುದೇವ ಡಾ. ಆರ್.ಡಿ.ರಾನಡೆಯವರು. ಈ ತುಲನಾತ್ಮಕ ಚೌಕಟ್ಟನ್ನು ತಮ್ಮ ಮನೋಭೂಮಿಕೆಯಲ್ಲಿ ಸಿದ್ಧಪಡಿಸಿ ಅದಕ್ಕೆ ಮೂರ್ತರೂಪ ವನ್ನು ಅವರು ನೀಡಿದಾಗ ರಚಿತವಾದುದೇ (Pathway to God in Kannada -Marathi-Hindi literature) ಈ ಎಂಬ ಉದ್ಗ್ರಂಥಗಳು.

ಈ ಗ್ರಂಥವನ್ನು ಮೂಲತಃ ಇಂಗ್ಲೀಷ ಭಾಷೆಯಲ್ಲಿ ರಚಿಸಿದ್ದರ ಪರಿಣಾಮವಾಗಿ ಪ್ರಪಂಚದೆಲ್ಲೆಡೆ ಕನ್ನಡ ಅನುಭಾವಿಗಳ ವಿಚಾರ ಪಸರಿಸು ವಂತಾಯಿತು. ಕನ್ನಡದ ಅನುಭಾವಿ ಚಿಂತಕರು ದೇಶ-ವಿಶ್ವದ ಇತರ ಭಾಗಗಳಲ್ಲಿಯ ಚಿಂತಕರೊಂದಿಗೆ ಸಾಮ್ಯತೆ ಮತ್ತು ಆಧ್ಯಾತ್ಮಿಕ ಏಕತೆಯನ್ನು ಹೊಂದಿರುವ ರೆಂಬುದು, ಚಿಂತಕರಿಗೆ ಹಾಗೂ ತತ್ತ್ವಶಾಸ್ತ್ರಜ್ಞರಿಗೆ ಪರಿಚಯಕ್ಕೆ ಬರುವಂತಾಯಿತು.

ಅನುಭಾವವೆಂದರೆ ಪರಮಾತ್ಮನ ಸಾಕ್ಷಾತ್ಕಾರ. ಪ್ರಪಂಚದಲ್ಲಿಯ ಎಲ್ಲ ನಾಡುಗಳಲ್ಲಿ ಅನುಭಾವಿಗಳು ಬಾಳಿ ಬೆಳಗಿದುದುಂಟು. ಆದರೆ ಭಾರತದಲ್ಲಿ ಅನುಭಾವಿಗಳ ಸಂಖ್ಯೆಯು ಬೇರೆ ದೇಶದಲ್ಲಿಯ ಅನುಭಾವಿಗಳ ಸಂಖ್ಯೆಗಿಂತಲೂ ದೊಡ್ಡದಿರುವುದೆಂಬುದನ್ನು ನೆನೆಯಬೇಕು. ಈ ಅನುಭಾವಿಗಳು ಆಯಾ ನುಡಿಗಳಲ್ಲಿ ತಮ್ಮ ಅನುಭಾವವನ್ನು ಬರೆದಿರಿಸಿರುವರು. ಈ ಅನುಭಾವ ಸಾಹಿತ್ಯ ವನ್ನು ಕಲೆ ಹಾಕಿ ಒಂದೆಡೆ ತಂದರೆ ಅವುಗಳಲ್ಲಿ ಮೂಡಿದ ಅನುಭಾವ-ತತ್ತ್ವಜ್ಞಾನದ ಪೂರ್ಣಸ್ವರೂಪವನ್ನು ಅರಿತುಕೊಳ್ಳಲು ಅನುಕೂಲವಾಗ

ಬಹುದು. ಈ ಉಜ್ವಲವಾದ ತತ್ತ್ವಜ್ಞಾನ ಸೂತ್ರವು ಇಡೀ ವಿಶ್ವವನ್ನು ತನ್ನ ಒಲವಿನ ತೆಕ್ಕೆಯಲ್ಲಿ ಬಿಗಿದಿಡಬಹುದು. ಇದರ ಮೂಲಕ ವಿಶ್ವವು ಒಂದು ಕುಲವಾಗಿ ಪರಿವರ್ತನೆ ಹೊಂದಿ ಮಾನವತೆಯು ಒಂದಾಗಬಹುದು ಎಂದು ಗುರುದೇವರು ಹೇಳಿರುವರು.

ಆತ್ಮಾನಂದವು ಪ್ರತಿಯೊಬ್ಬನಿಗೆ ಅನುಭವಿಸಲು ಬರುವಂತಹುದು. ಬೌದ್ಧಿಕ ಸುಖದೆದುರು (Happiness) ವಿಷಯಸುಖವು(Pleasure) ಕೀಳು ಇರುವಂತೆ, ಆತ್ಮಾನಂದದೆದುರು ಬೌದ್ಧಿಕ ಸುಖವು ತೀರ ಕೀಳಾದುದಿರವದೆಂಬುದು ಸಂತರ ಮತ, ಮನುಜನು ಈ ಜಗತ್ತಿನಲ್ಲಿ ಬತ್ತಲೆಯಾಗಿ ಬರುವ; ಇಲ್ಲಿಂದ ಬತ್ತಲೆ ಯಾಗಿಯೇ ತೆರಳುವ. ಈ ಸಾಮ್ಯದ ಅರಿವಿನಿಂದಲೇ ರಾಜಕೀಯ ಹಾಗೂ ಸಾಮಾಜಿಕ ಭೇದಭಾವನೆಯು ಅಳಿಯುವುದು. ಅದೇ ಮೇರೆಗೆ ಒಂದೇ ದಾರಿಯಿಂದ ಮಾನವನು ಪಡೆಯಬಹುದಾದ ಆತ್ಮಾನುಭಾವದ ಒಂದೇ ಧ್ಯೇಯದ ಸ್ವೀಕೃತಿಯಿಂದಲೂ ಕೂಡ, ಮಾನವ ಮಾನವರಲ್ಲಿಯ ಭಿನ್ನಭಾವವು ಅಳಿಯುವುದು. ಅದರ ಪ್ರಭಾವದಿಂದಲೇ ಮಾನವಕುಲದಲ್ಲಿ ಏಕತೆಯು ಬೆಳೆಯುವುದು. ಈ ಭೇದರಹಿತ ಅನುಭಾವದ ಮೂಲಕವೇ ಮಾನವತೆಯು ಒಂದೆಂಬುದು ಸಿದ್ಧವಾಗುವುದು.

ಮಾನವತೆಯ ಏಕತೆಯು ಮಾನವರಲ್ಲಿಯ ಬಂಧುಭಾವದ ಬೆಳವಣಿಗೆ ಯನ್ನವ-ಲಂಬಿಸಿದೆ. ಈ ಬಂಧು ಭಾವವನ್ನು ಬೆಳೆಸಲು ಹೆಣಗಿದ ಶಕ್ತಿಗಳಲ್ಲಿ ಅನುಭಾವವೇ ಹಿರಿದೆನ್ನಲು ಅಡ್ಡಿಯಿಲ್ಲ. ಅದೇ ಮಾನವನಿಗೆ ದೃಷ್ಟಿವೈಶಾಲ್ಯ ವನ್ನು ಬುದ್ಧಿ ವೈಶಾಲ್ಯವನ್ನು, ಭಾವವೈಶಾಲ್ಯವನ್ನು ನೀಡಿ, ಅವನಲ್ಲಿ ಬಂಧುಭಾವ ವನ್ನು ಬೆಳೆಸಿತು. ಬಗೆಬಗೆಯ ಭೇದಭಾವಗಳನ್ನು ಅಳಿಸಿತು. ಅವನಲ್ಲಿ ಏಕತೆಯ ಬೀಜವನ್ನು ಮೊಳೆಸಿತು. ಇನ್ನು ಮುಂದೆಯೂ ಅದೇ ಈ ಮಹಾಕಾರ್ಯವನ್ನು ಮಾಡಬಲ್ಲುದು. ಇದು ಶ್ರೀಗುರುದೇವರ ಸ್ಪಷ್ಟ ಅಭಿಮತ.

ಈ 'ಸಮನ್ವಯ' ಸಿದ್ಧಾಂತವು ಕೇವಲ ಪಂಡಿತರು ಚರ್ಚೆಯ ವಿಷಯವಾಗದೇ ಅದು ಒಂದು ಸಾಮಾಜಿಕ ಬದ್ಧತೆಯ ಸೂತ್ರದಡಿಯಲ್ಲಿ ಸಾಧನಾರೂಪದಲ್ಲಿ ಬರಬೇಕೆಂಬ ಮಹಾಸಂಕಲ್ಪವನ್ನು ಹೊಂದಿ "ಒಬ್ಬನೇ ದೇವರು, ಒಂದೇ ಜಗತ್ತು, ಮಾನವೀಯತೆಯ ಧರ್ಮ ಒಂದೇ (One God, One World, One Religion of Humanity)" ಈ ತತ್ವಗಳನ್ನು ರೂಪಿಸಿ ನಿರೂಪಿಸಿರುವ ಸಂಸ್ಥೆಯಾಗಿ ೧೯೨೪ರಲ್ಲಿ ಪುಣೆಯಲ್ಲಿ Academy of Comparative Philosophy and Religion (ACPR) ಧರ್ಮದರ್ಶನಗಳ ತೌಲನಿಕ ಅಧ್ಯಯನ

ಪೀಠವನ್ನು ಸ್ಥಾಪಿಸಿದರು. ಈ ಸಂಸ್ಥೆ ಇಂದಿನ ರೂಪದಲ್ಲಿ ಬೆಳಗಾವಿಯಲ್ಲಿ ಸ್ಥಾಯಿಯಾದದ್ದು, ೧೯೫೨ರಲ್ಲಿ. ಅಂದಿನ ರಾಷ್ಟ್ರಪತಿ ಡಾ. ಎಸ್.ರಾಧಾಕೃಷ್ಣನ್‌ರ ವರಿಂದ ೧೯೬೫ರಲ್ಲಿ ಪ್ರಸ್ತುತ ಕೇಂದ್ರ ಕಟ್ಟಡ ಉದ್ಘಾಟಿತವಾಯಿತು.

ಶ್ರೀ ಗುರುದೇವರೇ ನಿರ್ದೇಶಿಸದಂತೆ ಈ ಸಂಸ್ಥೆಯು ಈ ಕೆಳಗಿನ ಉದ್ದೇಶಗಳನ್ನೊಳ ಗೊಂಡಿದೆ.

* ವಿಶ್ವದ ಎಲ್ಲಾ ದರ್ಶನಗಳ, ಧರ್ಮಗಳ ನಂಬಿಕೆಗಳ ಅನುಭಾವಗಳ ತೌಲನಿಕ ಅಧ್ಯಯನ ಹಾಗೂ ಅವುಗಳ ಸಮನ್ವಯ ಸಿದ್ಧಾಂತ ಪ್ರತಿಪಾದನೆ.
* ಧಾರ್ಮಿಕ-ದಾರ್ಶನಿಕ ತತ್ತ್ವಚಿಂತನೆಯ ಪುಸ್ತಕಗಳ ಪ್ರಕಟಣೆ.
* ವಿವಿಧ ಚಿಂತನೆಗಳ ಬಗೆಗೆ, ಸಂಶೋಧನೆ, ಕಾರ್ಯಾಗಾರ, ಸಮ್ಮೇಳನ, ಉಪನ್ಯಾಸ, ಇವುಗಳ ಆಯೋಜನೆ.
* ಈ ಎಲ್ಲಾ ಕಾರ್ಯಗಳನ್ನು ಅಧ್ಯಯನಪೀಠದ ಮಾದರಿಯಲ್ಲಿ ಕ್ರೋಢೀಕರಿಸುವುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಸಾಧನೆ ಮತ್ತು ಶಿಕ್ಷಣಕ್ಕೆ ಅನುವು ಮಾಡಿಕೊಡುವುದು.

'ಪರಾಮರ್ಶಿತ ಅನುಭಾವ'(Rational Mysticism) 'ಸಮನ್ವಯ ಸಿದ್ಧಾಂತ' (Philosophy of Synthesis) ಹಾಗೂ 'ತುಲನಾತ್ಮಕ ಅಧ್ಯಯನ' (Comparative Study) ಇವುಗಳಿಗೆ ಮೀಸಲಾದ ಮೊದಲ ಸಂಸ್ಥೆ ಶ್ರೀ ಗುರುದೇವ ಡಾ. ಆರ್.ಡಿ.ರಾನಡೆ ಯವರು ಸ್ಥಾಪಿಸಿದ ಪ್ರಸ್ತುತ ಈ ಸಂಸ್ಥೆಯಲ್ಲಿ ೩೦,೦೦೦ಕ್ಕೂ ಹೆಚ್ಚು ಪ್ರಾಚೀನ, ಅರ್ವಾಚೀನ ಗ್ರಂಥಗಳನ್ನೊಳ ಗೊಂಡ ವಾಚನಾಲಯ, ಕಾಲಕಾಲಕ್ಕೆ ಚಿಂತನೆಗೋಷ್ಠಿಗಳು, ಉಪನ್ಯಾಸಗಳು, ವಿವಿಧ ಮತಧರ್ಮಗಳ ಚರ್ಚಾ ಮತ್ತು ಮಂಥನಗೋಷ್ಠಿಗಳು, ಸಾಧನಾ ಶಿಬಿರಗಳು, ಯೋಗ ತರಬೇತಿ ಮತ್ತು ಕಾಲೇಜು ಶಿಕ್ಷಣ, ಗ್ರಂಥಗಳ ಪ್ರಕಟಣೆ ಮತ್ತು ಅಂತರರಾಷ್ಟ್ರೀಯ ಪ್ರಸಾರವುಳ್ಳ "Pathway to God" ಎಂಬ ನಿಯತಕಾಲಿಕೆಯ ಪ್ರಕಟಣೆಗಳು, ಈ ಕಾರ್ಯಗಳನ್ನು ತನ್ನ ಇತಿಮಿತಿಯಲ್ಲಿ ನಡೆಸುತ್ತ ಬಂದಿದೆ.

ಈಗ ಮರು ಪ್ರಕಾಶಗೊಳ್ಳುತ್ತಿರುವ ಈ ಗ್ರಂಥ ಮೂಲ ಇಂಗ್ಲೀಷನಲ್ಲಿ ಭಾರತೀಯ ವಿದ್ಯಾಭವನವು (Pathway to God in Kannada literature)

ಎಂದು ಪ್ರಕಟಿಸಿದ್ದು, ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ಅವತರಣಿಕೆ ಪ್ರಕಟವಾಗಿತ್ತು. ಈಗ ಪ್ರತಿಗಳು ಲಭ್ಯವಿಲ್ಲದಿದ್ದರಿಂದ, ಓದುಗರ ಬೇಡಿಕೆಯನ್ನು ಗಮನಿಸಿ, ದಾನಿಗಳ ಸಹಕಾರದಿಂದ ಇದನ್ನು ಪ್ರಕಟಿಸುತ್ತಿದ್ದೇವೆ. ಮರುಮುದ್ರಣಕ್ಕೆ ಅನುಮತಿ ನೀಡಿ ಸಹಕರಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿ ವರ್ಗಕ್ಕೂ, ಪ್ರಸಾರಾಂಗ ನಿರ್ದೇಶಕರಿಗೂ ನಮ್ಮ ಕೃತಜ್ಞತೆಗಳು.

ತಮ್ಮ ಮೌಲಿಕ ನುಡಿಮಂಗಳ ಬರೆದುಕೊಡುವ ಮೂಲಕ ನಮ್ಮನ್ನು ಹರಸಿದ ತುಮಕೂರು ಸಿದ್ಧಗಂಗಾಮಠದ ಪೂಜ್ಯಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳವರಿಗೆ ನಮ್ಮ ನಮನಗಳು. ಅವರ ಪ್ರೋತ್ಸಾಹದಾಯಕ ಉಪಕ್ರಮವು ನಮ್ಮನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಮುನ್ನಡೆಸಲಿದೆ.

ಅಗತ್ಯ ಮಾರ್ಗದರ್ಶನ ಹಾಗೂ ಆಶೀರ್ವದಿಸಿದ ನೀಡಿದ ನಾಗನೂರು ರುದ್ರಾಕ್ಷಿಮಠದ ಶ್ರೀ ಸಿದ್ಧರಾಮ ಮಹಾಸ್ವಾಮಿಗಳು ಮತ್ತು ಕಾರಂಜಿಮಠದ ಶ್ರೀ ಗುರುಸಿದ್ಧ ಮಹಾಸ್ವಾಮಿಗಳವರಿಗೆ ನಮ್ಮ ಹೃತ್ಪೂರ್ವಕ ನಮನಗಳು.

ಕರಡು ಪ್ರತಿಯನ್ನು ತಿದ್ದಿದ ಡಾ. ರಾಮಕೃಷ್ಣ ಮರಾಠೆ, ಶ್ರೀ ಸುಬ್ರಮ್ಮಣ್ಯ ಭಟ್ ಅವರಿಗೆ ಅಕ್ಷರ ಸಂಯೋಜನೆ ಮಾಡಿದ ಪ್ರಕಾಶ ಗಿರಿಮಲ್ಲನವರ, ಅಲ್ಪಾವಧಿಯಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿದ ತ್ವರಿತ ಮುದ್ರಣಾಲಯ, ಗದಗ ಅವರಿಗೆ, ಪ್ರತ್ಯಕ್ಷ ಹಾಗೂ ಪರೋಕ್ಷ ಸಹಕಾರ ನೀಡಿದ ಎಲ್ಲಾ ಸಹೃಯ ಬಂಧುಗಳಿಗೆ ಕೃತಜ್ಞರಾಗಿದ್ದೇವೆ.

ಬೆಳಗಾವಿ

ದಿನಾಂಕ: ೧೧.೦೧.೨೦೧೦ ಇತಿ ಸಜ್ಜನ ವಿಧೇಯ

ಎಮ್. ಬಿ. ಝಿರಲಿವಕೀಲರು
ಗೌರವ ಕಾರ್ಯದರ್ಶಿ (A.C.P.R)
ಧರ್ಮದರ್ಶನಗಳ ತೌಲನಿಕ ಅಧ್ಯಯನ ಪೀಠ
ಗುರುದೇವ ಡಾ. ರಾನಡೆ ಮಂದಿರ
ಹಿಂದವಾಡಿ, ಬೆಳಗಾವಿ

ನುಡಿಮಂಗಳ

"ಕನ್ನಡ ಸಂತರ ಪರಮಾರ್ಥಪಥ"ವನ್ನು ಆಮೂಲಾಗ್ರವಾಗಿ ಅವಲೋಕಿಸಿದಾಗ ಡಾ॥ ಆರ್.ಡಿ.ರಾನಡೆಯವರನ್ನು ಕುರಿತು ಶ್ರೀ ಅರವಿಂದರು, ಡಾ॥ ರಾಜೇಂದ್ರಪ್ರಸಾದ್‌ರವರು ಡಾ॥ ಎಸ್. ರಾಧಾಕೃಷ್ಣನ್ ಅವರು, ಡಾ॥ ಡಿ.ಸಿ.ಪಾವಟೆಯವರು, ಮತ್ತು ಶ್ರೀ ಆರ್. ಆರ್ .ದಿವಾಕರ್‌ರವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು, ಯಥಾರ್ಥವಾದುವುಗಳಾಗಿವೆ ಎಂಬುದು ಸ್ಪಷ್ಟವಾಯಿತು. ಡಾ॥ ರಾನಡೆಯವರು ಆಧುನಿಕ ಕಾಲದ ಹಿರಿಯ ಅನುಭಾವಿಗಳು. ಅವರದು ವಿಶಾಲವಾದ ಅಧ್ಯಯನ, ಆಳವಾದದ್ದೂ ಕೂಡ. ಹಲವು ಭಾಷೆಗಳನ್ನು ಬಲ್ಲವರಾಗಿದ್ದ ಡಾ॥ ರಾನಡೆಯವರು ವಿವಿಧ ಭಾಷೆಗಳ ಅನುಭಾವಿಗಳು ಪರಮಾರ್ಥ ಪಥದಲ್ಲಿ ತೂಗುಬಿಟ್ಟಿರುವ ಬೆಳಕಿನ ಸಾಲುದೀಪಗಳು ಅನುಭಾವದ ಎತ್ತರ ಬಿತ್ತರಗಳನ್ನು ಕಾಣಿಸುವಂತಿವೆ.

ಕನ್ನಡ ಸಂತರು ಅನುಭಾವಿಗಳು, ಶಬ್ದಮುಗ್ಧರು, ನಿಶ್ಶಬ್ದ ಶುದ್ಧರು, ಶಬ್ದ ನಿಶ್ಶಬ್ದದಾಚೆಗಿನ ಬೆಳಕಿನಲ್ಲಿ ಅರಳಿದವರು, ನಾದ ಬಿಂದು ಕಲೆಗಳೊಳಗಿನ ಪರಮಾರ್ಥ ಪಥವನ್ನು ಬೆಳಗಿದವರು.

ಅನುಭಾವವು ಮಾನವತೆಯನ್ನು ಒಂದುಗೂಡಿಸುವ ಆಧ್ಯಾತ್ಮಿಕ ಜೀವನದ ಒಂದು ಬಗೆ (ಪುಟ–೧) ಎಂಬ ಡಾ॥ ರಾನಡೆಯವರ ಅಭಿಪ್ರಾಯ ನಮ್ಮದೂ ಆಗಿದೆ. "ಮಾತು ಮನಂಗಳಿಂದತ್ತತ್ತ ಮೀರಿದ ಜ್ಯೋತಿ"ಯಾದ ಅನುಭಾವ, ದೇಶ ಕಾಲ ಭಾಷೆ ಮತ್ತು ಕಾಲಾತೀತವಾದುದು. ಅದು ಅರಿವಿನೊಳಗಣ ಅರಿವು. ಸರ್ಪಭೂಷಣ ಶಿವಯೋಗಿಗಳು ಹೇಳುವಂತೆ "ಮರೆವೆಯಂಶವೆನೆಲ್ಲ ತೂರೆದು ಬಿಟ್ಟಿರುವಂಥದ್ದು. ಪರಮಾರ್ಥದರಿ ವಿನಾಚರಣೆಯನ್ನು ಮೆರೆಯುವಂಥದ್ದು ಪರಮಾತ್ಮನುಳಿಮೆತಾನೆಂದು" ನಂಬಿರುವಂಥದ್ದು.

ಪ್ರಸ್ತುತ ಕೃತಿ ಅನುಭಾವಿಗಳ ಸಮೀಕ್ಷೆಯಾಗಿದ್ದು ಅನುಭಾವದ ದರ್ಶನಕ್ಕೆ ತೆರೆದ ಪರಮಾರ್ಥಪಥವಾಗಿದೆ. ಇಪ್ಪತ್ತು ಅಧ್ಯಾಯಗಳಿಗಿಟ್ಟಿರುವ ಶೀರ್ಷಿಕೆಗಳು ಧ್ವನಿಪೂರ್ಣವಾಗಿದ್ದು ಒಂದೊಂದು ಚಿಂತನಮಂಥನಾರ್ಹವಾಗಿವೆ. ಕನ್ನಡ ಸಂತರ ಜೊತೆ ಜೊತೆಗೇ ಇತರ ಭಾಷೆಯ ಸಂತರ ಮತ್ತು ವಿದೇಶೀಯ ಸಂತರ ಅನುಭಾವದ ದರ್ಶನವೂ ವಾಚಕನಿಗಾಗುತ್ತದೆ. ಗ್ರಂಥದ

ಪುಟಪುಟಗಳಲ್ಲಿ ಅನುಭಾವ ಕೆನೆಗಟ್ಟುತ್ತದೆ. ಆ ಕೆನೆ ಅಕ್ಷರಗಳಲ್ಲಿ ಸೂತ್ರರೂಪಿಯಾಗಿ ಮೈದೋರಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸುತ್ತಿದ್ದೇವೆ. "ಸದ್ಗುರುಗಳ ಪಾದಪೂಜೆಯೇ ಅನುಭಾವ" (ಪು. ೪೯-೫೦) 'ಕೇವಲ ಅನುಭಾವದ ಬಲವೇ ನಿಮ್ಮನ್ನು ದಾರ್ಶನಿಕ ಸಂದೇಹಗಳ ಆಚೆ ಒಯ್ಯಬಲ್ಲುದು' 'ಆತ್ಮದರ್ಶನವು ದೇವ ದರ್ಶನಕ್ಕಿಂತ ಮೇಲ್ತರಗತಿಯದಿರುವುದು' ಪು. ೫೭) (ಸಂತರಿಗೆ) 'ಯೋಗ-ಭೋಗ-ಗಳೆರಡೂ ಅವರಿಗೆ ಸಮಾನವಾದವುಗಳು' (ಪು. ೬೭) 'ನಾನಿಂತು ನಿಂತರೆ ಏನಾಗುವುದು?' (ಪು. ೬೭) 'ಕೂಡಲೂರೇಶರ ಕೃಪಾದಯದಿಂದ ಮುಟ್ಟಿಕೊಟ್ಟ ಗುರುರಾಯ'(ಪು. ೮೨) 'ಅಂತರ್ದರ್ಶನ ಮತ್ತು ಬಹಿರ್ದರ್ಶನ' ಇವೆರಡೂ ಏಕಕಾಲದಲ್ಲಿ ಮತ್ತು ಸರಿಸಮವಾಗಿ ಜರುಗಬೇಕು. ಅವೆರಡೂ ಒಂದನ್ನೊಂದು ಸಮರ್ಥಿಸಿದಾಗಲೇ ಅದು ಪರಮ ಸತ್ಯದ ಅನುಭವವಾಗಬಲ್ಲುದು (ಪು.೧೦೦) 'ಭಾವಲಿಂಗವೆಂಬುದು ಒಂದು ಬಲು ಮಹತ್ವದ ದಾರ್ಶನಿಕ ಕಲ್ಪನೆ'. 'ಯೋಗದ ಪರಿಭಾಷೆಯಲ್ಲಿ ಇಷ್ಟಲಿಂಗವು ಭೌತಿಕ ಲಿಂಗವಿರುವುದು', 'ಪ್ರಾಣಲಿಂಗವು ಪಾರಮಾರ್ಥಿಕ ಲಿಂಗವಿರುವುದು', ಹಾಗೂ 'ಭಾವಲಿಂಗವು ದಾರ್ಶನಿಕ ಲಿಂಗವಿರುವುದು(ಪು. ೧೦೪) 'ಪಾರಮಾರ್ಥಿಕ ಅನುಭವದ ಪ್ರಾಪ್ತಿಯು ನೈತಿಕ ಜೀವನದ ಅಂತಿಮ ಮುಕುಟಮಣಿ(೧೧೧) 'ಪರಮಾತ್ಮನ ದರ್ಶನವು' ಎಲ್ಲ ಬಗೆಯ ಕಾಮವಿಕಾರ-ಗಳನ್ನು ಅಳಿಸುವುದೆಂಬುದು ನಾವು ಗಮನಿಸಬೇಕು. (ಪು. ೧೪೯) ಆನಂದ ಗುಹೇಶ್ವರರ 'ಸಾರೆ ಚೆಲ್ಲಿದ ಮುಕುತಿ' ಪದದ ವಿವರಣೆ, 'ನಾಡಬಂದು ಕಲೆಗಳ ವಿವರಣೆ'(ಪು. ೫೧) 'ಭಗವಂತಪ್ಪನ ದರ್ಶನದ ವಿವರಣೆ' (ಪು. ೮೭) 'ಓಂ ನಮಃ ಶಿವಾಯ ಮಂತ್ರದ ಅರ್ಥವಿವರಣೆ' (ಪು. ೮೭) ಪರಿಸ್ಫುಟಗೊಂಡು ತೆರೆದು ಕೊಂಡಿರುವುದು ಸಂತೋಷ-ವನ್ನುಂಟು ಮಾಡುತ್ತದೆ.

ಶರಣರ, ದಾಸರ, ತತ್ವಪದಕಾರರ, ಅಜ್ಞಾತ ಜನಪದ ಅನುಭಾವಿಗಳ ಪರಮಾರ್ಥಪಥದ ಪರಿಚಯವನ್ನು ಮಾಡಿಕೊಡುವ ಈ ಕೃತಿ ಕನ್ನಡ ಕನ್ನಡೇತರ ಭಾಷೆಗಳ ಅನುಭಾವಿಗಳ ಅನುಭವದ ಒಂದು ಬಗೆಯ ಸಂಚಯವೆಂಬುದನ್ನು ಒಪ್ಪಿಕೊಳ್ಳುವುದಾಗಿದೆ. ಗ್ರಂಥದುದ್ದಕ್ಕೂ ಅನುರಣಿಸುವ ಸಗುಣನಿರ್ಗುಣ ಬ್ರಹ್ಮನ ಅನುಭವದ ಬಣ್ಣನೆ ಪರಿಣಾಮ ರಮಣೀಯವಾದುದಾಗಿದೆ.

“ಕನ್ನಡ ಅನುಭಾವಿಗಳು ಜಗತ್ತಿನ ಅನುಭಾವಕ್ಕೆ ಸಲ್ಲಿಸಿದ ಕಾಣಿಕೆಯು ವಿಶೇಷವಾಗಿ ಬೆಲೆಯುಳ್ಳದಿರುವುದು” ಎಂಬುದು ಅನುಭಾವಿಗಳು ವಿಶ್ವಮಾನವರು, ವಿಶ್ವಪ್ರೇಮಿಗಳು ವಿಶ್ವಪ್ರೇಮಿಗಳು ವಿಶ್ವಬಂಧುಗಳೆಂಬುದನ್ನು ಕನ್ನಡ ಸಂತರ ಪರಮಾರ್ಥಪಥ ದೃಢಪಡಿಸುತ್ತದೆ. ಅನುಭಾವ, ದೇಶ, ಭಾಷೆ ಮತ್ತು ಕಾಲಾತೀತವಾದ ಅರಿವಿನೊಳಗಣ ಅರಿವು ಅನುಭಾವಿಗಳು, ವಿಶ್ವಮಾನವರು, ವಿಶ್ವಪ್ರೇಮಿಗಳು, ವಿಶ್ವಂಭರನ ಬಂಧುಗಳು ಗ್ರಂಥಾಂತ್ಯದಲ್ಲಿ ಕೊಟ್ಟಿರುವ ಅನುಬಂಧಗಳು ಓದುಗರಿಗೆ ಅತ್ಯುಪಯುಕ್ತವಾಗಿವೆ.

ಅನುವಾದಕರಾದ ಸನ್ಮಾನ್ಯ ಶ್ರೀ ಎಂ.ಎಸ್.ದೇಶಪಾಂಡೆಯವರು ಈ ಗ್ರಂಥವು ಭಾವಾನುವಾದವು ಎಂದಿದ್ದಾರೆ. ಡಾ॥ ರಾನಡೆಯವರ ಭಾವನೆಗಳಿಗೆ ಚ್ಯುತಿ ಬರದ ರೀತಿಯಲ್ಲಿ ಅನುವಾದಿಸಿ ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ. ಇದು ಗ್ರಂಥದ ನಾಲ್ಕನೆಯ ಪರಿಷ್ಕೃತ ಆವೃತ್ತಿಯಾಗಿದೆ. ಇದಕ್ಕೆ ಕಾರಣರಾದ ಎಲ್ಲರನ್ನೂ ಅಭಿನಂದಿಸಲು ಹರ್ಷಿಸುತ್ತ, ಪೂಜಾರ್ಹವಾದ ಹಾಗೂ ಪಾರಾಯಣ ಯೋಗ್ಯವಾದ ಈ ಪವಿತ್ರ ಗ್ರಂಥವನ್ನು ಅಭಿಮಾನಿಗಳು ಕೊಂಡು ಪ್ರೋತ್ಸಾಹಿಸ ಬೇಕೆನ್ನುತ್ತ, ಈ ಮಣಿಹದಲ್ಲಿ ನಿರತರಾದ ಸರ್ವರಿಗೂ ಸನ್ಮಂಗಳವನ್ನು ದಯಾಮಯನಾದ ಪರಶಿವನು ನೀಡಲೆಂದು ಹಾರೈಸುತ್ತೇವೆ.

ಶ್ರೀ ಶಿವಕುಮಾರ ಸ್ವಾಮಿಗಳು
ಶ್ರೀ ಸಿದ್ಧಗಂಗಾಮಠ

ಮುನ್ನುಡಿ
(ಪ್ರಥಮ ಮುದ್ರಣ)

ಪ್ರಸ್ತುತ ಗ್ರಂಥವು, ಡಾ. ಆರ್.ಡಿ.ರಾನಡೆಯವರ 'ಕನ್ನಡಿಗರ ಅನುಭಾವವನ್ನು' ಕುರಿತ ಉಪನ್ಯಾಸಗಳ ಸಾರವನ್ನು ಒಳಗೊಂಡಿರುವದು. ಅವನ್ನವರು ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ, ಕ್ರಿ.ಶ.೧೯೫೪-೫೭ ಈ ವರ್ಷಗಳಲ್ಲಿ ಕೊಟ್ಟಿದ್ದರು. ತಮ್ಮ ಹಿಂದೀ ಸಾಹಿತ್ಯದಲ್ಲಿಯ ಅನುಭಾವವನ್ನು ಕುರಿತ ಗ್ರಂಥದ ಹೆಸರಿನಂತೆ, ಅವರು ಈ ಗ್ರಂಥಕ್ಕೆ 'ಕನ್ನಡ ಸಾಹಿತ್ಯದಲ್ಲಿಯ ಪರಮಾರ್ಥಪಥ' ಎಂಬ ಹೆಸರನ್ನು ಆಯ್ದರು. ಡಾ. ರಾನಡೆಯವರು ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದ ಹಿರಿಯ ವಿದ್ವಾಂಸರು. ಅವರು ಅಲಹಾ ಬಾದ ವಿಶ್ವವಿದ್ಯಾಲಯದಲ್ಲಿ ತತ್ತ್ವಜ್ಞಾನದ ಪ್ರಾಧ್ಯಾಪಕರ ಸ್ಥಾನವನ್ನು ಸುಮಾರು ೨೦ ವರ್ಷ (೧೯೨೭ ರಿಂದ ೧೯೪೭ರ ವರೆಗೆ) ಒಳ್ಳೆಯ ಘನತೆಯಿಂದ ಅಲಂಕರಿಸಿದ್ದರು; ಮತ್ತು ಕ್ರಿ.ಶ.೧೯೪೭ರಲ್ಲಿ ಅದೇ ವಿಶ್ವವಿದ್ಯಾಲಯದ ಉಪಕುಲ ಗುರುಗಳಾಗಿ ಸೇವಾನಿವೃತ್ತರಾದರು. ಅದಕ್ಕೂ ಪೂರ್ವದಲ್ಲಿ ಅವರು ಪುಣೆಯ ಡೆಕ್ಕನ್ ಎಜ್ಯುಕೇಶನ್ ಸೊಸಾಯಿಟಿಯ ಸುವಿಖ್ಯಾತ ಆಜೀವ ಸದಸ್ಯರಲ್ಲಿ ಒಬ್ಬರಾಗಿಯೂ, ಪುಣೆಯ ಫರ್ಗ್ಯೂಸನ್ ಕಾಲೇಜದಲ್ಲಿ ತತ್ತ್ವಜ್ಞಾನದ ಪ್ರಾಧ್ಯಾಪಕ ರಾಗಿಯೂ ಕೆಲಸ ಮಾಡಿದರು.

ಅವರು ತಮ್ಮ ಜೀವನದ ಬಹುಭಾಗವನ್ನು ಪುಣೆಯಲ್ಲಿಯೂ ಹಾಗೂ ಅಲಹಾಬಾದದಲ್ಲಿಯೂ ಕಳೆದಿದ್ದರೂ, ತಾವು ಹುಟ್ಟಿ ಬೆಳೆದುದು, ಹಾಗೂ ಪಾರಮಾರ್ಥಿಕ ಅನುಗ್ರಹವನ್ನು ಪಡೆದುದು ಕರ್ನಾಟಕದಲ್ಲಿ ಎಂಬುದನ್ನು ಅವರು ಎಂದೂ ಮರೆಯಲಿಲ್ಲ. ವಿಜಾಪುರ ಜಿಲ್ಲೆಯ ನಿಂಬಾಳದಲ್ಲಿ ಅವರು ತಮ್ಮ ಆಶ್ರಮವನ್ನು ಸ್ಥಾಪಿಸಿದರು ಮತ್ತು ಸಂತತವಾಗಿ ಬೆಳೆಯಲಿರುವ ತಮ್ಮ ಸ್ನೇಹಿತರ ಹಾಗೂ ಶಿಷ್ಯರ ಬಳಗದೊಂದಿಗೆ ಅಲ್ಲಿ ಅವರು ಪ್ರತಿವರುಷ ಕೆಲ ತಿಂಗಳನ್ನು ಕಳೆಯುತ್ತಿದ್ದರು. ನಿಜವಾಗಿ ತಮ್ಮ ಬಾಲ್ಯದಲ್ಲಿಯೆ ಅವರು ಉಮದಿಯ ಮಹಾರಾಜರವರಿಂದ ಪಾರಮಾರ್ಥಿಕ ಅನುಗ್ರಹವನ್ನು ಪಡೆದರು. ಈ ಸಂತರು ನಿಂಬರಗಿಯ ಶ್ರೀ ಗುರುಲಿಂಗಜಂಗಮ ಮಹಾರಾಜ ಎಂಬ ವೀರ ಶೈವ ಸಂತರ ಶಿಷ್ಯರಾಗಿದ್ದರು. ಈ ಬಗೆಯಾಗಿ ಅವರು ಕನ್ನಡ ನಾಡಿನಲ್ಲಿ ಕಳೆದ ಸುಮಾರು ಸಾವಿರ ವರುಷಗಳಲ್ಲಿ ಬೋಧಿಸಲಾದ ಹಾಗೂ ಪಾರಮಾರ್ಥಿಕ ಜೀವನದ ಪ್ರಧಾನ ವಿಚಾರಧಾರೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು.

ಡಾ. ರಾನಡೆಯವರು ಸ್ವತಃ ಆಧುನಿಕ ಕಾಲದಲ್ಲಿಯ ಹಿರಿಯ ಅನುಭಾವಿ ಗಳಲ್ಲಿ ಒಬ್ಬರಾಗಿದ್ದರು; ಮತ್ತು ತುಂಬ ಆಳವಾದ ಪಾರಮಾರ್ಥಿಕ ಅನುಭವ ಗಳನ್ನು ಪಡೆದವರಿದ್ದ ಮೂಲಕ, ಅನುಭಾವ ದರ್ಶನವನ್ನವರು ಬಲು ಚೆನ್ನಾಗಿ ವಿಶದಗೊಳಿಸಿರುವರು. ಅವರಂತೆ ಅದನ್ನರುಹಬಲ್ಲವರು ತೀರ ವಿರಲವೆಂದೇ ಹೇಳಬಹುದು. ಅವರ ಹಿರಿಯ ಗ್ರಂಥಗಳು 'ಮಹಾರಾಷ್ಟ್ರದಲ್ಲಿಯ ಅನುಭಾವ ಮಾರ್ಗ' 'ಹಿಂದೀ ಸಾಹಿತ್ಯದಲ್ಲಿಯ ಪರಮಾರ್ಥಪಥ' ಇವನ್ನು ಒಳಗೊಂಡಿರುವವು. ಇಂಥ ವಿದ್ವಾಂಸರೂ ದಾರ್ಶನಿಕರೂ ನಮ್ಮ ನಾಡಿನಲ್ಲಿರುವಾಗ, ಮರಾಠೀ ಸಾಹಿತ್ಯದಲ್ಲಿಯ ಹಾಗೂ ಹಿಂದೀ ಸಾಹಿತ್ಯದಲ್ಲಿಯ ಅನುಭಾವವನ್ನು ಕುರಿತು ಅವರು ಈ ಮೊದಲೇ ಬರೆದ ಗ್ರಂಥಗಳ ಮಾದರಿಯಂತೆ, ಕನ್ನಡ ಸಾಹಿತ್ಯದಲ್ಲಿಯ ಅನುಭಾವವನ್ನು ಕುರಿತು ಗ್ರಂಥವೊಂದನ್ನು ಬರೆಯಬೇಕೆಂದು ಕರ್ನಾಟಕ ವಿಶ್ವವಿದ್ಯಾಲಯ ಡಾ. ರಾನಡೆಯವರನ್ನು ಬಿನ್ನವಿಸದೆ ಇರುವದೆಂತು? ಆದುದರಿಂದ, ಕನ್ನಡ ಸಂತರ ಅನುಭಾವವನ್ನು ಕುರಿತು ಇಪ್ಪತ್ತು ಉಪನ್ಯಾಸಗಳನ್ನು ಕೊಡಲು ನಮ್ಮ ವಿಶ್ವವಿದ್ಯಾಲಯವು ಅವರನ್ನು ಆಮಂತ್ರಿಸಿತು; ಮತ್ತು ಅವನ್ನು ಮುಂದೆ ಗ್ರಂಥರೂಪದಿಂದ ಪ್ರಕಟಿಸಲು ಒಪ್ಪಿಕೊಂಡಿತು. ಈ ಆಮಂತ್ರಣವನ್ನು ಅವರು ಕೂಡಲೇ ಒಪ್ಪಿಕೊಂಡರು. ಆದರೆ ಈ ಉಪನ್ಯಾಸಗಳಿಗೆ ಹೆಚ್ಚಿನ ಸಿದ್ಧತೆಯು ಬೇಕಾಗಿರುವುದರಿಂದ ಪ್ರತಿವರ್ಷ ಮೂರು ಇಲ್ಲವೆ ನಾಲ್ಕು ಉಪನ್ಯಾಸಗಳನ್ನು ಕೊಡಬಹುದು ಹಾಗೂ ಆರೇಳು ವರುಷಗಳಲ್ಲಿ ಆ ಗ್ರಂಥಕ್ಕೆ ಬೇಕಾಗುವ ಇಡಿಯ ಸಾಹಿತ್ಯವನ್ನು ಸಿದ್ಧಪಡಿಸಬಹುದು ಎಂದು ಅವರು ಹೇಳಿದರು.

ಡಾ. ರಾನಡೆಯವರು ಈ ಉಪನ್ಯಾಸಗಳನ್ನು ಕೊಡುವಾಗ, ಒಂದು ಹೊಸದಾದ ಹಾಗೂ ತುಂಬ ಸ್ವಾರಸ್ಯಮಯವಾದ ಪದ್ಧತಿಯನ್ನು ಅನುಸರಿಸಿ ದರು. ಅವರು ಶ್ರೇಷ್ಠತಮ ಶೈವ ಹಾಗೂ ವೈಷ್ಣವ ಸಂತರು ಕನ್ನಡದಲ್ಲಿ ಬರೆದ ಕೆಲ ಅತ್ಯುತ್ತಮ ಪದಗಳನ್ನು ಆಯ್ದು, ತಮ್ಮ ಎಲ್ಲ ಉಪನ್ಯಾಸಗಳ ವಿಷಯವನ್ನು ಬಲು ವ್ಯವಸ್ಥಿತವಾಗಿ ಹೊಂದಿಸಿಡುತ್ತಿದ್ದರು. ತರುವಾಯ ಅವರು ಈ ಪದ-ಪದ್ಯಗಳನ್ನು ವಿಷಯಾನುಸಾರವಾಗಿ ಕ್ರಮಗೊಳಿಸುತ್ತಿದ್ದರು. ಪ್ರತಿಯೊಂದು ಉಪನ್ಯಾಸವು ಏಳು ಇಲ್ಲವೆ ಎಂಟು ಪದಗಳಲ್ಲಿಯ ವಿಷಯವನ್ನು ಒಳಗೊಂಡಿ ರುತ್ತಿತ್ತು. ಈ ಪದಗಳು ವಿಚಾರದ ಬೆಳವಣಿಗೆಯ ಕ್ರಮದಿಂದ ಹೊಂದಿಸ ಲಾಗುತ್ತಿದ್ದವು. ತಮ್ಮ ಉಪನ್ಯಾಸದ ಆದಿಯಲ್ಲಿ ಅವರು, ಅಂದು ಬಳಸಲಿರುವ ಪದಗಳ, ಹಾಗೂ ಅವುಗಳ ಕವಿಗಳ ಅಲ್ಪ ಪರಿಚಯ ವನ್ನು ಮಾಡಿಕೊಡುತ್ತಿದ್ದರು. ತರುವಾಯ ಪ್ರತಿಯೊಂದು

ಪದವನ್ನವರು ವಿವರವಾಗಿ ವಿಶದೀಕರಿಸಲು ಪ್ರಾರಂಭಿಸುತ್ತಿದ್ದರು. ಪ್ರತಿಯೊಂದು ಪದವನ್ನು ಮೊದಲು, ಶ್ರೀ ಗುರುರಾವ ದೇಶಪಾಂಡೆಯವರಾಗಲಿ, ಅವರ ತಮ್ಮಂದಿರಾಗಲಿ, ತಂಬೂರಿ ತಬಲಗಳ ನೆರವಿನಿಂದ ಹಾಡುತ್ತಿದ್ದರು. ಕೆಲವನ್ನು ಶ್ರೀ ನಿಂಬರಗಿ ಮಹಾರಾಜ ರವರ ಮೊಮ್ಮಕ್ಕಳು ಹಾಡಿದರು.

ಆದರೆ ದುರ್ದೈವದಿಂದ, ಡಾ. ರಾನಡೆಯವರು ಪ್ರಥಮತಃ ಯೋಜಿಸಿದ ಮೇರೆಗೆ, ಈ ಇಪ್ಪತ್ತು ಉಪನ್ಯಾಸಗಳ ಮಾಲೆಯನ್ನು ಪೂರ್ಣಗೊಳಿಸಲಾರದ ವರಾದರು. ಅವರು ಹದಿನಾಲ್ಕು ಉಪನ್ಯಾಸಗಳನ್ನು ಕೊಟ್ಟಿದ್ದರು ಹಾಗೂ ಬರೆದಿ ಟ್ಟಿದ್ದರು; ಮತ್ತು ಉಳಿದ ಆರು ಉಪನ್ಯಾಸಗಳ ಸಾರಾಂಶ, ಟಿಪ್ಪಣಿಗಳು ಇತ್ಯಾದಿ ಸಾಹಿತ್ಯವನ್ನು ಸಿದ್ಧಪಡಿಸಿದ್ದರು. ಕ್ರಿ.ಶ.೧೯೫೭ ಜೂನ ತಿಂಗಳಲ್ಲಿ ಅವರು ಸಮಾಧಿಸ್ಥರಾದುದರಿಂದ, ಉಳಿದ ಆರು ಉಪನ್ಯಾಸಗಳು ಉಳಿದುಕೊಂಡವು. ಡಾ. ರಾನಡೆಯವರು ಯೋಚಿಸಿದಂತೆ, ಅವರ ಈ ಕೆಲಸವನ್ನು ಪೂರ್ಣ ಮಾಡಬಲ್ಲ ವಿದ್ವಾಂಸರನ್ನು ದೊರಕಿಸುವುದು ವಿಶ್ವವಿದ್ಯಾಲಯಕ್ಕೆ ಬಲು ಕಷ್ಟ ಸಾಧ್ಯವಾಯಿತು. ಸುದೈವದಿಂದ ಡಾ. ಆರ್.ಆರ್.ದಿವಾಕರ ಹಾಗೂ ಡಾ. ರಾನಡೆಯವರ ಶಿಷ್ಯದ್ವಯರಾದ ಪ್ರ ಎನ್.ಜಿ. ದಾಮಲೇ ಹಾಗೂ ಪ್ರಾ. ಕೆ.ಜಿ. ಗಜೇಂದ್ರಗಡಕರರವರು ಈ ಕೆಲಸವನ್ನು ಪೂರ್ಣಗೊಳಿಸುವ 'ಸಂಪಾದಕ ಸಮಿತಿ'ಯಲ್ಲಿ ಸೇರಲು ಒಪ್ಪಿಕೊಂಡರು. ಅವರು ಯವತಮಾಳದ ಆರ್ಟ್ಸ ಕಾಲೇಜದ ಪ್ರಾ. ಬಿ.ಆರ್. ಕುಲಕರ್ಣಿ, ಅಥಣಿಯ ಶ್ರೀ ಎಮ್.ಎಸ್. ದೇಶಪಾಂಡೆ, ಶ್ರೀ ಆರ್.ಎಸ್.ರಾವ್ ಮತ್ತು ಡಾ. ರಾನಡೆಯವರ ಜೀವನದಲ್ಲಿ ಅವರ ತೀರ ನಿಕಟವರ್ತಿಗಳಾದ ಶ್ರೀ ಬಿ.ಆರ್.ನಿಂಬರಗಿ ಇವರ ಬೆಲೆಯುಳ್ಳ ನೆರವನ್ನು ಪಡೆಯಲು ನಿರ್ಣಯಿಸಿದರು. ಈ ಸಮಿತಿಯವರೂ ಹಾಗೂ ಈ ಎಲ್ಲ ಸದ್ಗೃಹಸ್ಥರೂ, ಸ್ವಯಂಪ್ರೇರಣೆಯಿಂದ ಮುಂದೆ ಬಂದು ಈ ಗ್ರಂಥವನ್ನು ಪೂರ್ಣಗೊಳಿಸುವ ಕೆಲಸದಲ್ಲಿ ಇಷ್ಟೊಂದು ಆಲೋಚನೆಯನ್ನೂ, ಗಮನವನ್ನೂ ಸಲ್ಲಿಸಿದ್ದಕ್ಕಾಗಿ, ವಿಶ್ವವಿದ್ಯಾಲಯವು ಅವರಿಗೆ ಋಣಿಯಾಗಿರುವುದು. ಮುಂಬಯಿ ಯ ಭಾರತೀಯ ವಿದ್ಯಾಭವನವು ಈ ಗ್ರಂಥ ಪ್ರಕಾಶನವನ್ನು ಕೈಕೊಂಡದ್ದಕ್ಕಾಗಿ ಅದಕ್ಕೂ ವಿಶ್ವವಿದ್ಯಾಲಯವು ಕೃತಜ್ಞತೆಯನ್ನು ಸಲ್ಲಿಸುವುದು. ಇಂಥ ಮಹಾ ವಿದ್ವಾಂಸರೂ, ಬರಹಗಾರರೂ ಹಾಗೂ ದಾರ್ಶನಿಕ ಸಂತರೂ ಆದ ಡಾ. ರಾನಡೆಯವರ ಲೇಖನಿಯಿಂದ ಹೊರಬಂದ ಈ ಗ್ರಂಥವನ್ನು ಪ್ರಪಂಚದಲ್ಲಿಯ ಪರಮಾರ್ಥ ಸಾಧಕರು ನಿಜವಾಗಿ ಸ್ವಾಗತಿಸದಿರರು ಎಂಬುದಾಗಿ ನಂಬಿದ್ದೇವೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೨೦ ಮಾರ್ಚ್ ೧೯೬೦

ಡಿ. ಸಿ. ಪಾವಟೆ
ಉಪಕುಲಪತಿ

ಪ್ರಸ್ತಾವನೆ
(ಪ್ರಥಮ ಮುದ್ರಣ)

ಡಾ. ರಾನಡೆಯವರನ್ನು ಕನ್ನಡ ಸಂತರ ಅನುಭಾವಮಾರ್ಗವನ್ನು ಕುರಿತು ಉಪನ್ಯಾಸಗಳನ್ನು ಕೊಡಲು ಆಮಂತ್ರಿಸಿ, ಹಾಗೂ ಇಂಥ ಮಹತ್ವದ ವಿಷಯ ವನ್ನು ಕುರಿತ ಅವರ ಭಾಷಣಗಳ ಸಾರವನ್ನು ಪ್ರಸ್ತುತ ಗ್ರಂಥರೂಪದಲ್ಲಿ ಪ್ರಕಟಿಸಿ, ಕರ್ನಾಟಕ ವಿಶ್ವವಿದ್ಯಾಲಯವು ಎಲ್ಲ ಪರಮಾರ್ಥಸಾಧಕರಿಗೂ, ಕನ್ನಡ ಅನುಭಾವ ಸಾಹಿತ್ಯಕ್ಕೂ, ವಿಶೇಷವಾದ ಸೇವೆಯನ್ನು ಸಲ್ಲಿಸಿರುವದು. ಈ ವಿಷಯದ ವಿವರಣದಲ್ಲಿ ಡಾ. ರಾನಡೆಯವರು ತಮ್ಮ ವಿಶಾಲ ಜ್ಞಾನವನ್ನೂ, ಸಂಪನ್ನ ಅನುಭವವನ್ನೂ, ಆಳವಾದ ಪಾಂಡಿತ್ಯವನ್ನೂ ಬಳಸಿರುವರಲ್ಲದೆ, ಕನ್ನಡ ಅನುಭಾವದ ವಿವಿಧ ಅಂಗಗಳನ್ನು ತುಂಬ ಸುವ್ಯವಸ್ಥಿತವಾಗಿಯೂ, ತುಲನಾತ್ಮಕವಾಗಿಯೂ ಅರುಹಿರುವುದರಿಂದ ಜಾಗತಿಕ ಅನುಭಾವದ ದೃಷ್ಟಿಯಿಂದ ನಾವೀಗ ಅದರ ಮಹತ್ವವನ್ನು ಸಹಜವಾಗಿ ಅಭ್ಯಸಿಸಿಲು ಹಾಗೂ ಅರಿಯಲು ಸಮರ್ಥರಾಗುವೆವು. ಅವರು ಶೈವ ಹಾಗೂ ವೈಷ್ಣವ ಕನ್ನಡ ಅನುಭಾವಿಗಳಿಗೆ ಸಲ್ಲಿಸಿದ ಗೌರವವು ತುಂಬ ಮೇಲ್ತರಗತಿಯದಿರುವುದು. ಅವರ ಅಭಿಪ್ರಾಯದ ಮೇರೆಗೆ, ಕನ್ನಡ ಅನುಭಾವಿಗಳು ಭಾರತದ ಅನುಭಾವಿಗಳಲ್ಲಿ ಮೇಲಿನ ಸ್ಥಾನವನ್ನು ಪಡೆದಿರುವರಷ್ಟೇ ಅಲ್ಲದೆ, ಕೆಲ ವಿಷಯಗಳಲ್ಲಿ ವಿಶೇಷತಃ ಉನ್ನತತಮ ಅನುಭಾವವನ್ನು ಬಣ್ಣಿಸುವಲ್ಲಿ ಅವರು ವಿರಲವಾದ ಉಚ್ಚತಮ ಶಿಖರಗಳನ್ನೇ ಮುಟ್ಟಿರುವರು.

ತಮ್ಮ ಪ್ರಾಸ್ತಾವಿಕ ಉಪನ್ಯಾಸದಲ್ಲಿ, ಡಾ. ರಾನಡೆಯವರು, ಕನ್ನಡ, ಮರಾಠಿ, ಹಿಂದಿ, ಹಾಗೂ ಇಂಗ್ಲೀಷ್ ಸಂತರ ತುಲನಾತ್ಮಕ ಪರಿಶೀಲನೆಯನ್ನು ಮಾಡಿರುವರು; ಮತ್ತು ಜಾಗತಿಕ ಅನುಭಾವದಲ್ಲಿ ಕನ್ನಡ ಅನುಭಾವವು ಅದೆಂಥ ಮಹತ್ವದ ಸ್ಥಾನವನ್ನು ಪಡೆದಿರುವದೆಂಬುದನ್ನು ಕಾಣಿಸಿರುವರು. ಅವರು ಪ್ರಭುದೇವರನ್ನು, ಸಾಕ್ರೇಟಿಸ್ ಹಾಗೂ ಯೇಸುಕ್ರಿಸ್ತರೊಡನೆ ಹೋಲಿಸಿರುವರು; ಬಸವೇಶ್ವರ, ಪ್ಲೇಟೋ ಹಾಗೂ ತುಕಾರಾಮರ ವಿಚಾರಗಳಲ್ಲಿಯ ಹಿರಿಯ ಸಮಾನಸ್ಥಲಗಳನ್ನು ಎತ್ತಿ ತೋರಿಸಿರುವರು; ಚೆನ್ನಬಸವರು ಕರ್ಮಯೋಗಿ-ಗಳಿದ್ದುದರಿಂದ ಫೀಡೋ ಹಾಗೂ ರಾಮದಾಸರಿಗೆ ಅವರು ಸಮಾನರಾಗಬಲ್ಲರು

ಎಂದು ಹೇಳಿರುವರು; ಗೂಢ ಅನುಭಾವಿಯಾದ ಸರ್ವಜ್ಞನನ್ನು, ರಹಸ್ಯಮಯನಾದ ಹಿರಕ್ಲೀಟಾಸ್‌ನೊಡನೆ ಯಥಾರ್ಥವಾಗಿ ಸರಿಹೋಲಿಸಲಾಗಿದೆ. ಮತ್ತು ಸಿದ್ಧರಾಮರ ಅನುಭಾವ ವಿಚಾರಗಳು ಸಂತ ಅಗಸ್ಟಾಯಿನ್‌ರವರ ವಿಚಾರಗಳಿಗೂ, ನಿಜಗುಣ ಶಿವಯೋಗಿ ಹಾಗೂ ಜಗನ್ನಾಥದಾಸರ ವಿಚಾರಗಳು ಏಕನಾಥರ ವಿಚಾರಗಳಿಗೂ ಸಮಾನವಾದವುಗಳು ಎಂದು ಸಾರಲಾಗಿದೆ. ಕರ್ನಾಟಕದ ಕನಕದಾಸರು, ಮಹಾರಾಷ್ಟ್ರದ ಚೋಖಾಮೇಳರೂ, ಮತ್ತು ಹಿಂದೀ ಸಾಹಿತ್ಯದ ರೈದಾಸರೂ ತಮ್ಮ ತಮ್ಮ ಕಾಲದಲ್ಲಿ ಒಂದೇ ಬಗೆಯ ಸಾಮಾಜಿಕ ಸ್ಥಾನವನ್ನು ಪಡೆದಿದ್ದರೆಂದು ಹೇಳಲಾಗಿದೆ. ಅವರೆಲ್ಲ ಭಾರತದ ಸಂತರಲ್ಲಿ ತುಂಬ ಉನ್ನತಸ್ಥಾನವನ್ನು ಪಡೆದಿರುವರು. ಅದೇ ಮೇರೆಗೆ, ಪುರಂದರದಾಸ, ವಿಜಯದಾಸ, ಮತ್ತು ಶರೀಫ ಸಾಹೇಬರು ಕ್ರಮಶಃ ತುಲಸಿದಾಸ, ಸೂರದಾಸ, ಹಾಗೂ ಕಬೀರರನ್ನು ಹೋಲುವರು. ಕಾಖಂಡಕಿಯ ಮಹಿಪತಿಯವರೂ, ಗ್ವಾಲ್ಹೇರದ ಮಹಿಪತಿಯವರೂ ಅನೇಕ ವಿಷಯಗಳಲ್ಲಿ ಪರಸ್ಪರರಿಗೆ ಸಮಾನರು ಎಂದು ಗಣಿಸಲಾಗಿದೆ.

ಪರಮಾರ್ಥಪ್ರೇರಣೆಗಳು, ನೈತಿಕ ಸಿದ್ಧತೆ, ಪಾರಮಾರ್ಥಿಕ ಜೀವನದಲ್ಲಿ ಸದ್ಗುರುಗಳು ಮಹತ್ವ, ಅವರ ಸ್ವಭಾವಕರ್ಯಗಳು, ಆದರ್ಶ ಸದ್ಗುರುಗಳ ಹಾಗೂ ಸಂತರ ಲಕ್ಷಣಗಳು, ಮತ್ತು ಒಂದೆಡೆ ಪರಮಾತ್ಮನೊಡನೆಯೂ, ಇನ್ನೊಂದೆಡೆ ತಮ್ಮ ಶಿಷ್ಯರೊಡನೆಯೂ ಇರುವ ಅವರ ಸಂಬಂಧ, ಆದರ್ಶ ಭಕ್ತನ ಲಕ್ಷಣಗಳೂ, ಹಾಗೂ ದೇವ–ಗುರುಗಳ ಬಗೆಗೆ ಅವನ ಭಾವನೆ, ದೇವರ ನಾಮ, ದೇವರ ನಾಮವನ್ನು ನೆನೆಯುವ ಪದ್ಧತಿ, ಪಾರಮಾರ್ಥಿಕ ಅನುಭಾವದ ನಿಕಷಫಲೂ, ಸಮ್ಮಿಲತ ಹಾಗೂ ಪರತಮ ಪಾರಮಾರ್ಥಿಕ ಅನುಭವಗಳ ವಿವಿಧ ಬಗೆಗಳು, ಮತ್ತು ಅನುಭಾವದ ಮುಕ್ತಿದಾಯಕ, ವಿಶ್ವವಿಷಯಕ, ಹಾಗೂ ಪರಮಾನಂದವಿಷಯಕ ಇತ್ಯಾದಿ ಪರಿಣಾಮಗಳು– ಇವೇ ಅವರ ಉಪನ್ಯಾಸಗಳಲ್ಲಿ ಸವಿವರ–ಆದರೂ ತುಂಬ ಹೊಸ ಬೆಳಕನ್ನು ಬೀರುವ, ತಿಳಿಯಾದ ಚರ್ಚೆಯ ವಿಷಯಗಳಾಗಿರುವವು. ಎಲ್ಲಕ್ಕಿಂತಲೂ ಮಿಗಿಲಾಗಿ, ಪ್ರತಿಯೊಂದು ವಿಷಯವನ್ನು, ವಿವಿಧ ಕನ್ನಡ ಅನುಭಾವಿಗಳ ಪದವಚನಗಳ ಸರಿಯಾದ ಅವತರಣಗಳಿಂದ ಸಮರ್ಥಿಸಲಾಗಿದೆ.

ಪ್ರತಿಯೊಂದು ಪ್ರಕರಣದ ಆದಿಯಲ್ಲಿ, ಅದರಲ್ಲಿ ವಿವರಿಸಲಾದ ಪ್ರಧಾನ ವಿಷಯಗಳ ಸಾರಾಂಶವನ್ನು ಕೊಡಲಾಗಿರುವುದರಿಂದ, ಡಾ. ರಾನಡೆಯವರ

ಈ ಮಾದರಿಯ ಹಿಂದಿನ ಗ್ರಂಥಗಳಿಗಿಂತ, ಇದರಲ್ಲಿ ಅವರ ವಿಚಾರದಲ್ಲಿಯೂ, ವಿವರಣ ಪದ್ಧತಿಗಳಲ್ಲಿಯೂ ಕಂಡುಬರುವ ಪ್ರಗತಿಯ ಕೆಲ ಪ್ರಧಾನಾಂಶಗಳೆಡೆ ಮಾತ್ರ ಓದುಗರ ಗಮನವನ್ನು ಸೆಳೆಯಬಯಸುತ್ತೇನೆ. 'ಔಪನಿಷದಿಕ ದರ್ಶನದ ರಚನಾತ್ಮಕ ಸಮಾಲೋಚನೆ' ಎಂಬ ಅವರ ಚಿರಸ್ಮರಣೀಯವಾದ ಗ್ರಂಥದಲ್ಲಿ, ವಿಶ್ವಶಾಸ್ತ್ರ, ಮಾನಸಶಾಸ್ತ್ರ, ನೀತಿಶಾಸ್ತ್ರ, ಪರತತ್ತ್ವಶಾಸ್ತ್ರ, ಹಾಗೂ ಅನುಭವಶಾಸ್ತ್ರ, ಇವೆಲ್ಲವುಗಳಿಗೆ ಸಮನಾದ ಪ್ರಾಧಾನ್ಯವನ್ನು ಕೊಡಲಾಗಿದೆ. ಆದರೆ ಮಹಾರಾಷ್ಟ್ರದ ಹಿರಿಯ ಸಂತರ ಬೋಧೆಯನ್ನು ಅರುಹುವಾಗ ಪರತತ್ತ್ವಶಾಸ್ತ್ರ, ನೀತಿಶಾಸ್ತ್ರ ಹಾಗೂ ಅನುಭಾವ-ಇವಷ್ಟೇ ಸನ್ಮಾನ್ಯ ಸ್ಥಲವನ್ನು ಪಡೆದಿರುವವು. ಅವರ ಅನುಭಾವ ವಿಚಾರದಲ್ಲಿಯ ಪ್ರಗತಿಯಲ್ಲಿ ಮುಂದಿನ ಹೆಜ್ಜೆಯನ್ನು ಅವರ 'ಹಿಂದೀ ಸಾಹಿತ್ಯದಲ್ಲಿಯ ಪರಮಾರ್ಥಪಥ' ಎಂಬ ಗ್ರಂಥದಲ್ಲಿ ಕಾಣಬಹುದು. ಎಲ್ಲ ಅಂಗಗಳಿಂದ ಕೂಡಿದ ಅನುಭಾವವೊಂದೇ ಅದರಲ್ಲಿ ಚರ್ಚಿಸಲಾದ ಏಕಮೇವ ವಿಷಯ; ಮತ್ತು ನೀತಿಶಾಸ್ತ್ರವು ಅದರಲ್ಲಿ ಪಾರಮಾರ್ಥಿಕ ಜೀವನದ ಆವಶ್ಯಕ ಸಿದ್ಧತೆಯೆಂದು ವಿವರಿಸಲಾಗಿದೆ. 'ಕನ್ನಡ ಸಾಹಿತ್ಯದಲ್ಲಿಯ ಪರಮಾರ್ಥ ಪಥ' ಎಂಬ ಅವರ ಪ್ರಸ್ತುತ ಗ್ರಂಥದಲ್ಲಿ ವಿಷಯವೂ, ವಿವರಣ ಪದ್ಧತಿಯೂ ಸುಮಾರಾಗಿ ಅದೇ ಇರುವುದು. ಆದರೆ ಅವರ ಪಾರಮಾರ್ಥಿಕ ಅನುಭಾವ ದಲ್ಲಿಯೂ, ಅದರ ಫಲವಾಗಿ ಅವರ ವಿಚಾರ-ವಿವರಣಗಳಲ್ಲಿಯೂ ನಾವು ಮುಂದಿನ ಹೆಜ್ಜೆಯೊಂದನ್ನು ಗುರುತಿಸ ಬಹುದು. ಮೊದಲನೆಯದಾಗಿ, ಈ ಗ್ರಂಥದಲ್ಲಿ ಅನುಭಾವದ ಸತ್ಯತೆಯನ್ನು ನಿರ್ಣಯಿಸುವ ಪ್ರಧಾನ ನಿಕಷಗಳೆಂದು, ಅವರು 'ಸಾಹಿತ್ಯ' ಹಾಗೂ 'ಬೆಳವಣಿಗೆ' ಇವನ್ನು ವಿಶೇಷವಾಗಿ ಉಲ್ಲೇಖಿಸಿ ರುವರು. ಇವು ಅವರ ಹಿಂದಿನ ಗ್ರಂಥಗಳಲ್ಲಿ, ಈ ಮೊದಲೇ ಅರುಹಲಾದ ನಿಕಷಗಳಿಗಿಂತ ಹೆಚ್ಚಿನವು ಇರುವವು. ಇದು ಡಾ. ರಾನಡೆಯವರ ವಿಚಾರ-ಅನುಭಾವಗಳಲ್ಲಿಯ ನಿಶ್ಚಿತವಾದ ಪ್ರಗತಿಯನ್ನು ಕಾಣಿಸುವದು. ಎರಡನೆಯ ದಾಗಿ, ತಮ್ಮ ಹಿಂದೀ ಸಂತರ ಗ್ರಂಥದಲ್ಲಿ ಅವರು 'ತೇಜ, ನಾದ, ಅನುಭವಗಳ ಬಣ್ಣಗಳು ಏಕಕಾಲಕ್ಕೆ ಬರಲಿಲ್ಲವೇ?' ಎಂಬ ಪ್ರಶ್ನೆಯನ್ನು ಎತ್ತಿರುವರು. ಆದರೆ ಮುಂದೆ ಅವರ ನಿತ್ಯ ಪ್ರಗತವಾಗಲಿರುವ ಅನುಭವವು ಈ ಸಮಸ್ಯೆಯನ್ನು ಬಿಡಿಸಿರು-ವರೆಂಬುದು ಸ್ಪಷ್ಟವಾಗಿ ಕಾಣುವುದು; ಮತ್ತು ಈ ಗ್ರಂಥದಲ್ಲಿ ಹಿರಿಯ ಅನುಭಾವಿಗಳ ಅನುಭಾವದ ಬೆಳವಣಿಗೆಯಲ್ಲಿ, ಈ ಅನುಭವಗಳು

ಉನ್ನತತಮ ಸ್ಥಾನವನ್ನು ಪಡೆದಿರುವವು ಎಂಬುದನ್ನು ಅವರು ಖಂಡಿತವಾಗಿ ಅರುಹಿರುವರು; ಮತ್ತು 'ಸಮ್ಮಿಲಿತ' ಹಾಗೂ 'ಪರತಮ' ಅನುಭವಗಳ ಸವಿವರ ವಿಶದೀಕರಣಕ್ಕಾಗಿ ಅವರು ಎರಡು ಪ್ರಕರಣಗಳನ್ನು ಬಳಸಿರುವರು. ಕ್ನನಡ ಅನುಭಾವಿಗಳು ಜಗತ್ತಿನ ಅನುಭಾವಕ್ಕೆ ಸಲ್ಲಿಸಿದ ಕಾಣಿಕೆಯು ವಿಶೇಷವಾಗಿ ಬೆಲೆಯುಳ್ಳದ್ದಿರುವದು ಎಂದು ಅವರು ಬಗೆಯುವ ಕಾರಣಗಳಲ್ಲಿ ಇದೂ ಒಂದು ಇರುವ ಸಂಭವವಿಲ್ಲದಿಲ್ಲ.

ನಾನೀ ಪ್ರಸ್ತಾವನೆಯನ್ನು ಮುಗಿಸುವ ಪೂರ್ವದಲ್ಲಿ ನನ್ನ ಪರವಾಗಿಯೂ, ನನ್ನ ಸಹಕಾರಿಗಳ ಪರವಾಗಿಯೂ (ಅವರ ಹೆಸರುಗಳನ್ನು ಉಪಕುಲಪತಿಗಳು ತಮ್ಮ ಮುನ್ನುಡಿಯಲ್ಲಿ ಈ ಮೊದಲೇ ಅರುಹಿರುವರು)–ಈ ಅತ್ಯಂತ ಬೆಲೆಯುಳ್ಳ ಕೆಲಸವನ್ನು ನಮಗೆ ಒಪ್ಪಿಸಿ, ಡಾ. ರಾನಡೆಯವರಿಗೆ ಅತಿ ಪ್ರಿಯವಾಗಿದ್ದ ಕಾರ್ಯಕ್ಕೆ ಸೇವೆ ಸಲ್ಲಿಸುವ ಸುಸಂಧಿಯನ್ನು ಒದಗಿಸಿ ಕೊಟ್ಟದ್ದಕ್ಕಾಗಿ, ವಿಶ್ವವಿದ್ಯಾಲಯಕ್ಕೆ ನಾನು ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸದಿರಲಾರೆ. ಈ ವಿಶೇಷ ಬಗೆಯ ಕೆಲಸವನ್ನು ನೆರವೇರಿಸುವುದರಲ್ಲಿ, ಸದೈವ ಅಂತಃಕರಣಪೂರ್ವಕವಾಗಿ ಸಹಕರಿಸಿದ ನನ್ನ ಸಹಕಾರಿಗಳಿಗೂ ನಾನು ಕೃತಜ್ಞನಾಗಿರುವೆ. ಡಾ. ರಾನಡೆಯವರ ಬಗೆಗೆ ಅವರಲ್ಲಿದ್ದ ಭಕ್ತಿ ಹಾಗೂ ರಾನಡೆಯವರ ಚೈತನ್ಯದೊಡನೆ ಬೆರೆಯುವ ಅವರ ಯತ್ನ, ಇವಿರದಿದ್ದರೆ ಈ ಕೆಲಸವು ಇನಿತು ಸುಲಭವಾಗಿ, ಹಾಗೂ ಪ್ರಭಾವಶಾಲಿಯಾಗಿ ಆಗುವುದು ಸಾಧ್ಯವಿರಲಿಲ್ಲ. ಇಂಥ ಕೆಲಸವನ್ನು ಮಾಡುವ ಸಮಾಧಾನವು ಆ ಕೆಲಸದಲ್ಲಿಯೆ ಇರುವದು. ನಾವದನ್ನು ಪೂರ್ಣಮಾಡಲು ಹಾಗೂ ಸಾಧ್ಯವಿದ್ದಮಟ್ಟಿಗೆ ಅತ್ಯುತ್ತಮರೂಪದಲ್ಲಿ ಅದನ್ನು ಜನತೆಗೆ ಸಲ್ಲಿಸಲು ಸಮರ್ಥರಾದುದನ್ನು ಕಂಡು ನನಗೆ ಸಂತೋಷವಾಗಿದೆ.

ಬೆಂಗಳೂರು — ಆರ್. ಆರ್. ದಿವಾಕರ

ಮಾರ್ಚ್, ೩೦, ೧೯೬೦

ಅನುವಾದಕರ ಅರಿಕೆ

(ಪ್ರಥಮ ಮುದ್ರಣ)

'ಸ್ವತಂತ್ರ ಗ್ರಂಥ ಬರೆಯುವುದಕ್ಕಿಂತ ಪರರ ಗ್ರಂಥವನ್ನು ಅನುವಾದಿಸುವದು ಬಲು ಬಿಗಿಯಾದುದು' ಎಂದೊಮ್ಮೆ ನನ್ನ ಹಿರಿಯ ಗೆಳೆಯರೊಬ್ಬರು ಉಸುರಿದರು. ಅದರ ಸತ್ಯತೆಯ ಅಲ್ಪ ಪ್ರತೀತಿಯು ಇದೀಗ ನನಗೆ ಬಂದಿರುವುದು. ಇತ್ತೀಚೆಗೆ ನಾನು 'ಶ್ರೀಗುರುದೇವರ ಜೀವನಜ್ಯೋತಿ'ಯನ್ನು ಬರೆದೆ. ಆಮೇಲೆ ಈ 'ಪರಮಾರ್ಥ ಪಥ'ವನ್ನು ಕನ್ನಡಿಸಿದೆ. ಒಂದು ಸ್ವತಂತ್ರ ಗ್ರಂಥ; ಇನ್ನೊಂದು ಅನುವಾದ. ಒಂದಾದ ಕೂಡಲೇ ಇನ್ನೊಂದನ್ನು ಬರೆಯುವ ಸುಯೋಗವು ಲಭಿಸಿದ್ದರಿಂದ ಗೆಳೆಯರ ಹೇಳಿಕೆಯು ಒಂದು ಬಗೆಯಾಗಿ ಸರಿಯಾದುದು ಎಂಬುದನ್ನು ಮನಗಂಡೆ.

ನಿಜವಾಗಿ ಅನುವಾದಕರಿಗೆ ಮೂಬಗೆಯ ಬಲಗಳು ಬೇಕಾಗುವವು; ಒಂದು ಭಾವಬಲ; ಇನ್ನೊಂದು ಬುದ್ಧಿಬಲ; ಮೂರನೆಯದು ಭಾಷಾಬಲ. ಭಾವಬಲದ ನೆರವಿನಿಂದವನು ಮೂಲ ಬರಹಗಾರರೊಡನೆ ಬೆರೆಯಬಲ್ಲ. ಬುದ್ಧಿಬಲದಿಂದ ಅವರ ಭಾವ-ಅನುಭಾವಗಳನ್ನು ಚೆನ್ನಾಗಿ ಅರಿಯಬಲ್ಲ; ಮತ್ತು ಭಾಷಾಬಲದ ಬೆಂಬಲದಿಂದ ಮೂಲದಲ್ಲಿಯ ವಿಚಾರಗಳನ್ನು ಅಷ್ಟೇ ಸತ್ವಯುತವಾಗಿ ಅನುವಾದಿಸಬಲ್ಲ-ಅರುಹಬಲ್ಲ.

ಇದರ ಜತೆಯಲ್ಲಿ ಮೂಲಗ್ರಂಥದ ಲೇಖಕರುಹಿರಿಯರಿದ್ದಷ್ಟು-ವಿದ್ವಾಂಸರಿದ್ದಷ್ಟು ಅವರ ವಿಚಾರ ಭಾವ-ಅನುಭಾವಗಳು ಮೇಲಿನ ಮಟ್ಟದವು ಇರುವವು. ಆದುದರಿಂದ ಅವುಗಳೊಡನೆ ಬೆರೆಯುವುದು-ಅವನ್ನು ಚೆನ್ನಾಗಿ ಅರಿಯುವುದು, ಬಲು ಬಿಗಿಯಾದುದಾಗುವುದು. ಎರಡನೆಯದಾಗಿ, ಮೂಲಗ್ರಂಥದ ಭಾಷೆಯು ಅನುವಾದದ ಭಾಷೆಯಿಂದ ಹೆಚ್ಚು ಭಿನ್ನವಿದ್ದಷ್ಟು, ಅದರಲ್ಲಿ ಅರುಹಲಾದ ವಿಷಯವನ್ನು ಸರಿಯಾಗಿ ಅನುವಾದಿಸುವುದು ಹೆಚ್ಚು ಕಠಿನವಾಗುವುದು.

ಪ್ರಸ್ತುತ ಅನುವಾದಕನಿಗೆ ಈ ಎರಡೂ ಬಗೆಯ ಎಡರುಗಳನ್ನು ಎದುರಿಸ ಬೇಕಾಯಿತು. ಮೂಲಗ್ರಂಥದ ವಿಷಯವು ಅನುಭಾವ; ಭಾಷೆಯು ಆಂಗ್ಲ ಆದರೂ ಶ್ರೀ ಗುರುದೇವರ ಕರುಣದ ಬೆಂಬಲದಿಂದ ಅವನ್ನವನು

ಮೀರಲು ಸಮರ್ಥನಾದನು. ಈ ಗ್ರಂಥವು ಪ್ರಧಾನವಾಗಿ ಭಾವಾನುವಾದವು. ಆದರೂ ಇದರಲ್ಲಿ ಶಬ್ದಾರ್ಥವನ್ನೂ ಕಡೆಗಣಿಸಲಾಗಿಲ್ಲ. ಭಾವಶಬ್ದಗಳ ಸಮತೂಕವನ್ನು ಕಾಯಲು ಯತ್ನಿಸಲಾಗಿದೆ. ಈ ಅನುವಾದದಲ್ಲಿ ಕೆಲ ಮಾತುಗಳನ್ನು ಸರಿಪಡಿಸು ವದಕ್ಕಾಗಿ, ಸರಿಯಾಗಿ ಹೊಂದಿಸುವುದಕ್ಕಾಗಿ, ಕೆಲ ಅಲ್ಪ ಬದಲಾವಣೆಗಳನ್ನು ಮಾಡುವುದು ಅನಿವಾರ್ಯವಾಯಿತು. ಉಳಿದೆಡೆ ಮೂಲ ವಿಷಯವನ್ನು ಸಾಧ್ಯವಾದಷ್ಟು ಯಥಾರ್ಥವಾಗಿ ಅನುವಾದಿಸಲು ಯತ್ನಿಸಲಾಗಿದೆ. ಈ ಕಾರ್ಯದಲ್ಲಿ ಅನುವಾದಕನು ಪಡೆದ ಯಶಸ್ಸಿನ ತರಗತಿಯನ್ನು ಶ್ರೀ ಗುರುದೇವರೇ ಅರಿಯಬಲ್ಲರು; ತಜ್ಞ ಹಿರಿಯರೇ ಗುರುತಿಸಬಲ್ಲರು. ಇದರಲ್ಲಿ ಆತನ ದೌರ್ಬಲ್ಯದ ಫಲವಾಗಿ ಉಳಿದಿರಬಹುದಾದ ಕುಂದುಗಳನ್ನು ಕ್ಷಮಿಸಲು ಹಾಗೂ ಅರುಹಲು ಶ್ರೀ ಗುರುದೇವರನ್ನೂ ಬೇರೆ ಹಿರಿಯರನ್ನೂ ಬಿನ್ನವಿಸುವೆ. ಇಲ್ಲಿ ಅನುವಾದ ಹೊಂದಿರುವ ಮುನ್ನುಡಿ, ಪ್ರಸ್ತಾವನೆಗಳೂ ಮೂಲ ಇಂಗ್ಲೀಷ್ ಗ್ರಂಥಕ್ಕೆ ಬರೆದವುಗಳೇ.

ನಮ್ಮ ಕರ್ನಾಟಕ ವಿಶ್ವವಿದ್ಯಾಲಯವು ನನಗೆ ಈ ಗುರುತರ ಹೊಣೆಯ ಕಾರ್ಯವನ್ನು ಒಪ್ಪಿಸಿದ್ದಕ್ಕಾಗಿ ನಾನದರ ಸಂಚಾಲಕರಿಗೆ ನನ್ನ ಹಾರ್ದಿಕ ಧನ್ಯವಾದಗಳನ್ನು ಸಲ್ಲಿಸದಿರಲಾರೆ. ಇದರ ಮುದ್ರಣ ಪ್ರತಿಯನ್ನು ಸಿದ್ಧಪಡಿಸಿ ಶ್ರೀಗುರುದೇವರ ಪ್ರಸಾದಕ್ಕೆ ಪಾತ್ರನಾದ ಚಿ॥ ಗೋವಿಂದನನ್ನು ಅಭಿನಂದಿಸದಿರಲಾರೆ.

ತಮ್ಮ
ಮ. ಶ್ರೀ. ದೇಶಪಾಂಡೆ

ಶಾಂತಿಕುಂಜ
ವಿಕ್ರಮಪುರ ವಿಸ್ತರಣ
ಅಥಣಿ
೨೦-೧೧-೧೯೭೧

ಪರಿವಿಡಿ

- ಪ್ರಕಾಶಕರ ಮಾತು v
- ನುಡಿಮಂಗಳ ix
- ಮುನ್ನುಡಿ xiii
- ಪ್ರಸ್ತಾವನೆ xvi
- ಅನುವಾದಕರ ಅರಿಕೆ xx

ಪ್ರಕರಣ ಒಂದು : ದಾರ್ಶನಿಕ ಪೀಠಿಕೆ ೧

ಅನುಭಾವ–ಅದರ ಲಕ್ಷಣಗಳು. ಮಾನಸಶಾಸ್ತ್ರೀಯ, ಪರತತ್ತ್ವ ಶಾಸ್ತ್ರೀಯ, ಜ್ಞಾನಶಾಸ್ತ್ರೀಯ, ಕನ್ನಡ ಸಂತರೂ ಗ್ರೀಕ ದಾರ್ಶನಿಕರೂ, ಕನ್ನಡ ಸಂತರೂ, ಕ್ರಿಸ್ತಮತದ ಅನುಭಾವಿಗಳೂ, ಕನ್ನಡ ಸಂತರೂ, ಮಹಾರಾಷ್ಟ್ರ ಸಂತರೂ, ಕನ್ನಡ ಸಂತರೂ ಹಿಂದೀ ಸಂತರೂ, ಖಗೋಲಶಾಸ್ತ್ರೀಯ ಹೋಲಿಕೆ. ಉಪನ್ಯಾಸಗಳ ಯೋಜನೆ

ಪ್ರಕರಣ ಎರಡು : ಪರಮಾರ್ಥ ಪ್ರೇರಣೆಗಳು ೧೨

ಮಲಗಿದ ಯಾತ್ರಿಕ. ದಾರ್ಶನಿಕ ಪ್ರೇರಣೆ. ಪೂರ್ವಸ್ಮೃತಿಯ ಸಿದ್ಧಾಂತ. ವಿಷಯಲೋಲುಪತೆಯೂ ವಿನಾಶವೂ.

ಪ್ರಕರಣ ಮೂರು : ಹೆಚ್ಚಿನ ಪ್ರೇರಣೆಗಳೂ ಅವುಗಳ ಪರಿಣತಿಯೂ ೩೧

ಹಿಂದಿನ ಪ್ರೇರಣೆಗಳ ಸಿಂಹಾವಲೋಕನ. ಕ್ಷಣಭಂಗುರತೆಯೂ ಸಾರ್ವತ್ರಿಕ ಚಿಂತೆಯೂ. ಪರಮಾತ್ಮನನ್ನು ಸರ್ವಕರ್ತನೆಂದು ನೆನೆಯುವದು. ಆದರ್ಶದ ಅಪ್ರಾಪ್ತಿಯಿಂದ ಅಸಮಾಧಾನ. ಕೂಡಲೆ ರಕ್ಷಿಸಲು ಪರಮಾತ್ಮನಿಗೆ ಪ್ರಾರ್ಥನೆ ಮತ್ತು ಅವನ ತಾತ್ಕಾಲಿಕ ರಕ್ಷಣ

ಪ್ರಕರಣ ನಾಲ್ಕು : ಪಾರಮಾರ್ಥಿಕ ಜೀವನಕ್ಕಾಗಿ ನೈತಿಕ ಸಿದ್ಧತೆ ೪೬

ಮಾನವಜನ್ಮದ ಸರಿಯಾದ ಉಪಯೋಗ–ಮನಸಿನ ಮುರಿಗೆಯನ್ನು ತಿದ್ದುವದು. ನಾಲಿಗೆಯನ್ನು ಕುರಿತು ಸಂಬೋಧನೆ. ನೈತಿಕ ಜೀವನವನ್ನು ಕುರಿತ ದಾರ್ಶನಿಕ ವಿಚಾರ. ತೋಟಗಾರಿಕೆಯ ಹಿರಿಯರೂಪಕ. ನಿಷ್ಕಲ ಪರಮಾತ್ಮನನ್ನು ಪಡೆಯುವ ರಹಸ್ಯ.

ಪ್ರಕರಣ ಐದು : ಸದ್ಗುರುವಿನ ಸ್ವರೂಪ ೫೮

ದೇವರುಗಳಲ್ಲಿಯ ಏಕತೆ. ಸದ್ಗುರುಗಳ ಅನುಗ್ರಹದ ರೀತಿ. ಸದ್ಗುರು ವಿಷಯ–ವಿಷವನ್ನು ಕಳೆಯುವನು. ಸದ್ಗುರುಗಳ

ಕರುಣವು ಅಪ್ರತಿಮವು (ಸದ್ಗುರುಗಳ ಪ್ರಸಾದದ ಪರಿಣಾಮಗಳು.)

ಪ್ರಕರಣ ಆರು : ಸದ್ಗುರುಗಳ ಕಾರ್ಯಗಳು ೭೨

ಪರತತ್ತ್ವಶಾಸ್ತ್ರೀಯ ಕಾರ್ಯ. ನೈತಿಕ ಕಾರ್ಯ. ಅನುಭಾವಿಕ ಕಾರ್ಯ.

ಪ್ರಕರಣ ಏಳು : ಗುರು-ಶಿಷ್ಯರ ಸಂಬಂಧ (ಭಾಗ-೧) ೮೯

ಸದ್ಗುರುವಿನ ಅನಂತ ಉಪಕಾರ. ಸದ್ಗುರುವಿನ ಬಗೆ. ಸದ್ಗುರು ವಿಗೆ ಕರುಣಪೂರ್ಣ ಪ್ರಾರ್ಥನೆ. ಉತ್ಸಾಹಪೂರ್ಣ ಭಾವನೆ-ವೃತ್ತಿ. ಆದರ್ಶಶಿಷ್ಯ, ಸದ್ಗುರುವಿನ ಬೋಧೆಯ ನೈತಿಕ, ಯೋಗಿಕ ಹಾಗೂ ಅನುಭಾವಿಕ ಪರಿಣಾಮಗಳು. ಸದ್ಗುರು ಪರತಮ ಸತ್ಯಕ್ಕಿಂತ ಮಿಗಿಲಾದವನು.

ಪ್ರಕರಣ ಎಂಟು : ಗುರು-ಶಿಷ್ಯರ ಸಂಬಂಧ (ಭಾಗ-೨) ೧೦೧

ಶಿಷ್ಯನು ಗುರು-ಚರಣ ಕಮಲದಲ್ಲಿ ಭೃಂಗದಂತೆ ಮೊರೆಯುವ ಸದ್ಗುರುವಿನ ಕಾರ್ಯದ ಬಗೆಗೆ ವಿವಿಧ ಸಾದೃಶ್ಯಗಳು. ಸದ್ಗುರುವನ್ನು ಮರೆಯುವ ಅಸಾಧ್ಯತೆ. ಸದ್ಗುರುವಿನ ಪ್ರಸಾದವು ಪರತತ್ತ್ವದೊಡನೆ ಬೆರೆಯಿಸುವದು.

ಪ್ರಕರಣ ಒಂಬತ್ತು : ಸಂತರ ಲಕ್ಷಣಗಳು ೧೧೮

ಶ್ರೇಷ್ಠತಮ ಭಕ್ತ. ಸಂತರು ಭಯ, ದುಃಖ, ತಾಪಗಳಿಂದ ಅತೀತರು. ಅನುಭಾವಿಯ ಶಾರೀರಿಕ-ಮಾನಸಿಕ ಲಕ್ಷಣಗಳು. ಸಂತರು ದ್ವಂದ್ವಾತೀತರು. ಮಾನವನ ಸ್ವಾತಂತ್ರ್ಯ ಹಾಗೂ ಪರಮಾತ್ಮನ ಸರ್ವಸಮರ್ಥತೆ.

ಪ್ರಕರಣ ಹತ್ತು : ಸಂತ-ದೇವರ ಸಂಬಂಧ ೧೩೪

ದಾರ್ಶನಿಕ ಭಾವ. ಪ್ರಾರ್ಥನೆಯ ಭಾವ. ದೂಷಿಸುವ ಭಾವ. ಅನುಭಾವದ ಭಾವ.

ಪ್ರಕರಣ ಹನ್ನೊಂದು : ಭಗವಂತನ ಸ್ವರೂಪ ೧೪೮

ಪರಮಾತ್ಮನ ಸಗುಣ ಬಣ್ಣನೆ. ಸಗುಣ-ನಿರ್ಗುಣ ಬಣ್ಣನೆ. ನಿರ್ಗುಣ ಬಣ್ಣನೆ. ಪರಮಾತ್ಮನು ಅಣುರೂಪನು-ಮಹದ್ರೂಪನು. ಅತೀಂದ್ರಿಯತೆ ಹಾಗೂ ಅತೀತತೆ.

ಪ್ರಕರಣ ಹನ್ನೆರಡು : ಭಗವಂತನ ನಾಮ (ಭಾಗ-೧) ೧೬೪

ನಾಮವು ಸತ್ತ್ವವು. ಪರಮಾತ್ಮನ ನಾಮದ ಅಕ್ಷರಗಳ ಅರ್ಥ. ಪರಮಾರ್ಥನ ನಾಮೋಚ್ಚಾರಣದ ಅನುಭಾವಿಕ ಅವಶ್ಯಕತೆಗಳು.

ಪ್ರಕರಣ ಹದಿಮೂರು : ಭಗವಂತನ ನಾಮ (ಭಾಗ-೨) ೧೭೬

ದಿವ್ಯನಾಮದ ಸಾಮರ್ಥ್ಯ. ನಾಮದ ಕಾರ್ಯ. ದೇವರ ಮಧುರ ನಾಮವು ಕಲ್ಪವೃಕ್ಷವು. ಪರಮಾತ್ಮನ ಪ್ರಾಪ್ತಿಯಲ್ಲಿ ಸ್ಮರಣ, ಕೀರ್ತನ, ಗಾನಗಳ ಮಹತ್ವ

ಪ್ರಕರಣ ಹದಿನಾಲ್ಕು : ಧ್ಯಾನ-ಪದ್ಧತಿ ೧೮೭

ದೃಷ್ಟಿಯ ಆವಶ್ಯಕತೆ-ಮಹತ್ವಗಳು, ಏಕಾಗ್ರತೆಯ ಪ್ರಭಾವ. ಕುಂಡಲೀನಿ ಶಕ್ತಿಯ ಬೆಲೆ. ಪುರಂದರದಾಸ, ಗುರುಸಿದ್ಧ ಹಾಗೂ ನಿಜಗುಣ ಶಿವಯೋಗಿಗಳ ಅನುಭಾವ ಪದ್ಧತಿ.

ಪ್ರಕರಣ ಹದಿನೈದು : ಪಾರಮಾರ್ಥಿಕ ಅನುಭಾವಗಳ ಪ್ರಮಾಣ ಪ್ರಾರಂಭಗಳು ೨೦೬

ದಾರ್ಶನಿಕ ನಿಕಷ. ನೈತಿಕ ನಿಕಷ. ಆನುಭಾವಿಕ ನಿಕಷ. (ಅ) ಅತೀಂದ್ರಿಯತೆ (ಆ) ಏಕಕಾಲಿಕತೆ (ಇ) ಪರಸ್ಪರ ವಿನಿಮಯ ಮತ್ತು ಅನುಬೋಧೆ. ಪುರಂದರದಾಸ, ರೇವಣಸಿದ್ಧ ಹಾಗೂ ಚಿದಾನಂದರ ಮುತ್ತಿನ ಅನುಭವ. ರತ್ನದ ಅನುಭವ.

ಪ್ರಕರಣ ಹದಿನಾರು : ರೂಪ-ತೇಜ-ನಾದಗಳ ಅನುಭವ ೨೨೩

ರೂಪದ ಹಾಗೂ ತೇಜದ ಅನುಭವಗಳು. ನಾದದ ಅನುಭವ. ರಸದ ಅನುಭವ.

ಪ್ರಕರಣ ಹದಿನೇಳು : ಸಮ್ಮಿಲಿತ ಪಾರಮಾರ್ಥಿಕ ಅನುಭಾವ ೨೩೯

ವಿವಿಧ ಅನುಭವಗಳ ಸಮ್ಮೇಲನ. ಏಕಕಾಲದ ಅನುಭವದಲ್ಲಿಯ ಪೆಂಪು.

ಪ್ರಕರಣ ಹದಿನೆಂಟು : ಪರತಮ ಅನುಭವ ೨೫೦

ಮೂಲಪುರುಷನ ಸಾಕ್ಷಾತ್ಕಾರ. ಚಲನವಿಷಯಕ ಅನುಭವ. ಪರತಮ ಸತ್ಯದೊಡನೆ ಬೆರೆಯುವಿಕೆ. ಸತ್ತ್ವದ ತೊಟ್ಟಿಲಲ್ಲಿಯ ಶಿಶುರೂಪಿಯಾದ ಆತ್ಮ.

ಪ್ರಕರಣ ಹತ್ತೊಂಬತ್ತು : ಆತ್ಮಾನುಭಾವದ ಪರಿಣಾಮಗಳು(ಭಾಗ-೧) ೨೬೧

ಜೀವನ್ಮುಕ್ತಿಯ ಅವಸ್ಥೆ. ವಿಶ್ವಾತ್ಮನ ಸಾಕ್ಷಾತ್ಕಾರ. ದೈವೀ ಉನ್ಮಾದ. ಮಾನವತೆಯ ಪಾರಮಾರ್ಥಿಕ ವಿಮೋಚಕ.

ಪ್ರಕರಣ ಇಪ್ಪತ್ತು : ಆತ್ಮಾನುಭಾವದ ಪರಿಣಾಮಗಳು (ಭಾಗ-೨) ೨೮೦

ಮುಕ್ತಾತ್ಮನು ನೀತಿಯ ಪ್ರತೀಕನು. ಅನುಭಾವದ ಪರಮಾನಂದ ಪರವಶತೆ. ಸಂತರ ಸಭೆ.

ಅನುಬಂಧ ೧ : ಸಂಸ್ಕೃತ ಶಬ್ದಗಳ ಲಘುಕೋಶ ೩೦೧

ಅನುಬಂಧ ೨ : ಉಪಯುಕ್ತ ಗ್ರಂಥಗಳ ಪಟ್ಟಿ ೩೦೫

ಅನುಬಂಧ ೩ : ಸಮಾನ್ಯ ಸೂಚೀಪತ್ರ ೩೦೯

ಅನುಬಂಧ ೪ : ಪ್ರಧಾನ ಅವತರಣಗಳ ಅಕ್ಷರಾನುಕ್ರಮ ೩೨೦

■■

ಕೃತಜ್ಞತೆಗಳು

ಶ್ರೀ ಶಂಕರಗೌಡ ಈರನಗೌಡ ಪಾಟೀಲ ಮತ್ತು ಕುಟುಂಬ; ಬೆಳಗಾವಿ

ಸಮಾಜಸೇವೆ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪ್ರವೃದ್ಧಮಾನರಾಗಿ ಅಧ್ಯಾತ್ಮದ ಒಲವನ್ನು ಉಳಿಸಿಕೊಂಡಿರುವ ಶ್ರೀ ಶಂಕರಗೌಡ ಪಾಟೀಲರು ಉದಾರ ಮನಸ್ಸಿನಿಂದ ಈ ಗ್ರಂಥಪ್ರಕಟಣೆಗೆ ನೆರವಾಗಿದ್ದಾರೆ.

ಆರ್ಥಿಕ ಸಂಪತ್ತಿನ ಸದ್ವಿನಿಯೋಗಕ್ಕೆ ಆ ತೆರನಾದ ಮನಸ್ಸು ಮತ್ತು ಸಂಸ್ಕಾರ ಮುಖ್ಯವಾದದ್ದು, ಅಷ್ಟಿದ್ದರೆ ಸಾಲದು, ಅದಕ್ಕೆ ಪಾತ್ರತೆಯುಳ್ಳ ಅವಕಾಶವೂ ಅಷ್ಟೇ ಮುಖ್ಯವಾದದ್ದು. 'ಕನ್ನಡ ಸಂತರ ಪರಮಾರ್ಥಪಥ' ಇದು ಶ್ರೀ ಗುರುದೇವ ಡಾ. ಆರ್.ಡಿ. ರಾನಡೆಯವರ ಪರಮೋನ್ನತ ವಿಚಾರಗಳನ್ನು ಕನ್ನಡ ವಾಚಕ ಬಂಧುಗಳಿಗೆ ನೀಡುವ ಮಹತ್ಕಾರ್ಯ. ಹಾಗಾಗಿ ಈ ಕಾರ್ಯದಲ್ಲಿ ಮನಸ್ಸು ಮತ್ತು ಪಾತ್ರತೆ ಎರಡೂ ಕೂಡಿ ಬಂದ ಭಗವತ್ ಕೈಂಕರ್ಯವಾಗಿದೆ. ಅವರಿಗೆ ನಮ್ಮ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು.

ನಮ್ಮ ಸನ್ಮಿತ್ರರಾದ ಶ್ರೀ ಶಂಕರಗೌಡ ಪಾಟೀಲರ ಆರ್ಥಿಕ ಸಹಕಾರವು ನಮ್ಮ ಚಟುವಟಿಕೆಗಳಿಗೆ ಅತ್ಯಂತ ಪ್ರೋತ್ಸಾಹದಾಯಕವಾಗಿದೆ. ಶ್ರೀ ಗುರುದೇವರು ಅವರಿಗೂ ಅವರ ಕುಟುಂಬ ವರ್ಗಕ್ಕೂ ಉತ್ತರೋತ್ತರ ಅಭಿವೃದ್ಧಿಯನ್ನು ಹಾಗೂ ಸಾಮಾಜಿಕ ರಾಜಕೀಯ ಸಾಫಲ್ಯದೊಂದಿಗೆ, ನಿರಂತರ ಅನುಭಾವದ ಮನಸ್ಸನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಬೆಳಗಾವಿ
ದಿನಾಂಕ : ೦೧-೦೧-೨೦೧೦

ಎಮ್. ಬಿ. ಝಿರಲಿ ವಕೀಲರು
ಗೌರವ ಕಾರ್ಯದರ್ಶಿ (A.C.P.R)
ಧರ್ಮದರ್ಶನಗಳ ತೌಲನಿಕ ಅಧ್ಯಯನ ಪೀಠ
ಗುರುದೇವ ಡಾ. ರಾನಡೆ ಮಂದಿರ
ಹಿಂದವಾಡಿ, ಬೆಳಗಾವಿ

ಪ್ರಕರಣ ಒಂದು

ದಾರ್ಶನಿಕ ಪೀಠಿಕೆ

ಕನ್ನಡ ಸಂತರ ಅನುಭಾವವನ್ನು ಕುರಿತ ನನ್ನ ವಿಚಾರಗಳನ್ನು ಜನರೆದುರು ಇರಿಸಲು ನನಗೆ ಸುಸಂಧಿಯನ್ನು ಒದಗಿಸಿಕೊಟ್ಟದ್ದಕ್ಕಾಗಿ ನಾನು ಕರ್ನಾಟಕ ವಿಶ್ವವಿದ್ಯಾಲಯದವರಿಗೆ ತುಂಬ ಋಣಿಯಾಗಿರುವೆ. ಈ ಸಂದರ್ಭದಲ್ಲಿ ಕ್ರಿ.ಶ. ೧೯೨೧ರಲ್ಲಿ ನಾನು ಧಾರವಾಡದಲ್ಲಿ ಹೇಳಿದ ಮಾತು ಜ್ಞಾಪಕಕ್ಕೆ ಬರುವುದುಂಟು. ಮೈಸೂರಿನಿಂದ ಮರಳಿ ಬರುವಾಗ, ನಾನು ಕರ್ನಾಟಕ ಕಾಲೇಜಿನಲ್ಲಿ, 'ಭಾರತೀಯ ವಿಚಾರದ ವಿಕಸನ' ಎಂಬ ವಿಷಯವನ್ನು ಕುರಿತು ಒಂದು ಉಪನ್ಯಾಸವನ್ನು ಕೊಟ್ಟಿದ್ದೆ. ಈಗ ಪ್ರಾಧ್ಯಾಪಕ ನಾಗಿರುವ ನನ್ನ ಒಬ್ಬ ವಿದ್ಯಾರ್ಥಿಯು, ಹಿಂದಿನ ನನ್ನ ಬರಹಗಳನ್ನು ನೋಡುತ್ತಿರುವಾಗ, ಅಂದಿನ ನನ್ನ ಭಾಷಣದ ನಾನೇ ಬರೆದಿಟ್ಟ ಸಾರಾಂಶವನ್ನು ಕಂಡನು. ಆಗ ನಾನು, "ಧಾರವಾಡವು ಮುಂದೆ ಕರ್ನಾಟಕ ವಿಶ್ವವಿದ್ಯಾಲಯದ 'ಕೇಂದ್ರ'ವಾಗಬಹುದು" ಎಂದು ಹೇಳಿದ್ದೆ. ಅದೀಗ ನಿಜವಾಗಿರುವುದು. ಇದೊಂದು ನನಗೆ ಅಭಿಮಾನದ ವಿಷಯ. ಯಾಕಂದರೆ, ಆ ಕಾಲದಲ್ಲಿ ಧಾರವಾಡವು ವಿಶ್ವ ವಿದ್ಯಾಲಯದ ಕೇಂದ್ರವಾಗಬಹುದೆಂಬ ಕಲ್ಪನೆಯು ಕೂಡ ಅಸಾಧ್ಯವೆನಿಸುತ್ತಿದ್ದಿತು.

ಉಪಕುಲಗುರುಗಳು ಅನುಭಾವದ ಸ್ವರೂಪವನ್ನು ಕುರಿತು ಕೆಲ ಮಾತುಗಳನ್ನು ತಮಗೆ ಹೇಳಿರುವರು. ಅವು ತುಂಬ ಯಥಾರ್ಥವಾದವುಗಳು. ಅನುಭಾವವು ಮಾನವತೆಯನ್ನು ಒಂದುಗೂಡಿಸುವ ಆಧ್ಯಾತ್ಮಿಕ ಜೀವನದ ಒಂದು ಬಗೆ. ಬೇರೆ ಬೇರೆ ದಾರ್ಶನಿಕರು ಹಾಗು ಕ್ರಿಸ್ತಮತದವರು, ಮಹಮ್ಮದೀಯರು, ಜೈನರು, ಬೌದ್ಧರು, ವೈಷ್ಣವರು, ಇಲ್ಲವೆ ಲಿಂಗವಂತರು, ಪರಮಾತ್ಮನನ್ನು ಪಡೆಯಲು ಸೂಚಿಸುವ ಸಾಧನಗಳನ್ನು ಬರೀ ಅರಿತುಕೊಂಡರೆ ಸಾಲದು. ಈ ದರ್ಶನಗಳ, ಧರ್ಮಗಳ ಹಿನ್ನೆಲೆಯನ್ನು ವಿಭಜಿಸುವುದು ಅವಶ್ಯವು. ಅಂದರೆ ಅವುಗಳಲ್ಲೆಲ್ಲ ಒಂದೇ ಬಗೆಯ ಪಾರಮಾರ್ಥಿಕ ಬೋಧೆಯ ತಿರುಳು ನೆಲೆಸಿರುವುದು ಕಂಡುಬರುತ್ತದೆ. ನಾನಿದನ್ನು ನನ್ನ 'ಮಹಾರಾಷ್ಟ್ರ ಸಂತರ ಅನುಭಾವ'(೧೯೩೩) ಹಾಗೂ 'ಹಿಂದೀ ಸಂತರ ಪರಮಾರ್ಥ ಪಥ' (೧೯೫೪) ಎಂಬ ಗ್ರಂಥಗಳಲ್ಲಿ ವಿಶದಗೊಳಿಸಿರುವೆ. ಕನ್ನಡ ಸಂತರ ಅನುಭಾವದ ಅಧ್ಯಯನದಿಂದ- ವಿವರಣದಿಂದ- ನಾನು ಅದನ್ನೇ ಸ್ಥಿರಪಡಿಸಲಿರುವೆ.

ನಾನು ಕನ್ನಡಿಗರ ಅನುಭಾವವನ್ನು ಕುರಿತು ಈ ಮೊದಲೇ ಮೂರು ಉಪನ್ಯಾಸಗಳನ್ನು ಕೊಟ್ಟಿರುವೆ: ಒಂದನ್ನು ಕ್ರಿ.ಶ. ೧೯೫೦ರಲ್ಲಿ ಧಾರವಾಡ ದಲ್ಲಿಯೂ ಎರಡನೆಯದನ್ನು ಕ್ರಿ.ಶ. ೧೯೫೧ರಲ್ಲಿ ಬೆಳಗಾವಿಯಲ್ಲಿಯೂ, ಮೂರನೆಯದನ್ನು ಕ್ರಿ.ಶ.೧೯೫೪ರಲ್ಲಿ ದಿಲ್ಲಿಯಲ್ಲಿಯೂ ಕೊಟ್ಟಿರುವೆ. ಆದರೆ ಕನ್ನಡ ಸಂತರು ಅನುಭಾವಕ್ಕೆ ಸಲ್ಲಿಸಿದ ಕಾಣಿಕೆಯ ಸ್ವರೂಪದೆಡೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸುವ ಆವಶ್ಯಕತೆ ಇದ್ದಿತು. ನನ್ನ ಸ್ವಂತ ಮರ್ಯಾದೆ ಗಳನ್ನು ನಾನು ಬಲ್ಲೆ. ಅನೇಕ ಕನ್ನಡ ಪಂಡಿತರು ಈ ಪೂರ್ವದಲ್ಲಿ ಭಾಷೆಯ ದೃಷ್ಟಿಯಿಂದಲೂ, ಭಾಷಾಶಾಸ್ತ್ರದ ದೃಷ್ಟಿಯಿಂದಲೂ ಮಾಡಿದ ಅರ್ಥ ವಿವರಣೆಯ ಕಾರ್ಯವನ್ನು ನೆನೆದಾಗ, ಆ ಕ್ಷೇತ್ರದಲ್ಲಿ ನಾನು ತೀರಾ ಗಣನೆಗೆ ಬಾರದವನು ಎಂದೆನಗೆ ಅನಿಸುವುದು. ಆದರೆ ನಾನು ನಾಲ್ವತ್ತು ವರುಷಗಳಿಗಿಂತ ಹೆಚ್ಚು ಕಾಲ ನಡೆಯಿಸಿದ ದರ್ಶನಗಳ ಅಧ್ಯಯನದ ವ್ಯಾಸಂಗವು ನನಗೆ ಒಂದು ವಿಶೇಷವಾದ ದೃಷ್ಟಿಯನ್ನು ನೀಡಿರುವುದು. ಅದು ಈ ಎಲ್ಲ ಅರ್ಥವಿವರಣೆ ಗಳನ್ನೂ, ಹಾಗೂ ಬೇರೆ ಅರ್ಥವಿವರಣೆಗಳನ್ನೂ ಹೊಂದಿಸಲು ಯತ್ನಿಸುವುದು.

ಈ ಉಪನ್ಯಾಸಮಾಲೆಯ ಆದಿಯಲ್ಲಿ ಅನುಭಾವದ ಕೆಲ ಸಾಮಾನ್ಯ ಲಕ್ಷಣಗಳೆಡೆ ತಮ್ಮ ಗಮನವನ್ನು ಸೆಳೆಯಬಯಸುವೆ. ಪ್ರಪಂಚದ ಅನುಭಾವದಲ್ಲಿ ಕನ್ನಡಿಗರ ಅನುಭಾವದ ಸ್ಥಾನವನ್ನು ನಿರ್ಧರಿಸಲು ಹಾಗೂ ಪ್ರಪಂಚದ ಹಿರಿಯ ಅನುಭಾವಿಗಳಲ್ಲಿ ಕನ್ನಡ ಅನುಭಾವಿಗಳು ತುಂಬ ಮೇಲ್ತರಗತಿಯ ಸ್ಥಲವನ್ನು ಆಕ್ರಮಿಸಿರುವರೆಂಬುದನ್ನು ಚೆನ್ನಾಗಿ ಅರಿಯಲು, ಇದು ಅವಶ್ಯವಾದುದು. ನಾನು ತುಲನೆಯನ್ನು ಮಾಡಬಯಸುವುದಿಲ್ಲ; ನಾನು ತಮ್ಮೆದುರು ಇರಿಸಲಿರುವ ಸಾಮಗ್ರಿಯ ಬೆಳಕಿನಲ್ಲಿ ತಾವೇ ಅದನ್ನು ಮಾಡಬೇಕು. ನಾನು ಈ ಅನುಭಾವಿಗಳ ಸಿದ್ಧಾಂತಗಳನ್ನು ಕಿರಿದರಲ್ಲಿ ಅರುಹುವೆ. ಕನ್ನಡ ಅನುಭಾವಿಗಳ ನೆಲೆಯು ಬೇರೆ ಅನುಭಾವಿಗಳ ನೆಲೆಗಿಂತ ಯಾವ ಬಗೆಯಾಗಿಯೂ ಕೆಳ ತರಗತಿಯದಿರುವುದಿಲ್ಲ ಎಂಬುದನ್ನು ಮರಾಠೀ ಹಾಗೂ ಹಿಂದೀ ಅನುಭಾವಿಗಳ ಅಧ್ಯಯನದಿಂದ ನಾನು ತಮಗೆ ಖಂಡಿತವಾಗಿ ಹೇಳಬಲ್ಲೆ. ಒಂದು ಬಗೆಯಾಗಿ ನೋಡಿದರೆ, ಅವರು ಬಹು ಅಂಶಗಳಲ್ಲಿ ಮೇಲ್ತರಗತಿಯ ನೆಲೆಯಲ್ಲಿಯೆ ನಿಂತಿರುವರು, ಎಂದು ಹೇಳಬಹುದು.

ಪ್ರಥಮತಃ ಅನುಭಾವವೆಂದರೇನು ಎಂಬುದನ್ನು ಅರಿತುಕೊಳ್ಳುವಾ! ನಮ್ಮ ಉಪಕುಲಗುರುಗಳು ಅರುಹಿದ ಮೇರೆಗೆ ಅದೊಂದು ಪ್ರತಿಭಾಶಕ್ತಿಯನ್ನು ಸೂಚಿಸುವ ಹಾಗೂ ಅದನ್ನು ಒಳಗೊಂಡ ಪರಮಾತ್ಮನ ಸಾಕ್ಷಾತ್ಕಾರದ ದರ್ಶನವು. ಈ ಪ್ರತಿಭಾಶಕ್ತಿಯು–ಅಂತಃಪ್ರಜ್ಞೆಯು–ಅದೆಂತಹುದು? ಅದು ಬುದ್ಧಿ–ಭಾವನೆ ಹಾಗೂ ಸಂಕಲ್ಪ–ಶಕ್ತಿಗಳಿಂದ ಯಾವ ಬಗೆಯಾಗಿ ಭಿನ್ನವಿರುವುದು? ಬುದ್ಧಿ, ಭಾವನೆ ಹಾಗೂ ಸಂಕಲ್ಪಗಳ ಸ್ವರೂಪವನ್ನು ಎಲ್ಲ ಮನೋವಿಜ್ಞಾನಿಗಳು ಬಲ್ಲರು.

ಆದರೆ ಪ್ರತಿಭೆ ಅದೆಂತಹುದೆಂಬುದನ್ನು ಅನೇಕರು ಅರಿಯರು. 'ಕಾಂಟ್' ಎಂಬ ದಾರ್ಶನಿಕನ ವಿದ್ಯಾರ್ಥಿಗಳು ಇದನ್ನು ವಿಷಯಾನುಭವ (Perception)ಎಂದು ತಿಳಿಯುವರು. ಆದರೆ ಸಂತರ ಅಭಿಮತದ ಮೇರೆಗೆ, ಪ್ರತಿಭೆಯು ಅತೀಂದ್ರಿಯ ಅನುಭವವನ್ನು ಪಡೆಯಬಲ್ಲ ಶಕ್ತಿಯು. ಅದು ಸರಿಯಾದ ಪಾರಮಾರ್ಥಿಕ ಅನುಗ್ರಹ ಸಾಧನಗಳಿಂದ ನಮ್ಮಲ್ಲಿ ಜನಿಸುವುದುಂಟು. ನಾನು ನನ್ನ ಅನೇಕ ಪರಿಚಿತ ಪಂಡಿತ ಗೆಳೆಯರೊಡನೆ ಈ ವಿಷಯವನ್ನು ಚರ್ಚಿಸಿರುವೆ ಮತ್ತು ಶರೀರಶಾಸ್ತ್ರದ ದೃಷ್ಟಿಯಿಂದ ನೋಡಿದರೆ, ಈ ಪ್ರತಿಭಾಶಕ್ತಿಯು ಅಂತಃಸ್ಫುರಣ ವೆಂಬುದಕ್ಕೆ ಸಂಬಂಧಿಸಿರುವುದು, ಬಾಹ್ಯ ಸ್ಫುರಣವೆಂಬುದಕ್ಕಲ್ಲ ಎಂದು ಹೇಳಬಹುದು. ನಿಜವಾಗಿ ಇಂದ್ರಿಯಗಳ ಮುಖಾಂತರ ಲಭಿಸಿದ ಬಾಹ್ಯ ವಸ್ತುಗಳ ಅನುಭವವು ಅಷ್ಟೊಂದು ಪ್ರಧಾನವಾದುದಲ್ಲ. ಪರಮಾರ್ಥ ಪಥವನ್ನು ತಿಳಿಯುವಾಗ ಪ್ರತಿಭೆಯ ಕ್ರಿಯೆಯ ಫಲವಾಗಿ ನಮ್ಮ ಅಂತರಂಗದಲ್ಲಿ ಜನಿಸಿದ ಅನುಭವವೇ ಪ್ರಧಾನವಾದುದು. ಆದುದರಿಂದ ಪ್ರತಿಭೆಯು ಬುದ್ಧಿ, ಭಾವನೆ, ಮತ್ತು ಸಂಕಲ್ಪಗಳನ್ನು ಮೀರಿರುವ ಒಂದು ಶಕ್ತಿ, ಅದಕ್ಕೆ ಶರೀರಶಾಸ್ತ್ರದಲ್ಲಿ ಅಂತಃಸ್ಫುರಣವೆಂದು ಬಗೆಯಲಾದ ಪ್ರಕ್ರಿಯೆಯ ಆಶ್ರಯವಿರುವದು. ಇದರ ಜತೆಯಲ್ಲಿ, ಈ ಪ್ರಾತಿಭ ಅನುಭವದಲ್ಲಿ ಅತೀಂದ್ರಿಯತೆಯ ಅಂಶವೊಂದಿರುವುದು. ನಮ್ಮ ಸಾಮಾನ್ಯ ಅನುಭವವೆಲ್ಲ ಕೇವಲ ನಮ್ಮ ಇಂದ್ರಿಯಗಳಿಗೆ ಸಂಬಂಧಿಸಿರುವುದು. ಆದರೆ ಈ ಅನುಭವವು ಅತೀಂದ್ರಿಯವಿರುವುದು. ಇದನ್ನು ಓರ್ವ ಮಹಾರಾಷ್ಟ್ರದ ಅನುಭಾವಿಗಳು,

> **'ಅಂಧಳ್ಯಾನೇ ದೇಖಿಲೇ । ಬಹಿರ್ಯಾನೇ ಐಕಿಲೇ ।**
> **ಪಾಂಗಳ್ಯಾನೇ ಪಾತಲಾಗ । ಕೇಲಾ ರೇ ।**
> **(ಕುರುಡನು ಕಂಡನು, ಕಿವುಡನು ಕೇಳಿದನು ।**
> **ಕುಂಟನು ಬೆಂಬಳಿಸಿದನಯ್ಯ ॥)**

ಎಂಬುದಾಗಿಯೂ, ಇಲ್ಲವೆ ಹಿಂದೀ ಅನುಭಾವಿಗಳು,

> **'ಬಿನು ಪಗ ಚಲೈ, ಸುನೈ ಬಿನು ಕಾನಾ।' (ತುಲಸಿದಾಸ)**
> **(ಕಾಲಿಲ್ಲದೆ ನಡೆವನು, ಕಿವಿಯಿಲ್ಲದೆ ಕೇಳ್ವನು)**
> **'ಅಂಧೇ ಕೋ ಸಬ ಕುಛ ದರಸಾಈ।' (ಸೂರದಾಸ)**
> **(ಕುರುಡನು ಎಲ್ಲವನ್ನು ಕಾಣುತಿಹನು)**

ಎಂಬುದಾಗಿಯೂ ಬಣ್ಣಿಸಿರುವರು. ಇದನ್ನೆಯೆ ಕನ್ನಡ ಸಂತರನೇಕರು ಅರುಹಿರುವರು. ಆದುದರಿಂದ ಪ್ರತಿಭೆ, ಅತೀಂದ್ರಿಯ ಅನುಭವ, ಅಂತಃಸ್ಫುರಣ, ಇವೆಲ್ಲ ಪಾರಮಾರ್ಥಿಕ ಅನುಭವದ ವಿಕಸನದಲ್ಲಿ ಭಾಗವಹಿಸಿರುವವು.

ಅನುಭಾವದ ಮನೋವೈಜ್ಞಾನಿಕ ಲಕ್ಷಣಗಳಲ್ಲಿ ಸಾತತ್ಯವೆಂಬುದನ್ನು ವಿಶೇಷವಾಗಿ ಉಲ್ಲೇಖಿಸಬಹುದು. ಪಾರಮಾರ್ಥಿಕ ಅನುಭವವು ವಿಚ್ಛಿನ್ನವಾದುದಿರಕೂಡದು. ಅದು ಒಮ್ಮೆ ಬಂದು ನಿಮ್ಮನ್ನು ಬಿಟ್ಟುಹೋಗುತ್ತಿದ್ದರೆ, ನೀವದನ್ನು ಮರಮರಳಿ ಪಡೆಯದಿದ್ದರೆ, ಅದು ಪಾರಮಾರ್ಥಿಕ ಅನುಭವವೇ ಅಲ್ಲ. ಈ ಸಾತತ್ಯವು ಬೆಳವಣಿಗೆಯಿಂದ ಕೂಡಿರುವದು. ನಮಗೆ ಲಭಿಸಿದ ಪ್ರಾತಿಭ ಅನುಭವದಿಂದಲೇ ನಾವು ಆಲಸಿಗರಾಗಕೂಡದು, ಇಲ್ಲವೆ ಸಂತುಷ್ಟರಾಗಿ ವಿಶ್ರಮಿಸಕೂಡದು. ಆ ಅನುಭವವು ದಿನದಿನಕ್ಕೆ ಹಾಗೂ ವರುಷ ವರುಷಕ್ಕೆ ಬೆಳೆಯುತ್ತಿರಬೇಕು; ಮತ್ತು ಕೊನೆಗೆ ಈ ಬಗೆಯ ಅತೀಂದ್ರಿಯ ಅನುಭವವು ಒಂದು ಬಗೆಯಾಗಿ ಅಸಂಪಾತ ರೇಖೆಯಂತೆ ಪರಸತ್ಯವನ್ನು ಸಮೀಪಿಸುವ ದರಲ್ಲಿ ಪರಿಣಮಿಸಬೇಕು. ಅತಿಪರವಲಯವೆಂಬ (Hyperbole) ವಕ್ರರೇಖೆಯು ಅಸಂಪಾತರೇಖೆಯನ್ನು (Asymptote) ಎಂದೂ ಕೂಡುವುದಿಲ್ಲ. ಆದರೆ ಸಂತತವಾಗಿ ಅದನ್ನು ಸಮೀಪಿಸುತ್ತ ಸಾಗುವುದು ಮತ್ತು ಅನಂತತ್ವದಲ್ಲಿಯೆ ಅದನ್ನು ಸೇರುವದು. ಇದೇ ಬಗೆಯಾಗಿ ಪರಮಾರ್ಥ ಸಾಧಕನು ಪರಮಾತ್ಮ ನನ್ನು ಸಮೀಪಿಸಲು ಯತ್ನಿಸುವನು. ಅವನು ಪ್ರತ್ಯಕ್ಷ ಆತನನ್ನು ಸೇರುವನೋ ಇಲ್ಲವೋ ನಮಗೆ ಗೊತ್ತಿಲ್ಲ. ಹಿರಿಯ ಸಂತವರರಾದ ಜ್ಞಾನೇಶ್ವರರು ಕೂಡ ಹೇಳಿರುವ ದೇನೆಂದರೆ: ಹದಿನೈದುವರೆ ಒರೆಯ ಬಂಗಾರ ಹಾಗೂ ಹದಿನಾರು ಒರೆಯ ಬಂಗಾರಗಳಲ್ಲಿ ಇರುವಷ್ಟು ಅಂತರವು, ಶ್ರೇಷ್ಠತಮ ಸಾಧಕ ಹಾಗು ಪರಮಾತ್ಮ ಇವರಲ್ಲಿ ನೆಲೆಸಿರುವದು. ಇದು ದರ್ಶನವು ವಿಚಾರಿಸತಕ್ಕ ಪ್ರಶ್ನೆ. ಅದನ್ನೀಗ ನಾನಿಲ್ಲಿ ಚರ್ಚಿಸಬಯಸುವದಿಲ್ಲ. ಈ ಬಗೆಯಾಗಿ ಪರತಮ ಸತ್ಯವನ್ನು ಅಸಂಪಾತ ರೇಖೆಯಂತೆ ಸಮೀಪಿಸುವ ರೀತಿಯು ಪ್ರಾತಿಭ ಅನುಭವದ ಇನ್ನೊಂದು ಲಕ್ಷಣವು.

ಈ ವರೆಗೆ ಅನುಭಾವದ ಮನೋವೈಜ್ಞಾನಿಕ ಲಕ್ಷಣವನ್ನು ಕುರಿತು ವಿಚಾರಿಸಿದ್ದಾಯಿತು. ಇನ್ನು ಅದರ ಪರತತ್ವಶಾಸ್ತ್ರೀಯ(Metaphysical) ಲಕ್ಷಣವನ್ನು ಅರುಹಲಿರುವೆ. ಸಾರ್ವತ್ರಿಕವಾದುದೂ, ಅನಿವಾರ್ಯವಾದುದೂ ಇರದ ಯಾವ ಅನುಭವವೂ ಸತ್ಯವಾದುದು, ಸಪ್ರಮಾಣವಾದುದು ಎಂದು ಬಗೆಯಲು ಬರಲರಿಯದೆಂಬುದನ್ನು ಕಾಂಟನ ದರ್ಶನದ ಅಧ್ಯಯನವನ್ನು ಮಾಡಿದವರೆಲ್ಲ ಬಲ್ಲರು. ಇಂಥ ಸಾರ್ವತ್ರಿಕವಾದ, ಅನಿವಾರ್ಯವಾದ ಅನುಭವವೇ ವಾಸ್ತವಿಕ ವಾಗಿ ಸಪ್ರಮಾಣವಾದುದು. ಸಾರ್ವತ್ರಿಕತೆ, ವಾಸ್ತವಿಕತೆ, ಅನಿವಾರ್ಯತೆ ಹಾಗೂ ಸಪ್ರಮಾಣತೆ ಇವುಗಳಲ್ಲಿ ಹೊಂದಿಕೆಯನ್ನು ಸಿದ್ಧಪಡಿಸಲು ಕಾಂಟನು ತುಂಬ ಪರಿಶ್ರಮಿಸಿದನು. ಈ ಎಲ್ಲ ಲಕ್ಷಣಗಳು ಪಾರಮಾರ್ಥಿಕ ಅನುಭವದಲ್ಲಿ ನೆಲೆಗೊಂಡಿರುವವು. ಪ್ರಪಂಚದಲ್ಲಿಯ ಸಂತರೆಲ್ಲ ತಮ್ಮ ಅನುಭವಗಳನ್ನೆಲ್ಲ ಅರುಹುವುದು ಸಾಧ್ಯವಾಗಿ, ಅವೆಲ್ಲವುಗಳ ಗಣನೆಯನ್ನು ಮಾಡಿದರೆ, ಅವುಗಳಲ್ಲಿ

ಸಾಮಾನ್ಯವಾದ ಸಾದೃಶ್ಯವಿದ್ದುದು ಕಾಣಬರುವುದು. ನಿಜವಾದ ಯಾವ ಅನುಭಾವಿಯೂ ಸಾಮಾನ್ಯವಾಗಿ ತನ್ನ ಆಂತರಿಕ ಅನುಭವವನ್ನು ಉಸುರುವುದಿಲ್ಲ. ಇಂಥ ಅನುಭವವನ್ನು ಮಾತಿನಲ್ಲಿ ಮೂಡಿಸುವುದರಿಂದ ಏನು ಪ್ರಯೋಜನ? ಎಂದು ಅವನು ಕೇಳುವನು. ಬೇರೆ ಜನರು ಅದನ್ನು ಅತ್ಯುಕ್ತಿಯೆಂದೂ, ಅಲಂಕಾರವೆಂದೂ, ಮಿದುಳಿನಲ್ಲಿಯ ಬಿರುಕಿನ ಕುರುಹೆಂದೂ ಬಗೆಯಬಹುದು. ವಿಲಿಯಮ್ ಜೇಮ್ಸ್ ಎಂಬ ದಾರ್ಶನಿಕನು ತನ್ನ 'ಧಾರ್ಮಿಕ ಅನುಭವಗಳ ವಿವಿಧತೆ' ಎಂಬ ಗ್ರಂಥದಲ್ಲಿ ಈ ಅನುಭವಗಳನ್ನು ಕಲೆಹಾಕಲು ಹಾಗೂ ಕಾಣಿಸಲು ಯತ್ನಿಸಿರುವನು. ಈ ಅನುಭವಗಳನ್ನು ಒಂದೆಡೆ ಸೇರಿಸಿದರೆ, ಅವುಗಳಲ್ಲಿಯ ವಿಲಕ್ಷಣವಾದ ಸಾರ್ವತ್ರಿಕತೆಯು ನಮಗೆ ಕಾಣದಿರದು.

ಕೊನೆಗೆ, ಪಾರಮಾರ್ಥಿಕ ಅನುಭವದ ತುಂಬ ಯತಾರ್ಥವಾದ ಪ್ರಮಾಣವನ್ನು ಅರುಹಬೇಕಾದರೆ, ನಾವು ಮುಂದಿನ ಮೂರು ಸುಪ್ರಸಿದ್ಧ ವಾದಗಳನ್ನು ಉಲ್ಲೇಖಿಸಬೇಕಾಗುವುದು. ಆದರ್ಶವಾದ, ವಾಸ್ತವವಾದ ಹಾಗೂ ಉಪಯೋಗವಾದ. ಇವುಗಳಲ್ಲಿ ಮೊದಲನೆಯದು ಸುಸಂಬದ್ಧತೆಯನ್ನೂ (Coherence), ಎರಡನೆಯದು ಅನುರೂಪತೆಯನ್ನು (Correspondence) ಇಲ್ಲವೆ ಸ್ವತಂತ್ರತೆಯನ್ನೂ, ಮತ್ತು ಮೂರನೆಯದು ಸಮಾಧಾನವನ್ನೂ(Satisfaction) ಪ್ರಧಾನವೆಂದು ಪ್ರತಿಪಾದಿಸುವುದು. ಸಮಾಧಾನವು ಒಂದೆಡೆಯಲ್ಲಿ ಭೌತಿಕ ಸುಖವಾದಿಗಳ ಸಂತೋಷವನ್ನು ನೆಮ್ಮುವದು, ಇನ್ನೊಂದೆಡೆಯಲ್ಲಿ ಅದು ಅನುಭಾವಿಗಳ ಆನಂದದೆಡೆ ಹೊರಳುವುದು. ಸಂತುಷ್ಟನಾದ ಮೂರ್ಖನಿಗಿಂತ ಅಸಂತುಷ್ಟನಾದ ಸಾಕ್ರೆಟೀಸನು ಮೇಲು ಎಂದು ಓರ್ವ ಹಿರಿಯ ದಾರ್ಶನಿಕನು ಉಸುರಿರುವ. ನಾವು ಈ ಯುಕ್ತಿವಾದವನ್ನು ಹಿಗ್ಗಿಸಿ ಹೀಗೆ ಹೇಳಬಹುದು. ಸಂತುಷ್ಟನಾದ ಸಾಕ್ರೆಟೀಸನಿಗಿಂತ ಅಸಂತುಷ್ಟನಾದ ಅನುಭಾವಿಯು ಮೇಲು. ಈ ಬಗೆಯಾಗಿ, ಅನುಭಾವಿಯ ಈ ಸಂತೋಷವೇ ಪರಮಸುಖ, ಪರಮಾನಂದ, ಆನಂದಪರವಶತೆ.

ಪರಮಾನಂದದ ದರ್ಶನವು ಒಂದು ಬಗೆಯ ಪುಷ್ಟೀಕರಣವನ್ನು ಸಮರ್ಥನೆಯನ್ನು ಒಳಗೊಂಡಿರುವದು. ಪುಷ್ಟೀಕರಣವೆಂದರೇನು? ಒಂದು ಬೆರಳು, ಐದು ಬೆರಳುಗಳು, ತೆರೆದ ಅಂಗೈ, ಒಂದು ಕೈಯು ಇನ್ನೊಂದನ್ನು ಹಿಡಿಯುವಿಕೆ–ಈ ಬಗೆಯ ಪರಸ್ಪರ ಸಮರ್ಥನೆಯು ಪಾರಮಾರ್ಥಿಕ ಅನುಭವ ದಲ್ಲಿಯೂ ಕಂಡುಬರುವುದು. ಅದರಲ್ಲಿ ಕಣ್ಣಿನ ಅನುಭವವು ಕಿವಿ, ನಾಲಿಗೆ, ತ್ವಚೆ, ಚಲನ ಇತ್ಯಾದಿಗಳ ಅನುಭವಗಳ ಬೆಂಬಲವನ್ನು ಪಡೆಯುವದು. ಇದನ್ನೇ ಸ್ಟೋಯಿಕ್‌ದಾರ್ಶನಿಕರು ಪುಷ್ಟೀಕರಣವೆಂದು (Catalepsia) ಹೆಸರಿಸಿ ರುವರು. ಅತೀಂದ್ರಿಯ ಅನುಭವಗಳ ಈ ಬಗೆಯ ಹೊಂದಿಕೆಯೆ–ಒಂದಿಕೆಯೆ–ಪರತಮ

ಆನಂದದ ಕುರುಹು. ಇದನ್ನಿಲ್ಲಿ ಇದಕ್ಕೂ ಹೆಚ್ಚಾಗಿ ವಿವರಿಸುವುದು ಅಪ್ರಸ್ತುತ ವಾಗಬಹುದು. ಆದರೆ ಈ ಪರಮಾನಂದಕ್ಕೆ-ಆತ್ಮಾನಂದಕ್ಕೆ-ತನ್ನದೇ ಆದ ಒಂದು ದರ್ಶನವಿರುವುದು, ಎಂಬುದನ್ನು ನಾನು ಹೇಳಬಲ್ಲೆ. ಆತ್ಮಾನಂದ-ದರ್ಶನವನ್ನು ಕುರಿತು ಗ್ರಂಥವೊಂದನ್ನು ಬರೆಯಬೇಕು ಎಂಬುದು ನನ್ನ ಬಹುಕಾಲದ ಬಯಕೆ. ಆತ್ಮಾನಂದವನ್ನು ಕೆಳಗಣ ಆರು ದೃಷ್ಟಿಕೋನಗಳಿಂದ ಕಾಣಬಹುದು: ಪರತತ್ವಶಾಸ್ತ್ರ ಹಾಗೂ ಜ್ಞಾನಶಾಸ್ತ್ರಗಳ ದೃಷ್ಟಿ, ಮನಃಶಾಸ್ತ್ರ ಹಾಗು ಅನುಭಾವಶಾಸ್ತ್ರಗಳ ದೃಷ್ಟಿ, ಮತ್ತು ನೀತಿಶಾಸ್ತ್ರ ಹಾಗೂ ಮೂಲ್ಯಶಾಸ್ತ್ರಗಳ ದೃಷ್ಟಿ. ನಾವು ಅದರೆಡೆ ಯಾವ ದೃಷ್ಟಿಯಿಂದ ಕಂಡರೂ, ಪರಮಾನಂದ ಇಲ್ಲವೆ ಆತ್ಮಾನಂದವೇ ಅನುಭಾವದ ಗುರಿಯಿರುವುದು ಹಾಗು ಪ್ರಪಂಚದ ಅನುಭಾವಿಗಳೆಲ್ಲ ಆ ಗುರಿಯನ್ನೇ ತಮ್ಮೆದುರು ಇರಿಸಿದ್ದರು ಎಂಬುದು ನಮಗೆ ಹೊಳೆಯದಿರದು. ಈ ಪರಿಪೂರ್ಣ ವಾದ ಆತ್ಮಾನಂದವನ್ನು ಸೇವಿಸುವ ಆದರ್ಶವೇ ಸಂತಸಮುದಾಯವನ್ನು ಒಂದೆಡೆ ಕೂಡಿಸುವುದು.

ಈವರೆಗೆ ನಾನು ಅನುಭಾವದ ಕೆಲ ಸಾಮಾನ್ಯ ಲಕ್ಷಣಗಳನ್ನು ಅರುಹಿರುವೆ. ಈ ಕಿರಿದಾದ ದಾರ್ಶನಿಕ ವಿವರಣವನ್ನು ಗಮನಿಸಿದರೆ, ನಾವು ನಮ್ಮ ವಿಚಾರವನ್ನು ಮುಂದೆ ಮುಂದೆ ಸಾಗಿಸಿದಂತೆ, ಈ ಎಲ್ಲ ವಿಷಯಗಳು ಕನ್ನಡ ಅನುಭಾವಿಗಳಲ್ಲಿ ಬಹು ಅಂಶಗಳಿಂದ ನೆಲೆಸಿರುವವು ಎಂಬುದನ್ನು ನೀವು ಕಾಣಬಲ್ಲಿರಿ.

ಈ ಹಿರಿಯ ಕನ್ನಡ ಅನುಭಾವಿಗಳು-ಸಂತರು-ಶೈವ ಹಾಗು ವೈಷ್ಣವ ಎಂಬ ಎರಡು ಪಂಗಡಗಳಿಗೆ ಸೇರಿರುವರು. ಆದರೆ, ನಿಜವಾದ ಅನುಭಾವಿಯು ಶೈವನೂ ಇರುವುದಿಲ್ಲ, ವೈಷ್ಣವನೂ ಇರುವುದಿಲ್ಲ. ಈ ಉಪನ್ಯಾಸಗಳಲ್ಲಿ ಬಳಸಲಾದ ಪದ ಗಳನ್ನುನೀವು ಅಭ್ಯಸಿಸಿದಿರೆಂದರೆ, ಇದು ನಿಮಗೆ ಸ್ಪಷ್ಟವಾಗುವುದು. ಅಲಹಾಬಾದವು ಗಂಗೆ-ಯಮುನೆಗಳ ಸಂಗಮವಿರುವಂತೆ, ಧಾರವಾಡವು ಕೂಡ ಶೈವ-ವೈಷ್ಣವ ಈ ಎರಡು ವಿಚಾರಧಾರೆಗಳ ಸಂಗಮವಾಗಬಹುದು ಎಂದು ನಾನು ಹೇಳಬಲ್ಲೆ. ಇದರ ಜತೆಯಲ್ಲಿ, ಶೇಷನು ಶೈವ-ವೈಷ್ಣವರಿಬ್ಬರಿಗೂ ಪೂಜ್ಯನಿರುವ ಎಂಬುದನ್ನೂ ನಾನು ಅರುಹಬಯ ಸುವೆ. ಶೈವರು ಶೇಷನನ್ನು, ಶಿವನ ಕೊರಳನ್ನು ಅಲಂಕರಿಸುವ ರತ್ನಹಾರವೆಂದು ಬಗೆದರೆ, ವೈಷ್ಣವರು ಅವನನ್ನು ವಿಷ್ಣುವಿನ ಹಾಸಿಗೆಯೆಂದು ಕಲ್ಪಿಸಿರುವರು. ಈ ಬಗೆಯಾಗಿ ಶೇಷನು ಶೈವ-ವೈಷ್ಣವರೀರ್ವರಲ್ಲಿ ಹೊಂದಿಕೆಯನ್ನು ಮಾಡುವನು. ಆದರೆ, ನಾನೀಗ ವಿವರಿಸಲೆತ್ನಿಸುವುದು ಅವರಲ್ಲಿಯ ಸಮಾನ ಪಾರಮಾರ್ಥಿಕ ಅನುಭವಗಳನ್ನು ಮತ್ತು ಅವರು, ತಮ್ಮ ಅನುಭವಗಳಿಂದಲೂ, ಅವುಗಳ ವರ್ಣನೆಯಿಂದಲೂ ಸಾಮಾನ್ಯವಾಗಿ ಪಾರಮಾರ್ಥಿಕ ವಿಚಾರದ ಬೆಳವಣಿಗೆಗೆ ನೀಡಿದ ಕಾಣಿಕೆಯನ್ನು.

ಮೇಲ್ಕಾಣಿಸಿದ ದೃಷ್ಟಿಯಿಂದ ನೋಡಿದರೆ, ಹಿರಿಯ ಕನ್ನಡ ಅನುಭಾವಿ ಗಳಲ್ಲಿಯೂ ಪ್ರಪಂಚದ ಬೇರೆ ಅನೇಕ ಅನುಭಾವಿಗಳಲ್ಲಿಯೂ ಕೆಲ ಹೋಲಿಕೆಗಳನ್ನು

ನಾವು ಕಾಣಬಲ್ಲೆವು. ಉದಾಹರಣಾರ್ಥವಾಗಿ, ನಾವು ಗ್ರೀಕ ದಾರ್ಶನಿಕರಾದ ಸಾಕ್ರೆಟೀಸ್, ಪ್ಲೇಟೋ ಹಾಗು ಫೀಡೋ ಇವರನ್ನು ತೆಗೆದು ಕೊಂಡರೆ, ಇವರ ಪ್ರತಿನಿಧಿಗಳನ್ನು ನಾವು ಕಲ್ಯಾಣದ 'ಅನುಭವ ಮಂಟಪ'ದಲ್ಲಿ ಕಾಣಬಹುದು. ಪ್ರಭುದೇವರು ಸಾಕ್ರೆಟೀಸನನ್ನು, ಬಸವೇಶ್ವರರು ಪ್ಲೇಟೋನನ್ನು, ಚೆನ್ನಬಸವರು ಫೀಡೋನನ್ನು ಪ್ರತಿನಿಧಿಸುವರು. ನಾನು 'ಶೂನ್ಯಸಂಪಾದನೆ' ಗ್ರಂಥವನ್ನು ಓದುತ್ತಿರುವಾಗ, ಪ್ಲೇಟೋನ ಗ್ರಂಥಗಳ ಸಂಪೂರ್ಣವಾದ ಅಧ್ಯಯನವನ್ನು ಮಾಡಿದ ಶ್ರೀ ಜುಯೆಟ್ ಹಾಗು ಬರ್ನೆಟ್ ಅವರಂಥ ಪಂಡಿತರು ಬರೆದಂತೆ ಈ ಅನುಭಾವಿಗಳನ್ನು ಕುರಿತು ಒಂದು ವ್ಯಾಪಕವಾದ ಗ್ರಂಥ ಬರೆಯಲು ಬರಲರಿಯದೇ ಎಂದೆನಿಸಿತು. ಅದೊಂದು ಅಸಾಮಾನ್ಯ ಕೆಲಸ. 'ಶೂನ್ಯಸಂಪಾದನೆ' ಯಲ್ಲಿಯ ಸಂವಾದಗಳು ಬಹುಮಟ್ಟಿಗೆ ಪ್ಲೇಟೋನ ಸಂವಾದಗಳ ಮಾದರಿಯಿಂದ ರಚಿಸಲಾಗಿರುವವು. ಸಂತವರನಾದ ಸರ್ವಜ್ಞನು, ತನ್ನ ವೈಶಿಷ್ಟ್ಯಪೂರ್ಣವಾದ ವಿರೋಧಪೂರ್ಣ ಸಮತೂಕದ ವಾಕ್ಯರಚನೆ ಯಿಂದ, ಗ್ರೀಕ ದಾರ್ಶನಿಕನಾದ ಹಿರಕ್ಲಿಟೋಸನನ್ನು ಹೋಲುವನು. ಇದೇ ಸಂದರ್ಭದಲ್ಲಿ ಮುಂದಿನ ಒಂದು ಸಂಗತಿಯೆಡೆಗೆ ತಮ್ಮ ಗಮನವನ್ನು ಸೆಳೆಯ ಬಯಸುವೆ. ಶ್ರೀ ಅರವಿಂದ ಘೋಷರವರ ಗ್ರಂಥಗಳನ್ನು ಪರಿಶೀಲಿಸಿದವರಿಗೆ ಅವರು ಈ ದಾರ್ಶನಿಕನನ್ನು ತುಂಬ ಮೆಚ್ಚಿದ್ದರೆಂಬುದು ತಿಳಿದ ವಿಷಯ. ಕ್ರಿ.ಶ. ೧೯೧೭ರಲ್ಲಿ ನಾನು ಹಿರಕ್ಲಿಟೋಸನನ್ನು ಕುರಿತು ಒಂದು ನಿಬಂಧವನ್ನು ಬರೆದಿದ್ದೆ. ಆ ನಿಬಂಧವನ್ನು ಕುರಿತು ಶ್ರೀ ಅರವಿಂದರು ಹತ್ತು ಬರಹಗಳನ್ನು ಬರೆದರು. ಹತ್ತು ವರುಷಗಳ ಪೂರ್ವದಲ್ಲಿ ಆ ಬರಹಗಳೆಲ್ಲ ಗ್ರಂಥರೂಪದಲ್ಲಿ ಪ್ರಸಿದ್ಧಿಸಲಾಗಿದೆ.

ನಾವು ಕ್ರಿಸ್ತನ ಕಾಲದೆಡೆ ತೆರಳಿದೆವೆಂದರೆ, ಕ್ರಿಸ್ತನ ಧರ್ಮವಿಚಾರದ ಬೆಳವಣಿಗೆಯನ್ನು ಅರುಹುವ ಕ್ರಿಸ್ತಧರ್ಮದ ನಾಲ್ವರು ಹಿರಿಯ ಪ್ರತಿನಿಧಿಗಳಾದ ಏಸೂಕ್ರಿಸ್ತ, ಸೇಂಟಪಾಲ್, ಸೇಂಟ ಆಗಸ್ಟಾಯಿನ್ ಮತ್ತು ಮಾರ್ಟಿನ್ ಲ್ಯೂಥರ್ ಇವರನ್ನು 'ಅನುಭವ ಮಂಟಪ'ವನ್ನು ಅಲಂಕರಿಸಿದ ಮಹಾಮಹಿಮರಾದ ಪ್ರಭುದೇವ, ಬಸವಣ್ಣ, ಸಿದ್ಧರಾಮ ಮತ್ತು ಚೆನ್ನಬಸವ ಈ ಕನ್ನಡ ಅನುಭಾವಿಗಳು ತುಂಬಾ ಹೋಲುವರು ಎಂಬುದು ಕಂಡುಬರುವುದು.

ನಾವು ಮಹಾರಾಷ್ಟ್ರದ ಅನುಭಾವಿಗಳನ್ನು ತೆಗೆದುಕೊಂಡರೆ, ಅಲ್ಲಿಯೂ ಇದೇ ಮಾದರಿಯ ಸಾಮ್ಯವನ್ನು ಕಾಣಬಹುದು. ಮಹಾರಾಷ್ಟ್ರದ ಸಂತರಲ್ಲಿ ತುಕಾರಾಮರು ಪಡೆದ ಸ್ಥಾನವನ್ನೇ ಕನ್ನಡ ಸಂತಕುಲದಲ್ಲಿ ಬಸವೇಶ್ವರರು ಪಡೆದಿರುವರೆಂಬುದು ನನ್ನ ಅಭಿಮತ. ಯಾಕೆಂದರೆ, ಅವರಿಬ್ಬರೂ ಪರಮಾತ್ಮನ ಬಗೆಗೆ ಉತ್ಕಟವಾದ ಭಕ್ತಿಭಾವವನ್ನು ತಳೆದಿದ್ದರು. ಅದರ ಮೂಲಕ ಅವರು ಪರಮಾತ್ಮನನ್ನು ಪ್ರತ್ಯಕ್ಷ ಸಾರಬಲ್ಲವರಾದರು. ಕನ್ನಡ ಅನುಭಾವಿಗಳಲ್ಲಿ ಬಸವೇಶ್ವರರು ತುಕಾರಾಮರಾದರೆ, ಚೆನ್ನಬಸವರು ರಾಮದಾಸರನ್ನು ಹೋಲುವರು.

ಅವರು ರಾಮದಾಸರಂತೆ ಮತಪ್ರಚಾರಕರು, ಸಕ್ರಿಯಾ ಸಂಘಟಕರು. ಇದಾದ ಮೇಲೆ, ಮಹಾರಾಷ್ಟ್ರದ ಹಿರಿಯ ಸಂತರಾದ ಏಕನಾಥರು ದಾರ್ಶನಿಕರೂ ಅನುಭಾವಿಗಳೂ ಇರುವುದರಿಂದ, ವೈಷ್ಣವ ಸಂತರಲ್ಲಿ ಜಗನ್ನಾಥದಾಸರಿಗೂ, ವೀರಶೈವ ಸಂತರಲ್ಲಿ ನಿಜಗುಣ ಶಿವಯೋಗಿಗಳಿಗೂ ಸಮಾನರು. ಇವರು ಹಿರಿಯ ಅನುಭಾವಿಗಳಿದ್ದಂತೆ ಹಿರಿಯ ದಾರ್ಶನಿಕರೂ ಇರುವರು. ಕನಕದಾಸರು ಚೋಖಾಮೇಳನನ್ನು ತುಂಬಾ ಹೋಲುವರು. ಇಬ್ಬರೂ ಹಿರಿಯ ಅನುಭಾವಿಗಳಿದ್ದರು. ಇಬ್ಬರೂ ತಮ್ಮ ಸ್ವಂತ ಅನುಭವಗಳನ್ನು ಸ್ಫುಟವಾಗಿ ಕಣ್ಣಿಗೆ ಕಟ್ಟುವಂತೆ ಬಣ್ಣಿಸಿರುವರು. ಆದರೆ ಕವಿತ್ವದ ದೃಷ್ಟಿಯಿಂದ ಕನಕದಾಸರು ಚೋಖಾಮೇಳನನ್ನು ಮೀರುವರು. ಕೊನೆಯದಾಗಿ, ಮಹಿಪತಿ ಎಂಬ ಒಂದೇ ಹೆಸರಿನ ಇಬ್ಬರು ಸಂತರು ಮಹಾರಾಷ್ಟ್ರ ಹಾಗೂ ಕನ್ನಡ ಅನುಭಾವಿಗಳಲ್ಲಿ ಒಂದೇ ಬಗೆಯ ಸ್ಥಾನವನ್ನು ಆಕ್ರಮಿಸಿರುವುದು ಒಂದು ಸೋಜಿಗದ ಸಂಗತಿ. ಕಾಖಂಡಕಿಯ ಮಹಿಪತಿಯೂ ಗ್ವಾಲ್ಹೇರದ ಮಹಿಪತಿಯೂ ಬೇರೆ ಬೇರೆ ಮಹಾತ್ಮರಾದರೂ, ಅವರಿಬ್ಬರೂ ಒಂದೇ ಬಗೆಯ ಅನಭಾವ ದರ್ಶನವನ್ನು ಅರುಹುವರು. ಇಬ್ಬರ ಸಮಾಧಿಗಳನ್ನೂ ಕಾಣುವ ಹಾಗೂ ಇಬ್ಬರ ಪಾರಮಾರ್ಥಿಕ ವಿಚಾರಗಳನ್ನು, ಅನುಭವಗಳನ್ನು ಅಭ್ಯಸಿಸುವ ಸುಸಂಧಿಯನ್ನು ನಾನು ಪಡೆದಿರುವೆ. ಅವರಿಬ್ಬರೂ ಹಿರಿಯ ಬುದ್ಧಿಶಾಲಿಗಳು, ಹಿರಿಯ ಅನುಭಾವಿಗಳು, ಹಿರಿಯ ಕವಿಗಳು. ಆದರೆ ದುರ್ದೈವದಿಂದ ಈರ್ವರೂ ಇನ್ನೂ ಅಷ್ಟೊಂದು ಜನರಿಗೆ ಪರಿಚಿತರಾಗಿಲ್ಲ, ಪ್ರಸಿದ್ಧಿಯನ್ನು ಪಡೆದಿಲ್ಲ. ಈರ್ವರ ಸಾಹಿತ್ಯದ ಅಧ್ಯಯನವೂ ಅಷ್ಟೊಂದು ಆಗಿರುವುದಿಲ್ಲ. ಆದುದರಿಂದ ಈ ಹಿರಿಯ ಅನುಭಾವಿಗಳ ಸಾಹಿತ್ಯದ ಸೂಕ್ಷ್ಮವಾದ –ಪರಿಪೂರ್ಣವಾದ–ಅಧ್ಯಯನವನ್ನು ಬೇಗನೆ ಕೈಕೊಳ್ಳುವುದು ಅವಶ್ಯವಾದುದು.

ಕನ್ನಡ ಹಾಗು ಹಿಂದೀ ಅನುಭಾವಿಗಳಲ್ಲಿಯೂ ನಾನು ಕೆಲವೊಂದು ಹೋಲಿಕೆಗಳನ್ನು ಕಾಣಿಸಬಹುದು. ನನ್ನ ಅಭಿಪ್ರಾಯದ ಮೇರೆಗೆ, ತುಲಸಿದಾಸರು ಹಿಂದೀ ಸಾಹಿತ್ಯದಲ್ಲಿ ಆಕ್ರಮಿಸಿದ ಸ್ಥಲವನ್ನೇ ಪುರಂದರದಾಸರು ಕನ್ನಡ ವಾಙ್ಮಯದಲ್ಲಿ ಆಕ್ರಮಿಸಿರುವರು. ಸಾಹಿತ್ಯಶಕ್ತಿಯಲ್ಲಿಯೂ, ಕಾವ್ಯಪ್ರತಿಭೆಯಲ್ಲಿಯೂ ಅವರನ್ನು ಯಾರೂ ಮೀರಲರಿಯರು. ಸಾಮಾನ್ಯವಾಗಿ ತುಲಸಿದಾಸರು ಸಗುಣಭೂಮಿಕೆಯಲ್ಲಿಯೆ ನೆಲೆಸಿರುವರು. ಆದರೆ ಪುರಂದರ ದಾಸರು ಅದಕ್ಕೂ ಮುಂದೆ ಸಾರಿರುವರು. ಇತ್ತೀಚೆಗೆ ನಾನು ಅವರ ಕೆಲ ಪದಗಳನ್ನು ಓದಿರುವೆ. ಅವು ಅವರ ವಿಚಾರಗಳ ಬೆಳವಣಿಗೆಯಲ್ಲಿಯ ಮೂರು ಹಂತಗಳನ್ನು ಗುರುತಿಸಲು ನೆರವಾಗಿರುವವು. ಅವರು ಸಗುಣದಿಂದ ತಮ್ಮ ಸಾಧಕ ಜೀವನವನ್ನು ಪ್ರಾರಂಭಿಸಿದರು. ಮುಂದೆ ಅವರು ಸಗುಣ–ನಿರ್ಗುಣಗಳು ಒಂದೇ ಎಂಬುದನ್ನು ಕಂಡು ಹಿಡಿದರು;

ಮತ್ತು ಕೊನೆಗೆ, ಅವರು ಹಿರಿಯ ಯೋಗಿಗಳೂ ಅನುಭಾವಿಗಳೂ ಆದರು. ಯೋಗಾನುಭವಗಳನ್ನು ಕುರಿತು ಅವರು ಅದ್ಭುತವಾದ ಪದಗಳನ್ನು ರಚಿಸಿರುವರು. ಈ ಮಾದರಿಯ ಪದಗಳು ತುಲಸಿದಾಸರಲ್ಲಿ ಸುಲಭವಾಗಿ ದೊರೆಯಲರಿಯವು. ಅತಿ ಪರಿಶ್ರಮ ಪೂರ್ವಕವಾದ ಅಧ್ಯಯನದಿಂದಲೇ ಇಂಥ ಒಂದೆರಡು ಪದಗಳನ್ನು ಮಾತ್ರ ಅವರ ಸಾಹಿತ್ಯದಲ್ಲಿ ಕಂಡುಹಿಡಿಯುವುದು ಸಾಧ್ಯವಾಯಿತು. ಕನ್ನಡ ಸಂತಸಾಹಿತ್ಯದಲ್ಲಿಯ ಹಿರಿಯ ಕವಿಗಳಾದ ವಿಜಯದಾಸರು, ಸೂರದಾಸರಿಗೆ ಸಮಾನರು. ಇಬ್ಬರೂ ಸಗುಣ ಉಪಾಸಕರು. ಇಬ್ಬರೂ ನುರಿತ ಸಂಗೀತಗಾರರು. ಕನ್ನಡ ಅನುಭಾವಿಗಳಾದ ಕನಕದಾಸರು, ಹಿಂದೀ ಅನುಭಾವಿಗಳಾದ ರೈದಾಸರನ್ನು ಹೋಲುವರು. ಈ ರೈದಾಸರು ಈ ಭಾಗದಲ್ಲಿ ರೋಹಿದಾಸ ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆದಿರುವರು. ರೈದಾಸರದು ಅಂದವಾದ ವ್ಯಕ್ತಿತ್ವ, ಅವರು ಪಾರಮಾರ್ಥಿಕ ಅನುಭವ ಪಡೆದ ಅದ್ಭುತರಾದ ಕವಿಗಳು. ಕನಕದಾಸರೂ ಅದೇ ಮಾದರಿಯ ಸಂತ-ಕವಿಗಳು. ತರುವಾಯ, ಧಾರವಾಡ ಜಿಲ್ಲೆಯಲ್ಲಿಯ ಶಿಗ್ಗಾವಿ ಗ್ರಾಮದ ಶರೀಫ ಸಾಹೇಬರಲ್ಲಿಯೂ, ಉತ್ತರ ಭಾರತದ ಹಿರಿಯ ಸಂತಕವಿಗಳಾದ ಕಬೀರರಲ್ಲಿಯೂ ಕೆಲವೊಂದು ಸಾದೃಶ್ಯವು ಕಂಡು ಬರುವುದು. ಈರ್ವರೂ ಮಹಮ್ಮದೀಯರು. ಅವರು ಒಂದೇ ಬಗೆಯ ಪಾರಮಾರ್ಥಿಕ ಅನುಭಾವವನ್ನು ಬಣ್ಣಿಸಿದರೂ, ಕಬೀರರು ಆಕ್ರಮಿಸಿದ ಭೂಮಿಕೆಯು ನಿಜವಾಗಿ ಮೇಲ್ತರಗತಿಯದಿರುವುದು. ಈ ಬಗೆಯ ಹೋಲಿಕೆಗೆ ಅರ್ಹರಾದ ಇನ್ನೊಂದು ಸಂತಯುಗಲವಿರುವುದು. ಆದರೆ ಅವರು ಅಷ್ಟೊಂದು ಪ್ರಸಿದ್ಧಿಯನ್ನು ಪಡೆದವರಲ್ಲ. ಶ್ರೇಷ್ಠತಮ ಕನ್ನಡ ಅನುಭಾವಿಗಳಲಲೊಬ್ಬರಾದ ಸರ್ಪಭೂಷಣರು, ಹಿಂದೀ ಅನುಭಾವಿಗಳಲ್ಲಿ ಚರಣದಾಸರನ್ನು ಎಲ್ಲ ವಿಧದಿಂದ ಹೋಲುವರು. ಹಿಂದೀ ಸಾಹಿತ್ಯದಲ್ಲಿ ಚರಣದಾಸರು ಕಬೀರರ ಸಂಪ್ರದಾಯವನ್ನು ಮುಂದುವರಿಸಿದಂತೆ, ಸರ್ಪಭೂಷಣರು ಕನ್ನಡ ಯೋಗ ಸಂಪ್ರದಾಯ ವನ್ನು ಮುಂದುವರಿಸಿದರು. ಇದು ಕನ್ನಡ ಹಾಗು ಹಿಂದೀ ಸಂತರಲ್ಲಿಯ ಹೋಲಿಕೆ.

ಕೊನೆಗೆ, ನನ್ನ ಸ್ನೇಹಿತರೋರ್ವರು ಸೂಚಿಸಿರುವ ಖಗೋಲದಲ್ಲಿಯ ಕೆಲ ಹೋಲಿಕೆಗಳನ್ನು ಕೂಡ ಅರುಹಬಯಸುವೆ. ಹುಬ್ಬಳ್ಳಿಯ ಶ್ರೀ ಪಾವಟೆ ಸಿದ್ಧರಾಮಪ್ಪನವರು, ಪ್ರಭುದೇವರು ವ್ಯೋಮ-ಆಕಾಶವೆಂತಲೂ, ಬಸವೇಶ್ವರರು ಅದರಲ್ಲಿ ಬೆಳಗುವ ಭಾನು-ಸೂರ್ಯನೆಂತಲೂ ಒಂದೆಡೆ ಹೇಳಿರುವರೆಂಬುದನ್ನು ಕೇಳಿರುವೆ. ವ್ಯೋಮ-ಭಾನುವೆಂಬವು ಅವರು ಪ್ರತ್ಯಕ್ಷ ಬಳಸಿದ ಶಬ್ದಗಳು. ಆದರೆ ನನ್ನ ಸ್ನೇಹಿತರು ಈ ಹೋಲಿಕೆಗಳನ್ನು ಮುಂದುವರಿಸಬೇಕೆಂದು ಸೂಚಿಸಿರುವರು. ಚೆನ್ನಬಸವಣ್ಣನವರನ್ನು ಚಂದ್ರ ಇಲ್ಲವೆ ಗುರುವಿನೊಡನೆಯೂ ಮಹಾದೇವಿಯಕ್ಕನವರನ್ನು ಆರುಂಧತಿಯೊಡನೆಯೂ ನಾವೇಕೆ ಹೋಲಿಸಬಾರದು? ಈ

ಹೋಲಿಕೆಯು ಸಾಧ್ಯವೇ ಎಂಬುದನ್ನು ತಾವೇ ವಿಚಾರಿಸಬೇಕು. ಅದೇನೇ ಇರಲಿ, ಅವರು ನಮಗೆ ಹೇಳುವುದೇನೆಂದರೆ, ಈ ನಾಲ್ಕೈದು ಜನ ಅನುಭಾವಿಗಳು ಆಗಸದಲ್ಲಿಯ ಜ್ಯೋತಿರ್ಮಯ ನಕ್ಷತ್ರಗಳಂತೆ ನಮ್ಮ ನಾಡಿನ ಈ ಭಾಗದಲ್ಲಿಯ ಜನರ ಪಾರಮಾರ್ಥಿಕ ಜೀವನವನ್ನು ಬೆಳಗಿದರೆಂಬುದರಲ್ಲಿ ಸಂದೇಹವಿಲ್ಲ.

ಯಾವ ಮಹಾಕಾರ್ಯವೂ ಪರಸ್ಪರ ಸಹಾಯ-ಸಹಕಾರಗಳಿಲ್ಲದೆ ಕೈಗೂಡಲರಿಯದು, ಎಂಬುದನ್ನು ಈ ವಿವೇಚನೆಯು ತಿಳಿಯಪಡಿಸುವುದು. ನಾವೆಲ್ಲರೂ ಪಡೆಯ ಬಯಸುವ ಹಿರಿಯ ಪಾರಮಾರ್ಥಿಕ ಆದರ್ಶಗಳ ಬೆಳವಣಿಗೆಗೂ ಇದೇ ಮಾತು ಅನ್ವಯಿಸುವುದು. ಸಹಕಾರ ಹಾಗೂ ಸಾಮಾನ್ಯವಾದ ಪ್ರಯತ್ನಗಳಿಲ್ಲದೆ ಯಾವ ಮಹತ್ವದ ವಿಷಯವೂ ಸಾಧ್ಯವಾಗಲರಿಯದು.

ನಾನಿನ್ನು ಮುಂದೆ ಕೊಡಬಯಸುವ ಉಪನ್ಯಾಸಗಳ ಯೋಜನೆಯನ್ನು ತಮ್ಮೆದುರು ಇರಿಸಲಿರುವೆ. ಸದ್ಯಕ್ಕೆ ಕನ್ನಡ ಸಂತರ ಅನುಭಾವದ ಬೆಳವಣಿಗೆಯನ್ನು ಗುರುತಿಸಲು ಬರುವಂತಹ ಕೆಲ ಮಹತ್ವದ ಶೀರ್ಷಿಕೆಗಳನ್ನು ಕುರಿತು ಆಲೋಚಿಸಿರುವೆ. ಅವುಗಳಲ್ಲಿಯ ಮೊದಲನೆಯದು ದಾರ್ಶನಿಕ ಪೀಠಿಕೆ. ಅದರಲ್ಲಿ ಜ್ಞಾನಶಾಸ್ತ್ರ, ಮನಃಶಾಸ್ತ್ರ ಹಾಗು ಪರತತ್ವಶಾಸ್ತ್ರಗಳ ದೃಷ್ಟಿಯಿಂದ ಅನುಭಾವದ ಲಕ್ಷಣಗಳನ್ನು ಇದೀಗ ಅರುಹಲಾಗಿದೆ; ಮತ್ತು ಅವುಗಳ ನೆರವಿನಿಂದ ಪೂರ್ವ-ಪಶ್ಚಿಮಗಳ ಹಿರಿಯ ದಾರ್ಶನಿಕರೊಡನೆಯೂ ಅನುಭಾವಿಗಳೊಡನೆಯೂ ಕನ್ನಡ ಅನುಭಾವಿಗಳನ್ನು ಸರಿಹೋಲಿಸಲಾಗಿದೆ. ಆಮೇಲೆ ನಾನು ಪರಮಾರ್ಥಿಕ ಜೀವನದ ಬಗೆಗೆ ಆಸಕ್ತಿಯನ್ನುಂಟುಮಾಡುವ ಪ್ರೇರಣೆಗಳನ್ನು ವಿವರಿಸಲಿರುವೆ. ಪರಮಾತ್ಮನ ಭಕ್ತಿಯಿಂದ ತುಂಬಿದ ಬಾಳನ್ನು ಪ್ರೀತಿಸಹಚ್ಚುವ ಪ್ರೇರಣೆಗಳು ಅನೇಕ ಇರುವವು. ಅವುಗಳ ಪರಿಚಯವನ್ನು ಹಿಂದೀ ಸಂತರ ಬಗೆಗೂ ಮಹಾರಾಷ್ಟ್ರ ಸಂತರ ಬಗೆಗೂ ನಾನು ಬರೆದ ಗ್ರಂಥಗಳಲ್ಲಿ ಈ ಮೊದಲೇ ಮಾಡಿಕೊಡಲಾಗಿದೆ. ಕನ್ನಡ ಸಂತರನ್ನು ಕುರಿತು ಬರೆಯುವಾಗಲೂ ಆ ವಿಷಯಗಳನ್ನೇ ಚರ್ಚಿಸಲಾಗುವುದು. ಇದಾದ ಮೇಲೆ ಬರುವುದು ನೈತಿಕ ಸಿದ್ಧತೆಯ ವಿಚಾರ. ಪರಮಾತ್ಮನನ್ನು ಪಡೆಯಬಯಸುವ ಪ್ರತಿಯೊಬ್ಬ ಸಾಧಕನು, ತನ್ನ ಪಾರಮಾರ್ಥಿಕ ಸಾಧನದಲ್ಲಿಯ ಪ್ರಗತಿಗಾಗಿ ಆ ನೈತಿಕ ಸಿದ್ಧತೆಯನ್ನು ನಡೆಸಲೇಬೇಕು. ತರುವಾಯ, ನಾನು ಸದ್ಗುರುಗಳ ಸ್ವರೂಪ ಹಾಗೂ ಶಿಷ್ಯನ ಪಾರಮಾರ್ಥಿಕ ಬೆಳವಣಿಗೆಗಾಗಿ ಅವನು ಮಾಡುವ ಕಾರ್ಯ ಇವನ್ನು ವಿವರಿಸುವೆ. ಇದು ನಮ್ಮನ್ನು ಗುರು-ಶಿಷ್ಯರ ಸಂಬಂಧದ ವಿಚಾರದೆಡೆ ಒಯ್ಯುವುದು. ಆಮೇಲೆ ಸಂತ-ದೇವರ ಸಂಬಂಧ ಹಾಗು ದೇವರ ಸ್ವರೂಪ ಈ ವಿಷಯಗಳು ನಮ್ಮ ಗಮನವನ್ನು ಸೆಳೆಯುವವು. ದೇವರ ನಾಮದ ವಿಷಯವು ಅವನ್ನು ಹಿಂಬಾಲಿಸುವುದು. ಉತ್ತರ ಭಾರತದ

ಹಾಗೂ ಮಹಾರಾಷ್ಟ್ರದ ಸಂತರಂತೆ, ಕನ್ನಡ ಸಂತರೂ ದೇವರ ನಾಮಕ್ಕೆ ತುಂಬ ಪ್ರಾಧ್ಯಾನ್ಯವನ್ನು ನೀಡಿರುವರು. ಆಮೇಲೆ, ನಾನು ಧ್ಯಾನ ಪದ್ಧತಿಯನ್ನು ವಿವರಿಸಲಿರುವೆ. ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಯಾವ ಪದ್ಧತಿಯನ್ನು ವಿಶೇಷವಾಗಿ ಸಮರ್ಥಿಸಲಾಗಿದೆ? ಕನ್ನಡ ಸಂತರು ಬಳಸಿದ ಪದ್ಧತಿಯು ತುಂಬ ಅಪೂರ್ವವಾದುದು ಎಂಬುದನ್ನು ಗಮನಿಸಬೇಕು. ಹಿಂದೀ ಸಾಹಿತ್ಯದಲ್ಲಿ ಕಬೀರರು ಇದನ್ನೇ ಸಮರ್ಥಿಸಿರುವವರು ಎಂಬುದು ನಿಜ. ಆದರೆ, ಸೂರದಾಸ, ತುಲಸೀದಾಸ ಇಲ್ಲವೆ ಮೀರಾಬಾಯಿಯವರು ಇದನ್ನು ಅಷ್ಟೊಂದು ಸಮರ್ಥಿಸುವುದಿಲ್ಲ. ಜ್ಞಾನೇಶ್ವರ, ಏಕನಾಥ ಹಾಗೂ ತುಕಾರಾಮರ ವಾಙ್ಮಯದಲ್ಲಿ ಧ್ಯಾನಪದ್ಧತಿಗೆ ವಿಶೇಷ ಮಹತ್ವ ಕೊಡಲಾಗಿರುವುದು. ಇದಾದ ಮೇಲೆ, ನಾನು ಪಾರಮಾರ್ಥಿಕ ಸಾಧನದ ಅಂತಿಮ ಗುರಿಯಾದ ಸಾಕ್ಷಾತ್ಕಾರವನ್ನು ವಿವರಿಸಲಿರುವೆ. ಈ ಸಾಕ್ಷಾತ್ಕಾರವನ್ನು ಸವಿವರವಾಗಿ, ಸುಸ್ಪಷ್ಟವಾಗಿ ಬಣ್ಣಿಸುವಲ್ಲಿ, ಕನ್ನಡ ಸಂತರು ತುಂಬ ಅನುಪಮರು, ಶ್ರೇಷ್ಠತಮರು. ಈ ಸಂದರ್ಭದಲ್ಲಿ ನಾನು ಸಾಕ್ಷಾತ್ಕಾರದ ಪ್ರಮಾಣಗಳನ್ನು ಅದರ ಪ್ರಾರಂಭದ ರೀತಿಯನ್ನು, ರೂಪ, ತೇಜ, ನಾದ, ಸಮ್ಮಿಶ್ರ ಹಾಗೂ ಶ್ರೇಷ್ಠತಮ ಎಂಬ ಸಾಕ್ಷಾತ್ಕಾರದ ಬೇರೆ ಬೇರೆ ಪ್ರಕಾರಗಳನ್ನು ವಿವರಿಸುವೆ. ಕೊನೆಗೆ ಪೂರ್ಣತೆಯನ್ನು ಪಡೆದ ಅನುಭಾವಿಯ ಮೇಲೆ ಪರಮಾತ್ಮನ ಸಾಕ್ಷಾತ್ಕಾರದಿಂದ ಉಂಟಾಗುವ ವಿವಿಧ ಪರಿಣಾಮಗಳನ್ನು ಅರುಹಿ ವಿರಮಿಸುವೆ.

ನಾನು ಇದೀಗ ತಮ್ಮೆದುರು ಇರಿಸಿದ ಉಪನ್ಯಾಸಗಳ ಯೋಜನೆಯ ಪಟವು. ತಮಗೆ ನಾನು ಕೊಡಲಿರುವ ಭಾಷಣಗಳ ಕ್ರಮವನ್ನು ಅರುಹಬಲ್ಲದು. ಇದೇ ಹೇಳಿದ ಮೇರೆಗೆ ಈ ಉಪನ್ಯಾಸಗಳ ಉದ್ದೇಶವು ಪ್ರಪಂಚದ ಅನುಭಾವಿಗಳಲ್ಲಿ ಕನ್ನಡ ಅನುಭಾವಿಗಳು ಪಡೆದ ಗೌರವದ ಸ್ಥಾನವನ್ನು ತಮಗೆ ಕಾಣಿಸುವುದು ಇರುವುದೇ ಹೊರತು, ಅವರ ಸಾಹಿತ್ಯದ ಸವಿವರ ಅರ್ಥ ವಿವರಣೆಯಲ್ಲ. ಕನ್ನಡ ಅನುಭಾವಿಗಳು ಪ್ರಪಂಚದ ಅನುಭಾವಿಗಳಲ್ಲಿ ಬಲು ಉನ್ನತವಾದ ಸ್ಥಾನವನ್ನು ಆಕ್ರಮಿಸಿರುವರು, ಮತ್ತು ಪ್ರಪಂಚದ ಅನುಭಾವದ ವಿಚಾರಕ್ಕೆ ಅವರು ವಿಪುಲವಾದ ಕಾಣಿಕೆಯನ್ನು ಸಲ್ಲಿಸಿರುವರು. ಇದನ್ನು ಕಾಣಿಸುವುದು ನನ್ನ ಕೆಲಸ. ಅದನ್ನು ನಾನು ನನ್ನ ಶಕ್ತಿಸರ್ವಸ್ವವನ್ನು ಉಪಯೋಗಿಸಿ ನೆರವೇರಿಸಲು ಯತ್ನಿಸುವೆ.

■■

ಪ್ರಕರಣ ಎರಡು

ಪರಮಾರ್ಥ ಪ್ರೇರಣೆಗಳು

ಹೋದ ಸಲ, ಹಿರಿಯ ಕನ್ನಡ ಸಂತರ ಬೋಧೆಯನ್ನು ವಿವರಿಸುವಾಗ, ನಾನು ಅನುಸರಿಸಬಯಸುವ ಉಪನ್ಯಾಸಗಳ ಕ್ರಮವನ್ನು ಅರುಹಿರುವೆ, ಇಂದಿನ ನನ್ನ ಉಪನ್ಯಾಸದ ವಿಷಯವು 'ಪರಮಾರ್ಥ ಪ್ರೇರಣೆಗಳು' ಎಂಬುದಿರುವುದು. ಈ ಪ್ರೇರಣೆಗಳ ವಿಷಯದ ಸಾಮಾನ್ಯ ಚರ್ಚೆಯನ್ನು ನಾನಿಂದು ಮಾಡಲಿ ರುವುದಿಲ್ಲ. ಮನುಜನ ಪಾರಮಾರ್ಥಿಕ ಜೀವನದ ಬೆಳವಣಿಗೆಗೆ ಅವಶ್ಯವಿರುವ ವಿಷಯಗಳಾವುವು ಎಂಬುದನ್ನು ಉದಹರಿಸಲು ಕೆಲ ಕನ್ನಡ ಸಂತರ ಐದಾರು ಪದಗಳನ್ನಷ್ಟೇ ವಿವರಿಸಲಿರುವೆ. ನನ್ನ ಗೆಳೆಯರೋರ್ವರು ಒಮ್ಮೆ ಉಸುರಿದ ಮೇರೆಗೆ, ದುಃಖವು ಪ್ರಧಾನ ಪ್ರೇರಣೆಯಿರುವದೆಂಬುದೇನೋ ನಿಜ; ಆದರೆ, ಅದು ಮೇಲಿಂದ ಮೇಲೆ ಅನೇಕ ಸಲ ಅರುಹಲಾದ ಮೂಲಕ, ಅದನ್ನೀಗ ತೊರೆಯುವುದೇ ಒಳಿತೆಂದೆನಿಸುವುದು. ನಾನಿಂದು ದಾರ್ಶನಿಕ, ನೈತಿಕ, ಹಾಗೂ ಮನೋವೈಜ್ಞಾನಿಕ ಪ್ರೇರಣೆಗಳನ್ನು ಕುರಿತು ಹೇಳಲಿರುವೆ. ಅದೇ ಮೇರೆಗೆ, ಇವುಗಳ ಜತೆಯಲ್ಲಿ, ನಮ್ಮನ್ನು ಪಾರಮಾರ್ಥಿಕ ಆದರ್ಶದ ಪ್ರಾಪ್ತಿಯೆಡೆ ಸೆಳೆಯುವ ಪ್ರೇರಣೆಗಳನ್ನೂ ಕೂಡ ವಿವರಿಸಲಿರುವೆ.

ನಮ್ಮ ಇಡೀ ಜೀವನವು ಪರಮಾತ್ಮನ ಧ್ಯಾನ-ಪ್ರಾರ್ಥನೆಗಳಲ್ಲಿ ಮುಳುಗು ವಂತೆ ನಾವು ಪರಮಾರ್ಥದ ಆದರ್ಶವನ್ನು ಯಾಕೆ ಅನುಸರಿಸ ಬೇಕೆಂಬುದು ನಾನು ವಿವರಿಸಲಿರುವ ಮೊದಲನೆಯ ವಿಷಯ. ಈ ಸಂದರ್ಭ ದಲ್ಲಿ ನಾನು ಸಂತವರರಾದ ರೇವಣಸಿದ್ಧರ 'ಬಹು ದೊಡ್ಡದೀ ಜನ್ಮ! ಬಹು ದೊಡ್ಡದೀ ಜನ್ಮ!' ಎಂಬ ಪದವನ್ನು ವಿವರಿಸಲಿರುವೆ. ನಮ್ಮ ಜೀವನದ ಉನ್ನತಿಗಾಗಿ ಹಾಗೂ ನಮ್ಮ ಆದರ್ಶದ ಪ್ರಾಪ್ತಿಗಾಗಿ ನಮ್ಮಲ್ಲಿ ಮೂಡಲಿರುವ ಹಾಗೂ ನಾವು ಮಾಡಲಿರುವ ಪರಮಾತ್ಮನ ಸಂತತವಾದ, ಉತ್ಕಟವಾದ, ಪ್ರಚೋದನ-ಪ್ರಾರ್ಥನೆಗಳು ಮೊದಲ ನೆಯ ಪರಮಾರ್ಥ ಪ್ರೇರಣೆ. ಎರಡನೆಯದು ವರ್ಡ್ಸವರ್ಥನೆಂಬ ಆಂಗ್ಲ ಕವಿಯನ್ನು ಅನುಕರಿಸುವ ಕಾವ್ಯಮಯ ಮತ್ತು ಕಲ್ಪನಾಮಯ ಪ್ರೇರಣೆ. ಅದು ನಮ್ಮ ಪೂರ್ವಜೀವನದ ಹಾಗೂ ಬಾಲ-ಜೀವನದ ಅನುಭವವನ್ನು ಮರಳಿ ಹೊರಳಿ ಕಾಣಲು ಪ್ರೇರಿಸುವದು. ವರ್ಡ್ಸವರ್ಥ ಕವಿಯ 'ಅಮರತ್ವ ಸೂಚನೆಗಳ ಗೀತ' (Ode on Intimations of Immortality) ಎಂಬ ಕವನದಲ್ಲಿ ನಾವು ಪರಮಾರ್ಥವನ್ನು ಪಡೆಯುವ ಈ ಬಗೆಯ ಉತ್ಕಾಂಕ್ಷೆಯ ಪೆಂಪುಳ್ಳ ಕಲ್ಪನೆಯನ್ನು

ಕಾಣಬಹುದು. 'ಅಳುತಿದ್ಯಾ ಕಂದಾ ಅಳುತಿದ್ಯಾ!' ಎಂಬ ಪದವು ಈ ವಿಷಯವನ್ನು ಅರುಹುವ ಕನ್ನಡ ಸಾಹಿತ್ಯದಲ್ಲಿಯ ಒಂದು ಅಂದವಾದ ಭಾವಗೀತವು. ಮೂರನೆಯ ಪ್ರೇರಣೆಯು ಮನೋವೈಜ್ಞಾನಿಕವಾದುದು. ಅದು ಮನುಜನನ್ನು ಸದೈವ ಮೋಸಗೊಳಿಸುವ ಹಾಗೂ ನಾಶಗೊಳಿಸುವ ಇಂದ್ರಿಯಗಳ ಸ್ವಭಾವದ ಅರಿವನ್ನು ಒಳಗೊಂಡಿರುವುದು. ಇಂದ್ರಿಯಗಳನ್ನು ಜಯಸಿ, ಅವನ್ನು ಮೇಲ್ತರಗತಿಯ ಸರಿಯಾದ ಉದ್ದೇಶ ಪ್ರಾಪ್ತಿಗಾಗಿ ವಿನಿಯೋಗಿಸಬೇಕೆಂಬ ಉತ್ಕಾಂಕ್ಷೆಯು ಅವನನ್ನು ಪರಮಾರ್ಥದೆಡೆ ಸೆಳೆಯುವುದು. ಈ ಸಂದರ್ಭದಲ್ಲಿ ನಾವು ಎರಡು ಬಗೆಯ ಪ್ರೇರಣೆಗಳನ್ನು ಕಾಣಬಹುದು. ಒಂದು ಅಭಾವಾತ್ಮಕ ಪ್ರೇರಣೆ, ಇನ್ನೊಂದು ಭಾವಾತ್ಮಕ ಪ್ರೇರಣೆ. ಅಭಾವಾತ್ಮಕ ಪ್ರೇರಣೆಯನ್ನು ಅಖಂಡೇಶ್ವರರ ವಚನದಲ್ಲಿಯೂ, ಭಾವಾತ್ಮಕ ಪ್ರೇರಣೆಯನ್ನು ಗೋಪಾಲದಾಸರ ಪದದಲ್ಲಿಯೂ ಕಾಣಿಸಲಾಗಿದೆ. ಅವೆರಡೂ ಕೂಡಿ, ಇಡೀ ಮನೋವೈಜ್ಞಾನಿಕ ಪ್ರೇರಣೆಯು ಸಿದ್ಧವಾಗುವುದು. ನಾಲ್ಕನೆಯ ಪ್ರೇರಣೆಯಾದ ನೈರಾಶ್ಯವು– ಆಶಾಭಂಗವು ಬಲು ಮಹತ್ವದ ಪ್ರೇರಣೆಯು. ಇದನ್ನು ಪ್ರತಿಯೊಬ್ಬನು ತನ್ನ ಜೀವನದಲ್ಲಿ ಅನುಭವಿಸುವನು; ಮತ್ತು ಪುರಂದರದಾಸರಂಥ ಸಂತವರರ ಜೀವನದಲ್ಲಿ ಅದು ಕಾಣಿಸಿಕೊಂಡಾಗಂತೂ ಅದು ಅತ್ಯಂತ ಪರಿಣಾಮಕಾರ ವಾದುದೂ, ಅದ್ಭುತ ವಾದುದೂ ಆಗಿ ಪರಿಣಮಿಸುವುದು. ನಾನು ದಾಸರಾಯರ ಸಾಹಿತ್ಯದಿಂದ ಕೆಲ ಅವತರಣಗಳನ್ನು ತಮ್ಮೆದುರಿರಿಸಿ, ಆಶಾಭಂಗವು ಮನುಜನನ್ನು ಪರಮಾರ್ಥ ದೆಡೆ ಹೇಗೆ ಸೆಳೆಯುವದೆಂಬುದನ್ನು ಅರುಹಲಿರುವೆ. ತರುವಾಯ ನಾನು ನೈತಿಕ ಪ್ರೇರಣೆಯೆಡೆ ಸಾಗುವೆನು: ನಾವು ಜಯಿಸಬೇಕಾದ ದುರ್ಗುಣಗಳು, ಕಾಡಪಶುಗಳ ರೂಪದಿಂದ ಮೆರೆಯುವ ಬೇರೆ ಬೇರೆ ದುರ್ಗುಣಗಳ ರೂಪಾತ್ಮಕ ವರ್ಣನೆ, ಅವನ್ನು ಗುಂಡಿಕ್ಕಿ ಕೊಲ್ಲುವ ರೀತಿ, ಕೊನೆಗೆ ದುರ್ಗುಣಪೂರ್ಣ ಜೀವನವನ್ನು ತೊರೆದು ಸದ್ಗುಣಪೂರ್ಣವಾದ ಪೂರ್ಣಜೀವನವನ್ನು ಬಾಳುವ ಬಗೆ, ಇತ್ಯಾದಿ ವಿಷಯಗಳನ್ನು ವಿವರಿಸಲಿರುವೆ. ಇವು ನೈತಿಕ ಪ್ರೇರಣೆಯ ಅಂಶಗಳು. ಇದು ಗುರುಸಿದ್ಧರ ಒಂದು ಪ್ರಸಿದ್ಧ ಪದದಲ್ಲಿ ಚೆನ್ನಾಗಿ ಉದಾಹರಿಸ ಲಾಗಿದೆ. ಕೊನೆಯದಾಗಿ, ನಾನು, ನಿದ್ರೆಯ ಸಿದ್ಧಾಂತವನ್ನೊಳಗೊಂಡ 'ಎಲೋ ದಾರಿಕಾರನೆ, ಮಲಗಿಕೊಂಬರೆ ಹೀಗೆ?' ಎಂಬ ಪುರಂದರದಾಸರ ಬಲು ಪೆಂಪುಳ್ಳ ಪದವನ್ನು ವಿವೇಚಿಸಲಿರುವೆ. ಈ ಜೀವನದಲ್ಲಿ ನಾವೆಲ್ಲ ಮಲಗಿ ಕೊಂಡಿರುವೆವು; ಮತ್ತು ನಿದ್ರಾವಸ್ಥೆಯನ್ನು ತೊರೆದು, ನಾವು ಪಾರಮಾರ್ಥಿಕ ಜಾಗೃತಿಯ ಅವಸ್ಥೆಯನ್ನು ಪಡೆಯಬೇಕಾಗಿದೆ. ಇದು ಈ ಪ್ರಕರಣದಲ್ಲಿಯ ಕೊನೆಯ ಪ್ರೇರಣೆ.

ನಾನು ಮೊದಲು ತಿಳಿಸಿದಂತೆ 'ಬಹುದೊಡ್ಡದೀ ಜನ್ಮ' ಎಂಬ ಪದವು ಹಿರಿಯ ಸಂತರಾದ ರೇವಣಸಿದ್ಧರದಿರುವುದು. ವೀರಶೈವ ಧರ್ಮದ ಚರಿತ್ರೆಯನ್ನು

ಅಭ್ಯಸಿಸಿದವರು, ಅದರ ಬೆಳವಣಿಗೆಯಲ್ಲಿ ಎರಡು ಹಂತಗಳಿರುವ ವೆಂಬುದನ್ನು ಬಲ್ಲರು; ಒಂದು ಆಚಾರ್ಯರದು, ಎರಡನೆಯದು ಆಧುನಿಕ ಶರಣರದು. ರೇವಣಸಿದ್ಧರು ಪ್ರಾಚೀನತಮ ಆಚರ್ಯರಲ್ಲಿ ಅಥವಾ ಸಿದ್ಧರಲ್ಲಿ ಒಬ್ಬರು ಎಂದು ಬಗೆಯಲಾಗಿದೆ. ಅವರನ್ನು ಒಮ್ಮೊಮ್ಮೆ ನಾಥರೆಂದೂ ಕರೆಯ ಲಾಗುವುದು. ಇದು ಒಂದು ಬಿಗಿಯಾದ ಸಮಸ್ಯೆಯನ್ನು ನಿರ್ಮಿಸುವುದು. ರೇವಣಸಿದ್ಧರ ಜನ್ಮಸ್ಥಲವು ಅಥವಾ ಮೂಲನಿವಾಸ ಸ್ಥಲವು ಯಾವುದು? ಸಾಮಾನ್ಯವಾಗಿ ಅವರು ಮೈಸೂರು ರಾಜ್ಯದಲ್ಲಿಯ ಬಾಳೇಹಳ್ಳಿಯಲ್ಲಿ ವಾಸಿಸಿದರು ಎಂದು ಪರಿಗಣಿಸಲಾಗಿದೆ. ಆದರೆ, ಡಾ. ನಂದೀಮಠರವರ ಅಭಿಮತದ ಮೇರೆಗೆ, ಬಾಳೇಹಳ್ಳಿಗಿಂತ ಪ್ರಾಚೀನವಾದ ಇನ್ನೊಂದು ಸ್ಥಲವು ದೊರೆತಿರುವುದು. ನಾನದನ್ನು ಇನ್ನೂವರೆಗೆ ಅರಿತಿಲ್ಲ. ಆದುದರಿಂದ ಅದರ ಬಗೆಗೆ ನಾನು ನನ್ನ ನಿರ್ಣಯವನ್ನು ಈಗಾಗಲೆ ಅರುಹಲರಿಯೆ. ಆದರೆ ಕರಾಡ ಎಂಬ ಪಟ್ಟಣದ ಹತ್ತಿರ, ಕರಾಟ–ಕೊಲ್ಲಾಪುರ ಮಾರ್ಗದಲ್ಲಿ ರೇಣಾವಿ ಎಂಬ ಸ್ಥಲವಿರುವುದು. ಅದರ ನೆರೆಯಲ್ಲಿ ಸುಮಾರು ಆರೇಳು ಗುಡಿಗಳಿರುವವು. ಅಲ್ಲಿ ಈ ಹಿರಿಯ ರೇವಣಸಿದ್ಧರು ಕೆಲ ಒಳ್ಳೆಯ ಆಶ್ರಮಗಳನ್ನು ನಿರ್ಮಿಸಿದಂತೆ ಕಾಣುವುದು. ಶ್ರೀ ಹಾಲಭಾವಿಯವರು ರೇವಣಸಿದ್ಧ ರನ್ನು ಕುರಿತು 'ಶಿವಾನುಭವ' ಮಾಸಪತ್ರಿಕೆಯಲ್ಲಿ ಒಂದು ಅಂದವಾದ ಬರಹವನ್ನು ಪ್ರಸಿದ್ಧಿಸಿರುವರು. ಅದರಲ್ಲಿ ಅವರು ರೇಣಾವಿಯ ಅಲ್ಪ ಇತಿಹಾಸವನ್ನೂ ಕೊಟ್ಟು, ಅದರ ಭೌಗೋಲಿಕ ಸ್ಥಾನವನ್ನು ನಿಶ್ಚಯಿಸಲು ಯತ್ನಿಸಿರುವರು. ಅದರ ಮೇಲಿಂದ ರೇವಣಸಿದ್ಧರು ರೇಣಾವಿಯಲ್ಲಿ ಕೆಲ ಕಾಲವಾದರೂ ವಾಸಿಸಿರಬಹುದು ಮತ್ತು ಅದರ ನೆರೆಯಲ್ಲಿಯ ಗುಡಿಗಳ ಮೇಲಿಂದ ಅವರ ಪ್ರಭಾವವು ಸುತ್ತಲಿನ ಪ್ರದೇಶಗಳಲ್ಲಿ ಹಬ್ಬಿರಬಹುದು ಎಂದು ಕಾಣುವುದು. ಕೊಲ್ಲಾಪುರದ ನೆರೆಯಲ್ಲಿ ವಾಸಿಸುವವರು, ರೇವಣಸಿದ್ಧರು ಸಂತವರರಾದ ಕಾಡಸಿದ್ಧರಿಗೆ ಸಂಬಂಧಿಸಿರುವ ಸಂಗತಿಯನ್ನು ಅರಿಯರು. ಈ ವಿಷಯದಲ್ಲಿ ಕೆಲವೊಂದು ಅಡಚಣೆಗಳು ತಲೆದೋರಿರುವವು. ಈ ಕಾಡಸಿದ್ಧರು ರೇವಣಸಿದ್ಧರ ಶಿಷ್ಯರೋ ಅಥವಾ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಹೇಳುವ ಮೇರೆಗೆ, ಕೊಲ್ಲಾಪುರದ ಹತ್ತಿರದ ಸಿದ್ಧಗಿರಿಯ 'ಕಾಡಿ'ನಲ್ಲಿ ತಪಸ್ಸನ್ನಾಚರಿಸಿದ ಮೂಲಕ ರೇವಣಸಿದ್ಧರೇ ಕಾಡಸಿದ್ಧ ರೆಂಬ ಬಿರುದನ್ನು ಪಡೆದರೋ ಹೇಗೆ ಎಂಬು ದನ್ನು ನಿರ್ಣಯಿಸಲು ಬಾರದೇ ಇರುವುದೇ ಆ ಅಡಚಣೆ. 'ಸಿದ್ಧಗಿರಿ'ಯು ಒಂದು ಅಂದವಾದ ಬೆಟ್ಟ; ಮತ್ತು ಬೇರೆ ಕೆಲ ಶರಣರು ಶ್ರೀಶೈಲದಲ್ಲಿ ಲಿಂಗೈಕ್ಯರಾದಂತೆ, ಕಾಡಸಿದ್ಧರು ಅನಂತತ್ವದಲ್ಲಿ ವಿಲೀನರಾದ ಕೊಳ್ಳವು ಆ ಬೆಟ್ಟದ ನೆರೆಯಲ್ಲಿ ಇರುವುದು.

ನಾನು ಸಿದ್ಧಗಿರಿಯಲ್ಲಿಯೂ, ಕಾಡಸಿದ್ಧರ ಬೆಟ್ಟಗಳಲ್ಲಿಯೂ ವಿಶೇಷವಾದ ಆಸ್ಥೆಯುಳ್ಳವನಿರುವೆ. ಯಾಕೆಂದರೆ, ಸಿದ್ಧಗಿರಿಯಲ್ಲಿ ಸುಮಾರು ಕ್ರಿ.ಶ.೧೮೮೦ರಲ್ಲಿ ವಾಸಿಸುತ್ತಿದ್ದ ಕಾಡಸಿದ್ಧರ ಸಂಪ್ರದಾಯದಲ್ಲಿಯ ಮುಪ್ಪಿನ ಮುನಿ ಎಂಬ

ಸಂತರಿಂದ ನಿಂಬರಗಿ ಮಹಾರಾಜರವರು ಅಲ್ಲಿಯೆ ಅನುಗ್ರಹವನ್ನು ಪಡೆದರು. ಆಮೇಲೆ ಆ ಮುನಿಗಳು, ಕೊಲ್ಲಾಪುರ ಕಾಗಲಗಳ ಅರಸರಲ್ಲಿಯ ಕಲಹದ ಮೂಲಕ ಸಿರಸಂಗಿಗೆ ತೆರಳಿದರು. ಅವರಿಗೆ ಸಂಬಂಧಪಟ್ಟ ಕೆಲ ಕೈಬರಹದ ಗ್ರಂಥಗಳೂ ಕೆಲ ಕಾಗದಪತ್ರಗಳೂ ಸಿರಸಂಗಿಯಲ್ಲಿಯೂ ದೊರೆಯುವವು ಮುಪ್ಪಿನ ಮುನಿಗಳು ಐತಿಹಾಸಿಕ ಪುರುಷರು. ಯಾಕಂದರೆ, ನಿಂಬರಗಿ ಮಹಾರಾಜರವರು ತಮ್ಮ ಪದವೊಂದರಲ್ಲಿ, 'ಮುಪ್ಪಿನ ಮುನಿಯ ಪಿಡಿದು ವಚನ । ಕಪ್ಪುಗೊರಳ ಕಾಡಸಿದ್ದನಿದ್ದೆಡೆಗೆ ಹೋಗಿ ಸಾಷ್ಟಾಂಗನಾಗೊ ನೀ।' ಎಂಬುದಾಗಿ ಅವರ ಪ್ರತ್ಯಕ್ಷ ಉಲ್ಲೇಖವನ್ನು ಮಾಡಿರುವರು. ಆದುದರಿಂದ ನಿಂಬರಗಿ ಮಹಾರಾಜರವರ ಪಾರಮಾರ್ಥಿಕ ಸದ್ಗುರುಗಳಾದ ಮುಪ್ಪಿನ ಮುನಿಗಳು ಸಿದ್ಧಗಿರಿಯಲ್ಲಿ ವಾಸಿಸಿದುದು ತೀರ ಖಚಿತವಾದ ಸಂಗತಿ. ಸಿದ್ಧಗಿರಿಯ ಕಾಡಸಿದ್ಧರ ವಾಸಸ್ಥಲವೂ ಇದ್ದಿತು. ಅದರ ನೆರೆಯಲ್ಲಿ ರೇವಣಸಿದ್ಧರ ಹೆಸರನ್ನು ಪಡೆದ ಒಂದು ಬೆಟ್ಟವೂ ಇರುವುದುಂಟು. ನಾವು ಸಿದ್ಧಗಿರಿ ಕ್ಷೇತ್ರಕ್ಕೆ ಯಾತ್ರೆಗೈದಾಗ, ಮಿರಜಿಯ ರಾಜಾಸಾಹೇಬರವರು ನನಗೆ ಆ ಬೆಟ್ಟವನ್ನು ತೋರಿಸಿದರು. ಆದರೆ ಈ ವೃತ್ತಾಂತದಲ್ಲಿಯ ಸತ್ಯಾಂಶವನ್ನು ಇತಿಹಾಸಜ್ಞರು ಹಾಗೂ ಪುರಾತನ ಅನ್ವೇಷಕರೇ ಕಂಡುಹಿಡಿಯಬೇಕು. ಅದೇನೇ ಇದ್ದರೂ, ರೇವಣಸಿದ್ಧ ಎಂಬ ಹೆಸರಿಗೆ ಸಮಾನ ವಾದ ರೇವಣನಾಥ ಎಂಬ ಹೆಸರು ನಾಥಸಂಪ್ರದಾಯದಲ್ಲಿ ಕಂಡುಬರುವ ಸಂಗತಿಯು ಮಾತ್ರ ಕುತೂಹಲಜನಕವಿರುವದು. 'ಶೂನ್ಯಸಂಪಾದನೆ' ಎಂಬ ಗ್ರಂಥದಲ್ಲಿ, ಶ್ರೀಶೈಲದಲ್ಲಿ ಪ್ರಭುದೇವರು ಗೋರಕ್ಷ ಇಲ್ಲವೇ ಗೋರಖನಾಥರನ್ನು ಭೇಟಿಯಾದ ಬಗೆಗೆ ಬಂದಿರುವ ಬಣ್ಣನೆಯು ತುಂಬ ಸೋಜಿಗ ವುಳ್ಳದ್ದು. ಗೋರಕ್ಷರೂ ನಾಥರಿರುವರೆಂಬುದು ನಾವು ಅರಿತ ವಿಷಯ. ರೇವಣ ನಾಥರೇ ಈ ಪ್ರದೇಶಕ್ಕೆ ಬಂದು, ರೇವಣ ಸಿದ್ಧರೆಂದು ಪ್ರಸಿದ್ಧಿಯನ್ನು ಪಡೆದಿರು ವದೇನೂ ಅಸಂಭವನೀಯವಲ್ಲ. ಕೆಳಗಣ ಸಂಸ್ಕೃತ ಪದ್ಯದಲ್ಲಿ ರೇವಣನಾಥ ರನ್ನೊಳಗೊಂಡ ಒಂಬತ್ತು ನಾಥರ ಇಲ್ಲವೆ ಸಿದ್ಧರ ಹೆಸರುಗಳು ಬಂದಿರುವವು.

ಗೋರಕ್ಷ–ಜಾಲಂದರ–ಚರ್ಪಟಶ್ಚ
ಅಡ್ಬಂಗ–ಕಾನೀಫ–ಮಛಿಂದರಾಧ್ಯಾ: ।
ಚೌರಂಗ–ರೇವ್ವಾಣ–ಚ ಭರ್ತೃಸಂಜ್ಞಾ:
ಭೂಮ್ಯಾಂ ಬಭೂವು: ನವನಾಥ ಸಿದ್ಧಾ: ॥

'ಗೋರಕ್ಷ, ಜಾಲಂಧರ, ಚರ್ಪಟ, ಅಡ್ಬಂಗ, ಕಾನೀಫ, ಮಛಿಂದರ, ಚೌರಂಗ, ರೇವಣ, ಭರ್ತೃ ಎಂಬ ಹೆಸರಿನ ಒಂಬತ್ತು ಜನ ನಾಥರು, ಇಲ್ಲವೆ ಸಿದ್ಧರು ಪ್ರಪಂಚದಲ್ಲಿ ಪ್ರಸಿದ್ಧಿಯನ್ನು ಪಡೆದಿರುವರು.'

ನಾನಿನ್ನು ನನ್ನ ವಿಷಯದೆಡೆ ಹೊರಳಿ, 'ಬಹು ದೊಡ್ಡದೀ ಜನ್ಮ' ಎಂಬ ಪದದಲ್ಲಿಯ ಕೆಳಗಿನ ಅಂಶಗಳನ್ನು ವಿಶೇಷವಾಗಿ ವಿಶದೀಕರಿಸುವೆ. ಮೊದಲನೆಯದಾಗಿ ರೇವಣಸಿದ್ಧರು, ಮಾನವನ ಜೀವನದ ಆದರ್ಶಗಳಾವವು? ಎಂದು ಕೇಳಿ, ಅವನ್ನು ತಾವೇ ಈ ರೀತಿ ಉತ್ತರಿಸಿರುವರು: ಭಾಳಾಕ್ಷಹರನನ್ನು ಎಡೆಬಿಡದೆ, ನಿರಂತರವಾಗಿ ಕೊಂಡಾಡುವದೇ ಮಾನವ ಜೀವನದ ಮೊದಲನೆಯ ಗುರಿ. ನಮಗೆ ಜೀವನವನ್ನು ದಯಪಾಲಿಸಿದ್ದಕ್ಕಾಗಿ ನಾವು ಭಗವಂತನಿಗೆ ಕೃತಜ್ಞರಾಗಿರಬೇಕು. ಯಾಕಂದರೆ, ನಾವೀ ಜೀವನವನ್ನು ಮೇಲ್ತರಗತಿಯ ಪಾರಮಾರ್ಥಿಕ ಉದ್ದೇಶವನ್ನು ನೆರವೇರಿಸಲು ಉಪಯೋಗಿಸಬಹುದು. ಅದು ಒಂದು ಆದರ್ಶ. 'ಪ್ರಭುವಿನ ಮಹಿಮೆಯೊಳಗೆ ಸಿಲುಕಿ ತಲ್ಲೀನವಾಗುವುದು' ಎರಡನೆಯ ಆದರ್ಶ. ಈ ಪದವನ್ನು ಕಂಡರೆ, ರೇವಣಸಿದ್ಧರು ದೊಡ್ಡ ಯೋಗಿಗಳಿದ್ದರೆಂಬುದು ಒಡೆದು ಕಾಣುವುದು. ಈ ಕವನದಲ್ಲಿ ಬಳಸಲಾದ ಪೂರ್ವ(ಮೂಡಲ) ಪಶ್ಚಿಮ-ಊರ್ಧ್ವಗಿರಿ (ಋಷಿಗಿರಿ) ಎಂಬ ಮೂರು ವಿಶೇಷ ಮಹತ್ವದ ಶಬ್ದಗಳನ್ನು ಯೌಗಿಕ ಶರೀರಶಾಸ್ತ್ರದ ವಿದ್ಯಾರ್ಥಿಗಳೆಲ್ಲ ಚೆನ್ನಾಗಿ ಬಲ್ಲರು. ಈ ಪದದಲ್ಲಿ ಬಂದ ಪೂರ್ವ-ಪಶ್ಚಿಮ ಭಾಗಗಳಲ್ಲಿಯ ಅನುಭವಗಳ ಬಣ್ಣನೆಯ ಯಥಾರ್ಥತೆಯು ಸಂದೇಹಾಸ್ಪದ ವಿರುವುದು. ಆದರೂ ನಾನದನ್ನು ಅಂಗರಚನಾಶಾಸ್ತ್ರಜ್ಞರ ಹಾಗೂ ಶರೀರ ಶಾಸ್ತ್ರಜ್ಞರ ನಿರ್ಣಯಕ್ಕೆ ಒಪ್ಪಿಸುವೆ. ರೇವಣಸಿದ್ಧರ ಅಭಿಪ್ರಾಯದ ಮೇರೆಗೆ, ಪೂರ್ವಭಾಗದಲ್ಲಿ ಇಲ್ಲವೆ ಮುಂಭಾಗದಲ್ಲಿ ನಾವು ಒಂದು ನಕ್ಷತ್ರವನ್ನು ಕಾಣುವೆವು. ಪಶ್ಚಿಮ ಭಾಗದಲ್ಲಿ ಇಲ್ಲವೆ ಹಿಂಭಾಗದಲ್ಲಿ ನಾವು ಮಿಂಚನ್ನು ಕಾಣುವೆವು. ಅದು ಹೊಳೆಯುವುದು, ಕೆಂಡವ ಕರೆಯುವುದು, ಹಾಗೂ ಅಡಗುವದೆಂದು ಬಣ್ಣಿಸಲಾಗಿದೆ. ಈ ಪೂರ್ವ-ಪಶ್ಚಿಮ-ಊರ್ಧ್ವವೆಂಬ ಸ್ಥಲಗಳು ಯೋಗಿಗಳು ಬಣ್ಣಿಸಿರುವ ತ್ರಿಕೂಟ, ಶ್ರೀಹಾಟ, ಹಾಗೂ ಗೋಲ್ಹಾಟವೆಂಬ ಸ್ಥಲಗಳಿಗೆ ಸಮಾನವಾದವುಗಳು. ಅವು ಕೂಡ ಸರಿಯಾಗಿ ಇವುಗಳಂತೆಯೇ ಬಣ್ಣಿಸಲಾಗಿವೆ. ಋಷಿಗಿರಿ ಇಲ್ಲವೆ ಊರ್ಧ್ವಗಿರಿಯು ಸಹಸ್ರಾರಚಕ್ರವೆನ್ನಬಹುದು. ಆದುದರಿಂದ ರೇವಣಸಿದ್ಧರು ಅರುಹಿದ ಅವುಗಳ ಸರಿಯಾದ ಸ್ಥಾನಗಳು, ಅವರು ಬಳಸಿದ ಶಬ್ದಗಳು, ಹಾಗೂ ಅವರು ಮಾಡಿದ ಅನುಭವಗಳ ಬಣ್ಣನೆಯು-ಇವೆಲ್ಲ ಅವರು ಮಹಾನ್ ಯೋಗಿಗಳಿದ್ದಿರಬೇಕು ಎಂಬುದನ್ನು ಚೆನ್ನಾಗಿ ಕಾಣಿಸುವವು. ಮಿದುಳುಬಳ್ಳಿಯ ಮುಂಭಾಗದಲ್ಲಿ ನಕ್ಷತ್ರವೂ, ಹಿಂಭಾಗದಲ್ಲಿ ಮಿಂಚೂ ಕಾಣುವಂತೆ, ಊರ್ಧ್ವಗಿರಿಯಿಂದ ಹಸಿರು, ಹಳದಿ, ಕೆಂಪು ಬಣ್ಣಗಳು ಹಸನಾಗಿ ಉದುರುವವು ಎಂದು ಅವರು ಹೇಳಿರುವರು. ಆದ್ದರಿಂದ ಅವು, ಅನುಭಾವಿಯು ಪರಮಾತ್ಮನ ಧ್ಯಾನದಲ್ಲಿ ನಿರತನಾದಾಗ ಕಾಣುವ ಒಂದುಬಗೆಯ ತೇಜ-ಬಣ್ಣಗಳ ಅನುಭವಗಳೇ ಸರಿ. ಆದರೆ ಇದಾದ ಕೂಡಲೆ ಅನುಭಾವಿಗಳು ಅಲ್ಲಿಯೆ ನಿಲ್ಲಬಾರದು. ಅವರು 'ಪರಮಾತ್ಮನ

ನಾಮದ ನಿನಾದದಲ್ಲಿ ತಲ್ಲೀನರಾಗಬೇಕು', 'ಗುರುಘೋಷದೊಳಗೆ ಲಯವಾಗಬೇಕು' ಎಂದವರು ಹೇಳುವರು. ಈ ಮೇರೆಗೆ ಅವರು ಬೆಳಕು–ಬಣ್ಣ–ನಾದಗಳ ತ್ರಿವಿಧ ಅನುಭವಗಳನ್ನು ವಿಶೇಷವಾಗಿ ಅರುಹಿರುವರು.

ಈ ಅನುಭವಗಳಾಚೆ ಸಾರಿ, ನಾವು ರೇವಣಸಿದ್ಧರು ಅರುಹಿದ ಇನ್ನೊಂದು ಮಹತ್ವದ ವಿಷಯವನ್ನು ಅರಿಯುವಾ! 'ಬಯಲಿಗೆ ಬಯಲು ನಿರ್ಬಯಲು' ಎಂಬುದೇ ಆ ವಿಷಯವು. ಈ ಅತಿ ಮಹತ್ವದ ಮೂಲಭೂತವಾದ ವಿಷಯವನ್ನು, ಕನ್ನಡ ಅನುಭಾವದ ಚರ್ಚೆಯ ಆದಿಯಲ್ಲೆ, ಈಗಲೆ ಪೂರ್ತಿಯಾಗಿ ವಿವರಿಸಬೇಕೆಂದೆನಿಸುವುದು. ಯಾಕೆಂದರೆ, ಕನ್ನಡ ಸಂತರ ಸಾಹಿತ್ಯದಲ್ಲಿ ಈ ಮಾತು ಮೇಲಿಂದ ಮೇಲೆ ಬರುವುದುಂಟು. 'ಬಯಲಿಗೆ ಬಯಲು ನಿರ್ಬಯಲು' ಎಂದರೇನು? ಅದೊಂದು ಅತಿಮಹತ್ವದ ಮಾತು–ಶಬ್ದಸಮೂಹ. ಅದರ ಶಬ್ದಾರ್ಥವು ಈ ಬಗೆಯದಿರುವುದು: 'ಬಯಲಿನ ಬಯಲು, ಪೂರ್ಣ ಬಯಲು, ಶೂನ್ಯದಲ್ಲಿಯ ಲಯ–ಬೆರಕೆ–ಇಲ್ಲವೆ ಬಯಲಿನ ಅಭಾವ ಎಂದರೆ ನಿರ್ಬಯಲು'. ವಿಜ್ಞಾನಿಗಳೂ, ದಾರ್ಶನಿಕರೂ, ಬೇರೆ ಜನರೂ ಇದನ್ನು ಅರಿಯಬಯಸುವರು. ಈ ಅರ್ಥದಲ್ಲಿ 'ನಿರ್ಬಯಲು' ಎಂಬುದು ಅಭಾವಾತ್ಮಕ ಮಾತು. ಅದನ್ನು ಬೌದ್ಧರ ಶೂನ್ಯದೊಡನೆ ಇಲ್ಲವೆ ನಿರ್ವಾಣದೊಡನೆ ಹೋಲಿಸಬಹುದು. ಕೆಲಬೌದ್ಧರೇ ನಿರ್ವಾಣ ಶಬ್ದವನ್ನು ಭಾವಾತ್ಮಕ ಅರ್ಥದಲ್ಲಿ ಬಳಸಿರುವರು ಎಂಬುದನ್ನು ಬುದ್ಧದರ್ಶನವನ್ನು ಅಭ್ಯಸಿಸಿದವರು ಬಲ್ಲರು. ನಾನು ಬೇರೆಡೆಯಲ್ಲಿ ಬೌದ್ಧರ ಹೀನಯಾನ–ಮಹಾಯಾನ ಪಂಥಗಳಲ್ಲಿ ಪ್ರಚಲಿತವಿರುವ ನಿರ್ವಾಣದ ಹತ್ತು ಭಿನ್ನ ಭಿನ್ನ ಅರ್ಥಗಳನ್ನು ಈ ಮೊದಲೆ ಕಾಣಿಸಿರುವೆ. ಕೊನೆಕೊನೆಗೆ ಕೆಲ ಮಹಾಯಾನ ಪಂಥದವರೇ ನಿರ್ವಾಣವು ಭಾವಾತ್ಮಕ ವಿಚಾರವೆಂದು ಬಣ್ಣಿಸಿ, ಅದನ್ನು ಆನಂದದೊಡನೆಯೂ ಕೂಡ ಒಂದಾಗಿಸಿದ್ದಾರೆ. ಭಗವದ್ಗೀತೆಯೂ ಸಹ ಮುಂದಿನ ಸಾಲುಗಳಲ್ಲಿ ನಿರ್ವಾಣ ಶಬ್ದವನ್ನು ಆನಂದಪೂರ್ಣತೆ ಎಂಬ ಭಾವಾತ್ಮಕ ಅರ್ಥದಲ್ಲಿ ಬಳಸಿರುವುದು: 'ಲಭಂತೇ ಬ್ರಹ್ಮನಿರ್ವಾಣಂ।' (ಬ್ರಹ್ಮಾನಂದವನ್ನು ಪಡೆವರು) 'ಅಭಿತೋಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮಾನಾಂ।' (ಅನುಭಾವಿಯ ಸುತ್ತಲೂ ಬ್ರಹ್ಮಾನಂದವು ಸುಳಿಯುವುದು). ಈ ರೀತಿ, ಬ್ರಹ್ಮಾನಂದವೆಂಬ ಅರ್ಥದಲ್ಲಿ ನಿರ್ವಾಣವೆಂದರೆ ಪರಮಾತ್ಮ. ಆದಿಯಲ್ಲಿ ಬೌದ್ಧರು ಭಾವಿಸಿದ ಮೇರೆಗೆ ನಿರ್ವಾಣವೆಂದರೆ ಕೇವಲ ಅಳಿಯುವಿಕೆಯಲ್ಲ ಅಥವಾ ಅಳಿಸುವಿಕೆಯಲ್ಲ. ಆದರೆ, ಅದು ಆನಂದಪೂರ್ಣತೆಯೂ ಅಹುದು. ಈ ರೀತಿ, 'ಬಯಲಿಗೆ ಬಯಲು ನಿರ್ಬಯಲು' ಎಂಬುದು ಬಲು ಮಹತ್ವದ ಮಾತು. ಅದು ಕೇವಲ 'ಬಯಲಿನ ಅಭಾವ'ವನ್ನು ಸೂಚಿಸುವುದಿಲ್ಲ. ಅದಕ್ಕೊಂದು ಭಾವಾತ್ಮಕ ಅರ್ಥವೂ ಇರುವುದುಂಟು. ಇದು ಮೊದಲನೆಯ ವಿಷಯ. ಈ ಸಂದರ್ಭದಲ್ಲಿ

ರೇ. ಶ್ರೀ ಉತ್ತಂಗಿಯವರ ಕಿರಿಬರಹವೊಂದನ್ನು ಓದಿ ನನಗೆ ಸಂತೋಷವಾಯಿತು. ಅದರಲ್ಲಿ ಅವರು, ಗ್ರೀಕದರ್ಶನವನ್ನು ಅನುಸರಿಸಿ, 'ನಿರ್ಬಯಲ'ನ್ನು ಕುರಿತು ಒಂದು ಒಳ್ಳೆಯ ಸೂಚನೆಯನ್ನು ಮಾಡಿರುವರು. ತಮ್ಮೆಲ್ಲ ಪ್ರೇರಣೆಗಳನ್ನೂ, ಬಯಕೆಗಳನ್ನೂ, ಮನೋವಿಕಾರಗಳನ್ನೂ ಪೂರ್ತಿಯಾಗಿ ಅಳಿಸಿ, ಪರವಸ್ತುವಿನಲ್ಲಿ ಬೆರೆತು, ತಮ್ಮ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದೇ 'ಶೂನ್ಯ' ಇಲ್ಲವೆ 'ನಿರ್ಬೈಲು' ಎಂಬುದು ಅವರ ಹೇಳಿಕೆ. ಆದರೆ ರೇವಣಸಿದ್ಧರು ಒಳ್ಳೇ ಜಾಣ್ಮೆಯಿಂದ 'ಅದು ಮೂಲಬ್ರಹ್ಮವೆಂದು ತಿಳಿಯಬೇಕೊ ತಮ್ಮಾ!' ಎಂದು ಅರುಹಿರುವರು. ಅದು ಬರೀ ಬಯಲಿನ ಅಭಾವವಲ್ಲ ಇಲ್ಲವೆ ಶೂನ್ಯವಲ್ಲ. ಅದು ಕೇವಲ ನಿರ್ಗುಣ ಪರವಸ್ತುವಿನಲ್ಲಿಯ ತಮ್ಮ ವ್ಯಕ್ತಿತ್ವದ ಅಳಿವೂ ಅಲ್ಲ. ಅದೊಂದು ಭಾವಾತ್ಮಕ ವಸ್ತು-ದೇವರು ಇರಲು ಬೇಕು. ಅದರಲ್ಲಿ ನಾವು ತಲ್ಲೀನರಾಗತಕ್ಕದ್ದು. ಇದು ನಿರ್ಬೈಲಿನ ನಿಜವಾದ ಅರ್ಥ. ಕನ್ನಡ ಅನುಭಾವದ ಅಭ್ಯಾಸದಲ್ಲೆಲ್ಲ ಇದು ಮರಮರಳಿ ಬರುವುದುಂಟು. ಆದುದರಿಂದ ನಾವು ನಿರ್ಬಯಲಿನ ಬಗೆಗೆ ಈ ಮೂರು ಸಂಗತಿಗಳನ್ನು ಅರಿಯಬೇಕು. ಅದರ ತೋರಿಕೆಯ ಅರ್ಥವು ಬಯಲಿನ ಅಭಾವ; ತರುವಾಯ ಅದು ಪರವಸ್ತುವಿನಲ್ಲಿಯ ವ್ಯಕ್ತಿತ್ವದ ಅಳಿವನ್ನು ಸೂಚಿಸುವದು; ಮತ್ತು ಕೊನೆಗೆ ಅದು 'ಮೂಲಬ್ರಹ್ಮ' ಎಂಬರ್ಥವನ್ನು ಪಡೆದಿರುವುದು. ಅದೇ ನನ್ನ ಅಭಿಮತದ ಮೇರೆಗೆ ಬಹುತರವಾಗಿ ಅದರ ಸರಿಯಾದ ಅರ್ಥ. 'ಅದು ಮೂಲಬ್ರಹ್ಮ ತಿಳಿಯಬೇಕೋ ತಮ್ಮಾ'- ಇದೇ ರೇವಣಸಿದ್ಧರೂ ಅರುಹಿದ ನಿರ್ಬೈಲಿನ ಅರ್ಥ. ಕೊನೆಯದಾಗಿ, ನಾವು ಕೇವಲ ಭಗವಂತನ ಶರಣರು-ದಾಸರು ಎಂದು ಭಾವಿಸಲು ಹೆಣಗುವುದೇ ನಮ್ಮ ಏಕಮೇವ ಕರ್ತವ್ಯವಾಗಬೇಕು ಎಂದು ಅವರು ಬೋಧಿಸಿರುವರು. ಜಗನ್ನಾಥ ದಾಸರೂ ಬೇರೆಡೆ 'ನಿನ್ನ ಕಿಂಕರನೆಂದು ಮೆರೆದೆ' ಎಂದು ಅರುಹಿರುವರು. ನಾವು ಭಗವಂತನಿಗೆ ಈ ಬಗೆಯ ಸೇವೆಯನ್ನು ಸಲ್ಲಿಸಬೇಕು; ಮತ್ತು ಇದೇ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವ ಕೊನೆಯ ಹೆಜ್ಜೆ ಎಂದು ರೇವಣಸಿದ್ಧರು ಹೇಳಿರುವರು.

ನಾನೀಗ ಎರಡನೆಯ ಪದವನ್ನು ತೆಗೆದುಕೊಳ್ಳುವೆ. ಅದು ಪರಮಾತ್ಮನನ್ನು ನೆನೆಯುತ್ತಿರುವ ಮಗುವನ್ನು ಕುರಿತ ಕವಿಕಲ್ಪನೆಗಳಿಂದಲೂ, ದಾರ್ಶನಿಕ ಆಲೋಚನೆಗಳಿಂದಲೂ ತುಂಬಿರುವುದು. ಕೂಡಲೂರೇಶನ 'ಅಳುತಿದ್ಯಾ ಕಂದಾ ಅಳುತಿದ್ಯಾ' ಎಂಬ ಈ ಅಂದವಾದ ಪದವು ಸಂಗೀತಜ್ಞರಾದ ಸಾಧಕರಿಗೆ ಒಂದು ಅತ್ಯುತ್ತಮ ವಿಷಯವನ್ನು ಸಲ್ಲಿಸಿರುವುದು. ಈ ಸುಮಧುರವಾದ ಕನ್ನಡ ಗೀತವನ್ನು ಕೇಳಿದವರು, ಕೂಡಲೇ ವರ್ಡ್ಸವರ್ಥ ಕವಿಯ 'ಅಮರತ್ವದ ಸೂಚನೆಗಳ ಗೀತ'ವನ್ನು ನೆನೆಯದಿರರು. ನಮ್ಮ ಬಾಲ್ಯವು ಭಗವಂತನ ತೀರ ಸಮೀಪ ಸಂಬಂಧವುಳ್ಳದ್ದು. 'ನಮ್ಮ ಬಾಲ್ಯದಲ್ಲಿ ಸ್ವರ್ಗವು ನಮ್ಮನ್ನು ಆವರಿಸಿರುವುದು. ನಮ್ಮ ಮೂಲನಿವಾಸವಾದ ಪರಮಾತ್ಮನಿಂದ ನಾವು ದಿವ್ಯ ಪ್ರಭೆಯ ಮೋಡಗಳನ್ನೆಳೆದುಕೊಂಡು ಬರುವೆವು'.

ಎಂದು ಅವನು ಹೇಳುವನು. ಕ್ರಿಸ್ತ ಧರ್ಮದವರು ಪೂರ್ವಜನ್ಮವನ್ನು ನಂಬುವುದಿಲ್ಲ. ಆದರೆ ವರ್ಡ್ಸ್‌ವರ್ಥ ಕವಿಯು ಅವರನ್ನು ಮೀರಿದವನಿದ್ದ. ಅವನು ಈ ಕಲ್ಪನೆಯನ್ನು ಭಾರತೀಯ ದರ್ಶನದಿಂದ ಎತ್ತಿಕೊಂಡಿದ್ದ; ಮತ್ತು ಪೂರ್ವಜನ್ಮವನ್ನು ಖಂಡಿತವಾಗಿ ನಂಬುತ್ತಿದ್ದ. ಕ್ರಿಸ್ತಾನುಯಾಯಿಗಳು ಪುನರ್ಜನ್ಮವನ್ನು ನಂಬುವರೋ ಇಲ್ಲವೊ ಎಂಬುದು ಇನ್ನೊಂದು ವಿಚಾರಿಸಬೇಕಾದ ವಿಷಯ; ಯಾವ ಬಗೆಯ ಪುನರ್ಜನ್ಮವನ್ನು ನಾವು ನಂಬಬೇಕೆಂಬುದು ಮತ್ತೊಂದು ಗಮನಾರ್ಹ ವಿಷಯ. ಆದರೆ ಈ ಕವಿಯು ಪೂರ್ವಜನ್ಮವನ್ನು ನಿಶ್ಚಿತವಾಗಿ ನಂಬಿದ್ದನೆಂಬುದು ಈ ಕವನದಲ್ಲಿ ಒಡೆದು ಕಾಣುವುದು. ಕೂಡಲೂರೇಶನ ಪ್ರಸ್ತುತ ಪದವು ವರ್ಡ್ಸ್‌ವರ್ಥ ಕವಿಯ ರೀತಿಯನ್ನು ಪೂರ್ತಿಯಾಗಿ ಹೋಲುವುದು. ತೊಟ್ಟಿಲಲ್ಲಿ ಮಲಗಿದ ಕೂಸು ಅಳುವುದೇಕೆ ಎಂಬುದನ್ನು ಕುರಿತ ಕವಿಯು ಆಲೋಚಿಸುತ್ತಿರುವ. ಇದು ನಾವು ಗಮನಿಸತಕ್ಕ ಮೊದಲನೆಯ ಮಾತು. ಇದೊಂದು ತೀರಸುಲಭವಾದ ಪ್ರಶ್ನೆ. ಕವಿಯು ಕೇಳುವುದೇನೆಂದರೆ– "ನಿನ್ನ ಮೂಲಮನೆಯಾದ ಪರಮಾತ್ಮನೊಡನೆ ಇದ್ದ ನಿನ್ನ ನಿಕಟ ಸಂಬಂಧವನ್ನು ಮರೆತು, ಆತನನ್ನು ತೊರೆದು, ಮರ್ತ್ಯಕ್ಕೆ ಬಂದನೆಂದು ಅಳುತ್ತಿರುವಿಯಾ ಕಂದಾ? ನಿನಗೀಗ ಅದರ ನೆನಪಾದುದರಿಂದ ನೀನು ಅಳುತ್ತಿರುವಿಯಾ? ಪರಮಾತ್ಮನ ಸಂಬಂಧವು ಅಳಿಯಿತೆಂದು ಬಗೆದು ಅಳುತ್ತಿರುವಿಯಾ?" ಎರಡನೆಯದಾಗಿ, "ತಾಯಿಯು ನಿನಗೆ ತನ್ನ ಮೊಲೆವಾಲನ್ನು ಉಣಿಸಿ, ನಿನ್ನನ್ನು ಕೇವಲ ದುಃಖಮಯ, ಬಹುತರವಾಗಿ ಪಾತಕಮಯ, ವಿಶೇಷವಾಗಿ ನೈರಾಶ್ಯಮಯ ಮತ್ತು ಕೊನೆಗೆ ತುಂಬ ವಿನಾಶಮಯ ಜೀವನದಲ್ಲಿ ನೂಕುವಳೆಂದು ಅಳುತ್ತಿರುವಿಯಾ?" ಆಮೇಲೆ ಕವಿಯು, ಆ ಮಗು ತೊಟ್ಟಿಲಿನ ಮಗ್ಗಲುಗಳಿಗೆ ತನ್ನ ಕೈಕಾಲುಗಳನ್ನು ಒತ್ತುವುದನ್ನು ನೋಡಿ ಮರಳಿ ಕೇಳುವ: "ಕಂದಾ! ವಿಕಾರಗಳ ತಗಣಿಗಳು ನಿನಗೆ ಕಚ್ಚುತ್ತಿರುವವೆಂದು, ಮೈಯಲ್ಲಿ ಸೇರುತ್ತಿರುವವೆಂದು ಅಳುತ್ತಿರುವಿಯಾ? ನೀನು ಈ ವಿಷಯ ವಿಕಾರಗಳ, ಬಯಲು ಆಶೆಗಳ ತಗಣಿಗಳ ಮೂಲಕ ಅಳುತ್ತಿರುವಿಯಾ?" ಕವಿಯು ಮುಂದುವರಿದು, ಮತ್ತೂ ಕೇಳುವದೇನೆಂದರೆ: "ನಿನ್ನ ತಂದೆತಾಯಂದಿರು ನಿನ್ನ ಪಾರಮಾರ್ಥಿಕ ಉನ್ನತಿಗಾಗಿ ಏನನ್ನೂ ಮಾಡುವುದಿಲ್ಲವೆಂದು ನೀನು ಅಳುವಿಯಾ ಕಂದಾ? ತಾವು ಹಿಂದೆ ಮದುವೆಯ ಕುಣಿಯಲ್ಲಿ ಬಿದ್ದಿರುವರು; ಮತ್ತು ಈಗ ತಮ್ಮ ಮಕ್ಕಳ ಮದುವೆಯನ್ನು ಮಾಡುವುದೇ ತಮ್ಮ ಶ್ರೇಷ್ಠತಮ ಗುರಿಯೆಂದು ಬಗೆದಿರುವರು. ಎಂಥ ಕೀಳು ಗುರಿಯಿದು? ಆದುದರಿಂದ ಕಂದಾ! ನಿನ್ನ ತಂದೆತಾಯಂದಿರು ತಾವು ಬಿದ್ದು ಹಾಳಾದ ಮದುವೆಯ ಕುಣಿಯಲ್ಲಿ ನಿನ್ನನ್ನೂ ನೂಕುವದನ್ನುಳಿದು ನಿನಗಾಗಿ ಮತ್ತೆ ಏನನ್ನೂ ಮಾಡಲಿರುವುದಿಲ್ಲವೆಂದು ಬಗೆದು ಅಳುತ್ತಿರುವೆಯಾ?" ಇದಾದ ಮೇಲೆ ಕವಿಯು ಆ ಮಗುವಿನ ಮುಖದ ಮೇಲೆ ಆಗಾಗ ಮಿನುಗುವ ಸ್ಮಿತವನ್ನು ನೆನೆದು, ಕೇಳುವುದೇನೆಂದರೆ: "ಕಂದಾ, ನೀನು ನಸುನಗುವದೇತಕ್ಕಾಗಿ?

ಪರಮಾತ್ಮನ ಮಂಗಲ ಮೂರ್ತಿಯನ್ನು ಮರಳಿ ನೀನು ಕಾಣುತ್ತಿರುವಿಯಾ? ಪರಮಾತ್ಮನ ಅಂದವಾದ, ಆನಂದಮಯವಾದ ಕನಸುಗಳನ್ನು ಇಲ್ಲವೆ ಅವುಗಳ ಸವಿಯಾದ ನೆನಹುಗಳನ್ನೇನಾದರೂ ಪಡೆಯುತ್ತಿರುವಿಯಾ?" "ನೀನು ಪರಮಾತ್ಮನ ನಿನ್ನ ಮೂಲಸ್ಮೃತಿಯನ್ನು ಮರಳಿ ಪಡೆದಿರುವೆ ಎಂಬುದನ್ನು ನಿನ್ನ ಸ್ಮಿತವು ನಮಗೆ ಅರುಹುವುದು. ಆದುದರಿಂದ ನೀನು ನಿನ್ನ ಸ್ಮಿತವನ್ನು ಮುಂದುವರಿಸು, ಮತ್ತು ಅದರಿಂದಲೇ ಕೊನೆಗೆ ನೀನು ಭಗವಂತನಲ್ಲಿ ತಲ್ಲೀನನಾಗುವೆ!" ಎಂದು ಕವಿಯು ಆ ಮಗುವಿಗೆ ಹೇಳುವನು.

ಈ ಕಾವ್ಯಮಯ ಹಾಗೂ ಕಲ್ಪನಾಮಯ ವಿಷಯದ ಚರ್ಚೆಯ ನಂತರ, ನಾನು ನಮ್ಮ ಪಾರಮಾರ್ಥಿಕ ಸಾಧನದಲ್ಲಿಯ ಮನೋವೈಜ್ಞಾನಿಕ ಅಂಶವನ್ನು ವಿವರಿಸುವ ಎರಡು ಕವನಗಳೆಡೆ ಸಾಗುವೆ. 'ನಯನೇಂದ್ರಿಯ ವಿಷಯದಿಂದ' ಎಂಬ ಅಖಂಡೇಶ್ವರರ ವಚನವು ಅವುಗಳಲ್ಲಿ ಒಂದು; 'ಆವರೋಗವು ಎನಗೆ' ಎಂಬ ಗೋಪಾಲದಾಸರ ಪದವು ಇನ್ನೊಂದು. ಮೊದಲು ನಾವು ಅಖಂಡೇಶ್ವರರ ವಚನವನ್ನು ಚರ್ಚಿಸುವೆವು. ಅದರಲ್ಲಿ ನಾವು ಇಂದ್ರಿಯಗಳು, ಪ್ರಾಣಿಗಳು ಹಾಗು ವಿಷಯಗಳು–ಈ ಮೂವರಲ್ಲಿಯ ವಿಲಕ್ಷಣವಾದ ಸಾದೃಶ್ಯವನ್ನು ಕಾಣುವೆವು. ಒಂದು ಇಂದ್ರಿಯವನ್ನು ಒಂದು ಪ್ರಾಣಿಯೂ, ಒಂದು ವಿಷಯವೂ ಪ್ರತಿನಿಧಿಸುವುದು –ಹೋಲುವುದು.ಈ ರೀತಿ ಪಂಚೇಂದ್ರಿಯಗಳೆಲ್ಲ ಒಂದು ಬಗೆಯ ಹೋಲಿಕೆಯನ್ನು –ಇಂದ್ರಿಯಗಳು, ಪ್ರಾಣಿಗಳು ಮತ್ತು ವಿಷಯಗಳು, ಇವುಗಳಲ್ಲಿಯ ಹೋಲಿಕೆಯನ್ನು ಕಾಣಿಸುವವು. ಚಡಚಣದ ಕರಬಸಪ್ಪನೆಂಬ ನನ್ನ ಪಾರಮಾರ್ಥಿಕ ಸ್ನೇಹಿತನು ಈ ವಚನವನ್ನು ತುಂಬ ಮೆಚ್ಚಿದ್ದನು; ಮತ್ತು ಅದನ್ನು ನಾಟಕದಂತೆ ಅಂದವಾಗಿ ಅಭಿನಯಿಸುತ್ತಿದ್ದನು. ಮತ್ತು ಅದರ ಮುಖಾಂತರ ಅದರ ರಹಸ್ಯವನ್ನು ಪ್ರದರ್ಶಿಸುತ್ತಿದ್ದನು. ಬೆಳಕಿನಿಂದ ಸೆಳೆಯಲಾದ ಪತಂಗವು ಜ್ವಾಲೆಯಲ್ಲಿ ಹಾರುವುದು. ಸಂಗೀತಕ್ಕೆ ಮರುಳಾಗಿ ಅದನ್ನು ಕೇಳಲು ಯತ್ನಿಸುವ ಎರಳೆಯು ಬೇಟೆಗಾರನ ಜಾಲವನ್ನು ಸೇರುವುದು. ನಾಗರಹಾವಿನದೂ ಅದೇ ಪಾಡು. ಸುಗಂಧದ ಆಶೆಯಿಂದ ಭ್ರಮರವು ಚಂಪಕ ಪುಷ್ಪದಲ್ಲಿ ಸಿಲುಕುವುದು, ಎಂದು ಕವಿಯು ಹೇಳಿರುವ. ಈ ವಿಷಯವನ್ನು ನಾನು ಸಸ್ಯಶಾಸ್ತ್ರಜ್ಞರೊಡನೆ ಚರ್ಚಿಸಿರುವೆ. ಚಂಪಕವು ಭ್ರಮರವನ್ನು ಹಿಡಿಯಲರಿಯದು ಇಲ್ಲವೆ ಅಡಗಿಸಲರಿಯದು ಎಂದು ಅವರು ಹೇಳಿದರು. ಬದಲು, ಕಮಲವೇ ಅದನ್ನು ಮಾಡಬಲ್ಲದು ಎಂಬುದು ಮುಂದಿನ ಸುಭಾಷಿತದಿಂದ ಅರಿಯಬಹುದು.

ರಾತ್ರಿರ್ಗಮಿಷ್ಯತಿ ಭವಿಷ್ಯತಿ ಸುಪ್ರಭಾತಮ್
ಭಾಸ್ವಾನುದೇಷ್ಯತಿ ಹಸಿಷ್ಯತಿ ಪಂಕಜಶ್ರೀಃ।
ಇತ್ಥಂ ವಿಚಿಂತಯತಿ ಕೋಶಗತೇ ದ್ವಿರೇಫೇ
ಹಾ ಹಂತ! ಹಂತ! ನಲಿನೀಂ ಗಜ ಉಜ್ಜಹಾರ॥

'ಬೇಗನೆ ಇರುಳು ಅಳಿದು, ಅಂದವಾದ ಬೆಳಗು ಹೊಳೆಯುವುದು. ಭಾಸ್ಕರನು ಬೇಗನೆ ಉದಯಿಸಿ, ಕಮನೀಯ ಕಮಲಗಳನ್ನು ಆನಂದದಿಂದ ಅರಳಿಸುವನು. ಕಮಲದ ಕೋಶದಲ್ಲಿ ಸಿಲುಕಿದ ಭ್ರಮರವು ಈ ಬಗೆಯ ಸವಿಕನಸನ್ನು ಕಾಣುತ್ತಿರುವಾಗ, ಅಕಟಾ! ಒಂದು ಆನೆಯು ಆ ಕಮಲವನ್ನು ಕಿತ್ತು ಎಸೆಯಿತು!'

ಈ ಬಗೆಯಾಗಿ, ಭ್ರಮರದ ಸಂಬಂಧವು ಚಂಪಕಕ್ಕಿಂತ ಕಮಲದೊಡನೆ ಇರುವುದೇ ವಾಡಿಕೆ. ಅದೇ ಎಲ್ಲರಿಗೆ ತಿಳಿದ ವಿಷಯ. ಚಂಪಕ ಹೂವಿನ ಪಕಳೆಗಳು ಶಿಥಿಲವಾದವುಗಳು, ಬಿಡಿಬಿಡಿಯಾದವುಗಳು. ಆದುದರಿಂದ ಅದು ಭ್ರಮರವನ್ನು ಹಿಡಿಯಲರಿಯದು, ಅಡಗಿಸಲರಿಯದು ಎಂದು ನನ್ನ ಸಸ್ಯಶಾಸ್ತ್ರಜ್ಞರಾದ ಸ್ನೇಹಿತರು ಹೇಳಿದರು.

ಈ ವಿಷಯವನ್ನು ಕುರಿತ ತುಲಸಿದಾಸರ ಕಲ್ಪನೆಯಲ್ಲಿ ಒಂದು ಬಗೆಯ ಸ್ವತಂತ್ರ ಪ್ರಜ್ಞೆಯ ಹೊಳಪು ಕಾಣಬರುವುದು. ತುಲಸಿದಾಸರು ಹೇಳುವುದೇನೆಂದರೆ– ಶ್ರೀರಾಮನು ಚಿತ್ರಕೂಟಕ್ಕೆ ತೆರಳಿದಾಗ, ಆತನು ಮರಳಿ ಅಯೋಧ್ಯೆಗೆ ಬರಬೇಕೆಂದು ಭರತನು ಆತನ ಮನವೊಲಿಸಲು ಯತ್ನಿಸಿದನು. ಈ ಕಥೆಯಲ್ಲಿಯ ಎಲ್ಲ ಸಂಗತಿಗಳೂ ಸತ್ಯವಿರುವವು. ಅದರಲ್ಲಿ ಐತಿಹಾಸಿಕವಲ್ಲದ ಒಂದು ಮಾತೂ ಇರುವುದಿಲ್ಲ. 'ಭರತಕೂಪ' ಎಂಬ ಹೆಸರಿನ ಬಾವಿಯೊಂದನ್ನು ಅಲ್ಲಿ ಇಂದಿಗೂ ಕಾಣಬಹುದು. ಅದರ ನೆರೆಯಲ್ಲಿಯ ಒಂದು ರೈಲು ನಿಲ್ದಾಣವೂ ಆ ಬಾವಿಯ ಹೆಸರನ್ನು ಪಡೆದಿದೆ. ರಾಮನು ಅಯೋಧ್ಯೆಗೆ ಮರಳಲು ನಿರಾಕರಿಸಿದನು. ಆದರೆ ಅವನು ಭರತನನ್ನು ತನ್ನ ಪ್ರತಿನಿಧಿಯೆಂದು ನಿಯಮಿಸಿದನು. 'ನೀನು ಅಲ್ಲಿ ನಿಂತು ನನ್ನ ಹೆಸರಿನಿಂದ ರಾಜ್ಯಭಾರವನ್ನು ವಹಿಸು' ಎಂದವನು ಭರತನಿಗೆ ಹೇಳಿದನು. ಆ ಮೇರೆಗೆ ಭರತನು ಅಯೋಧ್ಯೆಗೆ ಮರಳಿದನು. ಆದರೆ ಅವನಲ್ಲಿ ಮಾಡಿದುದೇನನ್ನು? ಅದನ್ನರುಹಲು ತುಲಸಿದಾಸರು ಒಂದು ಅಂದವಾದ ದೃಷ್ಟಾಂತವನ್ನು ಕೊಟ್ಟಿರುವರು. ಚಂಪಕ ಹೂಗಳ ಉದ್ಯಾನದಲ್ಲಿ ಭ್ರಮರವು ಅವುಗಳ ಆಮೋದವನ್ನು ಸವಿಯದೆ ಇರುವಂತೆ, ಭರತನು ರಾಜಧಾನಿಯಲ್ಲಿ ಅರಸೊತ್ತಿಗೆಯ ಅಧಿಕಾರಗಳನ್ನು ಉಪಯೋಗಿಸದೆ ವಾಸಿಸಿದನು. ತಾನು ನೆರವೇರಿಸಿದ ರಾಜ–ಕಾರ್ಯಗಳಿಂದ ಅವನು ತುಂಬ ಅಲಿಪ್ತನಿದ್ದನು. ಭ್ರಮರವು ಚಂಪಕಹೂವಿನ ಮಧುರ ಪರಿಮಳದಿಂದ ಆಕರ್ಷಿತವಾಗದಿರುವುದನ್ನು ಇದು ಕಾಣಿಸುವುದು. ಇದೇ ಮಾತನ್ನು ಮುಂದಿನ ಸುಭಾಷಿತವು ಚೆನ್ನಾಗಿ ಉದಹರಿಸುವುದು,

ಭ್ರಮನ್ ವನಾಮತೇ ನವ ಮಂಜರೀಷು।
ನ ಷಟ್ಪದೋ ಗಂಧ ಫಲೀಮಜಿಘ್ರತ್॥
ಸಾ ಕಿಂ ನ ರಮ್ಯಾ ಸಾಚಕಿಂ ನ ರಂತಾ ।
ಬಲೀಯಸೀ ಕೇವಲಮೀಶ್ವರೇಚ್ಛಾ॥

'ಉಪವನದಲ್ಲಿಯ ಅದೇ ಅರಳಿದ ಅಲರುಗಳಲ್ಲಿ ಅಲೆಯುತ್ತಿರುವ ಭ್ರಮರವು ಚಂಪಕವನ್ನು ಮೂಸಿಯೂ ನೋಡುವುದಿಲ್ಲ. ಅದೇಕೆ? ಆ ಅಲರು ಅಂದವಾದುದಿರುವುದಲ್ಲವೇ? ಆ ಭ್ರಮರವು ಅಲರನ್ನು ಪ್ರೀತಿಸುವುದಿಲ್ಲವೇ (ಈ ಸಂಗತಿಯು) ಭಗವಂತನ ಬಯಕೆಯೇ ಬಲಶಾಲಿಯಾದುದು ಎಂಬುದನ್ನೇ ಕಾಣಿಸುವುದು.'

ಭ್ರಮರವು ಚಂಪಕ ಪುಷ್ಪದಲ್ಲಿ ಸಿಲುಕಿತು ಎಂದು ಅಖಂಡೇಶ್ವರನು ಹೇಳುವ. ಆದರೆ ಅದು ಒದಗುವುದು ಕಮಲದಲ್ಲಿಯೆ ಸಾಧ್ಯ, ಚಂಪಕದಲ್ಲಿ ಅಲ್ಲ.

ಇನ್ನು ಸ್ಪರ್ಶ ವಿಷಯವನ್ನು ವಿಚಾರಿಸುವಾ! ಗಂಡಾನೆಯು ಹೆಣ್ಣಾನೆ ಯನ್ನು ಬೆಂಬಲಿಸುವ ಮೂಲಕ, ಖೆಡ್ಡಾ ಪದ್ಧತಿಯಿಂದ ಆನೆಗಳು ಹಿಡಿಯ ಲ್ಪಡುವವು ಎಂಬುದನ್ನು ನಮ್ಮ ಮೈಸೂರಿನ ಸ್ನೇಹಿತರು ಅರುಹುವರು. ಸ್ಪರ್ಶೇಂದ್ರಿಯವಾದ ತ್ವಚೆಯ ಸ್ಪರ್ಶಸುಖದ ಆಸಕ್ತಿಯು ಆನೆಯನ್ನು ತಗ್ಗಿನಲ್ಲಿ ನೂಕಿ, ಸಿಲುಕಿಸಿ, ನಾಶ ಮಾಡಲಿರುವ ಪ್ರೇರಣೆ. ಇವುಗಳ ಜತೆಯಲ್ಲಿ ಕಣ್ಣು ಇದೆ, ಕಿವಿ ಇದೆ, ನಾಲಿಗೆ ಇದೆ. ಎರೆಯ ಆಶೆಯಿಂದ ಮೀನವು ಜಲಗಾರನ ಜಾಲದಲ್ಲಿ ಸಿಲುಕುವುದು. ಅದೇ ಬಗೆಯಾಗಿ ಈ ಬೇರೆ ಬೇರೆ ಇಂದ್ರಿಯಗಳು ಮನುಜನನ್ನು ಸೆರೆಹಿಡಿಯಬಲ್ಲವು. ಹಾಗೂ ಆತನನ್ನು ವಿನಾಶದೆಡೆ ಒಯ್ಯಬಲ್ಲವು. ಅಖಂಡೇಶ್ವರರು ಉಲ್ಲೇಖಿಸಿದ ಈ ಪ್ರಾಣಿಗಳೆಲ್ಲ ಒಂದೊಂದೇ ಇಂದ್ರಿಯಗಳಿಂದ ಅಡ್ಡದಾರಿಗೆ ಸೆಳೆಯಲ್ಪಟ್ಟು, ವಿನಾಶದಕೊಳ್ಳದಲ್ಲಿ ನೂಕಲ್ಪಡುತ್ತವೆ. ಆದರೆ ಅವರು ಈ ಐದೂ ಇಂದ್ರಿಯಗಳು ತಮ್ಮನ್ನು ಕಾಡುತ್ತಿರುವವಲ್ಲಾ ಎಂದು ಗೋಳಿಡುವರು, ವಿಲಪಿಸುವರು. ಈ ಪಂಚೇಂದ್ರಿಯ ಗಳು ಮನುಜನ ಮೇಲೆ ನಡೆಯಿಸುತ್ತಿರುವ ಪ್ರಭಾವವು ಒಂದು ಬಗೆಯಿಂದ ಸಂಮಿಲಿತ ಸ್ವರೂಪದ್ದಿರುವುದು. ಆದುದರಿಂದ 'ಎನ್ನನ್ನು ಸಲಹಿಕೊಳ್ಳಯ್ಯಾ ದೇವಾ! ನಿನ್ನ ಕರುಣವನ್ನುಳಿದು ಎನ್ನನ್ನು ಕಾಯುವವರಾರೂ ಇಲ್ಲವಯ್ಯಾ!' ಎಂದು ಅವರು ಪ್ರಾರ್ಥಿಸುವರು. ಭಾಗವತದಲ್ಲಿಯ ಮುಂದಿನ ಪದ್ಯವು ಈ ವಚನವನ್ನು ನೇರವಾಗಿ ಹೋಲುವುದು.

ಪತಂಗ-ಮಾತಂಗ-ಕುರಂಗ-ಭೃಂಗಾ
ಮೀನಾ ಹತಾಃ ಪಂಚಭಿರೇವ ಪಂಚ।
ಪ್ರಮಾದೀ ನರಃ ಸ ಕಥಂ ನ ಹನ್ಯತೆ
ಯಃ ಸೇವತೆ ಪಂಚಭಿರೇವ ಪಂಚ॥

ಪತಂಗ, ಆನೆ, ಚಿಗರಿ, ಭ್ರಮರ ಹಾಗು ಮೀನು-ಐದು ಪ್ರಾಣಿಗಳು, ಐದು ವಿಷಯಗಳಿಂದ ಕೊಲ್ಲಲ್ಪಡುವವು. ಹೀಗಿರಲು ತನ್ನ ಐದೂ ಇಂದ್ರಿಯಗಳಿಂದ ಈ ಐದೂ ವಿಷಯಗಳನ್ನು ಸೇವಿಸುತ್ತಿರುವ ಅಳಿಮಾನವನು, ಕೊಲ್ಲಲ್ಪಡದೆ ಉಳಿಯುವ ಬಗೆ ಹೇಗೆ?

ಅಖಂಡೇಶ್ವರರ ವಚನವು ಭಾಗವತದಲ್ಲಿಯ ಈ ಪದ್ಯದ ನೇರವಾದ ಪ್ರತಿಕೃತಿಯೆ ಇರುವುದು.

ಇಂದ್ರಿಯಗಳ ಅನುಪಯುಕ್ತ ವ್ಯಾಪಾರಗಳನ್ನು ಕಂಡು ಗೋಪಾಲದಾಸರು ಇನ್ನೊಂದು ಬಗೆಯಾಗಿ ವಿಲಪಿಸುವರು: "ನಾನೇನು ಮಾಡಲಿ ಹರಿಯೆ? ನನ್ನ ಕಂಗಳು ನಿನ್ನ ಮೂರ್ತಿಯನ್ನು ಕಾಣಲರಿಯವು; ನನ್ನ ಕಿವಿಗಳು ನಿನ್ನ ನುಡಿಯನ್ನು, ಕೀರ್ತನೆಯನ್ನು ಕೇಳಲರಿಯವು; ನನ್ನ ನಾಸಿಕವು ನಿನ್ನ ಸುಗಂಧವನ್ನು ಆಘ್ರಾಣಿಸಲರಿಯದು; ನಿನ್ನ ಪಾದಸೇವೆಗೆ ನನ್ನ ಹಸ್ತಗಳು ಅತ್ತಿತ್ತ ಚಲಿಸವು; ನಿನ್ನ ಪ್ರದಕ್ಷಿಣೆಗೆ ಎನ್ನ ಕಾಲುಗಳು ಏಳವು; ಸೊಕ್ಕಿನಿಂದ ನನ್ನ ಶಿರವು ನಿನಗೆ ಸಾದರ ಬಾಗಲು ನಿರಾಕರಿಸುವುದು. ನಾನಿನ್ನೇನು ಮಾಡಲಿ? ಹರಿಯೆ! ಸಲಹಯ್ಯ ಎನ್ನನು." ಈ ರೀತಿ, ಇಂದ್ರಿಯ ವ್ಯಾಪರಗಳ ಭಾವಾತ್ಮಕ ಹಾಗು ಅಭಾವಾತ್ಮಕ ಅಂಶಗಳನ್ನು ಲಕ್ಷಿಸಿ, ಅವನ್ನು ಕೊನೆಗೆ ಪರಮಾತ್ಮನ ಸೇವೆಗಾಗಿ ಬಳಸಬೇಕು. ಇದು ಪರಮಾರ್ಥ ಸಾಧನದಲ್ಲಿಯ ಮನೋವೈಜ್ಞಾನಿಕ ಅಂಶ.

ಇನ್ನು ನಾನು ಒಂದು ಅತಿಮಹತ್ವದ ವಿಷಯವನ್ನು ವಿವರಿಸುವೆ. ಪುರಂದರದಾಸರ ಜೀವನದಲ್ಲಿಯ ನೈರಾಶ್ಯದ ಇಲ್ಲವೆ ನಿರ್ಗತಿಕತನದ ಅಂಶವೇ ಅದು. ಅದು ಅವರ ಕೊನೆಯ ಪಾರಮಾರ್ಥಿಕ ಬೆಳವಣಿಗೆಯಲ್ಲಿಯ ಒಂದು ವಿಶೇಷಭಾಗವು. ಈ ವಿಷಯವನ್ನೊಳಗೊಂಡ ಅವರ 'ಯಾಕೆನ್ನ ಈ ರಾಜ್ಯ ಕೆಳತಂದೆ' ಎಂಬ ಪದವು ಕೊಂಚ ವಾದಗ್ರಸ್ತ ವಿಷಯವಾಗಿದೆ. ಈ ಪದವನ್ನು ರಚಿಸಿದವರು ಪುರಂದರದಾಸರೇ ಎಂಬುದನ್ನು ಎಲ್ಲರೂ ಒಪ್ಪುವರು. ಆದರೆ ಅದು ಕೇವಲ ಸಾಧಕ ಜೀವನದ ಅವಸ್ಥೆಯ ಕಾಲ್ಪನಿಕ ಚಿತ್ರವನ್ನು ಒಳಗೊಂಡಿರುವುದೋ ಇಲ್ಲವೆ ಪುರಂದರದಾಸರ ವೈಯಕ್ತಿಕ ಜೀವನದ ಒಂದಂಗವನ್ನು ಚಿತ್ರಿಸಿರುವುದೋ ಎಂಬುದರ ಬಗೆಗೆ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳು ನೆಲೆಸಿವೆ. ಪ್ರಾ. ಪಂಚಮುಖಿಯವರು ಅದು ಕಾಲ್ಪನಿಕಚಿತ್ರವಿರುವುದು ಎಂದು ಬಗೆದರೆ, ಮೈಸೂರಿನ ಶ್ರೀ ಲಕ್ಷ್ಮಣರಾಯರು ಅದು ಆತ್ಮಚರಿತ್ರಾತ್ಮಕವಿರುವುದೆಂದು ಬಗೆಯುವರು. ಅದೇನೇ ಇದ್ದರೂ, ಅದು ನೈರಾಶ್ಯದ ಇಲ್ಲವೆ ನಿರ್ಗತಿಕತೆಯ ಅಂಶವನ್ನು ಒಳಗೊಂಡಿರುವುದು ಒಡೆದು ಕಾಣುವುದು. ಅದನ್ನು ಯುರೋಪದ ಅನುಭಾವಿಗಳು 'ಆತ್ಮನ ಕಾರಿರುಳು' (The Dark Night of the Soul) ಎಂದು ಕರೆಯುವರು. ಎಲ್ಲ ಹಿರಿಯ ಅನುಭಾವಿಗಳಂತೆ, ತುಕಾರಾಮರು ಕೂಡ ಈ 'ಆತ್ಮನ ಕಾರಿರುಳ'ನ್ನು ಅನುಭವಿಸಿದ್ದರು. ಪುರಂದರದಾಸರೂ ಈ 'ಕಾರಿರುಳ'ನ್ನು ಅನುಭವಿಸಿದ ಅವಸ್ಥೆಯನ್ನು ಈ ಪದವು ಸೂಚಿಸುವುದು. ಅವರು ಹೆರರ ನಾಡಿನಲ್ಲಿ ಹೋದುದನ್ನು ಉಲ್ಲೇಖಿಸಿರುವರು. ಕ್ರಿ.ಶ. ೧೫೩೦ರಲ್ಲಿ ಕೃಷ್ಣದೇವರಾಯರ ನಿಧನದ ತರುವಾಯ, ದಾಸರಾಯರು ವಿಜಯನಗರದಿಂದ ತೆರಳಿದುದನ್ನು ಈ ಪದವು ಅರುಹುವದೆಂದು

ನನ್ನ ಗೆಳೆಯರೋರ್ವರು ಸೂಚಿಸಿರುವರು. ಯಾಕೆಂದರೆ, ಆಮೇಲೆ ಬಂದ ಅರಸರೀರ್ವರು ಪುರಂದರದಾಸರನ್ನು ಅಷ್ಟೊಂದು ಮನ್ನಿಸುತ್ತಿರಲಿಲ್ಲ. ಆದುದರಿಂದ ಅವರು ಬಹುತರವಾಗಿ ತೆಲಗುನಾಡಿಗೆ ತೆರಳಿರಬೇಕು. ಪುರಂದರದಾಸರು ತೆಲುಗಿನಲ್ಲಿ ಕೆಲ ಪದಗಳನ್ನು ಬರೆದರೆಂಬುದು ನಿರ್ವಿವಾದವು. ಸುಬ್ರಹ್ಮಣ್ಯಮ್ ದೀಕ್ಷಿತರ್ ಎಂಬವರ 'ಸಂಗೀತ ಸಂಪ್ರದಾಯ ಪ್ರದರ್ಶಿನೀ' ಎಂಬ ಗ್ರಂಥದಲ್ಲಿಯ ದಾಸರಾಯರ ನಾಲ್ಕು ತೆಲಗು ಪದಗಳನ್ನು ಕಂಡರೆ ಇದು ತಿಳಿದುಬರುವುದು. ಈ ಪದವನ್ನು ವಿಜಯನಗರದ ಪತನಕ್ಕೆ ಅಂಟಿಸುವುದು ಅಷ್ಟೊಂದು ಸಮಂಜಸ ವೆನಿಸುವುದಿಲ್ಲ. ಆದರೆ, ಪುರಂದರದಾಸರು ತಮ್ಮ ಜೀವನದಲ್ಲಿ ಕೆಲಕಾಲ ವಿಜಯ ನಗರವನ್ನುಬಿಟ್ಟುಹೋಗಿದ್ದರು ಮತ್ತು ಅತಿಯಾದ ಸಂಕಟಗಳನ್ನು ಅನುಭವಿಸಿದ್ದರು ಎಂಬುದನ್ನು ಎಲ್ಲ ಪಂಡಿತರು ಒಪ್ಪುವರು. ಅವರು ಒಂದು ಬಗೆಯಿಂದ ಪಾರಮಾರ್ಥಿಕ ನಿರ್ವಾಸಿತರದೆಂದು ಕರೆಯಬಹುದಾದ ಜೀವನವನ್ನು ಬಾಳಿದರು ಎಂಬುದು ಮಾತ್ರ ನಿಶ್ಚಿತವಾದುದು ಎಂದು ಬಗೆಯಲು ಅಡ್ಡಿಯಿಲ್ಲ.

"ಯಾಕೆನ್ನ ನೀ ಪರರ ರಾಜ್ಯಕೆ ಎಳೆತಂದೆ ಹರಿಯೇ?" ಎಂದು ಪುರಂದರದಾಸರು ಕೇಳುವರು. "ನಾನು ಈ ನಾಡಿಗೆ ತೀರ ಪರಕೀಯನು. ಇಲ್ಲಿ ಎನ್ನ ಕುಲದವರಿಲ್ಲ. ಎನಗೊಬ್ಬರು ಸ್ನೇಹಿತರಿಲ್ಲ. ಎನ್ನನ್ನು ಮನ್ನಿಸುವ ದೊರೆಯಿಲ್ಲ. ಹರಣದಲ್ಲಿ ಹುರುಡಿಲ್ಲ. ಕರಣದಲಿ ದೃಢವಿಲ್ಲ. ನಾನು ಬಯಸಿದುದು ಎಂದೂ ಫಲಿಸುವುದಿಲ್ಲ. ಮನಕೆ ಜಯವಿಲ್ಲ. ಇನ್ನು ಇಲ್ಲಿಂದ ತೆರಳುವುದನ್ನುಳಿದು ನಾನು ಏನು ಮಾಡಲಿ?" ಪುರಂದರದಾಸರ ಈ ನುಡಿಗಳು ಮಹಾತ್ಮಾ ಗಾಂಧೀಯವರ ಜೀವನದ ಕೊನೆಯ ಭಾಗದಲ್ಲಿಯ ನುಡಿಗಳನ್ನು ಹೋಲುವವು. ಇಂದಿನ ನಿರ್ವಾಸಿತರು ಹೇಳುವಂತೆ, ಪುರಂದರದಾಸರು ತಮ್ಮ ಹತ್ತಿರ 'ಹೊನ್ನು ರನ್ನಗಳಿಲ್ಲ. ಇನ್ನಿಲ್ಲಿ ಬಾಳುವದೆಂತು?' ಎಂದು ಉಸುರುವರು. ಈ ಪದದಲ್ಲಿಯ ಈ ಭಾಗವು ಅವರ ಬೇರೆ ಉದ್ಗಾರಗಳಿಂದ ಕೇವಲ ಪ್ರತ್ಯೇಕವಾದುದಲ್ಲ. ಅವರ ಬೇರೆ ಪದಗಳಲ್ಲಿ ಅಂಥ ಅನೇಕ ಉದ್ಗಾರಗಳನ್ನು ಕಾಣಬಹುದು. ಆದುದರಿಂದ ಅವುಗಳಿಂದ ಇದನ್ನು ಬೇರ್ಪಡಿಸಲು ಬರುವಂತಿಲ್ಲ. 'ಏನು ಮಾಡಿದ್ಯೋ ಮಾನಭಂಗ' ಎಂಬ ಪದವೊಂದು ಪುರಂದರದಾಸರದೆಂದು ಬಗೆಯಲಾಗಿದೆ ಎಂದು ನನ್ನ ಸ್ನೇಹಿತ ರೊಬ್ಬರು ಹೇಳುತ್ತಿದ್ದರು. ಅದು ಅವರ ಪ್ರಸಿದ್ಧವಾದ ಗ್ರಂಥಗಳಲ್ಲಿ ಇರುವುದಿಲ್ಲ. ಆದರೂ ಅದೊಂದು ಒಳ್ಳೆಯ ಪದವು. ಅದರ ಸಾರವನ್ನು ನಾನು ಮುಂದೆ ಅರುಹಲಿರುವೆ. ದಾಸರಾಯರ ಜೀವನದಲ್ಲಿ ನಾವು ಕಂಡ ನಿರ್ಗತಿಕತೆಯ ಅಂಶವನ್ನು ಅದೂ ಕೂಡ ಸಮರ್ಥಿಸುವುದು. ಆದರೆ ಪುರಂದರದಾಸರ ಬರಹಗಳಲ್ಲಿ ಅದನ್ನು ಯಾರಾದರೂ ಪಡೆಯಬಲ್ಲವರಾಗಿರುವರೋ ಹೇಗೆ ಎಂಬುದು ವಿಚಾರಿಸಲು ಯೋಗ್ಯವಾದ ವಿಷಯ. ದಾಸರಾಯರಲ್ಲಿ ಈ ನಿರ್ಗತಿ

ಕತೆಯ ಭಾವವು ಕೆಲಕಾಲ ಕಾಣಬರುವುದು. ಕಾರ್ಲೈಯಿಲ್‌ರವರು ಉಸುರಿದ ಮೇರೆಗೆ: "ನಾವು ಸನಾತನ ನಿರಾಶೆಯಿಂದ ಸನಾತನ ಆಸೆಯೆಡೆ ತೆರಳುವ ಮುನ್ನ 'ಔದಾಸೀನ್ಯಕೇಂದ್ರ'ದೊಳಗಿಂದ ಹಾದು ಹೋಗಬೇಕಾಗುವುದು." ಈ 'ಔದಾಸೀನ್ಯ ಕೇಂದ್ರ'ವು ಜೀವನ ಪ್ರವಾಹದಲ್ಲಿಯ ಒಂದು ಬಗೆಯ ಸುಳಿಯಿದ್ದಂತೆ, ತಿರುಗಣಿಯ ಮಡುವಿದ್ದಂತೆ. ಅದರಲ್ಲಿ ಪ್ರತಿಯೊಬ್ಬ ಮನುಜನು ಸಿಲುಕುವನು. ಪುರಂದರದಾಸರು ಈ ಬಗೆಯ ಅನುಭವವೊಂದನ್ನು ಪಡೆದಿದ್ದರು. ಅದನ್ನವರು 'ಮುಯ್ಯಕ್ಕೆ ಮುಯ್ಯ ತೀರಿತಯ್ಯ!' ಎಂಬ ಪದದಲ್ಲಿ ಬಣ್ಣಿಸಿರುವರು. ಅದು ಅವರಿಗೆ, ಸೂಳೆಗೆ ಕೊಡಲಾದ ಒಂದು ಕಂಕಣದ ಮೂಲಕ ಲಭಿಸಿದ್ದಿತು. ಪಂಢರಪುರದ ವಿಠ್ಠಲನ ಬಂಗಾರದ ಆಭರಣದ ಕಳವಿನ ಮೂಲಕ ಅವರು ತೊಂದರೆಗೆ ಒಳಗಾದರು ಹಾಗೂ ವಿಠ್ಠಲನ ಪೂಜಾರಿಗಳಿಂದ ಬಡಿಸಿಕೊಂಡರು ಎಂಬುದು ನಿಃಸಂದೇಹವಾದ ವಿಷಯ. ಆಗ ಅವರು ಈ ಬಗೆಯಾಗಿ ತಮ್ಮನ್ನು ಸಮಾಧಾನಗೊಳಿಸುವರು: 'ಅಯ್ಯ! ನಾನು ನಿನಗೆ ಅಮರ್ಯಾದೆಯನ್ನು ತೋರಿಸಿದ್ದೆ. ಈಗ ನೀನು ನನ್ನನ್ನು ಶಿಕ್ಷಿಸುತ್ತಿರುವಿ. ಮುಯ್ಯಕ್ಕೆ ಮುಯ್ಯ ತೀರಿತಯ್ಯಾ!' ಈ ಪ್ರಸಂಗದ ಸ್ವರೂಪವೇನೇ ಇದ್ದರೂ, ತುಕಾರಾಮರ ಜೀವನದಲ್ಲಿ ನಾವು ಕಾಣುವಂತೆ, ಇದರಲ್ಲಿ ಒಂದು ಬಗೆಯ ನೈರಾಶ್ಯ ಹಾಗೂ ಪರಮಾತ್ಮ ನೊಡನೆ ನಡೆಯಿಸಲಾದ ಕಲಹ ಇವುಗಳ ಅಂಶವು ಕಾಣದಿರದು. ತುಕಾರಾಮರು ಭಗವಂತನೊಡನೆ ನಡೆಯಿಸಿದ ಕಲಹವನ್ನು ಬಣ್ಣಿಸುವ 'ಕಲಹ ಗೀತಗಳು' ಮರಾಠಿ ಯಲ್ಲಿ ವಿಪುಲವಿರುವವು. ತುಕಾರಾಮರ ಈ ಕಲಹವು ಬೆಳೆಯುತ್ತ ಸಾಗಿ, ಕೊನೆಗೆ ಅದು ಮಿತಿಮೀರಿ, ಅವರನ್ನು ಆತ್ಮಹತ್ಯೆ ಮಾಡಿಕೊಳ್ಳುವ ಮಟ್ಟಕ್ಕೆ ಒಯ್ಯಿತು. ಆಗ ಕರುಣಸಾಗರನಾದ ಭಗವಂತನು ಅವರಿಗೆ ಒಮ್ಮೆಲೆ ಕಾಣಿಸಿಕೊಂಡನು. ಇದೊಂದು ತುಕಾರಾಮರ ಪಾರಮಾರ್ಥಿಕ ಜೀವನದಲ್ಲಿಯ ಸುಖಾಂತ ದುರಂತ.

ಈ ಬಗೆಯ ನಿರ್ಗತಿಕತೆಯ ಇನ್ನೊಂದು ನಿದರ್ಶನವು ಪುರಂದರದಾಸರ 'ಯಾರು ಕೈಬಿಟ್ಟರೂ ನೀ ಕೈಯ ಬಿಡಬೇಡ!' ಎಂಬ ಪದದಲ್ಲಿ ಕಾಣಬರುವುದು. ಅದರಲ್ಲಿ ಬಣ್ಣಿಸಲಾದ ದಾಸರಾಯರ ಅವಸ್ಥೆಯು, ಟಾಲ್‌ಸ್ಟಾಯರವರ ಅವತರಣವೊಂದರಲ್ಲಿ ಚಿತ್ರಿಸಲಾದ ಅವಸ್ಥೆಯನ್ನು ಹೋಲುವುದು. ಟಾಲ್‌ಸ್ಟಾಯ ವರವರ ಈ ಅವತರಣವನ್ನು ಮಹಾತ್ಮಾ ಗಾಂಧಿಯವರು ಮೇಲಿಂದ ಮೇಲೆ ಒಲವಿನಿಂದ ಉದ್ಧರಿಸುತ್ತಿದ್ದರು. ಪುರಂದರರು ಹೇಳುವ ದೇನೆಂದರೆ: 'ನಾನು ಮುಂದೆ ನೋಡಿದಾಗ, ನನ್ನನ್ನು ನುಂಗಲು ಬಂದ ಹೆಬ್ಬಾವನ್ನು ಕಾಣುವೆ; ಹಿಂದೆ ನೋಡಿದಾಗ, ನನ್ನನ್ನು ಬೆನ್ನಟ್ಟುತ್ತಿರುವ ಹೆಬ್ಬುಲಿಯನ್ನು ಕಾಣುವೆ. ಒಂದೆಡೆ ಹೆಬ್ಬಾವು, ಒಂದೆಡೆ ಹೆಬ್ಬುಲಿ. ಅವೆರಡರ ನಡುವೆ ನಾನು ನಿಂತಿರುವೆ! ನಾನು

ಅದೆಂತು ಬದುಕುವುದು ಹರಿಯೆ?' ಅವರು ಮತ್ತೂ ಉಸುರುವದೇನೆಂದರೆ : 'ನಾನು ನೆರೆಯಿಂದ ತುಂಬಿದ ಬಾಳಿನ ಹೊಳೆಯನ್ನು ಹರಗೋಲಿನಲ್ಲಿ ಕುಳಿತು ದಾಟಲು ಹೆಣಗುತ್ತಿರುವೆ. ಅದನ್ನು ದಾಟುವ ಬಗೆ ಹೇಗೆ? ನಾನು ಅದೆಲ್ಲಿ ಹೋಗಲಿ? ನಾನು ವಿಷದ ಕಾಳಿಂಗನಿರುವ ಆಳವಾದ ಮಡುವಿನಲ್ಲಿ ಧುಮುಕಲಿರುವೆ. ಅವನು ನನ್ನನ್ನು ನುಂಗುವುದು ಖಂಡಿತ. ಕಾಯಯ್ಯ ಸ್ವಾಮಿ ಎನ್ನನು!' ಇದು ಪುರಂದರ ದಾಸರಲ್ಲಿಯ ಒಂದು ಬಗೆಯ ನೈರಾಶ್ಯದ ಫಲವಲ್ಲವೇ? ಇದಲ್ಲದೆ, ಅವರ ಜಾಗತಿಕ ಜೀವನದಲ್ಲಿಯೂ ಇದೇ ಬಗೆಯ ನೈರಾಶ್ಯವು ಕಂಡುಬರುವುದು. ಅದು ಅವರ 'ಹಿಂದಿಲ್ಲಾ, ಸ್ವಾಮಿ! ಮುಂದಿಲ್ಲಾ!' ಎಂಬ ಪದದಲ್ಲಿ ವ್ಯಕ್ತವಾಗಿರುವುದು. ಅವರು ಅದರಲ್ಲಿ ಅರುಹಿರುವುದೇನೆಂದರೆ: "ಪರರ ಬೇಡಿಪ್ಪಂತೆ ಗತಿಯಾಯಿತಲ್ಲಾ ಸ್ವಾಮಿ! ಪ್ರತಿಯೊಬ್ಬನಿಗೆ ನಾನು ಬಾಯಿ ತೆರೆಯಬೇಕಾಗಿ ಬಂತು ಈ ನರರನ್ನು ಸ್ತುತಿಸಿ; ಸ್ತುತಿಸಿ ನನ್ನ ನಾಲಿಗೆ ಬರಡಾಯಿತಯ್ಯಾ!"

ಈ ಮೊದಲು ಉಲ್ಲೇಖಿಸಲಾದ ದಾಸರಾಯರ 'ಏನು ಮಾಡಿದ್ಯೋ ಮಾನಭಂಗಾ?' ಎಂಬ ಪದದಲ್ಲಿ ಎರಡು ವಿಷಯಗಳು ವಿಚಾರಯೋಗ್ಯವಾದ ವುಗಳು. "ಈ ಬಾಳಹೊಳೆಯನ್ನು ಈಸಿ ಪಾರಾಗಲು ನಾನು ಯತ್ನಿಸುತ್ತಿರುವೆ; ಆದರೆ ಅದರಲ್ಲಿ ಒಂದು ಗುಟುಕು ನೀರು ಕೂಡ ದೊರೆಯದಾಗಿದೆ ದೇವಾ! ನೀನು ಕರುಣ ಸಾಗರನು, ಕರುಣದ ನೆರೆಬಂದ ನದಿಯು ಎಂದು ಬಗೆಯಲಾಗಿರುವೆ. ಆದರೆ ನನಗೆ ನಿನ್ನ ಕರುಣದ ಕೆಲ ಹನಿಗಳೂ ಕೂಡ ಸಿಗದಂತಾಗಿವೆ. ಮೋಡಗಳು ಬಂದವು. ತುಂಬ ಗದ್ದರಿಸಿದವು. ಆದರೆ ಮಳೆಯು ಬರಲಿಲ್ಲ. ಒಂದು ಹನಿಯು ಕೂಡ ನನ್ನ ಮೇಲೆ ಉದುರಲಿಲ್ಲ. ಕರುಣವು ಸ್ವರ್ಗದಿಂದ ಸೌಮ್ಯ ಮಳೆಯಂತೆ ಸುರಿಯುವದಂತೆ. ಆದರೆ ಆ ಮೃದುವಾದ ಕರುಣದ ಬರವಿನ ಅನುಭವವು ನನಗೆ ದೊರೆಯಲಿಲ್ಲ. ಸೂಸುವ ನದಿಯೆಂದು ಈಸಲು ಹೋದರೆ, ಈಸು ಕಾಳು ನೀರು ತೋರಲಿಲ್ಲ! ನನಗೆ ಇಂಥ ದುಃಖಮಯ ಜೀವನವನ್ನು ಬಾಳಲು ಹಚ್ಚಿದೆ ಅಯ್ಯ! ನೀನೆನಗೆ ಯಾವ ಬಗೆಯ ಕರುಣವನ್ನೂ ಕಾಣಿಸಲಿಲ್ಲವಲ್ಲಾ?" ಕೊನೆಯದಾಗಿ, ಈ ವಿಷಯವನ್ನು ಪುರಂದರದಾಸರ ಇನ್ನೊಂದು ಪ್ರಸಿದ್ಧ ಪದವು ಸಮರ್ಥಿಸುವುದು. ಅದರೊಳಗಿಂದ ಒಂದೇ ಅವತರಣವನ್ನು ಕೊಡಲಿರುವೆ: "ನಾನು ನಿನ್ನ ಕರುಣದ ಅಮೃತವನ್ನು ಸವಿದಿದ್ದರೆ, ಈ ನೈತಿಕ ಹಾಗೂ ದೈಹಿಕ ಆಪತ್ತುಗಳೆಲ್ಲ ನನ್ನನ್ನು ಅದೇಕೆ ಅನುಸರಿಸಬೇಕು ಹರಿಯೇ? ಪರಮಾತ್ಮನ ಪಥವನ್ನು ತುಳಿಯುತ್ತಿರುವ ಮನುಜನನ್ನು ಈ ಅನೈತಿಕವಾದ ಭೌತಿಕ ದುಷ್ಟತತ್ವವು ಯಾಕೆ ಬೆನ್ನಟ್ಟಬೇಕು? ಅದಕ್ಕೆ ಬೆನ್ನಟ್ಟುವ ಅಧಿಕಾರವೇನು? ಹೀಗಿದ್ದರೂ ನನ್ನ ವಿಷಯದಲ್ಲಿ ಈ ಬಗೆಯ

ಸಂಗತಿಯು ಒದಗಿರುವುದು! ಕಾಯಯ್ಯಸ್ವಾಮಿ!" ಈ ರೀತಿ, ಇದೂ ಪುರಂದರ ದಾಸರ ಜೀವನದಲ್ಲಿಯ ನೈರಾಶ್ಯದ ಪ್ರಬಲ ಅಂಶವನ್ನು ನಿದರ್ಶಿಸುವುದು.

ಇನ್ನು ಮೇಲೆ ನಾವು ಸರ್ಪಭೂಷಣರ 'ಕಾಯ ಕಾಂತಾರವ ಹೊಕ್ಕು' ಎಂಬ ಪದದಲ್ಲಿಯ ನೈತಿಕ ಅಂಶದೆಡೆ ಸಾರುವಾ. ಈ ಪದವನ್ನು ಕುರಿತು ಜರುಗಿದ ಒಂದು ಸಂಗತಿಯನ್ನರುಹಲು ನನಗೆ ತುಂಬಾ ಸಂತೋಷವಾಗುವದು. ಒಮ್ಮೆ ಅಲಹಾಬಾದದಲ್ಲಿಯ ನನ್ನ ಕೋಣೆಯಲ್ಲಿ ಈ ಪದವು ಹಾಡಲಾಗುತ್ತಿರುವಾಗ, ಉತ್ತರ ಭಾರತದಲ್ಲಿ ಹಿರಿಯ ಹರಿಜನ ಕಾರ್ಯಕರ್ತರಲ್ಲಿ ಒಬ್ಬರಾದ ಮುನಶಿ ಈಶ್ವರ ಶರಣರು ಅಲ್ಲಿ ಬಂದರು; ಮತ್ತು ನಾವು ಹಾಡುತ್ತಲಿರುವ ಪದದ ಅರ್ಥವನ್ನು ಕೇಳಿದರು. ಆಗ ನನ್ನ ಬಳಿ ಕುಳಿತ ನನ್ನ ಸ್ನೇಹಿತರೊಬ್ಬರು, ಅದನ್ನು ಮರಳಿ ಹಾಡಿದರು ಮತ್ತು ನಾನು ಅದರ ಅರ್ಥವನ್ನು ಹೇಳಿದೆನು. ಅದರ ವಿವರಗಳನ್ನು ಕೇಳಿ ಈಶ್ವರ ಶರಣರು ತುಂಬ ಬೆರಗಾದರು; ಮತ್ತು 'ಎಂಥ ಅದ್ಭುತ ಪದವಿದು!' ಎಂದು ಉದ್ಗರಿಸಿದರು. ಕನ್ನಡ ಸಾಹಿತ್ಯದ ಗಂಧವೂ ಕೂಡ ಇಲ್ಲದ ಓರ್ವ ಹಿಂದೀ ಗೃಹಸ್ಥರು ಇದನ್ನು ಅತ್ಯುತ್ತಮ ಪದಗಳಲ್ಲಿ ಒಂದೆಂದು ಬಗೆದರೆಂಬುದು ಗಮನಾರ್ಹ ವಿಷಯ. ಇಡಿ ಪ್ರಪಂಚದಲ್ಲಿ ಬಾಂಧವ್ಯವನ್ನು ನಿರ್ಮಿಸಬಲ್ಲ ಪದವಿದು. ಇದು ನಮ್ಮೆದೆಯಿಂದ ಹೊರದೂಡಬೇಕಾದ ವಿಕಾರ ಗಳನ್ನು ಬಣ್ಣಿಸುವುದು. ನೀವು ಕಾಡಿಗೆ ತೆರಳಬೇಕಾಗಿಲ್ಲ; ಆ ಕಾಂತಾರವು–ಮಲೆನಾಡು–ನಿಮ್ಮ ಅಂತರಂಗ ದಲ್ಲಿಯೆ ಇರುವುದು. ನಿಮ್ಮ ಕಾಯವೇ ಕಾಂತಾರ ವಾಗಿರುವುದು. 'ನಿಮ್ಮಂತರಂಗದಲ್ಲಿಯ ದುರ್ವಿಕಾರಗಳನ್ನೆಲ್ಲ ಹೊಡೆದೋಡಿಸಿರಿ' ಎಂದು ಗುರುಸಿದ್ಧರು ಹೇಳುವರು. ಇವನ್ನು ಬೆನ್ನಟ್ಟಿ ಕೊಂದೆವೆಂದರೆ, ನಾವು ಈ ಪದದಲ್ಲಿ ಅರುಹಲಾದ ನೈತಿಕ ಅಂಶವನ್ನು ಪಡೆಯಬಹುದು. ಈ ವಿಕಾರ ಗಳಾವವು? ಗುರುಸಿದ್ಧರು ನಮಗೆ ಕೊಲ್ಲಲು ಹೇಳಿದ ಬಗೆಬಗೆಯ ವಿಕಾರರೂಪಿ ಯಾದ ಪ್ರಾಣಿಗಳು ಅದಾವವು? ನಾವು ಕೊಲ್ಲಬೇಕಾದ ಮೊದಲನೆಯ ಪ್ರಾಣಿಯು ಉನ್ನತವಾದ ಪ್ರಭುತ್ವದ ನಡತೆಯ ಸಿಂಹ–ಉರಿವ ಮತ್ಸರ ಕೇಸರಿ. ಎರಡನೆಯದು ಕೋಪವೆಂಬ ಹಿರಿಯ ಹುಲಿ. ಅದನ್ನು ನಾವು ಕೊಲ್ಲಬೇಕು. ಆನೆಯು ಸದೈವ ಮದಾಂಧವಾಗಿರುವುದು. ಅದರಂತೆ ಮತ್ತರಾಗಬೇಡಿರಿ. ಕೋಣವು ತುಂಬ ಉದಾಸೀನವಾದ ಪ್ರಾಣಿಯು. ಅದರಂತೆ ಉದಾಸೀನರಾಗಬೇಡಿರಿ! ಜಿಂಕೆಯು ತುಂಬ ಚಪಲವಾದುದು. ಅದು ಒಂದೆಡೆಯಿಂದ ಇನ್ನೊಂದೆಡೆ ಜಿಗಿಯುವುದು. ಜಿಂಕೆಯ ಚಾಪಲ್ಯವನ್ನು ತೊರೆಯಿರಿ! ಕರಡಿಯಂತೆ ಡಾಂಭಿಕರಾಗಬೇಡಿರಿ! ಕರಡಿಯು ದಂಭದ ಪುತ್ಥಳಿ. ಅದು ನಿಮ್ಮೆಡೆ ಸಾರಿ, ನಿಮ್ಮನ್ನು ಕಟ್ಟಾಡಿಸಿ ಕೊಲ್ಲುವುದು. ಈ ಬಗೆಯ ದಂಭಾಚಾರವನ್ನು ನಂಬಬೇಡಿರಿ. ಈ ಮೇರೆಗೆ, ಸರ್ಪಭೂಷಣರು ಈ ಪ್ರಾಣಿಗಳನ್ನು–ಈ ದುರ್ಗುಣಗಳನ್ನು ಅರುಹಿರುವರು. ಈ

ಪ್ರಾಣಿಗಳು ಬೇರೆ ಬೇರೆ ವಿಕಾರಗಳನ್ನು ಪ್ರತಿನಿಧಿಸುವುದನ್ನು ಕಂಡಾಗ ಸೋಜಿಗವೆನಿಸದಿರದು. ಇದೇ ಈ ಪದದಲ್ಲಿಯ ದಾರ್ಶನಿಕ ಇಲ್ಲವೆ ನೈತಿಕ ಅಂಶಗಳನ್ನು ಕುರಿತ ಮಹತ್ವದ ವಿಷಯ. ಬೇರೆ ಬೇರೆ ವಿಕಾರಗಳನ್ನು ಚಿತ್ರಿಸಲು ಕವಿಯು ಅನೇಕ ಪ್ರಾಣಿಗಳನ್ನು ಹೆಸರಿಸಿರುವ; ಮತ್ತು ನಾವು ಈ ವಿಕಾರಗಳನ್ನು ತೊರೆದು ಮೇಲಕ್ಕೆ ಏರಬೇಕು ಎಂದು ಹೇಳಿರುವ. ಆದರೆ, ಅವನ್ನು ತೊರೆಯುವ ದಾರಿ ಅದಾವುದು? ಕವಿಯು ಅಂದವಾದ ಹೋಲಿಕೆಯೊಂದನ್ನು ಕಾಣಿಸಿರುವ: 'ಸದ್ಭಕ್ತಿಯ ಬಿಲ್ಲನ್ನು ಹಿಡಿಯಿರಿ. ವಿರತಿಯ ಸಿಂಜನಿಯ ಏರಿಸಿರಿ. ಅದಕ್ಕೆ ಅರಿವಿನ ಬಾಣವನ್ನು ಹೂಡಿರಿ! ದಕ್ಷರಾಗಿ ಎಚ್ಚರದಿಂದ ಆ ಬಾಣವನ್ನು ಎಸೆಯಿರಿ. ಈ ಬಿಲ್ಲು, ಸಿಂಜನಿ, ಬಾಣಗಳು– ಈ ಮೂರರ ಸಂಯುಕ್ತ ನೆರವಿನಿಂದ ಎಲ್ಲ ಪ್ರಾಣಿಗಳನ್ನು ಕೊಲ್ಲಿರಿ.ಈ ಸಾಧನದಿಂದ ನೀವು ಈ ಪ್ರಾಣಿಗಳನ್ನೆಲ್ಲ ಅಳಿಸಲು ಸಮರ್ಥರಾಗುವಿರಿ!'

ಶ್ರೀ ಪುರಂದರದಾಸರು, ನಾನು ಇದೇ ವಿವರಿಸಲಿರುವ ಪದದಲ್ಲಿ, ಈ ಎಲ್ಲ ಪ್ರಾಣಿಗಳನ್ನು ಇದೇ ಅರ್ಥದಲ್ಲಿ ಬಳಸಿರುವರು. ಅವುಗಳಲ್ಲವರು ಒಂದೆರಡು ಹೆಚ್ಚಿನ ಪ್ರಾಣಿಗಳನ್ನೂ ಸೇರಿಸಿರುವರು. ಇದೊಂದು ತೀರ ವಿಲಕ್ಷಣವಾದ ಸಾಮ್ಯ. 'ಎಲೋ ದಾರಿಕಾರನೇ! ಮಲಗಿಕೊಂಬುವರೇ ಹೀಗೆ?' ಎಂಬ ಈ ಪದದಲ್ಲಿ, ಪುರಂದರದಾಸರು ಒಬ್ಬ ಯಾತ್ರಿಕನ ದೃಷ್ಟಾಂತವನ್ನು ಕೊಟ್ಟಿರುವರು. ಬನಿಯನ್ ಎಂಬ ಆಂಗ್ಲ ಗ್ರಂಥಕಾರರ 'ಯಾತ್ರಿಕನ ಪ್ರಗತಿ' (Pilgrim's Progress) ಎಂಬ ಗ್ರಂಥವನ್ನು ಓದಿಕೊಂಡವರು, ಅದರಲ್ಲಿಯ ಅವರ ವಚನಗಳು ಇದನ್ನು ಎಷ್ಟು ಪೂರ್ತಿಯಾಗಿ ಹೋಲುವವು ಎಂಬುದನ್ನು ಕಾಣಬಹುದು. 'ಎಲೈ ದಾರಿಕಾರನೇ! ಅದೇಕೆ ಮಲಗಿಕೊಂಡಿರುವೆ? ದಾರಿಗುಂಟ ನಡೆಯುವುದು ನಿನ್ನ ಕೆಲಸವಲ್ಲವೇ?' ಎಂದು ಪುರಂದರದಾಸರು ಕೇಳುವರು. ಅನುಭಾವಿಗಳು ನಿದ್ರೆಯನ್ನು ಆತ್ಮಾನಂದ ಪರವಶತೆ ಎಂಬ ಬೇರೊಂದು ಅರ್ಥದಲ್ಲಿ ಇನ್ನೊಂದೆಡೆ ಬಳಸಿರುವರು. ಆದರೆ, ಬನಿಯನ್‌ರವರಾಗಲಿ, ಪುರಂದರದಾಸರಾಗಲಿ, ಇಲ್ಲಿ ಅರುಹಲಿರುವ ನಿದ್ರೆಯು ಈ ಬಗೆಯ ನಿದ್ರೆಯಲ್ಲ, ಇದು ದೈಹಿಕ ನಿದ್ರೆ, ಡಾಕ್ಟರರು ತಮ್ಮ ರೋಗಿಗಳಲ್ಲಿ ಇದನ್ನು ಹುಟ್ಟಿಸಲು ಒಮ್ಮೊಮ್ಮೆ ಬಲು ಪ್ರಯಾಸಪಡಬೇಕಾದಂತಹ ನಿದ್ರೆ. "ಎಲೈ ಯಾತ್ರಿಕನೇ! ಹೀಗೇಕೆ ಮಲಗಿಕೊಂಡಿರುವೆ? ನೀನು ಸಾಗಬೇಕಾದ ದಾರಿಯು, ನೀನು ಮಾಡಬೇಕಾದ ಪ್ರವಾಸವು ಬಲು ದೂರವಿರುವುದಯ್ಯ! ಮಲಗಬೇಡ!" ನಮ್ಮ ಪಾರಮಾರ್ಥಿಕ ಧ್ಯಾನಕ್ಕಾಗಿ ಪರಮಾತ್ಮನಿಗೆ ಒಪ್ಪಿಸಬೇಕಾದ 'ವಿಶ್ರಾಂತಿ' ಯನ್ನು, ನಾವು ದೇಹಕ್ಕೆ ನೀಡಿ, ಅವನತರಾಗುತ್ತಲಿರುವೆವು ಎಂದು ಬನಿಯನ್‌ನು ಹೇಳುವ. "ಆ ಬಗೆಯಗಿ ನಿದ್ರಿಸಬೇಡಿರಿ! ಮಲಗಬೇಕಾದರೆ ಆತ್ಮಾನಂದಭರಿತನಂತೆ ಮಲಗಿರಿ. ಸಾಮಾನ್ಯ ಮಾನವನಂತೆ ಮಲಗಬೇಡಿರಿ!" ಇದು ಬನಿಯನ್– ಪುರಂದರದಾಸರಲ್ಲಿಯ ಒಂದು ಸಾಮ್ಯಸ್ಥಲ. ನಾವು ಅವರಲ್ಲಿಯ ಬೇರೆ ಕೆಲ

ಸಮಾನ ಸ್ಥಲಗಳನ್ನು ಅರುಹಬಹುದು. 'ಎಲ್ಲ ಸರಕು ಇಲ್ಲವೆ ಬಂಡವಾಳವನ್ನು ಕಳೆದುಕೊಳ್ಳುವಿಕೆ'ಯು ಈರ್ವರಲ್ಲಿಯ ಇನ್ನೊಂದು ಸಮಾನಾಂಶ. 'ಸರಕೆಲ್ಲ ತೀರಿತು. ತುಡುಗರು ನಿನ್ನ ಬಂಡವಾಳವನ್ನು ಸುಲಿದರು. ನೀನು ಈ ಪ್ರಪಂಚದಲ್ಲಿ ಬರುವ ಪೂರ್ವದಲ್ಲಿಯೆ ನಿನ್ನ ಬಂಡವಾಳ ತೀರಿತ್ತು. ಇಲ್ಲದಿದ್ದರೆ, ನೀನು ಬರಿ ಮಾನವನಾಗಿ ಇಲ್ಲಿ ಹುಟ್ಟುತ್ತಲೇ ಇರಲಿಲ್ಲ. ನೀನು ಸಂತನಾಗಿ, ದೇವಮಾನವನಾಗಿ ಜನಿಸಬಹುದಾಗಿತ್ತು. ಆದರೆ ನೀನೀಗ ನರನಾಗಿ ಹುಟ್ಟಿದುದರಿಂದ, ಇಲ್ಲಿಯ ಬೇರೆ ತುಡುಗರು, ನಿನ್ನ ಹತ್ತಿರ ಇದ್ದುಬಿದ್ದುದನ್ನೆಲ್ಲ ನಿನ್ನಿಂದ ಸೆಳೆಯದಿರರು. ಮೇಲಾಗಿ, ಇಲ್ಲಿರುವ ಹಿಂಸ್ರ ಪ್ರಾಣಿಗಳು ನಿನ್ನ ಮೇಲೆ ಏರಿಬರುವವು.' ಇದೀಗ ಸರ್ಪಭೂಷಣರ ಪದದಲ್ಲಿ ಕಂಡ ಸುಮಾರಾಗಿ ಇದೇ ಅರ್ಥದಲ್ಲಿ ಬಳಸಲಾದ ಪ್ರಾಣಿಗಳೇ ಇವು. ಸರ್ಪಭೂಷಣರು ಮನೋವಿಕಾರಾರ್ಥದಲ್ಲಿ ಈ ರೂಪಕವನ್ನು ಪೂರ್ತಿಯಾಗಿ ಚಿತ್ರಿಸಿರುವರು. ಪುರಂದರದಾಸರು ಅದನ್ನಿಲ್ಲಿ ಕೇವಲ ಸೂಚಿಸಿರುವರು. ಈ ಎಲ್ಲ ಪ್ರಾಣಿಗಳ ಬಗೆಗೆ ನಾವು ತುಂಬ ಎಚ್ಚರವನ್ನು ವಹಿಸಬೇಕೆಂದು ಅವರು ಹೇಳುವರು. ಅವು ನಮ್ಮ ಮೇಲೆ ಎರಗಿ, ನಮ್ಮನ್ನು ನುಂಗಿಬಿಡಬಹುದು. ದಾರಿಯಲ್ಲಿ ಮಲಗದಿರು. ಅದು 'ದುಃಖದ ನಿದ್ರೆ.' ಇದನ್ನೆ ಬನಿಯನ್‌ನು ಅರುಹುವ. ಪುರಂದರ-ಸರ್ಪಭೂಷಣರು ಅದೇ ಪ್ರಾಣಿಗಳನ್ನು ಕುರಿತು ಹೇಳುತ್ತಿದ್ದರೂ, ಈರ್ವರ ಹೇಳಿಕೆಯಲ್ಲಿ ಸ್ವಲ್ಪ ವ್ಯತ್ಯಾಸವಿರುವದು. ಸರ್ಪಭೂಷಣರು ಜಿಂಕೆ, ಸೂಕರಗಳನ್ನು ಬಳಸಿರುವರು. ಜಿಂಕೆಯನ್ನು ಚಂಚಲತೆಯನ್ನೂ, ಸೂಕರವನ್ನು ಪಾಪವನ್ನೂ ಕಾಣಿಸಲು ಉಪಯೋಗಿಸಿರುವರು. ಆದರೆ, ಪುರಂದರದಾಸರು ನಾಯಿ-ಹಾವುಗಳನ್ನು ಬಳಸಿರುವರು. 'ನಾಯಿಯಂತೆ ಬೊಗಳಬೇಡ, ಕೂಗಬೇಡ. ಹಾವಿನಂತೆ ವಕ್ರವಾಗಿ ಅಲೆಯಬೇಡ. ನಿನ್ನ ಬೊಗಳುವಿಕೆಯನ್ನೂ ವಕ್ರತನವನ್ನೂ ಬಿಟ್ಟುಬಿಡು!' ಎಂದವರು ಹೇಳಿರುವರು. ಇವರೀರ್ವರಲ್ಲಿಯ ಈ ಭೇದವನ್ನಷ್ಟು ಬಿಟ್ಟರೆ, ಈ ಪ್ರಾಣಿಗಳ ಇಡೀ ಸಮೂಹವೂ, ವಿಕಾರಾರ್ಥದಲ್ಲಿಯ ಅವುಗಳ ವಿವರಣೆಯೂ ತುಂಬ ಸಮಾನವಾದವುಗಳು. ಇದೇ ಬಗೆಯಾಗಿ ಡಾಂಟೇ ಎಂಬ ಇಟಲಿ ದೇಶದ ಹಿರಿಯ ಕವಿಯು ತನ್ನ 'ದೈವೀ ಪ್ರಹಸನ'(Divine Comedy) ಎಂಬ ಕಾವ್ಯದಲ್ಲಿ ವಿಕಾರಸೂಚಕವಾದ ಮೂರು ಪ್ರಾಣಿಗಳನ್ನು ಉಲ್ಲೇಖಿಸಿರುವ. ಚಿರಚು ಕಾಮುಕ ಪ್ರಾಣಿಯೆಂದೂ, ಸಿಂಹವು ಗರ್ವವನ್ನು ಸೂಚಿಸುವುದೆಂದೂ, ಹೆಣ್ಣು ತೋಳವು ಲೋಭದ ಪ್ರತೀಕವೆಂದೂ ಅವನು ಹೇಳಿರುವನು. ಈ ಮೇರೆಗೆ ಬನಿಯನ್, ಪುರಂದರದಾಸ, ಸರ್ಪಭೂಷಣ ಹಾಗು ಡಾಂಟೆ-ಇವರೆಲ್ಲ ಈ ಎಲ್ಲ ಪ್ರಾಣಿಗಳನ್ನು ವಿಕಾರಗಳಿಗೆ ಹೋಲಿಸಿ, ಅವನ್ನೆಲ್ಲ ನಾಶಗೊಳಿಸಲು ನಮಗೆ ಬೋಧಿಸಿರುವರು. ಅವನ್ನೆಲ್ಲಗಳೆಯಲು ಸರ್ಪಭೂಷಣರು ಸೂಚಿಸಿದ ಬಿಲ್ಲು-ಬಾಣಗಳ ಸಾಧನವು, ಪುರಂದರದಾಸರಲ್ಲಿ

ಬೇರೊಂದು ರೂಪವನ್ನು ತಳೆದಿರುವುದು. ಅವರು ಇನ್ನೊಂದು ಪರ್ಯಾಯವನ್ನು ಸೂಚಿಸಿರುವರು. 'ನೀನು ಈ ವರೆಗೆ ಅನೇಕ ಕವಚಗಳನ್ನು ಧರಿಸಿದಿ. ಅವನ್ನು ಸರಿಯಾಗಿ ಉಪಯೋಗಿಸದೆ, ಕಳೆದುಕೊಂಡಿ!'

'ಹಿಂದೆ ಹಲವು ಕವಚಂಗಳ ಕಳಕೊಂಡೊ!' ಇನ್ನು ಈ ಕವಚವನ್ನಾದರೂ, ಈ ದೇಹವನ್ನಾದರೂ ಪರಮಾತ್ಮನ ಸೇವೆಯಲ್ಲಿ ಸವೆಯಿಸು! ಈ ಜೀವನವನ್ನು ಪರಮಾತ್ಮನನ್ನು ಸಂತೈಸಲು ವಿನಿಯೋಗಿಸಿದರೆ, ನೀನು ಎಲ್ಲ ವಿಕಾರಗಳಿಂದ ಮುಕ್ತನಾಗಬಲ್ಲೆ. ಈ ವಿಕಾರಗಳಿಂದ ಮುಕ್ತನಾಗಲು ನಡೆಯಿಸಲಾದ ನಿನ್ನ ಯತ್ನದಿಂದ ನೀನು ಪರಮಾತ್ಮನನ್ನು ಸಮೀಪಿಸುವೆ; ಮತ್ತು ನೀನು ಪರಮಾತ್ಮನನ್ನು ಸಮೀಪಿಸಿದಂತೆ, ವಿಕಾರಗಳಿಂದಲೂ ಕ್ರಮಶಃ ಬಿಡುಗಡೆ ಹೊಂದುವೆ. ಈ ರೀತಿ, ನಿನ್ನ ವಿಕಾರ-ಮುಕ್ತಿಯೂ ಭಗವದ್ಭಕ್ತಿಯೂ ಒಂದನ್ನೊಂದು ಅವಲಂಬಿಸಿರುವವು. ಆದುದರಿಂದ ಪರಮಾತ್ಮ ಪಥವನ್ನು ಪಿಡಿಯುವದೊಂದೇ ನಿನ್ನ ಏಕಮೇವ ಯತ್ನವಾಗಬೇಕು. ಪುರಂದರದಾಸರ ಈ ಪದದಲ್ಲಿಯ ಕೊನೆಯ ಗಮನಿಸತಕ್ಕ ಅಂಶವು ಈ ಬಗೆಯದಿರುವುದು" ಮುಸಾಫಿರ ಸೋತಾ ಹೈ ಬೇಹೋಸ!' 'ಎಲೈ ದಾರಿಕಾರನೇ! ನೀನು ಮೈಮರೆತು ಮಲಗಿರುವೆಯಯ್ಯ!' ಎಂಬ ಹಿಂದೀ ಪದದೊಡನೆ ಇರುವ ಅದರ ವಿಲಕ್ಷಣ ಸಾಮ್ಯವೇ ಅದು. ಆ ಪದವನ್ನು ಬರೆದ ಕೃಷ್ಣಾನಂದ ಕವಿಯು ಮೂಲ ಕನ್ನಡ ಪದವನ್ನು ಅರಿಯದೆ, ಸುಮಾರಾಗಿ ಅದನ್ನೆ ಹಿಂದಿಗೆ ಪರಿವರ್ತಿಸಿದಂತೆ ಕಾಣುವುದು.

■■

ಪ್ರಕರಣ ಮೂರು

ಮತ್ತೆ ಕೆಲ ಪ್ರೇರಣೆಗಳೂ ಅವುಗಳ ಪರಿಣತಿಯೂ

ನಾನೀಗ ಮತ್ತೆ ಕೆಲ ಪರಮಾರ್ಥ ಪ್ರೇರಣೆಗಳನ್ನು ಹಾಗೂ ಅವುಗಳ ಪರಿಣತಿಯನ್ನು ತಮಗೆ ಅರುಹಬಯಸುವೆ. ಕನ್ನಡ ಅನುಭಾವಿಗಳಿಂದ ಅರುಹಲಾದ ಕೆಲ ಪ್ರೇರಣೆಗಳನ್ನು ಕ್ರಿ.ಶ. ೧೯೫೦ರಲ್ಲಿ ನಾನು ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಧಾರವಾಡದಲ್ಲಿತ್ತ ಉಪನ್ಯಾಸವೊಂದರಲ್ಲಿ ವಿವರಿಸಿರುವೆ. ತರುವಾಯ ಕೆಲವನ್ನು ಕ್ರಿ.ಶ. ೧೯೫೧ರಲ್ಲಿ ಬೆಳಗಾವಿಯಲ್ಲಿಯ ಉಪನ್ಯಾಸದಲ್ಲಿಯೂ ಆಮೇಲೆ ಬೇರೆ ಕೆಲವನ್ನು ಧಾರವಾಡದಲ್ಲಿ ಕಳೆದ ಸಲ ಇತ್ತ ಮೂರು ಉಪನ್ಯಾಸಗಳಲ್ಲಿಯ ಒಂದರಲ್ಲಿಯೂ ವಿವರಿಸಿರುವೆ. ಆದರೆ ಅದರಿಂದ ಈ ಪ್ರೇರಣೆಗಳ ಸಮಸ್ಯೆಯು ಮುಗಿಯುವುದಿಲ್ಲ. ಆದುದರಿಂದ ಮುಂದಿನ ಪ್ರೇರಣೆಗಳನ್ನು ವಿವರಿಸುವ ಪೂರ್ವದಲ್ಲಿ, ನಾನು ಈವರೆಗೆ ವಿವರಿಸಿದ ಪ್ರಧಾನ ಪ್ರೇರಣೆಗಳ ಸಾರಾಶಂವನ್ನು ಸ್ವಲ್ಪದರಲ್ಲಿ ತಿಳಿಸುವುದು ಒಳಿತು.

ನಾನು ವಿವರಿಸಿದ ಮೊದಲನೆಯ ಪದವಾದ 'ಕಂಡೀರೇನೋ ಮಹಾಕಾರಣ ಬ್ರಹ್ಮನ!' ಎಂಬುದು ಪರಮಾತ್ಮನ ಸಮಸ್ಯೆಯ ದಾರ್ಶನಿಕ ವಿಚಾರವನ್ನು ಒಳಗೊಂಡಿರುವದು. ಈ ಸಮಸ್ಯೆಯು, ಪರಮಾತ್ಮನನ್ನು ಅರಿತಿರುವೆವು ಎಂದು ಹೇಳುವವರಿಗೆಲ್ಲ ಒಂದು ಆಹ್ವಾನವನ್ನೆ ನೀಡುವುದು. ಎರಡನೆಯದು ಸಾಕ್ಷಾತ್ಕಾರಕ್ಕೆ ಸಂಬಂಧಿಸಿದ ಪ್ರೇರಣೆ. ಹಲವರು ಪಾರಮಾರ್ಥಿಕ ಜೀವನವನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಾಕ್ಷಾತ್ಕಾರದ ಕಲ್ಪನೆಯಿಂದ ಆಕರ್ಷಿತರಾಗುವರು, ಪ್ರೇರಿತರಾಗುವರು. 'ಇದೇ ಬ್ರಹ್ಮಜ್ಞಾನಾ ನೋಡಿಕೋ' ಎಂಬ ಪದದಲ್ಲಿ ಶರೀಫ ಸಾಹೇಬರು 'ನಿಜರಾಗ'ವನ್ನು ಉಲ್ಲೇಖಿಸಿರುವರು. ಅದು ಸಂಗೀತ ಕಚೇರಿ ಇಲ್ಲವೆ ಬಾನುಲಿ ಇವುಗಳಿಂದ ಕೇಳಿಬರುವ ಸಂಗೀತವಲ್ಲ. ಅದು ಒಳಗಿನಿಂದ ಕೇಳಬರುವ ಆಂತರಿಕ ರಾಗ. ಅದು ಸಾಕ್ಷಾತ್ಕಾರಕ್ಕೆ ಸಂಬಂಧಿಸಿದ ಪ್ರೇರಣೆ. ಮೂರನೆಯದು ಮನೋ ವೈಜ್ಞಾನಿಕ ಪ್ರೇರಣೆ. 'ಅಳುತಿದ್ಯಾ ಕಂದಾ ಅಳುತಿದ್ಯಾ' ಕನ್ನಡ ಸಾಹಿತ್ಯದಲ್ಲಿಯ ಈ ಸುಪ್ರಸಿದ್ಧ ಪದವು, ವರ್ಡ್ಸವರ್ಥ ಕವಿಯು ಅರುಹಿದ 'ಸ್ಮರಣ-ಸಿದ್ಧಾಂತ'ವನ್ನು ಅರುಹುವದು. ಇದು ಮನೋವೈಜ್ಞಾನಿಕ ಪ್ರೇರಣೆ ನೀವದನ್ನು ಬೇಕಾದರೆ ಅಂತಿಮ-ಗತಿ-ಶಾಸ್ತ್ರೀಯ ಪ್ರೇರಣೆ (eschatological)ಯೆಂದೂ ಕರೆಯಬಹುದು.

ಆಮೇಲೆ ಬರುವುದು ಸಾಮಾನ್ಯ ನಿದ್ರೆಯ ರೂಪವನ್ನು ತಳೆದ ಸುಮಾರಾಗಿ ಶರೀರ-ಶಾಸ್ತ್ರಕ್ಕೆ ಸಂಬಂಧಿಸಿದ ಪ್ರೇರಣೆ. ನಾವೀ ಪ್ರಪಂಚದಲ್ಲಿ ಜಾಗೃತರಿದ್ದಂತೆ ಕಂಡರೂ, ನಿಜವಾಗಿ ಮಲಗಿಕೊಂಡಿರುವೆವು. ಈ ಸಂದರ್ಭದಲ್ಲಿ 'ಎಲೋ, ದಾರಿಕಾರನೇ!' ಎಂಬ ಪದವನ್ನು ನಾನು ವಿವರಿಸಿದೆ. ಬನಿಯನ್ ಮಹನೀಯರ ಗ್ರಂಥದಲ್ಲಿಯೂ ಇಂಥ ವಿಷಯವು ಬಂದಿರುವುದು. ಅದನ್ನೂ ನಾನು ಪೂರ್ತಿಯಾಗಿ ಚರ್ಚಿಸಿರುವೆ. ಕೊನೆಗೆ, ಕನ್ನಡ ಅನುಭಾವದಲ್ಲಿಯ ನೈತಿಕ ಪ್ರೇರಣೆಯನ್ನು ವಿಶದಗೊಳಿಸಿರುವೆ; ಮತ್ತು ಇಂದ್ರಿಯಗಳ ಹಾಗೂ ವಿಕಾರಗಳ ಹಿಡಿತದಿಂದ ಬಿಡುಗಡೆಯನ್ನು ಮಾಡಿಕೊಳ್ಳುವ ಬಗೆಯನ್ನು ಅರುಹಿರುವೆ. 'ನಯನೇಂದ್ರಿಯ ವಿಷಯದಿಂದ' ಎಂಬ ವಚನವು ಈ ವಿಷಯವನ್ನೆ ಒಳಗೊಂಡಿದೆ. ನಮ್ಮ ಕಣ್ಣು, ಕಿವಿ, ಇತ್ಯಾದಿ ಇಂದ್ರಿಯಗಳು ಅವುಗಳ ಬಗೆಬಗೆಯ ವಿಷಯಗಳಿಂದ ಸೆಳೆಯಲ್ಪಡು ವವು. ಆದುದರಿಂದ ಈ ವಿಷಯಗಳೇ, ನಮ್ಮ ವಿಷಯ ಲೋಲುಪತೆಯ ಮೂಲಕ ನಮ್ಮನ್ನು ವಿನಾಶದ ಕೊಳ್ಳದಲ್ಲಿ ನೂಕುವ ಹಿರಿಯ ಪ್ರಲೋಭನಗಳು. ಅದರಿಂದ ಮನುಜನು ಸುದೈವದಿಂದ ರಕ್ಷಿಸಲ್ಪಟ್ಟರೆ, ಅವನು ಪಾರಮಾರ್ಥಿಕ ಪ್ರಪಂಚವನ್ನು ಕುರಿತು ಆಲೋಚಿಸತೊಡಗುವನು. ಅಲ್ಲಿಯವರೆಗೆ, ಅವನು ಅದನ್ನು ಕುರಿತು ವಿಚಾರಿಸುವುದೇ ಇಲ್ಲ. ಇದು ಕನ್ನಡ ಅನುಭಾವದಲ್ಲಿಯ ನಾನು ವಿವರಿಸಿದ ನೈತಿಕ ಪ್ರೇರಣೆಯು.

ಈ ಸಂದರ್ಭದಲ್ಲಿ ಹಿಂದೀ ಅನುಭಾವದಲ್ಲಿಯ ಕೆಲ ಪ್ರೇರಣೆಗಳೆಡೆ ತಮ್ಮ ಅವಧಾನವನ್ನು ಸೆಳೆಯಬಯಸುವೆ. ಅವುಗಳಲ್ಲಿಯ ಕೆಲವನ್ನು ನಾನು ಈ ಮೊದಲೇ ವಿವರಿಸಿರುವೆ. ನಾನು ಮಹಾರಾಷ್ಟ್ರ ಅನುಭಾವದಲ್ಲಿಯ ಪ್ರೇರಣೆಗಳನ್ನು ಅರುಹಲಿರುವುದಿಲ್ಲ. ಯಾಕಂದರೆ, ಆ ವಿಷಯವನ್ನು ಕುರಿತು ಬರೆಯಲಾದ ನನ್ನ ಗ್ರಂಥದಲ್ಲಿ ನಾನವನ್ನು ಆ ದೃಷ್ಟಿಯಿಂದ ಚರ್ಚಿಸಿಲ್ಲ. ನಾನದರಲ್ಲಿ ಮಹಾರಾಷ್ಟ್ರದ ಹಿರಿಯ ಸಂತರ ಬೋಧೆಯನ್ನು ವಿಭಜನಾತ್ಮಕ ದೃಷ್ಟಿಯಿಂದ ವಿವರಿಸಿರುವೆ, ಸಂಯೋಜನಾತ್ಮಕ ದೃಷ್ಟಿಯಿಂದಲ್ಲ. ಇಂಥ ವಿಷಯಗಳನ್ನು ಈ ಎರಡೂ ಬಗೆಯಾಗಿ ವಿವರಿಸಲು ಬರುವುದೆಂಬುದು ತಾವು ಅರಿತ ವಿಷಯ. ಔಪನಿಷದಿಕ ದರ್ಶನವನ್ನು ವಿವರಿಸುವಾಗ ನಾನು ಈ ಎರಡೂ ಬಗೆಗಳನ್ನು ಬಳಸಿರುವೆ. ನನ್ನ 'ಉಪನಿಷತ್-ದರ್ಶನದಲ್ಲಿಯ ಸೃಜನಾತ್ಮಕ ಯುಗ' ಎಂಬ ಗ್ರಂಥದಲ್ಲಿ ನಾನು ವಿಭಜನಾತ್ಮಕ ಪದ್ಧತಿಯನ್ನು ಉಪಯೋಗಿಸಿರುವೆ. ಅದನ್ನು ನಾನು ಡಾ. ಬೆಲವಲಕರ ಅವರ ಕೂಡ ಬರೆದೆ; ಮತ್ತು ನಾನು ಸ್ವತಂತ್ರವಾಗಿ ಬರೆದ ನನ್ನ 'ಉಪನಿಷದ್-ದರ್ಶನದ ರಚನಾತ್ಮಕ ಸಮಾಲೋಚನೆ' ಎಂಬ ಗ್ರಂಥದಲ್ಲಿ ಸಂಯೋಜನಾತ್ಮಕ ಪದ್ಧತಿಯನ್ನು ಬಳಸಿರುವೆ. ಈ ಎರಡೂ ಪದ್ಧತಿಗಳಲ್ಲಿ ಸಂಯೋಜನಾತ್ಮಕ ಪದ್ಧತಿಯೆ ಹೆಚ್ಚು ಒಳ್ಳೆಯದು. ಆದುದರಿಂದ ಹಿಂದೀ ಹಾಗೂ ಕನ್ನಡ ಅನುಭಾವಗಳನ್ನು ವಿವರಿಸುವಾಗ, ನಾನು ಅದನ್ನೆ ಆಯ್ದಿರುವೆ.

ನೀವು ಹಿಂದೀ ಅನುಭಾವದಲ್ಲಿಯ ಕೆಲ ಪ್ರೇರಣೆಗಳನ್ನು ಅವಲೋಕಿಸಿದರೆ, ಅವು ಕನ್ನಡ ಅನುಭಾವದಲ್ಲಿಯ ಪ್ರೇರಣೆಗಳನ್ನು ಎಷ್ಟು ಗಾಢವಾಗಿ ಹೋಲುವ ವೆಂಬುದನ್ನು ಕಾಣಬಹುದು. ಅವುಗಳಲ್ಲಿಯ ಮೊದಲನೆಯದು ದಾರ್ಶನಿಕ ಪ್ರೇರಣೆ. 'ಧೋಕೇ ಹಿ ಧೋಕ್ಯೆ ಡಹಕಾಯೋ'– 'ನಾನು ಮಾಯಾ ಪರಂಪರೆ ಯಿಂದ ವಂಚಿತನಾದೆ' ಎಂದು ಓರ್ವ ಹಿಂದೀ ಸಂತರು ಉಸುರಿರುವರು. ಇದು ಮಾಯೆಯ ಪ್ರೇರಣೆ. ತರುವಾಯ ಬರುವುದು ನಿಗೂಢವಾದ ದೈವದ ಪ್ರೇರಣೆ. ದೈವವು ನಮ್ಮ ಹಣೆಯಲ್ಲಿ ಏನನ್ನು ಬರೆದಿದೆ, ಅದು ನಮ್ಮನ್ನು ಹೇಗೆ ಸೆಳೆಯುವುದು ಎಂಬುದನ್ನು ನಾವು ಅರಿಯೆವು. ಶ್ರೀ ಭಾಗವತದಲ್ಲಿ ಬಣ್ಣಿಸಲಾದ ಮೇರೆಗೆ, 'ಒಂದು ಜಿಂಕೆಯ ಎಲ್ಲ ಬಗೆಯ ಎಡರುಗಳೊಳಗಿಂದ ಯಶಸ್ವಿಯಾಗಿ ಪಾರಾಯಿತು. ಆದರೆ ಕೊನೆಗೆ ಅದು ಒಂದು ತಗ್ಗಿನಲ್ಲಿ ನುಗ್ಗಿ ಬಿದ್ದು ಪ್ರಾಣವನ್ನು ಕಳೆದುಕೊಂಡಿತು'–ಇದು ನಿಗೂಢತೆಯ ಸಿದ್ಧಾಂತ. ತರುವಾಯ ಬರುವುದು ಅಂಧತ್ವದ ಸಮಸ್ಯೆ. ನಾವು ನಮ್ಮ ಕಂಗಳನ್ನು ತೆರೆದಿರುವೆವಾದರೂ, ನಾವೆಲ್ಲ ಈ ಪ್ರಪಂಚದಲ್ಲಿ ಅಂಧರೇ ಸರಿ. ನಾವು ಪೂರ್ತಿಯಾಗಿ ಅಂಧರು. 'ಕೋಹಿ ಸಮಝಾವು ಸಬ ಜಗ ಅಂಧಾ!' 'ಇಡಿ ಪ್ರಪಂಚವೇ ಅಂಧವಿರುವ ಮೂಲಕ, ನಾನು ಅದಾರಿಗೆ ಕಲಿಸಲಯ್ಯಾ?' 'ಒಬ್ಬಿಬ್ಬರು ಕುರುಡರಿದ್ದರೆ, ನಾನವರಿಗೆ ಕಲಿಸಬಹುದು. ಆದರೆ ಇಡಿ ಪ್ರಪಂಚವೇ ಕುರುಡಾಗಿರುವುದು' ಎಂದು ಓರ್ವ ಹಿಂದೀ ಸಂತಕವಿಯು ಉಸುರುವ. ಆ ಮೇಲೆ ಬರುವುದು ಮರಣದ ಸಮಸ್ಯೆ. ನಿಜವಾಗಿ, ಜರೆಯೂ, ಬಳಿಸಾರುವ ಮರಣವೂ ಪರಮಾರ್ಥವನ್ನು ಪಡೆಯಹಚ್ಚುವ ಒಳ್ಳೆಯ ಹಿರಿಯ ಪ್ರೇರಣೆಗಳು.ನಮ್ಮೊಡನೆ ಬಾಳಿದವರು, ದುಡಿದವರು, ಪರಲೋಕಕ್ಕೆ ತೆರಳಿದುದನ್ನು ನಾವು ಕಣ್ಣಾರೆ ಕಾಣುವೆವು. 'ಜಾ ದಿನ ಮನ ಪಂಛೀ ಉಡಿ ಜೈ ಹೈ?' 'ಯಾವ ದಿನ ಪ್ರಾಣಪಕ್ಷಿಯು ಹಾರಿಹೋಗುವುದೋ?' ಎಂಬ ಪದದಲ್ಲಿ ಸೂರದಾಸರು ಮರಣದ ಭೀಕರತೆಯನ್ನು ಚೆನ್ನಾಗಿ ಚಿತ್ರಿಸಿರುವರು. ಕೊನೆಗೆ, ತಾನು ಮಾಡಿದ ಪಾಪದ ಅರಿವು, ಪರಮಾರ್ಥ ಪ್ರೇರಣೆಯಾಗಿ ಪರಿಣಮಿಸುವುದು. ನಾನು ಈ ಮೊದಲು ವಿಷಯಲೋಲುಪತೆಯನ್ನು ಕುರಿತು ಅರುಹಿರುವೆ. ಅದರ ಎರಡನೆಯ ಅಂಗವೇ ಪಾಪ. ಪಾಪವು ನಮ್ಮನ್ನು ಧಾರ್ಮಿಕ ಬಾಳಿನೆಡೆ ಸೆಳೆಯುವುದು. ಆದರೆ ಅದು ಪ್ರತಿಯೊಬ್ಬನನ್ನು ಸೆಳೆಯಲರಿಯದು. ಬಹುತರವಾಗಿ ಎಲ್ಲ ಜನರು ಪಾತಕದ ಕರ್ದಮದಲ್ಲಿ ಆಳವಾಗಿ ಮುಳುಗುವುದುಂಟು. ಪಾತಕವು ಮನುಜನನ್ನು ಪರಮಾರ್ಥದೆಡೆ ಸೆಳೆದ ವಿಷಯವನ್ನು ಕುರಿತು, ಹಿಂದೀ ಸಾಹಿತ್ಯದಲ್ಲಿ ಎಷ್ಟೋ ವಚನಗಳುಂಟು. ಉದಾಹರಣಾರ್ಥವಾಗಿ–ಜನಕರಾಜನ ಓಲಗದಲ್ಲಿ ಇಂದ್ರನಿಗೆ ಒಮ್ಮೆ ಕೇಳಲಾದಾಗ, ಅವನೆಂದ: 'ನನಗೆ ಸಾವಿರ ಕಂಗಳಿರುವ ಮೂಲಕ ಬೇರೆ ದೇವತೆಗಳು ಅದಕ್ಕಾಗಿ ನನ್ನ ಬಗೆಗೆ ಅಸೂಯೆ ಪಡುವರು.' ಬೇರೆ ದೇವತೆಗಳಿಗೆ ಎರಡು, ನಾಲ್ಕು, ಆರು, ಎಂಟು, ಹದಿನೈದು ಕಂಗಳಿದ್ದವು. ಆದರೆ ಇಂದ್ರನಿಗೆ

ಸಾವಿರ ಕಂಗಳಿದ್ದವು. 'ಎಲೈ ವಿರೋಚನನೇ! ಧನ್ಯನಯ್ಯ ನೀನು! ಯಾಕಂದರೆ, ನೀನು ಸಿರಿರಾಮನ ಸೌಂದರ್ಯವನ್ನು ಸಾವಿರ ಕಂಗಳಿಂದ ಕಂಡು ಆನಂದಿತನಾಗಲಿರುವೆ!' ಅದಕ್ಕೆ ಇಂದ್ರನೆಂದ: 'ನಾನು ನನ್ನ ಪಾತಕಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಬೇಕು. ನಾನು ಅಹಲ್ಯೆಯನ್ನು ಕಾಮುಕ ಕಂಗಳಿಂದ ಕಂಡೆ. ಅದಕ್ಕಾಗಿ ನನ್ನ ದೇಹಕ್ಕೆ ಸಾವಿರ ವಿವರಗಳು–ಕಂಗಳು–ಆಗಲಿ ಎಂಬುದಾಗಿ ಶಪಿಸಲಾದೆ.' ಈ ರೀತಿ, ನಾವು ನಮ್ಮ ಪಾತಕಗಳಿಗೂ ಉಪಕೃತರಾಗಬೇಕು. ನನ್ನ ಗೆಳೆಯರೊಬ್ಬರು–ಅವರಿನ್ನೂ ಜೀವಿಸಿರುವರು–ತನ್ನ ಪಾತಕಗಳು ತನ್ನನ್ನು ಪರಮಾರ್ಥದೆಡೆ ಸೆಳೆದುದಕ್ಕಾಗಿ ಅವುಗಳಿಗೆ ತಾನು ಆಭಾರಿಯಾಗಿರುವೆ ಎಂದು ನನಗೊಮ್ಮೆ ಹೇಳಿದರು. ಮನುಜನು ಪಾತಕದಿಂದ ಮುಕ್ತನಾದರೆ, ಅವುಗಳ ಅರಿವು ಈ ಬಗೆಯಾಗಿ ಪರಮಾರ್ಥ ಪ್ರೇರಣೆಯಾಗಿ ಪರಿಣಮಿಸುವುದು.

ಕನ್ನಡ–ಹಿಂದೀ ಅನುಭಾವದಲ್ಲಿಯ ಕೆಲ ಪಾರಮಾರ್ಥಿಕ ಪ್ರೇರಣೆಗಳ ಈ ಸಿಂಹಾವಲೋಕನದ ತರುವಾಯ, ನಾನಿನ್ನು ಮತ್ತೆ ಕೆಲ ಪ್ರೇರಣೆಗಳನ್ನೂ, ಅವುಗಳ ಆನಂದಪೂರ್ಣ ಪರಿಣತಿಯನ್ನೂ ವಿವರಿಸಲಿರುವೆ. ಮೊದಲು ನಾನು ಕ್ಷಣಿಕತೆ ಇಲ್ಲವೆ ಕ್ಷಣಭಂಗುರತೆಯೆಂಬ ಪ್ರೇರಣೆಯನ್ನು ಹೇಳಲಿರುವೆ. ಪ್ರಪಂಚದಲ್ಲಿಯ ಎಲ್ಲ ವಸ್ತುಗಳು ಕ್ಷಣಿಕವಾದವುಗಳು. 'ಹ್ಯಾಗೆ ಇರಬೇಕು ಸಂಸಾರದಲ್ಲಿ?' ಎಂಬ ಪುರಂದರದಾಸರ ಪ್ರಸಿದ್ಧ ಪದದಲ್ಲಿ, ಅವರ ಮೊದಲನೆಯ ಬೋಧೆಯೇನೆಂದರೆ" 'ನಮ್ಮ ಪ್ರಾಚೀನದಲ್ಲಿ–ಹಣೆಯಲ್ಲಿ–ಬರೆದಂತೆ ನಾವು ಪ್ರಪಂಚದಲ್ಲಿ ಬಾಳಬೇಕು'. ಈ ಅಭಿಪ್ರಾಯವನ್ನು ಅನೇಕರು ಒಪ್ಪಲಿಕ್ಕಿಲ್ಲ. ಯಾಕೆಂದರೆ, ಅವರು ಆತ್ಮ ಪ್ರಯತ್ನಕ್ಕೆ ಪ್ರಾಧಾನ್ಯವನ್ನು ಕೊಡುವರು, ಆತ್ಮಪ್ರಯತ್ನವು ದೈವದ ಬರಹವನ್ನೂ ಅಳಿಸಬಲ್ಲದು ಎಂದು ನಂಬುವರು. ಇದೊಂದು ದಾರ್ಶನಿಕ ವಿಷಯವಿರುವುದರಿಂದ ನಾನದನ್ನೀಗ ಚರ್ಚಿಸಬಯಸುವುದಿಲ್ಲ. ಹಕ್ಕಿಗಳು ಮನೆಯಂಗಳದಲ್ಲಿ ಬಂದು ಕೆಲಕಾಲ ಕುಳಿತು, ಕೂಡಲೆ ಹಾರಿಹೋಗುವುದನ್ನು ನಾವು ಕಂಡಿರುವೆವು. ಚಿಕ್ಕಮಕ್ಕಳು ಮಳಲಿನಲ್ಲಿ ಆಟದ ಮನೆಗಳನ್ನು ನಿಲ್ಲಿಸಿ, ಆಟ ಮುಗಿದೊಡನೆ ಅವನ್ನು ಅಳಿಸಿಹೋದುದನ್ನು ನೋಡಿರುವೆವು. ಇದನ್ನು ಚೆನ್ನಾಗಿ ಹೋಲುವ ವಿಚಾರಗಳನ್ನು ನಾವು ರವೀಂದ್ರನಾಥ ಟಾಗೋರರವರ ಪದಗಳಲ್ಲಿಯೂ ಕಾಣಬಹುದು. ಬಹುತರವಾಗಿ, ಕ್ರಿ. ಶ.ಪೂ. ೪ನೆಯ ಶತಮಾನದಲ್ಲಿದ್ದ ಹಿರಕ್ಲಿಟಾಸ್ ಎಂಬ ಗ್ರೀಕ ದಾರ್ಶನಿಕನಲ್ಲಿ ಈ ವಿಚಾರವು ಇದಕ್ಕೂ ಪೂರ್ವದಲ್ಲಿ ಹೊಳೆದಿತ್ತು ಎಂದು ಹೇಳಬಹುದು. ಅವನೂ ಈ ದೃಷ್ಟಾಂತವನ್ನೆ ಕೊಟ್ಟಿರುವ. ವಿಶ್ವದಲ್ಲಿಯ ಪ್ರತಿಯೊಂದು ಒಡವೆಯು, ಜಲಪ್ರವಾಹದಂತೆ ನಿರಂತರವಾಗಿ ಬದಲಾಗುತ್ತಿರುವುದು ಎಂಬುದು ಅವನ ಸಿದ್ಧಾಂತ. ಈ ಸಿದ್ಧಾಂತವನ್ನೇ ಬರ್ಗಸನ್ ಎಂಬ ಫ್ರೆಂಚ್

ದಾರ್ಶನಿಕನು ಹಿಂದಿನಿಂದ ವಿಸ್ತರಿಸಿದನು. ಇನ್ನು ಪುರಂದರರ ಮೂರನೆಯ ದೃಷ್ಟಾಂತವನ್ನು ನೋಡಿ. ಬೇರೆ ಬೇರೆ ಎಡೆಗಳಿಂದ ಬೇರೆ ಬೇರೆ ಉದ್ದೇಶಗಳನ್ನಿರಿಸಿಕೊಂಡು, ಸಂತೆಗೆ ಹೋಗಿ, ನಾವೆಲ್ಲರು ಅದು ಮುಗಿದೊಡನೆ, ಬೇರೆ ಬೇರೆ ದಾರಿಗಳಿಂದ ಬೇರೆ ಬೇರೆ ದಿಕ್ಕುಗಳಿಗೆ ಮರಳುವುಂತೆ, ಬಗೆಬಗೆಯ ಅಂತಿಮಗಳನ್ನಿರಿಸಿಕೊಂಡು ಇಲ್ಲಿ ನೆರೆದ ನಾವು, ಇಲ್ಲಿರುವವರೆಗೆ ಒಡಗೂಡಿ ನಮ್ಮ ಪಾರಮಾರ್ಥಿಕ ಪಾತ್ರವನ್ನು ಚೆನ್ನಾಗಿ ನಿರ್ವಹಿಸಿ, ತರುವಾಯ ಪರಸ್ಪರರನ್ನು ಬೀಳ್ಕೊಡಬೇಕು. ಇಲ್ಲಿ ನಾವು ಹಿರಿಯ ಗ್ರೀಕ ದಾರ್ಶನಿಕನಾದ ಪಾಯಥೆಗೋರಾಸನ ವಿಚಾರಗಳ ಹೋಲಿಕೆಯನ್ನು ಕಾಣಬಹುದು. ಪ್ರಪಂಚವು ಒಂದು ಸಂತೆ. ಬಗೆಬಗೆಯ ಉದ್ದೇಶಗಳಿಂದ ಪ್ರೇರಿತರಾಗಿ ಜನರು ಅಲ್ಲಿ ನೆರೆಯುವರು. ಕೆಲವರು ಕೊಡುಕೊಳ್ಳಲು ಬರುವರು; ಕೆಲವರು ಸುಖವನ್ನು ಅನುಭವಿಸಲು ಬರುವರು ಮತ್ತು ಬೇರೆ ಕೆಲವರು ಕೇವಲ 'ಪ್ರೇಕ್ಷಕರಾಗಲು' ಬರುವರು. ಈ ಕೊನೆಯದು ದಾರ್ಶನಿಕನ ಕೆಲಸವೆಂದು ಅವನು ಹೇಳುವನು. ಈ ರೀತಿ, ನಾವು ಈ ಪ್ರಪಂಚದಲ್ಲಿ ಬೇರಾವ ಮಾತನ್ನೂ ಗಮನಿಸದೆ, ಕೇವಲ 'ಪ್ರೇಕ್ಷಕ'ರಾಗಿ ಬಾಳಬೇಕು. ಪುರಂದರದಾಸರು ಕೊಡುವ ಕೊನೆಯ ಹೋಲಿಕೆಯು ಧರ್ಮಶಾಲೆಯದು. ನಾವು ದಾರಿಯಲ್ಲಿರುವ ಧರ್ಮಶಾಲೆಯಲ್ಲಿ ತಂಗಿ, ಇರುಳನ್ನು ಕಳೆದು, ಬೆಳಿಗ್ಗೆ ಅಲ್ಲಿಂದ ತೆರಳುವಂತೆ ನಾವೀ ಪ್ರಪಂಚದಲ್ಲಿ ಬಾಳಬೇಕು. ಈ ಪ್ರಪಂಚವು ಒಂದು ಧರ್ಮಶಾಲೆ. ಅದರಲ್ಲಿಯ ಯಾವ ಮಾತಿನ ಬಗೆಗೂ ನಮ್ಮಲ್ಲಿ ಆಸಕ್ತಿ ಇರಕೂಡದು. ನಮಗೆ ಕರೆ ಬಂದೊಡನೆ ನಾವು ಅಲ್ಲಿಂದ ತೆರಳಲು ಸದೈವ ಸಿದ್ಧವಾಗಿರಬೇಕು.

ಇನ್ನು ನಾನು ಪುರಂದರದಾಸರ ಈ ಪದದಲ್ಲಿಯೂ, ಏಕನಾಥರ 'ಐಸೇ ಅಸಾವೇ ಸಂಸಾರೀ, ಜೋವಾರಿ ಪ್ರಾಚೀನಾಚೀ ದೋರೀ।' ಎಂಬ ಅಭಂಗದಲ್ಲಿಯೂ ನೆಲೆಸಿರುವ ಗಾಢವಾದ ಸಾಮ್ಯವನ್ನು ತಮಗೆ ಕಾಣಿಸಬಯಸುವೆ. ಈ ಅಭಂಗವು ಈ ಕನ್ನಡ ಪದದ ಅನುವಾದವಿರುವುದೋ ಏನೋ ಎಂಬಂತೆ ಕಾಣುವುದು. ಏಕನಾಥರು ಪುರಂದರದಾಸರು ಕೊಟ್ಟ ದೃಷ್ಟಾಂತಗಳನ್ನೆ ಕೊಟ್ಟಿರುವರು. ಇದನ್ನು ಕಂಡೊಡನೆ, ಒಬ್ಬರ ಪ್ರಭಾವವು ಇನ್ನೊಬ್ಬರ ಮೇಲೆ ಬಿದ್ದಿರುವುದೋ ಹೇಗೆ ಎಂಬ ಪ್ರಶ್ನೆಯು ಉದ್ಭವಿಸುವುದು. ಯಾಕೆಂದರೆ, ಈರ್ವರೂ ಅರುಹಿದ ಪ್ರಧಾನ ಸಮಸ್ಯೆಗಳು ಅವೇ ಇರುವವು. ಈರ್ವರೂ ಒಂದೇ ಕಾಲದಲ್ಲಿ ಜೀವಿಸಿದ್ದರು. ಈ ಕವಿಗಳೀರ್ವರಲ್ಲಿಯ ಸಂಬಂಧದ ನಿಜಸ್ವರೂಪವನ್ನು ಕಂಡು ಹಿಡಿಯುವುದು ಇತಿಹಾಸಜ್ಞರ ಕೆಲಸ. ಆದರೆ ಈ ಸಂದರ್ಭದಲ್ಲಿ ನಾನೊಂದು ಸೂಚನೆಯನ್ನು ಮಾಡಬಯಸುವೆ. ಈರ್ವರೂ ಪಂಢರಪುರದ ವಿಠ್ಠಲನ ಭಕ್ತರಿದ್ದ ಮೂಲಕ, ಅವರು ಪರಸ್ಪರರನ್ನು ಕಂಡಿರಲು ಬೇಕು-ಸಂದರ್ಶಿಸಿರಲು ಬೇಕು. ಆದರೂ

ಒಬ್ಬರು ಇನ್ನೊಬ್ಬರಿಂದ ಈ ವಿಚಾರಗಳನ್ನು ಪಡೆದಿದ್ದರು ಎಂದು ಬಗೆಯುವ ಅವಶ್ಯಕತೆಯಿಲ್ಲ. ಆ ವಿಚಾರಗಳೆಲ್ಲ ಅಂದಿನ ಸಮಾಜದಲ್ಲಿ ಪ್ರಚಲಿತವಿದ್ದವು. ಅವನ್ನವರು ತಮ್ಮ ತಮ್ಮ ಭಾಷೆಗಳಲ್ಲಿ ವಿವರಿಸಿದರಷ್ಟೇ. ಕೆಲ ಹಿಂದೀ, ಗುಜರಾಥಿ ಹಾಗು ಮರಾಠೀ ಸಂತರ ವಿಷಯದಲ್ಲಿಯೂ ಇದೇ ಬಗೆಯ ಸಮಸ್ಯೆಯು ಉಂಟಾಗಿರುವುದು. ಅದನ್ನು ನಾನು ಹಿಂದೀ ಅನುಭಾವವನ್ನು ಕುರಿತು ಬರೆದ ನನ್ನ ಗ್ರಂಥದಲ್ಲಿ ಚರ್ಚಿಸಿರುವೆ. ಉದಾಹರಣಾರ್ಥವಾಗಿ, ಕಬೀರರ ಒಂದು ಪದವು, ಜ್ಞಾನೇಶ್ವರರ ಒಂದು ವಚನವನ್ನು ತುಂಬ ಹೋಲುವುದು. 'ರೇ ದಿಲ್ ಗಾಫಿಲ ಗಫಲತ ಮತಕರ । ಏಕ ದಿನ ಜಮ ಆವೇಗಾ' 'ಎಲೈ ಮರವುಳ್ಳ ಮನವೇ! ಯಮರಾಜನು ಒಂದು ದಿನ ನಿನ್ನನ್ನು ಸೆಳೆದೊಯ್ವನು ಎಂಬುದನ್ನು ಮರೆಯದಿರು!' ಎಂಬುದು ಕಬೀರರ ಪದ. 'ಯಾಲಾಗೇ ಶತಜರ್ಜರ ನಾವೇ। ರಿಗೋನಿ ಕೇವಿ ನಿಶ್ಚಿಂತ ಹೋವಾವೇ।' 'ಎಲೈ, ನೂರು ತೂತುಗಳುಳ್ಳ ನೌಕೆಯಲ್ಲಿ ಕುಳಿತು ನಿಶ್ಚಿಂತನಾಗಿ ಇರುವುದು ಅದೆಂತಯ್ಯಾ?' ಎಂಬುದು ಜ್ಞಾನೇಶ್ವರರ ವಚನ. ಅದೇ ಮೇರೆಗೆ, ತುಲಸೀದಾಸ, ನರಸೀ ಮೆಹತಾ, ಇವರಲ್ಲಿಯೂ ಬೇರೊಂದು ಹೋಲಿಕೆಯು ಇರುವುದುಂಟು. ಇಬ್ಬರಲ್ಲಿಯೂ ನಾವು ಒಂದೇ ಬಗೆಯ ವಿಚಾರಗಳನ್ನು ಕಾಣಬಹುದು. 'ಜಾಕೇ ಪ್ರಿಯ ನ ರಾಮ ವೈದೇಹಿ!' 'ಯಾರು ರಾಮ-ಸೀತೆಯರನ್ನು ಪ್ರೀತಿಸುವುದಿಲ್ಲವೋ!' ಎಂಬುದು ತುಲಸಿದಾಸರ ಪದ. ಹಾಗೂ 'ನಾರಾಯಣನೂ ನಾಮ ಜೇ ನ ಲೇತಾ' 'ಯಾರು ನಾರಾಯಣನ ನಾಮವನ್ನು ಉಚ್ಚರಿಸುವುದಿಲ್ಲವೋ!' ಎಂಬುದು ನರಸೀ ಮೆಹತಾ ಅವರ ಪದ. ಕಬೀರ-ಜ್ಞಾನೇಶ್ವರರು ಕಾಶಿಯಲ್ಲಿ ಭೇಟಿಯಾಗಿರುವ ಸಂಭವವಿರುವಂತೆ, ತುಲಸೀದಾಸ ನರಸೀ ಮೆಹತಾ ಅವರು ಮಧುರೆಯಲ್ಲಿ ಭೇಟಿಯಾಗಿರಬಹುದು. ಕಬೀರರು ನಮ್ಮ ನಾಡಿನ ಈ ಭಾಗವನ್ನು ಸಂದರ್ಶಿಸಿರುವೆಂಬ ಕಲ್ಪನೆ ಪ್ರಚಲಿತ ವಿರುವುದು. ಜ್ಞಾನೇಶ್ವರರು ಬನಾರಸವನ್ನು ಸಂದರ್ಶಿಸಿದ ಸಂಗತಿಯಂತೂ ನಿಶ್ಚಿತವಾದ ವಿಷಯ. ತುಂಬ ದೂರ ದೂರ ವಾಸಿಸಿದ ಕವಿಗಳಲ್ಲಿಯೂ ಸಂತರಲ್ಲಿಯೂ ಒಂದೇ ಬಗೆಯ ವಿಚಾರಗಳು ನೆಲೆಸಿರುವವು. ಆದರೆ ಅವರಲ್ಲಿಯ ಐತಿಹಾಸಿಕ ಸಂಬಂಧವನ್ನು ಕಂಡುಹಿಡಿಯುವುದು ತುಂಬ ಬಿಗಿಯಾಗುವುದು. ಆದುದ ರಿಂದಲೇ ನಾನು ಪುರಂದರದಾಸ-ಏಕನಾಥರ ಸಂಬಂಧದ ಪ್ರಶ್ನೆಯನ್ನು ಇತಿಹಾಸಜ್ಞರಿಗೆ ಒಪ್ಪಿಸುವುದು ಉಚಿತವೆಂದು ಹೇಳಿದುದು.

ಈ ಕ್ಷಣಭಂಗುರತೆಯ ಪ್ರೇರಣೆಯ ತರುವಾಯ, ನಾನು ಚಿಂತೆಯ ಸಾರ್ವ-ತ್ರಿಕ ಸಾಮ್ರಾಜ್ಯರೂಪಿಯಾದ ಬೇರೊಂದು ಪ್ರೇರಣೆಯೆಡೆ ಸಾಗುವೆ. ಬಗೆಬಗೆಯ ಕಾರಣಗಳಿಗಾಗಿ ಪ್ರತಿಯೊಬ್ಬ ಮನುಜನ ಎದೆಯಲ್ಲಿ ಚಿಂತೆಯು ತುಂಬಿರುವುದನ್ನು

ನೀವು ಕಾಣಬಹುದು. 'ನಿಶ್ಚಿಂತತೆ'ಯನ್ನು ಕುರಿತು ಪುರಂದರದಾಸರು ಒಂದು ಸುಲಭವಾದ, ಆದರೂ ಅಂದವಾದ ಪದವನ್ನು ಬರೆದಿರುವರು. 'ಅನುಗಾಲವು ಚಿಂತೆ ಮನುಜರಿಗೆ' ಎಂಬುದು ಅವರ ಸುಪ್ರಸಿದ್ಧವಾದ ಹಾಗೂ ಸುಲಭವಾದ ಪದ. ಅದು ತೀರ ಸುಲಭವಿರುವುದರಿಂದ ಅದಕ್ಕೆ ವಿಶದೀಕರಣದ ಅವಶ್ಯಕತೆಯು ಅಷ್ಟೊಂದು ಇರುವುದಿಲ್ಲ. ಆದರೂ ಅದರಲ್ಲಿಯ ಕೆಲ ಅಂಶಗಳೆಡೆ ನಾನು ತಮ್ಮ ಗಮನವನ್ನು ಸೆಳೆಯಬಯಸುವೆ. ದಾಸರಾಯರು ಅದರಲ್ಲಿ ಅರುಹುವದೇನೆಂದರೆ: ನಿಮಗೆ ಸತಿಯು ಇದ್ದರೆ, ಅವಳು ಸದಾಚಾರದ ಮರ್ಯಾದೆಯನ್ನು ಮೀರಬಹುದೆಂದು ನೀವು ತುಂಬ ಚಿಂತಿಸುವಿರಿ! ಸತಿಯು ಇರದಿದ್ದರೆ, ನಿಮಗಾಗಿ ಅಡಿಗೆಯನ್ನು ಮಾಡಿ ಉಣಿಸುವವರಾರು? ಎಂಬುದು ನಿಮ್ಮ ಚಿಂತೆಯ ವಿಷಯವಾಗುವುದು. ಈ ರೀತಿ, ನಿಮಗೆ ಸತಿಯು ಇರಲಿ, ಇಲ್ಲದಿರಲಿ, ನೀವು ಸದೈವ ಚಿಂತೆಯಿಂದ ಬಳಲುವಿರಿ. ಮೇಲಾಗಿ, ನಿಮಗೆ ಮಕ್ಕಳಿದ್ದರೆ, ಅವರ ಸಂಖ್ಯೆಯು ನಿಮಗೆ ಅವರನ್ನು ಉಣಿಸಲು ಬಾರದಷ್ಟು ದೊಡ್ಡದಿರಬಹುದು. ಆದರೆ ನಿಮಗೆ ಮಕ್ಕಳು ಇರದಿದ್ದರೆ, ನೀವಿಲ್ಲಿಂದ ತೆರಳುವ ಸಮಯದಲ್ಲಿ ಕಂಬನಿಗಳನ್ನು ಸುರಿಸಬೇಕಾಗುವುದು. ಇವೆರಡೂ ಚಿಂತೆಯ ವಿಷಯಗಳೇ. ಪುರಂದರದಾಸರು ಕಾಣಿಸರುವ ಮೂರನೆಯ ಉದಾಹರಣೆಯು ಮನೆಯದಿರುವುದು. 'ನಿಮಗೆ ಮನೆಯು ಇರದಿದ್ದರೆ, ಆಶ್ರಯವಿಲ್ಲದೆ ನೀವು ಅಲೆಯಬೇಕಾಗುವುದು. ಆದರೆ, ನಿಮಗೆ ಮನೆಯು ಇದ್ದರೆ, ಅದು ಕೂಡ ನಿಮಗೊಂದು ಚಿಂತೆಯ ದೊಡ್ಡ ವಿಷಯವೇ ಆಗುವುದು.' ಯಾಕಂದರೆ ನೀವು ಅದಕ್ಕಾಗಿ ಅನೇಕ ಕರಗಳನ್ನು ಕೊಡಬೇಕಾಗುವುದು ಮತ್ತು ಅದರ ಮೂಲಕ ಒಮ್ಮೊಮ್ಮೆ ನೀವು ಬಾಡಿಗೆ ನಿಯಂತ್ರಣಕ್ಕೂ ಒಳಗಾಗಬೇಕಾಗುವುದು. ಆಮೇಲೆ ಬರುವುದು ಬಡತನದ ಸಮಸ್ಯೆ. 'ನಿಮ್ಮ ಹತ್ತಿರ ಹಣವಿರದಿದ್ದರೆ, ನೀವು ಮನೆಮನೆಗೆ ಭಿಕ್ಷೆಗಾಗಿ ಅಲೆಯಬೇಕಾಗುವುದು. ಹಣವಿದ್ದರೆ, ನಿಮಗೆ ಸದೈವ ತುಡುಗರ ಅಂಜಿಕೆಯಿರುವುದು. ಯಾಕಂದರೆ ಅವರು ಅದನ್ನು ನಿಮ್ಮಲ್ಲಿಂದ ಎಂದು ಅಪರಹರಿಸುವರೆಂಬುದನ್ನು ಹೇಳಲುಬಾರದು. ಆದುದರಿಂದ 'ನೀವು ಎಲ್ಲಿ ಹೋದರೂ, ಏನು ಮಾಡಿದರೂ ನಿಮ್ಮ ಮನಸ್ಸು ಚಿಂತೆಯಿಂದ ತುಂಬಿರುವುದು' ಎಂದು ಪುರಂದರದಾಸರು ಹೇಳಿರುವರು. 'ನಿಮ್ಮ ಮನವು ಮಾಧವನಲ್ಲಿ ಬೆರೆತಾಗಲೆ ಚಿಂತೆಯು ಇಲ್ಲದಂತಾಗುವುದು.' 'ಮನ ಹೋಗಿ ಮಾಧವನ ಒಡಗೂಡಿದಾಗಲೆ' ಚಿಂತೆ ನಿಶ್ಚಿಂತೆಯಾಗುವುದು. ನಿಮ್ಮ ಮನಸ್ಸು ಭಗವಂತನೆಡೆ ಸಾರಿ, ಆತನಲ್ಲಿ ಸೇರಿ ಒಂದಾಗದೆ ನೀವು ಚಿಂತೆಯಿಂದ ವಿಮುಕ್ತರಾಗಲರಿಯಿರಿ!' ಎಂಬುದು ದಾಸರ ಹೇಳಿಕೆ.

ಪ್ರಾಸಂಗಿಕವಾಗಿ ನಾನಿಲ್ಲಿ ನನ್ನ ಸ್ವಂತ ಚಿಂತೆಯ ಒಂದು ಉದಾಹರಣೆಯನ್ನು ಕೊಡಬಯಸುವೆ. ನಾನು ಅಲಹಬಾದಾ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡು

ತ್ತಿರುವಾಗ, ಕ್ರಿ.ಶ. ೧೯೪೨ರಲ್ಲಿ, ಜಪಾನದವರು ಕಲಕತ್ತೆ ಹಾಗು ವಿಶಾಖಪಟ್ಟಣ ಇವುಗಳ ಮೇಲೆ ಬಾಂಬುಗಳನ್ನು ಎಸೆದರು. ಹಾಗೂ ಅವರು ಕಲಕತ್ತೆಯಲ್ಲಿಳಿದು ಹಾಗೆಯೆ ಮುಂದುವರಿಯುತ್ತ ಬಂದರೆ, ಅವರ ಮುಂದಳವನ್ನು ತಡೆಯುವುದ ಕ್ಕಾಗಿ ಮೊಗಲಸರಾಯಿ ಎಂಬುದು ಎರಡನೆಯ ಸೇನಾಮುಖವೆಂದು ಬಗೆಯಲಾ ಯಿತು. ಆಗ ನಾವು ನಮ್ಮ ವಿಶ್ವವಿದ್ಯಾಲಯದ ಘಟಿಕೋತ್ಸವವನ್ನು-ಪದವೀದಾನ ಸಮಾರಂಭವನ್ನು-ಎರಡು ತಿಂಗಳು ಮುಂದೂಡಬೇಕಾಯಿತು. ಅದೇ ಕಾಲಕ್ಕೆ ಅಲ್ಲಿ ಮಾಘಮೇಳಕ್ಕಾಗಿ ನೆರೆಯಲಿರುವ ಲಕ್ಷಾಂತರ ಜನರು ಬಾಂಬಿನ ದಾಳಿ ಯಿಂದುಂಟಾಗಬಹುದಾದ ವಿನಾಶಕ್ಕೆ ಗುರಿಯಾಗಬಾರದೆಂದು, ಕಲೆಕ್ಟರರು ಆ ಮೇಳವನ್ನೇ ನಿಲ್ಲಿಸಿಬಿಟ್ಟಿದ್ದರು. ನಮ್ಮ ಪದವೀದಾನ ಸಮಾರಂಭವು ದಿನಾಂಕ ೨೩ ಡಿಸೆಂಬರ್ ೧೯೪೨ನೆಯ ದಿನ ಜರುಗುವುದು ಗೊತ್ತಾಗಿತ್ತು. ಆದರೂ ನಾವೆಲ್ಲರೂ ಚಿಂತೆಯಿಂದ ಕೂಡಿದ್ದೆವು.. ನಾನೊಂದು ದಿನ ಕೋಣೆಯಲ್ಲಿ ಚಹವನ್ನು ಸೇವಿಸುತ್ತಿರುವಾಗ, ಮೇಲೆ ಆಕಾಶದಲ್ಲಿ ವಿಮಾನಗಳು ಹಾರಾಡುತ್ತಿದ್ದವು ಮತ್ತು ಆ ಚಹಾ ಸೇವನೆಯ ಅಲ್ಪ ಸಮಯದಲ್ಲಿಯೂ, ಅವು ನಮ್ಮ ಮೇಲೆ ಯಾವ ಕ್ಷಣಕ್ಕೆ ಬಾಂಬುಗಳನ್ನು ಎಸೆಯಬಹುದೆಂಬುದನ್ನು ಹೇಳಲು ಬರುವಂತಿರಲಿಲ್ಲ. ಆಗ ನಾನು ಧ್ಯಾನಕ್ಕೆ ಕುಳಿತೆ. ನನ್ನ ಧ್ಯಾನವು ಚೆನ್ನಾಗಿ ಆದೊಡನೆಯೆ, ಇನ್ನು ಯಾವ ಅನಾಹುತವೂ ಒದಗಲಿಕ್ಕಿಲ್ಲವೆಂದು ನನ್ನ ಪೂರ್ತಿಯಾದ ಮನವರಿಕೆಯಾಯಿತು; ಮತ್ತು ನಾನು ನಿರ್ಭೀತಿಯಿಂದ ವಿಶ್ವವಿದ್ಯಾಲಯಕ್ಕೆ ತೆರಳಿದೆ. ನಾನು ಧ್ಯಾನ ಮಾಡುವವರೆಗೆ ಪ್ರತಿಕ್ಷಣಕ್ಕೆ ಅಂಜಿಕೆಗೆ ಎಲ್ಲ ಬಗೆಯ ಆಸ್ಪದವಿದ್ದಿತು. 'ಮನ ಹೋಗಿ ಮಾಧವನ ಒಡಗೂಡುವ ತನಕ, ಅನುಗಾಲವು ಚಿಂತೆ'ಯಿರುವುದು. ಅದಕ್ಕಾಗಿಯೆ ಪುರಂದರದಾಸರು ನಮಗೆ ಭಗವಂತನನ್ನು ಪ್ರಾರ್ಥಿಸಲು ಹೇಳಿದ್ದಾರೆ. ನಿಮ್ಮ ಮನಸ್ಸು ಭಗವಂತನಲ್ಲಿ ಬೆರೆತಾಗಲೇ ನಿಮ್ಮ ಚಿಂತೆಯು ಅಳಿಯಬಹುದು.

'ಚಿಂತೆಯಾತಕೋ ಬಯಲ ಭ್ರಾಂತಿಯಾತಕೋ?' ಎಂಬುದು ಈ ವಿಷಯವನ್ನೊಳಗೊಂಡ ಪುರಂದರ ದಾಸರ ಇನ್ನೊಂದು ಪದ. ಭಗವಂತನನ್ನು ಸರ್ವಕರ್ತನೆಂದು ಬಗೆದು ನೆನೆಯಬೇಕು. ಎಲ್ಲವೂ ಭಗವಂತನನ್ನೆ ಕೂಡಿರುವುದು, ಎಂಬ ವಿಚಾರವು ಸಾಕಷ್ಟು ಪ್ರಬಲವಾಯಿತೆಂದರೆ, ನೀವು ನಿಶ್ಚಿತವಾಗಿ ನಿಮ್ಮ ಚಿಂತೆಯಿಂದ ಮುಕ್ತರಾಗುವಿರಿ ಎಂದವರು ಅದರಲ್ಲಿ ಬೋಧಿಸಿರುವರು. ಈ ಪದವು ಪುರಂದರದಾಸರ ಚೇತನ ಸೃಷ್ಟಿಯ ಜ್ಞಾನವನ್ನು ನಮಗೆ ಚೆನ್ನಾಗಿ ತಿಳಿಸುವುದು. ಪ್ರಕೃತಿಶಾಸ್ತ್ರದಿಂದ ಬಗೆಬಗೆಯ ದೃಷ್ಟಾಂತಗಳನ್ನು ಕೊಟ್ಟು ಭಗವಂತನು ನಮ್ಮನ್ನು ಎಲ್ಲೆಡೆಯಲ್ಲಿ ಹೇಗೆ ಕಾಪಾಡುವನೆಂಬುದನ್ನು ಅವರು ನಮಗೆ ಅರುಹಿ ರುವರು. ಅವರಹೇಂಟೆಯ- ಹೆಂಗೋಳಿಯ- ದೃಷ್ಟಾಂತವನ್ನೆ ತೆಗೆದುಕೊಳ್ಳೋಣ. ಸರಿಯಾದ ಸಮಯಕ್ಕೆ ಕೂಗುವ ಜನ್ಮಜಾತ ಶಕ್ತಿಯು ಹೇಂಟೆಯಲ್ಲಿ ನೆಲೆಸಿದ್ದರೂ,

ಅದು ತನ್ನ ಮರಿಗಳಿಗೆ ಮೊಲೆವಾಲನ್ನು ಉಣಿಸಲರಿಯದು. ಅದರ ಮರಿಗಳನ್ನು ಉಣಿಸುವವರಾರು? ದೇವರೇ ಅಲ್ಲವೇ ಹೇಂಟೆಯು ಒಮ್ಮೊಮ್ಮೆ ತನ್ನ ಮರಿಗಳ ಬಾಯಿಯಲ್ಲಿ ಧಾನ್ಯದ ಕಾಳೊಂದನ್ನು ಹಾಕಬಹುದು. ಆದರೆ ಅವುಗಳ ನಿಜವಾದ ಪೋಷಕನು ಭಗವಂತನೇ! ಸಿರಿಯುಳ್ಳ ನಾರಿಯರು ತಮ್ಮ ಪ್ರಸೂತಿಸಮಯದಲ್ಲಿ ಸೂಲಗಿತ್ತಿಯರನ್ನು ತರಬಲ್ಲರು. ಅಡವಿಯಲ್ಲಿ ಮರಿಗಳನ್ನು ಹೆರುವ ಮೃಗಗಳಿಗೆ ಅದಾವ ಸೂಲಗಿತ್ತಿಯು ಇರುವಳು? ಭಗವಂತನೇ ಅವರ ಹಿರಿಯ ಸೂಲಗಿತ್ತಿ. ದಾಸರಾಯರು ಕಾಣಿಸಿದ ಮೂರನೆಯ ದೃಷ್ಟಾಂತವು ಬಹಳ ಮಹತ್ವದ್ದಿರುವುದು. ನೀವು ಕಣಜವನ್ನು-ಕಡಜೀರಿಗೆ ಹುಳವನ್ನು ಕಂಡಿರುವಿರಷ್ಟೇ. ಅದು ತನ್ನ ಮರಿಗಳನ್ನು ಹೇಗೆ ಉಣಿಸುವುದು? ನೀವು ಜೀವವಿಜ್ಞಾನಿಯೆಡೆ ಹೋದರೆ, ಅವನು ಅದರ ರೀತಿಯನ್ನು ನಿಮಗೆ ಅರುಹಬಹುದು. ನಿಜವಾಗಿ ಅದೊಂದು ಸೋಜಿಗದ ರೀತಿಯಿರುವುದು. ಕಣಜವು ಒಂದು ಸಜೀವ ಹುಳದ ಮಿದುಳುಬಳ್ಳಿ(Spinal chord) ಯಲ್ಲಿಯೂ, ನರಗಳ ಕೇಂದ್ರಗಳಲ್ಲಿಯೂ ಒಂದು ಬಗೆಯ ವಿಷವನ್ನು ಚುಚ್ಚಿ ಸೇರಿಸಿ, ಅದನ್ನು ನಿಶ್ಚೇತನಗೊಳಿಸುವುದು; ಆದರೆ, ಅದನ್ನದು ಕೊಲ್ಲುವುದಿಲ್ಲ, ಎಂದು ಶ್ರೀ ಬರ್ಗಸನ್ ಎಂಬ ಫ್ರೆಂಚ್ ದಾರ್ಶನಿಕನ ವಿಧಾನವನ್ನು ಓದಿದಾಗ, ಅದರ ಯಥಾರ್ಥತೆಯನ್ನು ಅರಿತುಕೊಳ್ಳಲು ನಾನು ಈ ವಿಷಯವನ್ನು ಕೂಲಂಕಷವಾಗಿ ಅಭ್ಯಸಿಸಬೇಕಾಯಿತು. ಈ ರೀತಿ, ಕಣಜವು ಏಕಕಾಲಕ್ಕೆ ಅಂಗ ರಚನಾಶಾಸ್ತ್ರಜ್ಞನಂತೆಯೂ, ಶಸ್ತ್ರವೈದ್ಯನಂತೆಯೂ ವರ್ತಿಸುವುದು. ತರುವಾಯ ಈ ಚೈತನ್ಯವಿಹೀನ ಹುಳದ ಸಜೀವ ಅನ್ನವನ್ನು ಅದು ತನ್ನ ಮರಿಗಳಿಗೆ ನೀಡುವುದು. ಈ ಪ್ರಾಕೃತಿಕ ಘಟನೆಯ ಎಲ್ಲ ಅವಸ್ಥೆಗಳನ್ನು ನಾನು ನಿಂಬಾಳದಲ್ಲಿ ಪ್ರತ್ಯಕ್ಷ ಕಂಡಿರುವೆ. ಕಣಜವು ತನ್ನ ತತ್ತಿಗಳನ್ನು ಒಂದು ಸಣ್ಣ ಗೂಡಿನಲ್ಲಿ ಇಡುವುದು. ಆ ತತ್ತಿಗಳು ಬೆಳೆದು ಮರಿಗಳಾದ ಮೇಲೆ, ಅವುಗಳಿಗೆ ನೀಡಲಾದ ಚೈತನ್ಯಪೂರ್ಣ ವಾದ ಸಜೀವ ಅನ್ನವನ್ನು ಅವು ತಿನ್ನುವವು; ಮತ್ತು ಪೂರ್ಣ ಕಣಜಗಳ ರೂಪವನ್ನು ತಳೆದು ಅಲ್ಲಿಂದ ಹಾರಿ ಹೋಗುವವು. ನಿಸರ್ಗವು ಇಂಥ ಬೇರೆ ಅನೇಕ ದೃಷ್ಟಾಂತಗಳನ್ನು ಕಾಣಿಸುವುದು. ಇಡಿ ಪದಾರ್ಥ ವಿಜ್ಞಾನವೂ, ಇಡಿ ಜೀವವಿಜ್ಞಾನವೂ, ಭಗವಂತನ ದಿವ್ಯಕರ್ಮದ ಉದಾಹರಣೆಗಳಿಂದ ತುಂಬಿರುವವು. ವಿಜ್ಞಾನವು ಸಾಮರ್ಥ್ಯದ ನಿದರ್ಶನವು. ನೀವು ರೋಟಿಫೆರಾ(Rotifera)ಎಂಬ ಚಕ್ರಚಲನೆಯ ಅಂಗದ ನೆರವಿನಿಂದ ಈಜಲಿರುವ ಅಣುಪ್ರಾಣಿಯ ಹೆಸರನ್ನು ಕೇಳಿರಬಹುದು. ಅದು ತನ್ನ ಸ್ಪರ್ಶಾಂಗಗಳ ಸುತ್ತಲು ತಿರುಗಿ ತನ್ನ ಈ ಚಕ್ರಾಕಾರ ಚಲನೆಯಿಂದ, ತನಗಿಂತ ಸಣ್ಣ ಇರುವ ಅಣುಪ್ರಾಣಿಗಳನ್ನು ತನ್ನೆಡೆ ಸೆಳೆದು ಅವನ್ನದು ತಿನ್ನುವುದುಂಟು. ಕಟಲ್ ಎಂಬ ಮೀನಿನ ಕಪ್ಪು ದ್ರವವು ಇದರ ಇನ್ನೊಂದು ಉದಾಹರಣೆ. ಇದನ್ನು ನಾನು ಹದಿನೈದು ದಿನಗಳ ಪೂರ್ವದಲ್ಲಿ

ಕೇಳಿದೆ. ಈ ಕಟಲ್ ಮೀನಿನ ಬಳಿ ಭಗವಂತನು ಒಂದು ಮಶಿಯ ಸಂಗ್ರಹವನ್ನು ಇರಿಸಿರುವ. ಅದರ ಹತ್ತಿರ ಮಶಿಯಿಂದ ತುಂಬಿದ ಒಂದು ಚೀಲವಿರುವುದು. ಯಾವ ಕಾಲಕ್ಕೆ ದೊಡ್ಡ ಪ್ರಾಣಿಗಳು ಅದನ್ನು ನುಂಗಲು ಬರುವವೋ, ಆಗದು ಈ ಮಶಿಯನ್ನು ಕೂಡಲೆ ಹೊರಗೆ ಪಸರಿಸುವುದು, ಮತ್ತು ತಾನು ಕಾಣದಂತಾಗುವುದು. ಈ ಸಂಗತಿಗಳು ಪುರಂದರದಾಸರಿಗೆ ಗೊತ್ತಿರಲಿಲ್ಲ ನಿಜ. ಆದರೆ, ಅವರ ಪ್ರಕೃತಿ ದರ್ಶನಕ್ಕೆ ಇವು ನಮ್ಮ ಹೆಚ್ಚಿನ ಕಾರಣಗಳೆಂದು ನಾವು ಇದನ್ನು ಎತ್ತಿಹೇಳಿದೆವು.

ತರುವಾಯ ಪುರಂದರದಾಸರು ಮಾಡಿದ ಇನ್ನೊಂದು ವಿಧಾನವು ಬಹಳ ಮಹತ್ವದ್ದಿರುವುದು. ಅವರು ಹೇಳುವದೇನೆಂದರೆ, ನಾವು ಎಲುವು ನರಗಳನ್ನು ಹೊಂದಿಸಿ, ಕೃತ್ರಿಮ ಕೂಸೊಂದನ್ನು ತಯಾರಿಸಿ ಗರ್ಭದಲ್ಲಿ ಇರಿಸಲರಿಯೆವು. ನೀವು ಕಟ್ಟಿಗೆಯಿಂದಾಗಲಿ, ಮಣ್ಣಿನಿಂದಾಗಲಿ ಕೂಸನ್ನು ನಿರ್ಮಿಸಿ, ಅದನ್ನು ತಾಯಿಯ ಗರ್ಭದಲ್ಲಿ ಸೇರಿಸಲರಿಯಿರಿ. 'ಅಸ್ಥನ್ವಂತಂ ಯದನಸ್ಥಾಬಿಭರ್ತಿ' 'ಎಲುವಿಲ್ಲದ ಆತ್ಮನು ಎಲುವಿನ ಮನೆಯನ್ನು ನಿರ್ಮಿಸಿದನು' ಎಂದು ವೇದವು ಸಾರುತ್ತಿದೆ. ತಾಯಿಯು ಮಗುವಿನ ದೇಹದ ಅಂಗಗಳನ್ನು ಧರಿಸುವಳು ಇಲ್ಲವೆ ವಹಿಸುವಳು. ಭಗವಂತನು ನರಗಳು, ಎಲುವುಗಳು, ಸ್ನಾಯುಗಳು ಇತ್ಯಾದಿಗಳನ್ನು ಒಂದೆಡೆ ಕೂಡಿಸಿ, ಅವುಗಳಿಂದ ಮಗುವನ್ನು ನಿರ್ಮಿಸುವನು. ಬಹುತರವಾಗಿ ಈ ಕಲ್ಪನೆಯನ್ನೇ ಪುರಂದರದಾಸರು ಇಲ್ಲಿ ಉಲ್ಲೇಖಿಸಿರಬಹುದು. ನಿಸರ್ಗದಲ್ಲಿಯ ಈ ದೃಷ್ಟಾಂತಗಳೆಲ್ಲ ನಮಗೆ ಭಗವಂತನ ಸಾಮರ್ಥ್ಯದ ಅರಿವನ್ನು ನೀಡುವವು. ಈ ಸಂದರ್ಭದಲ್ಲಿ ನಾನು ನಿಂಬರಗಿ ಮಹಾರಾಜರವರ ಪದದಲ್ಲಿಯ ಮುಂದಿನ ಒಂದೆರಡು ಸಾಲುಗಳನ್ನು ಹೇಳಬಯಸುವೆ: 'ಚಿಂತ್ಯಾಕ ಮಾಡತೀ...ಅಂತರದಿ ಅಂಬರ ಇಟ್ಟವರಾರು? ರವಿ ಶಶಿ ಮಾರ್ಗದಿ ನಡಿಸುವರಾರು?' ಭಗವಂತನೇ ತನ್ನ ಗತಿಯಿಂದ, ಸೂರ್ಯ ಚಂದ್ರರನ್ನು ಮುಂದೂಡುವ ಹಾಗೂ ಆಕಾಶದ ವಿತಾನವನ್ನು ನಮ್ಮ ತಲೆಯ ಮೇಲೆ ಶಾಶ್ವತವಾಗಿ ತೂಗುಬಿಟ್ಟಿರುವ. ಈ ರೀತಿ, ಭಗವಂತನು ಸರ್ವವ್ಯಾಪಿಯಿರುವ, ಸರ್ವಸಮರ್ಥನಿರುವ. ನಾವು ಭಗವಂತನಿಗೆ ಮೊರೆ ಹೋಗೋಣ! ನಮ್ಮ ಮನಸ್ಸು ಭಗವಂತನಲ್ಲಿ ಬೆರೆಯಿತೆಂದರೇನೇ ನಾವು ಎಲ್ಲ ಬಗೆಯ ಚಿಂತೆಗಳಿಂದ ವಿಮುಕ್ತರಾಗಬಹುದು. ಯಾಕಂದರೆ, ನಮಗೆ ಒದಗುವ ಪ್ರತಿಯೊಂದ ವಿಷಯವು ಭಗವಂತನ ಇಚ್ಛೆಯಿಂದಲೇ, ಪ್ರೇರಣೆಯಿಂದಲೇ ಒದಗುವುದುಂಟು. "ಪ್ರಕೃತಿದೇವಿಯೆ! ನಿನಗೆ ಒಳಿತಾದುದೆಲ್ಲ ನನಗೂ ಒಳಿತು. ಯಾವ ಸಂಗತಿಯೇ ಒದಗಲಿ! ನಾನು ಅದರೊಡನೆ ಹೊಂದಿಕೊಂಡು ಹೋಗುವೆ" ಎಂದು ಓರ್ವ ಗ್ರೀಕಸ್ಟೋಯಿಕ್ ದಾರ್ಶನಿಕನು ಹೇಳಿರುವನು. ಪ್ರಕೃತಿಮಾತೆಯು ತನಗೆ ದಯಪಾಲಿಸಿದ ಒಡವೆಗಳಿಂದ ಈ ದಾರ್ಶನಿಕನು ಸಂತುಷ್ಟನಾಗಿರುವನು. ಪುರಂದರದಾಸರು ಅವನಿಗಿಂತ ಒಂದು ಹೆಜ್ಜೆ ಮೇಲಕ್ಕೆ ಹೋಗುವರು. ಅವರು

ಪ್ರಕೃತಿಯ ಸ್ಥಲದಲ್ಲಿ ಭಗವಂತ ಎಂಬ ಶಬ್ದವನ್ನು ಇಡುವರು. "ಎಲೈ ಭಗವಂತನೇ! ನೀನು ಬಯಸಿದುದೆಲ್ಲವನ್ನು ನಾನು ಸ್ವಾಗತಿಸುವೆ!" ಎಂಬುದು ಅವರ ಮಾತು. ಈ ಬಗೆಯಾಗಿ ನಾವು ಭಗವಂತನಿಗೆ ಅಧೀನರಾದರೆ, ಅವನು ಕೃಪಾಪೂರ್ಣನಾಗಿ ನಮ್ಮನ್ನು ತನ್ನೆಡೆ ಒಯ್ಯದಿರನು.

ಇದೀಗ ನಾನು ಇನ್ನೂ ಮೂರು ಪದಗಳನ್ನು ವಿವರಿಸಲಿರುವೆ. ಅವುಗಳಲ್ಲಿ ಮೊದಲನೆಯದಾದ 'ಯಾಕೆ ದಯಮಾಡಲೊಲ್ಲೆ?' ಎಂಬುದು ಪುರಂದರದಾಸರ ಪದವು. ಎರಡನೆಯ 'ಇದೇ ಸಮಯ ಹರಿಯೇ!' ಎಂಬುದು ವಿಜಯದಾಸರದು. ಕೊನೆಯದಾದ 'ಎಲ್ಲಿದ್ಯೋ ಹರಿ ಹೇಳಯ್ಯ' ಎಂಬುದು ಮಹಿಪತಿರಾಯರದು.

ಈವರೆಗೆ ನಾವು ಪರಮಾರ್ಥ-ಪ್ರೇರಣೆಗಳನ್ನು ಚರ್ಚಿಸಿದೆವು. ಇನ್ನು ಅವುಗಳ ಪರಿಣತಿಯನ್ನು ನೋಡುವಾ. ಇಲ್ಲಿ ನಾನು ಭಗವಂತನ ಒಂದು ಬಗೆಯ ಪ್ರಾರ್ಥನೆಯಿಂದಲೆ ಮುಂದುವರಿಯುವೆ. ಅದಕ್ಕಾಗಿ ನಾನು ಪುರಂದರದಾಸರ 'ಯಾಕೆ ದಯಮಾಡಲೊಲ್ಲೆ?' ಈ ಪದದಲ್ಲಿಯ ಮುಂದಿನ ಪ್ರಾರ್ಥನೆಯನ್ನು ತೆಗೆದುಕೊಳ್ಳುವೆ. 'ನಾನು ದೀನನಾಗಿ ಪ್ರಲಪಿಸುತ್ತಿರುವೆ-ಕರೆಯುತ್ತಿರುವೆ. ನೀನು ನನ್ನ ಮೊರೆಯನ್ನು ಕೇಳಲೊಲ್ಲಿ! ದಯಮಾಡಯ್ಯ ಸ್ವಾಮಿ ಎನ್ನ ಮೇಲೆ!' ಎಂದು ದಾಸರಾಯರು ಉಸುರುವರು. ಅವರು ಮತ್ತೂ ಬೇಡಿಕೊಂಬುವದೇನೆಂದರೆ: "ನನ್ನ ಮನದ ಭಾವವನ್ನು ಮಾತಿನಲ್ಲಿ ಮೂಡಿಸುವ ಅವಶ್ಯಕತೆಯಿಲ್ಲ. ಆದುದರಿಂದ ದಯವಿಟ್ಟು ನನ್ನ ಭಾವನೆಯನ್ನು ಅರಿಯಯ್ಯ! ನಿಜವಾಗಿ ನನ್ನ ಅಂತರಂಗ ದಲ್ಲಿಯ ಭಾವನೆಗಳನ್ನೆಲ್ಲ ನೀನು ಅರಿತಿರುವಿ. ಆದರೆ ನಿನ್ನ ಮೌನವನ್ನು ಕಂಡರೆ ನೀನು ಮೂಕನಿರಬೇಕು ಎಂದೆನಿಸುವುದು" ಆಮೇಲೆ ದಾಸರಾಯರು ಹೇಳುವು ದೇನೆಂದರೆ: "ನನ್ನ ಜೀವನದ ಆದರ್ಶವನ್ನು ನನಗಿಂತ ನೀನೇ ಹೆಚ್ಚು ಚೆನ್ನಾಗಿ ಅರಿತಿರುವಿ! ನಾನದನ್ನು ಪಡೆಯದಿದ್ದುದರಿಂದ ತುಂಬ ವಿಷಣ್ಣನಾಗಿರುವೆ. ನನ್ನ ಗುರಿಯು ಲಭಿಸದ್ದರಿಂದ ನನ್ನ ಅಂತರಂಗದಲ್ಲಿ ಅಶಾಂತಿಯು ಉದಿಸಿರುವುದು. ಆದುದರಿಂದ ನನ್ನನ್ನು ಕರುಣಿಸಯ್ಯ ಹರಿ!" ಕೊನೆಗೆ ಅವರು ತನ್ನ ಪ್ರಸಾದದ ಮಳೆಯನ್ನು ಕರೆಯಲು ಭಗವಂತನನ್ನು ಪ್ರಾರ್ಥಿಸುವರು. ಈ ಪ್ರಸಾದದ ಸ್ವರೂಪವೇನೆಂಬುದು ಒಂದು ತುಂಬ ಹಿರಿದಾದ ಸಮಸ್ಯೆ.

ಭಗವಂತನ ಪ್ರಸಾದದ ಸಮಸ್ಯೆಯು ಎಲ್ಲ ದರ್ಶನಗಳಲ್ಲಿ-ವಿಶೇಷವಾಗಿ ಧರ್ಮಗಳಲ್ಲಿ ಚರ್ಚಿಸಲಾಗಿರುವದು. ಈ ಪ್ರಸಾದವನ್ನು ಕುರಿತ ಮುಂದಿನ ಮೂರು ಸಿದ್ಧಾಂತಗಳನ್ನು ನಾನು ವಿವರಿಸಲಿರುವೆ: ೧) ಪ್ರಸಾದವೆಂಬುದೇ ಇರುವುದಿಲ್ಲ. ೨) ಪ್ರಸಾದವು ನಮ್ಮ ಪ್ರಯತ್ನಕ್ಕೆ ಅನುಗುಣವಾಗಿ ಇರುವುದು.

೩)ಪ್ರಸಾದವು ಸ್ವತಂತ್ರ ವಾದುದೂ, ಭಗವಂತನ ಬಯಕೆಯನ್ನವಲಂಬಿಸಿರುವಂತಹದೂ ಇರುವುದು. ಮೊದಲನೆಯ ಸಿದ್ಧಾಂತದಲ್ಲಿ ದೈವವಾದ, ಪೂರ್ವ ನಿಯತಿವಾದ ಹಾಗೂ ಭಗವಂತನ ಎಣಿಕೆಯ ಅಭಾವ-ಇವು ಒಳಗೊಂಡಿರುವವು. ಎಲ್ಲ ಸಂಗತಿಗಳು ಯದೃಚ್ಛೆಯಿಂದ ಒದಗುವವು. ಅವು ನಿಸರ್ಗನಿಯಮಗಳಂತೆ ಒದಗುವವು. ಅಲ್ಲಿ ಯಾವ ಬಗೆಯ ಪ್ರಸಾದಕ್ಕೂ ಅವಕಾಶವಿಲ್ಲ-ಇಲ್ಲವೆ ಅಂಥ ಪ್ರಸಾದದ ಅವಶ್ಯಕತೆಯೂ ಇರುವುದಿಲ್ಲ. ಈ ಸಿದ್ಧಾಂತದ ಮೇರೆಗೆ ಪ್ರಸಾದವೆಂಬ ವಸ್ತುವೇ ಇರುವುದಿಲ್ಲ. ಎರಡನೆಯ ಸಿದ್ಧಾಂತವು ಭಗವಂತನನ್ನು ಒಬ್ಬ ವರ್ತಕನನ್ನಾಗಿ ಬಗೆಯುವುದು. ಅವನು ನಿಮ್ಮ ಪ್ರಯತ್ನಕ್ಕೆ ತಕ್ಕಂತೆ ನಿಮಗೆ ಪ್ರಸಾದವನ್ನು ನೀಡುವ. ಆದುದರಿಂದ ಪ್ರಯತ್ನ-ಪ್ರಸಾದಗಳ ಸಮಪ್ರಮಾಣವು ಎರಡನೆಯ ದೃಷ್ಟಿ. ಮೂರನೆಯ ಸಿದ್ಧಾಂತದ ಮೇರೆಗೆ ನಿಮ್ಮ ಮೇಲೆ ಪ್ರಸಾದದ ಮಳೆಯೆ ಸುರಿಯುವುದು. ಭಗವಂತನು ನಿಮ್ಮ ಪ್ರಯತ್ನವನ್ನು ಲೆಕ್ಕಿಸುವುದಿಲ್ಲ. ಅವನು ಅತಿ ಉದಾರನೂ ಬಲುಸಂಪನ್ನನೂ ಇರುವ ಮೂಲಕ, ನೀವು ಮಾಡಿರಲಿ, ಮಾಡದಿರಲಿ, ಅವನು ತನ್ನ ಪ್ರಸಾದವನ್ನು ಮುಕ್ತಹಸ್ತದಿಂದ ನಿಮ್ಮ ಮೇಲೆ ಕರೆಯುವನು. ನಾವೆಲ್ಲ ಈ ಕೊನೆಯ ಮಾದರಿಯ ಪ್ರಸಾದವನ್ನು ಪಡೆಯಲು ಬಯಸುವೆವು ಎಂದು ನನಗನಿಸುವುದು; ಮತ್ತು ಪುರಂದರದಾಸರು ಬಹುತರವಾಗಿ ಇದೇ ಬಗೆಯ ಪ್ರಸಾದವನ್ನು ನೀಡಲು ಭಗವಂತನನ್ನು ಅನನ್ಯಭಾವದಿಂದ ಪ್ರಾರ್ಥಿಸುವರು.

ಇನ್ನು ನಾನು ವಿಜಯದಾಸರ 'ಇದೇ ಸಮಯ ಹರಿಯೇ' ಎಂಬ ಪದದೆಡೆ ಸಾಗುವೆ. ಇದೊಂದು ಸುಪ್ರಸಿದ್ಧವಾದ ಪ್ರಾರ್ಥನೆಯ ಪದ. ಇದು ತಾತ್ವಿಕ ಸ್ವರೂಪದ ದಾರ್ಶನಿಕ ವಿಚಾರವನ್ನು ಇಲ್ಲವೆ ಶಾಬ್ದಿಕ ವಿವರಣೆಯನ್ನು ಅಪೇಕ್ಷಿಸುವದಿಲ್ಲ- ಅವುಗಳಿಗೆ ಎಡೆಕೊಡುವುದಿಲ್ಲ. ವಿಜಯದಾಸರು ಈ ಪದದಲ್ಲಿ ಮಾಡಿದ ಮೂರು ಇಲ್ಲವೆ ನಾಲ್ಕು ವಿಧಾನಗಳನ್ನಷ್ಟೇ ನಾನು ತಮ್ಮೆದುರು ಇರಿಸಲಿರುವೆ. ಇದೊಂದು ನಿಜವಾಗಿ ಅಂತರಂಗದಿಂದ ಹೊರಹೊರಟ ಪ್ರಾರ್ಥನೆ. ಬರಿ ದಾರ್ಶನಿಕ ತತ್ವಗಳಾಗಲಿ, ಅಥವಾ ಮಾಯಿಕ ಶಬ್ದಜಾಲವಾಗಲಿ, ಅಂತಃಕರಣದ ಹಸಿವನ್ನು ಹಿಂಗಿಸಲಿರಿಯದು. ವಿಜಯದಾಸರು ಉಸುರುವದೇನೆಂದರೆ: 'ನಾನು ನಾನಾ ಜನ್ಮಗಳಲ್ಲಿ ತಿರುಗಬೇಕಾಗಿ ಬಂದುದರಿಂದ, ನಾನು ನನ್ನ ಪಾರಮಾರ್ಥಿಕ ಅಂತಃಪ್ರಜ್ಞೆಯನ್ನು-ಪ್ರತಿಭೆಯನ್ನು-ಕಳೆದು ಕೊಂಡಿರುವೆ.' 'ನಾನಾ ಜನ್ಮದಿ ಬಂದು ಜ್ಞಾನವಿಹೀನನಾಗಿ'ರುವೆ. ಆದುದರಿಂದ 'ನಾನು ಆದಿಯಲ್ಲಿ ಪಡೆದ ನನ್ನ ಮೂಲ ಪ್ರತಿಭೆಯನ್ನು ನನಗೆ ದಯಪಾಲಿಸಯ್ಯ. ಅನೇಕ ಜನ್ಮಗಳಲ್ಲಿ ಅಲೆಯುತ್ತಿರುವಾಗ, ನಾನು ಎಲ್ಲ ಬಗೆಯ ಒಳಿತು ಕೆಡಕು ಕರ್ಮಗಳನ್ನು ಮಾಡಿದ್ದರಿಂದ ನನ್ನ ಅಂತಃಪ್ರಜ್ಞೆಯು ಮಲಿನವಾಗಿರುವುದು-ಮಸಕಾಗಿರುವುದು. ಅದರ ಮೂಲಸ್ವರೂಪವನ್ನು ಕಾಣಿಸಯ್ಯ!' ಇದು ವಿಜಯದಾಸರ ಮೊದಲನೆಯ ಬೇಡಿಕೆ. 'ಅಂತರಂಗದ

ಏಕಾಂತ ಭಜನೆಗಾಗಿ' ನನಗೆ ಸಂತರ ಸಂಗವ ದಯಪಾಲಿಸು! ಎಂಬುದು ದಾಸರ ಎರಡನೆಯ ಬೇಡಿಕೆ. ನಿಮ್ಮಂತರಂಗದಲ್ಲಿ ಭಗವಂತನ ಧ್ಯಾನವು ಉತ್ಕಟವಾಗಿ ನಡೆಯಬೇಕಾದರೆ, ನೀವು ಸಂತರ ಸಹವಾಸವನ್ನು ಪಡೆಯಲೇಬೇಕು. ಮನುಜನು ಮಾಡಬಲ್ಲ ಎಲ್ಲ ಕರ್ಮಗಳಲ್ಲಿ ಉತ್ಕಟ ಧ್ಯಾನವೇ ಉನ್ನತವಾದುದಿರುವುದು. ಆದರೆ ಅದು ಸಂತರ ಸಂಗದ ಹೊರತು ಸರಿಯಾಗಿ ನೆರವೇರಿಸಲು ಬರಲರಿಯದು. 'ಅಯ್ಯ ಭಗವಂತನೇ! ನೀನು ನನ್ನನ್ನು ಕರುಣಿಸುವವನಿದ್ದರೆ, ನನಗೆ ನಿನ್ನ ಪಾದಾರವಿಂದವ ಕಾಣಿಸು–ಪದಾಬ್ಜ ತೋರು' ಎಂಬುದು ದಾಸರ ಮೂರನೆಯ ಬೇಡಿಕೆ. ಇದೊಂದು ಬಲು ಮಹತ್ವದ ಮಾತು. ಯಾಕಂದರೆ, ತುಕಾರಾಮರ ಜೀವನದಲ್ಲಿ ಒದಗಿದಂತೆ ಭಗವಂತನ ಪಾದಗಳ ದರ್ಶನವು ಮನುಜರಿಗೆ ಅವರ ಪಾರಮಾರ್ಥಿಕ ಜೀವನದ ಕೊನೆಯ ಭಾಗದಲ್ಲಿ ಲಭಿಸುವುದು. ಪುರಂದರದಾಸರ ಜೀವನದಲ್ಲಿಯೂ ನಾವು ಇದೇ ಅನುಭವವನ್ನು ಕಾಣುವೆವು. ಅವರು ಭಗವಂತನ ಬಣ್ಣನೆಯನ್ನು ಮಸ್ತಕದಿಂದ ಆರಂಭಿಸಿ, ಚರಣಗಳ ಬಣ್ಣನೆಯಿಂದ ಅದನ್ನು ಕೊನೆ ಗೊಳಿಸಿರುವರು. ಮೊದಲು 'ಮಸ್ತಕದಲಿ ಮಾಣಿಕದ ಕಿರೀಟ' ಎಂದು ಹೇಳಿ ಕೊನೆಗೆ ಅವರು 'ಕಡಗ, ನೂಪುರ ಗೆಜ್ಜೆಗಳನಿಟ್ಟ ಚರಣ' ಎಂದು ವರ್ಣಿಸಿರುವರು. ಈ ಅನುಭವವು ಮನುಜನ ಪಾರಮಾರ್ಥಿಕ ಅನುಭವದ ಪರಿಣತಿ ಎಂದು ಎಣಿಸಲಾಗಿರುವುದು. ವಿಜಯದಾಸರು ಈ ಅನುಭವವನ್ನು ನೀಡಲು ಭಗವಂತ ನನ್ನು ಪ್ರಾರ್ಥಿಸಿರುವರು.

ಇದಾದ ಮೇಲೆ ನಾನು ಮಹಿಪತಿದಾಸರ 'ಎಲ್ಲಿದ್ಯೋ ಹರಿ ಹೇಳಯ್ಯ!' ಎಂಬ ಪದವನ್ನು ವಿವರಿಸಲು ಪ್ರಾರಂಭಿಸುವೆ. ಕಾಖಂಡಿಕಿಯ ಈ ಹಿರಿಯ ಸಂತರ ಪರಿಚಯವು ಕನ್ನಡ ನಾಡಿಗೆ ಇನ್ನೂ ಸಾಕಷ್ಟು ಆಗಿರುವುದಿಲ್ಲ. ಅವರ ಸಾಹಿತ್ಯವು ಇನ್ನೂ ಅಪ್ರಕಾಶಿತವಾಗಿಯೆ ಉಳಿದಿರುವುದು. ಆದರೆ ಅದು ಪ್ರಕಾಶಿತವಾಗಲು ಅತ್ಯಂತ ಯೋಗ್ಯತೆಯುಳ್ಳದ್ದಿರುವುದು. ಮಹಿಪತಿದಾಸರ ಪದಗಳೆಲ್ಲ ತುಂಬ ಅಂದವಾದವುಗಳು. ಮಹಿಪತಿ ಎಂಬ ಹೆಸರಿನಲ್ಲಿಯೆ ಒಂದು ಬಗೆಯ ಮೋಹಕತೆ ನೆಲೆಸಿರುವುದು ಒಂದು ವಿಲಕ್ಷಣ ಸಂಗತಿಯೆ ಸರಿ. ಕನ್ನಡ, ಹಿಂದಿ, ಮರಾಠಿ ನುಡಿಗಳಲ್ಲಿ–ವಿಶೇಷವಾಗಿ ಕನ್ನಡದಲ್ಲಿ–ಪಾರಂಗತರಾದ ಈ ಕನ್ನಡ ಮಹಿಪತಿಯವರ ಹೆಸರಿನಲ್ಲಷ್ಟೇ ಮೋಹಕತೆ ಇರುವದೆಂದಲ್ಲ. ಪೈಠಣವೆಂಬ ಗ್ರಾಮದಲ್ಲಿ ಇದ್ದು, ಮುಂದೆ ಇಂದೂರಿಗೆ ತೆರಳಿ, ಕೊನೆಗೆ ವಾಲ್ಹೇರದಲ್ಲಿ ದೇಹವಿಟ್ಟ ಬೇರೊಬ್ಬ ಮಹಿಪತಿಯವರ ಹೆಸರಿನಲ್ಲಿಯೂ ಅಂಥ ಮೋಹಕತೆಯು ನೆಲೆಸಿ ರುವುದು. ಅವರೂ ಓರ್ವ ಹಿರಿಯ ಮಹಾತ್ಮರು. ಮರಾಠಿಯಲ್ಲಿಯೂ, ಹಿಂದಿ ಯಲ್ಲಿಯೂ ಪದ್ಯರಚನೆಯನ್ನು ಮಾಡಿದ ಕವಿಯು. 'ರಾಮವಿಜಯ' ಮತ್ತು 'ಭಕ್ತಿವಿಜಯ' ಎಂಬ ಹೊತ್ತಿಗೆಗಳನ್ನು ಮರಾಠಿಯಲ್ಲಿ ಬರೆದ ಮೂರನೆಯ ಮಹಿಪತಿಯೆಂಬ ಹೆಸರಿನ ಕವಿಯಿರುವರು. ಈ ಮೂವರಲ್ಲಿ ಗೊಂದಲಮಾಡಿ

ಕೊಳ್ಳಬಾರದು. ಪುರಂದರದಾಸ-ವಿಜಯದಾಸರ ಬಗ್ಗೆ ಸಾಕಷ್ಟು ಪರಿಚಯವಿರುವ ಅನೇಕ ಜನರಿರುವರು. ಆದರೆ ಕಾಖಂಡಿಕಿಯ ಮಹಿಪತಿದಾಸರ ಪರಿಚಯ ವಿರುವವರು ತೀರವಿರಳ. ಅವರ ಪದವನ್ನೆ ನಾನೀಗ ವಿವರಿಸಲಿರುವೆ. ತಾವು ಪಾರಮಾರ್ಥಿಕ ಜೀವನವನ್ನು ಪ್ರಾರಂಭಿಸಿದ ಬಗೆಯನ್ನೂ ಅದರಲ್ಲಿ ತಾವು ಅನುಭವಿಸಬೇಕಾದ ತೊಂದರೆಗಳನ್ನೂ ಮತ್ತು ಕೊನೆಗೆ ಭಗವಂತನು ತನ್ನ ದರ್ಶನದಿಂದ ತಮ್ಮ ಪ್ರಯತ್ನಗಳಿಗೆ ಸಲ್ಲಿಸಿದ ಪಾರಿತೋಷಕವನ್ನೂ- ಈ ಎಲ್ಲ ಇತಿಹಾಸವನ್ನು ಮಹಿಪತಿದಾಸರು ಈ ಪದದಲ್ಲಿ ಕಿರಿದರಲ್ಲಿ ಅರುಹಿರುವರು. ಇದೀಗ ವಿವರಿಸಲಾದ ವಿಜಯದಾಸರ ಪದದಂತೆ, ಈ ಪದವೂ ನಿಜವಾಗಿ ಒಂದು ಬಗೆಯ ಆತ್ಮಚರಿತ್ರಾತ್ಮಕ ಕವನವೇ ಇರುವುದು. ಇದರಲ್ಲಿ ದಾಸರು ಅರುಹಿದ ಮೊದಲನೆಯ ಮಾತು ಏನೆಂದರೆ: "ಅಯ್ಯ ಹರಿಯೆ! ನಿನನ ಕಾಣ್ಕೆ-ಕಾಣದಿರುವೆಗಳೆರಡೂ ನನ್ನ ಅರಿವಿನ ಆಳವನ್ನು ಮೀರಿರುವವು. ನೀನು ಕಾಣುವುದೆಂತು ಕಾಣದಿರುವದೆಂತು ಎಂಬುದನ್ನು ನಾನು ಅರಿಯೆ. ಅವು ನನಗೆ ಹಿರಿಯ ಸಮಸ್ಯೆಗಳಾಗಿವೆ. ಅವು ನಿನ್ನ ಲೀಲೆಯ ಫಲವೆಂಬುದರಲ್ಲಿ ಸಂದೇಹವಿಲ್ಲ. ಆದರೆ ನನ್ನ ದುರ್ಬಲ ಬುದ್ಧಿಯು ನಿನ್ನ ದರ್ಶನ-ಅದರ್ಶನಗಳೆರಡರ ರಹಸ್ಯ ವನ್ನು ಅರಿಯಲು ಅಸಮರ್ಥವಾಗಿರುವದು" ಎರಡನೆಯದಾಗಿ ಅವರು ಹೇಳುವು ದೇನೆಂದರೆ: "ನಾನು ಅಸಂಖ್ಯ ಜನ್ಮಮರಣಗಳ ಚಕ್ರದಲ್ಲಿ ತಿರುಗಿದೆ. ಆದರೂ ನಿನ್ನ ಅಸ್ತಿತ್ವದ ರಹಸ್ಯವನ್ನು ಅರಿಯಲು ಸಮರ್ಥನಾಗಲಿಲ್ಲ. ನಿನ್ನ ನಿಜನೆಲೆಯನ್ನು ನಿಲುಕರಿಯದವನಾದೆ. ಕೊನೆಗೂ ನಿನ್ನ ಪರಿಚಯವು ನನಗೆ ಅಸಾಧ್ಯವಾಗಿ ರುವುದು." ದಾಸರು ಮತ್ತೂ ಹೇಳುವದೇನೆಂದರೆ "ಈ ತೊಡಕುಗಳಿಂದ ಪಾರಾಗಿ ನಾನು ಮೇಲಕ್ಕೆ ಏರಲು ಮೂರು ಮಾತುಗಳನ್ನು ಮಾಡಿದೆ. ಮೊದಲು ನಾನು ನಾಲ್ಕು-ಆರು-ಹದಿನೆಂಟು ಜನರ್ನು ಕೇಳಿದೆ. ಆದರೆ ಅವರಿಂದ ಉತ್ತರವೇ ದೊರೆಯಲಿಲ್ಲ. ಒಂದು ಬಗೆಯಾಗಿ ನೀನು ದೊರೆಯಲರಿಯೆ ಎಂಬುದನ್ನೆ ಅವರು ಅರುಹಿದರು. ಈ ನಾಲ್ಕು-ಆರು-ಹದಿನೆಂಟು ಮಂದಿ ಯಾರು ಎಂಬುದನ್ನು ಎಲ್ಲರೂ ಬಲ್ಲರು. ನಾಲ್ಕು ವೇದಗಳು, ಆರು ಶಾಸ್ತ್ರಗಳು, ಹದಿನೆಂಟು ಪುರಾಣಗಳು. ಅವೆಲ್ಲವುಗಳಲ್ಲಿ ನಾನು ನಿನ್ನನ್ನು ಅರಿಸಿದೆ. ಆದರೆ ಅದಕ್ಕೆ ಯಾವ ಬಗೆಯ ಫಲವೂ ದೊರೆಯಲಿಲ್ಲ. ತರುವಾಯ, ನಾನು ಅನುಸರಿಸಬಾರದವರನ್ನು ಅನುಸರಿಸಿದೆ. ಬೀಳಬಾರದವರ ಪಾದಗಳ ಮೇಲೆ ಬಿದ್ದೆ. ಅವರು ನನ್ನ ಈ ಅಡಚಣೆಯಲ್ಲಿ ಸರಿಯಾದ ದಾರಿಯನ್ನು ಕಾಣಿಸಬಹುದೆಂದು ಬಗೆದೆ. ಆದರೆ ಅವರು ನನಗೆ ನಿನ್ನ ರಹಸ್ಯವನ್ನು ಅರುಹಲು ಎಳ್ಳಷ್ಟೂ ಸಮರ್ಥರಾಗಲಿಲ್ಲ. ಅವರಿಂದ ನಿನ್ನ ಇರವಿನ ಸುಳುವು ಕೂಡ ನನಗೆ ಕಾಣಲಿಲ್ಲ." ದಾಸರು ಅರುಹುವ ಮೂರನೆಯ ಮಾತು ಇದು: "ನಾನು ನನ್ನ ಶರೀರವನ್ನು ಚಿತ್ರಹಿಂಸೆಗೆ ಗುರಿಮಾಡಿದೆ. ನಾನು ನನ್ನ ತಲೆಯನ್ನು ಕೆಳಕ್ಕೆ ಜೋತು ಬಿಟ್ಟು, ಘೋರ ತಪಸ್ಸನ್ನು

ಆಚರಿಸಿದೆ." ಆದರೆ ಇದು ನಮ್ಮ ಪ್ರಧಾನ ಮಂತ್ರಿಗಳು ದಿನಾಲು ಹಾಕುತ್ತಿರುವರೆಂದು ಪ್ರಸಿದ್ಧಿಯನ್ನು ಪಡೆದ ಯೋಗಶಾಸ್ತ್ರದ ಶೀರ್ಷಾನವಲ್ಲ ಎಂಬುದನ್ನು ಗಮನಿಸಬೇಕು. ನಾನಿದನ್ನು ಅಲಹಾಬಾದನಲ್ಲಿ ಕ್ರಿ.ಶ. ೧೯೩೦ರ ಕುಂಭಮೇಳದ ಸಮಯಕ್ಕೆ ಕಂಡೆ. ಒಬ್ಬ ಸನ್ಯಾಸಿಯು ತನ್ನ ಕಾಲಿಗೆ ಹಗ್ಗವನ್ನು ಕಟ್ಟಿಕೊಂಡು, ಅದನ್ನು ಬಲು ಎತ್ತರವಾದ ಅಡ್ಡ ಕಟ್ಟಿಗೆಯೊಂದಕ್ಕೆ ಕಟ್ಟಿ, ತಾನು ತಲೆ ಕೆಳಗೆ ಮಾಡಿ ಅದಕ್ಕೆ ಜೋತು ಬಿದ್ದನು. ಈ ಸ್ಥಿತಿಯಲ್ಲಿ ಅವನು ಮೂರು ದಿನ ಇದ್ದನು. ಈ ಅವಸ್ಥೆಯಲ್ಲಿ ಮೂರು ದಿನ ಇರುವುದು ಸಾಧ್ಯವೇ ಎಂಬುದನ್ನು ಡಾಕ್ಟರರೇ ನಿರ್ಣಯಿಸಬಲ್ಲರು. ನಾನೀ ವಿಷಯವನ್ನು ಅವರ ನಿರ್ಣಯಕ್ಕೆ ಒಪ್ಪಿಸುವೆನು. "ಈ ಸ್ಥಿತಿಯಲ್ಲಿ ನಾನು ಧ್ಯಾನ ಮಾಡಿದೆ. ದೇಹವನ್ನು ದಂಡಿಸಿದೆ. ಆದರೆ ಭಗವಂತನೇನೂ ಅದರಿಂದ ದೊರೆಯಲಿಲ್ಲ," ಎಂದು ಮಹಿಪತಿಯವರು ಹೇಳಿರುವರು.

ಕೊನೆಗೆ ಮಹಿಪತಿಯವರು ಹೇಳುತ್ತಾರೆ: "ಆದರೆ, ಹರಿಯೇ! ಒಮ್ಮೆಲೆ ಏನಾಯಿತೆಂಬುದನ್ನು ನಾನರಿಯೆ. ನೀನು ಕರುಣಾಪೂರ್ಣನಾಗಿ ಮುಂದಿನ ಐದು ಸಂಗತಿಗಳನ್ನು ಮಾಡಿದಿ. ಮೊದಲು ನೀನು ಎನ್ನೆದುರು ಕಾಣಿಸಿಕೊಂಡು ಬಡವನಾದ ನನ್ನ ಕೈಯನ್ನು ಪಿಡಿದಿ. ಎರಡನೆಯದಾಗಿ, ನೀನು ನನ್ನ ಮನಸ್ಸನ್ನು ಮೇಲಕ್ಕೆತ್ತಿ ಅದನ್ನು ಉನ್ಮನೀ ಅವಸ್ಥೆಯಲ್ಲಿ ಇರಿಸಿದಿ. ಮೂರನೆಯದಾಗಿ ನೀನು ನನ್ನ ಪಾರಮಾರ್ಥಿಕ ಕಂಗಳನ್ನು ತೆರೆದಿ. ಅದರ ಮೂಲಕ ಜನರು ಕಾಣಲರಿಯದ ಒಡವೆಗಳನ್ನು ನಾನು ಕಾಣಬಲ್ಲವನಾದೆ. ನಾಲ್ಕನೆಯದಾಗಿ, ನಾನು ಸವಿಯಬೇಕೆಂದು ನನ್ನೆದುರು ದಿವ್ಯ ಅಮೀರಸದ ಎಡೆಯನ್ನು ಬಡಿಸಿದೆ. ಕೊನೆಯದಾಗಿ, ಇವುಗಳ ಮುಖಾಂತರ, ನೀನು ಮಹಿಪತಿಯನ್ನು ಅನುದಿನ ಘನಸುಖದಲ್ಲಿ ಇರಿಸಿದಿ: ಇದೊಂದು ಮಹಿಪತಿರಾಯರ ಅತಿ ಅಂದವಾದ ಪದ. ಇಲ್ಲಿ ಅವರು ತಮ್ಮ ಸಾಧಕ ಜೀವನದ ಇತಿಹಾಸವನ್ನೆ ಅರುಹಿರುವರು. ಸಾಧಕನು ಎಲ್ಲ ಪಾರಮಾರ್ಥಿಕ ಪ್ರೇರಣೆಗಳ ಹಾಗೂ ಆಕಾಂಕ್ಷೆಗಳ ಒಳಗಿಂದ ಹಾದುಹೋಗಿ ಅವುಗಳ ಪರಿಪೂರ್ಣತೆಯನ್ನು ಹೇಗೆ ಪಡೆಯುವನು ಎಂಬುದನ್ನು ಕಾಣಿಸುವ ಅತ್ಯುತ್ತಮ ಉದಾಹರಣೆಗಳಲ್ಲಿ ಇದೊಂದು ಎನ್ನಲು ಅಡ್ಡಿಯಿಲ್ಲ.

■■

ಪ್ರಕರಣ ನಾಲ್ಕು

ನೈತಿಕ ಸಿದ್ಧತೆ

ಕಳೆದ ಎರಡು ಪ್ರಕರಣಗಳಲ್ಲಿ ನಾವು ಬೇರೆ ಬೇರೆ ಪರಮಾರ್ಥ ಪ್ರೇರಣೆಗಳನ್ನೂ ಅವುಗಳ ಪರಿಣತಿಯನ್ನು ವಿವರಿಸಿದೆವು. ಈ ಪ್ರಕರಣದಲ್ಲಿ ನಾನು ಸಾಧಕನಿಗೆ ಅವಶ್ಯವಿರುವ ನೈತಿಕ ಸಿದ್ಧತೆಯನ್ನು ವಿವರಿಸಲಿರುವೆ. ಈ ನೈತಿಕ ಸಿದ್ಧತೆಯು ಕೇವಲ ಪಾರಮಾರ್ಥಿಕ ಜೀವನದ ಪ್ರವೇಶಕ್ಕಾಗಿಯಷ್ಟೇ ಅಲ್ಲದೆ ಅದರ ಬೆಳವಣಿಗೆಗಾಗಿಯೂ, ಕೊನೆಗೆ ಅದರಲ್ಲಿಯ ಪೂರ್ಣತೆಯ ಪ್ರಾಪ್ತಿಗಾಗಿಯೂ ತುಂಬ ಅವಶ್ಯವಿರುವುದು. ಇಲ್ಲಿ ವ್ಯಾವಹಾರಿಕ ನೀತಿಶಾಸ್ತ್ರದ ಒಂದು ಹಿರಿದಾದ ಸಮಸ್ಯೆಯು ಕೂಡ ನಮ್ಮನ್ನು ಎದುರಿಸುವುದು; ಮತ್ತು ನಾವದನ್ನು ಹಿಂದೂ ದೃಷ್ಟಿಯಿಂದ ಹಾಗೂ ಯುರೋಪದ ನೀತಿಶಾಸ್ತ್ರಗಳ ದೃಷ್ಟಿಯಿಂದ ವಿಚಾರಿಸ ಬೇಕಾಗುವುದು. ಆದರೆ ನಾವು ಪರಮಾರ್ಥ ಪಥದಲ್ಲಿ ಅಡಿಯಿಡುವ ಇಲ್ಲವೆ ಕೆಲಮಟ್ಟಿಗೆ ಪ್ರಗತಿಯನ್ನು ಸಾಧಿಸುವ ಪೂರ್ವದಲ್ಲಿ, ಹಿರಿಯ ಕನ್ನಡ ಸಂತರು ಉಪದೇಶಿಸಿದ ಮೇರೆಗೆ, ನಾವು ಮಾಡಲೇಬೇಕಾದ ನೈತಿಕ ಸಿದ್ಧತೆಯ ಅಂಶಗಳನ್ನಷ್ಟೇ ನಾವೀಗ ವಿಚಾರಿಸಲಿರುವೆವು. ನಾನಿಂದು ವಿವರಿಸಬಯಸುವ ಆರು ಪದಗಳ ಕರ್ತರು,–ಪುರಂದರದಾಸರು, ಗುರುಸಿದ್ಧರು, ಕೂಡಲೂರೇಶರು, ಹಾಗೂ ನಿರುಪಾಧಿಸಿದ್ಧರು. ನಾನು ನಿಂಬರಗಿ ಮಹಾರಾಜರವರ ಒಂದು ಪದವನ್ನೂ ತೆಗೆದುಕೊಂಡಿರುವೆ. ಅವರು ಸುಮಾರು ಹನ್ನೆರಡು ಪದಗಳನ್ನು ಬರೆದಿರುವರು. ಅವೆಲ್ಲ ತುಂಬ ಅಂದವಾದವುಗಳು. ನಾನು ನಿರುಪಾಧಿಸಿದ್ಧರ ಎರಡು ಪದಗಳನ್ನೂ, ಕೂಡಲೂರೇಶರ ಒಂದು ಪದವನ್ನೂ ತೆಗೆದುಕೊಂಡಿರುವೆ. ನಮ್ಮ ಪಾರಮಾರ್ಥಿಕ ಬೆಳವಣಿಗೆಯಾಗಬೇಕಾದರೆ, ನಾವು ನಮ್ಮ ಬಾಳನ್ನು ಸರಿಯಾಗಿ ಬಳಸುವದೆಂತು ಎಂಬುದೇ ಈ ಪ್ರಕರಣದಲ್ಲಿ ನಾನೀಗ ಚರ್ಚಿಸಲಿರುವ ವಿಷಯ. ಪುರಂದರದಾಸರ 'ಮಾನವ ಜನ್ಮ ದೊಡ್ಡದು' ಎಂಬ ಪದದಲ್ಲಿ ಸೂಚಿಸಲಾದ ಈ ವಿಷಯವನ್ನೆ ನಾನು ಮೊದಲು ತೆಗೆದುಕೊಳ್ಳುವೆ.

ಪುರಂದರದಾಸರು ನಮಗೆ ನಮ್ಮ ಇಂದ್ರಿಯಗಳನ್ನು ನಿಯಂತ್ರಿಸಲು ಹೇಳುವರು; ಮತ್ತು ಅವನ್ನು ಜಾಗತಿಕಸುಖೋಪಭೋಗಕ್ಕಾಗಿ ಬಳಸದೆ, ಭಗವಂತನ ಸೇವೆಯಲ್ಲಿ ಉಪಯೋಗಿಸಲು ಬೋಧಿಸುವರು. ಅಂದರೆ ನಾವು ಭಗವಂತನ ಕರುಣದಿಂದ ಆತನ ನಾಮಾಮೃತವನ್ನು ಸವಿಯಬಹುದು. ಕಾಲನ ದೂತರು

ಇಲ್ಲಿಂದ ನಮ್ಮನ್ನು ಎಳೆದೊಯ್ಯಲು ಬಂದಾಗ, ಯಾವ ಆಪ್ತರೂ, ಈ ಪ್ರಪಂಚದಲ್ಲಿಯ ಯಾವ ಒಡವೆಯೂ ನಮ್ಮನ್ನು ಅವರಿಂದ ಕಾಪಾಡಲರಿಯದು. ಆದುದರಿಂದ ಅವರೀ ದಾಳಿ ಬಾರದ ಮುನ್ನ ನಾವು ಪರಮಾರ್ಥವನ್ನು ದೃಢವಾಗಿ ನೆಮ್ಮಬೇಕು-ಆಶ್ರಯಿಸಬೇಕು. ಪರಮಾರ್ಥಸಾಧನವನ್ನು ಕೂಡಲೇ ಪ್ರಾರಂಭಿಸಲು ದಾಸರಾಯರು ನಮಗೆ ಆಗ್ರಹಪೂರ್ವಕ ಹೇಳಿರುವರು. ಯಾಕಂದರೆ ತಿದ್ದಿಕೊಳ್ಳಲು ಎಂದೂ ಕಾಲ ಮೀರಿ ಹೋಗದು. ನಮ್ಮನ್ನು ನಾವು ಸುಧಾರಿಸಿಕೊಳ್ಳಲು ಎಲ್ಲ ಕಾಲವೂ ಸಕಾಲವೇ-ಸುಕಾಲವೇ ಇರುವುದು. ನಿಂಬರಗಿ ಮಹಾರಾಜರವರ ಎರಡನೆಯ ಪದದಲ್ಲಿ ಮನಸ್ಸಿನ ಮುರಿಗೆಗಳನ್ನು ಕಳೆದು ಅದನ್ನು ಸರಲ ಮಾಡಲು ಭಗವಂತನನ್ನು ಅನನ್ಯಭಾವದಿಂದ ಪ್ರಾರ್ಥಿಸಲಾಗಿ ರುವುದು. ನಮ್ಮ ಮನಸ್ಸು ಸ್ವಭಾವತಃ ವಕ್ರವಾದುದು. ಅದು ಸಜ್ಜನರನ್ನು ನಿಂದಿಸುವುದು; ಬಲ್ಲಿದರನ್ನು ಹೊಗಳುವುದು; ಬಡವರನ್ನು ತೆಗಳುವುದು. ಅದು ಒಳ್ಳೆಯ ಮಾತು ಗಳನ್ನು ಬಯಸುವುದು; ಆದರೆ ದುಷ್ಕರ್ಮಗಳನ್ನು ಮಾಡುವುದು. ಆದುದರಿಂದ, ಕಾಶಿಯ ಯಾತ್ರೆಗಾಗಿ ತೆರಳಬೇಕೆಂಬ ಪುಣ್ಯಸಂಕಲ್ಪವನ್ನು ಮಾಡಿ, ಅದು ದಾರಿಯಲ್ಲಿ ವೇಶ್ಯೆಯ ಮೋಹಜಾಲದಲ್ಲಿ ಸಿಲುಕುವುದು. ಭಗವಂತನನ್ನೂ ಮರೆಯುವುದು. ಸದ್ಗುರುಗಳ ಪಾವನ ಚರಣಗಳನ್ನು ತೊರೆದು, ಅಡವಿಯಲ್ಲಿ ಅಲೆದಾಡುವುದು. ಅದರ ಫಲವಾಗಿ, ಮರಣವು ಸಮೀಪಿಸಿದಾಗ, ಭಗವಂತನ ನ್ನುಳಿದು ಅದರ ಮರಣ ದುಃಖವನ್ನು ಕಳೆಯುವವರು ಬೇರಾರೂ ಇಲ್ಲದ್ದರಿಂದ ಅದು ತುಂಬ ಪರಿತಪಿಸುವುದು; ಹಾಗೂ ಅಸಹಾಯಕತೆಯಿಂದಲೂ, ವ್ಯಸನ ದಿಂದಲೂ ತುಂಬ ಬಳಲುವುದು. ನಿರುಪಾಧಿಸಿದ್ಧರ ಮುಂದಿನ ಪದವು ನಾಲಿಗೆ ಯನ್ನು ಸಂಬೋಧಿಸಿದುದು. ಅದರಲ್ಲಿ ಅವರು ತಮ್ಮ ನಾಲಿಗೆಗೆ-ಮೌನವನ್ನು ತಳೆಯಲು ಅರಿಕೆ ಮಾಡಿಕೊಂಡಿರುವರು. ಆದರೆ ಈ ಮೌನದ ಬಗೆಗೆ ಅಭಿಮಾನ ವನ್ನು ತಳೆಯದಿರಲು ಬಿನ್ನವಿಸಿರುವರು. ಅವರು ಮತ್ತೂ ಹೇಳುವದೇನೆಂದರೆ: ಕೋಪದವರ ಕೂಡ ಸಹವಾಸ ಮಾಡಬಾರದು. ಶಾಂತಗುರುವನು ಹೊಂದಿ ಶಾಂತಗಣದೊಳಗಾಡಿದರೇನೇ ಈ 'ಶಾಂತಿ'ಗುಣವು ಕೈವಶವಾಗುವುದು. ಅವರು ನಿಜವಾಗಿ ಶಾಂತಿಯಮೂರ್ತಿಗಳು. ತರುವಾಯ ಅವರು, ಪರಮಾರ್ಥ ಸೋಪಾನ ವನ್ನೇರಿ, ಪರಮಾತ್ಮನ ನಾಮವನ್ನು ಸಂತತವಾಗಿ, ಶಾಂತವಾಗಿ ನೆನೆದು, ಪರಮಾತ್ಮ-ಸಾಕ್ಷಾತ್ಕಾರದ ಅತೀಂದ್ರಿಯ ಪರತರಾನಂದವನ್ನು ಸೇವಿಸಲು ನಾಲಿಗೆಗೆ ಹೇಳಿರುವರು. ಈ ಶಾಂತಿಯು ಪರಬ್ರಹ್ಮನ ಕಾಂತಿಯಲ್ಲಿ ಮುಳುಗಲು ಹಾಗೂ ತಾನೆ ಸರ್ವಾಂತ ರ್ಯಾಮಿಯಾದ ಚಿದ್ರೂಪವಾಗಲು-ಬ್ರಹ್ಮನಾಗಲು-ನೆರವಾಗುವುದು.ಗುರುಸಿದ್ಧರ (ಸರ್ಪಭೂಷಣರ) ಮುಂದಿನ ಪದದಲ್ಲಿ ಒಂದು ಪರಂಪರಿತ ಕೃಷಿರೂಪಕ ವಿರುವುದು. ಅದರಲ್ಲಿ ಸಾಕ್ಷಾತ್ಕಾರದ ಪೈರನ್ನು ಬೆಳೆಯುವ ಬಗೆಯನ್ನು ಅರುಹಲಾಗಿದೆ.

ಮಾನವನ ಶರೀರವೇ ಹೊಲವು. ಅದನ್ನು ಶಮೆ-ದಮೆಗಳೆಂಬ ಎತ್ತುಗಳ ನೆರವಿನಿಂದ ಕೃಷಿ ಮಾಡಬೇಕು. ಮಮಕಾರದ ಕರಿಕೆಯನ್ನು ಕಳೆಯಬೇಕು. ಸಮತೆಯ ಗೊಬ್ಬರವನ್ನು ಹೊಲದಲ್ಲೆಲ್ಲ ಸಮನಾಗಿ ಪಸರಿಸಬೇಕು. ಹೊಲವನ್ನೆಲ್ಲ ಪೂರ್ತಿಯಾಗಿ ಸಮತಲ ಮಾಡಬೇಕು. ತರುವಾಯ ಅದರಲ್ಲಿ ಸದ್ಗುರುವಿನ ಉಪದೇಶವೆಂಬ ಬೀಜವನ್ನು ಬಿತ್ತಬೇಕು. ಸತ್ಕರ್ಮಜನಿತ ಸಂಸ್ಕಾರಗಳ ಮಳೆಯನ್ನು ಕರೆದು, ಹೊಲಕ್ಕೆ ನೀರನ್ನು ಉಣಿಸಬೇಕು; ಮತ್ತು ದುರ್ಗುಣಗಳ ಕಳೆಗಳನ್ನು ಕಿತ್ತೆಸೆಯಬೇಕು. ಇದರಿಂದ ನಮಗೆ ಸ್ಥಿರಮುಕ್ತಿಯೆಂಬ ಧಾನ್ಯದ ಹುಲುಸಾದ ಬೆಳೆಯು ಲಭಿಸುವುದು; ಮತ್ತು ಭವವೆಂಬ ಬರವನ್ನು ತನ್ನ ಸೀಮೆಗೆ ಕಳುಹಲು ಅನುಕೂಲವಾಗುವುದು. ಮುಂಬರುವ ನಿರುಪಾಧಿಸಿದ್ಧರ ಎರಡನೆಯ ಪದದಲ್ಲಿ, ಸಾಧಕನು ಸದ್ಗುರುವಿನೆಡೆ ಅನುಗ್ರಹಕ್ಕಾಗಿ ಮೊದಲ ಸಲ ಬಂದಾಗ ಅವನ ಅಂತರಂಗದಲ್ಲಿ ಮೊಳೆತ ಭಕ್ತಿಭಾವವು, ಹಾಗೆಯೆ ಸ್ವಲ್ಪ ಕೂಡ ಬದಲಾಗದಂತೆ ನೋಡಿಕೊಳ್ಳಲು ಕವಿಯು ಅವನಿಗೆ ಒತ್ತಾಯಪಡಿಸಿರುವನು. ಸಾಧಕನು ತನ್ನ ಪರಮಾರ್ಥದಲ್ಲಿಯ ಎಲ್ಲ ಸಂದೇಹಗಳನ್ನೂ, ವಿಕಲ್ಪಗಳನ್ನೂ ಗುರುವಿನಿಂದ ಪರಿಹರಿಸಿಕೊಳ್ಳಬೇಕು. ಅವನು ಪರಮಾತ್ಮನ ಸೂಕ್ಷ್ಮ ಸುಳುವುಗಳನ್ನು ಅರಿಯಬೇಕು ಮತ್ತು ತನ್ನ ಪಾರಮಾರ್ಥಿಕ ಅನುಭವಗಳ ಪರಿಣಾಮವು ನಾಭಿಕಮಲದ ಮೇಲೆಯೂ, ಸುಷುಮ್ನ-ಸಹಸ್ರಾರಗಳ ಮೇಲೆಯೂ ಎಂತಾಗುವದೆಂಬುದನ್ನು ನೋಡಿ, ಅವುಗಳ ಸತ್ಯತೆಯನ್ನು ಪರೀಕ್ಷಿಸಬೇಕು. ಅವನು ತನ್ನ ಗುರುಗಳಿಂದ ಶಾಶ್ವತವಾದ ನಿಜಸುಖದ ನಿಲಯನಾದ ನಿಷ್ಕಲಪರಮಾತ್ಮನನ್ನು ಸೇರುವ ಕೀಲನ್ನು ಅರಿಯಬೇಕು. ಈ ಪದಪುಂಜದ ಕೊನೆಯ ಪದವು ಕೂಡಲೂರೇಶನದು. ಅದು ನೈತಿಕ ಜೀವನದ ದಾರ್ಶನಿಕ ಆಲೋಚನೆಯನ್ನು ಒಳಗೊಂಡಿರುವುದು. ಅಜ್ಞಾನದ ಸಾಮರ್ಥ್ಯವು ತುಂಬ ಹಿರಿದಾದುದಿರುವುದರಿಂದ ಅದು ಮನುಜನ ನಿಜರೂಪ ವನ್ನು ಪೂರ್ತಿಯಾಗಿ ಮರೆಯಿಸಿಬಿಡುವುದು. ನಿಜವಾಗಿ ಭಗವಂತನ ಬೆಳಕು ಬ್ರಹ್ಮಾಂಡವನ್ನು ತುಂಬಿರುವದು. ಆದರೆ ಅಜ್ಞಾನದ ಕಾಳಕತ್ತಲೆಯು ಆತ್ಮನನ್ನು ಮುಸುಕಿರುವುದರಿಂದ ಅವನಿಗೆ ಆ ಬೆಳಕು ಕಾಣದಾಗಿದೆ. ಶ್ವಾನ-ಸೂಕರಗಳು ಮನೆಯಿಂದ ಮನೆಗೆ ತಿರುಗುವಂತೆ, ಮನುಜನು ಒಂದು ಜನ್ಮದಿಂದ ಇನ್ನೊಂದಕ್ಕೆ ತೆರಳುವನು. ಮರುಳತನದಿಂದ ಅವನು ಆತ್ಮನನ್ನು ಪಂಚಭೂತಗಳಿಂದ ಕೂಡಿದ ದೇಹವೆಂದು ಬಗೆವನು. ಅದರ ಮೂಲಕ ಮೋಹಿತನಾಗಿ, ಅವನು ಪರಮಾತ್ಮನೊಡನೆ ಇರುವ ತನ್ನ ಏಕತೆಯನ್ನು ಮರೆಯುವನು. ಪರಮಾತ್ಮರೂಪಿಯಾದ ಪರುಷವು ತನ್ನ ಅಂತರಂಗದಲ್ಲಿಯೆ ಇರುವುದು ಎಂಬುದನ್ನು ಅರಿಯದ ಅವನು ಬೇರೆಯ ವರಿಗೆ ಸೆರಗೊಡ್ಡಿ ಬೇಡಲು ಹೋಗುವನು. ಆದುದರಿಂದ ಕೂಡಲೂರೇಶನು ನಮಗೆಲ್ಲ ಈ ಮರೆವನ್ನು ತೊರೆದು, ಜೀವ-ಶಿವರ ಐಕ್ಯವನ್ನು ಅನುಭವಿಸಲು ಬೋಧಿಸುವನು.

'ಮಾನವಜನ್ಮ ದೊಡ್ಡದು' ಎಂಬ ಮೊದಲನೆಯ ಪದದಲ್ಲಿ ಪುರಂದರ ದಾಸರು, ಕಣ್ಣು, ಕೈ, ಕಾಲು, ಹಾಗೂ ಬೇರೆ ಇಂದ್ರಿಯಗಳನ್ನು ಭಗವಂತನ ಸೇವೆಯಲ್ಲಿ ಚೆನ್ನಾಗಿ ಬಳಸಲು ಬೋಧಿಸಿರುವರು. ಅಂದರೆ ಅವು ಭಗವಂತನ ದರ್ಶನ, ನಾದ, ಹಾಗೂ ಬೇರೆ ಅನುಭವಗಳನ್ನು ಪಡೆಯಬಲ್ಲವು ಎಂಬುದು ಅವರ ಹೇಳಿಕೆ. ಈ ಇಂದ್ರಿಯಗಳನ್ನು ಭಗವಂತನ ಸೇವೆಯಲ್ಲಿ ಬಳಸುವ ಸರಿಯಾದ ಬಗೆಯನ್ನು ಈ ಮೊದಲೇ ಹಿಂದಿನ ಒಂದು ಪ್ರಕರಣದಲ್ಲಿ ವಿವರವಾಗಿ ಅರುಹಲಾಗಿದೆ. ಆದುದರಿಂದ ಅದನ್ನು ಮರಳಿ ವಿವರಿಸಲು ನಾನು ಬಯಸುವದಿಲ್ಲ. ಯೌವನದಲ್ಲಿ ಇಂದ್ರಿಯಗಳು ಆರೋಗ್ಯಶಾಲಿಗಳೂ, ಬಲಶಾಲಿಗಳೂ ಇರುವಾಗ, ನಾವು ಹೆಣ್ಣು, ಹೊನ್ನನ್ನು ಮೆಚ್ಚಿ ಮರುಳಾಗಬಾರದು; ಮತ್ತು ಬರೀ ವಿಷಯಸುಖದ ಉಪಭೋಗದಲ್ಲಿ ಜೀವನವನ್ನು ಹಾಳುಮಾಡ ಬಾರದು. ಮಾನವ ಜೀವನದ ಪ್ರಧಾನ ಗುರಿಯಾದ ಹರಿನಾಮಾಮೃತವನ್ನು ಉಣ್ಣದಿರುವು ದೆಂದರೆ ಅದೊಂದು ಉಪವಾಸವೇ ಸರಿ! ಪುರಂದರದಾಸರು ಹೇಳುವ ಎರಡನೆಯ ಮಾತೆಂದರೆ: ಕಾಲನ ದೂತರು ಕರವಿಡಿದೆಳೆವಾಗ ತಾಳು ತಾಳೆಂದರೆ ತಾಳುವರೇ? ಆದುದರಿಂದ ಅವರ ದಾಳಿ ಬಾರದ ಮುನ್ನ, ಅದನ್ನು ತಡೆಯುವ ಪಾರಮಾರ್ಥಿಕ ಸಿದ್ಧತೆಯನ್ನು ನಾವು ಮಾಡಬೇಕು; ಮತ್ತು ಪರಮಾರ್ಥ ಪಥವನ್ನು ಸೇರಲು ನಿಶ್ಚಯಿಸಬೇಕು. 'ಇದೀಗ, ಐವತ್ತು ವರ್ಷಗಳ ಪೂರ್ವದಲ್ಲಿ ನಿಂಬಾಳದಲ್ಲಿ ಒದಗಿದ ಒಂದು ಸಂಗತಿಯು ಜ್ಞಾಪಕಕ್ಕೆ ಬರುವುದು. ನನಗಿದನ್ನು ಒಬ್ಬರು ನಿಶ್ಚಿತವಾಗಿ ಹೇಳಿದರು. ಅಲ್ಲಿಯ ನಾಡಗೌಡರಾದ ಬಾಬಾ ಸಾಹೇಬ ರೆಂಬವರು ಶ್ರೀ ಉಮದಿ ಮಹಾರಾಜರವರ ಶಿಷ್ಯರಿದ್ದರು. ಅವರು ತಮ್ಮ ಮರಣ ಸಮಯದಲ್ಲಿ ತಮ್ಮ ಆಪ್ತಬಾಂಧವರನ್ನು ಕರೆಯಿಸಿ, ಅವರಿಗೆ ಈ ರೀತಿ ಹೇಳಿದರು: "ಸರಿ! ನನ್ನೆದುರು ಜನರ ಎರಡು ಗುಂಪುಗಳನ್ನು ನಾನು ಕಾಣುತ್ತಿರುವೆ ;ಒಂದೆಡೆ ಯಮದೂತರಿದ್ದು ನನ್ನನ್ನು ತಮ್ಮೆಡೆ ಬರಲು ಸನ್ನೆ ಮಾಡುತ್ತಿರುವರು; ಇನ್ನೊಂದೆಡೆ ಉಮದಿಯ ಮಹಾರಾಜರವರು ತಮ್ಮ ಶಿಷ್ಯರಿಂದೊಡಗೂಡಿ ನಿಂತಿರುವರು ಹಾಗೂ ನನ್ನನ್ನು ತಮ್ಮೆಡೆ ಕರೆಯುತ್ತಿರುವರು. ಯಾರೆಡೆ ನಾನು ಹೋಗಲಿ?" ಆಮೇಲೆ ಕೆಲಕಾಲ ವಿಚಾರಿಸಿ, ಅವರು ತಮ್ಮ ನಿರ್ಣಯವನ್ನು ಈ ರೀತಿ ಅರುಹಿದರು. "ನಾನು ಯಮದೇವನೆಡೆ ಹೋಗದೆ, ಉಮದಿಯ ಮಹಾರಾಜರವರೆಡೆ ಹೋಗುವೆ" ಹೀಗಂದು, ಕೂಡಲೆ ಅವರು ತಮ್ಮ ದೇಹವನ್ನು ಬಿಟ್ಟರು. ಆದುದರಿಂದ ಮರಣದ ದಾಳಿಯು ಬರುವ ಮುನ್ನ ಅದನ್ನೆದುರಿಸಲು ನೀವು ಪಾರಮಾರ್ಥಿಕ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಯಾಕಂದರೆ, ಈ ಪ್ರಪಂಚವು ಸುಳಿಗಾಳಿಯಂತಿರುವುದು. 'ಸುಂಟರಗಾಳಿಯಂತಿದೆ' ಎಂಬ ಅದರ ಇನ್ನೊಂದು ಪಾಠಭೇದವಿರುವುದು. ಮರಣದ ದಾಳಿಯು ಸುಂಟರಗಾಳಿಯಂತೆ–ಬಿರುಗಾಳಿಯಂತೆ ಬರುವುದುಂಟು.

ಬಿರುಗಾಳಿಯಲ್ಲಿ ಜನರು ಸಿಲುಕಿದಾಗ, ಎಲ್ಲವೂ ಮೇಲಕ್ಕೆ ಹಾರಿಹೋಗುವುದು, ಎಲ್ಲವೂ ನಾಶಹೊಂದುವುದು. ಆದುದರಿಂದ ಈ ಬಿರುಗಾಳಿಯ ಆಕ್ರಮಣದ ಪೂರ್ವದಲ್ಲಿ, ನೀವು ಅದರಿಂದ ಸುತ್ತುವರಿಯಲ್ಪಡದಂತೆ ಎಚ್ಚರವಹಿಸಿರಿ. "ಏನು ಕಾರಣ ನಮ್ಮ ಯದುಪತಿಯ ಮರೆತಿರುವಿರಿ? ಎಂಥ ಮರುಳತನವಿದು? ಇಂಥ ಸಮಯದಲ್ಲಿ ಧನ-ಧಾನ್ಯ-ಪುತ್ರರು ನಿಮ್ಮನ್ನು ಕಾಯಬಲ್ಲರೇ ಆದುದರಿಂದ ಪರಮಾತ್ಮನನ್ನು ನೀವು ಅದೆಂದು ನೆನೆಯಲು ಪ್ರಾರಂಭಿಸುವುದು?" ಪುರಂದರ ದಾಸರು ಹೇಳುವುದೇನೆಂದರೆ: "ನೀವೀ ಪ್ರಶ್ನೆಯನ್ನೇ ಕೇಳಬಾರದು. ಈಗಾಗಲೇ ಪ್ರಾರಂಭಿಸಿರಿ. ಇನ್ನಾದರೂ ಏಕೋಭಾವದಿ ಪೂಜಿಸಿರಿ. ಭಜಿಸಿರಿ! ಈ ಕ್ಷಣದಿಂದ ಭಗವಂತನನ್ನು ಅನನ್ಯರಾಗಿ ಪ್ರಾರ್ಥಿಸಿರಿ; ತಡಮಾಡಬೇಡಿರಿ!" ಇದನ್ನು ಕಂಡೊಡನೆ, ಮುಂದಿನ ಇನ್ನೊಂದು ಹಿಂದೀ ಪದವು ಜ್ಞಾಪಕಕ್ಕೆ ಬರುವುದು. 'ಅಬ ಹೀ ನಹೀ ಬಿಘಡಾ ಹೈ ಕುಛ। ಥೋಡಾ ಸಮಯ ಬಾಕೀ ರಹಾ॥' 'ಇನ್ನೂ ಎಲ್ಲವೂ ಪೂರ್ತಿಯಾಗಿ ಕೆಟ್ಟಿರುವದಿಲ್ಲ। ನಿನಗಾಗಿ ಕೆಲ ಸಮಯವು ಇನ್ನೂ ಉಳಿದಿರುವುದು॥' ಇದೀಗ ನೀನು ಪರಮಾರ್ಥವನ್ನು ಪ್ರಾರಂಭಿಸಲು ಮನಸ್ಸು ಮಾಡಿದರೂ ದೇವತ್ವವನ್ನು ನೀನು ಪಡೆಯಬಲ್ಲಿ. ಒಳ್ಳೆಯ ಕೆಲಸವನ್ನು ಪ್ರಾರಂಭಿಸಲು ಅತೀತ-ತಡವಾದ-ಕಾಲವೆಂಬುದು ಇರುವುದೇ ಇಲ್ಲ. ನಿನ್ನ ಪಾರಮಾರ್ಥಿಕ ಜೀವನವನ್ನು ಕೂಡಲೇ ಪ್ರಾರಂಭಿಸು. ಈ ರೀತಿ ನಮ್ಮ ಜೀವನವನ್ನು ಸಾರ್ಥಕ ಗೊಳಿಸುವುದಕ್ಕಾಗಿ, ಪಂಡಿತ ಬೃಜನಾಥವ್ಯಾಸ ಎಂಬ ಹಿರಿಯ ಆಧುನಿಕ ಹಿಂದೀ ಕವಿಯೂ ಹಾಗೂ ಪುರಂದರ ದಾಸರೂ ಇದೇ ಬೋಧೆಯನ್ನು ಸಲ್ಲಿಸಿರುವರು.

ನಾನಿನ್ನು 'ಮನಸೀನ ಮುರಗಿಯ ತಿದ್ದೀಸೊ ದೇವಾ' ಎಂಬ ನಿಂಬರಗಿ ಮಹಾರಾಜರವರ ಪದದೆಡೆ ಸಾಗುವೆ. ಈ ಪದದಲ್ಲಿ ನಿಂಬರಗಿ ಮಹಾರಾಜರವರು ತಮ್ಮ ಮನಸ್ಸಿನ ತೊಡಕನ್ನು ಬಿಡಿಸಲು ಹಾಗೂ ಅದರ ವಕ್ರತೆಯನ್ನು ಅಳಿಸಿ, ಅದನ್ನು ಸರಲ ಮಾಡಲು ಭಗವಂತನನ್ನು ಬೇಡಿಕೊಂಡಿರುವರು. ಮಾನವನ ಮನಸ್ಸು ತುಂಬ ವಕ್ರವಾದುದು. ಕವಿಯು ಅದನ್ನು ಸರಲ ಮಾಡಲು ಭಗವಂತನನ್ನು ಬಿನ್ನವಿಸುವ. ಅವನು ಹೇಳುವದೇನೆಂದರೆ: 'ಬೆಳಗಿನಲ್ಲಿ ಹಾಸಿಗೆ ಯಿಂದೆದ್ದ ಕೂಡಲೆ, ಸಜ್ಜನರನ್ನು ನಿಂದಿಸುವುದು ಹಾಗೂ ಪರರ ದ್ರವ್ಯವನ್ನು ಅಪಹರಿಸುವುದು ಇದೇ ಮನುಜನ ಮೊದಲನೆಯ ಕೆಲಸ.' ಇವೆರಡರ ಜತೆಯಲ್ಲಿ ಮನುಜನು ಬಲ್ಲಿದರನ್ನು ಅಂದರೆ ಬುದ್ಧಿವಂತ, ಧನವಂತ ಹಾಗೂ ಬಲವಂತ ರನ್ನು ಸದೈವ ಹೊಗಳುವನು. 'ಬಲ್ಲವರಿಗೆ ಆರ್ಜವ' ಮಾಡುವನು. ಮೇಲಾಗಿ ನಮ್ಮ ಮನಸ್ಸಿನಲ್ಲಿ ಪವಿತ್ರ ವಿಚಾರಗಳು ಕೆಲಕಾಲವೇ ಸುಳಿಯುವವು. ಅದು ಸದೈವ ಎಡೆ ಗೂಡುವುದು ಅಪವಿತ್ರ ವಿಚಾರಗಳಿಗೆ. ಒಂದು ವೇಳೆ ನಿಂಬರಗಿ ಮಹಾರಾಜರವರ ಕಂಗಳೆದುರು ಈ ಸಮಯದಲ್ಲಿ ಇಂಥ ಕೆಲ ಉದಹರಣೆಗಳು ಬಂದು ನಿಂತಿರ

ಬಹುದು. ಅದಕ್ಕಾಗಿ ಅವರು ಅರಹುವದೇನೆಂದರೆ: ಮನುಜನು ಕಾಶೀ ಯಾತ್ರೆಗೆ ಹೊರಡುವ ಕಾಲಕ್ಕೆ ಅವನಂತರಂಗದಲ್ಲಿ ಸದ್ಭಾವನೆ ನೆಲೆಸಿರುವುದು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ದಾರಿಯಲ್ಲಿ ಅವನಿಗೆ ವಾರಾಂಗನೆಯು ಭೇಟಿಯಾದ ಮೂಲಕ, ಅವಳ ವಯ್ಯಾರಕ್ಕೆ ಮರುಳಾಗಿ, ಅವನು ಭಗವಂತನನ್ನು ಮರೆವನು. ಈ ರೀತಿ ಪವಿತ್ರ ವಿಚಾರಗಳನ್ನು ಕೇವಲ ಮನಸ್ಸಿನಲ್ಲಿಯೆ ಇರಿಸಿ, ಅಪವಿತ್ರ ಕರ್ಮಗಳಲ್ಲಿ ತೊಡಗಿದರೆ ಅದರಿಂದ ಏನು ಪ್ರಯೋಜನ? ನಮ್ಮ ಹಿರಿಯ ವ್ಯಾಸ ಮುನಿಗಳು ಹೇಳಿದ ಮೇರೆಗೆ, ಜನರು ಪುಣ್ಯಕರ್ಮದ ಫಲವನ್ನು ಬಯಸುವವರು; ಆದರೆ ತಾವು ಪುಣ್ಯ ಕರ್ಮಗಳನ್ನು ಮಾಡಲೊಲ್ಲರು. ಅವರು ಪಾಪಕರ್ಮದ ಫಲವನ್ನು ಬಯಸರು; ಆದರೆ ಸಾಧ್ಯವಿರುವಲ್ಲೆಲ್ಲ ಪಾಪಕರ್ಮಗಳನ್ನು ಮಾತ್ರ ಮಾಡುತ್ತಲಿರುವರು. ಆದುದರಿಂದ ನೀವು ತುಂಬ ಎಚ್ಚರದಿಂದ ವರ್ತಿಸಬೇಕು. ನೀವು ಮೃತ್ಯುವಿನ ಹಿಡಿತದಲ್ಲಿ ಸಿಲುಕಿದಾಗ, ನಿಮ್ಮ ಮನಸ್ಸು ವಿವೇಕದ ತಿವಿತದಿಂದ ಅಳುಕುವುದು; ಮತ್ತು ಅನುತಪಿಸಿ ಈ ರೀತಿ ವಿಲಪಿಸುವುದು; 'ನಾನೀಗ ಸಾಯಲಿರುವೆನಯ್ಯ ದೇವರೇ!' ಅದು 'ಸತ್ತೆ ಸತ್ತೆನೆಂದು ಮರುಗುವುದು'. ಆದುದರಿಂದ ನೀವು ಮರಣದ ತೀವ್ರ ಯಾತನೆಗಳಿಂದ ಬಳಲುವ ಮುನ್ನ, ಭಗವಂತನ ಸ್ನೇಹವನ್ನು ಪಡೆಯಬೇಕು. ಅವನು ನಿಮ್ಮ ಗೆಳೆಯನಾಗುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ, ಸದ್ಗುರುವಿನ ಚರಣಗಳಲ್ಲಿ ನಿಮ್ಮ ಮಸ್ತಕವನ್ನಿರಿಸುವುದನ್ನುಳಿದು, ನೀವು ಬರಿ ಅಡವಿಯಲ್ಲಿ 'ಚರಿಸ್ಯಾಡಬೇಕಾಗುವುದು' ಅಲೆಯಬೇಕಾಗುವುದು. ಆದುದರಿಂದ ಮಹಾರಾಜರವರು ನಿಮಗೆ ತುಂಬ ಎಚ್ಚರದಿಂದಿರಲು ಬಿನ್ನವಿಸುವರು. "ಸದ್ಗುರುವಿನೆಡೆ ಸಾರಿರಿ ಮತ್ತು ನಿಮ್ಮ ಪರಮಾರ್ಥಸಾಧನವನ್ನು ಉತ್ಕಟತೆಯಿಂದ ನಡೆಸಿರಿ! ಕೇವಲ ದಂಭಾಚಾರವನ್ನು ತೋರಬೇಡಿರಿ!" ಎಂದು ಅವರು ಬೋಧಿಸುವರು. ಈ ರೀತಿ ನಿಂಬರಗಿ ಮಹಾರಾಜರವರು ತಾವು ಪರಮಾರ್ಥಪಥವನ್ನು ತುಳಿಯಲು ಯೋಗ್ಯರಾಗುವುದಕ್ಕಾಗಿ ತಮ್ಮ ಮನಸಿನ ಮುರಿಗೆಯನ್ನು ತಿದ್ದಲು ನೆರವಾಗಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಿರುವರು.

ಇದಾದ ಮೇಲೆ, ನಾನು ನಿರುಪಾಧಿಸಿದ್ಧರ 'ಸುಮ್ಮನಿರು ನಾಲಿಗೆ' ಎಂಬ ಅಂದವಾದ ಪದವನ್ನು ವಿವರಿಸಲಿರುವೆ. ಇದು ನಾಲಿಗೆಯನ್ನು ಸಂಬೋಧಿಸಿ ಬರೆಯಲಾಗಿದೆ. ಮುಂದೆ, ಈ ಪದದ ವಿವರಣವು ಮುಗಿದ ಮೇಲೆ, ತುಲಸಿದಾಸರು ಕೂಡ ಇದನ್ನು ಪೂರ್ತಿಯಾಗಿ ಹೋಲುವ ಪದವೊಂದನ್ನು ಹೇಗೆ ಬರೆದಿರುವರೆಂಬುದನ್ನು ಅರಿತುಕೊಳ್ಳುವಾ! ನಾವು ನಮ್ಮ ಜೀವನದಲ್ಲಿ ಮಾಡುವ ಮಹಾ ಪ್ರಮಾದಗಳಲ್ಲಿ ಕೆಲವು ನಾಲಿಗೆಯ ಮೂಲಕವೇ ಆಗಿರುವವು. ನಿರುಪಾಧಿಸಿದ್ಧರು ನಾಲಿಗೆಗೆ ಈ ರೀತಿ ಕೇಳುವರು: "ಅಮ್ಮಾ ನಾಲಿಗೆಯೇ! ನೀನು ಕೊಂಚ ಸುಮ್ಮನಿದ್ದರೆ ಏನಾಗುವುದಮ್ಮಾ? ನೀನು ಪೂರ್ತಿಯಾಗಿ ಮೌನವನ್ನು ಅದೇಕೆ

ತಳೆಯಲೊಲ್ಲೆ?" ಈ ಮೌನವೆಂಬ ಸದ್ಗುಣವನ್ನು ಗ್ರೀಕದಾರ್ಶನಿಕರಾದ ಸ್ಟೋಯಿಕ್ಸ್ ಹಾಗೂ ಎಪಿಕ್ಯೂರಿಯನ್ಸ್-ವಿಶೇಷವಾಗಿ ಎರಡನೆಯವರು ಘೋಷಿಸಿದರು, ಹಾಗೂ ಬೆಳೆಸಿದರು. ಅದನ್ನವರು 'Epoche'ಇಲ್ಲವೆ 'ಮೌನಗುಣ'(ಶಾಂತಿ) ಎಂದು ಕರೆದರು. ಮಹಾತ್ಮಾ ಗಾಂಧಿಯವರೂ ಕೂಡ ಇದರ ಮಹತ್ವವನ್ನು ಮನಗಂಡು, ವಾರದಲ್ಲಿ ಒಂದು ದಿನವಾದರೂ ಮೌನವನ್ನು ಆಚರಿಸುತ್ತಿದ್ದರು. 'ಆದರೆ ನೀನು ಹಿರಿಯ ಮೌನಿಯಿರುವಿ ಎಂಬ ಅಹಂಕಾರದ ಸಂಸ್ಪರ್ಶವನ್ನೂ ಕೂಡ ನೀನು ತೊರೆಯಬೇಕು ಎಂಬುದನ್ನು ಮರೆಯದಿರು' ಎಂದು ನಿರುಪಾಧಿಸಿದ್ಧರು ನಮ್ಮನ್ನು ಎಚ್ಚರಿಸಿರುವರು. ರಾಮದಾಸ ಸ್ವಾಮಿಗಳು ಅರುಹುವ ಮೇರೆಗೆ: 'ಮೀ ಮೌನೀ ಮ್ಹಣತಾಚ ಭಂಗಲೇ ಮೌನ ಜೇಂಸೇ' 'ನಾನು ಮೌನವ್ರತವನ್ನು ಆಚರಿಸುವೆ ಎಂಬ ಭಾವನೆಯಿಂದಲೇ ಮೌನವ್ರತಕ್ಕೆ ಭಂಗ ಬರುವುದು' ಈ ರೀತಿ ಅಹಂಭಾವವನ್ನು ತೊರೆದು ನೀನು ಮೌನವನ್ನಾಚರಿಸಿದರೆ, 'ಅಮ್ಮ ನಾಲಿಗೆಯೆ! ನೀನೇ ನಿಜವಾಗಿ ಬ್ರಹ್ಮ ಆಗುವೆಯಮ್ಮ!' 'ಸುಮ್ಮನಿದ್ದರೆ ನೀನು ಬ್ರಹ್ಮನಾಗುವಿ' ಎಂದು ಕವಿಯು ಹೇಳುವ. ಮೇಲಾಗಿ ನಮ್ಮ ನಾಲಿಗೆಯು ಸದೈವ ತೊಡಗಿರುವುದು-ರತವಾಗಿರುವುದು ಸಜ್ಜನರ ನಿಂದೆಯಲ್ಲಿ, ಕೋಪದ ರಭಸದಲ್ಲಿ. ಆದುದರಿಂದ, ನಾವು ಕೋಪಿಗಳ ಸಂಗವನ್ನು ತೊರೆದು, ಅದರ ಬದಲು, ಶಾಂತಿಯ ಮೂರ್ತಿಗಳಾದ ಸದ್ಗುರುಗಳ ಸಹವಾಸವನ್ನು ಅರಸಬೇಕು. ಅಲ್ಲಿ ನಿಲ್ಲಬೇಕು ಎಂಬ ಇನ್ನೊಂದು ಮಹತ್ವದ ಮಾತನ್ನು ಸಿದ್ಧರು ಹೇಳಿರುವರು. ನೀವು ಸುಮ್ಮನೆ, ಶಾಂತರಾಗಿ ಇರಬಲ್ಲವರಾದರೆ, ನೀವು ಅತಿಯಾಗಿ ಮಾತಾಡಲಿಕ್ಕಿಲ್ಲ. ನೀವು ಸಂತರ ಇಲ್ಲವೆ ಸದ್ಗುರುಗಳ ಸಹವಾಸದಲ್ಲಿ ಬರಿ ಇರುವುದರಿಂದಲೆ, ನೀವು ಮೌನದ ಸದ್ಗುಣವನ್ನು ಸಹಜವಾಗಿ ಪಡೆಯುವಿರಿ. ಇದಾಯಿತು ನಾಲಿಗೆಯು ಮಾಡಬೇಕಾದ ನಿಷೇಧಾತ್ಮಕ ಅಭ್ಯಾಸ.

ಇನ್ನು ವಿಧಿರೂಪದ ಅಭ್ಯಾಸವನ್ನು ಹೇಳಬೇಕಾದರೆ, ನೀವು ಭಗವಂತನ ನಾಮವನ್ನು ಉಚ್ಚರಿಸುವುದರಲ್ಲಿ ನಿರತರಾಗಬೇಕು. ಇದು ನಾಲಿಗೆಯು ಮಾಡಬೇಕಾದ ಮೊದಲನೆಯ ವಿಧಾಯಕ ಕಾರ್ಯ. ಭಗವಂತನ ನಾಮವನ್ನು ನಾಲಿಗೆಯಿಂದ ಉಚ್ಚರಿಸಬೇಕೋ ಇಲ್ಲವೆ ಬೇರೆ ಬಗೆಯಾಗಿ ಉಚ್ಚರಿಸಬೇಕೋ ಎಂಬುದು ಅಷ್ಟೊಂದು ಮಹತ್ವದ ಮಾತಲ್ಲ. ನಿರುಪಾಧಿಸಿದ್ಧರು ಮಾತ್ರ ಭಗವಂತನ ನಾಮವನ್ನು ಉಚ್ಚರಿಸಲು ನಾಲಿಗೆಗೆ ಬೋಧಿಸಿರುವರು. ಆಮೇಲೆ ನೀವು 'ಸೋಪಾನವನ್ನೇರಿ' ಬ್ರಹ್ಮರಂಧ್ರವನ್ನು ಮುಟ್ಟಿರಿ. ಹಾಗೆ ಮಾಡಲಿರುವಾಗ ಏನಾಗುವುದು ಎಂಬ ಶರೀರಶಾಸ್ತ್ರದ ಸಮಸ್ಯೆಯನ್ನು ನಾನು ಪೂರ್ತಿಯಾಗಿ ಮುಂದೆ ಚರ್ಚಿಸಲಿರುವೆ. ಆದುದರಿಂದ ನಾನದನ್ನು ಇಲ್ಲಿ ಚರ್ಚಿಸ ಬಯಸುವುದಿಲ್ಲ. ಆ ಸೋಪಾನವನ್ನೇರಿ ನೀವು ಬ್ರಹ್ಮರಂಧ್ರವ ಸೇರಿರಿ; ಮತ್ತು ಅಲ್ಲಿ 'ಪರತರಾನಂದವನ್ನು'

ಸೇವಿಸಿರಿ. ಈ ರೀತಿ ನಿಮ್ಮ ನಾಲಿಗೆಯು ಸರಿಯಾಗಿ ವರ್ತಿಸಿ ಅದನ್ನು ಪಡೆಯಲೆಳಸಿದರೆ, ಅದು ನಿಮಗೆ ಆ ಪರಮಾನಂದದ ಪ್ರಸಾದವನ್ನು ನೀಡ ಬಲ್ಲುದು. ಇದರ ಜತೆಯಲ್ಲಿ, ನೀವು ನಮ್ಮವರು ನಿಮ್ಮವರು ಎಂಬ ಭೇದಭಾವನೆ ಯನ್ನು ತಳೆಯಬೇಡರಿ! 'ಪರವಸ್ತು'ವನ್ನು, ಭಗವಂತನನ್ನು ಮರೆಯ ಬೇಡರಿ! ಕೊನೆಗೆ ಈ ನಿರುಪಾಧಿಯ ಕಾಂತಿಯಲ್ಲಿ, ಪರಮಾತ್ಮನ ಅನುಭಾವದ ಮೇರೆ ಯಿಲ್ಲದ ಆನಂದದಲ್ಲಿ ಮನಸ್ಸು ಮುಳುಗಿತೆಂದರೆ, ಅದೇ ಪರಬ್ರಹ್ಮರೂಪವನ್ನು ತಳೆಯುವುದು. 'ನೀವು ಪೂರ್ತಿಯಾಗಿ ಶಾಂತರಾಗುವಿರಿ! ನಿಜವಾಗಿ ಸರ್ವಾಂತ ರ್ಯಾಮಿಯಾಗುವಿರಿ!' ಎಂದು ಕವಿಯು ಹೇಳುವನು. ಇದೇ ಶೈಲಿಯಲ್ಲಿ ತುಲಸಿ ದಾಸರೂ ಒಂದು ಪದವನ್ನು ಬರೆದಿರುವರು. ಅದು ಸುಮಾರಾಗಿ ಈ ಕನ್ನಡ ಪದದ ಅನುವಾದದಂತೆಯೆ ಕಾಣುವುದು. 'ಕಾಹೇ ನ ರಸನಾ ರಾಮಹಿ ಗಾವಹಿ!' 'ಅಮ್ಮ ನಾಲಿಗೆಯೆ! ನೀನು ಸಿರಿರಾಮನ ನಾಮವನ್ನು ಯಾಕೆ ಹಾಡಿಹೊಗಳು ವುದಿಲ್ಲ?' ಎಂಬುದೇ ತುಲಸಿದಾಸರ ಪದವು. ಈ ಪದದ ಹತ್ತು ಇಲ್ಲವೆ ಹದಿನೈದು ಸಾಲುಗಳು ಅತ್ಯದ್ಭುತವಾದವುಗಳು. ಹಿಂದೀ ಸಂತರನ್ನು ಕುರಿತು ಬರೆಯಲಾದ ನನ್ನ ಗ್ರಂಥದಲ್ಲಿ ನಾನವನ್ನು ಚೆನ್ನಾಗಿ ವಿವರಿಸಿರುವೆ. ಹಿಂದೀ ಭಾಷೆಯನ್ನು ಕಲಿಯಬಯಸುವವರು ಈ ಪದವನ್ನು ಕಂಠಗತ ಮಾಡಬೇಕು. ಹಿಂದೀ ಭಾಷೆ ಯಲ್ಲಷ್ಟೇ ಅಲ್ಲ, ಬೇರೆ ಯಾವುದೇ ಭಾಷೆಯಲ್ಲಿಯ ಅತ್ಯುತ್ತಮ ಪದಗಳಲ್ಲಿ ಅದು ಒಂದಾಗಿರುವುದು. 'ಅಮ್ಮ ನಾಲಿಗೆಯೆ! ದಯವಿಟ್ಟು ಭಗವಂತನ ನಾಮವನ್ನು ಉಚ್ಚರಿಸಮ್ಮ! ನಾಮಸುಧೆಯನ್ನು ಸೇವಿಸು; ಮತ್ತು ಈ ಸೋಪಾನದ ಮುಖಾಂತರ ಭಗವಂತನಿರುವ ಮೇಲಿನ ಅಂತಸ್ತಕ್ಕೆ ನನ್ನನ್ನು ಒಯ್ಯಮ್ಮ' ಎಂದು ತುಸಲಿದಾಸರು ತಮ್ಮ ನಾಲಿಗೆಯನ್ನು ಬಿನ್ನವಿಸುವರು. ಅವರು ಭಗವಂತನ ನಾಮಾಮೃತವು, ಅಂಗಳ ಮುಖಾಂತರ ಗಂಟಲಲ್ಲಿ ಇಳಿಯುವ ಬಗೆಯನ್ನು ಶರೀರಶಾಸ್ತ್ರದ ದೃಷ್ಟಿಯಿಂದ ಯಥಾರ್ಥವಾಗಿ ಬಣ್ಣಿಸಿರುವರು. ಈ ಅಮೀರಸವನ್ನು ಸೇವಿಸಿದಾಗ, ನೀವು ಭಗವಂತನ ಕಾಂತಿಯಲ್ಲಿ ಮುಳುಗುವಿರಷ್ಟೇ ಅಲ್ಲದೆ, ನೀವು ಭಗವದ್ರೂಪರೇ ಆಗುವಿರಿ. ಈ ರೀತಿ ನಾವು ನಿರುಪಾಧಿಸಿದ್ಧರ ಹಾಗೂ ತುಲಸಿದಾಸರ ಪದಗಳಲ್ಲಿಯ ಹಿರಿದಾದ ಹೋಲಿಕೆಯನ್ನು ಕಾಣಬಹುದು.

ಈ ನಾಲಿಗೆಗೆ ನೀಡಲಾದ ಬೋಧೆಯ ತರುವಾಯ, ನಾವು ಸರ್ಪಭೂಷಣರ 'ಶರೀರವೆಂಬುವ ಹೊಲನ ಹಸನ ಮಾಡಿ' ಎಂಬ ಅಂದವಾದ ಪದದೆಡೆ ಸಾಗುವಾ. ಅದರಲ್ಲಿ ಒಂದು ಪರಂಪರಿತವಾದ ಕೃಷಿಕರೂಪಕವಿರುವುದು. ಈ ಬಗೆಯ ಪರಂಪ ರಿತ ರೂಪಕಗಳು ಕನ್ನಡ ಅನುಭಾವಿಗಳ ಒಂದು ವಿಶೇಷವೆಂದೇ ಹೇಳಬಹುದು. ನಿಜವಾಗಿ ಇಂಥ ಪರಂಪರಿತ ರೂಪಕಗಳನ್ನೊಳಗೊಂಡ ಪದಗಳು ಕನ್ನಡದಲ್ಲಿ

ತುಂಬ ಹೇರಳವಾಗಿ ಲಭಿಸುವುದುಂಟು. ಅಂಥ ಅತ್ಯುತ್ತಮ ಪದಗಳಲ್ಲಿ ಇದೊಂದು. "ನಿಮಗೆ ಶರೀರವೆಂಬ ಹೊಲವು ಲಭಿಸಿರುವುದು. ಅದರಲ್ಲಿ ನೀವು ಪರತತ್ವದ ಬೆಳೆಯನ್ನು ಯಾಕೆ ಬೆಳೆಯಿಸುವುದಿಲ್ಲವಯ್ಯ?" ಎಂದು ಕವಿಗಳು ಕೇಳುವರು. "ನೀವು ಮಾಡಬೇಕಾದುದು ಬೇಸಾಯದ ಏಳು ಕ್ರಿಯೆಗಳನ್ನು. ಮೊದಲು ನೀವು ಒಳ್ಳೆಯ ಶಾಂತವಾದ ಸಾಧು ಎತ್ತುಗಳನ್ನು ಹೂಡಬೇಕು, ಗಲಾಟೆಯನ್ನು ಮಾಡುವ ಪ್ರಚಂಡ ಎತ್ತುಗಳನ್ನಲ್ಲ. ಶರೀರ ಕ್ಷೇತ್ರದಲ್ಲಿಯ ಮೊದಲನೆಯ ಕ್ರಿಯೆಗಾಗಿ ನೀವು ಶಮೆ-ದಮೆ ಎಂಬ ಎತ್ತುಗಳನ್ನು ಉಪಯೋಗಿಸಬೇಕು. ವಿಮಲ ಮನಸ್ಸೇ ನಿಮ್ಮ ನೇಗಿಲು. ಅದರಿಂದ ನೀವು ಆ ಹೊಲವನ್ನು ಊಳಬೇಕು. ಆಮೇಲೆ ಅದರಲ್ಲಿರುವ ಮಮಕಾರದ ಕರಕಿಯನ್ನು ಕಳೆಯಬೇಕು. ನಾಲ್ಕನೆಯದಾಗಿ, ನೀವು ಸಮತೆಯ ಗೊಬ್ಬರವನ್ನು ಹಾಕಿ ಅದನ್ನು ಸಮತಲಮಾಡಬೇಕು. ಹೊಲದಲ್ಲಿಯ ಮಣ್ಣಿನಲ್ಲಿ ಗೊಬ್ಬರವನ್ನು ಪಸರಿಸಿ, ಅದನ್ನು ಸಮತಲ ಮಾಡದೆ, ಅದರಲ್ಲಿ ಬೆಳೆಯು ಬರಲರಿಯದು. ಆದುದರಿಂದ ಅದು ಮುಂದಿನ ಕ್ರಿಯೆಗಳಿಗೆ ಯೋಗ್ಯವಾಗುವುದಕ್ಕಾಗಿ ಅದರಲ್ಲಿ ಸಮತೆಯ ಗೊಬ್ಬರವನ್ನು ಪಸರಿಸಿರಿ. ತರುವಾಯ ಅದರಲ್ಲಿ ಸದ್ಗುರುವಿನ ಉಪದೇಶದ ಬೀಜವನ್ನು ಬಿತ್ತಿರಿ. ಆದರೆ ಅದರ ಮೇಲೆ ಮಳೆಯು ಕರೆಯದೆ, ಬರಿ ಬೀಜಗಳಿಂದ ವಿಶೇಷ ಪ್ರಯೋಜನವಾಗಲರಿಯದು. ನಿಮ್ಮ ಸತ್ಕರ್ಮಗಳ ಸಂಸ್ಕಾರಗಳೇ ಮಳೆ. ಆ ಮಳೆಯು ದೊರೆಯದಿದ್ದರೆ ಬೀಜವು ಸುಟ್ಟುಹೋಗಬಹುದು. ಆದುದರಿಂದ ನಿಮ್ಮ ಸತ್ಕರ್ಮಜನಿತ ಸಂಸ್ಕಾರಗಳ ಮಳೆಯೇ ಆ ಬೀಜವು ಮೊಳೆಯಲು ನೆರವಾಗುವುದು. ಅದರ ಮೂಲಕ ಅರಿವೆಂಬ ಪೈರು ಬೆಳೆಯಿತೆಂದರೆ, ಅದರ ಜತೆಯಲ್ಲಿ ದುರ್ಗುಣಗಳೆಂಬ ಕಳೆಗಳೂ ಬೆಳೆದು ಅದನ್ನು ಮುಸುಕುವವು. ಅವನ್ನು ನೀವು ಕಿತ್ತು ಎಸೆಯಬೇಕು. ಆಗ ಪೈರು ಹುಲುಸಾಗಿ ಬೆಳೆಯುವುದು. ನೀವು ಈ ಎಲ್ಲ ಕ್ರಿಯೆಗಳನ್ನು ಮಾಡಿದ ಮೇಲೆ, ಭಗವಂತನ ಕರುಣದಿಂದ 'ಸ್ಥಿರ-ಮುಕ್ತಿ' ಎಂಬ ಧ್ಯಾನವು ಲಭಿಸಿತೆಂದರೆ, ಅದನ್ನುಂಡು ಪರಮಾನಂದದಲ್ಲಿ ದಣ್ಣನೆ ದಣಿಯಿರಯ್ಯ". ಸರ್ಪಭೂಷಣರು ಇಲ್ಲಿ 'ಸ್ಥಿರಮುಕ್ತಿ' ಎಂಬ ಶಬ್ದವನ್ನು ಬಳಸಿರುವರು. ವೀರಶೈವ ವಾಙ್ಮಯದಲ್ಲಿ ಬರುವ ಅದೊಂದು ಬಲು ಮಹತ್ವದ ಶಬ್ದವು. ಅವರದು ಬದಲಾಗುವ ಕೆಲಕಾಲದ ಮುಕ್ತಿಯಲ್ಲ. ಅದು ಶಾಶ್ವತವಾದ ಮುಕ್ತಿಯು. ಪರತಮವಾದ ಮುಕ್ತಿಯನ್ನು ಬೇರೆ ಬೇರೆ ಜನರು, ಕೆಳಗೆ ಕಾಣಿಸಿದ ಮೇರೆಗೆ, ಬೇರೆ ಬೇರೆ ಶಬ್ದಗಳಿಂದ ಹೆಸರಿಸಿರುವುದೇನೋ ನಿಜ. ಸಲೋಕತಾ-ಭಗವಂತನ ಲೋಕದಲ್ಲಿರುವುದು; ಸಮೀಪತಾ ಭಗವಂತನ ನೆರೆಯಲ್ಲಿರುವುದು; ಸರೂಪತಾ-ಭಗವಂತನ ರೂಪವನ್ನು ತಳೆದಿರುವುದು; ಹಾಗೂ ಸಾಯುಜ್ಯತಾ-ಭಗವಂತನಲ್ಲಿ ಬೆರೆತಿರುವುದು-ಇವೇ ಆ ಶಬ್ದಗಳು. ಆದರೆ ನಾವು ಕರೆಯಲಿರುವ 'ಸ್ಥಿರಮುಕ್ತಿ'ಯ ಬದಲಾಗದ, ಕಡಿಮೆಯಾಗದ, ಕದಲದ ಹಾಗೂ ಅಚ್ಚಳಿಯದ

ಮುಕ್ತಿಯು. 'ಆನಂದವಾದ ಚಿದ್ಘನವಸ್ತು ನಾ ಕಂಡೆ' ಎಂಬ ಪದದಲ್ಲಿ ನಾಗಲಿಂಗ ಕವಿಗಳು ಕೂಡ ಸ್ಥಿರಮುಕ್ತಿಯ ಪ್ರಾಪ್ತಿಯನ್ನು ಪ್ರಸ್ತಾಪಿಸಿರುವರು. ನೀವು ಈ ಸಾಕ್ಷಾತ್ಕಾರದ ಬೆಳೆಯಿಂದ ಲಭಿಸಿದ ಪರಮ ಆನಂದವನ್ನುಂಡಾಗ, ಭವವೆಂಬ ಬರವನ್ನು ನೀವು ಅದರ ಸೀಮೆಗೆ ಕಳುಹಲು ಸಮರ್ಥರಾಗುವಿರಿ. ಈ ಬರವನ್ನು ಸುದೂರ ದೂಡಿರಿ. ಅದನ್ನು ನಿಮ್ಮ ಪ್ರದೇಶದಲ್ಲಿ ಬರಗೊಡಬೇಡಿರಿ. ಈ ರೀತಿ ನೀವು, ಈ ಹಿರಿಯ ಪಾರಮಾರ್ಥಿಕ ಬೆಳೆಯನ್ನು ಬೆಳೆಯಬಹುದು ಎಂದು ಗುರುಸಿದ್ಧರು ಹೇಳಿರುವರು.

ನಾನಿನ್ನು ನಿರುಪಾಧಿಸಿದ್ಧರ 'ತಿಳಿಯಬೇಕು ನಿಜಸುಖದ ನಿಲಯಾ' ಎಂಬ ಇನ್ನೊಂದು ಪದವನ್ನು ವಿವರಸಲಿರುವೆ. ಇದರ ಆದಿಯಲ್ಲಿಯೇ ನಿರುಪಾಧಿಸಿದ್ಧರು ಮುಂದಿನ ಅತಿ ಮಹತ್ವದ ಬೋಧೆಯನ್ನು ಸಲ್ಲಿಸಿರುವರು: "ನಿಮ್ಮ ಮೊದಲಿನ ಭಕ್ತಿಯು ಎಳ್ಳಷ್ಟೂ ಬದಲಾಗದಿರಲಿ ಇಲ್ಲವೆ ವಿಚಲಿತವಾಗ ದಿರಲಿ." ಬಹಳ ಜನರು ಕೆಲವೊಂದು ಉದ್ದೇಶ ಸಾಧನೆಗಾಗಿ ಸದ್ಗುರುಗಳೆಡೆ ಹೋಗುವರು; ಆದರೆ ಅವರ ಅಂದಿನ ಭಕ್ತಿಯು ಮುಂದೆ ಕಡಿಮೆಯಾಗುತ್ತ ಸಾಗುವುದು. ಇದು ಜ್ಞಾನೇಶ್ವರರು ಅರುಹಿದ 'ಚಢತೀ ವಾಢತೀ ಭಕ್ತಿ' 'ಏರಲಿರುವ, ಬೆಳೆಯಲಿರುವ, ಭಕ್ತಿ'ಗೆ ತೀರ ವಿಪರೀತವಾದ ರೀತಿ. ನಮ್ಮ ಭಕ್ತಿಯು ದಿನದಿನಕ್ಕೆ ಬೆಳೆಯುತ್ತಲಿರಬೇಕು. ನೀವು ಸದ್ಗುರುವಿನೆಡೆ ಸಾರಿದಾಗ, ನಿಮ್ಮಂತರಂಗದಲ್ಲಿ ನೆಲೆಸಿದ ಉತ್ಕಟ ಭಕ್ತಿಭಾವವು ಹಾಗೆಯೆ ಉಳಿದಿರುವುದೋ ಹೇಗೆಂಬುದನ್ನು, ನೀವು ಸ್ವಲ್ಪು ಅಂತರ್ನಿರೀಕ್ಷಣೆ ಮಾಡಿದಿರೆಂದರೆ ಸಹಜವಾಗಿ ಅರಿಯಬಹುದು. ಆ ಮೊದಲ ಭಕ್ತಿಯು ಕುಂದದಿರಲಿ, ಕದಲದಿರಲಿ! ನೀವು ಆ 'ಮೊದಲ ಭಕ್ತಿಗೆ ಬದಲಾಗದೆ' ಇರಬೇಕು, ಎಂದು ನಿರುಪಾಧಿಸಿದ್ಧರು ಹೇಳುವರು. 'ನಿಮ್ಮ ಭಕ್ತಿಯು ಬೆಳೆಯುತಿರಲಿ' ಎಂಬುದು ಅವರ ಮೊದಲನೆಯ ಬೋಧೆ. ತರುವಾಯ, ನಿಮ್ಮ ಪರಮಾರ್ಥ ಸಾಧನದಲ್ಲಿ ಕೆಲ ಸಂದೇಹಗಳು ತಲೆದೋರಿದರೆ, ಅವನ್ನು ಪರಿಹರಿಸಲು ಸದ್ಗುರುಗಳಿರುವರು. ಸದ್ಗುರುಗಳು ನಿಮ್ಮ ಸಾಧನದಲ್ಲಿಯ ಬಗೆಬಗೆಯ ಅಡಚಣೆ ಗಳನ್ನು, ಸಂದೇಹಗಳನ್ನು ಸಹಜವಾಗಿ ಕಳೆಯಬಹುದು ಮತ್ತು ನಿಮಗೆ ಬೆಳಕನ್ನು–ಆನಂದವನ್ನು ನೀಡಬಹುದು. 'ಗುರು ಬೋಧದಿ, ಅರಿತು ಮುದದಿ, ಪರಿಪರಿಯ ವಿಕಲ್ಪನಳಿಸಿ'ಕೊಳ್ಳಬೇಕೆಂದು ಅವರ ಹೇಳಿಕೆ. ಇದು ನೀವಿರಿಸಬೇಕಾದ ಎರಡನೆಯ ಹೆಜ್ಜೆ. ಈ ರೀತಿ ಪರಮಾರ್ಥ ಪಥವನ್ನು ಕೆಲಕಾಲ ತುಳಿದ ಮೇಲೆ, ನೀವು ಭಗವಂತನ ಸೂಕ್ಷ್ಮ ಸುಳುವುಗಳನ್ನು ಅರಿಯಬಹುದು. ನೀವು ಆತನ ಗತಿ ವಿಶೇಷಗಳನ್ನು ತರತರದ ಅತೀಂದ್ರಿಯ ಬಗೆಗಳಿಂದ ಕಾಣಬಹುದು. 'ಒಳಗೆ ಮರೆಯದೆ, ಸುಳಿವು ಅರಿವುದು.' ಭಗವಂತನೆಡೆ ಸಾಗುವ ನಿಮ್ಮ ದಾರಿಯಲ್ಲಿಯ

ಕೈಗಂಬವಿದು. ಆಮೇಲೆ ನಿರುಪಾಧಿಸಿದ್ಧರು ಮುಂದಿನ ಒಂದು ಮೂಲಭೂತವಾದ ಮಾತನ್ನು ಉಸುರಿರುವರು: 'ಬ್ರಹ್ಮನಳಿನದೊಳಗೆ ಸತ್ಯವನ್ನು' ಇಲ್ಲವೆ 'ಬ್ರಹ್ಮನಾಳದೊಳಗೆ ಸತ್ಯವನ್ನು' ತಿಳಿಯಬೇಕು. ಇದೊಂದು ಅತಿ ಮಹತ್ವದ ಹೇಳಿಕೆ. ನಿಮ್ಮ ಪಾರಮಾರ್ಥಿಕ ಅನುಭವದ ಸತ್ಯತೆಯನ್ನು ನೀವು ಮುಂದೆ ಕಾಣಿಸಿದ ಮೂರು ಬಗೆಗಳಿಂದ ಪರೀಕ್ಷಿಸಬಹುದು. (೧) ಅದು ಒಳಸೇರಿ ಕಮಲದಂತಿರುವ ನಿಮ್ಮ ನಾಭಿಯನ್ನು-ನಾಭಿಕಮಲವನ್ನು ಮುಟ್ಟಬೇಕು. (೨) ಅದು ಸಹಸ್ರದಲ ಕಮಲ-ಸಹಸ್ರಾರ ಎಂದು ಬಗೆಯಲಾದ ನಿಮ್ಮ ಬ್ರಹ್ಮರಂಧ್ರವನ್ನು ಮುಟ್ಟಬೇಕು. (೩) ಅದು ನಾಳದಂತೆ ಇಲ್ಲವೆ ಕೊಳವೆಯಂತೆ ಇರುವ ನಿಮ್ಮ ಮಿದುಳುಬಳ್ಳಿಯನ್ನು ತುಂಬಬೇಕು. ಈ ಬಗೆಯಾಗಿ ನಿಮ್ಮ ಪರಮಾರ್ಥಿಕ ಅನುಭವವು, ನಾಭಿ ಇಲ್ಲವೆ ಸಹಸ್ರಾರ ಇಲ್ಲವೆ ಮಿದುಳು ಬಳ್ಳಿ ಇವನ್ನು ಲಕ್ಷಿಸಿ ಪರೀಕ್ಷಿಸಲಾದರೆ, ಮತ್ತು ಆ ಪಾರಮಾರ್ಥಿಕ ಚೈತನ್ಯವು ಸುಷುಮ್ನೆಯೊಳಗಿಂದ ಹರಿಯುತ್ತಿದ್ದರೆ, ನೀವು ನಿಮ್ಮ ಅಭ್ಯಾಸವು ಸರಿಯಾದುದು, ನೀವು ಸರಿಯಾದ ಮಾರ್ಗದಲ್ಲಿರುವಿರಿ ಎಂದು ಖಂಡಿತವಾಗಿ ನಂಬಬಹುದು. ಕೊನೆಗೆ ನಿರುಪಾಧಿಸಿದ್ಧರು ಅರುಹುವದೇನೆಂದರೆ: ನೀವು ಪರಮಾರ್ಥ ಚೈತನ್ಯದ ಪ್ರವಾಹವನ್ನು ಅಂತರಂಗದಲ್ಲಿ-ವಿಶೇಷವಾಗಿ ನಾಭಿಕಮಲದಿಂದ, ಮಿದುಳುಬಳ್ಳಿಯೊಳಗಿಂದ ಸಹಸ್ರದಲಕಮಲದವರೆಗೆ ನಿಮ್ಮ ನರಗಳ ಜಾಲದಲ್ಲೆಲ್ಲ ಅನುಭವಿಸುತ್ತಿದ್ದರೆ, ಆಗ ನಿಮ್ಮ ತ್ವಚೆಯು ಕೂಡ ನಿಮ್ಮ ಪಾರಮಾರ್ಥಿಕ ಅನುಭವವನ್ನು ಪ್ರತಿವರ್ತಿಸುವ ಇಂದ್ರಿಯವಾಗಬಹುದು. ಕಬೀರರು ಅನೇಕಸಲ ಹೇಳಿರುವಂತೆ, ಪ್ರತಿಯೊಂದು ಕೂದಲು ಸೆಟೆದು ನಿಲ್ಲಬಹುದು; ಅಥವಾ ಬಸವಣ್ಣನವರು ಅರುಹಿದ ಮೇರೆಗೆ 'ರೋಮ ರೋಮಂಗಳೆಲ್ಲ ಕಂಗಳಾಗಿ' ಭಗವಂತನನ್ನು ನೋಡಬಹುದು. ನಮ್ಮ ತ್ವಚೆಯ ರಂಧ್ರಗಳು ಕೂಡ ನಮ್ಮ ಅನುಭವದ ಸತ್ಯತೆಗೆ ಸಾಕ್ಷಿಯಾಗಿರುವ ವಿಷಯವನ್ನು ನರಗಳ ಜಾಲಕ್ಕಷ್ಟೆ ಸೀಮಿತಗೊಳಿಸಿರುವರು. ಅದೇ ಮರ್ಯಾದೆಯಿಲ್ಲದ ಪಾರಮಾರ್ಥಿಕ ಅನುಭವದ ಕುರುಹು ಮತ್ತು ಕೀಲವೆಂದು ಅವರು ಬಗೆವರು. ಇಲ್ಲಿ ಪಾರಮಾರ್ಥಿಕ ಅನುಭವದ ಹಾಗೂ ಆನಂದದ ಸತ್ಯತೆಯ ಶಾರೀರಿಕ ನಿಕಷವನ್ನು ನಾವು ಕಾಣುವೆವು.

ಕೊನೆಗೆ ನಾನು ಅಜ್ಞಾನದ ಸ್ವರೂಪವನ್ನು ಅರುಹುವ ಒಂದು ದಾರ್ಶನಿಕ ಪದವನ್ನು ವಿವರಿಸುವೆ. ಅದು 'ಏನು ಹೇಳಲಿ ಎನ್ನ ಅಜ್ಞಾನವಶದಿಂದ ನಾನು ನನ್ನನ್ನು ಮರೆತೆ' ಎಂಬ ಕೂಡಲೂರೇಶರ ಪದವು. ಅದು ತನ್ನದೇ ಆದ ಒಂದು ಗುಂಪಿಗೆ ಸೇರಿದುದು. ಕನ್ನಡ ಅನುಭಾವ ಸಾಹಿತ್ಯದಲ್ಲಿ ಈ ಬಗೆಯ ದಾರ್ಶನಿಕ ಕವನಗಳು ತೀರ ವಿರಲ. ಬಹುತರವಾಗಿ ಎಲ್ಲ ಪದಗಳು ನೀತಿವಿಷಯಕ, ಸಾಧನ

ವಿಷಯಕ, ರೂಪಕಾತ್ಮಕ ಇತ್ಯಾದಿ ಬಗೆಯವು ಇರುವವು. ಆದರೆ ಈ ಪದದಲ್ಲಿ ಕೂಡಲೂರೇಶರು ಮಾನವ ಪ್ರಾಣಿಯ ಮೇಲಿನ ಅಜ್ಞಾನದ ಪ್ರಭಾವವನ್ನು ಬಣ್ಣಿಸಿ ರುವರು. "ಇಡೀ ಬ್ರಹ್ಮಾಂಡವು ಭಗವಂತನ ಬೆಳಕಿನಿಂದ ತುಂಬಿ ತುಳುಕುತ್ತಿದ್ದರೂ, ನಮ್ಮ ಕತ್ತಲೆ, ಮಾಯೆ, ನೈರಾಶ್ಯ, ಪಾತಕಗಳು ಆ ಬೆಳಕನ್ನು ಒಂದು ದಪ್ಪ ಪರದೆ ಯಂತೆ ಮುಸುಕಿರುವ ಮೂಲಕ, ನಮಗೆ ಅದು ಕಾಣದಾಗಿ ರುವುದು. 'ಏನು ಕಾರಣ ಕಾಳಕತ್ತಲೆ ಮಾಯ ಮುಸುಕು ತೋರಗೋಡದದು?' ಎಂದು ಕೇಳಿ, 'ಅದಕ್ಕಾಗಿ ನಾನು ನನ್ನನ್ನೇ ದೂಷಿಸಬೇಕು. ಅನ್ಯರನ್ನಲ್ಲ. ನಾನು ನನ್ನ ನಿಜಸ್ವರೂಪ ವನ್ನು ಅರಿಯಲಿಲ್ಲ. ನಾನು ನನ್ನನ್ನು ಮರೆತುಬಿಟ್ಟೆ." ಅದಕ್ಕಾಗಿ ಈ ಕತ್ತಲೆ ಮುಸುಕಿದೆ, ಎಂದು ಅವರು ಉತ್ತರಿಸುವರು. ಆಮೇಲೆ ಅವರು ಮತ್ತೂ ಹೇಳುವು ದೇನೆಂದರೆ: 'ಶ್ವಾನ-ಸೂಕರಗಳು ಮನೆಮನೆಗೆ ಅಲೆಯುವಂತೆ ನಾನು ನಾನಾ ಜನ್ಮಗಳಲ್ಲಿ ತಿರುತಿರುಗಿ ಕೆಟ್ಟೆನಯ್ಯ!' ಮತ್ತು ಅದರ ಫಲವಾಗಿ 'ನಾನು ಈ ಪಂಚ ಮಹಾಭೂತಗಳಿಂದ ಕೂಡಿದ ದೇಹವನ್ನೇ ನಿಜವೆಂದು ಬಗೆದು ಅದನ್ನೆ ತುಂಬ ಮೆಚ್ಚಿಕೊಂಡೆ. ಈ ದೇಹವೇ ನನ್ನ ಆತ್ಮವೆಂದು ಬಗೆದೆ. ಈ ತಪ್ಪು ವಿಷಯವನ್ನೆ ಎಲ್ಲರಿಗೆ ಅರುಹಿದೆ. ಈ ಹಾಳು ಮಾತಿನ ಫಲವಾಗಿ ನಾನು ಒಂದು ಬಗೆಯಿಂದ "ಶಬ್ದಸೂತಕ ಪಾತಕತ್ವದಿ ಮುಳುಗಿ ಪೋದೆ." 'ಇದನ್ನೆಲ್ಲ ನಾನು ಮಾಡಿದುದು, ನಾನು ಭಗವಂತನನ್ನು ಅರಸುವುದನ್ನು ತೊರೆದ ಮೂಲಕ.' 'ನಾವು ಭಗವಂತ ನನ್ನು ಅರಸಬೇಕಾದರೆ, ನಮ್ಮ ಗೌರವಕ್ಕೆ ಅಪಾತ್ರರಾದವರಿಗೆ ಬಾಗಿ ನಡೆಯತಕ್ಕ ದ್ದಲ್ಲ. ನಮ್ಮ ಅಂತರಂಗ ದಲ್ಲಿಯೆ ನೆಲೆಸಿದ ಪರಮಾತ್ಮ ರೂಪಿಯಾದ ಪ್ರತ್ಯಕ್ಷ ಪರುಷಮಣಿ ಯನ್ನು ಲೆಕ್ಕಿಸದೆ, ನಾವು ಕಂಡವರಿಗೆಲ್ಲ ಸೆರಗೊಡ್ಡಿ ಬೇಡತಕ್ಕದ್ದಲ್ಲ. 'ಪರುಷವು ತನ್ನಲ್ಲಿ ಪರಿಪೂರ್ಣ ವಿರಲಿಕ್ಕೆ ಸೆರಗೊಡ್ಡಿ ಬೇಡುವರೆ ಬಡವರನು?' 'ಹರನು ತಾನು ಒಂದಾದ ಮೇಲೆ, ನರರ ಬಾಧೆಗೆ ಸಿಲುಕುವದೇಕೆ?' ಕೊನೆಗೆ ಕೂಡಲೂರೇಶರು, ಭಗವಂತನಿಗೆ ತನ್ನ ಪಾದಗಳನ್ನು ಕಾಣಿಸಲು ಪ್ರಾರ್ಥಿಸುವರು ಮತ್ತು ಕೂಡಲೂರೇಶನ ಕರುಣವಿಲ್ಲದೆ ಭಗವಂತನ ಚರಣಗಳು ಕಾಣವಯ್ಯ! ಎಂದು ಹೇಳುವರು.

■■

ಪ್ರಕರಣ ಐದು

ಸದ್ಗುರುವಿನ ಸ್ವರೂಪ

ದುರ್ಗುಣಗಳ ತ್ಯಾಗವನ್ನೂ ಹಾಗೂ ಅವಶ್ಯವಾದ ಸದ್ಗುಣಗಳ ಸಂಪಾದನೆಯನ್ನೂ ಮುಖ್ಯವಾಗಿ ಒಳಗೊಂಡ ಈ ನೈತಿಕ ಸಿದ್ಧತೆಯಾದ ಮೇಲೆ, ಮುಮುಕ್ಷುವು ಸದ್ಗುರುಗಳಿಂದ ಅನುಗ್ರಹ ಪಡೆಯಲು ಯೋಗ್ಯನಾಗುವನು. ಆದುದರಿಂದ ನಾನಿನ್ನು ಸದ್ಗುರುಗಳ ಸ್ವರೂಪ-ಕಾರ್ಯಗಳನ್ನು ಅರುಹಲು ಪ್ರರಂಭಿಸುವೆ. ಇದೊಂದು ತೀರ ವಿನೂತನ ವಿಷಯ. ಇದಕ್ಕೆ ಮುಂದೆ ಕಾಣಿಸಿದ ಏಳು ಜನ ಕನ್ನಡ ಸಂತರು ಸಲ್ಲಿಸಿದ ಕಾಣಿಕೆಯನ್ನು ನಾನೀಗ ವಿವರಿಸಬಯಸುವೆ. ಈ ಸಂತರಲ್ಲಿ ಮೊದಲನೆಯವರು ಭವತಾರಕರು, ಎರಡನೆಯವರು ಚಿದಾನಂದರು, ಮೂರನೆಯವರು ಶಿಶುನಾಳಧೀಶರು, ನಾಲ್ಕನೆಯವರು ಸಿರಸಂಗಿಯ ಬಲಭೀಮರು, ಐದನೆಯವರು ಕಾಖಂಡಿಕೆಯ ಮಹಿಪತಿಯವರು, ಆರನೆಯವರು ಅವರ ಮಕ್ಕಳಾದ ಕೃಷ್ಣರಾಯರು ಮತ್ತು ಕೊನೆಯವರು ಗುರುಮಹಾಲಿಂಗರು. ಭವತಾರಕರು ಸದ್ಗುರು-ದೇವರಲ್ಲಿ ಏಕತೆಯನ್ನು ಕಲ್ಪಿಸಿರುವರು ಮತ್ತು ಸದ್ಗುರು ಬ್ರಹ್ಮನೇ ಇರುವ-ಬ್ರಹ್ಮನಿಂದ ಭಿನ್ನನಲ್ಲ-ಎಂದು ಸಾರಿರುವರು. ಸದ್ಗುರುಗಳು ತಮ್ಮ ಶಿಷ್ಯರಿಗೆ ಪರತಮ ಆದರ್ಶವನ್ನು ಪಡೆಯುವ ಸರಿಯಾದ ಪದ್ಧತಿಯನ್ನೆ ಕಲಿಸುವರು. ಪ್ರಾಸಂಗಿಕವಾಗಿ ನಾವು ಬಸವಣ್ಣನವರ ಒಂದು ಅಂದವಾದ ವಚನವನ್ನು ಉಲ್ಲೇಖಿಸುವೆವು. ಭಗವಂತನ ಕರುಣವು ಲಭಿಸಬೇಕಾದರೆ, ಆತನಲ್ಲಿ ನಾವು ದೃಢವಾದ ನಂಬಿಕೆಯನ್ನು ಇಡಬೇಕೆಂಬ ಅಂಶವನ್ನು ಅದು ಒತ್ತಿ ಹೇಳುವುದು. ಚಿದಾನಂದ ಕವಿಯು ಸದ್ಗುರುವನ್ನು ಪ್ರತ್ಯಕ್ಷ ಗಾರುಡಿಗನೆಂದು ಕರೆವ. ಅವನು ಶಿಷ್ಯನ ಕಿವಿಯಲ್ಲಿ ದಿವ್ಯಮಂತ್ರವನ್ನು ಉಸುರಿ, ಅವನನ್ನು ಮೈಮರೆಸುವ. ಅದರ ಮೂಲಕ ಶಿಷ್ಯನು ಇಡಿ ಪ್ರಪಂಚವನ್ನು ಶಾಶ್ವತವಾಗಿಯಾದರೂ ಅನಾಸಕ್ತನಾಗಿ ಕಾಣುವಂಥ ಸಾಕ್ಷಿಯಾಗುವನು. ತರುವಾಯ ಮುಂದಿನ ಎರಡು ಪದಗಳೆಡೆ ಸಾರಿದೆವೆಂದರೆ, ಹಾವು ಕನ್ನಡ ಸಂತರ ಪ್ರೀತಿಯ ವಿಷಯವಿರುವದೆಂಬುದನ್ನು ನಾವು ಕಾಣಬಹುದು. ಹಾವು ವಿಷಯವಾಸನೆಯ ಪ್ರತೀಕವಾಗಬಹುದು, ಇಲ್ಲವೆ ಕುಂಡಲಿನಿಯ ನಿಗೂಢಶಕ್ತಿಯ ಪ್ರತೀಕವೂ ಆಗಬಹುದು. ಮೊದಲನೆಯ ಪದದಲ್ಲಿ ಸದ್ಗುರುಗಳು ಹಾವಿನ ವಿಷದ ಕೋರೆ ಹಲ್ಲುಗಳನ್ನು ಮುರಿದ ಮೂಲಕ,

ಅದು ನಿರುಪದ್ರವಿಯಾದರೆ, ಎರಡನೆಯ ಪದದಲ್ಲಿ ಅದು ಕಚ್ಚಿದರೂ ಸದ್ಗುರು ಗಾರುಡಿಗನ ಮಂತ್ರದಿಂದ ಅದರ ವಿಷವು ಅಳಿದು ಹೋಗುವುದು. ಮುಂದಿನ ಪದದಲ್ಲಿ ಸಂತ-ಕವಿಗಳಾದ ಮಹಿಪತಿದಾಸರು ತಮ್ಮ ಮೇಲೆ ಕರುಣದ ಮಳೆಯನ್ನು ಕರೆದು ತಮ್ಮನ್ನು ರಕ್ಷಿಸಲು ಸದ್ಗುರುಗಳನ್ನು ಪ್ರಾರ್ಥಿಸಿರುವರು. ಮಹಿಪತಿಯವರು ಸದ್ಗುರುವಿಗೆ ಕರುಣವನ್ನು ಕರೆಯಲು ಬೇಡಿಕೊಂಡರೆ, ಕೃಷ್ಣರಾಯರು ತಾವು ಅದನ್ನು ಮೊದಲೆ ಪಡೆದಿರುವುದನ್ನು ಅರುಹುವರು. ಕೊನೆಯ ಪದದಲ್ಲಿ ಗುರುಮಹಾಲಿಂಗರು ಸದ್ಗುರು ನೆಲೆಸಿರುವಲ್ಲೆಲ್ಲ ಮಾಂಗಲ್ಯವೂ ವೈಭವವೂ ಇರಲೇಬೇಕೆಂಬುದನ್ನು ಒಳ್ಳೆ ಸರಸವಾಗಿ ಬಣ್ಣಿಸಿರುವರು. ಆದುದರಿಂದ ಈ ಹಿರಿಯ ಸಂತರು ನಮಗಾಗಿ ಹಿಂದಿರಿಸಿದ ಈ ಹಿರಿಯ ಪಾರಮಾರ್ಥಿಕ ಸೊತ್ತನ್ನು ಆಧರಿಸಿಯೆ ನಾನು ನನ್ನ ವಿವೇಚನೆಯನ್ನು ಮಾಡಲಿರುವೆ.

ನಾನು 'ದೇವನಲ್ಲವೇನೋ ಸದ್ಗುರು?' ಎಂಬ ಮೊದಲನೆಯ ಪದದಿಂದಲೇ ನನ್ನ ವಿವರಣವನ್ನು ಪ್ರಾರಂಭಿಸುವೆ. ಭವತಾರಕರ ಈ ಪದವು ಸದ್ಗುರು-ದೇವರಲ್ಲಿ ಅಂತಿಮ ಏಕತೆಯು ನೆಲೆಸಿರುವುದು ಎಂಬ ಬೋಧೆಯನ್ನು ಒಳಗೊಂಡಿರುವುದು. ಸದ್ಗುರುವು 'ಪ್ರತ್ಯಕ್ಷನಾದಂಥ ಪರಬ್ರಹ್ಮರೂಪನು' ಎಂದು ಈ ಸಂತರು ಹೇಳುವರು. ಆದರೆ ಯಾವನೇ ಸದ್ಗುರುವು ಆ ದೇವತ್ವವನ್ನು ಪಡೆಯುವ ಮುನ್ನ ಅವನು ಸ್ವತಃ ಕೆಲವೊಂದು ಅವಸ್ಥೆಗಳೊಳಗಿಂದ ಹಾದುಹೋಗಿರಬೇಕಾಗುವುದು. ಹಾಗೂ ಅನ್ಯರನ್ನು ಆ ಬಗೆಯ ಪಾರಮಾರ್ಥಿಕ ಅನುಭವವನ್ನು ಪಡೆಯಲು ಸಿದ್ಧಪಡಿಸಬೇಕಾಗುವುದು. ಅವನು ಸಾಧನಶಾಸ್ತ್ರವನ್ನು ಚೆನ್ನಾಗಿ ಅರಿತಿರಬೇಕು- ಅದನ್ನು ಪೂರ್ತಿಯಾಗಿ ಕೈವಶಮಾಡಿಕೊಂಡಿರಬೇಕು; ಮತ್ತು ಪರಮಾರ್ಥದ ಆದರ್ಶಪ್ರಾಪ್ತಿಯ ಸರಿಯಾದ ಸಾಧನ ಪದ್ಧತಿಯನ್ನು ಶಿಷ್ಯರಿಗೆ ಕಲಿಸಬೇಕು. ಈ ಸಾಧನಶಾಸ್ತ್ರದಲ್ಲಿಯ ಭವತಾರಕರು ಹೇಳುವ ಮೊದಲನೆಯ ಅಂಶವು ನ್ಯಾಸ ಮತ್ತು ಧ್ಯಾಸ ಎಂಬುದು. ಇವು ಬಲು ಮಹತ್ವದ ಶಬ್ದಗಳು. ನ್ಯಾಸವೆಂದರೆ, ನಾವು ಜಪಿಸಲಿರುವ ಮಂತ್ರದ ಅಕ್ಷರಗಳನ್ನು ನಮ್ಮ ಶರೀರದ ಕೆಲವೊಂದು ಭಾಗಗಳಲ್ಲಿ ಕಲ್ಪಿಸಿ ಇರಿಸುವುದು. ಭಗವದ್ಗೀತೆಯ ನ್ಯಾಸ ಪರಿಚಯವಿದ್ದವರು ಇದನ್ನು ಬಲ್ಲರು. ಆಮೇಲೆ ಬರುವುದು ಧ್ಯಾಸ. ಅದೊಂದು ಭಗವಂತನ ಬಗೆಗೆ ಇರುವ ಅಚ್ಚಳಿಯದ ಭಕ್ತಿಯುಕ್ತ ಮನೋಭಾವ. ಆದುದರಿಂದ, ನ್ಯಾಸ-ಧ್ಯಾಸಗಳ ಸಂಯೋಗವು ಸಾಧನಶಾಸ್ತ್ರದ ಮೊದಲನೆಯ ಅಂಶ. ನ್ಯಾಸ ಸ್ವರೂಪವನ್ನು ಸುಲಭ ರೀತಿಯಿಂದ ಅರುಹಲು ಹಾಗೂ ಬೇಗ ಅರಿತುಕೊಳ್ಳಲು ಬರಲರಿಯದು. ಅದಕ್ಕೆ ಹೆಚ್ಚಿನ ಕಾಲಾವಧಿಯು ಬೇಕು. ಸದ್ಗುರುವು ಶಿಷ್ಯರಿಗೆ ಪರತತ್ವವನ್ನು ಕಾಣಿಸಿದಾಗಲೇ

ಹಾಗೂ ಶಿಷ್ಯನು ಅದರ ಬೆಳಕನ್ನು ಕಂಡಾಗಲೇ ಈ ಸಾಧನಶಾಸ್ತ್ರವು ಯಶಸ್ವಿಯಾದುದೆಂದು ಬಗೆಯತಕ್ಕದ್ದು ಎಂಬುದು ಭವತಾರಕರು ಇದರಲ್ಲಿ ಅರುಹುವ ಎರಡನೆಯ ಅಂಶ. ನಿಜವಾಗಿ ಇದು ಬಲು ಬಿಗಿಯಾದ ಮಾತು. ತರುವಾಯ ಸದ್ಗುರು, ಜೀವ-ದೇವರಲ್ಲಿ ಇಲ್ಲವೆ ಭಕ್ತ-ಭಗವಂತರಲ್ಲಿ ಏಕತೆಯನ್ನು ನೆಲೆಗೊಳಿಸಬೇಕು ಹಾಗೂ ಸಾಕ್ಷಾತ್ಕರಿಸಬೇಕು ಎಂಬುದು ಅವರು ಹೇಳುವ ಮೂರನೆಯ ಅಂಶ. ಆದುದರಿಂದ, ಭವತಾರಕರ ಅಭಿಮತದ ಮೇರೆಗೆ, ಇವೇ ಸದ್ಗುರುವು ಶಿಷ್ಯರಿಗೆ ದಯಪಾಲಿಸುವ ಸಾಧನಶಾಸ್ತ್ರದಲ್ಲಿಯ ನಾಲ್ಕು ಅಂಶಗಳು.

ಭವತಾರಕರು ಮತ್ತೂ ಅರುಹುವದೇನೆಂದರೆ: ನಾವು ಭವಸಾಗರದ ಮಧ್ಯದಲ್ಲಿ ನಿಂತಿರಲು, ಭಗವಂತನಿಗೆ ಒಮ್ಮೆ ಕರೆದರೂ ಕೂಡ, ಅವನು ನಮ್ಮ ಕರೆಯನ್ನು ಕೇಳುವ, ನಮ್ಮನ್ನು ನೆನೆಯುವ ಹಾಗೂ ನಮಗೆ ಉತ್ತರವನ್ನು ದಯಪಾಲಿಸುವ. ಮಹಾರಾಷ್ಟ್ರ ಹಾಗು ಹಿಂದೀ ಸಂತರಲ್ಲಿಯ ಜ್ಞಾನೇಶ್ವರ-ಕಬೀರರು ಭವಸಾಗರದ ಗಂಡಾಂತರಗಳನ್ನು ಕುರಿತು ಈ ಬಗೆಯ ವಿಧಾನಗಳನ್ನೆಯೆ ಮಾಡಿರುವರು. ಉದಾಹರಣಾರ್ಥವಾಗಿ: 'ಯಾ ಲಾಗೀ ಶತಜರ್ಜರ ನಾವೇ। ರಿಘೋನಿಕೇವಿ ನಿಶ್ಚಿಂತ ಹೋವಾವೇ।' 'ಮನುಜನು ನೂರು ಛಿದ್ರಗಳುಳ್ಳ ನೌಕೆಯಲ್ಲಿ ಕುಳಿತಾಗ, ನಿಶ್ಚಿಂತನಾಗಿ ವಿಶ್ರಮಿಸುವದೆಂತು?' ಎಂದು ಜ್ಞಾನೇಶ್ವರನೂ, ಅದೇ ಮೇರೆಗೆ, 'ಟೂಟೀ ನಾವ ಊಪರ ಜಾ ಬೈಠಾ।' 'ನೀನು ಒಡೆದ ನೌಕೆಯಲ್ಲಿ ಕುಳಿತಿರುವೆ' ಎಂದು ಕಬೀರರು ಉಸುರಿರುವರು. ಪ್ರಪಂಚದ ಕಡಲ ಮಧ್ಯದಲ್ಲಿ ನಿಂತು ಭಗವಂತನನ್ನು ಒಮ್ಮೆ ಕರೆದರೆ' ಎಂಬ ತಮ್ಮ ವಿಧಾನದಲ್ಲಿ ಭವತಾರಕರು 'ಅರಿತು-ಮರೆತು' ಎಂಬೆರಡು ಶಬ್ದಗಳನ್ನು ಸೇರಿಸಿರುವರು. ಈ ಬಗೆಯ ಕರೆಯೆಂದರೆ, ವಾಲ್ಮೀಕಿಯು 'ರಾಮ' ಎಂಬುದರ ಬದಲು 'ಮರಾ' ಎಂಬುದನ್ನು ಜಪಿಸಿದಂತೆ. ಆದರೆ ತರ್ಕ ಯುತವಾಗಿ ಹೇಳುವುದಾದರೆ, ನಾವು 'ಅರಿತು' ಎಂಬುದನ್ನೇ ಒತ್ತಿ ಹೇಳಬಹುದು, 'ಮರೆತು' ಎಂಬುದನ್ನಲ್ಲ. 'ಮರಾ' 'ಮರಾ' ಎಂಬ ಶಬ್ದವನ್ನು ತಿಳುವಳಿಕೆಯಿಲ್ಲದೆ ಬರಿ ಉಚ್ಚರಿಸುವುದರಿಂದಲೇ ನಾವು ಭಗವಂತನನ್ನು ಪಡಿಯಲರಿಯೆವು. ಆದರೆ ನಾವು 'ರಾಮ' ರಾಮ' ಎಂಬುದನ್ನು ನ್ಯಾಸ-ಧ್ಯಾಸ ಪೂರ್ವಕವಾಗಿಯೂ, ಪೂರ್ತಿಯಾದ ತಿಳುವಳಿಕೆಯಿಂದಲೂ, ಭಕ್ತಿಭಾವದಿಂದಲೂ ಜಪಿಸಬೇಕು. ಅಂದರೇನೇ ನಾವು ಭಗವಂತನ ದರ್ಶನವನ್ನು ಹೊಂದಬಹುದು.

'ಭಕ್ತಿಭಾವವ ನೋಡದೆ ನಂಬಿದವರಿಗೆ ಸದ್ಗುರು ಮುಕ್ತಿಯ ಪಾಲಿಸುವ' ಎಂಬುದು ಭವತಾರಕರ ಎರಡನೆಯ ವಿಧಾನವು. ಭಕ್ತಿ-ಭಾವವು ಇಲ್ಲದಿದ್ದರೂ ಭಗವಂತನಲ್ಲಿ ನಂಬಿಕೆಯನ್ನು ಇಡಬಲ್ಲವರು ಆತನನ್ನು ಪಡೆಯುವರು ಎಂದು ಭವತಾರಕರು ಹೇಳುವರು. ಅವರು 'ಅರಿತು-ಮರೆತು' ಎಂಬ ಶಬ್ದಗಳನ್ನು ಆಗ್ರಹ

ದಿಂದ ಬಳಸುವಂತೆ, ಸಾಮಾನ್ಯ ನಂಬಿಕೆಯೆ ಇಲ್ಲವೆ ಶ್ರದ್ಧೆಯೇ, ಎಲ್ಲದರ ಮೇಲೆ ತನ್ನ ಪ್ರಭಾವವನ್ನು ಬೀರಿ, ಎಲ್ಲವನ್ನು ಸಾಧಿಸಬಲ್ಲುದು ಎಂದು ಅರುಹುವರು. ಶ್ರೀ ಜೇಮ್ಸ್‌ರವರ 'ಮನೋವಿಜ್ಞಾನದ ತತ್ವಗಳು' ಎಂಬ ಹಿರಿಯ ಗ್ರಂಥವನ್ನು ಓದಿದವರು, ಅವರು ಕೂಡ ಭವತಾರಕರ ಅಭಿಪ್ರಾಯವನ್ನೇ ಪೂರ್ತಿಯಾಗಿ ತಳೆಯುವವರೆಂಬುದನ್ನು ಅರಿವರು. 'ನಂಬಿಗೆಯು ಸತ್ತತ್ವದ ಸಾರವು' ಎಂಬುದು ಜೇಮ್ಸರವರ ಹೇಳಿಕೆ. ದೇವರು ಸತ್ಯವಿರುವನು ಎಂಬುದನ್ನು ನಾವು ಅರಿಯ ದಿರಬಹುದು. ಆದರೆ, ದೇವರು, ಮುಕ್ತಿ ಹಾಗೂ ಅಮರತೆ ಇವು ಸತ್ಯವಿರುವವು ಎಂಬುದನ್ನು ನಾವು ಕೇವಲ 'ನಂಬಿದರೆ', ಹಾಗೂ ದಿನದಿನಕ್ಕೆ ಆ ನಂಬಿಗೆಯನ್ನು ಹಾಗೆಯೆ ಮುಂದುವರಿಸಿದರೆ, ಒಂದು ದಿನ, ದೇವರು,ಮುಕ್ತಿ ಮತ್ತು ಅಮರತೆಗಳು ನಮಗೆ ಸತ್ಯವಾಗಿ ಪರಿಣಮಿಸುವವು. ಇದು ನಂಬಿಕೆಯ ವ್ಯಾವಹಾರಿಕ ಪ್ರಯೋಜನದ ದೃಷ್ಟಿ. ಇದರ ಬದಲು, ಬಸವಣ್ಣನವರು ಭಗವಂತನ ಬಗೆಗೆ ಪೂರ್ತಿಯಾಗಿ ಭಕ್ತಿಯುಕ್ತ ಮನೋವೃತ್ತಿಯನ್ನೇ ಬಲವಾಗಿ ಬೋಧಿಸುವರು. ಭಕ್ತನು ಭಗವಂತನ ಬಗೆಗೆ ತನ್ನ ಅಂತಃಕರಣದಲ್ಲಿ ತುಂಬ ಭಕ್ತಿಭಾವವನ್ನು ತಳೆಯಬೇಕು. ಭಕ್ತಿಯಿಲ್ಲದಿದ್ದರೆ ನಾವು ಏನನ್ನೂ ಪಡೆಯಲರಿಯೆವು. ಸುಮ್ಮನೆ 'ಮರಾ' 'ಮರಾ' ಎಂದು ಸಾವಿರ ಸಲ ಕೂಗಿ ಫಲವಿಲ್ಲ. 'ನಂಬರು, ನೆಚ್ಚರು, ಬರಿದೆ ಕರೆವರು' ಎಂದು ಅಂಥವರನ್ನು ಹಳಿವರು ಬಸವಣ್ಣನವರು. 'ಅರಿಯದೆ' ಯಾಂತ್ರಿಕವಾಗಿ ಭಗವಂತನನ್ನು ಕರೆದು ಪ್ರಯೋಜನವಿಲ್ಲ. ಭಕ್ತಿಭಾವವಿಲ್ಲದೆ ಆತನನ್ನು ಕರೆದು ಉಪಯೋಗವಿಲ್ಲ. ಭಕ್ತನಲ್ಲಿ 'ನಂಬಿಕೆ'ಬೇಕು, ನೆಚ್ಚಿಕೆ ಬೇಕು. ಆತನಲ್ಲಿ ಭಾವ–ಭಕ್ತಿಗಳು ನೆಲೆಸಿರಬೇಕು. ನಿಮ್ಮಲ್ಲಿ ನಿಜವಾದ ಭಕ್ತಿಯು ಇದ್ದರೇನೇ, ಭಗವಂತನು ನಿಮ್ಮ ಕರೆಯನ್ನು ಕೇಳುವ. ಅದಿಲ್ಲದಿದ್ದರೆ, ನೀವು 'ಕೊಂಬಮೆಟ್ಟಿ' ಕೂಗಿದರೂ ಅವನು ನಿಮಗೆಂದಿಗೂ ಕಾಣಿಸಿಕೊಳ್ಳಲಿಕ್ಕಿಲ್ಲ, ಎಂಬುದು ಬಸವಣ್ಣನವರ ಹೇಳಿಕೆ. ಭಗವಂತನಿಗೆ ಬೇಕಾದುದು ಭಾವಪೂರ್ಣ ಅಂತಃಕರಣ. ಬರೀ ಯಾಂತ್ರಿಕ, ಬಾಯಿಯ, ಶಾಬ್ದಿಕ ಕರೆಯಲ್ಲ. ಈ ರೀತಿ, ನಾವು ಇದೀಗ ವಿವರಿಸಿದ ಭವತಾರಕರ ಪದದಲ್ಲಿಯ ಬೋಧೆಯ ತಿರುಳು ಈ ಮಾದರಿಯದಿರುವುದು.

ನಾನಿನ್ನು 'ಎಂಥಾ ಗಾರುಡಿಗಾ ಸದ್ಗುರು!' ಎಂಬ ಎರಡನೆಯ ಪದದೆಡೆ ತೆರಳುವೆ. ಈ ಪದವನ್ನು ನಿಂಬರಗಿಮಹಾರಾಜರವರ ಮೊಮ್ಮಗನು ಒಳ್ಳೆ ಅಂದವಾಗಿ ಹೇಳುತ್ತಿದ್ದ. ಈ ಪದದಲ್ಲಿ ಚಿದಾನಂದರು, ಸದ್ಗುರುಗಳು ತಮ್ಮ ಶಿಷ್ಯರಿಗೆ ಅರಿವಿನ ಬೆಳಕನ್ನು ನೀಡುವ ರೀತಿಯ ಕೆಲ ಹೆಚ್ಚಿನ ವಿವರಗಳನ್ನು ಅರುಹಿರುವರು. ಅದೇ ಮೇರೆಗೆ, ಶಿಷ್ಯರು ಅನುಭಾವದ ದಾರಿಯಲ್ಲಿ ಪಡೆಯುವ ಕೆಲಸ್ಥಾನಗಳ ವಿವರಗಳನ್ನೂ ಹೇಳಿರುವರು. ಅವರು ಆದಿಯಲ್ಲೇ ಹೇಳುವದೇನೆಂದರೆ: ಸದ್ಗುರು

ತನ್ನ ಶಿಷ್ಯನನ್ನು ಏಕಾಂತದಲ್ಲಿ ಕರೆದೊಯ್ದು, ಅವನ ಅಗಲಾದ, ನೀರಡಿಸಿದ ಕಿವಿಗಳಲ್ಲಿ ತಾನು ಅರುಹಬೇಕಾದ ಮಂತ್ರ-ಜಲವನ್ನು ಸುರಿಸಿದನು. 'ಯಾರಿಲ್ಲದ ನೋಡಿ ಬೇರೆನ್ನ ಕರೆದೊಯ್ದು ಮರಕಿವಿಯೊಳಿಟ್ಟು ಮಂತ್ರಿಸಿದ'ನಂತೆ ಸದ್ಗುರು. ಸದ್ಗುರು ತನಗೆ ಹೇಳಲಿರುವ ಮಂತ್ರವನ್ನು ಕೇಳಲು ಶಿಷ್ಯನ ಕಿವಿಗಳು ಮರಂದತೆ ಹರವಾಗಿದ್ದವಂತೆ, ಅಗಲವಾಗಿದ್ದವಂತೆ; ಮತ್ತು ಆ ಮಂತ್ರವನ್ನು ಅರಿಯುವ ಆತುರತೆಯಿಂದ ಅವು ತುಂಬ ಹಸಿದಿದ್ದವಂತೆ. ಈ ಬಣ್ಣನೆಯು ತುಲಸಿದಾಸರ 'ಶ್ರವಣ ಸಮುದ್ರ ಸಮಾನ' 'ಸಾಗರದಂಥ ವಿಶಾಲ ಕಿವಿಗಳು' ಎಂಬ ಶಿಷ್ಯನ ಕಿವಿಗಳ ಬಣ್ಣನೆಯನ್ನು ಪೂರ್ತಿಯಾಗಿ ಹೋಲುವುದು. ಚಿದಾನಂದನು ಬರಿ 'ಮರದಂಥ ಕಿವಿಗಳು' ಎಂದರೆ, ತುಲಸಿದಾಸರ 'ಸಾಗರದಂಥ ಕಿವಿಗಳು' ಎಂದು ಹೇಳುವರು. ಇದೊಂದು ಅರ್ಥವಾದ. ಇದು ಸದ್ಗುರುಗಳು ಅರುಹಬಯಸುವದನ್ನು ಕೇಳುವ ಶಿಷ್ಯನ ಬಯಕೆಯ ತೀವ್ರತೆಯನ್ನು ಸೂಚಸುವದು.

ಚಿದಾನಂದರು ಇದರಲ್ಲಿ ಅರುಹಿದ ಎರಡನೆಯ ಮಾತು ಅನುಗ್ರಹದ ಪ್ರಕ್ರಿಯೆ. 'ಮರುಳು ಎನ್ನ ಮನ, ಮಂತ್ರ-ತಂತ್ರಕೆ ಬಗ್ಗಿತಲ್ಲಾ!' 'ಮಾಂತ್ರಿಕರೊಳು ಬಲು ದೊಡ್ಡವನೇ ಗುರು' ಎಂದು ಕವಿಯು ಹೇಳುವ. ಸದ್ಗುರು ದಯಪಾಲಿಸಿದ ಮಂತ್ರದ ಸಾಮರ್ಥ್ಯದ ಮೂಲಕ, ಮಂಗನಂತೆ ತುಂಟತನದಲ್ಲಿ ನಿರತವಾದ ಶಿಷ್ಯನ ಮನಸ್ಸು ಅವನ ನಿಯಂತ್ರಣಕ್ಕೆ ಒಳಗಾಯಿತು. ಅವನ ಅಧೀನವಾಯಿತು. ಈ ರೀತಿ ಮನಸ್ಸು ಪೂರ್ತಿಯಾಗಿ ಗೆಲ್ಲಲ್ಪಟ್ಟಾಗ, 'ಶರೀರದ ಮರೆತು ನಾ ಸಾಕ್ಷಿಯಾದೆನಮ್ಮಾ!' ಎಂದು ಕವಿಯು ಉಸುರುವ. ಪತಂಜಲಿ ಮುನಿಗಳು ತಮ್ಮ 'ತದಾ ದ್ರಷ್ಟುಃ ಸ್ವರೂಪೇ ಅವಸ್ಥಾನಮ್।' 'ಆಗ ಕಾಣುವವನು ತನ್ನ ರೂಪದಲ್ಲಿ ಬೆರೆತು ನಿಲ್ಲುವನು' ಎಂಬ ಸೂತ್ರದಲ್ಲಿ ಬಣ್ಣಿಸಿದ ಅವಸ್ಥೆಯನ್ನು ಇದು ನೇರವಾಗಿ ಹೋಲುವದು. ಪತಂಜಲಿಯ ಅರ್ಥದಲ್ಲಿಯಾಗಲಿ ಇಲ್ಲವೆ ಗ್ರೀಕ ದಾರ್ಶನಿಕರಾದ ಅರಿಸ್ಟೋಟಲ್‌ನ ಅರ್ಥದಲ್ಲಿಯಗಲಿ, 'ಸಾಕ್ಷಿ' ಇಲ್ಲವೆ 'ದ್ರಷ್ಟಾರ'ನಾಗುವುದೇ ಪರಮಾರ್ಥಸಾಧಕನು ಪಡೆಯಬೇಕಾದ ಅಂತಿಮಾದರ್ಶ. ಶಿಷ್ಯನು ಈ ಬಗೆಯಾಗಿ 'ಸಾಕ್ಷಿ'ಯಾದಾಗ, 'ಈ ಮರುಳನಿಂದೇನು ಪ್ರಯೋಜನ? ಈತನನ್ನು ಕುಟುಂಬದಿಂದಲೂ, ಮನೆಯಿಂದಲೂ, ಜೀವನದಿಂದಲೂ ಹೊರದೂಡಬೇಕು. ಇವನು ಕೇವಲ ಭಗವಂತನನ್ನು ಕಾಣುವುದರಲ್ಲಿಯೆ ರತನಾಗುವನು. ಅದರಿಂದಲೇ ಆನಂದಪಡುವನು; ಮತ್ತು ಕಾಲವನ್ನು ಹಾಳುಮಾಡುವನು' ಎಂಬುದಾಗಿ ಜನರು ಇವನನ್ನು ಜರಿದು ನುಡಿಯಲು ಪ್ರಾರಂಭಿಸಿದರಂತೆ. ಆದರೂ, ಶಿಷ್ಯನಲ್ಲಿಯ ಈ ಅನನ್ಯ ಭಗವದ್ಭಕ್ತಿಯು ಹೆಂಡತಿ, ಮಕ್ಕಳು, ಧನ ಹಾಗೂ ಸಮಾಜ ಇವುಗಳ ಪ್ರೀತಿಯನ್ನೂ ಒಳಗೊಂಡಿರುವುದು ಎಂಬುದನ್ನು ಮರೆಯಬೇಡಿರಿ ಎಂದು ಕವಿಯು

ಸುಖಸಮುಚ್ಚಯವಾದಿಗಳಂತೆ, ಮನಸ್ಸಿನಲ್ಲಿ ನಾಟುವಂತೆ ಹೇಳುವ. ಶಿಷ್ಯರು ಇಹದಲ್ಲಿಯ ಧನ, ಮನೆ, ಕುಟುಂಬ, ಸುಖ ಇತ್ಯಾದಿಗಳನ್ನು ತೊರೆಯಬೇಕಾಗಿಲ್ಲ, ಎಂಬುದನ್ನೆ ಚಿದಾನಂದರು 'ಸೇರಿ ಸೇರದಂತೆ ಮಾಡಿದನೇ ಗುರು!' ಎಂದು ತುಂಬ ವಿರೋಧಾಭಾಸಾತ್ಮಕವಾಗಿ ಅರುಹುವರು. ಈ ಬಗೆಯಾಗಿ ಜನಿಸಿದ ಕುಟುಂಬ ಪ್ರೀತಿಯ ಅನಾಸಕ್ತವಾದುದಿದ್ದಿತು. ಎಲ್ಲವನ್ನೊಳಗೊಳ್ಳುವ ಹಾಗೂ ಎಲ್ಲವನ್ನು ಸುತ್ತುವ ಭಗವದ್ಭಕ್ತಿಯು ತುಂಬ ವಿಶಾಲವಿರುವ ಮೂಲಕ, ಅದರಲ್ಲಿ ಈ ಚಿಕ್ಕ ಪುಟ್ಟ ವಿಯಗಳಿಗೆಲ್ಲ ಎಡೆಯಿದ್ದಿತು. ಇದನ್ನು ನಾವು ಪರತಮವಾದ ಸುಖ ಸಮುಚ್ಚಯವಾದವೆಂದು ಕರೆಯಬಹುದು.

ಚಿದಾನಂದರು ಅರುಹುವ ಕೊನೆಯ ವಿಷಯವದಾವುದೆಂದರೆ: 'ಇವರ ನಂಬಿದ ಮೇಲೆ, ಇವರಂತಾಗದೆ, ಭುವನಕ್ಕೆ ಬಂದಿದ್ದು ಫಲವೇನು?' ನಾವು ನಮ್ಮ ಸದ್ಗುರುಗಳನ್ನು ದೇವರೆಂದು ಬಗೆಯುವುದರಿಂದ, ಸತ್ಕರ್ಮಗಳಲ್ಲಿಯೂ, ಪಾರಮಾರ್ಥಿಕ ಅನುಭಾವದಲ್ಲಿಯೂ ನಾವು ಸದ್ಗುರುಗಳನ್ನು ಅನುಕರಿಸುವುದು ನಮ್ಮ ಶ್ರೇಷ್ಠತಮ ಆದರ್ಶವಿರುವುದು. ಈ ನಮ್ಮ ಕಿರಿಯ ಜೀವನದಲ್ಲಿ ನಾವು ಸದ್ಗುರುಗಳ ಹಾಗೂ ಪರಮಾತ್ಮನ ಪ್ರೀತಿಗೆ ಪಾತ್ರರಾಗದಿದ್ದರೆ, ಈ ಜಗತ್ತಿನಲ್ಲಿ ಹುಟ್ಟಿ ಫಲವೇನು? ಇವೇ ಈ ಪದದಲ್ಲಿಯ ಮಹತ್ವದ ಮಾತುಗಳು.

ಇನ್ನು ನಾವು ಕನ್ನಡ ಸಂತರು 'ಹಾವ'ನ್ನು ಕುರಿತು ಬರೆದ ಎರಡು ಪದಗಳನ್ನು ವಿಚಾರಿಸಲು ಪ್ರಾರಂಭಿಸುವಾ. ಅವುಗಳಲ್ಲಿಯ ಮೊದಲನೆಯದು 'ಹಾವು ತುಳಿದೆನೆ ಮಾನಿನಿ' ಎಂಬುದು. ಎರಡನೆಯದು. 'ಹಾವು ಕಚ್ಚಿತಮ್ಮಾ!' ಎಂಬುದು. 'ಹಾವು' ಕನ್ನಡ ಸಂತರ ಬಲು ಪ್ರೀತಿಯ ವಿಷಯ. ಅದಕ್ಕೆ ಎರಡು ಅರ್ಥಗಳು. ಮೊದಲನೆಯದಾಗಿ ಅದು ಮಾನವನಲ್ಲಿಯ ವಿಷಯವಾಸನೆಯ ಪ್ರತೀಕ; ಎರಡನೆಯದಾಗಿ ಅದು ಕುಂಡಲಿನಿ ಎಂಬ ಪಾರಮಾರ್ಥಿಕ ಶಕ್ತಿಯ ಪ್ರತೀಕ. ಮೈಸೂರ ಸೀಮೆಯ ಹೆಸರಾಂತ ಸತ್ಪುರುಷರಾದ ಸದಾಶಿವೇಂದ್ರ ಸರಸ್ವತಿಯವರು ಸುಮಾರು ೧೫೦ ವರ್ಷಗಳ ಪೂರ್ವದಲ್ಲಿ ಪತಂಜಲಿಯ ಯೋಗಸೂತ್ರಗಳಿಗೆ ಒಂದು ಅಂದವಾದ ಕಿರಿಯ ಭಾಷ್ಯವನ್ನು ಸಂಸ್ಕೃತ ಭಾಷೆಯಲ್ಲಿ ಬರೆದಿರುವರು. ಅದರಲ್ಲವರು ಹಾವನ್ನು ನಮ್ಮಲ್ಲಿಯ ಇಂದ್ರಿಯಶಕ್ತಿಯ ಭೌತಿಕ ಪ್ರತೀಕವೆಂದು ಬಗೆಯ ಬಹುದು ಎಂದು ಹೇಳಿರುವರು. ಸಾಧಕನಲ್ಲಿ ವೈಷಯಿಕ ವಾಸನೆಯು ನೆಲೆಸಿರುವವರೆಗೆ, ಭಗವಂತನು ಅವನಿಗೆ ಶೇಷನ ರೂಪದಿಂದ ಕಾಣಿಸಿಕೊಳ್ಳುವನು ಎಂಬುದನ್ನು ಪಾರಮಾರ್ಥಿಕ ಅನುಭವವನ್ನು ಪಡೆದವರು ನಮಗೆ ಹೇಳುವದುಂಟು. ಆದರೆ ವಿಷಯಾಸಕ್ತಿಯು ಅಳಿಯಿತೆಂದರೆ, ಕೂಡಲೇ ಹಾವು ಕೂಡ 'ವಾರಿಯಾಗತದಂತೆ'. 'ವಾರಿ ಆಗತದ' ಈ ಶಬ್ದಪ್ರಯೋಗವು ಓರ್ವ ಆಧುನಿಕ ಹಿರಿಯ ಸಂತರದಿರುವುದು.

ಇನ್ನು ಹಾವಿನ ಇರುವಿಕೆಯ ಸ್ವಂತ ಅನುಭವವನ್ನು ಪಡೆದ ಮನುಜನ ವಿಷಯದಲ್ಲಿ ಕೂಡ, ಆ ಹವು ಕೆಳಮುಖವಾದದ್ದಿರಬಹುದು ಇಲ್ಲವೆ ಮೇಲ್ಮುಖ ಮಾಡಿದ್ದಿರಬಹುದು. ಮೊದಲನೆಯ ಅವಸ್ಥೆಯಲ್ಲಿ ಅದರ ಒಲವು ವಿಶೇಷವಾಗಿ ವೈಷಯಿಕ ಜೀವನದೆಡೆ ಇರುವುದು, ಹಾಗೂ ಎರಡನೆಯ ಅವಸ್ಥೆಯಲ್ಲಿ ಅದರ ಒಲವು ಹೆಚ್ಚಾಗಿ ಭಗವಂತನೆಡೆ ಇರುವುದು. ಒಮ್ಮೊಮ್ಮೆ ಆ ಹಾವು ಸಮತಲವಾದ ಸ್ಥಿತಿಯಲ್ಲಿ ಬೀಳಬಹುದು. ಅದೇನೇ ಇದ್ದರೂ, ಕನ್ನಡ ಸಂತರ ಅಭಿಮತದ ಮೇರೆಗೆ, ಹಾವು ಒಂದು ಪ್ರಬಲವಾದ ಕಲ್ಪನೆಯನ್ನು ಸೂಚಿಸುವ ಕಾರ್ಯವನ್ನು ನಿರ್ವಹಿಸುವುದು. 'ಹಾವು ತುಳಿದೆನೆ ಮಾನಿನೀ' ಎಂಬ ಪ್ರಸ್ತುತ ಪದವು ಹಾವಿನ ವೈಷಯಿಕ ಸ್ವರೂಪವನ್ನು ಅರುಹುವದು.

ಈ ಪದವನ್ನು ರಚಿಸಿದ ಕವಿಯಾದ ಶಿಶುನಾಳಧೀಶನು ಇಲ್ಲವೆ ಆತನ ಶಿಷ್ಯನು 'ಹಾದಿಯಲ್ಲಿ ಮಲಗಿ ಇರುವ ಮೋದರೂಪ ಕ್ರೋಧರೂಪ' ಹಾವನ್ನು ಬಣ್ಣಿಸಿರುವ. ಯಾಕಂದರೆ, ಹಾವಿನ ಮನಸ್ಥಿತಿಯು ಆ ಬಗೆಯದಿರುವದು. ಹಾವಿನ ಮನೋಧರ್ಮದಲ್ಲಿ ಒಂದೆಡೆ ಕ್ರೋಧ, ಇನ್ನೊಂದೆಡೆ ಮೋದ–ಆನಂದ–ಇಂಥ ಪರಸ್ಪರ ವಿರುದ್ಧ ಭಾವಗಳನ್ನು ನೀವು ಕಾಣಬಹುದು. ನಾನು ಅಲಹಾಬಾದದಲ್ಲಿ ಇದ್ದಾಗ, ಸಾಧಕನೊಬ್ಬನು ಕೋಪದಿಂದ ಬುಸುಗುಟ್ಟುತ್ತ ಬಿದ್ದಿರುವ ಹಾವನ್ನು ತುಳಿದನು. ಅವನದನ್ನು ತುಳಿದ ಕೂಡಲೆ, ಮೊದಲವನು ಅದು ಹಾವೆಂಬುದನ್ನು ಅರಿತನು ಮತ್ತು ಅಲ್ಲಿಂದ ಒಮ್ಮೆಲೆ ಜಿಗಿದನು. ಮನೋವಿಜ್ಞಾನದಲ್ಲಿಯ ಭಾವನೆಗಳನ್ನು ಕುರಿತ ಜೇಮ್ಸ–ಲಂಗ ಸಿದ್ಧಾಂತವನ್ನು ಆ ಶಾಸ್ತ್ರದ ವಿದ್ಯಾರ್ಥಿಗಳು ಬಲ್ಲರು: 'ಮೊದಲ ಕೃತಿ, ತರುವಾಯ ಭಾವನೆ' ಎಂಬುದೇ ಆ ಸಿದ್ಧಾಂತವು. ಹಾವನ್ನು ಕಂಡಾಗ ಮೊದಲು ನೀವು ಜಿಗಿಯುವಿರಿ. ಆಮೇಲೆ ನೀವು ಹೆದರುವಿರಿ. ನೀವು ಹೆದರಿದ ಮೂಲಕ ಜಿಗಿಯುವುದಿಲ್ಲ. ಶ್ರೀ ಜೇಮ್ಸರವರು ಒಂದು ಕರಡಿಯ ದೃಷ್ಟಾಂತವನ್ನು ಕೊಡುವರು. ಅವರು ಹೇಳುವುದೇನೆಂದರೆ: ಕರಡಿಯನ್ನು ನೋಡಿದ ಕೂಡಲೆ, ಮೊದಲು ನೀವು ಕಾಲಿಗೆ ಬುದ್ಧಿ ಹೇಳುವಿರಿ. ತರುವಾಯ ನೀವು ಭೀತಿಗ್ರಸ್ತ ರಾಗುವಿರಿ. ನೀವುಮೊದಲು ಅಂಜಿ ಹಿಂದಿನಿಂದ ಪಲಾಯನ ಮಾಡುವುದಿಲ್ಲ. ಮೊದಲು ಕೃತಿಯು ಜರುಗಿ ಹಿಂದಿನಿಂದ ಭಾವನೆಯು ಜಾಗ್ರತವಾಗುವದುಂಟು.

ಪ್ರಸ್ತುತ ಪದದಲ್ಲಿ ಸಾಧಕನು ಹಾವು ತುಳಿದ ಕೂಡಲೆ ಹಾರಿ ನಿಂತನು ಮತ್ತು ತರುವಾಯ ಭಾವಸ್ಮೃತಿ ತಪ್ಪಿ ಕಳವಳಗೊಂಡನೆಂದು ಹೇಳಲಾಗಿದೆ. ಆಮೇಲೆ ಕವಿಯು, ಹಾವು ಹರಿಗೆ ಹಾಸಿಗೆಯಾದ ಹಾಗೂ ಹರನಿಗೆ ಹಾರವಾದ ಸುಪರಿಚಿತ ವಿಷಯವನ್ನು ತುಂಬ ಕಾವ್ಯಮಯವಾಗಿ ಬಣ್ಣಿಸಿರುವ. ವಿಷ್ಣುವಿನ ಶಯನ ಹಾಗು

ಶಿವನ ಭೂಷಣವೆಂಬ ಹಾವಿನ ಈ ದ್ವಿವಿಧ ಕಾರ್ಯವನ್ನು ನಾನು ಬೇರೆಡೆ ಉಲ್ಲೇಖಿಸಿರುವೆ. ಶೈವ–ವೈಷ್ಣವರ ಶಿವಸರ್ವೋತ್ತಮ ಹಾಗು ವಿಷ್ಣು ಸರ್ವೋತ್ತಮ ಎಂಬ ಪರಸ್ಪರರ ವಿರುದ್ಧವಾದ ವಾದವನ್ನು ಹಾಗು ಪರಿಹರಿಸಬಲ್ಲದು ಎಂಬುದೇ ಅದರ ತಾತ್ಪರ್ಯ. ಸಾಧಕನು ಮತ್ತೂ ಹೇಳುವದೇನೆಂದರೆ: 'ನನ್ನ ಹಿರಿಯ ಸದ್ಗುರುಗಳಾದ ಶಿಶುನಾಳಧೀಶರು ತುಂಬ ಸಮರ್ಥರಿದ್ದ ಮೂಲಕ ಮತ್ತು ಅವರು ಹಾವಿನ ವಿಷದ 'ಕೋರಿಹಲ್ಲು' ಮೊದಲೆ ಮುರಿದುಬಿಟ್ಟ ಮೂಲಕ, ಅದು ಶರೀರದಲ್ಲಿ ವಿಷವನ್ನು ಸೇರಿಸಲರಿಯದಾಯಿತು. ಅದು ನನ್ನೆಡೆ ಬಂದು, ನನ್ನ ಕಾಲಿಗೆ ಬರೀ ಸುತ್ತಿಕೊಂಡಿತು.' ಆದುದರಿಂದ ಇದು ವಿಷಯರೂಪಿಯಾದ ಹಾವಿನ ಮೊದಲನೆಯ ಅಂಗ. ನಾವು ಅದರ ಇನ್ನೂ ಎರಡು ಅಂಗಗಳನ್ನು ವಿಚಾರಿಸ ಲಿರುವೆವು. ಒಂದನ್ನು ಮುಂಬರುವ ಪದದಲ್ಲಿಯೂ, ಎರಡನೆಯದನ್ನು ಕೆಲಸಮಯದ ಅನಂತರದಲ್ಲಿಯೂ ವಿವರಿಸಲಿರುವೆವು. ಪ್ರಸ್ತುತ 'ಹಾವು ತುಳಿದೆನೇ' ಎಂಬ ಪದದಲ್ಲಿ, ಹಾವು ತನ್ನ ಅನಿಷ್ಟ ಪರಿಣಾಮವನ್ನು ಉಂಟು ಮಾಡಲು ಅಸಮರ್ಥವಾಗುವುದು. 'ಹಾವು ಕಚ್ಚಿತಮ್ಮಾ' ಎಂಬ ಎರಡನೆಯ ಪದದಲ್ಲಿ ಅದು ಪಾರಮಾರ್ಥಿಕ ಚೈತನ್ಯಾಣುರೂಪಿಯಾದ 'ಗೊರಲಿ'ಯಿಂದ ನುಂಗಲ್ಪಟ್ಟಿದೆ, ನಾಶಮಾಡಲ್ಪಟ್ಟಿದೆ; ಮತ್ತು ಮೂರನೆಯ ಪದವಾದ 'ಗೊಲ್ಲರು ನಾವು ಗೊಲ್ಲರು' ಎಂಬುದರಲ್ಲಿ, ಅದು ಬುಟ್ಟಿಯಲ್ಲಿ ಹಾಕಲ್ಪಟ್ಟು ಸಾಧು ಮಾಡಲಾಗಿದೆ.

ನಾವು ವಿವರಿಸಲಿರುವ ಮುಂದಿನ ಪದವು 'ಹಾವು ಕಚ್ಚಿತಮ್ಮಾ' ಎಂಬುದು. ಅದರಲ್ಲಿ ಹಾವು ಕಚ್ಚುವುದು. ಆದರೆ ಅದರ ದುಷ್ಪರಿಣಾಮ ಆಗದು; ಮತ್ತು ಕೊನೆಗದನ್ನು ಪಾರಮಾರ್ಥಿಕ ಚೈತನ್ಯಾಣುರೂಪಿಯಾದ ಗೊರಲಿಯು ನುಂಗಿ ಬಿಡುವುದು.ಇಲ್ಲಿ ಹಾವು ಕುಂಡಲಿನಿಯ ಪ್ರತೀಕವಿರುವಂತೆ ಕಾಣುವುದು. ಯಾಕಂದರೆ ಅದು ಮಣಿಪುರ–ಚಕ್ರದಲ್ಲಿ ಮಲಗಿರುವುದು ಎಂದು ಕವಿಯು ಹೇಳುವ. ಯೋಗಶಾಸ್ತ್ರದಲ್ಲಿ ಮುಂದಿನ ಆರು ಚಕ್ರಗಳು ಭಾವಿಸಲಾಗಿವೆ ಎಂಬುದನ್ನು ಯೋಗಿಕ ಶರೀರಶಾಸ್ತ್ರಜ್ಞರು ಬಲ್ಲರು; ಮೂಲಾಧಾರ, ಸ್ವಾಧಿಷ್ಠಾನ, ಮಣಿಪುರ, ಅನಾಹತ, ವಿಶುದ್ಧಿ, ಲಲಾಟ ಅಥವಾ ಅಜ್ಞಾ, ಅವುಗಳಲ್ಲಿಯ ಮಣಿಪುರ ಚಕ್ರವು ಹೊಕ್ಕಳಲ್ಲಿರುವುದು. ಹಾವು ಈ ನಾಭಿಕಮಲದಲ್ಲಿ ಮಲಗುವುದು. ಜ್ಞಾನೇಶ್ವರರು ಭಗವದ್ಗೀತೆಯ ತಮ್ಮ ಭಾಷ್ಯದಲ್ಲಿ, ಈ ಕುಂಡಲಿನೀ ಎಂಬ ಸರ್ಪಶಕ್ತಿಯನ್ನು ಹೇಗೆ ಕಣ್ಣಿಗೆ ಕಟ್ಟಿದಂತೆ ಬಣ್ಣಿಸಿರುವರು ಎಂಬುದನ್ನು ಜ್ಞಾನೇಶ್ವರಿಯ ಓದುಗರು ಚೆನ್ನಾಗಿ ಅರಿವರು. ಅವರು ತಮ್ಮ ಜ್ಞಾನೇಶ್ವರಿಯಲ್ಲಿ, 'ನಾಗಿಣೀಚೇ ಪಿಲೇ ಕುಂಕುಮೇ ನಾಹಲೇ।' (ಜ್ಞಾ. ೬–೨೨೨) 'ಕುಂಕುಮದಲ್ಲಿ ಜಳಕಮಾಡಿದ ನಾಗರ ಹಾವಿನ

ಮರಿಗಳಂತೆ' ಈ ಕುಂಡಲಿನಿಯು ಮಲಗಿರುವಳು ಎಂದು ಅವರು ಅರುಹಿರುವರು. ಪ್ರಸ್ತುತ ಪದವನ್ನು ರಚಿಸಿದ ಶಿರಸಂಗಿಯ ಬಲಭೀಮಯೋಗಿಯ ಶಿಷ್ಯನು, ಈ ಹಾವು ಮಣಿಪುರ ಚಕ್ರದಲ್ಲಿ 'ಬಾಲ ಮೇಲಕ್ಕೆತ್ತಿ' ಮಲಗಿತ್ತು ಎಂದು ಬಣ್ಣಿಸಿರುವ. ಹಾವು ಭೀಕರ ರೂಪವನ್ನು ಕಳೆದಾಗಲೇ ತನ್ನ ಬಾಲವನ್ನು ಮೇಲಕ್ಕೆ ಎತ್ತುವದುಂಟು. ಹಾವು ತನಗೆ ಪ್ರತ್ಯಕ್ಷ ಕಚ್ಚಿತೆಂದು ಕವಿಯು ಹೇಳುವ. 'ಹಾವು ಕಚ್ಚಿತಮ್ಮಾ' ಆದರೆ 'ದೇವರ ಕರುಣೆಯಿಂದ ನಾನುಳಿದೆನಮ್ಮಾ!' ಎಂಬುದಾಗಿ ಅವನು ತಾನು ರಕ್ಷಿಸಲಾದ ಬಗೆಯನ್ನು ಅರುಹುವ. ಸುಮಾರು ೫೦ ವರ್ಷಗಳ ಪೂರ್ವದಲ್ಲಿ, ಅಥಣಿ ತಾಲೂಕಿನಲ್ಲಿಯ ಕಕಮರಿ ಎಂಬ ಗ್ರಾಮದಲ್ಲಿ ಒದಗಿದ ಇಂಥ ಸಂಗತಿಯೊಂದನ್ನು ನಾನಿಲ್ಲಿ ತಮಗೆ ಹೇಳಬಯಸುವೆ. ಅಲ್ಲಿ ನನ್ನ ಸದ್ಗುರುಗಳ ಶಿಷ್ಯರಾದ ಶಂಕರಪ್ಪರೆಂಬುವವರು, ತಮ್ಮ ಹೊಲದಲ್ಲಿಯ ಕಣಿಕೆಯ ಬಣಿವೆಯ ಬಳಿಯಲ್ಲಿ ಧ್ಯಾನಕ್ಕೆ ಕುಳಿತಿರುವಾಗ, ಅವರನ್ನು ಒಂದು ಹಾವು ಪ್ರತ್ಯಕ್ಷವಾಗಿ ಕಚ್ಚಿತು. ಆದರೆ, ಅವರು ಅಲ್ಲಿಂದ ಕದಲಲಿಲ್ಲ. 'ನನ್ನ ಸದ್ಗುರುಗಳಲ್ಲಿ ಏನಾದರೂ ಸತ್ವವಿದ್ದರೆ, ಸಾಮರ್ಥ್ಯವಿದ್ದರೆ, ನನಗೆ ಯಾವ ಬಗೆಯ ಅಪಾಯವೂ ಆಗಲರಿಯದು' ಎಂದು ಬಗೆದು ಅವರು ಅಲ್ಲಿಯೆ ಹಾಗೆಯೆ ಕುಳಿತರು; ಮತ್ತು ಅವರು ಸುರಕ್ಷಿತವಾಗಿ ಉಳಿದರು. ಅದೇ ಬಗೆಯಾಗಿ, ಈ ಕವಿಯು ಕೂಡ 'ತನ್ನನ್ನು ಹಾವು ಪ್ರತ್ಯಕ್ಷ ಕಡಿದಿದ್ದರೂ, ತಾನು ರಕ್ಷಿಸಲ್ಪಟ್ಟೆನು' ಎಂದು ಅರುಹಿರುವ.

ಇನ್ನು ಮುಂದೇನಾಯಿತು ಎಂಬುದನ್ನು ಕೇಳಿ. ಕವಿಯು ಈ ಶರೀರವನ್ನು ಹುತ್ತಿನೊಡನೆ ಹೋಲಿಸುವ. ಅದಕ್ಕೆ ಒಂಭತ್ತು ರಂಧ್ರಗಳಿರುವವು. ಅವು ಒಂದು ಬಗೆಯ ಪ್ರವೇಶದ್ವಾರಗಳಂತಿರುವವು. ಯೋಗಿಕ ಶರೀರಶಾಸ್ತ್ರದಲ್ಲಿ ಅವುಗಳನ್ನು ನವ-ರಂಧ್ರಗಳೆಂದು ಕರೆಯಲಾಗಿದೆ. ಯಾವ ರಂಧ್ರದೊಳಗಿಂದ ಹಾವು ಒಳಸೇರ ಬಹುದೆಂಬುದನ್ನು ನಾವು ಅರಿಯೆವು. ನಾವು ಅದರ ವೈಷಯಿಕ ಪ್ರಭಾವಕ್ಕೆ ಹೇಗೆ ಹಾಗೂ ಯಾವ ಇಂದ್ರಿಯದ ಮುಖಾಂತರ ಒಳಗಾಗಬಹುದು ಎಂಬುದನ್ನು ನಾವು ಅರಿಯೆವು. ಈ ವೈಷಯಿಕ ಸರ್ಪಶಕ್ತಿಯು ನಮ್ಮ ಕಣ್ಣು, ಕಿವಿ, ಬಾಯಿ, ಇತ್ಯಾದಿಗಳಲ್ಲಿಯ ಯಾವ ಇಂದ್ರಿಯದೊಳಗಿಂದ ಒಳಸೇರಬಹುದು ಎಂಬುದನ್ನು ಹೇಳಲು ಬರುವುದಿಲ್ಲ. ಆದರೆ ಅದೊಮ್ಮೆ ಒಳಸೇರಿತೆಂದರೆ, ನಾವು ಆ ಶಕ್ತಿಗೆ ಅಧೀನರಾಗುವೆವು. ಇನ್ನು ನಮ್ಮ ಕವನದೆಡೆ ತೆರಳಿ, ಈ ಸಾಧಕನಿಗೆ ಮುಂದೇ ನಾಯಿತೆಂಬುದನ್ನು ನೋಡುವಾ! ಅವನು ಒಬ್ಬ ಹಾವಾಡಿಗನನ್ನು ಹುಡುಕಿದನು. 'ಗೊಲ್ಲನ ಹುಡುಕಿದನು'. ಅವನಿಂದ ಮಂತ್ರೋಪದೇಶವನ್ನು ಪಡೆದನು. ಅವನು 'ಮಂತ್ರ ಹೇಳಿದ ಪ್ರಣವ'. ಧ್ಯಾನಕ್ಕಾಗಿ ಪರಮಾತ್ಮನ ಪ್ರತೀಕವಾದ ಓಂಕಾರ

ಮಂತ್ರವನ್ನು ಹೇಳಿದನು; ಮತ್ತು ಸಾಧಕನು ಅದರ ನೆರವಿನಿಂದ ಧ್ಯಾನಮಾಡ ತೊಡಗಿದಾಗ, ಆ ಹಾವಿನ ಬಲವು ಅಳಿಯಿತು ಮತ್ತು 'ಪಾರಮಾರ್ಥಿಕ ಚೈತನ್ಯಾಣು' ಕಾಣಿಸಿಕೊಂಡಿತು. ಇದನ್ನೆ ಮಹಾರಾಷ್ಟ್ರ ಸಂತರು 'ಬಿಂದುಲೇ' ಎಂತಲೂ, ಕನ್ನಡ ಸಂತರು 'ಬಿಂದು' ಎಂತಲೂ, ಈ ಪ್ರಸ್ತುತ ಕವನದ ಕರ್ತರು 'ಗೊರಲಿ' ಎಂತಲೂ ಕರೆದಿರುವರು. ತರುವಾಯ ಈ 'ಗೊರಲಿ' ಹಾವನ್ನು, ನುಂಗಿತ್ತು. ಇದೆಲ್ಲ ಒದಗಿದುದು ಈ ಬಗೆಯಾಗಿ: ಮೊದಲು ಹಾವು ಹುತ್ತಿನ ರಂಧ್ರಗಳೊಳಗಿಂದ ಒಳಸೇರಿ, ಅಲ್ಲಿ ನೆಲೆಸಿದ್ದ ಚೈತಾಣ್ಯಾಣುವನ್ನು ಅಲ್ಲಿಂದ ಹೊರದೂಡಿತ್ತು. ಆದರೆ ಪಾರಮಾರ್ಥಿಕ ಗೊಲ್ಲನ ನೆರವಿನಿಂದ 'ಚೈತನ್ಯಾಣು' ಮರಳಿ ಒಳಗೆ ಸೇರಿ; ಅದು ಹಾವನ್ನೇ ನುಂಗಿಬಿಟ್ಟಿತಷ್ಟೇ ಅಲ್ಲದೆ ಹುತ್ತವನ್ನು ಕೂಡ ಹಾಳು ಮಾಡಿತು. ಸದ್ಗುರುವಿನಿಂದ ಲಭಿಸಿದ ಪಾರಮಾರ್ಥಿಕ ಶಕ್ತಿಯು ಅವನ ಶರೀರ ಇಂದ್ರಿಯ ಗಳನ್ನೆಲ್ಲ ನುಂಗಿ ಬಿಟ್ಟಿತು. ಇದು ಗ್ರೀಕ ದಾರ್ಶನಿಕನಾದ ಎಂಪಿಡಾಕ್ಲೀಸನು ಅರುಹಿದ ರೀತಿಯಿಂದಲೇ ನೇರವಾಗಿ ನಡೆಯಿತು. ಅವನು ಹೇಳಿರುವದೇನೆಂದರೆ: ಈ ಜಗತ್ತಿನಲ್ಲಿ 'ಪ್ರೀತಿ' 'ಕಲಹ'(ದ್ವೇಷ) ಎಂಬ ಎರಡು ತತ್ವಗಳಿರುವವು. ಅವು ಮಾನವನ ಮೇಲಷ್ಟೇ ಪ್ರಭಾವ ಬೀರುವುದಿಲ್ಲ. ಇಡಿ ವಿಶ್ವದ ಮೇಲೆ ತಮ್ಮ ಪ್ರಭಾವವನ್ನು ಬೀರುವವು. ಈ ವಿಶ್ವವನ್ನು ಒಂದು ಗೋಲಕ್ಕೆ ಹೋಲಿಸಲಾಗಿದೆ. ಪ್ರೀತಿಯು ಈ ಗೋಲವನ್ನು ಪ್ರವೇಶಿಸಿದಾಗ, ಅದು ಕಲಹವನ್ನು ಹೊರದೂಡುವದು; ಮತ್ತು ಕಲಹವು ಅದನ್ನು ಸೇರಿದಾಗ, ಅದು ಪ್ರೀತಿಯನ್ನು ಹೊರಗೆ ತಳ್ಳುವುದು. ಇಲ್ಲಿ ಇವೆರಡರ ಸಹನಿವಾಸವು ಅಸಾಧ್ಯವಾದುದು. ಕೊನೆಗೆ ಪ್ರೀತಿಯು ಪ್ರವೇಶಿಸಿ ಕಲಹವನ್ನು ಹೊರದೂಡುವ ಭಾಗ್ಯವನ್ನು ಮಾನವನು ಪಡೆಯಬಹುದು. ಇದೇ ಬಗೆಯಾಗಿ, ಚೈತನ್ಯಾಣುಗಳು ಶರೀರದಲ್ಲಿ ಸೇರಿ, ಅವು ಹಾವನ್ನು ಹೊರದೂಡ ಬಹುದಷ್ಟೇ ಅಲ್ಲದೆ ಅದನ್ನು ನುಂಗಿಯೂ ಬಿಡಬಹುದು.

ಇಲ್ಲಿ ಒಂದು ಪ್ರಶ್ನೆಯು ಉದ್ಭವಿಸುವುದು; ಈ ಚೈತನ್ಯಾಣುಗಳು ಮೊದಲಿನ ಹುತ್ತವನ್ನು ಸೇರುವ ಮುನ್ನ ಎಲ್ಲಿದ್ದವು? ಅವು ಎಲ್ಲಿ ನೆಲೆಸಿದ್ದವು; 'ನಾವು ಅರಿಯೆವು' ಎಂಬುದು ಅದಕ್ಕೆ ಕವಿಯ ತುಂಬ ಜಾಣ್ಮೆಯ ಉತ್ತರ. ಈ ಉತ್ತರವು ಋಗ್ವೇದದಲ್ಲಿಯ ನಾಸದೀಯಸೂಕ್ತದ ಋಷಿಯ ಮುಂದಿನ ಉತ್ತರದ ರೀತಿಯನ್ನೂ, ತಿರುಳನ್ನೂ ಒಳಗೊಂಡಿರುವುದು: 'ಸೋ ಅಂಗವೇದಯದಿ ವಾನ ವೇದ' 'ಅದನ್ನು ಆ ಪರಮಾತ್ಮನು ಅರಿಯಬಹುದು ಇಲ್ಲವೆ ಅವನೂ ಕೂಡ ಅರಿಯದಿರಬಹುದು' ಎಂಬುದು ಆ ಋಷಿಯ ಹೇಳಿಕೆ. 'ಯಾವ ಸ್ಥಾನದಲ್ಲಿ ಆ ಗೊರಲಿ ಇತ್ತು, ಮೂಲ ಪ್ರಣವ ಬಲ್ಲವನಿಗೆ ಗೊತ್ತು' ಎಂದು ಕವಿಯು ಅರುಹುವ. ಪರಮಾರ್ಥಿಕ ಶಕ್ತಿಯು ಬರುವುದೆಂಬುದರಲ್ಲಿ ಸಂದೇಹವಿಲ್ಲ. ಆದರೆ, ಅದು ಎಲ್ಲಿಂದ, ಹೇಗೆ ಬರುವು ದೆಂಬುದನ್ನು ನಾವು ಹೇಳಲರಿಯೆವು. ಇದು ಈ ಪದದ ತಿರುಳು.

ಇದಾದ ಮೇಲೆ ನಾವು ಬೇರೆ ಎರಡು ಪದಗಳೆಡೆ ಹೊರಳೋಣ: ಒಂದು ವಿಜಾಪುರಕ್ಕೆ ತೀರ ನೆರೆಯಲ್ಲಿರುವ ಕಾಖಂಡಿಕಿಯ ಮಹಿಪತಿದಾಸರದು; ಎರಡನೆಯದು ಮಹಿಪತಿಸುತರಾದ ಕೃಷ್ಣರಾಯರದು. ಮಹಿಪತಿ ಸ್ವಾಮಿಗಳು ಸುಮಾರು ಮೂರು ಶತಮಾನಗಳ ಪೂರ್ವದಲ್ಲಿ, ವಿಜಾಪುರ ದರಬಾರದಲ್ಲಿ ದಿವಾಣರಿದ್ದರು. ತರುವಾಯ ಅವರು ಕಾಖಂಡಿಕಿಗೆ ಹೋಗಿ ಅಲ್ಲಿಯೆ ನೆಲೆಸಿದರು. ಅವರು ಹಿರಿಯ ಪಾರಮಾರ್ಥಿಕ ಕವಿಗಳಲ್ಲಿ ಒಬ್ಬರು. ಈ ಪದದಲ್ಲಿ 'ಕರುಣಿಸೋ ಗುರು ಎನಗೆ' ಎಂದು ತಮ್ಮ ಸದ್ಗುರುಗಳಿಗೆ ಕರುಣವನ್ನು ದಯಪಾಲಿಸಲು ಬೇಡಿಕೊಂಡಿರುವರು. ಮೊದಲು ತಾನು ಭಗವಂತನ ಕುರುಹನ್ನು ಕಾಣುವ ಸೌಭಾಗ್ಯವನ್ನು ಪಡೆಯಬೇಕು ಎಂದು ಅವರು ಹೇಳುವರು. 'ನೀನು ಖೂನದೋರದಿದ್ದರೆ, ಪ್ರಾಣ ನಿಲ್ಲದೋ ನಿಮಿಷಾರ್ಧವಿಲ್ಲಿ.' 'ಆದುದರಿಂದ ನಿನ್ನ ಖೂನವನ್ನು ತೋರಯ್ಯ!' ಎಂದವರು ಉಸುರುವರು. ಈ 'ಖೂನ'(Sign) ಎಂಬ ಶಬ್ದಕ್ಕೆ ಗ್ರೀಕ ಹಾಗೂ ಕ್ರಿಶ್ಚನ್ ಧಾರ್ಮಿಕ ಸಾಹಿತ್ಯದಲ್ಲಿ ಒಂದು ವಿಲಕ್ಷಣವಾದ ಅರ್ಥ ಉಂಟು. ಯಾವುದರ ಮುಖಾಂತರ ಪಾರಮಾರ್ಥಿಕ ಅನುಭವವು ಸಾಧಕರಿಗೆ ಪ್ರತೀತವಾಗುವುದೋ ಅಂಥ ಪ್ರತೀಕವಿದು. 'ನಿನಗೆ ಸರಿದೋರಿದ ಒಂದು ಕುರುಹನ್ನು ಕಾಣಿಸು' ಎಂದು ಮಹಿಪತಿಯವರು ಭಿನ್ನವಿಸುವರು. ಇಂಥ ಕುರುಹುಗಳು ಅಗಣಿತವಾಗಿರುವವು. ಅವನ್ನೆಲ್ಲ ನಾವಿಲ್ಲಿ ಉಲ್ಲೇಖಿಸುವ ಅಗತ್ಯವಿಲ್ಲ. ಮಹಿಪತಿಯವರು ಮತ್ತೆ ಬೇಡಿಕೊಳ್ಳುವದೇನೆಂದರೆ: 'ತಾಯಿಯಂತೆ ತುತ್ತು ತುತ್ತಿಗೆ ಒಮ್ಮೆ ಹತ್ತಿರದಲಿದ್ದು ಸಂತತ ಸಲಹಯ್ಯ!' 'ತಾಯಿಯ ಕರುಣವನ್ನು ಕರೆಯಯ್ಯ. ನಾನು ಭವಸಾಗರವನ್ನು ಸೇರಿರುವೆ; ಮತ್ತು ಅದರಲ್ಲೀಗ ಆಳವಾಗಿ ಮುಳುಗಿರುವೆ. ಈ ಕಡಲನ್ನು ಹೊಕ್ಕಿಹೆನೋ! ನನ್ನನ್ನು ಪರತೀರಕ್ಕೆ ಒಯ್ದು ಮುಟ್ಟಿಸಯ್ಯ! ಈ ಕಡಲಿನಿಂದ ನನ್ನನ್ನು ದಯವಿಟ್ಟು ಹೊರಗೆ ತೆಗೆಯಯ್ಯ!' ಕೆಲವೊಂದು ಸಲ ನಾನು 'ಕಡಲು' ಈ ಪಾಠದ ಬದಲು 'ಒಡಲು' ಎಂಬ ಭಿನ್ನ ಪಾಠವನ್ನು ಕೇಳಿರುವೆ. ಅದಕ್ಕನುಗುಣವಾಗಿ ನಾವು ಅವರ ಬಿನ್ನಹವನ್ನು ಈ ರೀತಿ ಅರುಹಬಹುದು: 'ಅಯ್ಯ! ನಾನು ನಿನ್ನ ಒಡಲನ್ನೇ ಸೇರಿರುವೆ. ನಿನ್ನ ಆಶ್ರಯವನ್ನೇ ಪಡೆದಿರುವೆ. ದಯವಿಟ್ಟು ನನ್ನನ್ನು ಕಾಯಯ್ಯ!'

ನೀವು 'ಒಡಲು' ಎಂಬ ಮೇಲಿನ ಪಾಠಭೇದವನ್ನು ಮೆಚ್ಚಿದರೆ, ನಾನು ನನ್ನ ಸ್ವಂತ ಅನುಭವವೊಂದನ್ನು ಹೇಳಬಹುದು. ಸುಮಾರು ಮೂವತ್ತು ವರುಷಗಳ ಪೂರ್ವದಲ್ಲಿ, ನಾನು ಕಲಕತ್ತೆಯಲ್ಲಿಯ ಪ್ರಾಣಿಸಂಗ್ರಹಾಯಲವನ್ನು ಸಂದರ್ಶಿಸಿದ್ದೆ. ಅಲ್ಲಿ ನಾನು ಕಾಂಗೂರೂ ಎಂಬ ಪ್ರಾಣಿಯನ್ನೂ, ಅದರ ಮರಿಯನ್ನೂ ನೋಡಿದೆ. ಸಂದರ್ಶಕನೊಬ್ಬನು ಆ ಮರಿಯನ್ನು ಹಿಂಬಾಲಿಸಿದಾಗ, ತಾಯಿಯು ತನ್ನ ಒಡಲಲ್ಲಿಯ ಒಂದು ಚೀಲನ್ನು ತೆರೆದಳು; ಮತ್ತು ಆ ಮರಿಯನ್ನು ಅದರಲ್ಲಿ

ಬರಮಾಡಿಕೊಂಡಳು. ಆ ಮರಿಯು ಈ ರೀತಿ ಚೀಲದಲ್ಲಿ ಸೇರಿದೊಡನೆ, ಅದು ನಿರ್ಭಯವಾಯಿತು. ಅದು ಚೀಲದ ಹೊರಗೆ ಹಣಿಕಿ ಹಾಕಿ, ಅದರ ಬಳಿ ಸುಳಿದ ಪ್ರತಿಯಿಬ್ಬನೆಡೆ ಅದು ಧೈರ್ಯದಿಂದ ದಿಟ್ಟಿಸಿ ನೋಡತೊಡಗಿತು. ಆದುದರಿಂದ, ಅದೇ ಬಗೆಯಾಗಿ ಕವಿಯು ಹೇಳುವುದೇನೆಂದರೆ: "ಅಯ್ಯ, ನಾನು (ಈ ಕಾಂಗಾರೂವಿನ ಮರಿಯಂತೆ) ನಿನ್ನ ಒಡಲನ್ನು ಸೇರಿ, ನಿನ್ನ ರಕ್ಷಾಕವಚದ ಆಶ್ರಯ ದಲ್ಲಿ ಈ ಪ್ರಪಂಚದ ಕಷ್ಟನಿಷ್ಠುರಗಳನ್ನು ಎದುರಿಸುವಂತೆ ಕರುಣಿಸು!' ಇದಾದ ಮೇಲೆ, ಪರಮಾತ್ಮನ ಕುರುಹನ್ನು ಕುರಿತು ಹೇಳಬೇಕಾದರೆ, ಮಹಿಪತಿಯವರು ತಮಗೆ ಪರಮಾತ್ಮನು ತನ್ನ ಪೂರ್ಣರೂಪದ ದರ್ಶನವನ್ನು ನೀಡಲು ಆತನನ್ನು ಬೇಡಿಕೊಳ್ಳುವರು. ಅವರು ಮತ್ತೂ ಬೇಡುವುದೇನೆಂದರೆ: 'ಅಯ್ಯ! ನಾನು ನಿನ್ನ ರೂಪವನ್ನು ಕಾಣಬಯಸುವುದು ಕೇವಲ ಸಮಾಧಿಯಲ್ಲಿ ಇಲ್ಲವೆ ಧ್ಯಾನದಲ್ಲಿ ಅಷ್ಟೇ ಅಲ್ಲ; ನಾನು ಪ್ರಾಪಂಚಿಕ ಕೆಲಸಗಳಲ್ಲಿ (ರೂಢಿಯೊಳಗೆ) ತೊಡಗಿದಾಗಲೂ ಕೂಡ ನಾನದನ್ನು ಕಾಣಬೇಕು. ಆಗಲೇ ನನಗೆ ನಿನ್ನ ನಿಜವಾದ ದರ್ಶನ ಲಭಿಸಿತು ಎಂದು ನಾನು ಬಗೆಯುವೆ.' ಕೊನೆಗೆ, 'ಅಯ್ಯ! ನೀನು ನನ್ನ ಸುತ್ತುಮುತ್ತಲು ಸುಳಿದು, ನನ್ನನ್ನು ಸಲಹಯ್ಯ!' ಎಂದು ಪ್ರಾರ್ಥಿಸಿದರು. ತುಕಾರಾಮರೂ ಕೂಡ ಇದೇ ಬಗೆಯ ತಮ್ಮ ಅನುಬವವನ್ನು ಅರುಹಿರುವರು. 'ಹರಿ ಹಾ ಭೋವೇ ಭೋವತಲಾ।' 'ಹರಿಯು ನನ್ನ ಸುತ್ತಲು ಸುಳಿಯುತ್ತಿರುವ' ಎಂದು ಅವರು ಹೇಳಿರುವರು. ಭಗವದ್ಗೀತೆಯಲ್ಲಿಯೂ 'ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿ ತಾತ್ಮನಾಮ್।' 'ಆತ್ಮನನ್ನು ಸಾಕ್ಷಾತ್ಕರಿಸಿಕೊಂಡ ಮಹಾತ್ಮರ ಸುತ್ತಲು ಬ್ರಹ್ಮಾನಂದವು ನೆಲೆಸಿರುವುದು'ಎಂಬುದಾಗಿ ಹೇಳಲಾಗಿದೆ. ಈ ರೀತಿ ಮಹಿಪತಿಯವರು ಭಗವಂತ ನನ್ನು, ತನ್ನ ಸುತ್ತಲು ಸುಳಿದು ಮಗುವಿನಂತೆ ತನ್ನನ್ನು ರಕ್ಷಿಸಲು ಪ್ರಾರ್ಥಿಸಿರುವರು.

ಇದಾದ ಮೇಲೆ ನಾನು ಮಹಿಪತಿಸುತರಾದ ಕೃಷ್ಣರಾಯರ 'ಗುರುರಾಯ ನಂಥ ಕರುಣಾಳು' ಎಂಬ ಪದವನ್ನು ವಿಚಾರಿಸಲಿರುವೆ. ಮಹಿಪತಿಯವರು ಭಗವಂತನ ಕರುಣವನ್ನು ಪಡೆಯಲು ಪ್ರಾರ್ಥಿಸುತ್ತಿದ್ದರೆ, ಅವರ ಸುತರಾದ ಕೃಷ್ಣರಾಯರು ತಾವು ಅದನ್ನು ಪಡೆದುದನ್ನು ಅರುಹುವರು. 'ಗುರುರಾಯನಂಥ ಕರುಣಾಳು ಕಾಣೆ ನಾ ಈ ಜಗದೊಳು' ಎಂದು ಅವರು ಹೇಳುವರು. ಈ ಕರುಣವು ಯಾವ ಯಾವ ಬಗೆಯಿಂದ ಅನುಭವಕ್ಕೆ ಬರಬಲ್ಲದು? ಇಲ್ಲಿ ಮಹಿಪತಿ ಸುತರು ಮುಂದಿನ ಬಲು ಸೂಕ್ಷ್ಮವಾದ ಮನೋವೈಜ್ಞಾನಿಕ ಸೂಚನೆಗಳನ್ನು ಮಾಡಿರುವರು: 'ನನ್ನ ಸದ್ಗುರು ನನ್ನ ಉದ್ದೇಶವನ್ನೂ ಬಯಕೆಗಳನ್ನೂ ಅರಿವನು. ಆದುದರಿಂದ ಅವನು ನನಗೆ ಅಭಯವನ್ನು ನೀಡುವನು'. ಎರಡನೆಯದಾಗಿ, 'ನಾನು

ಬೇಡಿಕೊಳ್ಳದಿದ್ದರೂ ಅವನು ನನಗೆ ತನ್ನ ರಕ್ಷಣವನ್ನು ನೀಡುವ'. ಅವನು ಅನ್ಯರಲ್ಲಿ ನನ್ನ ಬಗೆಗೆ ಆದರಭಾವವನ್ನು ಹುಟ್ಟಿಸುವ. ನನ್ನ ಸದ್ಗುರು ನನ್ನ ದುಷ್ಕರ್ಮಗಳನ್ನು ಅರಿಯಬಹುದೆಂದು ಬಗೆದು ನಾನು ಅವನ್ನು ಎಸಗಲು ಅಂಜುವೆ; ಮತ್ತು ಅವನು ನನ್ನ ಸತ್ಕರ್ಮಗಳನ್ನು ಅರಿಯಬಹುದೆಂದು ಬಗೆದು ನಾನು ಅವನ್ನು ಪ್ರೀತಿಯಿಂದ ಮಾಡುತ್ತಲಿರುವೆ. ಅದರ ಮೂಲಕ ಸಮಾಜದಲ್ಲಿ ನನ್ನ ಬಗೆಗೆ ಒಂದು ಬಗೆಯ ಆದರಭಾವನೆಯು ಹುಟ್ಟಿರುವುದು. ಸದ್ಗುರುಗಳ ಕರುಣದ ಮೂಲಕ, ನನ್ನ ಬಯಕೆಗಳೆಲ್ಲ ಅಂತರಂಗದಲ್ಲಿ ಜನಿಸುವ ಮುನ್ನವೇ ಪೂರ್ಣವಾಗುವವು. ಒಂದು ಒಳ್ಳೆಯ ಬಯಕೆಯು ನನ್ನ ಮನದಲ್ಲಿ ಮೂಡುವ ಪೂರ್ವದಲ್ಲಿಯೆ, ಅದು ನನ್ನ ಸದ್ಗುರುವಿನಿಂದ ಸಫಲಗೊಳಿಸಲಾಗುವುದು. ನಾಲ್ಕನೆಯದಾಗಿ, ನನ್ನ ಸದ್ಗುರು ನನಗೆ ತನ್ನ ಸೇವೆಯನ್ನು ಮಾಡುವ ಅವಕಾಶವನ್ನು ಸಲ್ಲಿಸಿ, ನನ್ನನ್ನು ಅನುಗ್ರಹಿಸಿರುವನು. ತಮ್ಮ ಸದ್ಗುರುಗಳ ಸೇವೆ ಮಾಡುವಲ್ಲಿ ಅಭಿಮಾನವನ್ನು ತಳೆಯುವ ಶಿಷ್ಯರು ಅದೆಷ್ಟು ಜನ? 'ಧನ್ಯ ಮಡಿದ ಸೇವೆಯೊಳಿಟ್ಟು,' ಎಂದು ಮಹಿಪತಿಸುತರು ಹೇಳುವರು. ಕೊನೆಯದಾಗಿ, ನನ್ನ ಸದ್ಗುರು ತನ್ನ ಪಾರಮಾರ್ಥಿಕ ಅನುಭವದ ಗುಟ್ಟನ್ನು ನನಗೆ ಅರುಹಿದ. ಅವನು ತನ್ನ ಅನುಭವದ ಜ್ಞಾನದಲ್ಲಿಯೂ ಹಾಗೂ ಪ್ರತ್ಯಕ್ಷ ಅನುಭವದಲ್ಲಿಯೂ ನನ್ನನ್ನು ಪಾಲುಗಾರನನ್ನಾಗಿ ಮಾಡಿದ. 'ಘನ ತೋರಿಸಿ ಕೊಟ್ಟ'. ಅವನು ತನ್ನ ಅನುಭಾವದಲ್ಲಿ ನನ್ನನ್ನು ಪಾಲುಗಾರನನ್ನಾಗಿ ಮಾಡದೆ, ಆ ಅನುಭಾವದ ಜ್ಞಾನವನ್ನು ನೀಡಿದರೂ ಕೂಡ, ಅದೇನೂ ಕಡಿಮೆಯಾಗಲಿಲ್ಲ. ಅದೂ ಬೇಕಾದಷ್ಟು ಮಹತ್ವದ್ದಾಗಬಹುದು. ನನ್ನ ಪರಿಚಿತ ಸದ್ಗುರುಗಳೊಬ್ಬರಿಗೆ ಇಬ್ಬರು ಶಿಷ್ಯರಿದ್ದರು. ಒಬ್ಬರು ಸಾಧನದಲ್ಲಿ ತುಂಬ ನಿಷ್ಣಾತರೂ ಇನ್ನೊಬ್ಬರು ಸೇವೆಯಲ್ಲಿ ಅತ್ಯಂತ ಕುಶಲರೂ ಇದ್ದರು. ಆದರೆ ಈ ಸದ್ಗುರು ತನ್ನ ಅಂತರಂಗವನ್ನು ಇವರಿಬ್ಬರಿಗೇನೇ-ಅಂದರೆ ಧ್ಯಾನ ನಿರತರಿಗೂ, ಸೇವಾನಿರತರಿಗೂ ಈ ಎರಡು ಬಗೆಯ ಶಿಷ್ಯರಿಗೇನೆ-ತೆರೆದು ತೋರುತ್ತಿದ್ದರು. ಅವರಿಗೆಯೆ ತಮ್ಮ ಅಂತರಂಗದಲ್ಲಿಯ ರಹಸ್ಯಗಳನ್ನು ಅರುಹುತ್ತಿದ್ದರು. ಈ ಬಗೆಯಾಗಿಯೆ ನೀವು ನಿಮ್ಮ ಸದ್ಗುರುಗಳ ಅನುಭಾವದ ಬೌದ್ಧಿಕಜ್ಞಾನದಲ್ಲಿಯೂ ಮತ್ತು ಅವರ ಅನುಭಾವದಲ್ಲಿಯೂ ಪಾಲುಗಾರರಾಗಲು ಹವಣಿಸಬಲ್ಲಿರಿ. ಅದನ್ನೇ ಮಹಿಪತಿ ಸುತರು ಈ ಪದದಲ್ಲಿ ಹೇಳುರುವರು.

ನಾವಿನ್ನು ಈ ಉಪನ್ಯಾಸದ ಉಪಸಂಹಾರಾತ್ಮಕ ಕೊನೆಯ ಪದವಾದ 'ಮಂಗಲವಾಗಿಹುದು' ಎಂಬುದರೆಡೆಗೆ ತೆರಳುವಾ! ಸದ್ಗುರುಗಳು ಇರುವಡೆಯಲ್ಲೆಲ್ಲ ಮಾಂಗಲ್ಯವೂ ವೈಭವವೂ ಇರಲೇಬೇಕು ಎಂಬುದನ್ನು ಇಲ್ಲಿ ಹೇಳಲಾಗಿದೆ. ಸದ್ಗುರುಗಳ ಕಂಗಳ ಕೊನೆಯಲ್ಲಿ ಥಳಥಳ ಹೊಳೆಯುವ ಬೆಳಕು ನೆಲೆಸಿರುವದೆಂದು ಇದರಲ್ಲಿ ಬಣ್ಣಿಸಲಾಗಿದೆ. ಕಂಗಳಿಗೆ ಎರಡು ಕೊನೆಗಳು. ಅವುಗಳಿಗೆ ಒಳಗಿನ ಕೊನೆ,

ಹೊರಗಿನ ಕೊನೆ ಎಂಬ ಹೆಸರುಗಳು. ಮೂಗಿನ ಮೇಲ್ಭಾಗದ ಅಗ್ರದ ಬಳಿಯಲ್ಲಿಯದು ಒಳಗಿನದು. ಅದರಿಂದ ದೂರಿರುವುದು ಹೊರಗಿನದು. ನನ್ನ ಪರಿಚಯದ ಸದ್ಗುರುಗಳೋರ್ವರ ಕಂಗಳ ಹೊರಗಿನ ಕೊನೆಗಳೇ ಒಳಗಿನವುಗಳಿಗಿಂತ ಹೆಚ್ಚು ಸಕ್ರಿಯವಿದ್ದವು. ಇಲ್ಲಿ ಕವಿಯು ಹೇಳುವುದೇನೆಂದರೆ: 'ಭಗವಂತನ ಬೆಳಕು ಸದ್ಗುರುವಿನ ಕಂಗಳ ಕೊನೆಯಲ್ಲಿ ಥಳಥಳ ಹೊಳೆಯುತ್ತಿತ್ತು.' ಮತ್ತು 'ತಿಂಗಳ ಬೆಳಕಿನ ತಿಳಿರಸವು ಅದರಿಂದ ಉಕ್ಕುತ್ತಿತ್ತು, ಸುರಿಯುತ್ತಿತ್ತು.' ಈ ಬಗೆಯಾಗಿ, ತೇಜ–ರಸಗಳ ಏಕಕಾಲಕ್ಕೆ ಪ್ರತೀತವಾಗುತ್ತಿದ್ದವು. ಈ ಗ್ರಂಥದ ಕೊನೆಗೆ ನಾವು ಕನ್ನಡ ಸಂತರ ಅನುಭಾವವನ್ನು ವಿವರಿಸುವಾಗ, ಇಂಥ 'ಬೆಳಗುವ ರಸ'ಗಳ ವಿಲಕ್ಷಣ ಅನುಭವಗಳನ್ನು ಕಾಣಬಹುದು.

ಈ ಕವಿಯು ಅರುಹುವ ಇನ್ನೊಂದು ಮಾತು ಅದಾವುದೆಂದರೆ: ಈ ಬೆಳಕು ಲಭಿಸಲು ಮುಂದಿನ ಮೂರು ವಿಷಯಗಳು ಬೇಕಾಗುವವು; ಮೊದಲನೆಯದು, 'ವಿರತಿ ಎಂಬುವ ಬತ್ತಿ'; ಎರಡನೆಯದು, 'ಭಕ್ತಿಯ ಸುಘೃತ' ಮತ್ತು ಮೂರನೆಯದು 'ಅರಿವೆಂಬ ಜ್ಯೋತಿ'. ವಿರತಿಯ ಬತ್ತಿಯನ್ನು ಭಕ್ತಿಯ ಘೃತದಲ್ಲಿ ತೋಯಿಸಿದಾಗ ಹಾಗೂ ಏಕಾಗ್ರತೆಯ ಮುಖಾಂತರ ಅದಕ್ಕೆ ಜ್ಞಾನ–ಜ್ಯೋತಿಯನ್ನು ಹಚ್ಚಿದಾಗ ಪಾರಮಾರ್ಥಿಕ ಅನುಭಾವದ ಪ್ರಭೆಯು ಬೆಳಗುವುದು. ಇದನ್ನೆ ಈ ಕವನದ ಕರ್ತನು ಹೇಳುವುದುಂಟು. ಕೊನೆಗೆ, ಈ ಬೆಳಕನ್ನು ಪಡೆಯುವ ಸಾಧನವಾದ ಮುಂದಿನ ಯೋಗಿಕ ಪ್ರಕ್ರಿಯೆಯ ಪರಿಚಯವನ್ನು ಕವಿಯು ನಮಗೆ ಮಾಡಿ ಕೊಡುವ. ಮೊದಲು ನಾವು ಆರು ಚಕ್ರಗಳನ್ನು ಮೀರಬೇಕು. ಆಮೇಲೆ ನಾವು ಸೂಕ್ಷ್ಮದ್ವಾರದೊಳಗೆ ಸೇಬೇಕು. ಈ ಸೂಕ್ಷ್ಮದ್ವಾರವು ಯಾವುದೆಂಬುದನ್ನು ನಮ್ಮ ಅಧುನಿಕ ಶಸ್ತ್ರಚಿಕಿತ್ಸಕರು ಇಲ್ಲವೆ ಯೋಗಿಕ ಶರೀರಶಾಸ್ತ್ರಜ್ಞರು ಅರಿವರು. ಈ ರೀತಿ, ಈ ಚಕ್ರಗಳೊಳಗಿಂದಲೂ ಅಥವಾ ಮಿದುಳುಬಳ್ಳಿಯ ವಿವರದೊಳಗಿಂದಲೂ ಈ ಸೂಕ್ಷ್ಮದ್ವಾರವನ್ನು ಸೇರಿ, ಸಹಸ್ರಾರ ಚಕ್ರವೆಂಬ ಹೆಸರಿನ ಸಾಸಿರದಲ ಪದ್ಮವನ್ನು ಏರಬೇಕು. ಇದನ್ನೆ ಕವಿಯು ಸಿಂಹಾಸನವೆಂದೂ ಮತ್ತು ಇದರ ಮೇಲೆಯೇ ಭಗವಂತನು ಕುಳಿತಿರುವನೆಂದೂ ಬಗೆಯುವ. ನಮ್ಮ ಅಂತರಂಗದಲ್ಲಿ ಈ ದರ್ಶನವನ್ನು ಪಡೆದಾಗಲೇ ನಾವು ಬ್ರಹ್ಮಾನಂದದಲ್ಲಿ ಮುಳುಗುವೆವು. 'ಭೂರಿ ಬ್ರಹ್ಮಾನಂದ ಪದವಿಯ ಸೇರುವೆವು.' ಆ ಯೋಗಿಕ ಪ್ರಕ್ರಿಯೆಯ ಮುಖಾಂತರವಾಗಿ ನಾವು ನಮ್ಮ ಪಾರಮಾರ್ಥಿಕ ಅನುಭವವನ್ನು ಪಡೆಯಬೇಕು ಹಾಗೂ ಬ್ರಹ್ಮಾನಂದವನ್ನು ಅನುಭವಿಸಬೇಕು. ಇಲ್ಲಿ, ಶಿಷ್ಯನಿಗೆ ಬ್ರಹ್ಮಾನಂದವನ್ನು ದಯಪಾಲಿಸಬಲ್ಲ ಸದ್ಗುರುವಿನ ಸ್ವರೂಪವು ಬಣ್ಣಿಸಲಾಗಿರುವುದು.

■■

ಪ್ರಕರಣ ಆರು

ಸದ್ಗುರುಗಳ ಕಾರ್ಯಗಳು

ನಾನು ಹೋದ ಸಲ ಕನ್ನಡ ಸಂತರು ಅರುಹಿದ ಸದ್ಗುರುಗಳ ಸ್ವರೂಪವನ್ನು ವಿವರಿಸಿದೆ. ಇಂದು ನಾನು ಸದ್ಗುರುಗಳ ಕಾರ್ಯಗಳ ವಿಚಾರದಲ್ಲಿ ನನ್ನ ಅವಧಾನವನ್ನು ಕೇಂದ್ರೀಕರಿಸಲಿರುವೆ. ಸಾಮಾನ್ಯವಾಗಿ ಈ ಕಾರ್ಯಗಳನ್ನು ಮುಂದಿನ ಮೂರು ಬಗೆಯಾಗಿ ವರ್ಗೀಕರಿಸಬಹುದು: ಪರತತ್ವವಿಷಯಕ ಕಾರ್ಯ, ನೀತಿ ವಿಷಯಕ ಕಾರ್ಯ ಹಾಗೂ ಅನುಭಾವ ವಿಷಯಕ ಕಾರ್ಯ. ಪರತತ್ವ ವಿಷಯಕ ಕಾರ್ಯಗಳನ್ನು ಬಣ್ಣಿಸುವಾಗ, ಸದ್ಗುರು ಮಾಯೆ, ಮೋಹ ಹಾಗೂ ಹಮ್ಮು ರೂಪಿಯಾದ ದುಷ್ಟ ವೈರಿಗಳನ್ನು ಹೊಡೆದೋಡಿಸಿ, ಜೀವಾತ್ಮ-ಪರಮಾತ್ಮರಲ್ಲಿ ಏಕತೆಯನ್ನು ನೆಲೆಗೊಳಿಸಿ, ಶಿಷ್ಯರಿಗೆ ಬ್ರಹ್ಮಾನಂದವನ್ನು ಹೇಗೆ ದಯಪಾಲಿಸುವನು ಎಂಬುದನ್ನು ನಾವು ಕಾಣಬಹುದು. ತರುವಾಯ ನಾವು ಸದ್ಗುರುಗಳ ನೀತಿ ವಿಷಯಕ ಕಾರ್ಯಗಳನ್ನು ವಿವರಿಸುವೆವು. ಅವು ಭಗವಂತನ ದಿವ್ಯ ನಾಮವನ್ನು ಏಕಾಗ್ರತೆಯಿಂದ ನೆನೆದು, ಬಗೆಬಗೆಯ ವಿಕಾರಗಳನ್ನು ಗೆಲ್ಲುವ ಬಗೆಯನ್ನೂ, ಅದೇ ಮೇರೆಗೆ ಮಾನ, ರುಚಿ, ಧನ, ಕಾಮ ಇತ್ಯಾದಿ ಜೀವನದಲ್ಲಿಯ ಬಹು ವಿಧ ಮುಳ್ಳುಗಳನ್ನು ಸದ್ಗುರುಗಳ ಕರುಣದ ಅಗ್ನಿಯಲ್ಲಿ ಸುಡುವ ಬಗೆಯನ್ನೂ ಒಳಗೊಂಡಿರುವವು. ಇಲ್ಲಿ ನಾವು, ಸದ್ಗುರುಗಳು ಶಿಷ್ಯರ ಮರಣ-ಸಂಕಟಗಳನ್ನು ನಿವಾರಿಸುವ ಅವರ ಇನ್ನೊಂದು ನೀತಿವಿಷಯಕ ಕಾರ್ಯವನ್ನು ಗಮನಿಸುವೆವು. ಈ ಎರಡು ಬಗೆಯ ಕಾರ್ಯಗಳ ವಿಚಾರದ ತರುವಾಯ ನಾವು ಅವರ ಅನುಭಾವ ವಿಷಯಕ ಕಾರ್ಯಗಳೆಡೆ ಸಾಗುವೆವು. ಇವು ಸದ್ಗುರು ಶಿಷ್ಯನಿಗೆ ಪುಣ್ಯಜೀವನವನ್ನು ದಯಪಾಲಿಸುವ ಮೂಲಕ ಶಿಷ್ಯನು ಪಾಪಕರ್ಮಗಳನ್ನು ಮಾಡಲರಿಯ ಎಂಬ ಮಾತನ್ನು ಎತ್ತಿ ತೋರಿಸುವವು. ಮೇಲಾಗಿ, ಸದ್ಗುರುವು ಶಿಷ್ಯನಿಗೆ ಸಲ್ಲಿಸಿದ ಅನಂತ ಉಪಕಾರಗಳು ಎಂದೂ ಮರೆಯಲು ಬಾರದಂತಹವು. ಯಾಕೆಂದರೆ ಸದ್ಗುರು ಶಿಷ್ಯನಿಗೆ ಇತ್ತ ನವಜೀವನದ ಫಲವಾಗಿ ಶಿಷ್ಯನು ಭಗವಂತನ ರೂಪವನ್ನು ಕಾಣುವನು ಹಾಗೂ ಅಪಾರ ಆನಂದವನ್ನು ಪಡೆಯುವನು. ಕೊನೆಗೆ ಗುಹೇಶ್ವರರ ಅತ್ಯುತ್ತಮ ಪದವನ್ನು ವಿವರಿಸುವೆವು. ಅದರಲ್ಲಿ ಶಿಷ್ಯನು ತನ್ನ ದೃಷ್ಟಿಯನ್ನು ಹೊರಳಿಸಿದತ್ತ ಅವನಿಗೆ ಭಗವಂತನ ರೂಪವನ್ನು ಕಾಣಿಸಬಲ್ಲ ಸದ್ಗುರುವಿನ ಸಾಮರ್ಥ್ಯವು ಬಣ್ಣಿಸಲಾಗಿರುವುದು. ಇಂಥ ದರ್ಶನವೇ ಮುಕ್ತಿಯ ಸಾರವು.

ಈ ಪ್ರಕರಣದಲ್ಲಿ ಮುಂದಿನ ಸಂತ ಕವಿಗಳ ಪದಗಳನ್ನು ಚರ್ಚಿಸಲಿರುವೆ: ಭವತಾರಕ, ಚಿದಾನಂದ, ಸಂಗ ದೊಡ್ಡಪೇಟಿ ಬಸವ, ದಿವಗಂತ ಶ್ರೀ ರಾಮರಾವ ಹೊರ್ತಿ (ಉಮದಿಮಹಾರಾಜರವರ ಶಿಷ್ಯರು ಹಾಗೂ ವಿಜಾಪುರದ ನಿವಾಸಿಗಳು), ಮಡಿವಾಳ ಯೋಗಿ ಮತ್ತು ಆನಂದ ಗುಹೇಶ್ವರ. ಈ ಹಿರಿಯ ಸಂತರ ಬೋಧೆಯ ಮುಖಾಂತರವಾಗಿ ನಾನು ಸದ್ಗುರುವಿನ ಪರತತ್ವ ವಿಷಯಕ, ನೀತಿವಿಷಯಕ ಹಾಗೂ ಅನುಭಾವವಿಷಯಕ ಕಾರ್ಯಗಳನ್ನು ವಿವರಿಸಲಿರುವೆ.

ಈಗ 'ಯೋಗಿ ಬಂದನೋ ಶಿವಯೋಗಿ ಬಂದನೋ' ಎಂಬ ಭವತಾರಕರ ಮೊದಲನೆಯ ಪದದಿಂದಲೇ ಪ್ರಾರಂಭಿಸುವೆ. ಆನುಷಂಗಿಕವಾಗಿ ನಾನು ಬಸವೇಶ್ವರರ ಹಾವಿನ ಹೆಡೆಯ ಕೊಂಡು ಕೆನ್ನೆಯ ತುರಿಸಿದಂತೆ' ಎಂಬ ವಚನವನ್ನು ಉಲೇಖಿಸುವೆ. ಭವತಾರಕರ ಪದ ಹಾಗೂ ಬಸವೇಶ್ವರರ ವಚನ ಇವುಗಳಲ್ಲಿಯ ಸಂಬಂಧವನ್ನರಿಯುವುದು ಆದಿಯಲ್ಲಿ ಕೊಂಚ ಬಿಗಿಯಾದುದಾದರೂ ನಮ್ಮ ವಿವೇಚನೆಯ ಕೊನೆಗೆ ಅದು ತೀರ ಸುಲಭವಾಗಬಹದು.

ನಾನು ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಪೂರ್ವದಲ್ಲಿಯೆ, ಜಮಖಂಡಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವನ್ನು ಪಡೆದ ನನ್ನ ಪರಿಚಯದ ಶಾಸ್ತ್ರಿಗಳೊಬ್ಬರು ಇರುತ್ತಿದ್ದರು. ಅವರ ಬಗೆಗೆ ತಮಗೆ ಒಂದು ಕಥೆಯನ್ನು ಹೇಳಬಯಸುವೆ. ಅದೀಗ ಸುಮಾರು ಅರ್ಧ ಶತಮಾನದ ಹಳೆಯ ಮಾತು. ಈ ಶಾಸ್ತ್ರಿಗಳು ಉಮದಿ ಮಹಾರಾಜರವರ ಶಿಷ್ಯರಿದ್ದರು. ಬಸವಣ್ಣನವರ ಅಲಂಕಾರಿಕ ಭಾಷೆಯಲ್ಲಿ ಹೇಳಬೇಕೆಂದರೆ, ಅವರು ದುರ್ದೈವದಿಂದ, ಹಾವಿನ ಹೆಡೆಯಿಂದ ತಮ್ಮ ಕೆನ್ನೆಯ ತುರಿಸಿಕೊಳ್ಳಲು ಬಯಸಿದರು. ತಮ್ಮ ಉಡಿಯಲ್ಲಿ ಸುಣ್ಣದ ಹರಳುಗಳನ್ನು ಕಟ್ಟಿಕೊಂಡು ಹೊಳೆಯಲ್ಲಿ ಹಾರಲು ಇಚ್ಛಿಸಿದರು. ಹುಲಿಯ ಮೀಸೆಗಳನ್ನು ಹಿಡಿದು ಸರಸವಾಡಲು ಹವಣಿಸಿದರು. ಅದು ಯಾವ ಅರ್ಥದಲ್ಲಿ ಎಂದರೆ, ಅವರು ಅರಿಯದಿರಲಿ ಇಲ್ಲವೆ ತಮ್ಮ ಸದ್ಗುರುಗಳಾದ ಉಮದಿ ಮಹಾರಾಜರವರನ್ನು ಲೆಕ್ಕಿಸದೆ ಇರಲಿ, ಸದ್ಗುರುಗಳಿಂದ ಅನುಜ್ಞೆಯನ್ನು-ಅಧಿಕಾರವನ್ನು ಪಡೆಯದೆಯೆ, ಅವರು ತಾವಾಗಿಯೆ ಜನರನ್ನು ಅನುಗ್ರಹಿಸಲು ಪ್ರಾರಂಭಿಸಿದರು. ಜಮಖಂಡಿಯಲ್ಲಿ ಅಂದು ಶ್ರೀ ಕಾಳೆ ಎಂಬವರು ಸಂಸ್ಥಾನದ ಕಾರಭಾರಿಗಳಾಗಿದ್ದರು. ಅವರು ಈ ಶಾಸ್ತ್ರಿಗಳ ಶಿಷ್ಯರಿದ್ದರು. ಇವರಿಬ್ಬರೂ ಕೂಡಿ ಒಂದು ಪೂರ್ವನಿಯೋಜಿತ ಹಂಚಿಕೆಯನ್ನುಮಾಡಿದರು. ಶ್ರೀಉಮದಿಯ ಮಹಾ ರಾಜರವರನ್ನು ಸಾಧ್ಯವಾದರೆ ಈ ಕಾರಭಾರಿಯವರ ಮನೆಗೆ ತರಬೇಕು. ಅಲ್ಲಿ ಅವರಿಗೆ ಕೆಲಪ್ರಶ್ನೆಗಳನ್ನು ಕೇಳಬೇಕು ಮತ್ತು ಅದರ ಮುಖಾಂತರ ಅವರು ಸಂಸ್ಕೃತ ವನ್ನು ಅರಿಯರು, ಅಥವಾ ತತ್ವಜ್ಞಾನವನ್ನು ಅರಿಯರು, ಆದುದರಿಂದ ಪರಮಾರ್ಥ

ವನ್ನು ಅರಿಯರು ಎಂದು ಜನರಿಗೆ ಹೇಳಬೇಕು ಎಂಬುದು ಅವರ ಹಂಚಿಕೆ. ಆ ಮೇರೆಗೆ ಅವರು ಮಹಾರಾಜರವರನ್ನು ಸಂಕೀರ್ತನಕ್ಕಾಗಿ ಕಾರಭಾರಿಯವರ ಮನೆಗೆ ಬರಲು ಬಿನ್ನವಿಸಿದರು. ಈ ಔತಣವನ್ನು ಸ್ವೀಕರಿಸಿ, ಮಹಾರಾಜರವರು ತಮ್ಮ ಕೆಲ ಶಿಷ್ಯರಿಂದೊಡಗೂಡಿ ಸಕಾಲಕ್ಕೆ ಅಲ್ಲಿಗೆ ಬಂದರು. ಆದರೆ ಶಾಸ್ತ್ರಿಗಳಿನ್ನೂ ಬಂದಿರಲಿಲ್ಲ. ಅವರು ಬರಲು ಕೆಲವೊಂದು ಅವಕಾಶವಿತ್ತು. ಆದುದರಿಂದ ಮಹಾ ರಾಜರವರು ಆ ಕಾಲದ ಶಿಷ್ಯೋತ್ತಮರಲ್ಲಿ ಒಬ್ಬರಾದ ವಿಷ್ಣುಭಟ್ಟ ನಿಂಬರಗಿಯವರಿಗೆ, 'ಯೋಗಿ ಬಂದನೋ ಶಿವಯೋಗಿ ಬಂದನೋ' ಎಂಬ ಪದವನ್ನು ತಮ್ಮ ರುದ್ರವೀಣೆಯೊಂದಿಗೆ ಹಾಡಲು ಹೇಳಿದರು. ಅಷ್ಟರಲ್ಲಿ ಶಾಸ್ತ್ರಿಗಳನ್ನು ಕರೆತರಲು ಒಬ್ಬ ಸೇವಕನನ್ನು ಕಳುಹಿಸಲಾಯಿತು. ಕಾರಭಾರಿ ಶಾಸ್ತ್ರಿಗಳಿಬ್ಬರೂ ಉಮದಿ ಮಹಾರಾಜ ರವರನ್ನು ಮೇಲ್ಕಾಣಿಸಿದ ಮೇರೆಗೆ ಅವಮಾನಗೊಳಿಸಲು ಹಂಚಿಕೆ ಮಾಡಿದ್ದರಷ್ಟೇ. ಆದರೆ ಶಾಸ್ತ್ರಿಗಳು ತಮ್ಮ ಮನೆಯಿಂದ ಹೊರಟ ಕೂಡಲೇ ಅವರ ಅಂಗಾಲಿನಲ್ಲಿ ಏನೋ ಒಂಚು ಚುಚ್ಚಿತು. ಬಹುತರವಾಗಿ ಅದೊಂದು ಮುಳ್ಳು ಇರಬಹುದು. ಅದರಿಂದ ಅವರಿಗೊಂದು ಘಾಯವಾಯಿತು. ಮುಂದೆ ಅದೊಂದು ಮಧುಮೇಹದ ಗುಳ್ಳೆಯಾಗಿ ಪರಿಣಮಿಸಬಹುದೆಂದು ಅವರು ಹೆದರಿದರು. ಆದುದರಿಂದ ಅವರು ಅಲ್ಲಿಂದ ಅಲೆಯ ಬಯಸದೆ ಮನೆಗೆ ಮರಳಿ ಹೋಗಿ ಮಲಗಿಕೊಂಡರು. ಸೇವಕನು ಕಾರಭಾರಿಯವರಲ್ಲಿಗೆ ತಿರುಗಿ ಬಂದು ಅವರಿಗೆ ಈ ಸುದ್ದಿಯನ್ನು ತಿಳಿಸಿದನು. ಆಗ ಮಹಾರಾಜರವರು ವಿಷ್ಣುಭಟ್ಟ ನಿಂಬರಗಿಯವರಿಗೆ ಸನ್ನೆ ಮಾಡಿ ಈ ರೀತಿ ನುಡಿದರು. "ನೋಡಿ! ಭಗವಂತನು ಹೇಗೆ ತನ್ನ ಗೌರವವನ್ನು ಕಾಯ್ದುಕೊಳ್ಳುವನು; ತನ್ನ ಸಂತರ ಮರ್ಯಾದೆಯನ್ನು ರಕ್ಷಿಸುವನು." ಈ ಬಗೆ ಯಾಗಿ, ಈ ಈರ್ವರ ಪೂರ್ವಯೋಜನೆಯ ಮೇರೆಗೆ, ಸಾರ್ವಜನಿಕ ಅವಮಾನಕ್ಕೆ ಒಳಗಾಗದೆ, ಶ್ರೀಮಹಾರಾಜರವರು ತಮ್ಮ ಘೋಥೀ ಪ್ರವಚನವನ್ನು ಸರಾಗ ವಾಗಿಯೂ, ಯಶಸ್ವಿಯಾಗಿಯೂ ನಡೆಯಿಸಿದರು. ಮುಂದೆ, ಹುಲಿಯ ಮೀಸೆ ಯನ್ನು ಜಗ್ಗುವ ಮನುಜನು ಬದುಕಲರಿಯದಂತೆ, ಈ ಶಾಸ್ತ್ರಿಗಳು, ದುರ್ದೈವದಿಂದ, ಬದುಕುವುದು ಸಾಧ್ಯವಾಗಲಿಲ್ಲ. ಇದು ಈ ಪದಕ್ಕೆ ಸಂಬಂಧಿಸಿದ ಕಥೆಯು. ನನಗದರ ನೆನಪು ಚನ್ನಾಗಿರುವುದು.

ಈ ಪದವು ಸಂತ ಭವರತಾರಕರದು. ಕನ್ನಡ ಅನುಭಾವಿಗಳಲ್ಲಿ ಭವತಾರಕರು ಹಿರಿಯ ವೇದಾಂತ ಪಂಡಿತರು. 'ಯೋಗಿ ಬಂದನೋ ಶಿವಯೋಗಿ' ಎಂಬ ಪ್ರಸ್ತುತ ಪದವು ಹಿರಿಯ ವೇದಾಂತಿಕ ಬೋಧೆಯ ಕವನವು. ದಕ್ಷಿಣ ಕರ್ನಾಟಕ ಹಾಗೂ ತಮಿಳು-ತೆಲಗು ಪ್ರದೇಶಗಳಲ್ಲಿಯ ಸುಶಿಕ್ಷತರು ಸಾಮಾನ್ಯವಾಗಿ ಸಂಸ್ಕೃತ ಭಾಷೆಯ ಒಳ್ಳೆಯ ಪರಿಚಯವುಳ್ಳವರೆಂಬುದನ್ನು ಗಮನಿಸಬೇಕು. ಭವತಾರಕರು ಸಂಸ್ಕೃತ ಸಾಹಿತ್ಯದಲ್ಲಿ ಒಳ್ಳೆಯ ಪರಿಶ್ರಮವುಳ್ಳವರಿದ್ದರು. ಅಷ್ಟೇ ಅಲ್ಲದೆ ವೇದಾಂತ

ದರ್ಶನದಲ್ಲಿ ಪಾರಂಗತರಿದ್ದರು. ಇನ್ನು ಈ ಪದದಲ್ಲಿಯ ಪ್ರಧಾನಾಂಶಗಳನ್ನು ನಾನು ಅರುಹುವೆ. ಸದ್ಗುರು ಪರತತ್ವಶಾಸ್ತ್ರ ವಿಷಯಕ ಹಾಗೂ ಮೂಲ್ಯಮಾಪನ ಶಾಸ್ತ್ರವಿಷಯಕ ಎಂಬ ಎರಡು ಬಗೆಯ ಕಾರ್ಯಗಳನ್ನು ಮಾಡುವನು. ಮೌಲ್ಯ ಮಾಪನಶಾಸ್ತ್ರವು ಮೌಲ್ಯಗಳ ಸಮಸ್ಯೆಯನ್ನು ಶೋಧಿಸುವುದು ಮತ್ತು ಅದು ನೀತಿ ಶಾಸ್ತ್ರ, ಸಮಾಜಶಾಸ್ತ್ರ ಹಾಗೂ ಸಮಾಜ ದರ್ಶನ ಎಂಬವುಗಳನ್ನು ಒಳಗೊಂಡಿ ರುವುದು. ಭವತಾರಕರು ಹೇಳಿದ ಮೇರೆಗೆ, ಪರತತ್ವಶಾಸ್ತ್ರದ ದೃಷ್ಟಿಯಿಂದ ಮಾಯೆ –ಮೋಹಗಳ ಕತ್ತಲೆಯನ್ನು ದೂರೀಕರಿಸುವುದು ಸದ್ಗುರುಗಳ ಮೊದಲನೆಯ ಕಾರ್ಯ. 'ಚಿತ್ತವನ್ನು ನಿತ್ಯದಲ್ಲಿ ನಿಲ್ಲಿಸುವುದು' ಸದ್ಗುರುಗಳ ಎರಡನೆಯ ಕೆಲಸ. ಜೀವ–ಶಿವರಲ್ಲಿ ಏಕತೆಯನ್ನು ನೆಲೆಗೊಳಿಸುವುದು ಆತನ ಮೂರನೆಯ ಕಾರ್ಯ. ಅರ್ಥಾತ್ ಇದು ತುಂಬ ಬಿಗಿಯಾದ ಕೆಲಸ. ಈ ಏಕತೆಯನ್ನು ನೆಲೆಗೊಳಿಸುವ ದೆಂದರೆ 'ತತ್ವಮಸಿ' ಎಂಬ ಮಹಾವಾಕ್ಯದ ಕೇವಲ ಶಬ್ದಾರ್ಥದ ತಿಳಿವಳಿಕೆಯಲ್ಲ. ಬರೀ ತಾರ್ಕಿಕ ಅನುಮಾನದ ಜ್ಞಾನವಲ್ಲ ಇಲ್ಲವೆ ಶಾಸ್ತ್ರೀಯ ರೀತಿಯಲ್ಲಿ ತರ್ಕಮಾಡುವುದಲ್ಲ. ಆದರೆ ಅದು ಈ ಏಕತೆಯ ಪ್ರತ್ಯಕ್ಷ ಅನುಭವ–ಪ್ರತ್ಯಕ್ಷ ಸಾಕ್ಷಾತ್ಕಾರ. ಸದ್ಗುರುವಿನ ಈ ಪರತತ್ವ ಶಾಸ್ತ್ರೀಯ ಕಾರ್ಯದಿಂದ ಸಾಧ್ಯ ವಾಗುವುದು. ಶಿಷ್ಯರ ಅಹಂಕಾರವನ್ನೆಲ್ಲ ಅಳಿಸುವುದು ಸದ್ಗುರುವಿನ ಮೌಲ್ಯಮಾಪನ ಶಾಸ್ತ್ರೀಯ ಕಾರ್ಯ. ಆತ್ಮನ ನಿಜಸ್ವರೂಪವನ್ನು ಅರಿಯದ ಮೂಲಕ ಅಹಂಕಾರವು ಜನಿಸುವುದು–ಎಂದು ಕವಿಯು ಹೇಳುವ. 'ತಮ್ಮ ತಾವು ಮರೆತು ಜನರು ಹಮ್ಮಿನೊಳಗೆ ಬಿದ್ದಿರು'ವರಂತೆ. ನಾವು ನಮ್ಮ ಆತ್ಮನನ್ನು ಅರಿಯದ ಮೂಲಕ ಮೂಲಕವೇ ಅಹಂಕಾರವುಳ್ಳವರು ಆಗುವೆವು; ಮತ್ತು ಆತ್ಮಜ್ಞಾನವೇನೂ ಅಷ್ಟೊಂದು ಸುಲಭಸಾಧ್ಯ ವಿಷಯವಲ್ಲ. ಸದ್ಗುರು 'ದಯಾಸಿಂಧು' ಇರುವ. ಅವನು ನಮಗೆ 'ಪರಮಾನಂದ ಪದವಿಯ' ಕೊಡುವ. ಅವನು ದಯಾಪೂರ್ಣನಿರುವುದರಿಂದ ನಮ್ಮನ್ನು ಆನಂದದ ಇಲ್ಲವೆ ಪರಮಾನಂದದ ನೆಲೆಯಲ್ಲಿ ಒಯ್ದು ನಿಲ್ಲಿಸುವ; ಮತ್ತು ಕೊನೆಗೆ, ಮುಕ್ತಿ–ದರ್ಶನವನ್ನು ಗಮನಿಸಿದರೆ ಸದ್ಗುರು ತನ್ನ ಎಲ್ಲ ಶಿಷ್ಯರನ್ನು ಮೇಲಕ್ಕೆತ್ತಿ, ಅವರನ್ನು ಮುಕ್ತಿಯ ಮಹಾಶಿಖರದ ಮೇಲೆ ಇರಿಸುವನು. 'ಭವತಾರಕನ ಪಾದ ಹೊಂದಿದವರಿಗೆಲ್ಲ ಮುಕ್ತಿ ಕೊಡುವ' ಎಂದು ಕವಿಯು ಹೇಳಿರುವ. ಇದರರ್ಥ ಬೇರೆ ಜನರು ಈ ರೀತಿ ಮುಕ್ತರಾಗಲರಿಯರು ಎಂಬುದಾಗಬಹುದೆ? ಕಬೀರರು ಹೀಗೆ ಹೇಳಲು ಹಿಂಜರಿಯುವುದಿಲ್ಲ. ಅವರು ಪರಿವಾರಮುಕ್ತಿಯನ್ನು ಅರುಹುವರು: 'ಲೇ ಪರಿವಾರ ತರೀ' 'ಅವನು ತನ್ನ ಪರಿವಾರದೊಡನೆ ಅವರ ಶಿಷ್ಯವೃಂದವು, ಅವರಿಂದ ಪಾರಮಾರ್ಥಿಕ ಅನುಗ್ರಹವನ್ನು ಪಡೆದು ಅವರಿಗೆ ಸರ್ವಸಮರ್ಪಣ ಮಾಡಿದವರ ಬಳಗ. ಕೇವಲ

ಭೌತಿಕಭೋಗದಿಂದ ತೃಪ್ತನಾದ ಮಾನವನಿಗಿಂತ ಸಾಕ್ರೆಟೀಸನಂಥ ದಾರ್ಶನಿಕನು ಮೇಲ್ತರಗತಿಯವನು ಎಂದು ಮಿಲ್ಲನು ಒಳ್ಳೆ ಪ್ರೀತಿಯಿಂದ ಹೇಳುತ್ತಿದ್ದನು. ಆದರೆ, ಪ್ರಸ್ತುತ ಲೇಖಕನು ಬೇರೆಡೆ ಈ ರೀತಿ ಕಾಣಿಸಿರುವನು: ಭೌತಿಕಭೋಗದಿಂದ ತೃಪ್ತನಾದವನಿಗಿಂತ ದಾರ್ಶನಿಕನು ಎಷ್ಟು ಮೇಲು? ಎಂದು ಎಣಿಸಲಾಗಿರುವನೋ ಅಷ್ಟೇ ದಾರ್ಶನಿಕನಿಗಿಂತ ಅನುಭಾವಿಯು ಮೇಲು ಎಂದು ಬಗೆಯಬಹುದು. ಇಂಥ ಅನುಭಾವಿಯು ಸದ್ಗುರುವೂ ಆಗಿದ್ದರೆ ಅವನು ಶಿಷ್ಯರನ್ನು ಮುಕ್ತಿಯ ನೆಲೆಗೆ ಏರಿಸಬಲ್ಲನು. ಇದು ಈವರೆಗೆ ವಿವರಿಸಲಾದ ಮೊದಲನೆಯ ಪದದ ತಿರುಳು.

ಸದ್ಗುರುವಿನ ಪರತತ್ವಶಾಸ್ತ್ರ ವಿಷಯ ಕಾರ್ಯಗಳಿಗಿಂತಲೂ ನೀತಿಶಾಸ್ತ್ರ ವಿಷಯಕ ಕಾರ್ಯಗಳು ಹೆಚ್ಚು ಮಹತ್ವದವು ಇರುವವು. ಅವನ್ನು ನಾನು ಮೊದಲು ಚಿದಾನಂದರ 'ಸೈಶಬಾಸ ಗಬರು' ಎಂಬ ಪದದ ಆಧಾರದಿಂದ ಚರ್ಚಿಸಲು ಪ್ರಾರಂಭಿಸುವೆ. ಈ ಪದವು ಸಾಧಕರ ಮೇಲಾಗುವ ವಿಕಾರರೂಪಿಯಾದ ತುಡುಗರ ದಾಳಿಯ ಎಚ್ಚರದಿಂದಲೆ ಪ್ರಾರಂಭವಾಗುವುದು. 'ದರೋಡೆ ಬರುತದ ಎಚ್ಚರ' ಎಂದು ಕವಿಯು ಸಾಧಕರಿಗೆ ಹೇಳುವ. ಈ ಪದವು ಕೃಷ್ಣಾನಂದರೆಂಬ ಹಿಂದೀ ಸಂತ ಕವಿಯ 'ಮುಸಾಫಿರ ಸೋತಾಹೈಬೇ ಹೋಸ್' 'ಎಲ್ಲೈ ದಾರಿಕಾರನೇ! ನೀನು ಮೈಮರೆತು ಮಲಗಿರುವಿಯಲ್ಲಾ!' ಎಂಬ ಪದವನ್ನು ಹೋಲುವುದು. ಈ ಪದವನ್ನು ರಚಿಸಿದ ಚಿದಾನಂದ ಕವಿಯು 'ಅನುಭವಾಮೃತ' ಮತ್ತು 'ಜ್ಞಾನಸಿಂಧು' ಎಂಬ ಹಿರಿಯ ಗ್ರಂಥಗಳಿಗಾಗಿಯೂ ಹಾಗೂ ಕೆಲ ಭಾವಗೀತೆಗಳಿಗಾಗಿಯೂ-ವಚನಗಳಿಗಾಗಿಯೂ ಹೆಸರಾಗಿರುವನು. ಪ್ರಸ್ತುತ ಪದವು ಒಂದು ಸುಪ್ರಸಿದ್ಧವಾದ ಜಾನಪದಗೀತವು.

ಚಿದಾನಂದರು ಆದಿಯಲ್ಲಿಯೇ ಶಕುನದ ಹಕ್ಕಿಯನ್ನು ಜಾಗ್ರತೆಯಿಂದ ಉಲ್ಲೇಖಿಸಿರುವರು. ಈ ಶಕುನದ ಹಕ್ಕಿಯು-ಶಕುಂತ ಇಲ್ಲವೆ ಭಾರದ್ವಾಜ ಹಕ್ಕಿಯು- 'ಕೊನೆಗೆ ನಿನಗೇ ಗೆಲವು ದೊರೆಯುವುದು ಚಿಂತಿಸಬೇಡ!' ಎಂದು ಹೇಳುವುದು. 'ಶುಭಾ ನುಡೀತದ ಶಕುನದ ಹಕ್ಕಿ!' ಎಂದು ಕವಿಯು ಆಶ್ವಾಸನವನ್ನು ಕೊಟ್ಟಿರುವ. ಈ ಶಕುಂತ ಇಲ್ಲವೆ ಶಕುನದ ಹಕ್ಕಿಯು ಭವಿಷ್ಯವನ್ನು ಸೂಚಿಸುವದೆಂದು ಕರ್ನಾಟಕದಲ್ಲಿಯೂ ಬೇರೆ ಪ್ರದೇಶಗಳಲ್ಲಿಯೂ ಬಗೆಯಲಾಗಿದೆ. ಆದುದರಿಂದ ದರೋಡೆಗಾರರು ನಮ್ಮ ಮೇಲೆ ದಾಳಿ ಮಾಡಿದರೂ, ನಾವು ರಕ್ಷಿಸಲ್ಪಡುವೆವೆಂದು ಕವಿಯು ಪ್ರಾರಂಭದಲ್ಲಿಯೇ ಹೇಳಿರುವ.

ನಮ್ಮ ವಿಕಾರಗಳೇ ಈ ತುಡುಗರು! ದರೋಡೆಗಾರರು! ಈ ತುಡುಗರು ಇಲ್ಲವೆ ವಿಕಾರಗಳು ಅದೆಷ್ಟು ಜನ! ಕವಿಯು ಇವರಲ್ಲಿ ಮೂರು ವರ್ಗಗಳನ್ನು

ಕಲ್ಪಿಸಿರುವ: ಮೊದಲನೆಯದರಲ್ಲಿ ಅವನು ಐದು, ಎರಡನೆಯದರಲ್ಲಿ ಎಂಟು ಹಾಗೂ ಮೂರನೆಯದರಲ್ಲಿ ಹತ್ತು ವಿಕಾರಗಳನ್ನು ಇಲ್ಲವೆ ತುಡುಗರನ್ನು ಸೇರಿಸಿರುವ. ಪ್ರತಿಯೊಂದು ವರ್ಗದ ಕೆಲಸವು ಬೇರೆಯಾಗಿರುವುದು. ಈ ತುಡುಗರ ಮೊದಲನೆಯ ಗುಂಪು ಸಾಧಕನ ಮನೆಯನ್ನು ಸೇರುವುದು; ಎರಡನೆಯದು ಅವನನ್ನು ಸುತ್ತುವುದು-ಮುತ್ತುವುದು; ಹಾಗೂ ಮೂರನೆಯದು ಆತನನ್ನು ಪೂರ್ತಿಯಾಗಿ ಕೊಂದೇ ಬಿಡುವುದು. ಮನೆಯಲ್ಲಿ ಸೇರುವ ಐದು ಮಂದಿ ತುಡುಗರು 'ನೆಲಗಳ್ಳರು'-ಕಾಮ, ಕ್ರೋಧ, ಲೋಭ, ಮೋಹ ಹಾಗೂ ಮತ್ಸರ. ಅವರು ಐದು ಮಂದಿಯೋ ಆರುಮಂದಿಯೋ ಎಂಬುದು ಮಹತ್ವದ ವಿಷಯವಲ್ಲ. ಹತ್ತು ಜನರಾರು ಎಂಬುದನ್ನು ಅರಿಯುವುದು ಅಷ್ಟೊಂದು ಬಿಗಿಯಾದುದಲ್ಲ. ದಶೇಂದ್ರಿಯಗಳೆ ಆ ಹತ್ತು ಜನ. ಆದರೆ ಎಂಟು ಜನರಾರು ಎಂಬುದನ್ನು ಗುರುತಿಸುವುದು ಕೊಂಚ ಕಠಿನವಾದುದು. ಕನ್ನಡ ಸಾಹಿತ್ಯದಲ್ಲಿ ಅಷ್ಟಮದಗಳನ್ನು ಎಂಟು ಜನ ತುಡುಗರೆಂದು ಹೇಳುವ ವಾಡಿಕೆಯುಂಟು. ಇದನ್ನು ತಮ್ಮಲ್ಲಿ ಅನೇಕರು ಅರಿತಿರಬಹುದು. ದ್ರವ್ಯ, ಯೌವ್ವನ, ಸ್ತ್ರೀ, ವಿದ್ಯಾ, ಕುಲ, ರೂಪ, ಉದ್ಯೋಗ, ಅನ್ನ- ಇವೇ ಆ ಎಂಟು ಮದಗಳು. ಇವೆಲ್ಲ ಮನುಜನಲ್ಲಿ ಒಂದು ಬಗೆಯ ಒಣಹೆಮ್ಮೆಯನ್ನು ಬೆಳೆಸುವವು. ಇವೇ ಕವಿಯು ಕಲ್ಪಿಸಿದ ತುಡುಗರು. ಈ ತುಡುಗರು ನಿಮ್ಮನ್ನು ಸುತ್ತುಗಟ್ಟಿ ಕೆಡಹುವರು ಮತ್ತು ಕೊಲ್ಲುವರು-ಎಂದು ಕವಿಯು ಹೇಳುವ.

ಈ ತುಡುಗರ ಪ್ರಭಾವವು ಬೆಳೆಯಬಾರದೆಂದು ಕವಿಯು ನಮಗೆ ಕೆಲವೊಂದು ಪಾರಮಾರ್ಥಿಕ ಸಾಧನಗಳನ್ನು ಮಾಡಲು ಎಚ್ಚರಿಕೆಯನ್ನು ನೀಡಿರುವನು. ಅವುಗಳಲ್ಲಿ 'ಮೂಲಮಂತ್ರವಾದ ಪ್ರಣವವನ್ನು' ಆಶ್ರಯಿಸುವುದು ಕವಿಯು ಹೇಳಿದ ಮೊದಲನೆಯ ಸಾಧನ. 'ಐಕ್ಯದಿಂದ ಸದ್ಗುರುವನ್ನಾಗಲಿ, ಭಗವಂತನನ್ನಾಗಲಿ ನೆನೆಯುವುದು ಎರಡನೆಯ ಸಾಧನ'. 'ಸರಿಯಾದ ಗುರಿಯನ್ನಿಟ್ಟು ಬಾಣವನ್ನೆಸೆಯುವದು' ಕೊನೆಯ ಸಾಧನ. ಮಂಡೂಕೋಪ ನಿಷತ್ತಿನಲ್ಲಿ ಅರುಹಿದ ಮೇರೆಗೆ:

> ಪ್ರಣವೋ ಧನುಃ ಶರೋಹ್ಯಾತ್ಮಾ
> ಬ್ರಹ್ಮತಲ್ಲಕ್ಷಮುಚ್ಯತೇ।
> ಅಪ್ರಮತ್ತೇನ ವೇದ್ಧವ್ಯಂ
> ಶರವತ್ತನ್ಮಯೋ ಭವೇತ್॥ (೨-೨-೪)

'ಓಂಕಾರವೆಂಬುದು ಬಿಲ್ಲು, ಆತ್ಮನು ಬಾಣ, ಬ್ರಹ್ಮವು ಹೊಡೆಯಬೇಕಾದ ಗುರಿ. ನಾವದನ್ನು ಏಕಾಗ್ರಮನಸ್ಸಿನಿಂದ ಹೊಡೆಯಬೇಕು. ಅಂದರೆ ಆ ಬಾಣವು ಗುರಿಯೊಡನೆ ಬೆರೆತು ಬಿಡಬಹುದು.' ಸರಿ! ನೀವು ಆ ಬಗೆಯ ಏಕಾಗ್ರತೆಯಿಂದ

ನಾಸಿಕದ ಕೆಳಗಿನ ಇಲ್ಲವೆ ಮೇಲಿನ ತುದಿಯನ್ನು ನಿರೀಕ್ಷಿಸಿದರೆ, ಬೇರೆಲ್ಲ ವಿಷಯಗಳು ಅಡಗಿ, ಭಗವಂತನ ರೂಪವು ನಿಮ್ಮೆದುರು ಕಾಣಿಸಿಕೊಳ್ಳುವುದು; ಮತ್ತು ಕೊನೆಗೆ ಈ ಕಳ್ಳರೆಲ್ಲರು ನಾಶಹೊಂದುವರು. ಆಮೇಲೆ ನೀವು ಬೇಡಿದ ಪದಾರ್ಥ ನಿಮಗೆ ದೊರಕುವುದು. ಈ ಪಾರಮಾರ್ಥಿಕ ಸಾಧನವನ್ನು ನೀವು ಮಾಡಿದಿರೆಂದರೆ, ನಿಮ್ಮದು ಮೇಲುಗೈಯಾಗಿ ನೀವು ಎಲ್ಲ ವಿಕಾರಗಳನ್ನು ಗೆಲ್ಲುವಿರಿ.

ಈ ಸಂದರ್ಭದಲ್ಲಿ ನಾನು ಒಂದು ಸಂಗತಿಯನ್ನು ವಿಶೇಷವಾಗಿ ಉಲ್ಲೇಖಿಸಬಯಸುವೆ. ಮೇಲ್ಕಾಣಿಸಿದ ವಿಕಾರಗಳಲ್ಲಿ ಇಲ್ಲವೆ ಕಳ್ಳರಲ್ಲಿ ಐವರು ನಿಮ್ಮ ಮನೆಯನ್ನು ಪ್ರವೇಶಿಸಲು ಯತ್ನಿಸುವ ಹಿರಿಯ ಕಳ್ಳರು; ನಿಮ್ಮನ್ನು ಮುತ್ತಲು ಹಾಗೂ ಕೆಡುಹಲು ಯತ್ನಿಸುವ ಎಂಟು ಹತ್ತು ಜನರು ಪುಂಡರು–ಗುಂಡರು. ಆಮೇಲೆ ಈ ವಿಕಾರಗಳ ಇಲ್ಲವೆ ಕಳ್ಳರ ಆಧೀನದಲ್ಲಿ ಕೆಲ ಕ್ರೂರ ಹುಲಿಗಳಿರುವವು. ಅವು ನಿಮ್ಮ ಮೇಲೆ ದಾಳಿ ಮಾಡಿ ನಿಮ್ಮನ್ನು ನುಂಗಲು ಯತ್ನಿಸುವವು. ಬನಿಯನ್ನನು ತನ್ನ 'ಯಾತ್ರಿಕನ ಪ್ರಗತಿ'(Pilgrim's Progress) ಎಂಬ ಗ್ರಂಥದಲ್ಲಿ ಇದನ್ನೇ ಹೇಳಿರುವುದು ಅತಿ ವಿಲಕ್ಷಣವಾದ ಸಾಮ್ಯವೇ ಸರಿ. ಇದನ್ನರುಹುವ ಆ ಗ್ರಂಥದಲ್ಲಿಯ ಅವತರಣದ ಭಾವಾನುವಾದವು ಈ ಬಗೆಯದಿರುವುದು: 'ನಾನು ಇರುಳಿನಲ್ಲಿ ತಮ್ಮ ಬೇಟೆಯನ್ನರಸುತ್ತ ಅಲೆಯುತ್ತಿರುವ ಹಿಂಸ್ರ ಪಶುಗಳ ಚೀರಾಟವನ್ನು ಕೇಳಲಿರುವೆ; ಮತ್ತು ಅವು ಕತ್ತಲೆಯಲ್ಲಿ ನನಗೆ ಭೇಟಿಯಾದರೆ ನಾನು ಅವನ್ನು ತಪ್ಪಿಸುವುದೆಂತು? ಅವುಗಳಿಂದ ವಿದಾರಿತನಾಗದೆ ನಾನು ಸುರಕ್ಷಿತವಾಗಿ ಪಾರಾಗುವದೆಂತು?' ಅದೇ ಮೇರೆಗೆ ಇಲ್ಲಿಯೂ ಕೂಡ ಹುಲಿಗಳು ಕಳ್ಳರ ವಿನಾಶಕಾರಕ ಕಾರ್ಯದಲ್ಲಿ ಅವರಿಗೆ ನೆರವಾಗುವವು.

ಇದರ ಮುಂದಿನ ಪದವಾದ 'ಏನ ಬರಾ ನಟ್ಟಿತಪ್ಪಾ ಎನಗೆ ಮುಳ್ಳಾ' ಎಂಬುದು ಬಾಳಿನಲ್ಲಿಯ ಮುಳ್ಳುಗಳನ್ನು ಕುರಿತು ಬರೆಯಲಾದುದು. ಈ ಪದವನ್ನು ರಚಿಸಿದವರು ನಂದ್ಯಾಳದ ಸಂತ ಕವಿಗಳು. ನಂದ್ಯಾಳ ಎಂಬ ಗ್ರಾಮವು ಬಾಗೇವಾಡಿ ತಾಲೂಕಿನಲ್ಲಿ ಡೋಣಿ ನದಿಯ ತೀರದಲ್ಲಿ ಇರುವದೆಂದು ಕೇಳಿರುವೆ. ಶ್ರೀಶೈಲದ ದಾರಿಯಲ್ಲಿ ಬೇರೊಂದು ನಂದ್ಯಾಳವೂ ಇರುವುದುಂಟು. ಈ ಸಂತ–ಕವಿಯ ನಿವಾಸ ಸ್ಥಳವಾದ ನಂದ್ಯಾಳವು ಬಹುತರವಾಗಿ ಬಾಗೇವಾಡಿ ತಾಲೂಕಿನಲ್ಲಿಯದೇ ಇರಬಹುದು. ಈ ಕವನದ ಕರ್ತನಾದ ನಂದ್ಯಾಳದ ಈ ಸಂತರ ಹೆಸರೇನು? ನಮ್ಮ ಹತ್ತಿರ ಈ ಸಂತರ ಮೂರು ಪದಗಳಿರುವವು. ಈ ಮೂರೂ ಪದಗಳ ಕೊನೆಯ ಸಾಲುಗಳನ್ನು ಕಂಡರೆ, ನಂದ್ಯಾಳ ಹಾಗೂ ಸಂಗ ಎಂಬ ಸಂತರ ಸಂಬಂಧವು ತಿಳಿದುಬರುವುದು. 'ಬಾ ಬಾ ಬಾ ಎನ್ನ ಮೋಹದ ಮನಸ!' ಎಂಬ ಪದದಲ್ಲಿ ಬರಿ 'ಸಂಗ' ಎಂಬ ಹೆಸರು ಉಲ್ಲೇಖಿಸಲಾಗಿದೆ. ಪ್ರಸ್ತುತ ಪದವಾದ

'ಏನ ಬರಾ ನಟ್ಟಿತಪ್ಪಾ ಎನಗೆ ಮುಳ್ಳಾ' ಎಂಬುದರಲ್ಲಿ ಬರಿ 'ನಂದ್ಯಾಳ' ಎಂಬ ಹೆಸರು ಬಂದಿರುವುದು; ಮತ್ತು 'ಎಂದು ಮೈ ಮರಸಿ' ಎಂಬ ಮೂರನೆಯ ಪದದಲ್ಲಿ 'ನಂದ್ಯಾಳ' ಹಾಗೂ 'ಸಂಗ' ಎಂಬ ಎರಡೂ ಹೆಸರುಗಳು ಕಂಡುಬರುವವು. ಆದುದರಿಂದ ಇವೆಲ್ಲ ಸಂಗತಿಗಳನ್ನು ಗಮನಿಸಿದರೆ, ಈ ಪದವು ನಂದ್ಯಾಳದ ಸಂಗ ಎಂಬ ಸಂತರಿಂದ ರಚಿಸಲಾಗಿರುವಂತೆ ಕಾಣುವುದು.

ಇದೊಂದು ಜಾನಪದಗೀತ. ಇದು ಬಾಳಿನಲ್ಲಿಯ ಮುಳ್ಳುಗಳನ್ನು ಬಣ್ಣಿಸುವುದು. ಕವಿಯು ಈ ಮುಳ್ಳುಗಳ ಕೆಲ ಮಹತ್ವದ ವರ್ಗಗಳನ್ನು ಕಲ್ಪಿಸಿರುವ, ಮೊದಲನೆಯದು ಮಾಯೆಯ ಒಂಟಿ ಮುಳ್ಳು. ಅದು ಮನುಜನ ಮಿದುಳನ್ನು ಇಲ್ಲವೆ ಬುದ್ಧಿಯನ್ನು ಬಾಧಿಸುವುದು. ಆಮೇಲೆ ಬರುವವು ಜೋಡು ಮುಳ್ಳುಗಳು. ಅವುಗಳಲ್ಲಿ ಮೊದಲನೆಯ ಜೋಡಿಯು ಮಾನಪಮಾನ ಎಂಬುದು. ಅದು ಕಿವಿಗಳನ್ನು ಬಾಧಿಸುವುದು. ಬಹುತರವಾಗಿ ಕಿವಿಗಳೇ ನಮಗೆ ಮಾನಪಮಾನದ ವರದಿಗಳನ್ನು ತಲುಪಿಸುವವು. ರಸ-ಸ್ವಾದ ಎಂಬುದು ಎರಡನೆಯ ಜೋಡಿ. ಅದು ನಾಲಿಗೆಯನ್ನು ಬಾಧಿಸುವುದು. ಈ ಮುಳ್ಳುಗಳನ್ನು ಕವಿಯು ವಕ್ರಜಾತಿಯ 'ಬ್ಯಾಲದ ಮುಳ್ಳು' ಎಂದು ಕರೆವನು; ಮತ್ತು ಕೊನೆಗೆ ಬರುವವು ಹೆಣ್ಣು, ಹೊನ್ನು, ಮಣ್ಣು ಎಂಬ ಮೂರು ಮುಳ್ಳುಗಳು. ಇವು ಕಂಗಳಲ್ಲಿ ಮುರಿಯುವವು. ಇವನ್ನು ಬಾಯ್‌ಬಲ್ಲಿಗೆ ಸಂಬಂಧಿಸಿದ ಸಾಹಿತ್ಯದಲ್ಲಿಯೂ ಕಾಣಬಹುದು. ಈ ಕಂಟಕತ್ರಯವು ಸಾಮಾಜಿಕ ಸ್ವರೂಪದ್ದಿರುವುದು. ಮೊದಲನೆಯ ಮಾಯೆಯು ಪರತತ್ವಶಾಸ್ತ್ರೀಯವು, ಮುಂದಿನವೆರಡು ಮಾನಸಶಾಸ್ತ್ರೀಯ ಹಾಗೂ ಶರೀರಶಾಸ್ತ್ರೀಯವು ಮತ್ತು ಮೂರನೆಯದು ಸಾಮಾಜಿಕವಾದುದು. ಯಾಕಂದರೆ ಅದು ಮನುಜನನ್ನು ಸಮಾಜದ ಸಂಪರ್ಕದಲ್ಲಿ ತರುವುದು. ಜೀವನದಲ್ಲಿ ಈ ಮುಳ್ಳುಗಳು ಮನುಜರಿಗೆ ಬಾಧಿಸುವವು.

ಇಲ್ಲಿ ಕವಿಯು ಒಂದು ಮಹತ್ವದ ವಿಧಾನವನ್ನು ಮಾಡಿರುವ. ನಮ್ಮ ಕಾಲುಗಳು ತಾವಾಗಿಯೆ ಮುಳ್ಳುಗಳನ್ನು ತುಳಿದವೆಂದು ಹೇಳುವುದು ಸರಿಯಲ್ಲ. ಹಾಗದರೆ ಮನುಜನಿಗೆ ಸ್ವಾತಂತ್ರ್ಯವದೆಲ್ಲಿ? ಅದಕ್ಕಾಗಿ ಮನುಜನು ರೀತಿ ನುಡಿಯ ಬಹುದು: 'ಅಯ್ಯ! ನಾನೇನು ಮಾಡಲಿ! ನಾನು ಅನೇಕ ತಪ್ಪುಗಳನ್ನು ಮಾಡಿರುವೆ ನಿಜ! ಆದರೆ ನಾನವನ್ನು ನನ್ನ ಸ್ವಂತ ಸ್ವತಂತ್ರ ಬಯಕೆಯಿಂದ ಮಾಡಿರುವುದಿಲ್ಲ. ನನ್ನ ಹೆಜ್ಜೆಗಳು, ನಾನು ಬಯಸದಿದ್ದರೂ ತಾವಗಿಯೆ ಮುಳ್ಳುಗಳನ್ನು ತುಳಿದವು. ನಾನವನ್ನು ಮುಳ್ಳುಗಳ ಮೇಲೆ ಇರಿಸಲಿಲ್ಲ." ಆದುದರಿಂದ ಕವಿಯು ಹೇಳುವುದೇನೆಂದರೆ: 'ನಮ್ಮ ಕಾಲುಗಳು ತಾವಾಗಿಯೆ ಮುಳ್ಳನ್ನು ತುಳಿದವೆಂದು ಹೇಳುವುದರಿಂದ ಏನು ಪ್ರಯೋಜನ! ನೀವು ನಿಮ್ಮ ಹೊಣೆಯನ್ನು ಅನ್ಯರ ಮೇಲೆ

ಎಸೆದು ನಿಮ್ಮ ವರ್ತನೆಯನ್ನು ಸಮರ್ಥಿಸ ಲರಿಯರಿ. ನೀವು ನಿಮ್ಮನ್ನೆ ಹಳಿಯಬೇಕಾಗುವುದು. ಆತ್ಮಸ್ವಾತಂತ್ರ್ಯದ ತತ್ವದ ಮೇರೆಗೆ ನೀವು ಒಳಿತನ್ನು ಮಾಡಬಲ್ಲಿರಿ ಇಲ್ಲವೆ ಕೆಡುಕನ್ನು ಮಾಡಬಲ್ಲಿರಿ. ನೀವು ಒಳಿತನ್ನು ಮಾಡಿದರೆ ಅರ್ಥಾತ್, ನೀವು ನಿಮಗೆ ಧನ್ಯವಾದಗಳನ್ನು ಸಲ್ಲಿಸಬಹುದು-ಬಿಡಬಹುದು. ಆದರೆ ನೀವು ಕೆಡುಕನ್ನು ಮಾಡಿದರೆ ಮಾತ್ರ ನೀವು ನಿಮ್ಮನ್ನೇ ದೂಷಿಸಬೇಕು. ತನ್ನ ಕರ್ಮಗಳ ಹೊಣೆಯನ್ನು ನಿರಾಕರಿಸುವ ದುರ್ಯೋಧನನ ಮನೋವೃತ್ತಿಯನ್ನು ಸಮರ್ಥಿಸಿ ಫಲವಿಲ್ಲ.

ಕೊನೆಗೆ ಕವಿಯು ಹೇಳುವುದೇನೆಂದರೆ: ಜೀವನದಲ್ಲಿ ಈ ಮುಳ್ಳುಗಳು ಎಂಥ ವಿದ್ದರೂ ಅವನ್ನೆಲ್ಲ ಸದ್ಗುರುವಿನ ಕರುಣದ ಅಗ್ನಿಯು ಸುಟ್ಟಬಿಡಬಿಲ್ಲದು. ಅದು ಮೋಹವಿರಲಿ, ಮಾನಾಪಮಾನವಿರಲಿ, ಹೆಣ್ಣು-ಹೊನ್ನು-ಮಣ್ಣಿರಲಿ, ಇನ್ನಾವುದೂ ಇರಲಿ; ಈ ಅಗ್ನಿಯಲ್ಲಿ ಯಾವ ಮುಳ್ಳೂ ಉಳಿಯಲರಿಯದು. ನಿಮ್ಮ ಕಾಲುಗಳು ತಾವಾಗಿಯೆ ಈ ಮುಳ್ಳುಗಳ ಮೇಲೆ ಬೀಳಲಿಕ್ಕಿಲ್ಲ. ಈ ಮುಳ್ಳುಗಳನ್ನು ತುಳಿಯಬಯಸುವ ನಿಮ್ಮ ಕಾಲುಗಳ ಸಹಜ ಪ್ರವೃತ್ತಿಯನ್ನು ತಡೆಯುವ-ನಿಮ್ಮ ಕಾಲುಗಳನ್ನು ಅಂಕೆಯಲ್ಲಿಡುವ-ಸ್ವಾತಂತ್ರ್ಯ ಸಾಮರ್ಥ್ಯಗಳನ್ನು ನೀವು ಪಡೆದಿರುವಿರಿ; ಮತ್ತು ಕೊನೆಗೆ ಭಗವಂತನ ಪ್ರಸಾದಾಗ್ನಿಯು ಈ ಮುಳ್ಳುಗಳನ್ನು ಸುಟ್ಟುಬಿಡುವುದು. ಇದು ಸಂಗ ಕವಿಯ ಕವನದ ಪ್ರಧಾನ ಬೋಧೆಯು.

'ಗುರುವೇ ನಿಮ್ಮ ಸ್ಮರಣೀ ನಾನು ಮರೆಯಲಾರೆ', ಎಂಬುದು ಮುಂದಿನ ಪದ. ಅದರಲ್ಲಿ ನಮ್ಮನ್ನು ಮರಣ ಸಂಕಟದೊಳಗಿಂದ ರಕ್ಷಿಸುವುದು ಸದ್ಗುರುವಿನ ಕಾರ್ಯ ಎಂದು ಕವಿಯು ಹೇಳಿರುವ. ಕಳೆದ ಹದಿನೈದು ವರುಷಗಳಿಂದ ನಾನೀ ಪದವನ್ನು ಬಲ್ಲೆ. ಹೊರ್ತಿಯ ನೆರೆಯಲ್ಲಿರುವ ಡೋಮನಾಳ ಎಂಬ ಗ್ರಾಮದ ರುದ್ರಯ್ಯಸ್ವಾಮಿ ಎಂಬುವವರಿಂದ ಈ ಪದವನ್ನು ನಾನು ಮೊದಲು ಕೇಳಿದೆ. ಅವರಿಂದ ಇದನ್ನು ನನ್ನ ಸೇವಕನು ಕಲಿತು ಕಂಠಪಾಠ ಮಾಡಿದನು. ಕ್ರಿಶ. ೧೯೪೪ರಲ್ಲಿ ಅವನು ದಿನಾಲು ಈ ಪದವನ್ನು ನನಗೆ ಹಾಡಿ ತೋರಿಸುತ್ತಿದ್ದನು. ಒಂದು ವಿಲಕ್ಷಣ ಯೋಗಾಯೋಗದಿಂದ, ಇದರ ಸಂಬಂಧವು ನನ್ನ ಜೀವನದಲ್ಲಿಯ ಒಂದು ಅತಿ ದುರ್ದೈವದ ಘಟನೆಯೊಡನೆ-ಅದೆ ವರುಷ ಸಂಭವಿಸಿದ ನನ್ನ ಎರಡನೆಯ ಮಗನ ಮರಣದೊಡನೆ-ಒದಗಿಬಂದಿತು. ಭಗವಂತನ ನಾಮವನ್ನು ಮರೆಯುವದಕ್ಕಿಂತ ಸಾಯುವದು ಸಾವಿರ ಪಾಲುಬೇಕು ಎಂಬುದು ಕವಿಯು ಇದರಲ್ಲಿ ಹೇಳುವ ಮೊದಲನೆಯ ಮಾತು. 'ಮರೆಯಲಾರೆ, ಮರೆಯಲಾರೆ, ಮರೆತಿರಲಾರೆನಯ್ಯ!' ಎಂದು ಕವಿಯು ಉಸುರುವ. "ತೊರೆದು ಜೀವಿಸಬಹುದೇ ಹರಿ ನಿನ್ನ ಚರಣವನು?" ಎಂಬ ಕನಕದಾಸರ ಇದೇ ಬಗೆಯ ಪದವನ್ನು ನಾವು

ಬಲ್ಲೆವು. ಭಗವಂತನ ನಾಮವನ್ನು ಮರೆತರೆ, ನಾವು ಜೀವಿಸಿಯಾದರೂ ಫಲವೇನು? ಇದು ಕವಿಯು ಅರುಹಿದ ಮೊದಲನೆಯ ವಿಷಯ. ಎರಡನೆಯ ದಾಗಿ, ಕವಿಯು ಮರಣವನ್ನು ದೂರೀಕರಿಸಲು ಭಗವಂತನನ್ನು ಬೇಡಿಕೊಳ್ಳುವ. ಯಾಕೆಂದರೆ ಮರಣವನ್ನು ನಿವಾರಿಸುವುದು ಇಲ್ಲವೆ ನಿವಾರಿಸದಿರುವುದು ಭಗವಂತನ ಕೈಯಲ್ಲಿರುವದು,ಮಾನವನ ಕೈಯಲ್ಲಿರುವುದಿಲ್ಲ. 'ಬಂದ ದುರಿತ ದೂರ ಮಾಡೋ ಇಂದು ಶಂಕರಾ!' ಎಂದು ಕವಿಯು ಪ್ರಾರ್ಥಿಸುವ. ಆದರೆ ನಾವು ಭಗವಂತನ ಕರುಣಕ್ಕೆಯೇ ಎಲ್ಲವನ್ನು ಒಪ್ಪಿಸಿ ಬಂದದ್ದನ್ನು ಉಣ್ಣಲು ಸಿದ್ಧರಿರಬೇಕು. ಏನೇ ಒದಗಿದರೂ ಅದರಿಂದ ನಾವು ಸಮಾಧಾನವನ್ನು ಹೊಂದಬೇಕು. ಆಮೇಲೆ ಕವಿಯು ಮಾಡಿದ 'ಭಕ್ತಹರಳ–ದೋಷಪರಿಹಾರಾ' ಎಂಬ ಪದವಿನ್ಯಾಸಕ್ಕೆ ಮೂರು ಅರ್ಥಗಳು ಸಂಭವಿಸಬಹುದು: (೧) ಭಕ್ತರು ಕಣಿಯಲ್ಲಿಯ ವಜ್ರದಂತಿರುವ. ಆ ವಜ್ರಗಳನ್ನು ಕಡಿದು ಅವುಗಳನ್ನು ಪರಿಶುದ್ಧ ಮಾಡಲುಬೇಕು. ಆದುದರಿಂದ ಅವರ ದೋಷಗಳನ್ನು ಅಳಿಸಿ ನಿನ್ನ ವಜ್ರಗಳ ಕಾಂತಿಯನ್ನು ಬೆಳಿಸಯ್ಯ ಪ್ರಭೋ!' (೨) 'ಅಯ್ಯ ದೇವರೇ! ನೀನು ನಿನ್ನ ಭಕ್ತರ ಹರಳನಿರುವಿ! ಅವರ ಪಾತಕಗಳನ್ನು ಪರಿಹರಿಸಯ್ಯ' ಎಂಬುದು ಎರಡನೆಯ ಅರ್ಥ. (೩) 'ದೇವರೇ! ಭಕ್ತರಲ್ಲಿ ಹರಳರಂತಿರುವ ಪ್ರಧಾನ ಭಕ್ತರ ದೋಷಗಳನ್ನು ನೀನು ಪರಿಹರಿಸುವವನು' ಎಂಬುದು ಅದರ ಮೂರನೆಯ ಅರ್ಥ. ಈ ರೀತಿ 'ಭಕ್ತ ಹರಳ–ದೋಷ ಪರಿಹಾರಾ' ಎಂಬ ಈ ಪದವಿನ್ಯಾಸವು, ಸಂಸ್ಕೃತದಲ್ಲಿಯ ಅರ್ಥವಿವರಣೆಯ ಪದ್ಧತಿಯನ್ನು ಅನುಸರಿಸಿದರೆ ಮೂರು ಬೇರೆ ಬೇರೆ ಅರ್ಥಗಳನ್ನು ಕೊಡಬಲ್ಲದು. ಭಗವಂತನು ನಮ್ಮ ಪಾತಕಗಳನ್ನು ಪರಿಹರಿಸಬೇಕೆಂದು ಕವಿಯು ಅವನನ್ನು ಬೇಡಿಕೊಂಡಿರುವ ನೆಂಬುದು ಅದೆಲ್ಲದರ ತಾತ್ಪರ್ಯ.

ಕೊನೆಯದಾಗಿ, ಈ ಪದದಲ್ಲಿ ಒಂದು ಮಹತ್ವದ ಮಾತು ಬಂದಿರುವುದು. ಕವಿಯು 'ದೊಡ್ಡಪೇಟೆ–ಬಸವ' ಹಾಗೂ 'ಪುರಂದರದಾಸ' ಇವರಿಬ್ಬರ ಹೆಸರು ಗಳನ್ನು ಒಂದೇ ಬಗೆಯ ಗೌರವದಿಂದ ಉಲ್ಲೇಖಿಸಿರುವ. ಪುರಂದರದಾಸರು ಪುರಂದರಗಡದಲ್ಲಿ ಇದ್ದವರಾದರೆ, ಬಸವರು ದೊಡ್ಡಪೇಟೆಯಲ್ಲಿದ್ದರು. ಆದರೂ ಕವಿಯು ಇಬ್ಬರನ್ನು ಒಂದೆ ಬಗೆಯಾಗಿ ಸಂಬೋಧಿಸಿರುವ. ಈ ದೊಡ್ಡಪೇಟೆಯ ವಿಷಯವನ್ನು ಕುರಿತು ನಾನು ಆಳವಾಗಿ ಆಲೋಚಿಸಿದೆ. ಅದರ ಫಲವಾಗಿ ನಾನು ಮುಂದಿನ ನಿರ್ಣಯಕ್ಕೆ ಬಂದೆ: ಬೆಂಗಳೂರಿನಲ್ಲಿಯ ಬಸವನಗುಡಿಯು ದೊಡ್ಡ ಪೇಟೆಯ ಒಂದು ಕೊನೆಗೆ ನೆಲೆಸಿರುವುದರಿಂದ, ದೊಡ್ಡಪೇಟೆಯು ಬೆಂಗಳೂರೇ ಇರಬಹುದು. ಇಲ್ಲದಿದ್ದರೆ ರುದ್ರಯ್ಯಸ್ವಾಮಿಯವರೇ ಭಾವಿಸಿದ ಮೇರೆಗೆ ದೊಡ್ಡ

ಪೇಟೆಯು ಬಸವಣ್ಣನವರ ಜನ್ಮಸ್ಥಳವಾದ ಬಾಗೇವಾಡಿಯೇ ಇರಬಹುದು. ಕವಿಯು ಈ ಸಂತರೀರ್ವರ ಜೀವನದಲ್ಲಿ ಹೋಲಿಕೆಯನ್ನು ಕಂಡಿರುವ. ಕವಿಯು ಪುರಂದರದಾಸರ 'ಜಂಗಮರು ನಾವು ಜಂಗಮರು' ಹಾಗೂ 'ಶಿವದರ್ಶನ ನಮಗಾಯಿತು'– ಇಂಥ ಕೆಲ ಪದಗಳನ್ನು ಕೇಳಿರಬಹುದು. ಅದರ ಮೂಲಕ ಅವನು ಮೇಲ್ಕಾಣಿಸಿದ ಹೋಲಿಕೆಯನ್ನು ಕಂಡಿರಬಹುದು. 'ಶಿವದರ್ಶನ ನಮಗಾಯಿತು' ಈ ಪದವನ್ನು ದಾಸರಾಯರು ಸೊಂಡಾಣಪುರದಲ್ಲಿ ರಚಿಸಿದಂತೆ. ಈ ಎರಡು ಪದಗಳು ಪುರಂದರದಾಸರಿಂದ ರಚಿಸಲಾದವುಗಳು. ವಿಶೇಷವಾಗಿ ಮೊದಲನೆಯ ಪದವು ಅವರಿಂದಲೆ ಬರೆಯಲಾದುದು ಎಂಬ ಗ್ರಹಿಕೆ ಇದೆ. ಆದರೂ ಈ ಗ್ರಹಿಕೆಯ ಸತ್ಯತೆಯನ್ನು ದಾಸರಾಯರ ಸಾಹಿತ್ಯವನ್ನು ಅಭ್ಯಸಿಸಿದವರೇ ನಿರ್ಣಯಿಸಬೇಕು.

ಇನ್ನು ನಾನು ಮುಂದಿನ ಪದವಾದ 'ಏನು ಅನ್ಯಾಯ ತಿಳಿಯದು' ಎಂಬುದರೆಡೆ ಸಾಗುವೆ. ಅದು ಉಮದಿಯ ಮಹಾರಾಜರವರ ಶಿಷ್ಯರಾದ, ನನ್ನ ಗುರು ಬಂಧುಗಳಿಂದ ರಚಿಸಲಾಗಿದೆ. ಅದರ ಕರ್ತರಾದ ರಾಮರಾವ ಹೊರ್ತಿ ಎಂಬುವವರು ವಿಜಾಪುರದ ನಿವಾಸಿಗಳು. ಅವರು ಕೆಲ ವರುಷಗಳ ಪೂರ್ವದಲ್ಲಿ ಕಾಲವಾದರು. ಅವರು ಮಹಾರಾಜರವರಿಗೆ ಒಂದು ಕಾಗದವನ್ನು ಬರೆದಿದ್ದರು. ಅದರಲ್ಲಿಯ ಕಾವ್ಯಗುಣಗಳ ಮೂಲಕ ಅದು ಪದದ ರೂಪವನ್ನು ತಳೆದಿರುವದು. ಅದು ಕವಿತೆಯಾಗಬೇಕು ಎಂಬ ಉದ್ದೇಶವೇ ಇರಲಿಲ್ಲ. ಈ ಪದವು ಕೆಲಮಹತ್ವದ ವಿಚಾರಗಳನ್ನು ಒಳಗೊಂಡಿರುವ ಮೂಲಕ ಅನುಭಾವದ ಮಾನಸಶಾಸ್ತ್ರಕ್ಕೆ ಅದೊಂದು ಹಿರಿಯ ಕಾಣಿಕೆಯನ್ನೇ ಸಲ್ಲಿಸಿರುವುದು. ಈ ಕವನದಲ್ಲಿ ಕವಿಯು ಅರುಹಿದ ಮಹತ್ವದ ವಿಷಯಗಳಾವವು? ಕವಿಯು ತನ್ನ ಸದ್ಗುರುಗಳಿಗೆ ಹೇಳುವುದೇನೆಂದರೆ, 'ಅಯ್ಯ ದೇವರೆ! ಸದ್ಗುರುವೇ! ನಾನು ಅದಾವ ತಪ್ಪುಗಳನ್ನು ಮಾಡಿರುವೆ? ನನ್ನನ್ನು ದೈವಕ್ಕೆ ಯಾಕೆ ಒಪ್ಪಿಸಿಕೊಟ್ಟೆ? ನಾನು ತಪ್ಪನ್ನು ಮಾಡಬಹುದಾದ ಮನುಜನಲ್ಲ. ಅದರ ಕಾರಣಗಳು ಮೂರು: ನಿಮ್ಮ ಪಾರಮಾರ್ಥಿಕ ಬೋಧೆಯು ಮೊದಲನೆಯದು; ನಿಮ್ಮ ಬೋಧೆಯನ್ನು ಕುರಿತು ನಾನು ಮಾಡಿದ ಆಳವಾದವಿಚಾರ ಎರಡನೆಯದು; ಮತ್ತು ನಿಮ್ಮ ಪುಣ್ಯಜೀವನವು ಮೂರನೆಯದು. ಈ ತ್ರಿವಿಧ ರಕ್ಷಾಕವಚದ ಮರೆಯಲ್ಲಿ ಮನುಜನು ಸಹಜವಾಗಿ ಆಡಬಹುದು– ಆಶ್ರಯ ಪಡೆಯಬಹುದು. ಸದ್ಗುರುವಿನ ಬೋಧೆಯ ಸಾರಾಸಾರ ವಿಚಾರದ ಮೂಲಕವಾಗಲಿ ಇಲ್ಲವೆ ಸದ್ಗುರುಗಳ ಪಾವನಜೀವನದ ಮೂಲಕವಾಗಲಿ,' ಶಿಷ್ಯನು ಯಾವ ಬಗೆಯ ಪ್ರಮಾದವನ್ನು ಮಾಡಲರಿಯ. ಕವಿಯು ತಮ್ಮ ಸದ್ಗುರುಗಳನ್ನು ಪಾರಮಾರ್ಥಿಕ ಪುಣ್ಯದ ಭಾಂಡಾರವೆಂದು ಬಗೆಯುವ. ಈ ಸಂದರ್ಭದಲ್ಲಿ ನಾವು

ಭೀಮದಾಸರ 'ತುಂಬಿಕೊಂಡರು ತಾವು ವ್ಯಾಸರಾಯರು'- 'ವ್ಯಾಸರಾಯರು ಭಗವಂತನ ನಾಮವನ್ನು ತಮ್ಮಲ್ಲಿ ತುಂಬಿಕೊಂಡು ತಾವು ಪಾರಮಾರ್ಥಿಕ ಪುಣ್ಯದ ಭಾಂಡಾರವಾದರು' ಎಂಬ ವಚನವನ್ನು ಇದರೊಡನೆ ಸರಿ ಹೋಲಿಸ ಬಹುದು. 'ನೀನು ಪುಣ್ಯಪೂರ್ಣನಿರುವಾಗ ನಾನು ತಪ್ಪು ಮಾಡುವ ಬಗೆ ಹೇಗೆ? ಶುದ್ಧವಾದ ಪ್ರತಿಜ್ಞೆಯಿಂದ ತಪ್ಪು ಅನುಮಾನವು ಹೊರಡುವುದು ಅದೆಂತು ಸಾಧ್ಯ? ಆದುದರಿಂದ, ಸದ್ಗುರುವೇ! ನೀನು ಪುಣ್ಯಜೀವನವನ್ನು ಬಾಳಿರುವಿಯಾದರೆ ನಾನು ಸರಿಯಾಗಿ ನಡೆಯಲೇಬೇಕು'. ಕವಿಯು ಹೇಳುವ ಇನ್ನೊಂದು ವಿಷಯ ವೇನೆಂದರೆ: 'ನಾನು ನಿಜವಾಗಿ ತಪ್ಪನ್ನು ಮಾಡಿಲ್ಲ. ಆದುದರಿಂದ ನನಗೆ ಪುಣ್ಯ ಪಾಪಗಳ ಪರಿವೆಯೇ ಇಲ್ಲ. ಆದರೂ ಒಳಿತು ಕೆಡಕು ಇಲ್ಲವೆ ಪುಣ್ಯ-ಪಾಪ ಎಂಬವು ಇರುವವೆಂದು ಜನರು ಅನ್ನುತ್ತಿದ್ದರೆ, ಸದ್ಗುರುವೇ! ನಾನು ಅವನ್ನೆಲ್ಲ ನಿನಗೆ ಒಪ್ಪಿಸರುವೆ. ಎಲ್ಲ ಪುಣ್ಯ-ಪಾಪಗಳು, ಈ ಎಲ್ಲ ದ್ವಂದ್ವಗಳು, ಪರಸ್ಪರ ವಿರುದ್ಧವಾದ ಎಲ್ಲ ಯುಗಲಗಳು ನಿಮ್ಮನ್ನೆ ಸೇರಿರುವವು.' ಈ ವಿಧಾನವು ದುರ್ಯೋಧನನ ವಿಧಾನವನ್ನು ಪೂರ್ತಿಯಾಗಿ ಹೋಲುವುದು. ದುರ್ಯೋಧನನು ಕೃಷ್ಣನಿಗೆ ಹೇಳಿದ್ದೇನೆಂದರೆ: 'ನನ್ನಿಂದ ದುಷ್ಕರ್ಮಗಳನ್ನು ನೀನೇ ಮಾಡಿಸಿರುವೆ. ಅವುಗಳ ಹೊಣೆಗಾರ ನೀನೇ ಇರುವಿ'. ಈ ಬಗೆಯಾಗಿ ದುರ್ಯೋಧನನು ತನ್ನ ಹೊಣೆಯನ್ನು ಕೃಷ್ಣನ ಮೇಲೆ ಹೊರಿಸಿದನು.

ಆಮೇಲೆ, ಅನುಭಾವದ ಮಾನಸಶಾಸ್ತ್ರದ ದೃಷ್ಟಿಯಿಂದ ಇದರಲ್ಲಿ ಇನ್ನೆರಡು ಮಹತ್ವದ ಮಾತುಗಳು ಬಂದಿವೆ. ಕವಿಯು ಹೇಳುವ: 'ನಾನು ನೈತಿಕ ಜೀವನದಿಂದ ಕೆಳಗೆ ಜಾರುವ ಸ್ಥಿತಿಯಲ್ಲಿದ್ದೆ. ಒಂದು ಮೋಹವು ನನ್ನನ್ನು ಸೆಳೆಯಿತು. ಆದರೆ ಗುರುವೇ! ನಾನು ಆ ಮೋಹದ ಜಾಲದಲ್ಲಿ ಬೀಳುವ ಪೂರ್ವದಲ್ಲಿ ನೀನು ನಮ್ಮಿಬ್ಬರ ನಡುವೆ ನಿಂತೆ. ಪಾರಮಾರ್ಥಿಕ ಕನಸಿನ ರೂಪದಿಂದ ನೀನು ನನಗೆ ಕಾಣಿಸಿಕೊಂಡೆ ಮತ್ತು ನನ್ನನ್ನು ಪಾಪಕರ್ಮದಿಂದ ತಡೆದೆ. ನೀನೆನಗೆ ಭಗವಂತನ ಧ್ಯಾನದಲ್ಲಿ ನಿರತನಾಗಲು, ಪರಮಾರ್ಥವನ್ನು ಮುಂದುವರಿಸಲು ಮತ್ತು ಮೋಹ ಕರ್ಮದಲ್ಲಿ ಮುಳುಗದಿರಲು ಬೋಧಿಸಿದೆ.' ಇದೊಂದು ತುಂಬ ಅಂದವಾದ ವಿಚಾರ. ನೀವು ಭಗವಂತನನ್ನು ನಂಬಿ ಪಾರಮಾರ್ಥಿಕ ಜೀವನವನ್ನು ನಡೆಸಿದರೆ, ಭಗವಂತನು ಈ ಕವಿಗಳಂತೆ ನಿಮ್ಮನ್ನು ಮೋಹದಿಂದ ಕಾಯದಿರನು.

ಕೊನೆಗೆ ಕವಿಯು ಸಾರುವದೇನೆಂದರೆ: 'ಅಯ್ಯ ಗುರುದೇವರೆ! ನಾನು ನಿಮ್ಮ ಸುಳುವು ಸೂಕ್ಷ್ಮವನ್ನು ಕೂಡಿದಾಗ ದುಷ್ಕರ್ಮಗಳನ್ನು ಹೇಗೆ ಮಾಡಬಲ್ಲೆ?' ಅದಾಗುವದು ಹೇಗೆ ಸಾಧ್ಯ? ಇಲ್ಲಿ ನಾನು 'ನರಸಪ್ಪ' ಎಂಬ ಸಂತರನ್ನು ಉಲ್ಲೇಖಿಸ ಬಯಸುವೆ. ಅವರು ೧೧೫ ವರುಷ ಬಾಳಿದರು. ಅವರು ನಿಂಬಾಳದಲ್ಲಿಯ ನನ್ನ

ಮನೆಗೆ ಪ್ರತಿ ಹದಿನೈದು ದಿನಕ್ಕೆ ಒಂದಾವರ್ತಿ ಬರುತ್ತಿದ್ದರು. ಅವರು ಭಗವಂತನ 'ಸುಳುವ'ನ್ನು ಕುರಿತು ಹೇಳುತ್ತಿದ್ದರು. ಭಗವಂತನ 'ಸುಳುವ'ನ್ನು, ಸೂಕ್ಷ್ಮಚಲನವನ್ನು ಕಾಣುವುದು ಬಲು ಬಿಗಿಯಾದುದು. ಭಗವಂತನ 'ಸುಳುವು' 'ಚಲನ' ಎಂಬ ಮಾತಿನ ಅರ್ಥವೇನು? ಅದೊಂದು ಹಿರಿಯ ಪ್ರಶ್ನೆಯೆ ಇರುವದು. 'ನಾನು ಭಗವಂತನ ಸುಳುವುಗಳಲ್ಲಿ ಬೆರೆತು ಒಂದಾದರೆ ಪಾಪಕರ್ಮಗಳನ್ನು ಎಸಗುವುದೇ ಸಾಧ್ಯವಿಲ್ಲ' ಎಂಬುದೆ ಕವಿಯು ಅರಹುವ ಕೊನೆಯ ವಿಷಯ.

'ಹ್ಯಾಂಗ ತೀರೀತು ನಿಮ್ಮುಪಕಾರಾ!' ಎಂಬುದು ಮಡಿವಾಳ ಯೋಗಿಯವರ ಪದವು. ಅವರೊಬ್ಬ ಹಿರಿಯ ಕವಿಗಳು. 'ನನ್ನ ಸದ್ಗುರು ನನ್ನ ಮೇಲೆ ಮಾಡಿದ ಹಿರಿಯ ಉಪಕಾರವನ್ನು ಮರೆಯುವುದು ಸಾಧ್ಯವಿಲ್ಲ' ಎಂದು ಕವಿಗಳು ಆದಿಯಲ್ಲಿಯೇ ಉಸುರಿರುವರು. ಇದರ ಜತೆಯಲ್ಲಿ 'ಹ್ಯಾಂಗ ಹಿಂಗಿಸಲಿ ಜನ್ಮದ ಅವತಾರಾ!' 'ನನ್ನ ಜನ್ಮಾಂತರಗಳ ಪರಂಪರೆಯನ್ನು ಹೇಗೆ ನಿಲ್ಲಿಸಲಿ' ಎಂದು ಅವರು ಕೇಳುವರು. 'ಹ್ಯಾಂಗ ಹಿಂಗಿಸಲಿ ಜನ್ಮದಾ ಅವತಾರಾ' ಎಂಬ ಶಬ್ದ ಸಮೂಹಕ್ಕೆ ಎರಡರ್ಥಗಳು ಸಂಭವಿಸುವವು. 'ಜನ್ಮ-ಮರಣದ ಚಕ್ರವನ್ನು ಹೇಗೆ ನಿಲ್ಲಿಸಲಿ!' ಎಂಬುದು ಮೊದಲನೆಯದು. ಹಾಗೂ 'ನನ್ನ ಜೀವನದ ಆದರ್ಶವನ್ನು ಹೇಗೆ ಮುಟ್ಟಲಿ!' ಎಂಬುದು ಎರಡನೆಯದು. ಅದೇನೇ ಇದ್ದರೂ ಇವೆರಡನ್ನು ನೆರವೇರಿಸಲು ಸದ್ಗುರುವಿನ ಪ್ರಸಾದವು ಅವಶ್ಯವಾದುದು. ತನಗೆ ಪಂಚಾಕ್ಷರ ಮಂತ್ರವನ್ನು (ನಮಃ ಶಿವಾಯ) ದಯಪಾಲಿಸಿದ್ದಕ್ಕಾಗಿ ಕವಿಯು ಸದ್ಗುರುಗಳಿಗೆ ತನ್ನ ಕೃತಜ್ಞತೆಗಳನ್ನು ಸಲ್ಲಿಸುವ ಕೊಡುಗೈದೊರೆ-ಎಂದು ಕರೆಯುವ. ಈ ಐದಕ್ಷರಗಳ ಮಂತ್ರವು ಸುಪ್ರಸಿದ್ಧವಾದುದು-ಬಯಸಿದ ಫಲವನ್ನು ನೀಡು ವಂತಹದು ಇರುವದು. ಅದು ಅಂತಿಮ ಕಲ್ಯಾಣವನ್ನು ದಯಪಾಲಿಸುವದು. ಅದರ ನೆರವಿನಿಂದ ಮಾಡಲಾದ ಧ್ಯಾನವು ಜೀವನವನ್ನು ಉನ್ನತಗೊಳಿಸಿ, ಅದಕ್ಕೆ ಪೂರ್ಣತೆಯನ್ನು ನೀಡುವುದು; ಮತ್ತು ನಾನು ಇದನ್ನು ಮಾಡುತ್ತಿರುವಾಗ ನೀನೆನಗೆ ನವಜೀವನವನ್ನು ದಯಪಾಲಿಸಿದೆ- 'ನೂತನ ತನು ತೊಡಿಸಿದೆ'. ನಾನು ಕೇವಲ ಪಂಚಭೂತಾತ್ಮಕ ದೇಹವನ್ನು ಧರಿಸಿ ಜನಿಸಿದೆ. ಆದರೆ ನೀನು ನನಗೆ ಪಾರಮಾರ್ಥಿಕ ರೂಪವನ್ನು ನೀಡಿದೆ. ಇದೇ ನವಜನ್ಮವು ಎಂದು ಕವಿಯು ಅರುಹುವ. ಇದೇ ಒಂದು ಬಗೆಯ ದ್ವಿಜತ್ವವು-ಎರಡನೆಯ ಜನ್ಮವು. ಈ ಬಗೆಯ ಪಾರಮಾರ್ಥಿಕ ಜೀವನವನ್ನು ಪಡೆದವನೆ ದ್ವಿಜನು. ದ್ವಿಜನೆಂದರೆ ಕೇವಲ ಬ್ರಾಹ್ಮಣನಲ್ಲ.

ತರುವಾಯ ಕವಿಯು ಅನುಭಾವದ ಕೆಲ ಪರಿಣಾಮಗಳನ್ನು ಕುರಿತು ಹೇಳು ವನು. ಇಂಥ ಶಿಷ್ಯನ ಮನಸ್ಸಿನಿಂದ ಅಂಜಿಕೆಯು ಅಳಿಯುವುದು. 'ಇತರ ಭಯ

ಪರಿಹರಿಸ'ಲಾಗುವದು. ಇದೇ ಅದರ ಮೊದಲನೆಯ ಪರಿಣಾಮ. ಇದನ್ನು ಕಂಡಾಗ, 'ಉಪನಿಷತ್ತಿನಲ್ಲಿಯ ಮುಂದಿನ ತತ್ವವು ಜ್ಞಾಪಕಕ್ಕೆ ಬರುವದು; 'ದ್ವಿತೀಯಾದ್ವೈ ಭಯಂ ಭವತಿ' 'ಎರಡನೆಯವರಿಂದ ಅಂಜಿಕೆಯನ್ನು ಹುಟ್ಟುತ್ತದೆ'. ಆದರೆ ಒಬ್ಬನೆ ಇರುವಾಗ, ಎರಡನೆಯವರು ಇರದಾಗ ಭಯವು ಇರುವುದಿಲ್ಲ. ಅದೇ ಮೇರೆಗೆ, 'ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚನ'. 'ಬ್ರಹ್ಮಾನಂದವನ್ನು ಅನುಭವಿಸಿದವನು ಎಂದೂ ಅಂಜುವುದಿಲ್ಲ'. ಪ್ರಾರಬ್ಧವು ಅಳಿಯುವದು ಅದರ ಎರಡನೆಯ ಪರಿಣಾಮ. ನೀನು ನನ್ನ 'ಪ್ರಾರಬ್ಧವನ್ನೊರಿಸಿದಿ' ಪ್ರಾರಬ್ಧವು–ಹಾಗೂ ನನ್ನ ಪೂರ್ವಕರ್ಮಗಳ ಪರಿಣಾಮವು ನನ್ನನ್ನು ಯಾವ ಬಗೆಯಾಗಿಯೂ ಬಾಧಿಸಲರಿಯವು, ನನ್ನ ಮೇಲೆ ತಮ್ಮ ಪ್ರಭಾವವನ್ನು ಬೀರಲರಿಯವು–ಎಂದು ಕವಿಯು ಹೇಳುವ. ಅದರ ಮೂರನೆಯ ಪರಿಣಾಮವನ್ನು ಕವಿಯು ಈ ರೀತಿ ಅರುಹುವ: 'ನೀನು ಮುಕ್ತಿ ಎಂಬ ಅಂಗನೆಯೊಡನೆ 'ಮುಕ್ತಾಂಗಿ'ಯೊಡನೆ–ನನ್ನ ಮದುವೆ ಮಾಡಿದೆ'. ಮನೋವಿಶ್ಲೇಷಣ ಶಾಸ್ತ್ರದ ವಿದ್ಯಾರ್ಥಿಗಳು ಈ ಮದುವೆಯ ಕಲ್ಪನೆಯಲ್ಲಿ, ಸಾಕ್ಷಾತ್ಕಾರದ ತರುವಾಯವೂ, ಮನಸ್ಸಿನಲ್ಲಿ ಸುಳಿದಾಡುವ ಹಳೆಯ ವಿಚಾರಗಳನ್ನು ಕಾಣಬಹುದು. ಅರ್ಥಾತ್ ಇದನ್ನು ನಿರ್ಣಯಿಸುವುದು. ಆ ಶಾಸ್ತ್ರಜ್ಞರನ್ನೇ ಸೇರಿದ ವಿಷಯ. ನಮಗದರ ಸಂಬಂಧವಿರುವುದಿಲ್ಲ. ನಮ್ಮ ವಿಷಯವಾಗಿ ಹೇಳುವುದಾದರೆ, ಇದನ್ನು ಟೀಕಿಸುವುದಾದರೆ, ನಾವು ತುಕಾರಾಮ–ರಾಮದಾಸ ರಿಬ್ಬರನ್ನೂ ಟೀಕಿಸಬೇಕಾಗಬಹುದು. ಯಾಕಂದರೆ, 'ತುಕಾ ಮ್ಹಣೇ ಮುಕ್ತೀ ಪರಣಿಲೀ ನೋವರೀ। ಆತಾ ದಿವಸಾ ಚಾರೀ ಖೇಳೀ ಮೇಳೀ॥' 'ತುಕಾರಾಮನು ಹೇಳುವುದೇನೆಂದರೆ, ನಾನು ಮುಕ್ತಾಂಗನೆಯನ್ನು ಮದುವೆಯಾದೆ. ಇನ್ನು ನಾವು ನಾಲ್ಕು ದಿನ ಕ್ರೀಡೆಯಲ್ಲಿ ಕಳೆಯಬಹುದು'! ಎಂದು ತುಕಾರಾಮರು ಹೇಳಿರುವರು. ಹಾಗೂ 'ಹರೀ ಚಿಂತನೇ ಮುಕ್ತಿಕಾಂತಾ ವರಾವೀ'! 'ಭಗವಂತನನ್ನು ನೆನೆದು ಮುಕ್ತಿ–ಕಾಂತೆಯನ್ನು ಮದುವೆಯಾಗಬೇಕು' ಎಂದು ರಾಮದಾಸರು ಹೇಳುವರು. ಅದೇ ಬಗೆಯಾಗಿ 'ನೀನು ಮುಕ್ತಾಂಗಿ ಯೊಡನೆ ನನ್ನ ಮದುವೆ ಮಾಡಿರಿ'! ಎಂದು ಈ ಭಕ್ತನು ಹೇಳುವನು. ಆದರೆ ಅದೇನು ಅಷ್ಟು ಮಹತ್ವದ ವಿಷಯವಲ್ಲ. ಅದರ ಮಹತ್ವವು ಎರಡನೆಯ ತರಗತಿಯದು. ಮುಕ್ತಿಯು ಅಷ್ಟೊಂದು ಮಹತ್ವದ ಮಾತಲ್ಲ. ಕವಿಯು ಅದಕ್ಕೂ ಮೇಲ್ತರಗತಿಯ ಮಾತನ್ನು ಅರುಹುವ. 'ನೀನು ನನಗೆ ಕನ್ನಡಿಯಲ್ಲಿ ಕಾಣುವಂತೆ, ನನ್ನ ಪೂರ್ಣ ಪಾರಮಾರ್ಥಿಕ ಸ್ವರೂಪವನ್ನು ಕಾಣಿಸಿದಿ', 'ಮುಕುರಾನಂದವ' ಸಲ್ಲಿಸಿದಿ, ಎಂದು ಕವಿಯು ಹೇಳುವ. ಜ್ಞಾನೇಶ್ವರರೂ ತಮ್ಮ ಇಂಥ ಅನುಭವವನ್ನು ಈ ರೀತಿ ಬಣ್ಣಿಸಿರುವರು:

> ಜ್ಞಾನದೇವ ಚಕ್ರಪಾಣೀ ಐಸೆ । ದೋನೀ ದೋಳಸ ಆರಿಸೇ।
> ಪರಸ್ಪರೇ ಪಾಹತಾ ಕೈಸೇ । ಮುಕಲೇ ಭೇದಾ॥

'ಜ್ಞಾನದೇವ ದೇವರೆಂಬ ಎರಡು ಸಜೀವ ಕನ್ನಡಿಗಳು ಒಬ್ಬರಲ್ಲಿ ಇನ್ನೊಬ್ಬರನ್ನು ನೋಡತೊಡಗಿದರು; ಮತ್ತು ಪರಸ್ಪರರಲ್ಲಿಯ ಭೇದಭಾವವನ್ನು ಮರೆತರು.' ಅದೇ ಮೇರೆಗೆ ಈ ಕವಿಯು 'ನೀನು ಕನ್ನಡಿಯಲ್ಲಿ ಕಾಣುವಂತೆ ನನಗೆ ನನ್ನ ರೂಪವನ್ನು ತೋರಿಸಿದೆ' ಎಂದು ಹೇಳುವ. ಅರ್ಥಾತ್, ಇಂಥಲ್ಲಿ ಕಾಣುವವನೂ, ಕಂಡ ರೂಪವೂ–ಎರಡು ಕನ್ನಡಿಗಳು–ಇದ್ದದ್ದಾದರೆ, ಅವು ಪರಸ್ಪರರಲ್ಲಿ ಪರಸ್ಪರರ ಅನಂತ ಪ್ರತಿಬಿಂಬಗಳನ್ನು ಕಾಣಬಹುದು. 'ಮುಕುರಾನಂದ' ಎಂಬ ಪದವಿನ್ಯಾಸಕ್ಕೆ 'ಮುಖರಾನಂದ' ಎಂಬ ಬೇರೊಂದು ಪಾಠಭೇದವಿರುವುದು. ಅದರರ್ಥ 'ಅನಂತ ಅಪಾರ ಆನಂದ'. ಅದು ಮರ್ಯಾದೆಯನ್ನರಿಯದ ಅಪಾರ ಆನಂದ 'ನೀನು ನನ್ನನ್ನು ಅಮರ್ಯದ ಆನಂದದಿಂದ ತುಂಬಿರುವೆ. ಇಂಥ ಅಪರಂಪಾರ ಉಪಕಾರಗಳನ್ನು ನೀನೆನಗೆ ಸಲ್ಲಿಸಿರುವಿಯಯ್ಯ! ಗುರುವೇ!' ಎಂದು ಕವಿಯು ತನ್ನ ಕೃತಜ್ಞತೆಗಳನ್ನು ವ್ಯಕ್ತ ಪಡಿಸಿದ್ದಾನೆ.

ಕೊನೆಯ ಪದವು 'ಸಾರಿ ಚಲ್ಲಿದೆ ಮುಕುತಿ' ಎಂಬುದು. ಅದು ಸದ್ಗುರುಗಳು ದಯಪಾಲಿಸಿದ ಅನುಭಾವ–ಶಕ್ತಿಯನ್ನು ಬಣ್ಣಿಸುವದು. ಅದು ಆನಂದ ಗುಹೇಶ್ವರರ ಪದವು. ಗುಹೇಶ್ವರ ಎಂಬುದು ಅಲ್ಲಮಪ್ರಭುವಿನ ಮುದ್ರಿಕೆ. ಆದುದರಿಂದ ಆನಂದ ಗುಹೇಶ್ವರರು ಅವರ ಓರ್ವ. ಶಿಷ್ಯರಿರಬಹುದು. ಇದೊಂದು ನಮ್ಮ ಊಹೆ. ಆದರೆ ನಿಜಸ್ಥಿತಿಯನ್ನು ನಾವು ಅರಿಯೆವು. ಕವಿಯ ಅಭಿಮತದ ಮೇರೆಗೆ ಮುಕ್ತಿಯೆಂದರೆ, ಕೇವಲ ಭಗವಂತನ ಸಾರ್ವತ್ರಿಕ ದರ್ಶನ ಸಾಕ್ಷಾತ್ಕಾರ. ಮುಕ್ತನಾಗುವ ಪೂರ್ವದಲ್ಲಿ ಮನುಜನ ವಾಸನೆಗಳೆಲ್ಲ ಅಳಿಯ ಬೇಕು, ಎಂದು ವೇದಾಂತಿಗಳು ಎಷ್ಟೇ ಹೇಳುತ್ತಿದ್ದರೂ ಕವಿಯು ಅದರ ಗೊಡವೆಗೆ ಎಳ್ಳಷ್ಟು ಹೋಗಿಲ್ಲ–ಅದನ್ನು ಸ್ವಲ್ಪವೂ ಲಕ್ಷಿಸಿರುವುದಿಲ್ಲ. ನೀವು ಭಗವಂತನನ್ನು ಕಾಣಿರಿ, ಅಂದರೆ ಮುಕ್ತರಾಗುವಿರಿ ಎಂಬುದು ಅವನ ಹೇಳಿಕೆ. ಆದರೆ ಈ ಅವಸ್ಥೆಯನ್ನು ಮನುಜನು, ಯೋಗ್ಯಸದ್ಗುರುವಿನಿಂದ ಅನುಗ್ರಹ ಪಡೆದು, ಪ್ರತ್ಯಕ್ಷ ಸಾಧನೆಯನ್ನು ಮಾಡದೆ ಪಡೆಯಲರಿಯ. 'ಅದು ಸಾಧಕ ಜನರಿಗೆ ಕಾಣುವದಣ್ಣಾ!' ಎಂಬುದು ಕವಿಯು ಹೇಳಿದ ಎರಡನೆಯ ಮಾತು. ಈ ಬಗೆಯ ಅನುಗ್ರಹ ಸಾಧನಗಳಿಂದಲೇನೇ ಭಗವಂತನ ಸಾಕ್ಷಾತ್ಕಾರ ಇಲ್ಲವೆ ಮುಕ್ತಿ ದೊರೆಯಬಲ್ಲುದು.

ಕವಿಯು ಭಗವಂತನ ಸಾಕ್ಷಾತ್ಕರದ ವಿಷಯವನ್ನು ಮೂರು ದೃಷ್ಟಿಕೋನಗಳಿಂದ ವಿವರಿಸಿರುವ: ಕಾಲ, ಸ್ಥಲ ಹಾಗೂ ಗತಿ–ಇವೇ ಆ ದೃಷ್ಟಿಕೋನಗಳು. ನೀವು ಕಾಲದ ದೃಷ್ಟಿಯಿಂದ ಈ ವಿಷಯವನ್ನು ಕಂಡರೆ, ಭಗವಂತನ ಈ ರೂಪವು ಅನಾದಿಕಾಲದಿಂದ ಅನಂತಕಾಲದ ವರೆಗೆ ಶಾಶ್ವತವಾಗಿ ನೆಲೆಸಿರುವದೆಂಬುದು

ನಿಮಗೆ ಗೊತ್ತಾಗುವದು. ಅದು 'ವೇದದ ಮೊದಲಿನ ಮೂಲ' ಅರ್ಥಾತ್ ಇದನ್ನು ನಾವು ಗೃಹೀತ ಮಾತು ಎಂದು ಭಾವಿಸಬಹುದು. ಆದರೆ, ಸ್ಥಲದ ವಿಷಯವಾಗಿ ಕವಿಯು ಕೆಲ ಮಹತ್ವದ ವಿಧಾನಗಳನ್ನು ಮಾಡಿರುವ. ಭಗವಂತನ ರೂಪವು ಎಲ್ಲೆಡೆಯಲ್ಲಿ, ಎಲ್ಲ ಹಾದಿಗಳಲ್ಲಿ ಪಸರಿಸಿಹುದು. 'ಸಾರಿ ಚಲ್ಲಿದೆ, ಹಾದಿ ಹಾದಿಗೆ ಬಿದ್ದಿಹುದು' ಎಂಬ ಕವಿಯು ಉಸುರುವ. 'ಬಿದ್ದಿಹುದು' ಇದರ ಸ್ಥಲದಲ್ಲಿ 'ಬಿತ್ತಿಹುದು' ಎಂಬ ಪಾಠಭೇದವೊಂದು ಸೂಚಿಸಲಾಗಿದೆ. ಅವೆರಡರಲ್ಲಿ ಸರಿಯಾದ ಪಾಠವು ಯಾವುದು ಎಂಬುದನ್ನು ಕನ್ನಡ ಪಂಡಿತರೇ ನಿರ್ಣಯಿಸಬೇಕು. 'ಬಿತ್ತಿಹುದು' ಎಂಬ ಪಾಠವು ಮುಂದದು ಮೊಳೆಯಬಹುದೆಂಬುದನ್ನು ಸೂಚಿಸುವುದು. ಆದುದರಿಂದ ಇದು 'ಬಿದ್ದಿಹುದು' ಈ ಪಾಠಕ್ಕಿಂತ ಒಳ್ಳೆಯ ಅರ್ಥವನ್ನು ಸೂಚಿಸುವುದು. ಯಾಕಂದರೆ ಭಗವಂತನ ರೂಪವು ದಾರಿಯಲ್ಲೆಲ್ಲ ಕೇವಲ ಪಸರಿಸಲಾದರೆ, ಅದರಿಂದ ಬಹಳ ಪ್ರಯೋಜನವಾಗಲರಿಯದು. ಕಾರ್ಲಾಯಿಲ್‌ರವರು ತಮ್ಮ 'Sartor Resartus' ಎಂಬ ಗ್ರಂಥದಲ್ಲಿ ಹೇಳಿದ ಮೇರೆಗೆ, ಈ ವಿಶ್ವದ ಸಂದಿಗೊಂದಿಗಳೆಲ್ಲ ಭಗವಂತನಿಂದ ತುಂಬಿರುವವು. ಅದೇ ಮೇರೆಗೆ ಭಗವಂತನ ಈ ರೂಪವು ಜಗತ್ತಿನ ಮೂಲೆ ಮೂಲೆಯಲ್ಲಿ ತುಂಬಿರುವದು. ಅದು 'ಸಂದಿಸಂದಿಗೆ ಜಡಿದಿಹುದು' ಎಂದು ಕವಿಯು ಹೇಳುವ. ಇನ್ನು ಗತಿಯ ದೃಷ್ಟಿಯಿಂದ ಮೊದಲನೆಯದಾಗಿ ಅದು ಮುಂದೆಯೂ ಇರುವದು, ಹಿಂದೆಯೂ ಇರುವುದು. 'ಹಿಂದೆ ನೋಡಲು ಬಂದಿಹುದು, ಮುಂದೆ ನೋಡಲು ನಿಂದಿಹುದು' ಎಂದು ಕವಿಯು ಪ್ರತ್ಯಕ್ಷ ಜ್ಞಾನೇಶ್ವರರ ರೀತಿಯಿಂದಲೇ ಬಣ್ಣಿಸಿರುವ. ಜ್ಞಾನೇಶ್ವರರ ಹೇಳುವುದೇನೆಂದರೆ:

ಪಾಠೀತಿಯೇ ಸಾದ್ಯಂತೇ । ನ್ಯಾಹಾಳಿಲೀ ಶ್ರೀಮೂರ್ತೀತೇ।
ಆಣಿ ಪುಢತೀ ಮ್ಹಣೇ ನಮಸ್ತೇ । ನಮಸ್ತೇ ಪ್ರಭೋ॥

"ಅವನು (ಅರ್ಜುನನು) ಭಗವಂತನ ಪೂರ್ಣರೂಪವನ್ನು ತನ್ನ ಹಿಂದೆಯೂ ನೋಡಿದ, ಮುಂದೆಯೂ ನೋಡಿದ, ಮತ್ತು 'ಪ್ರಭುವೇ! ನಿನಗೆ ನನ್ನ ವಂದನೆಗಳು, ವಂದನೆಗಳು!' ಎಂದು ನುಡಿದ." ಅರ್ಜುನನು ದೇವರನ್ನು ತನ್ನ ಮುಂದೆ ಕಾಣುವ ಮತ್ತು ವಂದಿಸುವ. ಹಿಂದೆ ಕಾಣುವ ಮತ್ತು ವಂದಿಸುವ. ಈ ರೀತಿ, ನಮ್ಮ ಕವಿಯು ಹಾಗೂ ಜ್ಞಾನೇಶ್ವರರ ಹೇಳಿಕೆಯ ಮೇರೆಗೆ, ದೇವರು ಮುಂದೆಯೂ ಇರುವ, ಹಿಂದೆಯೂ ಇರುವ. ಎರಡನೆಯದಾಗಿ, ಅದು 'ಸುತ್ತ ಮುತ್ತಲು ಸುಳಿಯುವದು'. 'ದೇವರು ನಮ್ಮ ಸುತ್ತಲೂ ಅಲೆಯುತ್ತಿರುವ'. ತುಕಾರಾಮರು 'ಹರಿ ಹಾ ಭೋವೇ ಭೋವತಾಲಾ', 'ದೇವರು ನನ್ನ ಸುತ್ತಲೂ ತಿರುಗುತ್ತಿರುವ' ಎಂಬುದಾಗಿ ಇದನ್ನೆಯೆ ಹೇಳಿರುವ. ಈ ಸಂದರ್ಭದಲ್ಲಿ ಕಠೋಪನಿಷತ್ತಿನಲ್ಲಿಯ ಮುಂದಿನ ಸುಪ್ರಸಿದ್ಧ ಮಾತುಗಳು ನಮ್ಮ ಜ್ಞಾಪಕಕ್ಕೆ ಬರುತ್ತವೆ.

'ಅಸೀನೋ ದೂರಂ ವ್ರಜತಿ!' ಆತ್ಮನು ಇಲ್ಲವೆ ದೇವರು ಕುಳಿತಾಗಲೆ ದೂರ ಹೋಗುವ, ಎಲ್ಲೆಡೆ ಸುಳಿಯುವ! ಆನಂದಗುಹೇಶ್ವರರು ಕೊನೆಗೆ ಅರಹುವ ದೇನೆಂದರೆ: ದೇವರು ಒಂದರ ಹಿಂದೆ ಒಂದರಂತೆ ಅನಂತ ರೂಪಗಳನ್ನು ಧರಿಸುವನು. ಅವನು 'ಮತ್ತೆ ಮತ್ತೆ ಆಗಿ ಕಾಂಬುವ'ನಂತೆ. ಭಗವಂತನ ರೂಪಗಳಾವವು-ರೂಪಗಳೆಷ್ಟು ಎಂಬುದನ್ನು ನಾವು ಹೇಳಲರಿಯೆವು. ಅವು ಅನಂತವಿರುವವು. ಅವುಗಳಲ್ಲಿ ಕೆಲವನ್ನು ಭಗವಂತನು ನಮಗೆ ಕಾಣಿಸಿದರೆ, ಅಷ್ಟೇ ನಮಗೆ ಸಾಕು. ಭಗವಂತನು ತಾನು ಕಾಣಿಸಿಕೊಳ್ಳಲು ಧರಿಸುವ ರೂಪಗಳ ಸಂಖ್ಯೆಗೆ ನೀವು ಮರ್ಯಾದೆಯನ್ನು ಹಾಕಲರಿಯರಿ. "ಈ ಬಗೆಯಾಗಿ ನನ್ನನ್ನು ಅನುಗ್ರಹಿಸಿ, ನನ್ನ ಸದ್ಗುರು ನನ್ನನ್ನು ಸರಿಯಾದ ದಾರಿಯಲ್ಲಿ ಇರಿಸಿದ. ನನ್ನಿಂದ ಧ್ಯಾನವನ್ನು ಮಾಡಿಸಿದ. ಈ ರೀತಿ ನನ್ನ ಪಾರಮಾರ್ಥಿಕ ಜೀವನವು ಪ್ರಾರಂಭವಾಯಿತು ಮತ್ತು ನಾನು ಭಗವಂತನ ದರ್ಶನವನ್ನು ಪಡೆಯಬಲ್ಲ ವನಾದೆ". ಈ ಭಗವಂತನ ಸಾಕ್ಷಾತ್ಕಾರವೇ ಮುಕ್ತಿ ಎಂಬುದು ಆನಂದ ಗುಹೇಶ್ವರರ ಹೇಳಿಕೆ.

■■

ಪ್ರಕರಣ ಏಳು

ಗುರುಶಿಷ್ಯರ ಸಂಬಂಧ (ಭಾಗ ೧)

ಈ ಪ್ರಕರಣದಲ್ಲಿ ಕನ್ನಡ ಸಂತರು ಬಣ್ಣಿಸಿದ ಗುರುಶಿಷ್ಯರ ಸಂಬಂಧವನ್ನು ವಿವರಿಸಲಾಗುವುದು. ಇದೊಂದು ತುಂಬ ಮಹತ್ವದ ಸಮಸ್ಯೆ. ನಾನೀಗ ಗುರುಸಿದ್ಧರೆಂಬ ಸಂತರ ಪದದಿಂದಲೇ ಪ್ರಾರಂಭಿಸುವೆ. ಗುರುಸಿದ್ಧ ಎಂಬುದು ಸರ್ಪಭೂಷಣ ಸಂತಕವಿಗಳ ಮುದ್ರಿಕೆ. ವಿಶೇಷತಃ ಕನ್ನಡ ಅನುಭಾವಿಗಳ ವಿಷಯದಲ್ಲಿ ಅವರ ಹೆಸರುಗಳಿಗಿಂತ ಅವರ ಮುದ್ರಿಕೆಗಳೇ ಹೆಚ್ಚು ಪ್ರಧಾನವೆಂದು ಭಾವಿಸಲಾಗಿವೆ ಎಂದು ಹೇಳಬಹುದು. ಮೂವತ್ತೆರಡು ವರುಷಗಳ ಪೂರ್ವದಲ್ಲಿ ನನಗೆ ಈ ಹಿರಿಯ ಕವಿಗಳ ಪರಿಚಯವಾಯಿತು; ಮತ್ತು ಅಂದಿನಿಂದ ನಾನು ಅವರನ್ನು ಕನ್ನಡ ಸಂತರಲ್ಲಿ ಅತ್ಯುತ್ತಮರೆಂದು ಸದೈವ ಗೌರವಿಸುತ್ತ ಬಂದಿರುವೆ. ಅವರು 'ಗುರುವೇ ನೀ ಮಾಡಿದುಪಕೃತಿಯನು ನಾನು ಮರೆಯೆನು' ಎಂಬ ಪದವನ್ನು ರಚಿಸಿರುವರು. ಎಷ್ಟೋ ಸಲ ಶಿಷ್ಯನು ತನ್ನ ಗುರುವಿನಲ್ಲಿ ಪೂರ್ತಿಯಾಗಿ ಬೆರೆತು ಬಿಡುವನು. ಸಂತಕವಿಗಳು ತಮ್ಮ ಗುರುವಿನ ವಿಷಯವಾಗಿ ಬರೆಯುವಾಗ ಆತನನ್ನು ದೇವರೆಂದೇ ಬಗೆಯುವುದು ವಾಡಿಕೆ.

ಇಲ್ಲಿ ಶಿಷ್ಯನು ಹೇಳುವದೇನೆಂದರೆ: ಮುಂದೆ ಕಾಣಿಸಿದ ಮೂರು ಕಾರಣಗಳಿಗಾಗಿ, ಗುರುವಿನ ಅನಂತ ಉಪಕೃತಿಗಳಿಗೆ ನಾವು ಮರ್ಯಾದೆಯನ್ನು ಹಾಕಲರಿಯೆವು. ಶಿಷ್ಯರಿಗೆ ಭಗವಂತನ ದರ್ಶನ, ಸ್ಪರ್ಶನ ಹಾಗೂ ತಾದಾತ್ಮ್ಯ ರೂಪಿಯಾದ ವರಗಳನ್ನು ದಯಪಾಲಿಸುವ ಸದ್ಗುರುವಿನ ಹಿರಿಯ ಅನುಭಾವ ವಿಷಯಕ ಕಾರ್ಯಗಳೆಲ್ಲ ಪ್ರಸ್ತುತ ಕವನದಲ್ಲಿ ಸೂಚಿತವಾಗಿವೆ. ದರ್ಶನವೆಂದರೇನು? ದರ್ಶನವು ಭಗವಂತನ ಸಾಕ್ಷಾತ್ಕಾರವನ್ನು ಒಳಗೊಂಡಿರುವದು. ಸ್ಪರ್ಶವೆಂದರೇನು? ಸ್ಪರ್ಶವೆಂದರೆ ಭಗವಂತನ ಸಾಕ್ಷಾತ್ ಸಂಪರ್ಕ. ತಾದಾತ್ಮ್ಯವೆಂದರೇನು? ತಾದಾತ್ಮ್ಯವೆಂದರೆ ಭಗವಂತನಲ್ಲಿ ಬೆರೆಯುವುದು. 'ಪಂಚಾಗ್ನಿಗಳ ಮಧ್ಯದಲ್ಲಿ ಕುಳಿತು, ಪ್ರಾಣವಾಯುಗಳನ್ನು ಬಂಧಿಸಿ ಮತ್ತು ಶರೀರಗಳಿಗೆ ಬಗೆಬಗೆಯ ಕಷ್ಟಗಳನ್ನು ಕೊಟ್ಟು, ಯೋಗಿಗಳು ವ್ಯರ್ಥವಾಗಿ ದಣಿದಿರುವರು. ಆದರೆ ಅವರು ಪರತತ್ವವನ್ನು ಕಾಣಲು ಸಮರ್ಥರಾಗಲಿಲ್ಲ. ಅಯ್ಯ ಗುರುದೇವನೆ! ಅಂಥ ಪಾರಮಾರ್ಥಿಕ ಸತ್ಯದ ದರ್ಶನವನ್ನು ನೀನೆನಗೆ ಒದಗಿಸಿಕೊಟ್ಟೆ'. ಇದು

ಗುರುಸಿದ್ಧರು ನಮಗರುಹವ ಮೊದಲನೆಯ ಮಾತು. ಎರಡನೆಯದಾಗಿ, 'ನೀನೆನಗೆ ಭಗವಂತನ ಸಾಕ್ಷಾತ್ ಸಂಪರ್ಕವನ್ನು ಒದಗಿಸಿಕೊಟ್ಟೆ, ನೀನು ಆತನನ್ನು ನನ್ನ ಅಂಗೈಯಲ್ಲಿಯೆ ತಂದಿರಿಸದಂತೆ ಮಾಡಿದೆ. ಭಗವಂತನು ನನ್ನ ಸುತ್ತಲೂ ತಿರುಗುವನಷ್ಟೇ ಅಲ್ಲದೆ, ನನ್ನ ಅಂಗೈಯ ಮೇಲೂ ನೆಲೆಸಿರುವನು' ಎಂದು ಕವಿಯು ಹೇಳುವ. ನಾನು ಬೇರೆಡೆ ಪತಂಜಲಿಯನ್ನು ಉಲ್ಲೇಖಿಸಿರುವೆ. ಶೇಷನ ರೂಪವು ಅವರ ತಂದೆಯ ಅಂಜಲಿಯಲ್ಲಿ ಬಿದ್ದಿತು. (ಅಂಜಲೀ ಪತನ್). ಆದುದರಿಂದ ಅವರಿಗೆ ಪತಂಜಲಿ ಎಂಬ ಹೆಸರು ಎಂಬುದನ್ನು ನಾನು ಅರುಹಿರುವೆ. ಅದೇ ಮೇರೆಗೆ ಕವಿಯು ಹೇಳುವುದೇನೆಂದರೆ, 'ವಾದಿಗಳು, ಹಿರಿಯ ದಾರ್ಶನಿಕರು (ವಾಸ್ತವವಾದಿಗಳು, ಆದರ್ಶವಾದಿಗಳು, ಏಕೇಶ್ವರವಾದಿಗಳು, ಈಶ್ವರವಾದಿಗಳು, ವಿಶ್ವೇಶ್ವರವಾದಿಗಳು ಇತ್ಯಾದಿ) ವ್ಯರ್ಥವಾಗಿ ಹೊಡೆದಾಡಿದರು. ಅಯ್ಯ ಸದ್ಗುರುವೆ! ನಿನ್ನ ನಿಜರೂಪವನ್ನು ಕೇವಲ ವಾದನಿರತ ದಾರ್ಶನಿಕರು ಪಡೆಯಲರಿಯರು. ಅದನ್ನು ಬೇರೆ ಬಗೆಯಾಗಿ ಪಡೆಯಲು ಬೇಕು, ಎಂದು ನೀನೆನಗೆ ಹೇಳಿದೆ; ಮತ್ತು ನೀನು ನನಗೆ ಆ ರೂಪವನ್ನು ಕಾಣಿಸಿದೆಯಲ್ಲದೆ, ನನ್ನನ್ನು ಅದರ ನಿಕಟ ಸಂಪರ್ಕದಲ್ಲಿಯೂ ನಿಲ್ಲಿಸಿದೆ. ಈ ಬಗೆಯಾಗಿ ನೀನು ನನ್ನ ಮೇಲೆ ಅನಂತ ಉಪಕಾರಗಳನ್ನು ಮಾಡಿರುವೆ". ಗುರುಸಿದ್ಧರು ತಮ್ಮ ಸದ್ಗುರುವಿಗೆ ಅರುಹುವ ಮೂರನೆಯ ಮಾತು ಅದಾವುದೆಂದರೆ: 'ನೀನು ನನ್ನನ್ನು ಪರತತ್ವದಲ್ಲಿ ಬೆರೆಯಿಸುವ ಉಪಕಾರವನ್ನು ಮಾಡಿರುವೆ. ಕೇವಲ ನಮ್ಮಿರ್ವರಲ್ಲಿ ಏಕತೆಯನ್ನು ನಿರ್ಮಿಸಿಯಷ್ಟೇ ಅಲ್ಲ, ನಾವಿಬ್ಬರೂ ಹಾಗೂ ದೇವರು ಇವರಲ್ಲಿಯೂ ಏಕತೆಯನ್ನು ನಿರ್ಮಿಸಿ ನೀನೆನಗೆ ಪರಮಾನಂದವನ್ನು ದಯಪಾಲಿಸಿದೆ.' "ಈ ರೀತಿ, ಮೊದಲು ನೀನು ನನಗೆ ದೇವರನ್ನು ಕಾಣಿಸಿಕೊಟ್ಟೆ, ತರುವಾಯ, ನನಗೆ ಆತನ ಸಾಕ್ಷಾತ್ ಸಂಪರ್ಕವ ನೀಡಿದೆ, ಮತ್ತು ಕೊನೆಗೆ ನನ್ನನ್ನು ಆತನಲ್ಲಿ ಬೆರೆಯಿಸಿದೆ ಹಾಗೂ ನನಗೆ ಪರಮಾನಂದವನ್ನು ದಯಪಾಲಿಸಿದೆ. ಅದಕ್ಕಾಗಿ, ನಿನ್ನ ಬಗೆಗೆ ನನಗನಿಸುವ ಕೃತಜ್ಞತೆಯು ಅಮರ್ಯಾದವಾದುದು, ಅನಂತವಾದುದು! ಅದನ್ನು ಎಂದಿಗೂ ಮರೆಯುವುದು ಸಾಧ್ಯವಿಲ್ಲ" ಎಂದು ಗುರುಸಿದ್ಧರು ಹೇಳುವರು.

ಆ ಮೇಲೆ, ಆದರ್ಶ ಸದ್ಗುರುಗಳನ್ನು ಕುರಿತು ಬರೆಯಲಾದ ಇನ್ನೊಂದು ಪದವಿರುವುದು. ಅದನ್ನು ಇತ್ತೀಚೆಗೆ ಓರ್ವ ಬೆಳೆಯಲಿರುವ ಸಾಧಕ-ಕವಿಯು ರಚಿಸಿರುವ. ಅದನ್ನು ನಾನು ತಮ್ಮ ನಿದರ್ಶನಕ್ಕೆ ತರಬಯಸುವೆ. 'ದೇವ ಹಿರಿಗುರುರಾಯ, ತಿಳಿಯದೂ ನಿನ ಮಾಯೆ' ಎಂಬ ಆ ಪದವು ಸುಮಾರಾಗಿ ಸರ್ಪಭೂಷಣರ ರೀತಿಯಲ್ಲಿಯೇ ರಚಿಸಲಾಗಿದೆ. ಅದು ನಮ್ಮ ಸಂಪ್ರದಾಯದ ಆದಿಪುರುಷರಾದ ನಿಂಬರಗಿ ಮಹಾರಾಜರವರ ಪ್ರಾರ್ಥನೆಯಿರುವದು. ಕವಿಯು

ಅದರಲ್ಲಿ ಬೇಡಿಕೊಳ್ಳುವ ಮೊದಲನೆಯ ಮಾತು ಏನೆಂದರೆ: 'ನನ್ನನ್ನು ಜಾಗತಿಕ ಹಿರಿಮೆ ವೈಭವಗಳು ಸೆಳೆಯದಿರಲಿ! ಅದರ ಬದಲು, ಜಗತ್ತೆಲ್ಲ ನಿನ್ನ ಹಿರಿಮೆಯಿಂದ ತುಂಬಿತುಳುಕಲಿ.' ಭಗವಂತನ ಹಿರಿಮೆಯೇ ನಿಜವಾದ ಹಿರಿಮೆ, ಜಾಗತಿಕ ಹಿರಿಮೆಯಲ್ಲ. 'ನಿನ್ನ ಧ್ಯಾನ–ನಿನ್ನ ಸೇವೆ ಇವೆರಡೇ ನನ್ನ ಕೆಲಸಗಳಾಗಲಿ!' ಎಂಬುದು ಕವಿಯು ಬೇಡಲಿರುವ ಎರಡನೆಯ ಮಾತು. 'ನಾನು ಸೇವೆಯನ್ನೇ ಮಾಡಬೇಕಾದರೆ ಅದು ನಿನ್ನ ಸೇವೆಯಿರಲಿ, ನಿನ್ನ ಧ್ಯೆಯದ ಸೇವೆಯಿರಲಿ.' ಕವಿಯ ಮೂರನೆಯ ಬೇಡಿಕೆಯು ಈ ಬಗೆಯದಿರುವುದು: 'ನಿನ್ನ ಒಲವು ಕರುಣಗಳೇ ನನ್ನ ಅನ್ನ, ನೀರು ಹಾಗೂ ಉಸಿರಾಗಿ ಪರಿಣಮಿಸಲಿ! ನಾನು ನಿನ್ನ ಒಲವು–ಕರುಣಗಳ ಆಶ್ರಯದಿಂದಲೆ ಬಾಳ ಬಯಸುವೆ! ಅವು ನನ್ನ ಜೀವನದ ಮೂಲದ್ರವ್ಯ–ಹಾಗೂ ಘಟಕಾಂಶಗಳಾಗಲಿ!' ಕವಿಯ ನಾಲ್ಕನೆಯ ಬೇಡಿಕೆಯು ತುಂಬ ಮಹತ್ವದ್ದಿರುವುದು. 'ನನ್ನ ವಿಚಾರಗಳು, ಕೃತಿಗಳು ಹಾಗೂ ಮಾತುಗಳು ನಿನ್ನ ಬೆಳಕಿನ ನನ್ನ ಬಾನಿನಲ್ಲಿ ಬೆಳಗಲಿ! ನಿನ್ನ ಬೆಳಕು ಎಲ್ಲೆಡೆ ಹರಡಲಿ! ಮತ್ತು ಆ ಬೆಳಕಿನಲ್ಲಿ ನನ್ನ ಮತಿ–ಮಾತು–ಕೃತಿಗಳು ಹೊಳೆಯಲಿ! ಅಂದರೆ ಅವು ಸರಿಯಾದ ಆರೋಗ್ಯ–ಬಲಗಳನ್ನು ಪಡೆಯಬಹುದು.' ಕೊನೆಗೆ ಕವಿಯು ಸದ್ಗುರುವಿನ, ಸ್ವಾಭಾವಿಕ ಇಲ್ಲವೆ ಅನುದ್ದೇಶಪೂರ್ವಕ ಆಡಲಾದ ಮಾತು, ಮತ್ತು ವಿಚಾರಪೂರ್ವಕವಾದ ಇಲ್ಲವೇ ಉದ್ದೇಶಪೂರ್ವಕವಾದ ನುಡಿ–ಇವುಗಳಲ್ಲಿ ಭೇದವನ್ನು ಕಲ್ಪಿಸಿರುವ. "ನಿನ್ನ ಸಹಜಮಾತು ಮಿಂಚಿನ ವೈಭವವನ್ನು ತಳೆದು ಮಿಂಚಿನಂತೆ ನಮಗೆ ಉತ್ಸಾಹ–ಬೆಳಕು–ಬಲಗಳನ್ನು ನೀಡುವುದು; ಮತ್ತು ನಿನ್ನ ವಿಚಾರಪೂರ್ವಕವಾದ, ಉದ್ದೇಶಪೂರ್ವಕವಾದ ಹಾಗೂ ತರ್ಕಯುಕ್ತವಾದ ನುಡಿಗಳು ಸಿಡಿಲ ನಾರ್ಭಟದಿಂದ, ಎಲ್ಲೆಲ್ಲಿಯೂ–ವಿಶೇಷವಾಗಿ ನನ್ನ ಎದೆಯಲ್ಲಿ ಗುಡುಗಿ, ಅಲ್ಲಿಂದ ಎಲ್ಲ ಭ್ರಮೆಗಳನ್ನು ಹೊರದೊಡುವವು." ಈ ರೀತಿ "ನನ್ನ ಜೀವನವೆಲ್ಲ ನಿನ್ನ ಸೇವೆಗಾಗಿ ಮೀಸಲಾಗಿರಲಿ! ಗುರುರಾಯ!" ಎಂದು ಕವಿಯು ಪ್ರಾರ್ಥಿಸುವ. ಈ ಪದದಲ್ಲಿ ಬಣ್ಣಿಸಲಾದ ಗುರು–ಶಷ್ಯರ ಸಂಬಂಧವು ಈ ಬಗೆಯದಿರುವುದು.

ಇನ್ನು ನಾನು ಸಚ್ಛಿಷ್ಯನನ್ನು ಬಣ್ಣಿಸುವ ಮೂರು ಪದಗಳನ್ನು ವಿವರಿಸುವೆ. ಅದೇ ಮೇರೆಗೆ ಈ ಮೂರು ಪದಗಳಲ್ಲಿಯ ಪರಸ್ಪರ ಸಂಬಂಧವನ್ನು ಸಹ ವಿಶದಗೊಳಿಸುವೆ. ಮೊದಲು ಹಿರಿಯ ದಾರ್ಶನಿಕ ಸಂತರೆಂದು ಹೆಸರುವಾಸಿಯಾದ ಜಗನ್ನಾಥದಾಸರ ಪದದಿಂದಲೆ ಪ್ರಾರಂಭಿಸುವೆ. ನನ್ನ ಅಭಿಮತದ ಮೇರೆಗೆ ಹಿರಿಯ ಕನ್ನಡ ಅನುಭಾವಿಗಳಲ್ಲಿ, ಒಂದೆಡೆ ನಿಜಗುಣ ಶಿವಯೋಗಿಗಳು ಮತ್ತು ಇನ್ನೊಂದೆಡೆ ಜಗನ್ನಾಥದಾಸರು–ಈ ಮಹಾಪುರಷರಿಬ್ಬರೂ ದಾರ್ಶನಿಕರೆಂದೂ ಹೆಸರಾಗಿರುವರು. ಜಗನ್ನಾಥದಾಸರು ತಮ್ಮ ವೇದಾಂತಪರ ಬರಹಗಳಿಗಾಗಿ ಪ್ರಸಿದ್ಧರಾಗಿರುವರು. ಆದರೆ ಅವರ ಜೀವನಕ್ಕೆ ಸಂಬಂಧಿಸಿದ ಒಂದು ಕಥೆಯು ಬಲು

ಸ್ವಾರಸ್ಯವುಳ್ಳದ್ದಿರುವುದು. ಜಗನ್ನಾಥದಾಸರು ಮಹಾಪಂಡಿತರಿದ್ದರಲ್ಲದೆ, ಒಳ್ಳೆ ಸಿರಿವಂತರೂ ಇದ್ದರು. ಒಮ್ಮೆ ಸಚ್ಛೀಲರೂ, ಸತ್ಪುರುಷರೂ ಆದ ವಿಜಯದಾಸರು ಅವರ ಮನೆಗೆ ಹೋಗಿ ಅವರನ್ನು ಪ್ರಸಾದಕ್ಕಾಗಿ ತಮ್ಮಲ್ಲಿಗೆ ಬರಲು ಆಮಂತ್ರಿಸಿದರು. ತಮ್ಮ ಪಾಂಡಿತ್ಯದ ಅಭಿಮಾನದ ಮೂಲಕ, ಜಗನ್ನಾಥದಾಸರಿಗೆ ವಿಜಯದಾಸರ ಊತಣವನ್ನು ಸ್ವೀಕರಿಸುವದೆಂದರೆ ಅದೊಂದು ತಮ್ಮ ಗೌರವಕ್ಕೆ ಕುಂದು ಎಂದೆನಿಸಿ, ಅದನ್ನವರು ಸ್ವೀಕರಿಸಬಾರದೆಂದು ಎಂದು ಬಗೆದರು. ಆದುದರಿಂದ ಅವರು ಅದರಿಂದ ತಪ್ಪಿಸಿಕೊಳ್ಳಲು ಈ ರೀತಿ ನುಡಿದರು: "ಸ್ವಾಮಿ! ಭೋಜನಕ್ಕೆ ಅತ್ಯಲ್ಪ ತಡವಾದರೂ ನನಗೆ ಹೊಟ್ಟೆನೋವು ಏಳುತ್ತದೆ. ಆದುದರಿಂದ ನಾನು ತಮ್ಮೆಡೆ ಬರಲರಿಯೆ. ದಯವಿಟ್ಟು ಕ್ಷಮಿಸಬೇಕು." 'ತಥಾಸ್ತು!' ಎಂದರು ವಿಜಯದಾಸರು. ಆ ಮೇರೆಗೆ ಜಗನ್ನಾಥದಾಸರು ಪ್ರಸಾದಕ್ಕೆ ಹೋಗಲಿಲ್ಲ. ಆಯಿತು, ಅಂದಿನಿಂದ ಮುಂದೆ ಅವರ ಹೊಟ್ಟೆಯಲ್ಲಿ ತೀವ್ರವಾದ ನೋವು ಪ್ರಾರಂಭವಾಯಿತು. ಅವರು ಆ ಹೊಟ್ಟೆನೋವಿನ ವ್ಯಥೆಯನ್ನು ತೊಂದರೆಯನ್ನು ನಾಲ್ವತ್ತು ವರುಷ ಅನುಭವಿಸಿದವರು. ಅವರು ಬಗೆಬಗೆಯ ಉಪಾಯಗಳನ್ನು ಮಾಡಿದರು. ಆದರೆ ಅವುಗಳಿಂದ ಏನೂ ಪ್ರಯೋಜನವಾಗಲಿಲ್ಲ. ಅವರು ತಿರುಪತಿಗೆ ತೆರಳಿದರು, ಮಂತ್ರಾಲಯಕ್ಕೆ ಹೋದರು. ಮಂತ್ರಾಲಯದಲ್ಲಿ ಅವರಿಗೊಂದು ಕನಸು ಬಿದ್ದಿತು. ಅದರಲ್ಲಿ ಅವರಿಗೆ 'ನೀವು ವಿಜಯದಾಸರನ್ನು ಅಪಮಾನಗೊಳಿಸಿರುವಿರಿ! ಅವರೆಡೆ ಹೋಗಿ ಅವರ ಕ್ಷಮಾಪಣೆಯನ್ನು ಬೇಡಿರಿ!' ಎಂಬ ಆದೇಶವಾಯಿತು. ಆ ಮೇರೆಗೆ ಅವರು ವಿಜಯದಾಸರಲ್ಲಿಗೆ ಹೋಗಿ ಅವರ ಕ್ಷಮೆಯನ್ನು ಕೋರಿದರು, ಹಾಗೂ ತಮ್ಮನ್ನು ಆರೋಗ್ಯವಂತರನ್ನಾಗಿ ಮಾಡಲು ಪ್ರಾರ್ಥಿಸಿದರು. 'ನಿಮ್ಮ ಗುರುಗಳು ಗೋಪಾಲದಾಸರಿರುವರು. ಆದುದರಿಂದ ನೀವು ಅವರೆಡೆ ಹೋಗಬೇಕು' ಎಂದು ವಿಜಯದಾಸರು ಅವರಿಗೆ ಹೇಳಿದರು. ಗೋಪಾಲದಾಸರು ತೀರ ಚಿಕ್ಕವರಿದ್ದರು. (ಸಣ್ಣವನು ಇವನು) ಅವರು ತಮ್ಮ ಮುಂದಿನ ಆಯುಷ್ಯದಲ್ಲಿಯ ನಲ್ವತ್ತು ವರುಷಗಳನ್ನು ಜಗನ್ನಾಥದಾಸರಿಗೆ ಕೊಟ್ಟರು. ಇದೇ ನಾನು ಹೇಳಬಯಸಿದ ಕಥೆ. ಗೋಪಾಲದಾಸರು ಮುಂದೆ ಜಗನ್ನಾಥದಾಸರನ್ನು ಅನುಗ್ರಹಿಸಿದರು. ಪ್ರಸ್ತುತ ಪದವು ಗೋಪಾಲದಾಸರನ್ನು ಸ್ಮರಿಸಲು ಇಲ್ಲವೆ ಪ್ರಾರ್ಥಿಸಲು ಬರೆಯಲಾದುದು. ಇದರರ್ಥ ಜಗನ್ನಾಥದಾಸರು ವಿಜಯದಾಸರ ಹಿರಿಮೆಯನ್ನು ಅರಿತಿರಲಿಲ್ಲ ವೆಂದಲ್ಲ–ಅದನ್ನು ಅವರು ಚೆನ್ನಾಗಿ ಅರಿತಿದ್ದರು.

ಈ ಪದವಲ್ಲಿ ಜಗನ್ನಾಥದಾಸರು ಮುಂದಿನ ಮೂರು ಮಾತುಗಳನ್ನು ಹೇಳಿರುವರು: ಮೊದಲನೆಯದಾಗಿ 'ನೀನು ನನ್ನ ಪಾತಕಗಳನ್ನು, ಕುಂದುಗಳನ್ನು ಹಾಗೂ ದೋಷಗಳನ್ನು ದೂರಗೈಸಿದೆ.' ಎರಡನೆಯದಾಗಿ, 'ನೀನು ನನ್ನ ಪಾತಕಗಳನ್ನು

ಕ್ರಮಿಸಿದೆ ಮತ್ತು ತನ್ನ ಅಪಮೃತ್ಯುವನ್ನು ತಡೆದೆ. ನನ್ನ ಅಕಾಲ ಮರಣವನ್ನು ಎಷ್ಟೋ ವರುಷ ಮುಂದೆ ದೂಡಿದೆ.' ಮೂರನೆಯದಾಗಿ, "ನನ್ನ ಸದ್ಗುರುಗಳ (ಗೋಪಾಲದಾಸರ ಇಲ್ಲವೆ ವಿಜಯದಾಸರ) ಕರುಣದಿಂದ ನಾನು ಬುಧರಲ್ಲಿ ಪ್ರಥಮ ಸ್ಥಾನವನ್ನು ಪಡೆದೆನಷ್ಟೇ ಅಲ್ಲದೆ ತಾಪಸರಲ್ಲಿಯೂ ಅಗ್ರಸ್ಥಾನವನ್ನು ಪಡೆದೆ. ನೀನೆನಗೆ ವಿಪುಲಮತಿಯನ್ನು ದಯಪಾಲಿಸಿದೆ ಮತ್ತು ತಪಸ್ವಿಗಳಿಂದ ನಿಪುಣಮತಿ ಎಂದೆನಿಸಿದೆ. ನೀನೆನಗೆ ಪಾರಮಾರ್ಥಿಕ ಬೆಳಕನ್ನು ನೀಡಿ ನನ್ನನ್ನು ಸಂತರ ಮಾಲಿಕೆಯಲ್ಲಿ ಕುಳ್ಳಿರಿಸಿದೆ. ಈ ರೀತಿ ನೀನು ನನಗೆ ಸಲ್ಲಿಸಿದ ಉಪಕಾರಕ್ಕೆ ಮಿತಿಯುಂಟೇ?" ಇದು ಜಗನ್ನಾಥದಾಸರು ಗೋಪಾಲದಾಸರಿಗೆ ಅರುಹಿದ ಮಾತು. ಅರ್ಥಾತ್ ವಿಜಯದಾಸರೇ ಅವರನ್ನು ಗೋಪಾಲದಾಸರೆಡೆ ಕಳುಹಿದ್ದರಿಂದ ಮೇಲ್ಕಾಣಿಸಿದ ಮಾತುಗಳನ್ನು ನುಡಿವಾಗ ಅವರ ಮನಸ್ಸಿನಲ್ಲಿ ವಿಜಯದಾಸರೂ ಕೂಡ ಇರಲೇಬೇಕು. ಅವರು ಗೋಪಾಲದಾಸರನ್ನು ಉದ್ದೇಶಿಸಿ ಆಡಿದ ಮಾತುಗಳೇ, ಉಚಿತ ವ್ಯತ್ಯಾಸಗಳೊಡನೆ, ವಿಜಯದಾಸರಿಗೂ ಅನ್ವಯಿಸುವವು. ಕೊನೆಗೆ ಜಗನ್ನಾಥದಾಸರು ತಮ್ಮ ಪಾರಮಾರ್ಥಿಕ-ಸಾಮಾಜಿಕ ಮನೋಭಾವನೆಯನ್ನು ನಮಗೆ ಈ ರೀತಿ ಅರುಹಿರುವರು: "ಅಯ್ಯ! ನೀನು ನನ್ನ ಮೇಲೆ ಕರುಣವ ಕರೆದು ನನ್ನ ಪಾತಕಗಳನ್ನೂ ಕುಂದುಕೊರತೆಗಳನ್ನೂ ಅಳಿಸಿರುವೆ. ಆದರೆ ನನಗೆ ಇದಿಷ್ಟೇ ಸಾಲದು. ನೀನು ಅದೇ ಬಗೆಯ ಕರುಣವನ್ನು ಸಮಾಜದ ಮೇಲೆಯೂ ಕರೆಯಬೇಕು. ನೀನು ನನ್ನ ಪಾತಕಗಳನ್ನು ಕ್ಷಮಿಸಬೇಕು. ಅಂದಾಗಲೇ ನೀನು ಹಿರಿಯ ಮಹಾತ್ಮನೆನಿಸಿಕೊಳ್ಳಲು ಯೋಗ್ಯನಾಗುವೆ. ಅದಕ್ಕಾಗಿ 'ಸಕಲ ಪ್ರಪನ್ನರ ಸಲಹೋಮೊದದಿ. ನೀನು ನಿನ್ನ ಪ್ರಸಾದವನ್ನು, ನಿನಗೆ ಶರಣಾಗತರಾಗಿ ಬಂದ ಎಲ್ಲರಿಗೂ ಹಿರಿಯ ಆನಂದದಿಂದ ದಯಪಾಲಿಸಬೇಕಯ್ಯ!' ನಾನು ಜಗನ್ನಾಥ ದಾಸರನ್ನು ತುಂಬ ಮೆಚ್ಚಿರುವೆ. ಯಾಕೆಂದರೆ ಅವರು ಹಿರಿಯ ವೇದಾಂತಿಗಳೂ, ನಿಜಗುಣಶಿವಯೋಗಿಗಳಂತೆ ಸಂಸ್ಕೃತ ಭಾಷೆಯ ಮೇಲೆ ತುಂಬ ಪ್ರಭುತ್ವ ಪಡೆದವರೂ ಮತ್ತು ಅನುಭಾವಿ ದಾರ್ಶನಿಕರನ್ನು ಸಮಾಧಾನಗೊಳಿಸುವಂಥ ಉತ್ತಮ ಗ್ರಂಥಗಳನ್ನು ಬರೆದವರೂ ಇರುವರು. ಅವರು ಇನ್ನೊಂದು ಕಾರಣಕ್ಕಾಗಿ ನನಗೆ ಅತಿಯಾಗಿ ಪ್ರಿಯರು. ನಾವು ಈ ಮೊದಲು ಕಂಡಿರುವ ಮೇರೆಗೆ, ಜಗನ್ನಾಥ ದಾಸರು ಪ್ರಸಾದವನ್ನು ನಿರಾಕರಿಸಿದರು; ಮತ್ತು ಅದರ ಫಲವಾಗಿ ಶಾರೀರಿಕ ಬೇನೆಯಿಂದ ತುಂಬ ಬಳಲಿದರು. ಆದರೆ ಮುಂದೆ ಅವರು ವಿಜಯದಾಸರಿಗೆ ಮೊರೆ ಹೋಗಿ, ಅವರ ಕರುಣದಿಂದ ಆ ಬೇನೆಯಿಂದ ಪೂರ್ತಿಯಾಗಿ ಗುಣ ಹೊಂದಿದರು ಹಾಗೂ ದೀರ್ಘಜೀವನದ ವರವನ್ನು ಪಡೆದರು. ಇದೆಲ್ಲ ಪ್ರಸ್ತುತ ಲೇಖಕನ ಜೀವನದಲ್ಲಿಯೂ ಒದಗಿತು. ಅವನೂ ಪ್ರಸಾವನ್ನು ನಿರಾಕರಿಸಿದ ಮೂಲಕ ಕಡುತರವಾದ ಶಿಕ್ಷೆಗೆ ಗುರಿಯಾಗಬೇಕಾಯಿತು; ಮತ್ತು ಕ್ರಿ.ಶ. ೧೯೦೫

ಜನವರಿ ೫ನೆಯ ದಿನಾಂಕದ ದಿನ ಅವನನ್ನು ಒಂದು ಭೀಕರ ಬೇನೆಯು ಆವರಿಸಿತು. ಆದರೆ ಸದ್ಗುರುವಿನಲ್ಲಿಯ ಅನನ್ಯ ಶ್ರದ್ಧೆಯ ಮೂಲಕ ಹಾಗೂ ಪೂರ್ಣ ಶರಣಾಗತಿಯ ಮೂಲಕ ಅವನು ಅದರಿಂದ ವಾಸಿಯಾದನು, ಹಾಗೂ ಅವನಿಗೆ ಸದ್ಗುರುಗಳಿಂದ ಸುದೀರ್ಘ ಜೀವನದ ಆಶ್ವಾಸನವನ್ನು ಪಡೆಯುವ ಭಾಗ್ಯವು ಲಭಿಸಿತು.

ಮುಂದಿನ 'ಕಡಕೊಳ್ಳದ ನಾ ಗುಲಾಮ' ಎಂಬ ಪದವು ಕಡಕೊಳ್ಳದ ಮಡಿವಾಳ ಯೋಗಿಗಳ ಶಿಷ್ಯನದು. ಮಿಲ್ಟನ್ ಎಂಬ ಆಂಗ್ಲಕವಿಯ ಕಾವ್ಯಗಳನ್ನು ಓದಿದವರು ಅವರ ಮುಂದಿನ ಎರಡು ಕವನಗಳನ್ನು ಅರಿವರು,– 'L'Allegro (ಸೋಲಾಸ) 'Il Penseroso' (ಉದಾಸ). 'ಉದಾಸ' ಎಂಬ ಕಾವ್ಯದಲ್ಲಿ ದೋಷಯುತ, ನಿರಾಶಯುತ ಹಾಗೂ ದುಃಖಿತ ಮನಸ್ಸು ಚಿತ್ರಿಸಲಾಗಿದೆ; 'ಸೋಲ್ಲಾಸ' ಎಂಬ ಕಾವ್ಯದಲ್ಲಿ ಉತ್ಸಾಹಯುತ, ಉಲ್ಲಸಿತ ಹಾಗೂ ಹರ್ಷಯುತ ಮನಸ್ಸು ಬಣ್ಣಿಸಲಾಗಿದೆ. ನಾನು ಈಗ ವಿವರಿಸಿದ ಮೊದಲನೆಯ ಪದದಲ್ಲಿ ನೈರಾಶ್ಯದ ಮನೋವೃತ್ತಿಯು ಕಂಡು ಬಂದರೆ, ಎರಡನೆಯದರಲ್ಲಿ ಉಲ್ಲಸಿತ ಮನೋವೃತ್ತಿಯ ಕಾಣಬರುವುದು. ಈ ಪದದಲ್ಲಿ ಕವಿಯು ತನ್ನನ್ನು ಸದ್ಗುರುವಿಗೆ ಅರ್ಪಿಸಲಾದ 'ಗೂಳಿ' ಎಂದು ಕರೆದಿರುವನು. ಅರ್ಥಾತ್, ಇದೊಂದು ಮಡಿವಾಳ ಯೋಗಿಗಳ ಶಿಷ್ಯನು, ತನ್ನ ಸದ್ಗುರುಗಳ ಹಿರಿಮೆಯನ್ನು ಅರುಹಲು ಬರೆದ ಪದ. ಸದ್ಗುರುಗಳು ತನಗೆ ಶಾಶ್ವತ ಇನಾಮು ಹಾಕಿಕೊಟ್ಟ ಮೂಲಕ ತಾನು ಸದ್ಗುರುಗಳ ಗುಲಾಮನಾಗಿರುವನೆಂದು ಕವಿಯು ಹೇಳುವ. ಇನಾಮದಾರರು ಅವರಿಗೆ ಇನಾಮು ಕೊಟ್ಟವರ ಗುಲಾಮರಾಗುವಂತೆ, ಮಡಿವಾಳಯೋಗಿಗಳ ಶಿಷ್ಯನು, ಸದ್ಗುರುಗಳು ಅವನಿಗೆ ಶಾಶ್ವತ ಇನಾಮು ಕೊಟ್ಟಿದ್ದರಿಂದ ತನ್ನನ್ನು ಅವರ ಗುಲಾಮನೆಂದು ಕರೆದುಕೊಳ್ಳುವ. ಭಗವಂತನ ಸಾಕ್ಷಾತ್ಕಾರವೇ ಈ ಶಾಶ್ವತ ಕೊಡುಗೆ. ಅದು ಇದನ್ನುಳಿದು ಮತ್ತೇನಿರಬಲ್ಲದು?. ಅದಕ್ಕಾಗಿ ಅವನು ತನ್ನನ್ನು ಗುಲಾಮನೆಂದು ಬಗೆದು, ತನ್ನ ಸದ್ಗುರುವನ್ನು 'ಗೂಳಿ'ಯಂತೆ ಸೇವಿಸಲಿರುವ. ಅವನು ಪ್ರಪಂಚದಲ್ಲಿ ಇನ್ನೇನನ್ನು ಲೆಕ್ಕಿಸನು. ತನ್ನ ಗುರುಗಳು ಹೋದಲ್ಲೆಲ್ಲ ಅವರೊಡನೆ ಮೆರೆಯುತ್ತ ಹೋಗುವುದು ಅವನ ಕೆಲಸ. ಕವಿಯು ಅರುಹಿದ ಮೂರನೆಯ ಮಾತು ಅದಾವುದೆಂದರೆ: ತನ್ನ ಗುರುಗಳಿಗೆ ನಿವೇದಿಸಲಾದ 'ರಸರಾಯ ಹೋಳಿಗೆ ತುಪ್ಪ ಜಡಿದು' ಅವನು ಪ್ರಮಿದತನಾಗುವ. ಆದರೆ ಇದರಿಂದಲೆ ತೃಪ್ತನಾಗದೆ, ಅವನು ಕಬೀರ ಕಮಾಲರಂತೆ, ಪದಗಳನ್ನು ಬರೆಯತೊಡಗುವನಂತೆ; ಮತ್ತು ಅದನ್ನು ಮಾಡುವುದು ಕೂಡ ತನ್ನ ಸದ್ಗುರುಗಳನ್ನು ಸಂತೈಸಲು. ಸದ್ಗುರುಗಳ ಮಹಿಮೆ ಯನ್ನು ಹಾಡಿ ಹರಸುವುದೇ ಅವನ ಕವನಗಳ ರಚನೆಯ ಪ್ರಧಾನ ಉದ್ದೇಶ.

ಪ್ರಾಸಂಗಿಕವಾಗಿ ನಾನಿಲ್ಲಿ ಮುಂದಿನ ಒಂದು ಮಾತನ್ನು ಹೇಳಬಯಸುವೆ. ಉಮದಿಯ ಮಹಾರಾಜರವರು ಈ ಪದವನ್ನು ಚಿಕ್ಕಮಕ್ಕಳಿಂದ ತಕ್ಕ ಹಾವ-ಭಾವ ಸಮೇತವಾಗಿ ಹೇಳಿಸುತ್ತಿದ್ದರು. ಪದದ ರಹಸ್ಯವು ಹೆಚ್ಚು ಪರಿಣಾಮಕಾರಿಯಾಗಿ ಹೊರಹೊಮ್ಮಬೇಕು ಎಂಬುದೇ ಹಾಗೆ ಹೇಳಿಸುವುದರ ಉದ್ದೇಶ. ಇದೂ ಆ ಪದದ ಅಂದವನ್ನು ಬೆಳಸುತ್ತಿದ್ದಿತು.

ನಾವಿನ್ನು 'ಕರ್ಪುರಾರತಿಯನ್ನು ಬೆಳಗುವೆನು' ಎಂಬ ಪದದೆಡೆ ಸಾಗುವೆವು. ಅದು ಹಿಂದೆ ಕಾಣಿಸಲಾದ ಸಾಧಕ-ಕವಿಯ ಕವನ. ಅದು 'ಉದಾಸ' ಹಾಗೂ 'ಸೊಲ್ಲಾಸ' ಎಂಬ ಮಿಲ್ಟನ್‌ನ ಕವನಗಳಲ್ಲಿ ಚಿತ್ರಿಸಲಾದ ಎರಡು ಮಾದರಿಯ ಮನೋವೃತ್ತಿಗಳನ್ನು ಸಮನ್ವಯಗೊಳಿಸುವುದು. ಈ ಸಮನ್ವಯದಲ್ಲಿ ಆದರ್ಶ ಶಿಷ್ಯನ ಒಂದು ಅಂದವಾದ ಬಣ್ಣನೆಯನ್ನು ನಾವು ಕಾಣಬಹುದು. ಈ ಬಣ್ಣನೆಯಲ್ಲಿ ಐದು ಮಹತ್ವದ ಅಂಶಗಳು ಗಮನಿಸಲು ಯೋಗ್ಯವಾದವುಗಳು. ಅವೆಲ್ಲ ನೆನೆಯಬೇಕಾದಂತಹವು. ಆದರ್ಶ ಶಿಷ್ಯನ ಲಕ್ಷಣಗಳನ್ನು ತಮ್ಮ ಜೀವನದಲ್ಲಿಳಿಸಲು ಬಯಸುವವರು, ಸಾಧ್ಯವಿದ್ದ ಮಟ್ಟಿಗೆ, ಈ ಗುಣಗಳನ್ನು ಅನುಕರಿಸಲು ಯತ್ನಿಸಬೇಕು. ಶಿಷ್ಯನು ಪೃಥಿವಿಯ ಮೇಲೆ ಜನಿಸಿದ ನಂಬಿಗೆಯ ಮೂರ್ತಿ ಹಾಗೂ ತೊಳಗುವ ತಪಸ್ಸಿನ ಪ್ರತಿಮೆ, ಎಂದು ಬಣ್ಣಿಸಲಾಗಿಗಿರುವ. ಅದು ಅವನ ಮೊದಲನೆಯ ಲಕ್ಷಣ. ತನ್ನ ಹಿರಿತನದ ಪೂರ್ಣ ಮರೆವು, ಅದರ ಬಗೆಗೆ ಪೂರ್ಣ ಅಲಕ್ಷ್ಯ-ಇದು ಅವನ ಎರಡನೆಯ ಲಕ್ಷಣ. ತನ್ನ ಸದ್ಗುರುವಿನ ಮಹಿಮೆಯನ್ನು ಹಾಡುವುದೇ ಇಂಥ ಆದರ್ಶ ಶಿಷ್ಯನ ಕರ್ತವ್ಯ. ಅವನಿಗೆ ಅದನ್ನುಳಿದು ಬೇರೊಂದು ಕೆಲಸವಿರುವುದಿಲ್ಲ. ಅವನೂ ಒಂದು ಬಗೆಯ ಹಿರಿಮೆಯನ್ನು ಪಡೆದಿರಬಹುದು. ಆದರೆ ಅವನದನ್ನು ಪೂರ್ತಿಯಾಗಿ ಮರೆತಿರಬೇಕು. ಮೂರನೆಯದಾಗಿ, ಅವನು ತನ್ನ ಒಡೆಯನ ಕೈಯಲ್ಲಿಯ ಕೊಳಲಾಗಬೇಕು. ಅವನ ಕರ್ಮಗಳೆಲ್ಲ ಪ್ರತಿಕ್ರಿಯಾತ್ಮಕವಿರಬೇಕು, ಇಲ್ಲವೇ ಸ್ವಯಂಚಾಲಿತವಿರಬೇಕು. ಅವು ತನ್ನಿಂದ ತಾನೇ ನಡೆಯಬೇಕು. ಅವನು ಸದ್ಗುರುಗಳ ನಿರ್ದೇಶನದಂತೆ ನಡೆಯಬೇಕು. ಅವರು ಹೇಳಿದುದನ್ನೆಲ್ಲ ಮಾಡಬೇಕು. ನಾಲ್ಕನೆಯದಾಗಿ, ಅವನು ಗುರುಕಾಮಧೇನುವನ್ನು ಕರೆದು ಅವಳಿಂದ ಪಡೆದ ಆನಂದಾಮೃತವನ್ನು ಸಮಾಜದಲ್ಲಿಯೂ, ಜಗತ್ತಿನಲ್ಲಿಯೂ ಹಂಚುವ. ಅವನು ಹಿಂದೀ ಪ್ರದೇಶದಲ್ಲಿಯೇ ಅಹೀರರೆಂಬ ಗೌಳಿಗರ ಪಾತ್ರವನ್ನು ವಹಿಸುವ. ಅವರ ಹಸುಗಳನ್ನು ಹಿಂಡಿ, ಜನರಿಗೆ ಹಾಲನ್ನು ಪೂರೈಸುವ ಕೆಲಸವನ್ನು ಮಾಡುವರು. ಆ ಮೇರೆಗೆ ಅವನು ಈ ಕಾಮಧೇನುವಿನಿಂದ ಹಾಲನ್ನು ಪಡೆದು ಅವರ ಬೇರೆ ಶಿಷ್ಯರಿಗೆಲ್ಲ ಅದನ್ನು ಹಂಚಬೇಕು. ಕೊನೆಯದಾಗಿ, ಈ ಶಿಷ್ಯನು ಕರ್ಪುರಕ್ಕಿಂತಲೂ ಮೇಲ್ತರಗತಿ

ಯವನು. ನಾವು ಮೇಲಿಂದ ಮೇಲೆ ದೇವರೆದುರು ಕರ್ಪುರವನ್ನು ಉರಿಸುವುದುಂಟು. ಅದೊಂದು ಅತಿ ಪರಿಶುದ್ಧವಾದ ಪದಾರ್ಥವು. ಆದರೆ ಈ ಶಿಷ್ಯನು ಕರ್ಪುರಕ್ಕಿಂತಲೂ ಹೆಚ್ಚು ಪರಿಶುದ್ಧನು. ಯಾಕೆಂದರೆ ಕರ್ಪುರವಾದರೂ ಮಾಡುವುದೇನನ್ನು? ಅದು ಉರಿಯುವುದು. ದೇವರೆದುರು ಹೊಳೆಯುವುದು. ಆತನ ವೈಭವವನ್ನು ಬೆಳಗುವುದು. ಆದರೆ ಕೊನೆಗೆ ಅದು ಅಳಿಯುವುದು. ಈ ರೀತಿ ಒಂದು ಶೂನ್ಯವು ಇಲ್ಲವೇ ಅಸ್ತಿತ್ವದ ಅಭಾವವು ನಿರ್ಮಿತವಾಗುವುದು. ಆದರೆ ಈ ಆದರ್ಶ ಶಿಷ್ಯನು ಕರ್ಪುರವನ್ನು ಮೀರುವನು. ಯಾಕಂದರೆ ಅವನು ಅಮರನಿರುವನು. ಅವನು ತಾನು ಅಮರನಾಗಿ ಉಳಿಯುವನು ಹಾಗೂ ತನ್ನ ಸದ್ಗುರುವನ್ನು ಅಮರನನ್ನಾಗಿ ಉಳಿಸುವನು. ಈ ರೀತಿ ಸಾಮಾನ್ಯ ಕರ್ಪುರವು ಅಳಿದರೆ, ನಿಜವಾದ ಪಾರಮಾರ್ಥಿಕ ಶಿಷ್ಯನು ಎಂದೂ ಅಳಿಯುವುದಿಲ್ಲ. ಅವನು ತನ್ನನ್ನು ತನ್ನ ಸದ್ಗುರುವನ್ನು ಅಮರಗೊಳಿಸುವನು. ಇದು ಅನುಭಾವಿ ಶಿಷ್ಯನ ಮನೋಭೂಮಿಕೆ. ಅವನು ತನ್ನಲ್ಲಿ 'L'Allegro'(ಸೋಲ್ಲಾಸ) ಹಾಗೂ 'Il Penseroso' (ಉದಾಸ) ಇವರೀರ್ವರ ಮನೋವೃತ್ತಿಗಳನ್ನು ಬೆರೆಸಿರುವನು.

ಇನ್ನು ನಾವು ಎರಡು ತುಂಬ ಮಹತ್ವದ ಪದಗಳನ್ನು ವಿವರಿಸುವೆವು. ಒಂದು ಮಹಾಲಿಂಗರಂಗರದು, ಇನ್ನೊಂದು ಗುರುಲಿಂಗಜಂಗಮರದು. ನಾವು ನಮ್ಮ ಮುಂದಿನ ಉಪನ್ಯಾಸಗಳಲ್ಲಿ ವಿವರಿಸಲಿರುವ ಯೋಗ-ಭಕ್ತಿ ಹಾಗೂ ಅನುಭಾವ ಇವುಗಳ ಬೆರಕೆಯುಳ್ಳ, ಅನೇಕ ಪಾರಮಾರ್ಥಿಕ ಪದಗಳಿಗೆ ಇದೊಂದು ಪೀಠಿಕೆ. ಇದೀಗ ನಾನು ಅವುಗಳ ಎಲ್ಲ ವಿವರಗಳಲ್ಲಿ ಸೇರಬಯಸುವುದಿಲ್ಲ. ಆದರೆ ಅವುಗಳ ಪ್ರಧಾನ ರಹಸ್ಯಮಯ ಅಂಶಗಳನ್ನಷ್ಟೇ ಇಲ್ಲಿ ಸೂಚಿಸುವೆ. 'ಪಾದಪೂಜೆಯ ಮಾಡಿ ಮುಕ್ತಾದೇ' ಎಂಬ ಈ ಮೊದಲನೆಯ ಪದದಲ್ಲಿ ಅನುಭಾವದ ಸ್ವರೂಪವನ್ನು ಕುರಿತು ಕವಿಯು ಹೇಳುವದೇನೆಂದರೆ: 'ಸದ್ಗುರುಗಳ ಪಾದಪೂಜೆಯೇ ಅನುಭಾವ'. ಆದರೆ ಇವು ಭೌತಿಕ ಪಾದಗಳೇ? ಅಲ್ಲ. ಅರ್ಥಾತ್, ಭೌತಿಕ ಪಾದಗಳು ಬರೀ ಪ್ರತೀಕಗಳು. ನಿಜವಾದ ಪಾದಗಳು ಪಾರಮಾರ್ಥಿಕ ಪಾದಗಳು. ತುಕಾರಾಮ ಜ್ಞಾನೇಶ್ವರಾದಿ ಸಂತರನೇಕರು ಭಗವಂತನ ಪಾದಗಳನ್ನು ಬಣ್ಣಿಸಿರುವರು. ಭಗವಂತನ ಪಾದಗಳನ್ನು ಕಾಣಲು ಸಮರ್ಥರಾಗುವುದೇ ಶ್ರೇಷ್ಠತಮ ಸಾಕ್ಷಾತ್ಕಾರ. ಇಂಥ ಪಾದಗಳನ್ನೇ ನಾವು ಪೂಜಿಸಬೇಕು. ಎರಡನೆಯದಾಗಿ, ಈ ಸದ್ಗುರು ನಮ್ಮ ದಾರ್ಶನಿಕ ಸಂದೇಹಗಳನ್ನು ಮೀರಲು ನಮಗೆ ಸಾಮರ್ಥ್ಯ ನೀಡುವ. ಕೇವಲ ಅನುಭಾವದ ಬಲವೇ ನಿಮ್ಮನ್ನು ದಾರ್ಶನಿಕ ಸಂದೇಹಗಳ ಆಚೆ ಒಯ್ಯಬಲ್ಲದು. ಇದೇ ದರ್ಶನ-ಅನುಭಾವಗಳಲ್ಲಿಯ ಪ್ರತ್ಯಕ್ಷ ಸಂಬಂಧವು. ಆದರೆ ಇದು ತುಂಬ ವ್ಯಾಪಕವಾದ ವಿಷಯವರಿವುದರಿಂದ ಅದನ್ನಿಲ್ಲಿ ಚರ್ಚಿಸುವುದು ಸಾಧ್ಯವಿಲ್ಲ. ಅದರ ಚರ್ಚೆಗೆ ಎಷ್ಟೋ ಗ್ರಂಥಗಳನ್ನು ಬರೆಯಬೇಕಾಗಬಹುದು. ಇಂದಿನ ದರ್ಶನವು ಈ

ಸಂಬಂಧದ ಚರ್ಚೆಗಾಗಿ ವಿಪುಲವಾದ ಕಾಲವನ್ನು-ಬಲವನ್ನು ಉಪಯೋಗಿ ಸುತ್ತಿರುವುದು. ಆ ಮೇಲೆ, ನಾವು ನೈತಿಕ ಪ್ರಗತಿಯನ್ನು ಸಾಧಿಸಬೇಕೆಂಬುದು ಕವಿಯು ಹೇಳಿರುವ ಮೂರನೆಯ ಮಾತು. ನಾವು ನಮ್ಮ ಶರೀರ, ಮನಸ್ಸು, ಮಾತು–ಇವನ್ನು ಪರಿಶುದ್ಧಗೊಳಿಸಬೇಕು.

ಈ ಕವನದಲ್ಲಿ ನಮಗೆ ಯೋಗಶಾಸ್ತ್ರದ ಒಳನೋಟವು ಲಭಿಸುವುದು. ಕನ್ನಡ ಅನುಭಾವಿಗಳ ಯೋಗಿಕ ಶರೀರಶಾಸ್ತ್ರ ಹಾಗೂ ಅಂಗರಚನಾಶಾಸ್ತ್ರದ ಜ್ಞಾನವನ್ನು ನೋಡಿದರೆ. ಅವರು ಪೂರ್ತಿಯಾಗಿ ಅದ್ವಿತೀಯರು, ಎಂಬುದನ್ನು ಅವರ ಸಾಹಿತ್ಯದ ಅಧ್ಯಯನದಲ್ಲಿ ಕೆಲಕಾಲ ಕಳೆದ ಮೂಲಕ ನಾನು ಕಂಡುಹಿಡಿದಿರುವೆ. ಮೊದಲು ನಾವು ಸ್ಥಿರಾಸನದಲ್ಲಿ ಕೂಡಲು ಪ್ರಾರಂಭಿಸಬೇಕೆಂದು ಹೇಳಲಾಗಿದೆ. ನಾವು 'ಜಡಿದು ಆಸನ' ಕೂಡಬೇಕಂತೆ. ನಾವದನ್ನು ಐದ್ಹೈದು ನಿಮಿಷಗಳಿಗೆ ಬದಲಿಸ ಕೂಡದು. ನಾವು ನಮ್ಮ ಎಡದ ಹಿಂಬಡವನ್ನು ವೃಷಣಗುದಗಳ ಮಧ್ಯದಲ್ಲಿರುವ, ಆಧಾರಚಕ್ರದಲ್ಲಿಯ ಸುಷುಮ್ನೆಗೆ ಒತ್ತಬೇಕು. ಇದರಲ್ಲಿ ಎರಡು ರೀತಿಗಳಿರುವವು; ನಾವು ಬೇಕಾದರೆ ಎಡದ ಹಿಂಬಡವನ್ನು ಒತ್ತಬಹುದು, ಇಲ್ಲವೇ ಬಲದ ಹಿಂಬಡ ವನ್ನು ಒತ್ತಬಹುದು. ಈ ಕವಿಗಳು ಎಡದ ಹಿಂಬಡವನ್ನು ಒತ್ತಲು ಹೇಳಿರುವರು. ಆದರೆ ಜ್ಞಾನೇಶ್ವರರು ಬಲದ ಹಿಂಬಡವನ್ನು ಒತ್ತಲು ಹೇಳಿರುವರು. ಅದನ್ನವರು ವಜ್ರಾಸನವೆಂದು ಕರೆದಿರುವರು. ನೀವು ಈ ರೀತಿ ಹಿಂಬಡವನ್ನು ಒತ್ತಿರಿ ಇಲ್ಲವೆ ಬಿಡಿರಿ, ಈ ಯೋಗಿಗಳ ಹೇಳಿಕೆಯನ್ನು ಅನುಸರಿಸಿರಿ ಇಲ್ಲವೆ ಬಿಡಿರಿ. ಇದೇನು ಅಷ್ಟು ಮಹತ್ವದ ವಿಷಯವಲ್ಲ. ಯಾಕಂದರೆ ಭಕ್ತಿಯು ಯೋಗಕ್ಕಿಂತ ಮೇಲು ಮತ್ತು ಭಾವವು ಎಲ್ಲವುಗಳಿಗಿಂತ ಮೇಲು. ನಿಮ್ಮಲ್ಲಿ ಈ ಭಾವವು ನೆಲಿಸಿತೆಂದರೆ ನಿಮಗೆ ಇವುಗಳಲ್ಲಿಯ ಯಾವ ಮಾತಿನ ಅವಶ್ಯಕತೆಯೂ ಇರುವುದಿಲ್ಲ. ಆದರೆ ಇವು ಭಾವಜಾಗ್ರತಿಗೆ ನೆರವಾಗುವ ಸಂಭವವಿದೆ. ಆದುದರಿಂದ ಇವುಗಳನ್ನು ನಾವು ಅರಿತುಕೊಳ್ಳಬಹುದು, ಇವುಗಳೆಡೆ ಗಮನಕೊಡಬಹುದು. ಮೂರನೆಯದಾಗಿ, ಕವಿಯು ಹೇಳುವದೇನೆಂದರೆ: ನಾವು ದೀರ್ಘವಾಗಿ ಉಸಿರಾಡಿಸಬೇಕು, ನಮ್ಮ ಪ್ರಾಣವಾಯುವನ್ನು ನಾವು ಮೇಲಕ್ಕೆ ಎತ್ತಬೇಕು; ಮತ್ತು ಅದನ್ನು ಸುಷುಮ್ನೆ ಯೊಳಗಿಂದ ಮೆಲ್ಲನೆ ಒಯ್ದು, ಕೊನೆಗೆ ತ್ರಿಕೂಟದಲ್ಲಿ ಮುಳಗಿಸಬೇಕು. ತ್ರಿಕೂಟವನ್ನು ಆಧುನಿಕ ಅಂಗರಚನಾಶಾಸ್ತ್ರಜ್ಞರು ಮೂರನೆಯ ಇಲ್ಲವೆ ಕೇಂದ್ರದ ಮೆದುಳಿನ ಕುಹರ (Third or Central Ventricle) ಎಂದು ಕರೆವ ಕುಹರದಲ್ಲಿಯ ಸ್ಥಲವಿವರ. ಮಿದುಳಿನ ಎರಡು ಪಕ್ಕೆಗಳಿಗೆ ಎರಡು, ಹಿಂಭಾಗದಲ್ಲಿ ಒಂದು ಮುಂಭಾಗದಲ್ಲಿ ಒಂದು–ಹೀಗಿರುವ ನಾಲ್ಕು ಕುಹರಗಳ ಮಧ್ಯದಲ್ಲಿ ನೆಲೆಸಿರುವದು. ಒಮ್ಮೊಮ್ಮೆ ಅದನ್ನು ನಾಲ್ಕು ನೆಲೆಗಳ ಕೋಣೆ–ಗೂಡು ಎಂದು ಕೂಡ ಕರೆವರು. ಆ ಸ್ಥಲಕ್ಕೆ ಶೃಂಗಾಟಕವೆಂದು ಹೆಸರು ಉಂಟು. ತ್ರಿಕೂಟವೆಂಬುದು ಕೇವಲ ಈ ಕುಹರಗಳ

ನಡುವಿನ ಸ್ಥಳ ಮಾತ್ರ, ನಾಲ್ಕನೆಯ ಕುಹರವು ಇತ್ತೀಚೆಗೆ ಶೋಧಿಸಲಾಗಿದೆ. ಎರಡರ ಶೋಧವಾಗಿ ಬಹುಕಾಲವಾಯಿತು. ಆದರೆ ಇದೇನೂ ಅಷ್ಟೊಂದು ಮಹತ್ವದ ವಿಷಯವಲ್ಲ. ಈ ಕೇವಲ ಪ್ರಾಥಮಿಕ ಸ್ವರೂಪದ ಯೋಗಿಕ ಕ್ರಿಯೆಗಳ ತರುವಾಯ ನಾವು ಯೋಗಿಕ ಪರಿಣಾಮಗಳೆಡೆ ತೆರಳಬೇಕು. ಅವನ್ನು ಕುರಿತು ಈ ಪದದಲ್ಲಿ ಮೂರು ಮಾತುಗಳು ಹೇಳಲಾಗಿವೆ. ನಾವು ಬೇರೆ ಬೇರೆ ಬಗೆಯ ನಾದಗಳಲ್ಲಿ ನಮ್ಮ ಮನಸ್ಸನ್ನು ಲೀನಗೊಳಿಸಬೇಕೆಂಬುದು ಅವುಗಳಲ್ಲಿಯ ಮೊದಲನೆಯ ಮಾತು. ಈ ನಾದಗಳಲ್ಲಿ ಹತ್ತು ಬಗೆಗಳಿರುವವೊ ಇಲ್ಲವೆ ಅದಕ್ಕೂ ಹೆಚ್ಚಿಗೆ ಇರುವವೋ ಎಂಬುದು ನಮಗೆ ಅಪ್ರಧಾನ ವಿಷಯ. ಅವು ಹೆಚ್ಚು ಇರಬಹುದು. ಆದರೆ ಸಾಮಾನ್ಯವಾಗಿ ದಶವಿಧನಾದಗಳು ಅರುಹಲಾಗಿವೆ. ಈ ದಶವಿಧನಾದಗಳಲ್ಲಿ ನಾವು ನಮ್ಮ ಮನಸ್ಸನ್ನು ತಲ್ಲೀನಗೊಳಿಸಬೇಕು. ಎರಡನೆಯದಾಗಿ, ನಾವು ಹಿಂದೆ ಹೇಳಿದ ಮೇರೆಗೆ ಬೆಳಕಿನ ವಿತಾನದ ಕೆಳಗೆ ಕುಳಿತುಕೊಳ್ಳಬೇಕು. 'ಬೋಧ ಮಂಟಪದಲ್ಲಿ ಕುಳಿತರ'ಬೇಕು. ಮೂರನೆಯದಾಗಿ, ನಾವು ಭಗವಂತನ ರೂಪವನ್ನು ಕಾಣಬಲ್ಲವರಾಗಬೇಕು. ಬರಿ ನಾದಾನಂದದಲ್ಲಿ ತಲ್ಲೀನರಾಗಿ, ಜ್ಯೋತಿಯ ವಿತಾನದ ಕೆಳಗೆ ಕೂಡುವದಷ್ಟೇ ಸಾಲದು. ನಾವು ಭಗವಂತನ ರೂಪವನ್ನು ಕಂಡು ಆ ಆನಂದವನ್ನು ಅನುಭವಿಸಬೇಕು. 'ತತ್ಸುಖವುಂಡು ಸುಖಿಸ'ಬೇಕು. ಈ ಭಗವಂತನ ರೂಪವನ್ನು ನಾವು ಕಂಡಾಗ ಏನಾಗುವುದು? ಆಗ ನೀನು ನೀರಿನಲ್ಲಿ ಕೂಡುವಂತೆ 'ತೋಯ ತೋಯವಬೆರಿಸಿದಂತೆ' ಜೀವಾತ್ಮನು ಪರಮಾತ್ಮನಲ್ಲಿ ಏಕನಾಗುವನೆಂದು ಕವಿಯು ಹೇಳುವ. ಅದು ಗಂಗೆಯ ಶುಭ್ರ ಜಲವು ಯಮುನೆಯ ಕರಿನೀರಿನಲ್ಲಿ ಬೆರೆತಂತಲ್ಲ. ಯಾಕೆಂದರೆ, ಜೀವಾತ್ಮ-ಪರಮಾತ್ಮರ ದ್ರವ್ಯಗುಣಗಳು ಒಂದೇ ಇರುವವು. ಆದುದರಿಂದ ಭಕ್ತ-ಭಗವಂತರಲ್ಲಿ ಯಾವ ಬಗೆಯ ಭೇದವೇ ಉಳಿಯುವುದಿಲ್ಲ. ಈ ಪರಮಾತ್ಮನಲ್ಲಿಯ ಜೀವಾತ್ಮನ ಬೆರಕೆಯು, ನೀರಿನಲ್ಲಿ ನೀರು ಬೆರೆತಂತಿರುವದೆಂದು ಉಪನಿಷತ್ತಿನಲ್ಲಿಯೂ ಹೇಳಲಾಗಿರುವುದು. ಕೊನೆಯದಾಗಿ, ನಾವು 'ಪಶ್ಚಿಮಮಾರ್ಗ'ದಿಂದ ಸಾಗಿ 'ಬಯಲೆ'ಂಬುದನ್ನು ಸೇರಬೇಕು ಎಂದು ಕವಿಯು ಹೇಳುವ. ಈ 'ಪಶ್ಚಿಮ'ವೆಂದರೇನು, ಈ 'ಬಯಲಿ'ನ ಸ್ವರೂಪವೇನು ಎಂಬುದನ್ನು ನಾವು ಮುಂದೆ ರೂಪವಿಷಯಕ ಹಾಗೂ ಬೇರೆ ಪಾರಮಾರ್ಥಿಕ ಅನುಭವಗಳನ್ನು ವಿವರಿಸುವಾಗ ಪೂರ್ತಿಯಾಗಿ ಚರ್ಚಿಸುವೆವು. ಈಗ ಇಷ್ಟೇ ಸಾಕು. ನಾವು ದೇವರ ಈ ರೂಪವನ್ನು ಕಾಣಬೇಕು. ಮಿದುಳುಬಳ್ಳಿಯಲ್ಲಿ ಸುಷುಮ್ನೆಯೊಳಗಿಂದ ಮೇಲಕ್ಕೇರಿ ತ್ರಿಕೂಟವನ್ನು ಇಲ್ಲವೆ 'ಬಯಲೆ'ಂದು ಹೆಸರಾಂತ ಪ್ರದೇಶವನ್ನು ಸೇರಬೇಕು; ಮತ್ತು ಅಲ್ಲಿ ಆತ್ಮಾನಂದವನ್ನು ಅನುಭವಿಸಬೇಕು ಎಂಬುದು ಈ ಕವನದ ತಿರುಳು.

ಇನ್ನು ನಾವು 'ಗುರತಾ ತೋರೀದ ಗುರುವಿನ ಮರೆತು ನಾನಿರಲಿ ಹ್ಯಾಂಗ!' ಎಂಬ ಇನ್ನೊಂದು ಪದವನ್ನು ವಿವರಿಸಲು ಪ್ರಾರಂಭಿಸುವೆವು. ಅದೂ ಸುಮಾರಾಗಿ ಹಿಂದಿನ ಪದದ ರೀತಿಯನ್ನು-ಭಾವವನ್ನು ಅನುಸರಿಸುವುದು. ಈ ಕವನವು ಅನುಭಾವದ ಪರಿಣಾಮಗಳ ಇಡಿ ಪ್ರಕ್ರಿಯೆಯ ಸಾರಾಂಶವನ್ನು ಒಳಗೊಂಡುರುವುದು. ಕವಿಯು ಹೇಳುವ ಮೊದಲನೆಯ ಮಾತು ಈ ಬಗೆಯದಿರುವುದು: 'ನನ್ನ ಸದ್ಗುರು ನನಗೆ ಗುರುತನ್ನು ತೋರಿಸಿದ' ಈ 'ಗುರುತೆ'ಂಬ ಶಬ್ದವು ಬಹಳ ಮಹತ್ವದ್ದಿರುವುದು. ಗ್ರೀಕ ಭಾಷೆಯಲ್ಲಿ ಗಣಿತಶಾಸ್ತ್ರದಲ್ಲಿ ಮೇಲಿಂದ ಮೇಲೆ ಬಳಸಲಾದ 'Sigma' ಎಂಬ ಪದದ ಅರ್ಥವನ್ನು ಅದು ಪಡೆದಿರುವುದು. 'ಗುರು ಈ ಗುರುತನ್ನು ನನಗೆ ತೋರಿದ' ಎಂದು ಕವಿಯು ಹೇಳುವ. ಅವನು ಹೇಳುವ ಎರಡನೆಯ ಮಾತು ಅದಾವುದೆಂದರೆ: 'ಸದ್ಗುರು ನನ್ನ ಕಿವಿಯಲ್ಲಿ ಮೂಲಮಂತ್ರವನ್ನು ಊದಿದ. ನಾನು ಯಾವ ಮಂತ್ರದ ಮುಖಾಂತರ ಭಗವಂತನ ಧ್ಯಾನವನ್ನು ಮಾಡಬೇಕೆಂಬುದನ್ನು ಅವನು ನನಗೆ ತಿಳಿಸಿದ; ಮತ್ತು ಇನ್ನು ನನ್ನ ಕೆಲಸ ವಾಯಿತು ಎಂದು ನುಡಿದ. ಅವನು ಮತ್ತೂ ಹೇಳಿದುದೇನೆಂದರೆ: 'ನನಗೆ ಇದನ್ನುಳಿದು ಬೇರೆ ಏನನ್ನೂ ಹೇಳತಕ್ಕದ್ದಲ್ಲ. ಇನ್ನು ನೀನು ನಿನ್ನ ಪರಮಾರ್ಥ ಪಥದಿಂದ ಮರಳಬೇಡ. ನಿನಗೆ ಬೇಕಾದುದೆಲ್ಲವನ್ನು ನಾನು ನಿನಗೆ ನೀಡಿರುವೆ. ನನ್ನ ಹತ್ತಿರವಿದ್ದ ಸರ್ವಸ್ವವನ್ನು ನಾನು ನಿನಗೆ ದಯಪಾಲಿಸಿರುವೆ. ನಾನು ನಿನಗೆ ಮೂಲಮಂತ್ರವನ್ನು ಕೊಟ್ಟಿರುವೆ. ಇನ್ನು ಅದನ್ನು ಪೂರ್ಣಗೊಳಿಸುವುದು ನಿನ್ನ ಕೆಲಸ' ಮೂರನೆಯದಾಗಿ ಅವನು ನನಗೆ ಬೇರೆ ಬೇರೆ ಚಕ್ರಗಳ ಸ್ಥಲಗಳನ್ನು ತಿಳಿಸಿದ. ಈ ಚಕ್ರಗಳು ಆರಿರಬಹುದು, ಎಂಟಿರಬಹುದು ಇಲ್ಲವೆ ಹತ್ತಿರಬಹುದು. ಅವುಗಳ ಸಂಖ್ಯೆಯು ಎಷ್ಟೇ ಇರಬಹುದು. ಅದೊಂದು ಶರೀರಶಾಸ್ತ್ರದ ಹಾಗೂ ಅಂಗರಚನಾಶಾಸ್ತ್ರದ ಬೇರೊಂದು ಸಮಸ್ಯೆಯಾಗಿರುವುದು. ಅದಾದ ಮೇಲೆ, ಅವನು ನನಗೆ ನಾದ, ಬಿಂದು, ಕಲೆಗಳ ಸ್ವರೂಪದ ಪರಿಚಯವನ್ನು ಮಾಡಿಕೊಟ್ಟ ಇವು ಬಲು ಮಹತ್ವದ ಶಬ್ದಗಳು. ನಾದವೆಂದರೆ ಧ್ವನಿ, ಬಿಂದುವೆಂದರೆ ರೂಪ. ಆದರೆ ಕಲಾಶಬ್ದದ ಅರ್ಥವು ತಿಳಿಯಲು ಸ್ವಲ್ಪ ಕಠಿನವಾದುದು. ಕನ್ನಡ ಅನುಭಾವ ಸಾಹಿತ್ಯದಲ್ಲಿ ಅದನ್ನು ಸರಿಯಾಗಿ ಬಳಸಲಾಗಿದೆ. 'ಕಲಾ' ಎಂದರೆ ಒಂದು ನೋಟ ಇಲ್ಲವೆ ಅಂಗವಲ್ಲ. 'ಕಲಾ' ಎಂದರೆ ಬೆಳಕು. ಆದುದರಿಂದ ನಾದ, ಬಿಂದು, ಕಲಾ ಎಂದರೆ ಧ್ವನಿ, ರೂಪ ಹಾಗೂ ಬೆಳಕು. ಪಾರಿಭಾಷಿಕವಾಗಿ ಇವನ್ನು ನಾದಾತ್ಮಕ, ರೂಪಾತ್ಮಕ, ಹಾಗೂ ತೇಜಾತ್ಮಕ ಅನುಭವಗಳೆಂದು ಕರೆಯಬಹುದು. ಈ ಸಂತಕವಿಯು ಹೇಳುವ: "ನನ್ನ ಸದ್ಗುರು ನನಗೆ ನಾದಾತ್ಮಕ, ರೂಪಾತ್ಮಕ ಹಾಗೂ ತೇಜಾತ್ಮಕ ಅನುಭವಗಳ ಸ್ವರೂಪವನ್ನು ಅರುಹಿದ." ಕನ್ನಡ ಸಂತರ ಈ ಅನುಭವಗಳನ್ನು ಬೇರೊಂದು ಪ್ರಕರಣದಲ್ಲಿ ವಿವರಿಸಲಾಗುವುದು. ನಾನು ಧ್ಯಾನ

ಮಾಡುವಾಗ ಹಾಗೂ ನನ್ನ ಉಸಿರನ್ನು ಮೇಲಕ್ಕೆ ಎಳೆಯುವಾಗ, ಭಗವಂತನ ಆರೂಪವು ನಾಸಿಕದ ಅಗ್ರದಿಂನ ಮಿದುಳಿನ ಕೇಂದ್ರ ಕುಹರದ ವರೆಗೆ ಲೀಲೆಯಿಂದ ಅಲೆಯಲು ಪ್ರಾರಂಭಿಸಿತು. ಭಗವಂತನ ಲೀಲೆಯನ್ನು-ಕ್ರೀಡೆಯನ್ನು ತಡೆಯುವವರಾರು? ಆಗ ಈ ದೇವರ ರೂಪವೂ ನಾನೂ ಒಂದೇ ಎಂಬುದನ್ನು ನಾನು ಅನುಭವಿಸಿದೆ.' ಕೊನೆಗೆ ಕವಿಯು ಈ ರೀತಿ ಅರುಹುವ: 'ಈ ಬಗೆಯ ಅನುಭವಗಳು ಲಭಿಸಿದಾಗ ಭವವು ತೊಲಗಿ ಹೋಗುವದು, ಬಹು ಪುಣ್ಯದೊರಕುವುದು, ಜಗತ್ತು ಒಂದು ಕಂದರವಾಗಿ ಪರಿಣಮಿಸುವುದು ಮತ್ತು ನನ್ನ ಸದ್ಗುರು-ಗುರುಲಿಂಗ ಜಂಗಮರು ಅಲ್ಲಿ ಶಾಶ್ವತವಾಗಿ ನೆಲೆಸುವರು. ಅಲ್ಲಿ ಒಂದು ಬಗೆಯ ಬಯಲುರೂಪಿಯಾದ, ಇಲ್ಲವೆ ನಿರ್ಗುಣರೂಪಿಯಾದ ಸತ್ತತ್ವವು ಇರುವುದು. 'ಬಯಲಿಗೆ ಬಯಲು ನಿರ್ಬಯಲು!' ಎಂಬುದು ಈ ಬಗೆಯ ಅನುಭವದ ಲಕ್ಷಣ. ಈ ಬಗೆಯಾಗಿ ನಾವು ಭಗವಂತನ ರೂಪದರ್ಶನದಿಂದ ಮೇಲಕ್ಕೇರಿ, ಬಯಲುರೂಪಿಯಾದ ಸತ್ತತ್ವನ್ನು ಅನುಭವಿಸಬೇಕು. ಇದೇ ಗುರುಶಿಷ್ಯರ ಅಪ್ರತಿಮ ಸಂಬಂಧದ ಅಂತಿಮ ಫಲ.

■■

ಪ್ರಕರಣ ಎಂಟು

ಗುರುಶಿಷ್ಯರ ಸಂಬಂಧ (ಭಾಗ ೨)

ಗುರುಶಿಷ್ಯರ ಸಂಬಂಧವನ್ನು ಕುರಿತು ಈ ಪ್ರಕರಣದಲ್ಲಿ ನಾನು ಇನ್ನೂ ಕೆಲ ಹೆಚ್ಚಿನ ಸಂಗತಿಗಳನ್ನು ವಿವರಿಸಬಯಸುವೆ. ಅದನ್ನು ನಾನು ನಿಂಬರಗಿ ಮಹಾರಾಜ ರವರ ಒಂದು ಪದದ ವಿವರಣದಿಂದ ಪ್ರಾರಂಭಿಸುವೆ. ಅದರಲ್ಲಿ ಮಹಾರಾಜರವರು 'ಗುರುಚರಣಕಮಲದಲ್ಲಿ ಭೃಂಗನಾಗೋ ನೀ' ಎಂದು ಶಿಷ್ಯನನ್ನು ಬೋಧಿಸಿರುವರು. ನಿಂಬರಗಿ ಮಹಾರಾಜರವರು ಆಧುನಿಕ ಕಾಲದ ಶ್ರೇಷ್ಠತಮ ಸಂತರಲ್ಲಿ ಒಬ್ಬರು. ಅವರು ಫ್ರೆಂಚಕ್ರಾಂತಿಯ ವರುಷ(೧೭೮೯) ಜನಿಸಿದರು; ಇಪ್ಪತ್ತೈದು ವರುಷದವ ರಿರುವಾಗ ಅನುಗ್ರಹೀತರಾದರು; ಮತ್ತು ತೊಂಬತ್ತೈದು ವರುಷಗಳ ವರೆಗೆ ಜೀವಿಸಿದರು. ಅವರು ಕೆಲ ಅಂದವಾದ ಪದಗಳನ್ನು ಬರೆದಿರುವರು. ಅವುಗಳಲ್ಲಿ ಪ್ರಸ್ತುತ ಪದವು ಒಂದು. ಅವರು, ಭೃಂಗದಂತೆ ಸದ್ಗುರುವಿನ ಚರಣಕಮಲದ ಬಳಿ ಹಾಡುತ್ತ ಸುಳಿಯಲು ನಮ್ಮನ್ನು ಪ್ರಚೋದಿಸುವರು. ಭೃಂಗವು ಜೇನನ್ನು ಶೋಧಿಸಲು ಹಾಗೂ ಸಂಗ್ರಹಿಸಲು ಕಮಲದ ಸುತ್ತಲೂ ಗುಂಯ್, ಎನ್ನುತ್ತ ಸುಳಿದಾಡುವಂತೆ, ತನ್ನ ಗುರುಗಳ ಚರಣಕಮಲದ ಸುತ್ತಲೂ ಸುಳಿದು, ಅಲ್ಲಿಂದ ಸಾಧ್ಯವಿದ್ದಷ್ಟು ಹೆಚ್ಚು ಜೇನನ್ನು ಹೀರುವುದು ಶಿಷ್ಯನ ಕೆಲಸ. ಆ ಮೇಲೆ ಮಹಾರಾಜರವರು, ಪರತಮ ಸತ್ಯವನ್ನು ಪಡೆಯುವ ಸಾಧನವಾದ ಧ್ಯಾನಪದ್ಧತಿಯನ್ನು ಕುರಿತು ಕೆಲ ಮಾತು ಗಳನ್ನು ಹೇಳಿರುವರು. ಒಂದೇ ಸಾಲಿನಲ್ಲಿ ಅವರು ಅದರ ನಾಲ್ಕು ಲಕ್ಷಣಗಳನ್ನು ಅರುಹಿರುವರು: 'ಮೌನ ಹಿಡಿದು, ಮುದ್ರೆ ಬಲಿದು, ಜ್ಞಾನಜ್ಯೋತಿಯೊಳಗೆ ನಲಿದು, ಸ್ವಾನುಭವಾಮೃತ ಸವಿದು' ಇವೇ ಆ ನಾಲ್ಕು ಲಕ್ಷಣಗಳು. ಮೊದಲು ನಾವು 'ಮೌನವನ್ನು ಹಿಡಿಯಬೇಕು. ಇದನ್ನೇ ಗ್ರೀಕ ದಾರ್ಶನಿಕರಾದ ಸ್ಟೋಯಿಕರು ಹಾಗೂ ಎಪಿಕ್ಯೂರಿಯನರು Epoche ಎಂದು ಕರೆವರು. ಮಹಾತ್ಮಾಗಾಂಧೀ ಯವರು ತಮ್ಮ ಜೀವನದಲ್ಲಿ ಎಷ್ಟೋ ಸಲ ಈ ಮೌನವನ್ನು ಆಚರಿಸಿದುದುಂಟು. ನಾವು ಬಹಳ ಮಾತನಾಡದಿರುವಾಗ, ಇಲ್ಲವೆ ಮಾತನ್ನೆ ಆಡದಿರುವಾಗ, ನಮಗೆ ಅತೀತವಾದ ಒಂದೇ ವಿಷಯದ ಮೇಲೆ ನಮ್ಮ ಮನಸ್ಸನ್ನು ಸ್ಥಿರೀಕರಿಸುವುದು ಸಾಧ್ಯ ವಾಗುವುದು. ಆದುದರಿಂದ ನಾವು ಅತಿಯಾಗಿ ಮಾತಾಡಬಾರದು. ನಾವು ಮೌನ ವನ್ನು ತಳೆಯಬೇಕು. ತರುವಾಯ ನಾವು ಮುದ್ರೆಯನ್ನು ಬಲಿಸಬೇಕು. ಮುದ್ರೆ

ಯೆಂದರೇನು? ಈ ಶಬ್ದಕ್ಕೆ ಬಗೆಬಗೆಯ ಅರ್ಥಗಳನ್ನು ಹಚ್ಚಲಾಗಿದೆ. ಹಠಯೋಗ ದಲ್ಲಿ ಖೇಚರೀ ಭೂಚರೀ ಮತ್ತು ಬೇರೆ ಮುದ್ರೆಗಳು ಬಣ್ಣಿಸಲಾಗಿವೆ. ಆದರೆ ಇವು ನಿಜವಾದ ಮುದ್ರೆಗಳೇ ಅಲ್ಲ. ನಿಜವಾಗಿ, ನಿಮ್ಮ ಮಿದುಳಿನ ಹಾಗೂ ಕಂಗಳ ಯಾವ ಬಗೆಯ ಸಮತೋಲ ನಿಲವಿನಿಂದ ನೀವು ನಿಮ್ಮ ಅವಧಾನವನ್ನು ಏಕಾಗ್ರಗೊಳಿಸ ಬಲ್ಲಿರೋ ಅದೇ ಮುದ್ರೆ, ಉದಾಹರಣಾರ್ಥವಾಗಿ: ನೀವು ಮುಂದೆ ನೋಡಿ, ಎದುರು ಏನನ್ನಾದರೂ ಕಂಡು, ಅದರ ಮೇಲೆ ನಿಮ್ಮ ಕಂಗಳನ್ನು ಸ್ಥಿರವಾಗಿ ನಿಲ್ಲಿಸಿದರೆ ಅದೊಂದು ಮುದ್ರೆಯೇ. ನೀವು ಅನಾಹತನಾದದ ಮೇಲೆ ಮನಸ್ಸನ್ನು ಏಕಾಗ್ರಗೊಳಿಸಿದರೆ ಅದೂ ಒಂದು ಮುದ್ರೆಯೇ ಸರಿ. ಈ ಮೇರೆಗೆ, ನೀವು ನಿಮ್ಮ ಅವಧಾನವನ್ನು ನಿಮಗೆ ಸರಿದೋರಿದ ಯಾವ ನಿಲವಿನ ನೆರವಿನಿಂದ ಏಕಾಗ್ರಗೊಳಿಸುವಿರೋ ಆ ನಿಲವೇ ಮುದ್ರೆಯು. ಆಮೇಲೆ ನಾವು 'ಜ್ಞಾನಜ್ಯೋತಿ ಯೊಳಗೆ ನಲಿಯಬೇಕು'. ಅದಕ್ಕಾಗಿ ನಾವು ವಿಶೇಷವಾದ ಯತ್ನವನ್ನು ಮಾಡುವ ಅವಶ್ಯಕತೆಯಿಲ್ಲ. ಕೊನೆಗೆ ನಾವು 'ಸ್ವಾನುಭವಾಮೃತ ಸವಿಯಬೇಕು'. ಇವೇ ಧ್ಯಾನದ ನಾಲ್ಕು ಲಕ್ಷಣಗಳು. ನಾವದನ್ನು ಮಾಡಿದಾಗ, ಮತ್ತು ಇದನ್ನು ದೀರ್ಘಕಾಲ ಮಾಡಬಲ್ಲವರಾದಾಗ ನಾವು ಭಗವಂತನ ಸ್ವರೂಪದ ಜ್ಞಾನವನ್ನು ಪಡೆಯಬಹುದು. ಮಹಾರಾಜರವರು ಮತ್ತೂ ಹೇಳುವುದೇನೆಂದರೆ: 'ಪರತತ್ವ ತಿಳಿದು ಸಾಧುರ ಸಂಗಿಯಾಗೋ ನೀ!' ಇದು ಕೂಡ ಬಲು ಮಹತ್ವದ ಮಾತು. 'ನೀವು ಪರತತ್ವವನ್ನು ಪಡೆದ ಮೇಲೆ ಸಂತರ ಸಹವಾಸದಲ್ಲಿ ನಿರತರಾಗಿರಿ' ಎಂಬುದು ಅವರ ಹೇಳಿಕೆ. ಸಾಮಾನ್ಯವಾಗಿ, ನಾವು ಸಂತರ ಸಹವಾಸ ಮಾಡಿ ಪರತತ್ವವ ಪಡೆಯುವದುಂಟು. ಆದರೆ ಇಲ್ಲಿ ಆ ರೀತಿಯನ್ನು ಬದಲಿಸಲಾಗಿದೆ. 'ಪರತತ್ವ ತಿಳಿದು ಸಾಧುರ ಸಂಗಿಯಾಗು' ಎಂದು ಮಹಾರಾಜರವರು ಹೇಳುವರು. ಮೊದಲು ನೀವು ಪರತತ್ವ ವನ್ನು ಪಡೆಯಿರಿ. ಆಮೇಲೆ ೧) ನಿಮಗಾಗಿ ನಿಮ್ಮ ಅನುಭವದ ಆಳವನ್ನು ಬೆಳೆಸಲು ಹಾಗೂ ೨) ಜನರಲ್ಲಿ ಅದನ್ನು ಹರಡಲು, ನೀವು ಸಂತರ ಸಂಗವನ್ನು ಹಿಡಿಯಿರಿ. ಇದು ಸಾಕ್ಷಾತ್ಕಾರದ ತರುವಾಯ ಸತ್ಸಂಗದಲ್ಲಿ ನಿಲ್ಲುವುದರ ರಹಸ್ಯ. ಕೊನೆಗೆ, ಅವರು ತಮಗೆ ಅನುಭಾವವನ್ನು ನೀಡಿದ ತಮ್ಮ ಗುರುಗಳಾದ ಮುಪ್ಪಿನ ಮುನಿಗಳನ್ನು ಉಲ್ಲೇಖಿಸಿರುವರು.

ಇನ್ನು ನಾನು ಕೂಡಲೂರೇಶರ 'ಕುರುಬರೋ ನಾವು ಕುರುಬರೋ' ಎಂಬ ಅತಿ ಮಹತ್ವದ ಪದದೆಡೆ ಸಾಗುವೆ. ಕನ್ನಡ ಸಂತರ ಅನುಭಾವವನ್ನು ಕುರಿತ ಈ ನನ್ನ ಗ್ರಂಥದಲ್ಲಿ ವಿವರಿಸಲಾದ ಅತ್ಯುತ್ತಮ ಪದಗಳಲ್ಲಿ ಇದೊಂದು. ಇದು ಕುರುಬರ ಉದ್ಯೋಗವನ್ನು ಬಣ್ಣಿಸುವ ಅತಿ ಸ್ವಾರಸ್ಯವುಳ್ಳ ಪದ. ಮೊದಲು ನಾವು ಕುರುಬನ ಪ್ರತ್ಯಕ್ಷ ಜೀವನವನ್ನು ವಿವರಿಸಿ ತರುವಾಯ ಅದರ ಸೂಚಕಾರ್ಥಗಳನ್ನು ನೋಡೋಣ. ಅವೆಲ್ಲ ಅತ್ಯಂತ ಮಹತ್ವದ ವಿಷಯಗಳು. ಕುರಿಗಳ ಹಾಗೂ

ಕುರಿಹಿಂಡುಗಳ ಜೀವನವನ್ನು-ಅದನ್ನು ನೀವು ಪಶುಸಂಗೋಪನವೆಂದೂ ಕರೆಯಬಹುದು-ಮೂರು ದೃಷ್ಟಿಗಳಿಂದ ಕಾಣಬಹುದು. ಅವುಗಳಲ್ಲಿ ಶಾರೀರಿಕ ಮಾನಸಿಕ ದೃಷ್ಟಿಯು ಮೊದಲನೆಯದು, ಸಾಮಾಜಿಕ-ರಾಜಕೀಯ ದೃಷ್ಟಿಯು ಎರಡನೆಯದು ಹಾಗೂ ನೈತಿಕ ಪಾರಮಾರ್ಥಿಕ ದೃಷ್ಟಿಯು ಮೂರನೆಯದು. ಈ ರೀತಿ ಕುರುಬರ ಜೀವನವನ್ನು ಕುರಿತು ಕೂಡಲೂರೇಶರ ಈ ಒಂದು ಸುಲಭ ಪದಕ್ಕೆ ಇಷ್ಟೊಂದು ಅಂಗಗಳಿರುವವು. ಮೊದಲು ಕವಿಯು ನಮ್ಮನ್ನು ವೈಷಯಿಕ ಪಾಪಜೀವನದಿಂದ ಭಕ್ತಿಯ ಪುಣ್ಯಜೀವನದೆಡೆ ಒಯ್ಯಬಯಸುವನೆಂಬುದು ಒಡೆದು ಕಾಣುವುದು. ನಿಜವಾಗಿ ಪಾಪಜೀವನದಿಂದ ನಮ್ಮನ್ನು ಉನ್ನತಗೊಳಿಸಿ ನಾವು ಪಡೆಯಬೇಕಾದ ಆದರ್ಶವು ಅದೇ ಇರುವುದು.

ವಿಚಾರದ ಬೆಳವಣಿಗೆಯ ಇತಿಹಾಸದಲ್ಲಿ-ವಿಶೇಷತಃ ಪಾರಮಾರ್ಥಿಕ ವಿಚಾರದ ಬೆಳವಣಿಗೆಯ ಇತಿಹಾಸದಲ್ಲಿ-ಅನೇಕ ಮಹನೀಯರು ತಮ್ಮನ್ನು ಕುರುಬರೆಂದು ಕರೆದುಕೊಂಡಿರುವರು. ಶಿಷ್ಯರು ಕುರಿಗಳು, ಗುರುವು ಕುರುಬ. ಕ್ರೈಸ್ತನು ತಾನು ಕುರುಬನೆಂದು ಹೇಳಿದ. ನಾನು ಇದೀಗ ಉಲ್ಲೇಖಿಸಿದ ನಿಂಬರಗಿ ಮಹಾರಾಜರವರು ಸುಮಾರು ಐವತ್ತರಿಂದ ಅರವತ್ತು ವರುಷ ಪ್ರತ್ಯಕ್ಷ ಕುರುಬನ ಬಾಳನ್ನೇ ಬಾಳಿದರು. ಕನಕದಾಸರು ತಮ್ಮನ್ನು ಕುರುಬದಾಸ ಎಂದು ಕರೆದುಕೊಂಡರು. ಉಮದಿಯ ಮಹಾರಾಜರವರು ತಮ್ಮ ಸುತ್ತಲೂ ನೆರೆದ ವಿದ್ವಾಂಸರೊಡನೆ ತಮ್ಮನ್ನು ಹೋಲಿಸಿ, ತಾವು ಕುರುಬರು ಎಂದು ಹೇಳುತ್ತಿದ್ದರು. ನಿಜವಾಗಿ ಕುರುಬರ ಉದ್ಯಮವು ತುಂಬ ನಿಷ್ಕಪಟವಾದುದೂ, ನಿಷ್ಕಳಂಕವಾದುದೂ ಇರುವುದು. ಅದು ನಮ್ಮೆದುರು ಕೆಲ ಉನ್ನತ ಆದರ್ಶಗಳನ್ನು ಇರಿಸುವದು; ಮತ್ತು ಈ ಮೊದಲು ನಾನು ಅರುಹಿದ ಮೇರೆಗೆ, ಅದನ್ನು ಬಗೆಬಗೆಯ ದೃಷ್ಟಿಯಿಂದ ಕಾಣಬಹುದು. ಈ ಸಂದರ್ಭದಲ್ಲಿ, ನಾನು ನಿಮ್ಮ ಅವಧಾನವನ್ನು ಪ್ಲೇಟೋನ ಕೆಲ 'ಸಂಭಾಷಣೆ'ಗಳಲ್ಲಿ ಕಂಡುಬರುವ ಮಾನಸಿಕ-ನೈತಿಕ-ರಾಜಕೀಯ ಸಾದೃಶ್ಯದೆಡೆ ಸೆಳೆಯಬಯಸುವೆ. ನಾನದನ್ನು ಇಲ್ಲಿ ವಿಶದೀಕರಿಸಲಿರುವುದಿಲ್ಲ. ಯಾಕಂದರೆ, ನಿಮ್ಮಲ್ಲಿಯ ಪ್ಲೇಟೋನ ಸಾಹಿತ್ಯದ ಅಧ್ಯಯನ ಮಾಡಿದವರು ಶಾರೀರಿಕ-ಮಾನಸಿಕ, ಸಾಮಾಜಿಕ-ರಾಜಕೀಯ ಹಾಗೂ ನೈತಿಕ-ಪಾರಮಾರ್ಥಿಕ ಸಾದೃಶ್ಯಗಳನ್ನು ಬಲ್ಲರು. ಅವೆಲ್ಲವನ್ನು ನಾನು ಈ ಒಂದೆ ಒಂದಾದ ಪದದಿಂದ ವಿಶದಗೊಳಿಸಲು ಯತ್ನಿಸುವೆ.

ಮೊದಲು ನಾವು ಈ ಪದವನ್ನು ಇದ್ದಕ್ಕಿದ್ದಂತೆ ಕಾಣುವಾ! ಅದು ಪಶುಸಂಗೋಪನದ ಉದ್ಯೋಗವನ್ನು ಬಣ್ಣಿಸುವದು. ತಾನು ಬಹಳ ಕುರಿಗಳನ್ನು ಸಾಕಿದ್ದನೆಂದು ಕವಿಯು ಹೇಳುತ್ತಾನೆ. ನಾವು ಮುಂದೆ ಅದರೆಡೆ ಶಾರೀರಿಕ-ಮಾನಸಿಕ

ದೃಷ್ಟಿಯಿಂದ ನೋಡಿದಾಗ, ಅವನು ಅವನ್ನು ಸಾಕಿದ ರೀತಿಯ ನಮಗೆ ಗೊತ್ತಾಗುವುದು. ಈ ಕುರಿಹಿಂಡಿನಲ್ಲಿ ಆರೈದು ಕೊಬ್ಬಿದ ಟಗರುಗಳು ಸೇರಿ ಅದರಲ್ಲಿ ಅಡಗಿಕೊಳ್ಳುವವು– 'ಮಾಯಾಗಿ ಹೋಗುವವು.' ಅದರ ಫಲವಾಗಿ ಕುರಿಗಳೆಲ್ಲ ಹೆದರಿ ದಿಕ್ಕುಪಾಲಾಗುವವು. ಅವು ಈ ಟಗರುಗಳ ಸಂಪರ್ಕದಲ್ಲಿ ಬರಲು ಬಯಸುವುದಿಲ್ಲ ಎಂಬುದನ್ನು ನೀವು ಕಂಡಿರಬಹುದು. ಆದುದರಿಂದ ಅವು ಚದರಿ ಅತ್ತಿತ್ತ ಓಡಿ ಹೋಗುವವು. ಈ ರೀತಿ ಕುರಿಗಳೆಲ್ಲ ಚದರಿ ಹೋದ ಮೇಲೆ, ಕುರುಬನಾದ ತನಗೆ ಏರು ಹಾಳಾದರೂ ಅಷ್ಟೇ, ಇಳುವು ಬೀಳಾದರೂ ಅಷ್ಟೇ, ಅಲ್ಲಿ ಕುರಿಗಳಿದ್ದರೂ ಅಷ್ಟೇ, ಇಲ್ಲದಿದ್ದರೂ ಅಷ್ಟೆ; ಎನಿಸುವಂತೆ. ತೋಳಗಳು ಕುರಿಗಳನ್ನು ಆಕ್ರಮಿಸಿ, ಅವನ್ನು ಸೆಳೆದೊಯ್ದರೂ ಇವನಿಗೆ ಅದರ ಪರಿವೆ ಇರುವುದಿಲ್ಲ. ಭಗವಂತನನ್ನು ನೆನೆದು ಭಾಳಾಕ್ಷಹರನ ರೂಪವನ್ನು ಕಾಣುವುದೇ ಅವನ ಏಕಮೇವ ಕೆಲಸವಾಗುವುದು, ಎಂದು ಕವಿಯು ಸೂಚಿಸುತ್ತಾನೆ. ಇಲ್ಲಿ 'ಭಾಳಾಕ್ಷಹರ' ಎಂಬುದು ಬಲು ಮಹತ್ವದ ಶಬ್ದಸಮುಚ್ಚಯ. 'ಭಾಳ' ಎಂದರೆ ಹಣೆ, 'ಅಕ್ಷ' ಎಂದರೆ ಕಣ್ಣು. ಅದು ಹುಬ್ಬುಗಳ ಮಧ್ಯದಲ್ಲಿರುವ 'ತೃತೀಯಾಕ್ಷ' ಮೂರನೆಯ ಕಣ್ಣು. ಶಿವನ ಈ ಮೂರನೆಯ, ಹಣೆಗಣ್ಣನ್ನು ಕಂಡವರು ಅದೆಷ್ಟು ಜನ? ನಾವು ಎರಡು ಕಂಗಳನ್ನಾದರೂ ಕಾಣಬಲ್ಲೆವೇ? ಮೂರನೆಯ ಕಣ್ಣನ್ನು ಕಾಣುವ ಮಾತಂತೂ ದೂರೇ ಉಳಿಯಲಿ. ಭಾಳಾಕ್ಷಹರನನ್ನು, ಮೂರನೆಯ ಅರಿವಿನ ಕಣ್ಣಿನ ದೇವರನ್ನು, ಸಾಕ್ಷಾತ್ಕಾರಿಸಿಕೊಳ್ಳಲು ನೆರವಾಗುವಂಥ ಜೀವನವನ್ನು ಬಾಳುವುದೇ ನಮ್ಮ ಕರ್ತವ್ಯ.

ಇನ್ನು ನಾನು ಶಾರೀರಿಕ–ಮಾನಸಿಕ ದೃಷ್ಟಿಯಿಂದ ಈ ಪದವನ್ನು ವಿವರಿಸುವೆ. ಶಾರೀರಿಕ ದೃಷ್ಟಿಯಿಂದ ಹೇಳಬೇಕಾದರೆ, ನಾವು ಪ್ರತಿದಿನದ ಇಪ್ಪತ್ತುನಾಲ್ಕು ಗಂಟೆಗಳಲ್ಲಿ ೨೧೬೦೦ಸಲ ಉಸಿರು ಎಳೆಯುವೆವು–ತಕ್ಕೊಳ್ಳುವೆವು. ಇಲ್ಲಿ ಉಸಿರುಗಳನ್ನು ಕುರಿಗಳಿಗೆ ಹೋಲಿಸಲಾಗಿದೆ. ಉಸಿರುಗಳಷ್ಟು ಕುರಿಗಳು ವಿಪುಲವಾದವುಗಳು. ಹಿಂದೆ ಪುಷ್ಟವಾದ ಕೊಬ್ಬಿದ ಟಗರುಗಳು ಕುರಿಯ ಹಿಂಡನ್ನು ಸೇರುವಂತೆ, ಇಲ್ಲಿಯೂ ಕೂಡ ಕೆಲ ದುಷ್ಟ ವಿಕಾರಗಳು ನಾವು ದೀರ್ಘವಾದ ಉಸಿರುಗಳ ನೆರವಿನಿಂದ ಭಗವಂತನ ಧ್ಯಾನದಲ್ಲಿ ನಿರತರಾದಾಗ, ನಮ್ಮಂತರಂಗವನ್ನು ಸೇರಿ ನಮ್ಮ ಉಸಿರುಗಳನ್ನು ಕದಡಿಸುವವು ಹಾಗೂ ಚದರಿಸುವವು. ನಾವು ಇದಾಗದಂತೆ ಮುಂಜಾಗ್ರತೆಯನ್ನು ವಹಿಸಬೇಕು. ಕೆಲವೊಂದು ವಿಕಾರಗಳಂತೂ ನಾವು ಧ್ಯಾನ ಮಗ್ನರಾದಾಗ ನಮ್ಮ ಉಸಿರುಗಳನ್ನು ಕದಡಿಸುವವು ಹಾಗೂ ಚದರಿಸುವವು. ನಾವು ಇದಾಗದಂತೆ ಮುಂಜಾಗ್ರತೆಯನ್ನು ವಹಿಸಬೇಕು. ಕೆಲವೊಂದು ವಿಕಾರಗಳಂತೂ ನಾವು ಧ್ಯಾನಮಗ್ನರಾದಾಗ ನಮ್ಮ ಇಉಸಿರುಗಳನ್ನು ಚದುರಿಸುವುದಲ್ಲದೇ, ಅವು ನಮ್ಮ ಉಪ–ಪ್ರಜ್ಞೆಯನ್ನು(Sub-conscious) ಕೂಡ ಸೇರುವವು. ನಾನು ಅಜಾಗ್ರತ ಪ್ರಜ್ಞೆಯನ್ನು (Sub-(Unconscious) ಕುರಿತು ಹೇಳುವದಿಲ್ಲ. ಅವು ಉಪ–ಪ್ರಜ್ಞೆಯನ್ನು ಸೇರುವದು ಸ್ಫುಟವಾದುದು; ಮತ್ತು ಮುಂದೆ ಅಲ್ಲಿಂದವು ಮೇಲಕ್ಕೆ

ಬಂದು, ನಮ್ಮ ಧ್ಯಾನದ ಇಡೀ ಪ್ರಕ್ರಿಯೆಯನ್ನೇ ಕೆಡಿಸಬಹುದು. ಪಾರಮಾರ್ಥಿಕ ಸಾಧನದಲ್ಲಿ ಉಂಟಾಗಬಹುದಾದ ಈ ಶಾರೀರಿಕ ಹಾಗೂ ಮಾನಸಿಕ ಪ್ರಕ್ಷೋಭವನ್ನು ನಾವು ಎಚ್ಚರದಿಂದ ತಡೆಯಬೇಕು.

ಇನ್ನು ಸಾಮಾಜಿಕ-ರಾಜಕೀಯ ದೃಷ್ಟಿಯಿಂದ ನೋಡುವಾ! ಸಮಾಜದಲ್ಲಿಯೂ ಕೆಲ ಅತಿಯಾಗಿ ಕೊಬ್ಬಿದ ಟಗರುಗಳು ಜನರ ಹಿಂಡನ್ನು ಸೇರಿ, ಅವರನ್ನು ಚದರಿಸುವವು ಎಂಬುದು ಎಲ್ಲರೂ ಅನುಭವಿಸಿದ ವಿಷಯ. ಈ ಕೆಲಸವನ್ನು ಗಂಡಸರಷ್ಟೇ ಮಾಡುವರೆಂದಲ್ಲ. ಅವರು ಹೆಂಗಸರ ಹಿಂಡನ್ನು ಚದರಿಸುವಂತೆ, ಕೆಲ ಹೆಂಗಸರೂ ಕೂಡ ಗಂಡಸರ ಹಿಂಡಿನಲ್ಲಿ ಸೇರಿ ಅವರನ್ನು ಚದರಿಸುವದುಂಟು. ಇಂಥ ದುಷ್ಟಜನರು ಸ್ತ್ರೀ-ಪುರುಷರೀರ್ವರಲ್ಲಿಯೂ ಇರುವರು. ಸಮಾಜದಲ್ಲಿಯ ದೋಷಗಳನ್ನು, ರೋಗಗಳನ್ನು ನಿವಾರಿಸುವುದು ನೈತಿಕ ಗುರುಗಳ ಕೆಲಸ. ಜನರು ತಮ್ಮ ದುರ್ವರ್ತನವನ್ನು ತೊರೆಯಬೇಕೆಂದು ಅವರ ಮನಸ್ಸನ್ನು ಒಲಿಸಲು ಕೆಲ ಗುರುಗಳು ಅನ್ನಸತ್ಯಾಗ್ರಹವನ್ನು ಮಾಡಬಹುದು-ಏಳು ದಿನ, ಇಪ್ಪತ್ತೊಂದು ದಿನ ಇಲ್ಲವೆ ಆಮರಣ ಉಪವಾಸವನ್ನು ಕೈಕೊಳ್ಳಬಹುದು. ಈ ಸಾಮಾಜಿಕ-ರಾಜಕೀಯ ದೃಷ್ಟಿಯಿಂದ, ಕೂಡಲೂರೇಶರು ಅರುಹಿದ ತತ್ತ್ವವನ್ನು ಬಳಸಿದರೆ, ನಾವು ಏರು-ಇಳಿವುಗಳನ್ನು, ಬೆಳೆ-ಕುರಿ ಇತ್ಯಾದಿಗಳನ್ನು ಲಕ್ಷಿಸಬಾರದು. ಭಾರತಕ್ಕೆ ಎತ್ತರ ಪ್ರದೇಶಗಳಾದ ಟಿಬೇಟ್, ಚೀನಾ ಹಾಗೂ ಪಾಕಿಸ್ತಾನ ಇವುಗಳದಾಗಲೀ ತಗ್ಗು ಪ್ರದೇಶಗಳಾದ ಸಿಲೋನ, ಜಾವಾ ಹಾಗೂ ಮಲಾಯಾ ಇವುಗಳದಾಗಲಿ ಗೊಡವೆಯೇನು? ಇವುಗಳಿಂದ ಅದಕ್ಕೆ ಆಗಬೇಕಾದುದೇನು? ಅವರ ವಿಚಾರಗಳಿಂದಾಗಲಿ, ಆದರ್ಶಗಳಿಂದಾಗಲಿ ನಮಗೆ ಯಾವ ಬಗೆಯ ಪ್ರಯೋಜನವೂ ಇರುವುದಿಲ್ಲ. ನಮಗೆ ಅವುಗಳ ಅಗತ್ಯವೇ ಇಲ್ಲ. ಕೂಡಲೂರೇಶರು ಹೇಳಿರುವಂತೆ, ನಾವು ನಮ್ಮ ದಾರಿಯಿಂದ ಸಾಗೋಣ ಮತ್ತು ನಮ್ಮ ರಾಷ್ಟ್ರವನ್ನು ಅದರ ಶ್ರೇಷ್ಠತಮ ಆದರ್ಶದೆಡೆ ಒಯ್ಯೋಣ. ನಾವು ಅನ್ಯ ಜನರ ಆದರ್ಶಗಳನ್ನು ಲೆಕ್ಕಿಸೋಣ ಬೇಡ. ಇದೆ ಸಾಮಾಜಿಕ-ರಾಜಕೀಯ ದೃಷ್ಟಿ.

ಇನ್ನು ನೈತಿಕ-ಪಾರಮಾರ್ಥಿಕ ದೃಷ್ಟಿಯ ಸ್ವರೂಪವನ್ನು ಅರಿತುಕೊಳ್ಳುವಾ! ಕುರುಬನ ಮಾಡುತ್ತಿರುವುದು ಏನನ್ನು? ಕುರಿಗಳು ಅಡವಿಯಲ್ಲಿ ಮೇಯುತ್ತಿರುವಾಗ ಅವನು ಒಂದೆಡೆ ವಿಶ್ರಾಂತಿಯನ್ನು ಪಡೆದ. ನಿಂಬರಗಿ ಮಹಾರಾಜರು ಏನನ್ನು ಮಾಡಿದರು? ಅವರು ಗುಡ್ಡದೆಡೆ ಸಾಗಿ, ಎಂಟು-ಹತ್ತು ಗಂಟೆಗಳ ವರೆಗೆ ಧ್ಯಾನವನ್ನು ಮಾಡುತ್ತಿದ್ದರು. ಕುರಿಗಳು ತಮ್ಮ ಪಾರ್ಥಿವ ಅನ್ನವನ್ನು ಸೇವಿಸುತ್ತಿರುವಾಗ, ಅವರು ಪಾರಮಾರ್ಥಿಕ ಅನ್ನವನ್ನು ಸೇವಿಸುತ್ತಿದ್ದರು. ಅವರು ಬೆಳಿಗ್ಗೆ ಅಡವಿಗೆ ಹೋಗಿ, ಸಾಯಂಕಾಲ ಅಲ್ಲಿಂದ ತಿರುಗಿ ಬರುತ್ತಿದ್ದರು. ಕುರುಬನು ಇನ್ನೊಂದು ಮಹತ್ವದ

ಕೆಲಸವನ್ನು ಮಾಡುವನು. ಕೆಲ ಕುರಿಗಳು ಹೇಸಿಕೆಯನ್ನುಂಟು ಮಾಡುವುದನ್ನು ನಾವು ಬಲ್ಲೆವು. ಅವು ಅಪ್ರಿಯವಾದ ವಾಸನೆಯನ್ನು-ಒಮ್ಮೊಮ್ಮೆ ತೀರ ಅಸಹ್ಯವಾದ ವಾಸನೆಯನ್ನು ಕೂಡ ಬಿಡುವುದುಂಟು. ಕುರುಬನ ಕಂಬಳಿಯೂ ಕೂಡ ಇಂಥ ಹೇಸಿ, ಅಸಹ್ಯವಾಸನೆಯಿಂದ ಕೂಡಿರುವುದು. ಅವನು 'ಹಳೆಯ ದೋಷದ ರಗಟೆಯ ಎಳಕೊಂಡು ತಿರುಗುವ'ನೆಂದು ಕವಿಯು ಹೇಳುವನು. ಈ ರೀತಿ ಶಿಷ್ಯರ ಪಾತಕಗಳು ಹೊರಗಿನಿಂದ ಗುರುವಿಗೆ ತಗಲಿದರೆ ಅವನದನ್ನು ಕೊಂಚವೂ ಗಮನಿಸುವುದಿಲ್ಲ. ಅವನು ಆತನ ಬಳಿಗೆ ಬಂದು ಆತನ ಸುತ್ತಲು ನೆರೆದರೆ,' ಅವರ ನೆರೆಯ ಮೂಲಕ ಒಂದು ಕೊಳಕು ವಾಸನೆಯು ಬರುವದೇನೋ ನಿಜ. ಆದರೂ ಅವನು ತನ್ನ ಕುರಿಗಳನ್ನು, ಶಿಷ್ಯರನ್ನು ತನ್ನೊಡನೆ ಒಯ್ಯುವ ಕಾರ್ಯದಲ್ಲಿ ನಿರತನಿರುವನು. ತನಗೆ ಮಾತ್ರ ಈ ಶಿಷ್ಯರ ಹೊಲಸು ವಾಸನೆ-ಕೊಳಕು ಜಿಡ್ಡುಗಳ ಸಂಸರ್ಗವನ್ನು ಅವನು ಹತ್ತಗೊಡುವುದಿಲ್ಲ. ಮನುಜನು ಪರತತ್ವವನ್ನು ಪಡೆದ ನೆಂದರೆ, ಅವನ ಅನುಯಾಯಿಗಳ ದೋಷ-ದುರ್ಗುಣಗಳು ಅವನಿಗೇನು ಮಾಡ ಬಲ್ಲವು? ನಿಜವಾಗಿ ಅವು ಏನನ್ನೂ ಮಾಡಲರಿಯವು. ಈ ರೀತಿ ಅವನು ಅವರನ್ನು ತನ್ನ ದಾರಿಗುಂಟ ಎಳೆದೊಯ್ಯುತ್ತ ತನ್ನ ಅಂತಿಮವನ್ನು ಮುಟ್ಟುವನು. ಈರ್ವರು ಮಹಾಪುರುಷರು ಇದನ್ನು ಮಾಡಿದರೆಂದು ಇತಿಹಾಸವು ಸಾರುವುದು. ಬುದ್ಧನು ಇದನ್ನು ಮಾಡಿದ, ಕ್ರೈಸ್ತನು ಇದನ್ನು ಮಾಡಿದ. ತನ್ನ ಅನುಯಾಯಿಗಳ ಪಾತಕವನ್ನು ಅಳಿಸುವದಕ್ಕಾಗಿಯೆ ಕ್ರೈಸ್ತನು ಜೀವಿಸಿದನು, ದುಡಿದನು ಹಾಗೂ ಮಡಿದನು ಎಂಬುದನ್ನು ನಾವು ಅರಿವೆವು; ಮತ್ತು ಬುದ್ಧನು ತನ್ನ ಬಾವವನ್ನು ಕಾವ್ಯಮಯವಾಗಿ ಈ ರೀತಿ ಅರುಹಿದನು:

ಕಲಿ-ಕಲುಷಕೃತಾನಿ ಯಾನಿ ಲೋಕೇ।
ಮಯಿ ನಿಪತಂತು ವಿಮುಚ್ಯತಾಂ ಹಿ ಲೋಕಃ॥

'ಕಲಿಯುಗದ ಮೂಲಕ ಕಲುಷಿತವಾದ ಇಡೀ ಜಗತ್ತಿನ ಪಾಪಗಳೆಲ್ಲ ನನ್ನ ಮೇಲೆ ಬಿದ್ದರೂ, ಅವನ್ನು ನಾನು ಸಹಿಸಬೇಕಾದರೂ ಅಡ್ಡಿಯಿಲ್ಲ. ಆದರೆ ಜಗತ್ತು ಅವುಗಳ ದುಷ್ಪರಿಣಾಮಗಳಿಂದ ಮುಕ್ತವಾಗಲಿ.'

ಅವರಿಬ್ಬರು ತಮ್ಮ ಶಿಷ್ಯರನ್ನು ತಮ್ಮೊಡನೆ ಒಯ್ದರು. ಅವರು ಜೀವಿಸಿರುವ ವರೆಗೆ ಶಿಷ್ಯರನ್ನು ಭಗವಂತನೆಡೆ ಒಯ್ಯುವದೊಂದೇ ಅವರ ಕೆಲಸವಾಗಿದ್ದಿತು. ಜನರು ಪಾಪಜೀವನವನ್ನು ತೊರೆದು ಭಕ್ತಿಜೀವನವನ್ನು ಬಾಳಬೇಕೆಂದು ಈ ಸಂತರೀರ್ವರು ಬಯಸಿದರು. ತಾವೂ ಅಂಥ ಮಾದರಿಯ ಭಕ್ತರಾದರು. ಕ್ರೈಸ್ತ, ಬುದ್ಧ ಹಾಗೂ ನಿಂಬರಗಿ ಮಹಾರಾಜರವರು-ಇವರೆಲ್ಲ ಈ ಬಗೆಯ ಸಂತರಿದ್ದರು.

ನಾವಿನ್ನು ಇನ್ನೆರಡು ಪದಗಳೆಡೆ ತೆರಳೋಣ. ಅವು ಗುರುಗಳನ್ನು ಮರೆಯು ವುದು ಸಾಧ್ಯವಿಲ್ಲವೆಂದು ಅರುಹುವವು. 'ಗುರುವಿನ ಹ್ಯಾಂಗ ಮರೆಯಲಿ' ಎಂಬ

ಪದದಲ್ಲಿ ನಾವು ಮುಂದಿನ ಮೂರು ಅಂಶಗಳನ್ನು ವಿವರಿಸುವೆವು: ಮೊದಲನೆಯದು ನೈತಿಕ ಅಂಶ, ಎರಡನೆಯ ಬೌದ್ಧಿಕ ಅಂಶ ಹಾಗೂ ಕೊನೆಯದು ಪಾರಮಾರ್ಥಿಕ ಅಂಶ. ಮೊದಲಿಗೆ ಸದ್ಗುರು ತನ್ನ ಶಿಷ್ಯನ ಪಾಪಗಳನ್ನೆಲ್ಲ ಕಳೆದನಂತೆ. ಅವನು ಅವನ ಮಲಿನ ಅರಿವೆಯನ್ನು ಸೆಳೆದೊಯ್ದು, ಅವನಿಗೆ ಹೊಸ ಅರಿವೆಯನ್ನು ದಯಪಾಲಿಸಿದ. ಅವನು ಅವನ ದುಶ್ಚಟಗಳನ್ನು, ದುರ್ಗುಣಗಳನ್ನು ಹಾಗೂ ಪಾತಕಗಳನ್ನು ಅಳಿಸಿ ಅವನನ್ನು ಸಜ್ಜನನನ್ನಾಗಿ ಮಾಡಿದ. ಇದು ಅದರಲ್ಲಿಯ ನೈತಿಕಾಂಶ. ಮುಂದೆ ಶಿಷ್ಯನು ಕಲ್ಪನೆಯ ಹುಚ್ಚಾಟದಿಂದ ಬಳಲುತ್ತಿದ್ದನು. ನಿಜವಾಗಿ ಎಲ್ಲ ಸಾಧಕರು ಈ ರೀತಿ ಬಳಲುವದುಂಟು. ಅವರು ತಮ್ಮ ಮನಸ್ಸನ್ನು ಏಕಾಗ್ರಗೊಳಿಸಲು ಪ್ರಾರಂಭಿಸಿದೊಡನೆ, ನೂರಾರು ವಿಚಿತ್ರ ಕಲ್ಪನೆಗಳು ಅವರೆದುರು ಸುಳಿಯುವವು. ಆದುದರಿಂದ ಅವನ್ನೆಲ್ಲ ಕಳೆಯಲುಬೇಕು. ಅದರ ಜತೆಯಲ್ಲಿ ಎಲ್ಲ ಬೌದ್ಧಿಕ ಸಂದೇಹಗಳನ್ನು ನಿವಾರಿಸಲು ಬೇಕು. ನನ್ನ ಸದ್ಗುರು ಅದನ್ನೆಲ್ಲ ಮಾಡಿದ; ಮತ್ತು ಕೊನೆಗೆ ಅವನು ನನಗೆ 'ಕೋಣನಾಗಬೇಡ ಎಂದು ವಿವೇಕ ಹೇಳಿದ'. 'ನೀನು ಕೋಣನಂತೆ ಮಂದ-ಹಾಗೂ ಮೂಢನಾಗಬೇಡ; ದಕ್ಷನಾಗು, ಚುಟುವಟಿಕೆ ಯುಳ್ಳವನಾಗು, ಭಗವಂತನನ್ನು ಪಡೆಯಲು ತುಂಬ ಯತ್ನಿಸು' ಎಂದು ಅವನು ಬೋಧಿಸಿದನಂತೆ. ಇಲ್ಲಿ ಉಲ್ಲೇಖಿಸಲಾದ ಮೂಢತನವು ಹೆಚ್ಚಾಗಿ ಬೌದ್ಧಿಕವಿರುವುದು, ನೈತಿಕವಿರುವುದಿಲ್ಲ. ಇದು ಬೌದ್ಧಿಕ ಅಂಶ. ತರುವಾಯ ಅವನು ನನ್ನನ್ನು 'ಸದಮಲ ಮಹಾಜ್ಯೋತಿಯ ಬೆಳಕಲಿ' ಕುಳ್ಳಿರಿಸಿದ; ಮತ್ತು ನನ್ನನ್ನು ಅನೇಕಸಲ ನಾದಬ್ರಹ್ಮದ ಅನುಭವದಲ್ಲಿ 'ನಲಿನಲಿದಾಡಿಸಿದ'. ನಾಗಸ್ವರವನ್ನು ಕೇಳಿದಾಗ ಹಾವು ಸಂತತವಾಗಿ ತೂಗಾಡುವಂತೆ, ನಲಿದಾಡುವಂತೆ, ಶಿಷ್ಯನೂ ಕೂಡ ದೈವೀಸಂಗೀತವನ್ನು ಕೇಳಿದಾಗ, ಕೇಳಿದರೆ, ನಲಿದಾಡಬಹುದು. ತಮ್ಮಲ್ಲಿ ಅದೆಷ್ಟು ಜನ ಅದನ್ನು ಕೇಳುವಿರೆಂಬುದನ್ನು ನಾನರಿಯೆ. ಆದರೆ ನೀವದನ್ನು ಕೇಳಬಲ್ಲವರಾದರೆ, ನೀವು ಕೂಡ ಹಾವಿನಂತೆ ನಲಿದಾಡಬಲ್ಲಿರಿ. ಕೊನೆಗೆ, 'ಗುರುವು ನನ್ನನ್ನು 'ಸದರಿನ ಮೇಲೆ ಕುಳ್ಳಿರಿಸಿದ', ಮತ್ತು ನನಗೆ ಸುಧೆಯನ್ನು ಕುಡಿಸಿದ', ಎಂದು ಕವಿಯು ಹೇಳುವನು. ಈ ಸದರಿನ ಇಲ್ಲವೆ ಸಿಂಹಾಸನದ ಸ್ವರೂಪವನ್ನು ನಾನು ಈ ಉಪನ್ಯಾಸದ ಕೊನೆಗೆ ಇನ್ನೊಂದು ಮಹತ್ವದ ಪದವನ್ನು ವಿವರಿಸುವಾಗ ವಿಶದೀಕರಿಸುವೆ. ಆದುದರಿಂದ, ಈಗಿಲ್ಲಿ ಆ ಸ್ಥಲವು, ಸದರ-ಅವನಿ ಶೃಂಗಾಟಕ-ತ್ರಿಕೂಟ-ಎಂದು ಕರೆಯಲಾಗಿದೆ ಎಂಬುದನ್ನಷ್ಟು ಅರಿತರೆ ಸಾಕು. ಆ ಹೆಸರುಗಳು ಶರೀರಶಾಸ್ತ್ರದ ದೃಷ್ಟಿಯಿಂದ ಬಂದಿರಬಹುದು-ಇಲ್ಲವೆ ಬೇರೆ ಅರ್ಥದಿಂದ ಬಂದಿರಬಹುದು. 'ನನ್ನ ಸದ್ಗುರು ನನಗಾಗಿ ಇವನ್ನೆಲ್ಲ ಮಾಡಿರುವುದರಿಂದ, ನಾನು ಅವನನ್ನು ಮರೆಯುವುದು ಹೇಗೆ ಸಾಧ್ಯ?' ಎಂದು ನಿರುಪಾದಿಸಿದ್ಧರು ಹೇಳುವರು.

'ಹ್ಯಾಂಗ ಮರೆಯಲಿ ಗುರುವಿನ?' ಎಂಬ ಇನ್ನೊಂದು ಪದದ ಕರ್ತನು ಒಬ್ಬ ಬಡ ಬ್ರಾಹ್ಮಣನು. ಅವನು ಉಮದಿ ಮಹಾರಾಜರವರ ಭಾವಿಕ ಶಿಷ್ಯನಿದ್ದನು. ಭಗವಂತಪ್ಪ ಎಂಬುದು ಅವನ ಹೆಸರು. ಕ್ರಿ. ಶ. ೧೯೩೨ ರಿಂದ ೧೯೪೬ರ ವರೆಗೆ–ಹದಿನಾಲ್ಕು ವರುಷ–ಅವನು ನನ್ನ ಬಳಿ ಇದ್ದನು. ಭಗವಂತನ ಧ್ಯಾನ ಹಾಗೂ ನಿಂಬಾಳಕ್ಕೆ ಬಂದ ಜನರ ಸೇವೆ ಇದೇ ಆತನ ಏಕಮೇವ ಕೆಲಸ. ಅವನನ್ನು ಕಂಡ ಅನೇಕ ಜನರಿರಬಹುದು. ಅವನು ನಿಂಬಾಳಕ್ಕೆ ಬಂದ ಪ್ರತಿಯೊಬ್ಬರ ಸೇವೆಯನ್ನು ಎಷ್ಟು ಅಂತಃಕರಣಪೂರ್ವಕ ಮಾಡುತ್ತಿದ್ದನೆಂಬುದನ್ನು ಅವರು ಬಲ್ಲರು. ಅವನಲ್ಲಿ ಒಳ್ಳೆಯ ಕವಿತ್ವಶಕ್ತಿಯೂ ನೆಲೆಸಿದ್ದಿತು. ಅವನ ಸ್ಮೃತಿಯನ್ನು ಜಾಗ್ರತಗೊಳಿಸಲು ವಾನವನ ಪದವನ್ನು ಆರಿಸಿರುವೆ. ಅವನು ಚಿದಾನಂದನೆಂಬ ಮುದ್ರಿಕೆಯನ್ನು ಬಳಿಸುತ್ತಿದ್ದನು. ಅವನು ತನ್ನ ಹೆಸರನ್ನು ಹಾಕಲು ಬಯಸುತ್ತಿರಲಿಲ್ಲ. ಆದರೂ ಭಗವಂತಪ್ಪನೇ ಈ ಪದದ ಕರ್ತನೆಂಬುದು ನಮ್ಮೆಲ್ಲರಿಗೆ ಗೊತ್ತಿದ್ದ ವಿಷಯ. 'ಸದ್ಗುರು ನನಗಾಗಿ ಅದೇನನ್ನು ಮಾಡಿರುವ?' ಎಂದು ಕೇಳಿ ಕವಿಯು ಅದರ ಉತ್ತರವನ್ನು ಈ ರೀತಿ ಕೊಡುತ್ತಾನೆ.– 'ನಾನು ಹೀನ ಮನಸಿನ ಬೆನ್ನು ಹತ್ತಿ' ಅದು ಹೇಳಿದುದನ್ನೆಲ್ಲ ಮಾಡುತ್ತಿದ್ದೆ, ನಾನು 'ಬಾಡಿಗೆಯ ಎತ್ತಿನಂತೆ' ದುಡಿಯುತ್ತಿದ್ದೆ. ಜನರು ಬಾಡಿಗೆಯ ಎತ್ತಿನ ಮೇಲೆ ವಿಪರೀತ ಭಾರ ಹೊರಿಸುವರು. ಅದನ್ನು ಯಾರೂ ಲೆಕ್ಕಿಸುವುದಿಲ್ಲ–ಅಂಥ ಎತ್ತಿನಂತೆ ನಾನು ಬಾಳಿದೆ. ಜನರು ಸುಮ್ಮ ಸುಮ್ಮನೆ ಕಾರಣವಿಲ್ಲದೆ ನನ್ನನ್ನು ನಿರ್ದಯರಾಗಿ ಕಾಡಿದರು. ನನಗೆ ಬೇರೆ ಬೇರೆ ವಿಕಾರಗಳನ್ನು ನಿಗ್ರಹಿಸಬೇಕಾಯಿತು. ಈ ಕಾರ್ಯದಲ್ಲಿ ಸದ್ಗುರು ನನಗೆ ಚನ್ನಾಗಿ ನೆರವಾದ. ಆತನ ನೆರವಿನಿಂದ ನಾನು 'ಹೆಣ್ಣು, ಹೊನ್ನು, ಮಣ್ಣು' ಎಂಬ ಮೂರು ಮಂದಿ ಪ್ರೀತಿಯ ಗೆಳೆಯರ ಮೋಹದಿಂದ ಮುಕ್ತನಾದೆ. ಆಮೇಲೆ 'ಕಾಮ, ಕ್ರೋಧ, ಮದ, ಮತ್ಸರ, ದಂಭ, ಅಹಂಕಾರ'ಗಳೆಂಬ ನನ್ನ ಆರು ವೈರಿಗಳನ್ನು ಕೊಲ್ಲಬಲ್ಲವನಾದೆ. ತರುವಾಯ ನಾನು ಏಳು ಮಂದಿ ಪಾಳೆಯಗಾರರನ್ನು ಹೊರದೂಡಿದೆ. ಸಪ್ತವ್ಯಸನಗಳೇ ಈ ಏಳು ಜನ; ಮತ್ತು ಕೊನೆಗೆ, ನನ್ನ ಸದ್ಗುರು ನನ್ನನ್ನು ಆಕ್ರಮಿಸಲಿರುವ ಅಷ್ಟಮದಗಳೆಂಬ ಎಂಟು ಮಂದಿ ಬಂಟರ ಸೊಂಟವನ್ನು ಮುರಿಸಿದ. ಈ ರೀತಿ, ಈ ಮೂರು, ಆರು, ಏಳು, ಎಂಟು ಮಂದಿ ಒಂದೊಂದು ಬಗೆಯಾಗಿ ಹೊರದೂಡಲ್ಪಟ್ಟರು; ಮತ್ತು ನಾನು ಈವಿಕಾರಗಳನ್ನೆಲ್ಲ ಗೆಲ್ಲಬಲ್ಲವನಾದೆ. ಅದೇ ಮೇರೆಗೆ ನನ್ನ ಸದ್ಗುರು, 'ನನ್ನ ಇಂದ್ರಿಯಗಳಿಗೆಲ್ಲ ಏಕಕಾಲಕ್ಕೆ ಕೀಲಿ ಹಾಕಿದ'. ನಾವು ಕಣ್ಣು, ಕಿವಿ, ನಾಲಿಗೆ ಇತ್ಯಾದಿ ಇಂದ್ರಿಯಗಳಲ್ಲಿ ಒಂದು ಕಾಲಕ್ಕೆ ಒಂದನ್ನೇ ಕಟ್ಟಲು ಯತ್ನಿಸುವೆವು. ಆದರೆ ಇವನು 'ಒಮ್ಮೆಲೆ ಎಲ್ಲವುಗಳಿಗೆ ಕೀಲಿ ಹಾಕಿದ'. ಅದೇ ಕಾಲಕ್ಕೆ ನಾನು ಭಗವಂತನನ್ನು ನನ್ನ ಹೃದಯಕುಹರದಲ್ಲಿ ಕಾಣಲು ಸಮರ್ಥನಾಗಬೇಕೆಂದು, ಅವನು ನನ್ನ ಶರೀರದ

ಒಂಬತ್ತು ಬಾಗಿಲುಗಳಿಗೂ ಕೀಲಿ ಹಾಕಿದ. ಆಮೇಲೆ ಅವನು ನನ್ನ ಪಾರಮಾರ್ಥಿಕ ಅನುಭವವನ್ನು ಸ್ಥಿರಗೊಳಿಸಿದ'. ತಮ್ಮ ಪಾರಮಾರ್ಥಿಕ ಅನುಭವವು ಸ್ಥಿರವಾಯಿತೆಂದು ಹೇಳಬಲ್ಲವರು ಅದೆಷ್ಟು ಜನ? ಅನೇಕರು ಕೆಲವೊಂದು ಬಗೆಯ ಅನುಭವವನ್ನು ಕೆಲಕಾಲ ಪಡೆವರು. ಆದರೆ ಅದು ಬಹುಕಾಲ ನಿಲ್ಲುವುದಿಲ್ಲ ಹಾಗೂ ಸ್ಥಿರವಾಗುವುದಿಲ್ಲ. ನನ್ನ ಸದ್ಗುರು ಮಾತ್ರ ನನ್ನ ಅನುಭವವನ್ನು ನನ್ನಲ್ಲಿ ದೃಢವಾಗಿ ನೆಲೆಗೊಳಿಸಿದನು. ಆ ಅನುಭವವು ನಾನು ಸಾಯುವವರೆಗೂ ಉಳಿಯಬಹುದು, ಅದಕ್ಕೂ ಪೂರ್ವದಲ್ಲಿ ಅದು ಅಳಿಯಲರಿಯದು. ಇದೇ ಅನುಭವವು ಸ್ಥಿರವಾಗುವುದರ ಅರ್ಥ. ನನ್ನ ಸದ್ಗುರು "ಕಾಳಕತ್ತಲೆಯ ಮನೆಯಲ್ಲಿಯಂತೆ, ನನಗೆ ಕೋಟಿ ಮಿಂಚಿನ ಬೆಳಕನ್ನು ತೋರಿದ. ವಿಶ್ವಪ್ರಳಯದ ಕಗ್ಗತ್ತಲೆಯು ಕವಿದಾಗ ಎಲ್ಲೆಡೆಯಿಂದ ಮಿಂಚಿನ ಬೆಳಕು ಹೊಳೆಯುವಂತೆ, ನಾನು ಧ್ಯಾನಕ್ಕೆ ಕುಳಿತಾಗ ಅಂಥ ಮಿಂಚಿನ ಪ್ರಕಾಶವನ್ನು ಕಂಡೆ" ಎಂದು ಕವಿಯು ಹೇಳುವನು.

ಕಳೆದ ಮಹಾಯುದ್ಧದ ಕಾಲಕ್ಕೆ ಭಗವಂತಪ್ಪ ನನ್ನೆಡೆ ಇರುವಾಗ, ಅವನು ನಿಂಬಾಳದಲ್ಲಿಯೂ, ಅಲಹಾಬಾದದಲ್ಲಿಯೂ ಮಾಡಿದ ಸೇವೆಯನ್ನು ಚನ್ನಾಗಿ ಶ್ಲಾಘಿಸುವುದಕ್ಕಾಗಿಯೆ ನಾನೀ ಪದವನ್ನು ಉದ್ದೇಶಪೂರ್ವಕವಾಗಿ ಆಯ್ದಿರುವೆ. ನನ್ನ ಪಾರಮಾರ್ಥಿಕ ಜೀವನದಲ್ಲಿ ನಾನು ನಾಲ್ಕು ವರುಷ ಇವನಿಂದ ತುಂಬ ಹಿರಿದಾದ ಪ್ರಚೋದನೆಯನ್ನು ಪಡೆದೆ. ಜರ್ಮನ್ನರು, ರಸಿಯನ್ನರು, ಅಮೇರಿಕನ್ನರು ಹಾಗೂ ಆಂಗ್ಲರು ಯುದ್ಧನಿರತರಾದಾಗ ಕಲಕತ್ತೆ, ವಿಶಾಖಪಟ್ಟಣಗಳಲ್ಲಾದಂತೆ ಅಲಹಾಬಾದವು ಪ್ರತಿಕ್ಷಣಕ್ಕೆ ಬಾಂಬು-ಪತನವನ್ನು ಕಾಯುತ್ತಿರುವಾಗ, ಅವನು ಪ್ರತಿದಿನ ಅಪರಾಹ್ನ ಎರಡರಿಂದ ಮೂರರ ವರೆಗೆ ಪರಮಾರ್ಥಪರ ಪದಗಳನ್ನು ಹಾಡುತ್ತಿದ್ದನು. ಅವನ ಭಾವವು ಉತ್ಕಟವಿರುವ ಮೂಲಕ ಅಂದಿನ ವರೆಗೆ ಪಡೆಯದ ಕೆಲ ನೂತನ ಅನುಭವಗಳನ್ನು ನಾವು ಅಂದು ಪಡೆಯಬಲ್ಲವರಾದೆವು. ಅವನ ಭಕ್ತಿಭಾವದ ಮೂಲಕವೇ ಆ ಅನುಭವಗಳು ನಮ್ಮೆದುರು ಹೊಳೆದವು. ಆದುದರಿಂದ ಅಂಥ ಪಾರಮಾರ್ಥಿಕ ಪ್ರಚೋದನಕ್ಕೆ ಕಾರಣನಾದ ಭಗವಂತಪ್ಪನಿಗೆ ನಾವು ನಮ್ಮ ಧನ್ಯವಾದಗಳನ್ನು ಅರ್ಪಿಸಲೇಬೇಕಲ್ಲವೇ?

ನಾನು ವಿವರಿಸಲಿರುವ ಮುಂದಿನ ಪದವು 'ಸೈಸೈಸದ್ಗುರುವಿನ ದಯದಿಂದೆಲ್ಲಾ ಮೈಮರೇತೆನೇ' ಎಂಬುದು. ಈ ಕವನದ ಕರ್ತನನ್ನು ಗುರುತಿಸುವುದು ಸ್ವಲ್ಪ ಬಿಗಿಯಾದುದು. ಅದರ ಕೊನೆಯ ಸಾಲು 'ಈಶನು ದತ್ತ ಮಹೇಶ ದಿಗಂಬರ' ಎಂಬುದಾಗಿರುವುದು. ಅದರಲ್ಲಿ 'ಈಶ'ನೆಂದರೆ ದೇವರಾಗಬಹುದು. ಇಲ್ಲವೆ ಕವಿಯ ಹೆಸರಾಗಬಹುದು. ಕವಿಯ ಹೆಸರಿನ ಉಲ್ಲೇಖವಿರದಿದ್ದರೂ ಪರವಾಯಿಲ್ಲ. ಅದೇನು ಅಷ್ಟು ಗಣ್ಯವಾದುದಲ್ಲ. ನಾನು ಈ ಪದವನ್ನು ಕ್ರಿ.ಶ. ೧೯೨೦ರಲ್ಲಿ

ಮೊದಲ ಸಲ, ಇಂಚಗಿರಿಯ ಸಂತರಾದ ಶ್ರೀ ಅಂಬುರಾವ ಮಹಾರಾಜರಿಂದ ಕೇಳಿದೆ. ನಾನು ಆಗ ಕೆಲ ಅನುಭವಗಳನ್ನು ಪಡೆದಿದ್ದೆ. ಅವುಗಳ ರಹಸ್ಯವು ನನಗೆ ತಿಳಿದಿರಲಿಲ್ಲ. ಯಾಕಂದರೆ ಅದನ್ನು ವಿಶದಗೊಳಿಸುವವರೂ ಯಾರು ಇರಲಿಲ್ಲ. ಯಾವ ಗ್ರಂಥದಿಂದಲೂ ಅದು ತಿಳಿಯುವಂತಿರಲಿಲ್ಲ. ಆದರೆ ಅವರದನ್ನು ಬಲ್ಲವರಾಗಿದ್ದರು; ಮತ್ತು ಅವರು ಈ ಪದದ ಅರ್ಥದ ಮರ್ಮವನ್ನು ನನಗೆ ಸರಿಯಾಗಿ ಅರುಹಿದರು. ಅವರು ಈ ಪದವನ್ನು ಬರೆದುಕೊಳ್ಳಲು ನನಗೆ ಹೇಳಿದರು. ಆ ಮೇರೆಗೆ ನಾನದನ್ನು ಬರೆದುಕೊಂಡೆ. ಅಂದಿನಿಂದ ಇಂದಿನವರೆಗೆ ಅದು ನನ್ನ ಬಳಿ ಇರುವುದು.

ಸದ್ಗುರು ತನ್ನ ಶಿಷ್ಯರಿಗಾಗಿ ಯಾವ ಯಾವ ಕಾರ್ಯಗಳನ್ನು ಮಾಡುತ್ತಾನೆ? ಈ ಪದವು ಅವುಗಳಲ್ಲಿಯ ಕೆಲ ಮಹತ್ವದ ವಿಷಯಗಳನ್ನು ತಿಳಿಸುವುದು. ತನ್ನ ಮನಸ್ಸನ್ನು ಸ್ಥಿರಗೊಳಿಸಿದುದು ಸದ್ಗುರು ಮಾಡಿದ ಮೊದಲನೆಯ ಕೆಲಸವೆಂದು ಕವಿಯು ಹೇಳುವನು. 'ನನ್ನ ಮನಸ್ಸು ಅದೆ ಪ್ರಸೂತವಾದ ಹೆಣ್ಣು ಹುಲಿಯಂತೆ ಭೀಕರವಾದುದು ಇದ್ದಿತು. 'ಈದ ಹುಲಿಯಂಥಾ ಮನಸ ಸಾದ ಮಾಡೀದನೇ'. ನನ್ನ ಸದ್ಗುರುಗಳ ಕರುಣದಿಂದ ಅದನ್ನು ಅಂಕೆಯಲ್ಲಿ ತರಲಾಯಿತು. ನಾನಿಲ್ಲಿ ನನ್ನ ಕಿರಿಯ ಅನುಭವವೊಂದನ್ನು ನಿರೂಪಿಸಬಯಸುವೆ. ಸುಮಾರು ಕ್ರಿ.ಶ. ೧೯೨೫ರಲ್ಲಿ ಪುಣೆಯ ಭಾಂಡಾರಕರ ಪ್ರಾಚ್ಯ ಸಂಶೋಧನ ಮಂದಿರದ ಎದುರಿರುವ ಗುಡ್ಡಗಳಲ್ಲಿ ನಾನು ಧ್ಯಾನಕ್ಕಾಗಿ ಹೋಗುತ್ತಿದ್ದೆ. ಎಷ್ಟೋ ವರುಷ ಹೀಗೆ ನಡೆದಿದ್ದಿತು. ಆದರೆ ಒಂದು ದಿನ, ನಾನು ಎತ್ತರವಾದ ದಿನ್ನೆಯ ಮೇಲಿಂದ ಕೆಳಗಿಳಿದು ಒಂದು ಹಳ್ಳದೆಡೆ ಬರುತ್ತಿರುವಾಗ, ಅಲ್ಲಿ ಅದೇ ಈದ ಒಂದು ಹೆಣ್ಣು ನಾಯಿಯು ಇದ್ದಿತು. ನಿತ್ಯದಂತೆ ನಾನು ಕೆಳಗೆ ಇಳಿದೆ. ಆದರೆ ನಾನು ಒಂದೆರಡು ಹೆಜ್ಜೆ ಕೆಳಗೆ ಇಳಿದ ಕೂಡಲೆ, ಆ ಹೆಣ್ಣು ನಾಯಿಯು ಅತಿ ಭಯಂಕರವಾದ ರೂಪವನ್ನು ತಳೆದು ನನ್ನೆಡೆ ಧಾವಿಸಿತು. ಆಗ ಕೂಡಲೆ ನಾನು ಹಿಂದಕ್ಕೆ ಸರಿದಿರದಿದ್ದರೆ ಅದು ನನ್ನನ್ನು ಹರಿದುಬಿಡಬಹುದಾಗಿತ್ತೆಂಬುದು ನನ್ನ ಭಾವನೆ. ನಾನು ಕೇವಲ ನಾಲ್ಕೈದು ಹೆಜ್ಜೆ ಕೆಳಗೆ ಇಳಿದಿದ್ದೆ. ಕೂಡಲೆ ನಾನು ಮೇಲಕ್ಕೆ ತೆರಳಿದೆ. ಆಗ ಅದು ನನಗೆ ಯಾವ ಬಗೆಯ ಅಪಾಯವನ್ನು ಮಾಡಲಿಲ್ಲ. ಈದ ಹುಲಿಯ ರೌದ್ರತೆಯು ಈ ಮಾದರಿಯದಿರುತ್ತದೆ. ಇಂಥ ಭಯಂಕರವಾದ ನಮ್ಮ ಮನಸ್ಸನ್ನು ಸದ್ಗುರುವು ನಿಯಂತ್ರಣದಲ್ಲಿ ತರುವ.

ಕವಿಯು ಹೇಳುವ ಎರಡನೆಯ ಮಾತು ಬಲು ಮಹತ್ವದ್ದಿರುವುದು. ಸಾಧಕನು ಬರೀ ಪರಮಾರ್ಥ ಸಾಧನದಿಂದಲೇ ತೃಪ್ತನಾಗಿ ವಿಶ್ರಮಿಸಕೂಡದು. ಅವನು ತನ್ನ ವಿರೋಧಕರನ್ನು ಬೌದ್ಧಿಕ ವಿವಾದದಲ್ಲಿ ಗೆಲ್ಲಬೇಕು. ತನ್ನ ಸದ್ಗುರು

ಅದನ್ನೇ ಮಾಡಿದನೆಂದು ಕವಿಯು ಹೇಳುತ್ತಾನೆ. ಜಗನ್ನಾಥದಾಸರೂ ಬೇರೆಡೆ ಇದೇ ಮಾತನ್ನು ಈ ರೀತಿ ಹೇಳಿರುವರು: "ನನ್ನ ಸದ್ಗುರುಗಳು ನನ್ನನ್ನು ಪಂಡಿತರಲ್ಲಿ ಮೊದಲನೆಯವನನ್ನಾಗಿ ಮಾಡಿದರಲ್ಲದೆ, ಪರಮಾರ್ಥ ಸಾಧಕರಲ್ಲಿಯೂ ಮೊದಲ ನೆಯವನನ್ನಾಗಿ ಮಾಡಿದರು." ಆದುದರಿಂದ, ನೀವು ನಿಮ್ಮ ಸಿದ್ಧಾಂತಗಳನ್ನು ಸಮರ್ಥಿಸಲು ಬಲ್ಲವರಿರಬೇಕು, ನಿಮ್ಮ ಬೌದ್ಧಿಕ ಪ್ರತಿಸ್ಪರ್ಧಿಗಳೊಡನೆ ವಾದದಲ್ಲಿ ಗೆಲ್ಲಲು ಸಮರ್ಥರಿರಬೇಕು ಎಂಬುದು ನಿಮ್ಮ ಪಾರಮಾರ್ಥಿಕ ಅನುಭವದ ಸತ್ಯತೆಯ ನಿಕಷಗಳಲ್ಲಿ ಒಂದು. 'ಸದ್ಗುರು ನನ್ನನ್ನು ವಾದಿ ವಿವಾದಿಗಳ ಕೂಡ ಕಾದಿ ಗೆಲಿಸಿದನು'. ಆಮೇಲೆ ಅವನು ನನ್ನನ್ನು ದ್ವೈತ ಅದ್ವೈತಗಳಾಚೆಗೆ ಒಯ್ದನೆಂದು ಕವಿಯು ಹೇಳುವನು. ನಾವು ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ– ಇತ್ಯಾದಿಗಳ ಬಗೆಗೆ ಯಾಕೆ ಗೋಳಾಡಬೇಕು? ಪರತತ್ವವು ಈ ಸಿದ್ಧಾಂತಗಳನ್ನೆಲ್ಲ ಮೀರಿ ನಿಂತಿರುವುದು. ಪರಮಾರ್ಥಪ್ರಿಯನು ಈ ಬೌದ್ಧಿಕ ವಿವಾದಗಳ ಗೊಡವೆಗೆ ಎಂದೂ ಹೋಗುವುದಿಲ್ಲ.

ಮೂರನೆಯದಾಗಿ, ಅನುಭವದ ಅನುಭಾವ–ವಿಷಯಕ ಅಂಗದ ದೃಷ್ಟಿಯಿಂದ ಅವನು ಭ್ರುಕುಟಿ ಮಧ್ಯದಲ್ಲಿ ಭಗವಂತನ ರೂಪವನ್ನು ನನಗೆ ಕಾಣಿಸಿದನಷ್ಟೇ ಅಲ್ಲದೆ, ತನ್ನ ಹಾಗೆ, ನಾನು ನನ್ನ ಸ್ವರೂಪವನ್ನು ಕಾಣುವಂತೆ ಮಾಡಿದನು. (ತನ್ನಂತೆ ತಾ ಮಾಡಿದನು). ಬಹುತರವಾಗಿ ಆತ್ಮದರ್ಶನವು ದೇವದರ್ಶನಕ್ಕಿಂತ ಮೇಲ್ತರಗತಿಯದಿರುವುದು. ಬೇರೊಂದು ಸಂದರ್ಭದಲ್ಲಿ ನಾನು 'ಸೋಽಹಂ' ಎಂಬುದು 'ತತ್ವಮಸಿ'ಗಿಂತಲೂ ಮೇಲಾದುದು ಎಂಬುದನ್ನು ಅರುಹಿರುವೆ. "ನಾನು ನನ್ನ ಸ್ವರೂಪವನ್ನು ಕಂಡಾಗ, ಆನಂದದಿಂದ ಕುಣಿಯತೊಡಗಿದೆ" ಎಂದು ಕವಿಯು ಹೇಳಿರುವನು. ಹಿಂದಿನ ಪದವೊಂದರಲ್ಲಿ, ಸಂತರು ಆಗಾಗ ನಲಿದಾಡುವುದನ್ನು ನಾವು ಉಲ್ಲೇಖಿಸಿರುವೆವು. ಅದೊಂದು ಪಾರಮಾರ್ಥಿಕ ಪ್ರಗತಿಯಲ್ಲಿಯ ಉನ್ನತತಮ ಮೆಟ್ಟಿಲು.

ಕೊನೆಗೆ, ಈ ಪದದಲ್ಲಿಯ ಇನ್ನೊಂದು ಮಹತ್ವದ ಅಂಶವನ್ನು ಉಲ್ಲೇಖಿಸ ಬಯಸುವೆ. ಇದು ಬೇರೆಡೆ ದೊರೆಯಲರಿಯದು. ಈ ಅಂಶವೆ ಕ್ರಿ.ಶ. ೧೯೨೦ರಲ್ಲಿ ನನ್ನ ಮನಸ್ಸನ್ನು ತುಂಬ ಸೆಳೆಯಿತು; ಮತ್ತು ನನ್ನ ಮೇಲೆ ಬಲು ಆಳವಾದ ಪ್ರಭಾವವನ್ನು ಬೀರಿತು. ಕವಿಯು ಹೇಳುವುದೇನೆಂದರೆ: ನನ್ನ ಗುರು ನನಗೆ ನಾದಗಳ ಸ್ವರೂಪವನ್ನು ಅರುಹಿದನಲ್ಲದೆ, ಶಬ್ದಗಳ ಸ್ವರೂಪವನ್ನು ಅರುಹಿದನಲ್ಲದೆ ಭಗ ವಂತನ ನಾಮಗಳ ರಹಸ್ಯವನ್ನು ತಿಳಿಸಿದನು. ಅರ್ಥಾತ್ ಅವನು ನನಗೆ ನಾದಗಳ ಅರಿವನ್ನು ನೀಡಿದನು. ಜನರು ಅನಾಹತನಾದಗಳನ್ನು ಕೇಳುವದುಂಟು. ಆದರೆ ಶಬ್ದವನ್ನು ಅನೇಕರು ಕೇಳಿರುವುದೇ ಇಲ್ಲ. ತುಂಬ ಪ್ರಗತರಾದ ಅನುಭಾವಿಗಳ

ಸಂಭಾಷಣದ ಅನುಭವದ ಬಗೆಗೂ ಇದೇ ಮಾತು ಹೇಳಲಾಗುವದು. ಅಂಥವರು ಪರತಮಸತ್ಯದೊಡನೆ ಸಂಭಾಷಣೆಯನ್ನು ನಡೆಯಿಸಬಹುದು. ಆದರೆ ಅದೊಂದು ಬೇರೆ ವಿಷಯ. ನಮಗೆ ಆ ಬಗೆಯ ಪ್ರತ್ಯಕ್ಷ ಅನುಭವವು ಲಭಿಸುವ ವರೆಗೆ ನಾವು ಅದನ್ನು ಕುರಿತು ಏನನ್ನೂ ಹೇಳಲರಿಯೆವು. ಈ ಮೇರೆಗೆ 'ನಾದ-ಶಬ್ದಗಳನ್ನಷ್ಟೇ ಅಲ್ಲ, ನಾನು 'ಈಶ', 'ದತ್ತ', 'ದಿಗಂಬರ' ಎಂಬ ದೇವರ ನಾಮಗಳನ್ನು ಕೂಡ ಕೇಳಿದೆನು. ಸದ್ಗುರು ನನ್ನೆದುರು ದೇವರ ಅನಂತ ನಾಮಗಳ ದೃಶ್ಯ ಪರಂಪರೆ ಯನ್ನು ಬಿಚ್ಚಿ ಇರಿಸಿದನು. ಅವುಗಳಲ್ಲಿ ಯಾವುದಾದರೊಂದನ್ನು ನಾನು ನನಗಾಗಿ ಯಾಗಲಿ, ಅನ್ಯರಿಗಾಗಿಯಾಗಲಿ ಆರಿಸಬಹುದು. ನನ್ನ ಸದ್ಗುರು ನನಗಾಗಿ ಇವನ್ನೆಲ್ಲ ಮಾಡಿದನು ಎಂದು ಕವಿಯು ಹೇಳುವನು. ಆದಿಯಲ್ಲಿ ಸೂಚಿಸಲಾದ ಮೇರೆಗೆ ಕವಿಯು ತನ್ನನ್ನು 'ಈಶ'ನೆಂದು ಸಂಬೋಧಿಸಿರಬಹುದು. ಆದುದರಿಂದ ಅವನು ಎರಡು ಮಾತುಗಳನ್ನು ಸೂಚಿಸಿರಬಹುದು. ತಾನು 'ಈಶ' ಎಂಬ ಮುದ್ರಿಕೆಯನ್ನು ತಳೆದಿರುವನು ಎಂಬುದು ಒಂದು. ದೇವರು ತನ್ನ ಮನಸ್ಸನ್ನು ದೇವರ ಈ ರೂಪ 'ದಲ್ಲಿ ಹಾಗೂ ತನ್ನ ರೂಪದ ದರ್ಶನದಲ್ಲಿ ಸ್ಥಿರಗೊಳಿಸಿರುವನು ಎಂಬುದು ಎರಡನೆ ಯದು. ಸದ್ಗುರು ಅವನಿಗೆ ಅನಾಹತನಾದವನ್ನು ಕೇಳಿಸಿದನು. ಇದೂ ಒಂದು ಬಿಗಿ ಯಾದ ಮಾತೇ ಸರಿ. ಆದರೆ ಆಮೇಲೆ ಅವನು ಕವಿಗೆ ಶಬ್ದಗಳನ್ನು ಕೇಳಿಸಿದನು; ಮತ್ತು ಕೊನೆಗೆ ದೇವರ ಬೇರೆ ಬೇರೆ ನಾಮಗಳ ರಹಸ್ಯಗಳನ್ನು ಅರುಹಿದನು.

ಇನ್ನು ನಾನು 'ಬೋಧಿಸೆನ್ನನು ಗುರುವೆ' ಎಂಬ ಪದವನ್ನು ವಿವರಿಸಲು ಪ್ರಾರಂಭಿಸುವೆ. ಸರ್ಪಭೂಷಣರ ಈ ಪದವು ಸುಮಾರು ಕ್ರಿ.ಶ. ೧೯೨೪-೨೫ರಲ್ಲಿ ನನ್ನ ಕೈಸೇರಿತು. ನಾನು ಅದೇ ನಿಂಬಾಳದಲ್ಲಿ ನನ್ನ ಹೊಸ ಮನೆಯನ್ನು ಕಟ್ಟಿಸಿದ್ದೆ. ಆಗ ಅದೇ ಹಳ್ಳಿಯ ಗುಂಡಪ್ಪನೆಂಬ ಒಬ್ಬ ಒಳ್ಳೆಯ ವೃದ್ಧಗೃಹಸ್ಥನು ನನ್ನೆಡೆ ಬರುತ್ತಿದ್ದನು. ಅವನೊಬ್ಬ ಒಳ್ಳೇ ಬೌದ್ಧಿಕ ಸಾಧಕನಿದ್ದನು. ಅವನು ಅಂದು ಈ ಪದ ವನ್ನು ನನಗೆ ಹಾಡಿ ತೋರಿಸಿದನು. ಅವನು ವೇದಾಂತದಲ್ಲಿ ಪಾರಂಗತನಿದ್ದನು. ನನ್ನ ಸದ್ಗುರುವಿನ ಛಾಯಾಚಿತ್ರದ ಎದುರು ನಾನು ಕರ್ಪೂರ ವನ್ನು ಹಚ್ಚಿದಾಗ, ಅವನು ಅದನ್ನು ಕುರಿತು ಈ ರೀತ ನುಡಿಯುತ್ತಿದ್ದ: "ರಾಯರೆ, ನೀವು ಅದೇತರಲ್ಲಿ ತೊಡಗಿರುವಿರಿ? ಏನನ್ನು ಮಾಡುತ್ತಿರುವಿರಿ? ಪ್ರತಿಮೆಯಿಂದ ಏನು ಪ್ರಯೋಜನ? ಕರ್ಪೂರವನ್ನು ಉರಿದು ಏನು ಫಲ? ನೀವು ಬುದ್ಧಿಜೀವಿಗಳಂತೆ; ನಿಮ್ಮ ಬುದ್ಧಿ ಯನ್ನು ಬಳಸಿ ಎಲ್ಲವನ್ನು ಅರಿತುಕೊಳ್ಳಬೇಕು. ಸುಮ್ಮನೆ ಕರ್ಪೂರವನ್ನು ಉರಿದು ಫಲವಿಲ್ಲ!" ಇವು ಆತನ ನುಡಿಗಳು. ಸರ್ಪಭೂಷಣರ ಶಬ್ದಗಳನ್ನು ಬಳಸಿ ಹೇಳ ಬೇಕಾದರೆ 'ವೇದಾಂತದೊಳು ಗೌಪ್ಯವಾದ ತತ್ವವನು ಸಂಪಾದಿಸಿ, ಸುಖಿಸೆಂದು ಅವನ ಹೇಳಿಕೆಯ ಸಾರವಿದ್ದಿತು. ಆಗ ಅದರ ಬಗೆಗೆ ನನಗೆ ಹೆಚ್ಚಿಗೇನೂ

ತಿಳಿದಿರಲಿಲ್ಲ. ತಿಳಿದಿದ್ದರೆ ನಾನು ಅವನ ಕೂಡ ಅದನ್ನು ಕುರಿತು ಚರ್ಚಿಸಲು ಯತ್ನಿಸಬಹುದಾಗಿತ್ತು. ಆಗ ನಾನು ಇಷ್ಟೇ ಅಂದುಕೊಂಡೆ: 'ಈ ಗೃಹಸ್ಥನು ಕೇವಲ ವೇದಾಂತಿಯಿರುವ. ಅವನು ವೇದಾಂತವನ್ನು ಸಮರ್ಥಿಸಲು ಈ ರೀತಿ ನುಡಿದರೆ ಪರವಾಯಿಲ್ಲ.' ಆದರೆ ಮುಂದೆ ಈ ಪದದಲ್ಲಿ ಅತ್ಯುತ್ತಮ ಯೋಗಿಕ ಹಾಗೂ ಸಾಕ್ಷಾತ್ಕಾರ ವಿಷಯಕ ವಿಚಾರಗಳಿದ್ದುದು ನನಗೆ ಕಂಡುಬಂದಿತು.

ಈ ಪದದಲ್ಲಿಯ ಯೋಗಿಕ ಅಂಶಗಳಾವವು? ಮೊದಲು ಕವಿಯು, ರವಿ (ಇಡಾ) ಹಾಗೂ ಶಶಿ(ಪಿಂಗಳಾ) ಎಂಬ ನಾಡಿಗಳ ಕ್ರಿಯೆಯನ್ನು ತಡೆದು, ಸುಷುಮ್ನೆಯ ನವಮಾರ್ಗವ ತೆರೆಯಲು ಹೇಳುತ್ತಾನೆ. ಈ ಸಂದರ್ಭದಲ್ಲಿ, ಯೋಗಿಕ ಅನುಭವಗಳಿಗೆ ಸಂಬಂಧಿಸಿದ ಕೆಲ ಶಾರೀರಿಕ ಸಂಗತಿಗಳನ್ನು ಅರುಹುವೆ. ಅರ್ಥಾತ್, ಈ ವಿಷಯವನ್ನು ನಾನು ಅನೇಕ ಹಿರಿಯ ವೈದ್ಯರೊಡನೆ ಹಾಗೂ ಶಸ್ತ್ರವೈದ್ಯರೊಡನೆ ಕೆಲಮಟ್ಟಿಗೆ ಚರ್ಚಿಸಿರುವೆ. ಆ ಚರ್ಚೆಯ ಫಲಿತಾಂಶ ವನ್ನು ನಾನು ತಮ್ಮೆದುರಿಗೆ ಇರಿಸುವೆ. ಕವಿಯು ಇಡಾ ಹಾಗೂ ಪಿಂಗಳಾ ಎಂಬ ಅನುಕಂಪನ ನರಗಳ ಕ್ರಿಯೆಗಳನ್ನು ನಿಲ್ಲಿಸಲು ಹೇಳಿರುವನು. ಪ್ರಾಣವಾಯು ಇಲ್ಲವೆ ಪ್ರಾಣತತ್ವ ಇಲ್ಲವೆ ಪ್ರಾಣಚೈತನ್ಯವನ್ನು ಹೊಸದಾಗಿ ತೆರೆಯಲಾದ ಸುಷುಮ್ನೆಯ ನವಮಾರ್ಗದೊಳಗಿಂದ ಮೇಲಕ್ಕೆ ಏರಿಸಲು ಬೋಧಿಸಿರುವನು. ಈ ಪ್ರಾಣಶಕ್ತಿಯು ಹೋಗುವುದೆಲ್ಲಿಗೆ? ಅದು ತ್ರಿಕೂಟವನ್ನು ಮುಟ್ಟುವುದು. ಅದನ್ನೆ ಕವಿಯು 'ಅವನಿ' ಎಂದು ಸಂಬೋಧಿಸಿರುವನು. ಇದು ಕವಿಯು ನಮಗೆ ಮಾಡಹೇಳಿದ ಒಂದು ಮಾತು. ಅವನು ಹೇಳುವ ಎರಡನೆಯ ಮಾತು ಬಲು ಮಹತ್ವದ್ದಿರುವುದು. ಅದಾವುದೆಂದರೆ: 'ನಾವು ಹಾದಿ ನಾಲ್ಕರ ನಡುವೆ ಇರುವ ವೇದಿಕೆಯ ಮೇಲೆ ಕೂಡಬೇಕು.' ಈ ನಾಲ್ಕು ದಾರಿಗಳಾವವು? ನಾವು 'ತ್ರಿಕೂಟ 'ವೆಂಬ ಶಬ್ದ ಕೇಳಿರುವೆವಷ್ಟೇ! ಅದೇ ಮೇರೆಗೆ ಶೃಂಗಾಟಕ–ಎಂದರೆ ನಾಲ್ಕು ದಾರಿ ಗಳು ಎಂಬುದನ್ನು ಕುರಿತು ಕೆಲವೊಂದು ಸಂಗತಿಗಳನ್ನು ಅರುಹಿರುವೆವಷ್ಟೇ. ಇದು ನಮಗೆ ಅಷ್ಟೊಂದು ಮಹತ್ವದ ವಿಷಯವಲ್ಲ. ಈ ದಾರಿಗಳು ಮೂರೋ ನಾಲ್ಕೋ ಎಂಬುದನ್ನು ವೈದ್ಯವಿಜ್ಞಾನಿಗಳೇ ನಿರ್ಣಯಿಸಲಿ. ಆದರೆ ನಾನು ಅವುಗಳ ಸ್ವರೂಪವನ್ನು ನಿರೂಪಿಸುವೆ. ಕ್ರಿ.ಶ.೧೯೧೭ರಲ್ಲಿ ನಾನು ನನ್ನ 'ಉಪನಿಷತ್ತಿನ ಮನಃ ಶಾಸ್ತ್ರ' ಎಂಬ ಲೇಖನವನ್ನು ಬರೆದಾಗ, ನಾನು ನನ್ನ ಗೆಳೆಯರೊಬ್ಬರಾದ ಡಾ. ಖೇಡಕರ ಎಂಬವರನ್ನು ಕಂಡೆ, ಮತ್ತು ಅವರಿಂದ ಈ ಶರೀರಶಾಸ್ತ್ರದ ಜ್ಞಾನವನ್ನು ಪಡೆದೆ. ಆಗ ಅವರು ನನಗೆ ಒಂದು ಪಾರ್ಶ್ವಸ್ಥ ಮಿದುಳಿನ ಕುಹರವನ್ನು (Lateral Ventrical)ಅರುಹಿದರು. ಆ ಕಾಲಕ್ಕೆ ನನಗೆ ಇನ್ನೊಂದು ಅಂಥ ಕುಹರವಿದ್ದುದು

ಗೊತ್ತಿರಲಿಲ್ಲ; ಮತ್ತು ಅಂಥದು ಇನ್ನೊಂದು ಇರುವುದೋ ಹೇಗೆಂಬುದನ್ನು ನಾನು ಅವರಿಗೆ ಕೇಳಲೂ ಇಲ್ಲ. ಆದರೆ, ಇತ್ತೀಚೆಗೆ, ಈ ಪಾರ್ಶ್ವಸ್ಥ ಮೆದುಳಿನ ಕುಹರವು ಒಂದೆ ಇರದೆ, ಬಲಗಡೆ ಒಂದು-ಹಾಗೂ ಎಡಗಡೆ ಒಂದು-ಈ ಬಗೆಯಾಗಿ ಎರಡು ಪಾರ್ಶ್ವಸ್ಥ ಕುಹರಗಳು ಇರುವವು ಎಂಬುದು ಕಂಡುಬಂದಿರುವುದು. ವೈದ್ಯ ಶಾಸ್ತ್ರವು ಇಲ್ಲಿಯ ವರೆಗೆ ಪ್ರಗತವಾಗಿದೆ. ಈ ಎರಡು ಕುಹರಗಳನ್ನು ಕಂಡುಹಿಡಿದ ಮೇಲೆ, ವೈದ್ಯರು ಇನ್ನೊಂದನ್ನು ಶೋಧಿಸಿದರು. ಅದನ್ನವರು ಮೂರನೆಯ ಕುಹರವೆಂದು ಕರೆಯದೆ ನಾಲ್ಕನೆಯ ಕುಹರವೆಂದು ಕರೆಯಬೇಕೆಂದು ಬಗೆದರು. ನಿಜವಾಗಿ ಅದೊಂದು ವಿಲಕ್ಷಣ ಮಾತು. ಈ ನಾಲ್ಕನೆಯ ಕುಹರವು ಮಿದುಳಿನ ಹಿಂಭಾಗದಲ್ಲಿ ಇರುವದು. ತೀರ ಇತ್ತೀಚೆಗೆ ಇನ್ನೊಂದು ಕುಹರವು ಶೋಧಿಸ ಲಾಗಿದೆ. ಅದನ್ನವರು ಮೂರನೆಯ ಕುಹರವೆಂದು ಕರೆವರು. ನಾನದನ್ನು ಕೇಂದ್ರ-ಇಲ್ಲವೆ ಮಧ್ಯ ಕುಹರವೆಂದು ಕರೆಯಬಯಸುವೆ. ಅವರ ಅಭಿಮತದ ಮೇರೆಗೆ ಈ ಕುಹರವು ನಾಲ್ಕನೆಯ ಕುಹರದ ನಂತರ ಶೋಧಿಸಲಾಯಿತು. ಈ ಕುಹರಗಳನ್ನು ಈ ರೀತಿ ಹೆಸರಿಸುವುದು, ಕರೆಯುವದು ಸರಿಯಲ್ಲವೆಂದು ನಾನು ಅವರೆಲ್ಲರಿಗೆ ಹೇಳಿದೆ. ನಾಲ್ಕನೆಯ ಕುಹರವನ್ನು ಮೂರನೆಯ ಕುಹರವೆಂದು ಕರೆಯ ಬೇಕೆಂದೂ, ಎರಡು ಪಾರ್ಶ್ವಸ್ಥ ಕುಹರಗಳ ನಡುವಿನ ಕುಹರವನ್ನು ಮೂರನೆಯ ಕುಹರವೆಂದು ಕರೆಯದೇ ಕೇಂದ್ರ-ಮಧ್ಯ-ಕುಹರವೆಂದು ಕರೆಯಬೇಕೆಂದೂ ಸೂಚಿಸಿದೆ. ಈ ವೇದಿಕೆಯನ್ನು ಸಾರಲು ನಾಲ್ಕುದಾರಿಗಳಿರುವವು: ಒಂದು ಮುಂದಿನದು, ಒಂದು ಹಿಂದಿನದು, ಎರಡು ಪಕ್ಕದವು. ಈ ರೀತಿ ನೀವು ಕೇಂದ್ರಸ್ಥಲವನ್ನು ಸಾರಬಹುದು. ನೀವು ಅದನ್ನು ವೇದಿಕೆಯೆಂದು ಕರೆಯಬಹುದು. ಪೀಠ ಇಲ್ಲವೆ ಪೀಠಿಕೆ ಎಂದು ಕರೆಯಬಹುದು ಅವನಿಯೆಂದೂ ಕರೆಯಬಹುದು. ನಿಮಗೆ ಒಪ್ಪಿತವಾದ ಯಾವುದೇ ಹೆಸರಿನಿಂದ ಕರೆಯಬಹುದು. ಅದೇ ತ್ರಿಕೂಟವೆಂಬ ವಿಶ್ರಾಂತಿಯ ಸ್ಥಳ. ಅದರೆಡೆ ನಾವು ಕೆಲ ಸಮಯದ ನಂತರ ಬರಬಹುದು. ಕವಿಯು ಹೇಳುವುದೇನೆಂದರೆ: "ನನ್ನ ಗುರು ಇಡಾ ಮತ್ತು ಪಿಂಗಳಾ ಇವುಗಳ ಕ್ರಿಯೆಯನ್ನು ತಡೆಯಲು ಹಚ್ಚಿದನಷ್ಟೇ ಅಲ್ಲದೆ ನಮ್ಮ ಅನುಭವವೆಲ್ಲ ಅದರಲ್ಲಿಯೇ ಸಂಗ್ರಹಿಸಲ್ಪಡಬೇಕೆಂದು ಅವನು ಕೇಂದ್ರಸ್ಥಲಕ್ಕೂ ಕೀಲಿ ಹಾಕಿದನು." ಈ ಕೇಂದ್ರಸ್ಥಲವೇ ಎಲ್ಲ ಅನುಭವಗಳ ಭಂಡಾರವಾಗಬಹುದು. ಅದರಿಂದ ಯಾವುದೂ ಹೊರಹೋಗಲರಿಯದು. ಅದೊಂದು ನಾಲ್ಕನೆಯ ಕುಹರದಲ್ಲಿಯ ವಿವರ. ಲಾಯಬ್ನಿಜ್(Leibnitz)ಎಂಬ ತತ್ವಜ್ಞನು ಜೀವಾಣುಗಳನ್ನು ಕುರಿತು ಈ ರೀತಿ ಹೇಳುತ್ತಿದ್ದನು: ಅವು ಪೂರ್ತಿಯಾಗಿ ಕಿಡಿಕಿಯಿಲ್ಲದವುಗಳೂ-ಸಮಗ್ರವಾದವುಗಳೂ-ಪರಿಪೂರ್ಣವಾದವುಗಳೂ-ಪ್ರತಿಯೊಂದು ತನ್ನಲ್ಲಿಯೆ ನೆಲೆಸುವಂತಹದೂ ಇರುವದಂತೆ. ಆದುದರಿಂದ ಈ ಕೇಂದ್ರಸ್ಥಲವೇ ಪೀಠಿಕೆ. ಆ ಸ್ಥಲದಲ್ಲಿಯೇ ನಮಗೆ ನಮ್ಮ

ಪೂರ್ಣಪಾರಮಾರ್ಥಿಕ ಅನುಭವವು ಲಭಿಸುವದು. ಕವಿಯು ಹೇಳುವದೇನೆಂದರೆ: "ನನ್ನ ಸದ್ಗುರು ಈ ನಾಲ್ಕು ದಾರಿಗಳ ಒಳಗಿರುವ ದಾರಿಯನ್ನು ನನಗಾಗಿ ತೆರೆದ; ಮತ್ತು ನನ್ನನ್ನು ವೇದಿಕೆಯ ಮೇಲೆ ಪಾರಮಾರ್ಥಿಕ ಸಂಗೀತದ ಆನಂದವನ್ನು ಅನುಭವಿಸುತ್ತ ವಿಶ್ರಮಿಸುವಂತೆ ಮಾಡಿದ." ಆಮೇಲೆ ಇದರ ಫಲವಾಗಿ, ಆ ವಿವರವು ಮುಚ್ಚಲಾಯಿತು; ಮತ್ತು ಅದರ ಮೂಲಕ ದೇಹ, ಮನಗಳ ಅರಿವೇ ಉಳಿಯಲಿಲ್ಲ. ಈ ಮೈ-ಮನಗಳ ಚಟುವಟಿಕೆಗಳ ಮರವೇ ಮುಕ್ತಿ ಎಂದು ಕವಿಯು ವೇದಾಂತಿಯಂತೆ ಉಸುರುತ್ತಾನೆ. ಮೈಮನಗಳ ಕ್ರಿಯೆಗಳ ಅಳಿವು, ಮುಕ್ತಿಯ ಕಲ್ಪನೆಯನ್ನು ವರ್ಣಿಸುವ ಅಭಾವಾತ್ಮಕ ರೀತಿ. ಈ ನಾಲ್ಕು ಕುಹರಗಳ ಒಳಗಿರುವ-ನಡುವಿರವ ಕೋಣೆಯಲ್ಲಿ-ವಿವರದಲ್ಲಿ-ಪರಮಾನಂದವನ್ನು ಅನುಭವಿಸುವುದು ಮುಕ್ತಿಯ ಭಾವಾತ್ಮಕ ಕಲ್ಪನೆ. ಆದರೆ ಕವಿಯು ಇಡಾ ಮತ್ತು ಪಿಂಗಳಾ ಇವುಗಳ ಕ್ರಿಯೆಗಳನ್ನು ಪಡೆಯುವದರಿಂದ (ಹಾಗೂ ಅಲ್ಲಿ ಸೇರಲಿರುವ ಸುಷುಮ್ನೆಯನ್ನು ಕೂಡ ನಿಲ್ಲಿಸುವದರಿಂದಲೇ ಸಂತುಷ್ಟನಾಗುವ) ಮತ್ತು ಮೈಮನಗಳ ಅರಿವಿನ ಅಭಾವದ ಆತ್ಮಸ್ಥಿತಿಯಿಂದಲೇ ಆನಂದಪಡುವನು. ಕಾರ್ಲಾಯಿಲ್‌ರವರ ಪರಿಭಾಷೆಯನ್ನು ಉಪಯೋಗಿಸುವುದಾದರೆ, ನಾವು ಅದನ್ನು ಅಜಾಗ್ರತ ಅರಿವೆಂದಲ್ಲ, ಆದರೆ ಅರಿವಿನ ಅಭಾವವೆಂದು ಬಣ್ಣಿಸಬಹುದು.

ಈ ಪದದಲ್ಲಿಯ ಅತಿಮಹತ್ವದ ಯೋಗಿಕ ಅಂಶದ ಬದಲಾಗಿ ಗುಂಡಪ್ಪನವರು ಅದರಲ್ಲಿಯ ವೇದಾಂತಿಕ ಅಂಶವನ್ನಷ್ಟೇ ಮೆಚ್ಚಿದರು. ಈ ಯೋಗಿಕ ಅಂಶವು ಅಷ್ಟೊಂದು ಅವರ ಮೆಚ್ಚುಗೆಯನ್ನು ಪಡೆಯಲಿಲ್ಲ. ಆಗ ನನಗೂ ಅದರ ಬಗೆಗೆ ಏನೂ ಗೊತ್ತಿರಲಿಲ್ಲ. ಕವಿಯು ಅದರಲ್ಲಿ ಅನುಭಾವವನ್ನು ಕುರಿತು ಮೂರು ನಾಲ್ಕು ಮಹತ್ವದ ಮಾತುಗಳನ್ನು ಅರುಹಿರುವನು. ನಾವು ಅನುಭವಿಸುವ ಅನಾಹತ ನಾದವು ನಿರ್ಗುಣವಿರುವುದೆಂದು ಕವಿಯು ಹೇಳುವನು. ಈ ಸಗುಣ-ನಿರ್ಗುಣಗಳ ಅರ್ಥವೇನು? ನಾದವೆಂದರೇನು? ಅದು ಸಗುಣವೊ? ನಿರ್ಗುಣವೊ? ಈ ಪ್ರಶ್ನೆಗಳನ್ನು ನಾವು ಉತ್ತರಿಸಲರಿಯೆವು. ನಮ್ಮ ದಾರಿಯಿಂದ ನಡೆಯುವದಷ್ಟೇ ನಮ್ಮ ಕೆಲಸ. ಅದು ಸಗುಣವೋ ನಿರ್ಗುಣವೋ ಎಂಬುದನ್ನು ಹೇಳುವುದು ಬಲು ಬಿಗಿಯಾದುದು. ಅದನ್ನು ಅನುಭವಿಸಿದವರೇ ಅದು ಸಗುಣವೋ ನಿರ್ಗುಣವೋ ಎಂಬುದನ್ನೂ ಹಾಗೂ ಸಗುಣ-ನಿರ್ಗುಣಗಳ ಪಾರಮಾರ್ಥಿಕ ವ್ಯಾಖ್ಯೆಯನ್ನೂ ಅಧಿಕಾರವಾಣಿಯಿಂದ ಹೇಳಬಲ್ಲರು. ಕವಿಯು ಅದನ್ನು ನಿರ್ಗುಣವೆಂದು ಕರೆವನು. ನೀವು 'ನೀಲಜ್ಯೋತಿ'ಯನ್ನು ಕಾಣಬೇಕೆಂಬುದು ಕವಿಯು ಹೇಳುವ ಎರಡನೆಯ ಮಾತು. ನಾನು ಈ ಮೊದಲು ಹೇಳಿದಂತೆ ಅದೊಂದು ಮಹತ್ವದ ಅನುಭವ. ಪಾರಮಾರ್ಥಿಕ ಬಣ್ಣವು ಸ್ವತಂತ್ರವಾಗಿ ಕಾಣಬಾರದು. ಆದರೆ ಅದು ಯಾವುದಾದ

ರೊಂದು ಪಾರಮಾರ್ಥಿಕ ವಸ್ತುವಿನೊಡನೆ ಸಂಬಂಧಿಸಿರಬೇಕು. ವರ್ಣಗಳ ಪರಿವರ್ತನವು ಓತಿಯಲ್ಲಿ ಕಾಣುವಂತೆ ಕಾಣಬೇಕು–ಬರೀ ಬಾನಿನಲ್ಲಿ ತೂಗಾಡುವಂತಲ್ಲ. ಹಾಗಾದರೇನೇ ಅವು ಹೆಚ್ಚು ಸ್ಥಿರತೆಯನ್ನು ಪಡೆವವು. ಈ ರೀತಿ ನೀಲಜ್ಯೋತಿಯನ್ನು ಕಾಣಬೇಕೆಂದು ಗುರುಸಿದ್ಧ ಕವಿಯು ಹೇಳುವನು.

ಕೊನೆಗೆ ಕವಿಯು ಸ್ವರ್ಗೀಯ ಹಾಲನ್ನು ಕುರಿತು–ಅಮೃತರಸವನ್ನು ಕುರಿತಲ್ಲ–ಕೆಲ ಸಂಗತಿಗಳನ್ನು ತಿಳಿಸುವನು. ಅದನ್ನು ನಾವು ಅಮೃತರಸವೆಂದೇ ಕರೆಯುವುದು ವಾಡಿಕೆ. ಕವಿಯು ಅದನ್ನು ಹಾಲೆಂದು ಕರೆಯುವನು. 'ಸಾಲಿಟ್ಟು ಸುರಿತಿರ್ಪ ಹಾಲನು ಸವಿದು!' ಎಂದು ಕವಿಯು ಹೇಳುವ. ಈ ಸಂದರ್ಭದಲ್ಲಿ ನನ್ನ ಸದ್ಗುರುಗಳು ಬಳಸುತ್ತಿರುವ ಪದವಿನ್ಯಾಸವೊಂದು ಜ್ಞಾಪಕಕ್ಕೆ ಬರುವದು: ನೀವು ಪಾರಮಾರ್ಥಿಕ ಧ್ಯಾನವನ್ನು ಚೆನ್ನಾಗಿ ಮಾಡಿದಾಗ– 'ಅಚ್ಚೇರ ಹಾಲು ಕುಡಧಾಂಗ ಆಗತದ' ಎಂದು ಅವರು ನುಡಿಯುತ್ತಿದ್ದರು. ಇದೊಂದು ಕೇವಲ ನಿರ್ದೇಶಕ ಮಾತು. ಪಾರಮಾರ್ಥಿಕ ಅನುಭವವು ಮನಸ್ಸನ್ನು ಗೆಲ್ಲಬಹುದಷ್ಟೇ ಅಲ್ಲದೆ, ಶರೀರವನ್ನು ಕೂಡ ಬಾಧಿಸಬಲ್ಲದು–ಗೆಲ್ಲಬಲ್ಲದು ಎಂದು ಮೇಲಿನ ಮಾತಿನ ರಹಸ್ಯ. ನಿಮಗೆ ಆಸನಗಳ ಅಗತ್ಯವಿಲ್ಲ, ಶ್ವಾಸನಿರೋಧದ ಆವಶ್ಯಕತೆಯಿಲ್ಲ. ಈ ಅಮೃತವು ಕೇಂದ್ರ ವಿವರದಿಂದ ಸಂತತವಾಗಿ ಸುರಿಯ ತೊಡಗಿತೆಂದರೆ ನೀವು ಮೇಲೆ ಕಾಣಿಸಿದ ಆ ಸಾಮರ್ಥ್ಯವನ್ನು ಪಡೆಯಬಹುದು. ನೀವದನ್ನು ಅಮೃತವೆಂದು ಕರೆಯಬಹುದು. ಸ್ವರ್ಗೀಯ ಹಾಲೆಂದು ಕರೆಯಬಹುದು. ಇಲ್ಲವೆ ಬೇರೆ ಯಾವುದೆ ಹೆಸರಿನಿಂದ ಕರೆಯಬಹುದು. ಈ ಅಮೃತವು ಶಾರೀರಿಕ, ಮಾನಸಿಕ ಹಾಗೂ ಬೌದ್ಧಿಕ ರೋಗಗಳನ್ನು ಕೂಡ ವಾಸಿಮಾಡಬಲ್ಲದು. ತರುವಾಯ ಕವಿಯು ಒಂದು ಬಲು ಮಹತ್ವದ ವಿಧಾನವನ್ನು ಮಾಡಿರುವನು. ಅದರ ಮೂಲಕವೇ ಗುಂಡಪ್ಪನವರಿಗೆ ಈ ಪದದ ಅರ್ಥವನ್ನು ನನಗೆ ಹೇಳಬೇಕೆಂದೆನಿಸಿತು. 'ಕುರುಹನು ತೋರದೆ ಬೆರೆದೇಕವಾಗೆಂದು' ಸದ್ಗುರು ಕವಿಗೆ ಬೋಧಿಸಿದನಂತೆ. ಯಾವ ಬಗೆಯ ಕುರುಹನ್ನು ಕಾಣುವುದರಲ್ಲಿಯೂ ಅರ್ಥವಿಲ್ಲ. ನೀವು ಪಡೆಯಬಯಸುವ ಅನುಭವದ ಕುರುಹೇನು? ನಿಮ್ಮ ಅನುಭವದಲ್ಲಿ ಕುರುಹೇ ಇರಕೂಡದು. ಅದು ಕುರುಹಿಲ್ಲದ ಹಾಗೂ ಲಕ್ಷಣವಿಲ್ಲದ ಪರತತ್ತ್ವವಿರಬೇಕು. ಇದೊಂದು ಬಲುಬಿಗಿಯಾದ ದಾರ್ಶನಿಕ ಪ್ರಶ್ನೆ. ಅದನ್ನು ಇಷ್ಟು ಸುಲಭವಾಗಿ ವಿಶದೀಕರಿಸಲು ಬರಲರಿಯದು. ಅದು ನಾದವು ಸಗುಣವೊ ನಿರ್ಗುಣವೊ ಎಂಬ ಪ್ರಶ್ನೆಯಂತೆಯೆ ಇರುವದು. 'ಪರತಮ ತತ್ತ್ವವು ಕುರುಹಿಲ್ಲದುದೊ' ಎಂಬ ಪ್ರಶ್ನೆಯು ಕೂಡ ಅಂತಹದೇ ಸರಿ. 'ಕುರುಹನು ತೋರದೆ ಬೆರೆದೇಕವಾಗಬೇಕು. ಬಯಲಿಗೆ ಬಯಲಾಗಬೇಕು.' ಈ ಪದವಿನ್ಯಾಸಗಳ ಅರ್ಥವೇನು? ಅರ್ಥಾತ್ ಇದು ತುಂಬ ಬಿಗಿಯಾದ ಪ್ರಶ್ನೆ. ಆದರೆ ಕವಿಯು

ವೇದಾಂತಿಯಿರುವುದರಿಂದಲೂ–ಅವನಲ್ಲಿ ಯೋಗಿಕ ವಿಚಾರಗಳು ವಿಪುಲವಿರುವು ದರಿಂದಲೂ, ಅವನು ಅನುಭಾವವನ್ನು ಬಣ್ಣಿಸುವ ಹಾಗೂ ತನ್ನ ಅನುಭವವು ಕುರುಹನು ತೋರದ ಪರತತ್ವದಿಂದ ಕೂಡಿರುವುದೆಂದೂ ಹೇಳಿರುವನು. ನಾನು ಇದನ್ನೆಲ್ಲ ನಿಮ್ಮೆದುರು ಇರಿಸಿರುವೆ. ನೀವು ನಿಮ್ಮ ಅನುಭವದ ಬೆಳಕಿನಲ್ಲಿ ಅದನ್ನು ಪರೀಕ್ಷಿಸಿ, ಅದರ ಸತ್ಯಾಸತ್ಯತೆಯನ್ನು ನಿರ್ಣಯಿಸಬಹುದು.

■■

ಪ್ರಕರಣ ಒಂಬತ್ತು

ಸಂತರ ಲಕ್ಷಣಗಳು

ಕರ್ನಾಟಕವು ಇತ್ತೀಚೆಗೆ ಸಮಗ್ರ ಹಾಗೂ ಸಂಯುಕ್ತ ರಾಜ್ಯವಾಗಿದೆ. ಕನ್ನಡಿಗರ ಅನುಭಾವವನ್ನು ಕುರಿತು ನನ್ನ ಉಪನ್ಯಾಸಗಳು ಈ ರಾಜ್ಯದ ಎಲ್ಲ ಭಾಗಗಳಲ್ಲಿಯ ಸಂತರ ಸಾಹಿತ್ಯದ ಅಭ್ಯಾಸವನ್ನು ಒಳಗೊಂಡಿವೆ. ಈ ಸಂತರು ಮೈಸೂರು, ರಾಣೇಬೆನ್ನೂರು, ಬೆಂಗಳೂರು, ರಾಯಚೂರು, ವಿಜಾಪುರ, ಧಾರವಾಡ ಇಲ್ಲವೆ ಬೇರೆ ಯಾವುದೇ ಪ್ರದೇಶದವರಿರಲಿ, ಅವರೆಲ್ಲರ ಅನುಭಾವವನ್ನು ಇವುಗಳಲ್ಲಿ ಬಳಸಲಾಗಿದೆ. ಆದುದರಿಂದ ಈ ಉಪನ್ಯಾಸಗಳಲ್ಲಿ ಎಲ್ಲ ಭಾಗದಲ್ಲಿಯ ಹಿರಿಯ ಕನ್ನಡ ಸಂತರ ಪಾರಮಾರ್ಥಿಕ ಅನುಭವದ ಒಂದು ಬಗೆಯ ಸಂಚಯವೇ ನೆಲೆಸಿರುವದೆನ್ನಲು ಅಡ್ಡಿಯಿಲ್ಲ.

ಇಂದು ನಾನು ಸಂತರ ಲಕ್ಷಣಗಳನ್ನು ಕುರಿತು ಮಾತಾಡಲಿರುವೆ. 'ಸಂತ'ನೆಂಬುವವನು ಎಲ್ಲ ಧರ್ಮಗಳಲ್ಲಿ ಸಮನಾಗಿ ಕಾಣಬರುವ ಒಂದು ಅಸಾಮಾನ್ಯ ವ್ಯಕ್ತಿ. ಅರ್ಥಾತ್ ಕೆಲಧರ್ಮಗಳು ಸಂತರ ಒಂದು ಅಂಗವನ್ನು ಪ್ರಧಾನವೆಂದು ಬಗೆದರೆ, ಬೇರೆ ಕೆಲವು ಬೇರೆ ಅಂಗವನ್ನು ಇಲ್ಲವೆ ಅಂಗಗಳನ್ನು ಪ್ರಧಾನವೆಂದು ಎಣಿಸುವವು. ಆದರೆ ಎಲ್ಲ ಧರ್ಮಗಳಲ್ಲಿಯ ಸಾಧುತ್ವದ ಸಾರವು ಒಂದೇ ಇರುವುದು–ಅದೇ ಇರುವುದು. ನಾನು ಹಿಂದೀ ಹಾಗೂ ಮಹಾರಾಷ್ಟ್ರ ಸಂತರನ್ನು ಕುರಿತು ಬರೆದ ಎರಡು ಗ್ರಂಥಗಳಲ್ಲಿ ಈ ವಿಷಯವನ್ನು ಕನ್ನಡ ಸಂತರನ್ನು ಅನುಲಕ್ಷಿಸಿ ಚರ್ಚಿಸಲಿರುವೆ. ಮನುಜನು ಸಂತರ ಹಿರಿಮೆಯನ್ನು ಪಡೆಯಬೇಕಾದರೆ, ಅವನು ಕೆಲ ವಿಷಯಗಳನ್ನು ತ್ಯಜಿಸಬೇಕಾಗುವುದು. ಈವರೆಗೆ ಬಾಳಿದ ಹಿರಿಯ ಸಂತರಲ್ಲಿ ಪ್ರತಿಯೊಬ್ಬರು ಭಗವಂತನ ಬಗೆಗೆ ತುಂಬ ಆಳವಾದ ಭಕ್ತಿಭಾವವನ್ನು ತಳೆದಿದ್ದರು ಎಂಬುದೇನೋ ನಿಜ. ಆದರೂ ಅವರಲ್ಲಿ ತ್ಯಜಿಸಲು ಬೇಕಾದ ಕೆಲ ಲೋಪದೋಷಗಳು ನೆಲೆಸಿದ್ದವು. ನನ್ನ ಸ್ನೇಹಿತರೊಬ್ಬರು ನನ್ನ ಸೂಚನೆಗಳ ಮೇರೆಗೆ, ಕೆಲ ಹಿರಿಯ ಸಂತರನ್ನು ಕುರಿತು ಒಂದು ವಿನೋದಾತ್ಮಕ ಕವನವನ್ನು ರಚಿಸಿರುವರು. ಅದರಲ್ಲವರು ಪಾರಮಾರ್ಥಿಕ ಜೀವನದಲ್ಲಿ ನಾವು ತ್ಯಜಿಸಬೇಕಾದ ಆಯಾ ಸಂತರಲ್ಲಿಯ ಕೆಲದೋಷಗಳನ್ನು ಗುರುತಿಸಿರುವರು.

ಒಮ್ಮೊಮ್ಮೆ, 'ಶ್ರೇಷ್ಠತಮ ಸಂತರಾರು?' ಎಂಬ ಪ್ರಶ್ನೆಯು ಉದ್ಭವಿಸುವದುಂಟು. ನನ್ನ ಸ್ನೇಹಿತರ ಕವನವು ವಿನೋದಾತ್ಮಕವಿರುವುದರಿಂದ, ನೀವದನ್ನು ಬಹಳ ಗಂಭೀರವಾದುದೆಂದು ಭಾವಿಸಬಾರದು. ಅದರಲ್ಲಿ ಉದಹರಿಸಲಾದ ಸಂತರೆಲ್ಲ ನಿಜವಾಗಿ ಹಿರಿಯರು. ಆದರೆ ಅವರ ಜೀವನದಲ್ಲಿಯ ಕೆಲ ತ್ಯಾಜ್ಯವಾದ ಅಂಶ ಗಳನ್ನಷ್ಟೇ ಅಲ್ಲಿ ಎತ್ತಿ ತೋರಿಸಲಾಗಿದೆ.

'ಭಕ್ತನೆಂದರೆ ಭಕ್ತ ಪ್ರಹ್ಲಾದನು' ಎಂಬ ಅವರ ಪದದಲ್ಲಿ ಹತ್ತು ಜನ ಸಂತರ ಉಲ್ಲೇಖವಿರುವುದು. ಅವರಲ್ಲಿ ಪ್ರಹ್ಲಾದನೇ ಶ್ರೇಷ್ಠತಮನು ಎಂಬುದನ್ನು ಕವಿಯು ಕಾಣಿಸಬಯಸುವನು. ನಾವು ಧ್ರುವನನ್ನು ತೆಗೆದುಕೊಂಡರೆ, ಅವನು ಪರಮಾರ್ಥದೆಡೆ ಹೊರಳಿದುದು 'ಕೋಪ'ದ ಮೂಲಕ. ಅವನ ಮಲತಾಯಿಯು ಮತ್ಸರದಿಂದ ಆತನನ್ನು ತಂದೆಯ ತೊಡೆಯ ಮೇಲಿಂದ ತಳ್ಳಿದ ಕಾರಣ ಅದು ಜನಿಸಿತು. ಅದರ ಫಲವಾಗಿ ಅವನು ಕಾಡಿಗೆ ತೆರಳಿದನು ಮತ್ತು ಲೌಕಿಕ ರಾಜ್ಯದ ಬದಲಾಗಿ ಪಾರಮಾರ್ಥಿಕ ರಾಜ್ಯವನ್ನು ಪಡೆದನು. ಇದು ಧ್ರುವನ ಕಥೆ, ನಾರದನು ಹಿರಿಯ ಸಂಗೀತಗಾರನು. ಅವನು ಭಗವಂತನ ನಾಮವನ್ನು ಸ್ವಯಂಪ್ರೇರಣೆ ಯಿಂದ ಸಹಜವಾಗಿ ಹೊಗಳುತ್ತಿದ್ದನು. ಆದರೆ ಅದರ ಜತೆಯಲ್ಲಿ ಹೋದಲ್ಲೆಲ್ಲ ಕಲಹದ ಬೀಜಗಳನ್ನು ಬಿತ್ತುವ ದೋಷವೊಂದು ಅವನಲ್ಲಿ ನೆಲೆಸಿದ್ದಿತು. ಆದುದರಿಂದ ಕಲಹ ಪ್ರಚೋದನವು ಸಾಧುತ್ವದ ಅಂಶವಾಗಲರಿಯದು.

ಆ ಮೇಲೆ ನಾವು, ವ್ಯಾಸ-ವಸಿಷ್ಠ-ಶುಕಈ ಮೂವರು ಪುರಾಣ ಲೇಖಕರೆಡೆ ಬರುವೆವು. ವ್ಯಾಸನು ಹದಿನೆಂಟು ಪುರಾಣಗಳನ್ನು ರಚಿಸಿದನೆಂದು ಹೆಸರಾಗಿರುವ ನೆಂಬುದೊಂದು ನಾಡನುಡಿಯಾಗಿರುವುದು. ಆದರೆ ಅದರಿಂದ ಅವನು ಭಗವಂತ ನನ್ನು ಸಾಕ್ಷಾತ್ಕರಿಸಿಕೊಳ್ಳಲರಿಯದ ಮೂಲಕ ಸಮಾಧಾನ ಪಡೆಯಲಿಲ್ಲ. ಆತನೇ ಒಪ್ಪಿಕೊಂಡಮೇರೆಗೆ ಅವನಲ್ಲಿ ಭಗವದ್ಭಕ್ತಿಯೆ ಇರಲಿಲ್ಲವಂತೆ. ವಸಿಷ್ಠನು ಒಂದು ಅತಿ ಮಹತ್ವದ ಗ್ರಂಥವನ್ನು ಬರೆದನು. ಅದೊಂದು ದಾರ್ಶನಿಕ ಸಾಹಿತ್ಯದಲ್ಲಿ ಬೆಳಗುವ ರತ್ನವೇ ಆಗಿರುವುದು. ಅವನೆದುರು ಜ್ಞಾನಕರ್ಮ ಸಮುಚ್ಚಯದ ಒಂದು ವಿಶೇಷ ಗುರಿ ಇದ್ದಿತು. ಅವನು ಜ್ಞಾನ-ಕರ್ಮ-ಸಮುಚ್ಚಯವನ್ನೇ ಒತ್ತಿ ಹೇಳಿದನು. ಭಕ್ತಿಯನ್ನು ಕುರಿತು ಅವನು ಹೆಚ್ಚಾಗಿ ಬರೆಯಲಿಲ್ಲ. ಆದುದರಿಂದ ಅವನಿಗೆ ಶ್ರೇಷ್ಠತಮ ಸಂತರ ಬಿರುದು ದೊರೆಯಲರಿಯದು. ಶುಕನು ಬರಿಯ ಜ್ಞಾನಕ್ಕೇ ಪ್ರಾಧಾನ್ಯವನ್ನು ಕೊಟ್ಟನು. ಆದರೆ ಕೇವಲ ಜ್ಞಾನವೇ ನಿಮ್ಮನ್ನು ಪರಮಾತ್ಮನೆಡೆ ಒಯ್ಯಲರಿಯದು. ಆದುದರಿಂದ ಶುಕನಾಗಲಿ, ವಸಿಷ್ಠನಾಗಲಿ, ವ್ಯಾಸನಾಗಲಿ, ಶ್ರೇಷ್ಠತಮ ಸಂತರ ವರ್ಗದವರೆಂದು ಎನಿಸಿಕೊಳ್ಳಲರಿಯರು. ಆ ಮೇಲೆ ನಾವು ಮಹಾಭಾರತದಲ್ಲಿಯ ಸಾಧುಪುರುಷರೆಡೆ ತೆರಳಬಹುದು. ಅವರಲ್ಲಿ

ಭೀಷ್ಮಪಿತಾಮಹನು ಒಬ್ಬನು. ಅವನಿಗೆ ರಾಜಶಕ್ತಿಯ ನೆರವಿದ್ದಿತು. ಅವನು ಪಾಂಡವ-ಕೌರವರೀರ್ವರ ಪಿತಾಮಹನಿದ್ದರೂ, ಅವನಿಗೆ ದುರ್ಯೋಧನನನ್ನೇ ಅವಲಂಬಿಸಬೇಕಾಗಿದ್ದಿತು. ಅವನು ಕೌರವರ ದುಷ್ಕರ್ಮಗಳನ್ನು ಸಮರ್ಥಿಸಿದನು. ಆದುದರಿಂದ, ತನ್ನ ಜೀವಿತದ ಕೊನೆಯ ಭಾಗದಲ್ಲಿ ಅವನು ಶರಪಂಜರದಲ್ಲಿ ಮಲಗಿದಾಗ ಪರಮಾತ್ಮನ ನಾಮವನ್ನು ನೆನೆದರೂ ಅದರಿಂದ ಅವನಿಗೆ ವಿಶೇಷ ಪ್ರಯೋಜನವೇನೂ ಆಗಲಿಲ್ಲ. ಅರ್ಜುನನು ರಾಜಯೋಗಿಯೆಂದು ಬಗೆಯಲಾಗಿರುವದು. ಭಗವದ್ಗೀತೆಯಲ್ಲಿ ಅವನ ಮುಖದಿಂದ ಕೆಲ ಒಳ್ಳೆಯ ಮಾತುಗಳನ್ನು ನುಡಿಸಲಾಗಿದೆ. ಆದರೆ ಅವನು ಶ್ರೀಕೃಷ್ಣನನ್ನು ತನ್ನ ಗೆಳೆಯನೆಂದು ಕರೆಯುವ ಧಾರ್ಷ್ಟ್ಯವನ್ನು ಮಾಡಿದನು:

"ಸಖೇತಿ ಮತ್ವಾಪ್ರಸಭಂ ಯುದಕ್ತಂ। ಹೇ ಕೃಷ್ಣ, ಹೇ ಯಾದವ, ಹೇ ಸಖೇತಿ॥' "ನಾನು ನಿನ್ನನ್ನು ಗೆಳೆಯನೆಂದು ಬಗೆದು ನಿನ್ನನ್ನು ಎಲೈ ಕೃಷ್ಣನೇ! ಯಾದವನೇ! ಸಖನೇ! ಎಂದು ಸಂಬೋಧಿಸಿದೆನು." ಎಂದು ಆತನೇ ಹೇಳಿರುವ. ಶ್ರೀಕೃಷ್ಣನು ಅವನ ನಿಜವಾದ ಸಖನಿದ್ದರೂ, ಅರ್ಜುನನು ಆತನಿಗೆ ಸಾರಥ್ಯವನ್ನು ಕೊಡಲು ಹಿಂಜರಿಯಲಿಲ್ಲ. ಆದುದರಿಂದ ಅವನು ಹಿರಿಯ ಭಕ್ತನೆಂದು ಬಗೆಯಲು ಬರಲರಿಯದು.

ಇದಾದ ಮೇಲೆ ನಾವು ವಾಲ್ಮೀಕಿ ಹಾಗೂ ಹನುಮಂತರೆಡೆ ಬರುವೆವು. ವಾಲ್ಮೀಕಿಯು ತನ್ನ ದೇಹದ ಸುತ್ತಲು ಹುತ್ತನ್ನು ಬೆಳೆಯಗೊಟ್ಟನು. ಆದರೆ ಅವನ ಉಪಪ್ರಜ್ಞೆಯು ಅವನೆಸಗಿದ ದುಷ್ಕರ್ಮಗಳಿಂದ ಮೊದಲೇ ಬಾಧಿತವಾಗಿದ್ದು ದರಿಂದ, ಅವುಗಳ ಸಂಸ್ಕಾರಗಳನ್ನು ತನ್ನ ಮನಸ್ಸಿನಿಂದ ಪೂರ್ತಿಯಾಗಿ ತೊಡೆದುಬಿಡಲು ಅವನು ಸಮರ್ಥನಾಗಲಿಲ್ಲ. ದುಷ್ಕರ್ಮಗಳು ಈರುಳ್ಳಿಯ ವಾಸನೆಯನ್ನು ಪಡೆದಿರುವವು. ಇದನ್ನು ಕುರಿತು ರಾಮಕೃಷ್ಣ ಪರಮಹಂಸರೊಮ್ಮೆ ಈ ರೀತಿ ಹೇಳಿದರು: 'ಒಂದು ಪಾತ್ರೆಯಲ್ಲಿ ಒಮ್ಮೆ ಈರುಳ್ಳಿಗಳನ್ನು ಕುದಿಸಿದರೆ ಅದನ್ನು ಒಡೆದು ಎಸೆಯಲೇಬೇಕು. ಇಲ್ಲದಿದ್ದರೆ ಅದರ ವಾಸನೆಯು ಹಾಗೆಯೆ ಉಳಿಯುವುದು. ಈರುಳ್ಳಿಯನ್ನು ಬೆಳ್ಳಿಯ ಇಲ್ಲವೆ ಬಂಗಾರದ ಪಾತ್ರೆಯಲ್ಲಿ ಕುದಿಸಿದರೂ ಅದರಿಂದ ವಿಶೇಷ ಭೇದವೇನೂ ಆಗಲರಿಯದು.' ಇದು ವಾಲ್ಮೀಕಿಯ ಕುಂದು. ಹನುಮಂತನು ಭಕ್ತರಲ್ಲಿ-ಸಂತರಲ್ಲಿ ತುಂಬ ಮೇಲಿನ ಸ್ಥಾನವನ್ನು ಪಡೆದಿರುವನೇನ್ನೋ ನಿಜ. ಅದರ ಬಗೆಗೆ ಸಂದೇಹವೇ ಇಲ್ಲ. ಆದರೆ ಅವನಲ್ಲಿಯೂ ಒಂದು ದೋಷವು ನೆಲೆಸಿರುವುದು. ಅವನಲ್ಲಿ ಕಪಿಗಳ ಚಾಪಲ್ಯವಿದ್ದಿತು. ತನ್ನ ಒಡೆಯನಿಗೆ ಅವನು ತನ್ನನ್ನು ಸರ್ವಭಾವದಿಂದ ಒಪ್ಪಿಸಿದ್ದನು. ಅವನಲ್ಲಿ ಕಾಮವಾಸನೆಯು ಎಷ್ಟೂ ಇರಲಿಲ್ಲ. ಆದರೆ ಅವನು ಅಯೋಧ್ಯೆಗೆ ತೆರಳಿದಾಗ

ಸೀತೆಯು ಅವನಿಗೆ ರತ್ನಹಾರವೊಂದನ್ನು ಕೊಟ್ಟಕಾಲಕ್ಕೆ, ಆ ರತ್ನಗಳಲ್ಲಿ ರಾಮನಿರುವನೋ ಹೇಗೆಂಬುದನ್ನು ನೋಡಲು ಅವನು ಪ್ರತಿಯೊಂದನ್ನು ಒಡೆಯಲು ಪ್ರಾರಂಭಿಸಿದ ಸಂಗತಿಯನ್ನು ತಾವು ಅರಿತಿರುವಿರಷ್ಟೇ! ಅದೊಂದು ಕಪಿಸದೃಶ ನಡತೆ. ಈ ದೋಷವೊಂದನ್ನು ಬಿಟ್ಟರೆ, ಹನುಮಂತನಲ್ಲಿ ಬೇರಾವ ಕೊರತೆಯೂ ಇರಲಿಲ್ಲ. ಆದರೆ ಪ್ರಹ್ಲಾದನಲ್ಲಿ ಭಕ್ತಿಭಾವವು ಸುಮಾರಾಗಿ ಜನನದ ಪೂರ್ವದಿಂದಲೂ ನೆಲೆಸಿದ್ದಿತು. ಅವನು ಒಳಹೊರಗೆ ಭಗವಂತನನ್ನು ಕಾಣುತ್ತಿದ್ದನು ಮತ್ತು ಭಗವಂತನಿಗೆ ಸರ್ವಸಮರ್ಪಣ ಮಾಡುವುದೇ ಅವನ ಒಂದೇ ಒಂದಾದ ಪ್ರಧಾನಕಾರ್ಯವಾಗಿದ್ದಿತು. ಈ ಸರ್ವಾರ್ಪಣದಲ್ಲಿಯೇ ಅವನ ಶ್ರೇಷ್ಠತಮ ಸಾಧುತ್ವವು ನೆಲೆಸಿದ್ದಿತು.

ಕೆಲವರುಷಗಳ ಪೂರ್ವದಲ್ಲಿ, ಈ ಕವನವನ್ನು ನನಗೆ ಓದಿತೋರಿಸಿದಾಗ ನಾನು ಭಾಗವತವನ್ನು ಅಷ್ಟೊಂದು ಗಾಢವಾಗಿ ಓದಿರಲಿಲ್ಲ. ಆ ಪುರಾಣದ ಕೊನೆಯಲ್ಲಿ, ಕೃಷ್ಣ–ಉದ್ಧವರ ಒಂದು ಮಹತ್ವದ ಸಂಭಾಷಣೆಯು ಬಂದಿರುವುದು. ನಾನದನ್ನು ಅರಿತಿದ್ದರೆ, ಈ ಕವನದಲ್ಲಿ ಸ್ವಲ್ಪ ಬದಲಾಗಬಹುದಾಗಿತ್ತು. ಕೃಷ್ಣನು ಪರಂಧಾಮವನ್ನೈದುವ ಸಮಯಕ್ಕೆ, ಅವನು ಅರ್ಜುನನನ್ನು ಕೂಡ ದೂರ ಕಳುಹಿದನು; ಮತ್ತು ಉದ್ಧವನೇ ಅವನ ಬಳಿಯಿರುವ ಹಾಗೂ ಅವನಿಂದಗಲುವ ಕೊನೆಯ ಪುರುಷನು. ಉದ್ಧವನೇ ಹಿರಿಯ ದಾರ್ಶನಿಕನ, ಸ್ವಾರ್ಥತ್ಯಾಗಿಯ ಹಾಗೂ ಭಗವದ್ಭಕ್ತನ ಪರಿಪೂರ್ಣವಾದ ಮಾದರಿ. ಆದುದರಿಂದ ಭಕ್ತರಲ್ಲಿ ಸಂತರಲ್ಲಿ ಉದ್ಧವನೇ ಶ್ರೇಷ್ಠತಮನೆಂದೆನ್ನಬಹುದು. ಬೇರೆ ಸಂತರಲ್ಲಿ ಕಾಣಿಸಲಾದ ಕೆಲ ಕುಂದುಗಳು, ನಾವವನ್ನು ತ್ಯಜಿಸಬೇಕೆಂದೇ ಇಲ್ಲಿ ಅರುಹಲಾಗಿವೆಯೆ ಹೊರತು ಆ ಸಂತರನ್ನು ಹಳಿಯಲಲ್ಲ ಎಂಬುದನ್ನು ದಯವಿಟ್ಟು ಗಮನಿಸಬೇಕು.

ನಾನು ಆರಿಸಿದ ಮುಂದಿನ ಪದವು, ಪುರಂದರದಾಸರ 'ಅಂಜಿಕಿನ್ಯಾತಕಯ್ಯಾ ಸಜ್ಜನರಿಗೆ?' ಎಂಬುದು. ಅದರಲ್ಲಿ ದಾಸರು ಸಂಜೀವರಾಯರ–ಹನುಮ, ಭೀಮ, ಹಾಗೂ ಮಧ್ವಾಚಾರ್ಯ–ಎಂಬ ಮೂರು ಅವತಾರಗಳನ್ನು ಉಲ್ಲೇಖಿಸಿರುವರು. ಸಂಜೀವರಾಯರನ್ನು ನಾವು ಪ್ರಾಣದೇವ ಇಲ್ಲವೆ ವಾಯು ದೇವ ಎಂತಲೂ ಕರೆಯಬಹುದು. ಈ ಮೂವರು ಅವರ ಅವತಾರರೆಂದು ಬಗೆಯಲಾಗಿರುವರು. ದಕ್ಷಿಣ ದೇಶದ ವೈಷ್ಣವರಲ್ಲಿ ತುಂಬ ಬಳಕೆಯಲ್ಲಿರುವ ಕೆಳಗಿನ ಸ್ತೋತ್ರದಲ್ಲಿ ಮೇಲ್ಕಾಣಿಸಿದ ಮೂರು ಹೆಸರುಗಳು ಬಂದಿರುವವು.

ಪ್ರಥಮೋ ಹನುಮಾನ್ನಾಮ, ದ್ವಿತೀಯೋ ಭೀಮ ಏವ ಚ।
ಪೂರ್ಣಪ್ರಜ್ಞಸ್ತೃತೀಯಸ್ತು, ಭಗವತ್ಕಾರ್ಯಸಾಧಕಾ: ॥

'ಹನುಮಂತನು ಮೊದಲನೆಯವನು; ಭೀಮನು ಎರಡನೆಯವನು; ಮತ್ತು ಪೂರ್ಣಪ್ರಜ್ಞನು ಮೂರನೆಯವನು. ಇವರೆಲ್ಲ ಭಗವಂತನ ಸಂದೇಶವಾಹಕರು.'

ಪ್ರಾಣದೇವರ ಸ್ಮರಣದಿಂದ ಅಂಜಿಕೆ, ಪಾಪ, ತಾಪಗಳು ಅಳಿಯುತ್ತವೆ ಎಂದು ದಾಸರಾಯರು ಈ ಪದದಲ್ಲಿ ಅರುಹಿರುವರು. ಈ ಪದದ ವಿವರಣದ ಕೊನೆಗೆ ನಾನು ಈ ವಿಷಯದೆಡೆ ಬರುವೆ. ಹನುಮಂತನ ಸ್ಮರಣವು ಪಾಪವನ್ನೆಲ್ಲ ಸಹಜವಾಗಿ ಅಳಿಸಬಲ್ಲದೆಂಬುದು ಎಲ್ಲರೂ ಒಪ್ಪಿದ ಮಾತು. ಆದರೆ ಭೀಮನ ಸ್ಮರಣೆಯಿಂದ ತಾಪವು ಅಳಿಯುವುದು; ಮತ್ತು ಅವನು 'ರೋಮರೋಮಕೆ ಕೋಟಿಲಿಂಗ ಉದುರಿಸಿದ' ಎಂದು ದಾಸರಾಯರು ಹೇಳುವರು. ಈ ಸಂದರ್ಭದಲ್ಲಿ ಭೀಮನ ಬಗೆಗೆ ಒಂದು ವಿಲಕ್ಷಣವಾದ ಕಥೆಯು ಪ್ರಚಲಿತವಿರುವದು. ಅದನ್ನು ಕುಮಾರವ್ಯಾಸನು ತನ್ನ ಭಾರತದಲ್ಲಿ ಹೇಳಿದ್ದಾನೆ. ಕುಮಾರವ್ಯಾಸನು ಅರುಹಿದ ಕಥೆಯಲ್ಲಿ ರಾಜಸೂಯ ಯಜ್ಞವು ಉಲ್ಲೇಖಿಸಲಾಗಿದೆ. ಆದರೆ ಮಹಾಭಾರತದಲ್ಲಿ ಅಶ್ವಮೇಧದ ಉಲ್ಲೇಖವಿದೆ. ಮಹಾಭಾರತವು ಅಶ್ವಮೇಧ ಯಜ್ಞಕ್ಕಾಗಿ ತರಬೇಕಾದ ಕೆಲವೊಂದು ಬಗೆಯ ವಿಶಿಷ್ಟ ಪ್ರಾಣಿಗಳನ್ನು ಉಲ್ಲೇಖಿಸಿದರೆ, ಕುಮಾರವ್ಯಾಸನು 'ಪುರುಷಮೃಗ' ಇಲ್ಲವೆ 'ಪುರುಷಪಶು'ವನ್ನು ಉಲ್ಲೇಖಿಸಿರುವನು. ರಾಜಸೂಯ ಯಜ್ಞದಲ್ಲಿ ಭೋಜನಮಾಡಲಿರುವ ಜನರ ಎಂಜಲವನ್ನು ಬಳಿಯಲು ಈ 'ಪಶು'ವನ್ನು ತರಬೇಕಾಗಿತ್ತಂತೆ. ಆದರೆ ಅದನ್ನು ತರುವದೆಂತು? ಆ ಪಶು ಒಳ್ಳೆಯ ಪ್ರಬಲ ಪ್ರಾಣಿ. ಅದರ ಮುಂದೆ ಭೀಮನು ತೀರ ಕಃಪದಾರ್ಥನು. ಆದುದರಿಂದ ಭೀಮನನ್ನು ಹನುಮಂತನೆಡೆ ಕಳುಹಿಸಲಾಯಿತು. ಅವನು ಅಲ್ಲಿಗೆ ಹೋದಾಗ ಹನುಮಂತನು ತನ್ನ ಬಾಲವನ್ನು ಪಸರಿಸಿ ಕುಳಿತಿದ್ದನು. ಮುಂದಿನ ಕಥೆಯನ್ನು ಎಲ್ಲರು ಬಲ್ಲರು. ಹನುಮಂತನು ಭೀಮನೊಡನೆ ಹೋರಾಡಿ ಅವನನ್ನು ಗೆದ್ದನು. ಭೀಮನು ಸೋತಾಗ ಶರಣಾಗತನಾದಾಗ ಹನುಮಂತನು ಅವನಿಗೆ ತನ್ನ ಏಳೆಂಟು ಕೂದಲಗಳನ್ನು ತೆಗೆದುಕೊಳ್ಳಲು ಹೇಳಿದನು ಮತ್ತು ಅವನಿಗೆ ಮುಂದಿನ ವರಕೊಟ್ಟನು: 'ನೀನು ಈ ಕೂದಲುಗಳಲ್ಲಿಯ ಒಂದನ್ನು ಇರಿಸಿದಲ್ಲಿ ಕೋಟಿ ಲಿಂಗಗಳು ಉದ್ಭವಿಸಬಹುದು.' ಯಜ್ಞಕ್ಕಾಗಿ ಬೇಕಾದ ಪುರುಷಮೃಗವು ಅತಿ ಭಯಂಕರವಾದ ಪ್ರಾಣಿಯಿದ್ದುದರಿಂದ ಅದನ್ನು ಅಷ್ಟೊಂದು ಸುಲಭ ರೀತಿಯಿಂದ ತರುವಂತಿರಲಿಲ್ಲ. ಆದುದರಿಂದ ಭೀಮನು ಪ್ರತಿಯೊಂದು ಕೂದಲನ್ನು ಇರಿಸಿದಾಗ ಕೋಟಿಲಿಂಗಗಳು ಉದ್ಭವಿಸಲು ಶಿವಭಕ್ತ ಇದ್ದ 'ಪುರುಷಮೃಗ'ವು ಆ ಲಿಂಗಗಳಿಗೆ ಪ್ರದಕ್ಷಿಣೆ ಹಾಕುವುದು ತನ್ನ

ಕರ್ತವ್ಯವೆಂದು ಬಗೆಯಿತು; ಮತ್ತು ಹಾಗೆ ಮಾಡಲು ಪ್ರಾರಂಭಿಸಿತು. ಈ ರೀತಿ ಅದನ್ನು ಕ್ರಮೇಣ ಯಜ್ಞದ ಸಮೀಪಕ್ಕೆ ತರಲಾಯಿತು. ಇದು ಕುಮಾರವ್ಯಾಸನು ಅರುಹಿದ ಕಥೆ.

ಮಹಾಭಾರತವು ಸೌಗಾಂಧಿಕ ಕುಸುಮವನ್ನು ಕುರಿತು ಬೇರೊಂದು ಕಥೆಯನ್ನು ಹೇಳುವುದು. ದ್ರೌಪದಿಯು ಒಮ್ಮೆ ಅತಿ ಕಂಪುಳ್ಳ ಕುಸುಮವೊಂದನ್ನು ಮೂಸಿ ನೋಡಿದಳಂತೆ. ಮಹಾಭಾರತದಲ್ಲಿ ಅದನ್ನು ಸೌಗಂಧಿಕ ಕುಸುಮವೆಂದು ಕರೆಯಲಾಗಿದೆ. ಅದು ಕುಬೇರನ ಉದ್ಯಾನದಿಂದ ಬಂದಿತ್ತಂತೆ. ಆದುದರಿಂದ ಕುಬೇರನೆಡೆಗೆ ಹೋಗಿ ಅವನ್ನು ತರಲು ಭೀಮನನ್ನು ಕಳುಹಲಾಯಿತೆಂದು ಮಹಾಭಾರತದಲ್ಲಿ ಅರುಹಲಾಗಿದೆ. ಭೀಮನು ಅದನ್ನು ಕಾಯುತ್ತಿರುವ ಯಕ್ಷ-ರಾಕ್ಷಸರನ್ನು ಗೆದ್ದು, ಆ ಸೌಗಂಧಿಕ ಪುಷ್ಪವನ್ನು ತಂದನಂತೆ. ಆದರೆ 'ರೋಮ ರೋಮಕೆ ಕೋಟಲಿಂಗದ' ಕಥೆಯು ಅಲ್ಲಿ ಹೇಳಲಾಗಿಲ್ಲ. ಇನ್ನು ಈ ಎರಡೂ ಕಥೆಗಳನ್ನು ಕೂಡಿಸುವುದು ಸಾಧ್ಯವಿದೆ. ಸೌಗಂಧಿಕ ಪುಷ್ಪವು ಕುಬೇರನ ಉದ್ಯಾನ ದಲ್ಲಿದ್ದಿತು. ಅದನ್ನು ಯಕ್ಷ-ರಾಕ್ಷಸರು ಕಾಯುತ್ತಿದ್ದರು. ಈ ಹೂಗಳನ್ನು ದ್ರೌಪದಿಗಾಗಿ ತರಲು ಭೀಮನು ಅಲ್ಲಿಗೆ ಹೋಗಿ, ಯಕ್ಷ-ರಾಕ್ಷಸರನ್ನು ಗೆಲ್ಲಬೇಕಾಗಿತ್ತು. ಕುಬೇರನ ಶಿವಭಕ್ತನಿದ್ದುದರಿಂದ ಅವನ ಸೇವಕರಾದ ಯಕ್ಷ-ರಾಕ್ಷಸರೂ ಶಿವಭಕ್ತರಿದ್ದರು. ಭೀಮನು ಹನುಮಂತನಿಂದ ಆ ಕೂದಲುಗಳನ್ನು ತಗೆದುಕೊಂಡು ಅಲ್ಲಿಗೆ ಹೋಗಿ, ಅವನ್ನಲ್ಲಿ ಇರಿಸಿದ ಕೂಡಲೆ, ಅಲ್ಲಿ ಕೋಟಲಿಂಗಗಳು ಜನಿಸಿದವು. ಅದನ್ನು ಕಂಡು ಅವರು ಗಾಬರಿಗೊಂಡರು. ಅವರು ಕುಬೇರನಲ್ಲಿಗೆ ಹೋಗಿ ಅಲ್ಲಿ ಒದಗಿದ ಸಂಗತಿಯನ್ನು ಅವನಿಗೆ ತಿಳಿಸಿದರು; ಮತ್ತು ಸೌಗಂಧಿಕ ಕುಸುಮವನ್ನು ಒಯ್ಯಲು ಓರ್ವ ಮಹನೀಯರು ಬಂದಿರುವರು ಎಂದು ಕೇಳಿದರು. ಕುಬೇರನಿಗೆ ಅದನ್ನು ಕೇಳಿ ಸಂತೋಷವಾಯಿತು; ಮತ್ತು ಅವನು ಭೀಮನಿಗೆ ಸೌಗಂದಿಕ ಕುಸುಮವನ್ನು ಕೊಟ್ಟನು. ಈ ಬಗೆಯಾಗಿ 'ರೋಮರೋಮಕೆ ಕೋಟಲಿಂಗ'ದ ಸಂಗತಿಗೆ ಹಿನ್ನೆಲೆಯಾಗಿ ಬಹುಶಃ ಈ ದ್ವಿವಿಧ ಕಥೆಯು ಇರಬಹುದು. ಅದರ ಬಗೆಗೆ ನಿಶ್ಚಿತವಾಗಿ ಹೀಗೆಯೆ ಎಂದು ಹೇಳುವದು ಬಿಗಿಯಾದುದು. ಕುಮಾರವ್ಯಾಸನ ಕಥೆಯು ಒಂದನ್ನು ಹೇಳಿದರೆ ಮಹಾಭಾರತದ ಕಥೆಯು ಬೇರೊಂದನ್ನು ಹೇಳುವುದು. ಆದರೆ ಅವೆರಡನ್ನು ಹೊಂದಿಸುವುದು ಸಾಧ್ಯವಿದೆ.

ಇನ್ನು ಸಂಜೀವರಾಯರ ಮೂರು ಅವತಾರಗಳನ್ನು ಕುರಿತು ವಿಚಾರಿಸುವಾ! ಹನುಮಂತನು ಅವತಾರನೆಂಬುದು ಸುಪರಿಚಿತವಾದುದು. ಮಧ್ವಾಚಾರ್ಯರು ಪ್ರಾಣದೇವರ ಇಲ್ಲವೆ ವಾಯುದೇವ ಅವತಾರವೆಂದು ಪುರಂದರದಾಸರು ಹೇಳು ವರು. ಅವರು ಅದಕ್ಕೂ ಮುಂದೆ ಹೋಗಿ, ಹನುಮ-ಭೀಮರು ಮಧ್ವಾಚಾರ್ಯರ

ಅವತಾರ ಎಂದು ಅರುಹುವರು: (೧) ರಾಮಾವತಾರದೊಳೊಮ್ಮೆ...... ಹನುಮನಾದ್ಯೊ (೨) ಕೃಷ್ಣಾವತಾರದೊಳಗೊಮ್ಮೆ ದಿಟ್ಟ ಕಲಿ ಭೀಮನಾದ್ಯೊ (೩) ಧಾರುಣಿಯೊಳು ನರನಾಗಿ ಜನಿಸಿದ್ಯೊ' ಎಂದು ದಾಸರಾಯರು ತಮ್ಮ ಒಂದು ಪದದಲ್ಲಿ ಅರುಹಿರುವರು. ತಮ್ಮ ಹಿರಿಯ ಗುರುಗಳಾದ ಮಧ್ವಾಚಾರ್ಯರ ಈ ಬಗೆಯ ಹೊಗಳಿಕೆಯನ್ನು ಒಳಗೊಂಡ ದಾಸರಾಯರ ಆ ಪದವನ್ನು ಬಹುತರವಾಗಿ ತಮ್ಮಲ್ಲಿಯ ಕೆಲವರು ಓದಿರಬಹುದು. ಈ ಪದಕ್ಕೆ ಸಂಬಂಧಿಸಿದ ಬೇರೆ ಕೆಲ ವಿಷಯಗಳು ವಿಚಾರಯೋಗ್ಯವಾದವುಗಳು. ದಾಸರಾಯರು ಮಧ್ವಾಚಾರ್ಯರನ್ನು ವಿಠ್ಠಲಭಕ್ತರೆಂದು ಕರೆದಿರುವರು. ಇದರರ್ಥವೇನು? 'ಪುರಂದರ ವಿಠ್ಠಲನ ಪಾದಪೂಜೆಯ ಮಾಳ್ಪ ಗುರು ಮಧ್ವರಾಯ' ಎಂದವರು ಈ ಪದದಲ್ಲಿ ಅರುಹಿರುವರು. ಬೇರೊಂದು ಪದದಲ್ಲಿಯೂ ಅವರು ಅದೇ ಬಗೆಯಾಗಿ 'ಪುರಂದರ ವಿಠ್ಠಲನ ದಾಸನಾದ್ಯೋ ಮಧ್ವರಾಯ!' ಎಂದು ಸಂಬೋಧಿಸಿರುವರು. ಇನ್ನೊಂದು ಅತಿ ಮಹತ್ವದ ಪದದಲ್ಲಿ "ನಮ್ಮ ಪರಮಗುರು ಮಧ್ವಾಂತರಾತ್ಮಕ ವಿಠ್ಠಲ" ಎಂಬುದಾಗಿ ದಾಸರು ಉಸುರಿರುವರು. ಇವು ಮಧ್ವಾಚಾರ್ಯರನ್ನು ಕುರಿತು ಪುರಂದರದಾಸರು ಆಡಿದ ಕೆಲ ಮಾತುಗಳು.

ಇಲ್ಲಿ ಮಧ್ವಾಚಾರ್ಯ–ವಿಠ್ಠಲರಲ್ಲಿಯ ಸಂಬಂಧವೇನು? ಹಾಗೂ ಮಧ್ವಾಚಾರ್ಯರು ವಿಠ್ಠಲಭಕ್ತರಾಗಿರಬಹುದಾದರೆ ವಿಠ್ಠಲಮಂದಿರದ ರಚನೆಯ ಕಾಲವನ್ನು ನಾವು ಎಷ್ಟು ಹಿಂದಕ್ಕೆ ಒಯ್ಯಬಲ್ಲೆವು? ಎಂಬ ಪ್ರಶ್ನೆಯು ಉದ್ಭವಿಸುವದು. ಮೈಸೂರ ಗೆಝೆಟಿಯರದಲ್ಲಿ (೧೯೨೯) ಮಧ್ವಾಚಾರ್ಯರ ವೃತ್ತಾಂತ ಬಂದಿದೆ. ಅದರಲ್ಲಿ ಅವರ ಜನ್ಮವರುಷ ಶಾ. ಶಕ ೧೧೬೦ ಎಂದು ಕೊಡಲಾಗಿದೆ. ಯಾದವ ವಂಶದ ವೀರಸೋಮೇಶ್ವರ ಎಂಬ ಅರಸನು ವಿಠ್ಠಲ ಮಂದಿರಕ್ಕೆ ಶಾ.ಶ. ೧೧೫೯ರಲ್ಲಿ ಒಂದು ಸತ್ತಿಯನ್ನು ಕೊಟ್ಟಿರುವನು. ಆದುದರಿಂದ ಅದು ಮಧ್ವಾಚಾರ್ಯರ ಜನನದ ಪೂರ್ವದಲ್ಲಿ ಒಂದು ವರುಷದ ಮಾತಾಗುವುದು. ಪಂಢರಪುರದಲ್ಲಿರುವ 'ಚೀರಾ ಅಂಶೀಚಾ ಲೇಖ' 'ಎಂಬತ್ತುನಾಲ್ಕರ ಬರಹ' ಎಂಬ ಹೆಸರಿನ ಒಂದು ಶಿಲಾಲೇಖವು, ವಿಠ್ಠಲನ ಬಗೆಗೆ ಜ್ಞಾತವಾಗಿರುವ ಒಂದು ಮಹತ್ವದ ವಿಷಯ. ಅದರ ಕಾಲ ಶಾ.ಶ. ೧೧೯೫. ಇನ್ನು 'ಎಂಬತ್ತುನಾಲ್ಕರ ಬರಹ'ವೆಂದರೇನು? ಇತ್ತೀಚೆಗೆ ಎರಡು–ಮೂರು ತಿಂಗಳ ಪೂರ್ವದಲ್ಲಿ ತರುಣ ಪ್ರಾಧ್ಯಾಪಕರಾದ ಡಾ. ಎಸ್.ಜಿ.ತುಳಪುಳೇಯವರು ಇಂದು ನವಸಂಶೋಧನವನ್ನು ಮಾಡಿರುವರು. ಅವರು ಈ ಶಾ.ಶ.೧೧೯೫ರ ಪೂರ್ವದಲ್ಲಿ 'ಎಂಬತ್ತು ನಾಲ್ಕು' ವರುಷದ, ಅಂದರೆ ಶಾ.ಶ.೧೧೧೧ರ ಒಂದು ಶಿಲಾಶಾಸನವನ್ನು ಕಂಡುಹಿಡಿದಿರುವರು. ಅದರಲ್ಲಿ ವಿಠ್ಠಲನ ಉಲೇಖವಿರುವದು. ವಿಠ್ಠಲನ ಮೂಲ ಮಂದಿರವು ಬಹುತರವಾಗಿ ಶಾ.ಶ. ೧೧೧೧ರಲ್ಲಿ ಕಟ್ಟಲಾಗಿರಬಹುದು. ಐತಿಹಾಸಿಕ ಹಾಗೂ

ಸುವ್ಯವಸ್ಥಿತವಾಗಿ ಮಾಡಲಾದ ಪ್ರಾಚೀನವಸ್ತುವಿಷಯಕ ಸಂಶೋಧನಗಳು ಅರುಹುವ ವಿಠ್ಠಲ ಮಂದಿರದ ಸ್ಥಾಪನೆಯ ಪ್ರಾಚೀನತಮ ವರುಷವು ಅದೇ ಇರುವದು. ಪ್ರಾ. ಕೆ.ಜಿ.ಕುಂದಣಗಾರರವರು ಇನ್ನೊಂದು ಮಹತ್ವದ ಸೂಚನೆ ಯನ್ನು ಮಾಡಿರುವರು. ಅದೂ ಒಂದು ವಿಚಾರಿಸತಕ್ಕ ವಿಷಯ. ಅವರು ಕ್ರಿ.ಶ.೪೩೮ರ ಒಂದು ತಾಮ್ರಪಟವನ್ನು ಶೋಧಿಸಿರುವರು. ಅದರಲ್ಲಿ ಒಬ್ಬ ಅರಸನು ಪಾಂಡುರಂಗಪಲ್ಲಿ ಎಂಬ ಗ್ರಾಮವನ್ನು ಈ ಗುಡಿಗೆ ದತ್ತಿಯಾಗಿ ಕೊಟ್ಟಿರುವನು. ಇದರ ಸತ್ಯತೆಯ ಬಗೆಗೆ ಮತಭೇದವಿರುವುದು. ಆದರೆ ಈ ವಿವಾದವನ್ನು ಎಬ್ಬಿಸಿದ ಕೆಲ ಮರಾಠಿ ಪಂಡಿತರು 'ಪಾಂಡುರಂಗಪಲ್ಲಿ' ಎಂಬುದರ ಅರ್ಥವನ್ನು ಅರಿತಂತೆ ಕಾಣುವುದಿಲ್ಲ. ಆದರೆ ನಾವದರ ಅರ್ಥವನ್ನು ತುಂಬ ಸಹಜವಾಗಿ ಅರಿಯಬಲ್ಲೆವು. ತೆಲುಗು ಹಾಗೂ ಕನ್ನಡ ನುಡಿಯಲ್ಲಿ 'ಪಲ್ಲಿ' ಎಂದರೆ 'ಹಳ್ಳಿ'-ಗ್ರಾಮ. ಆದುದರಿಂದ ಮೇಲ್ಕಾಣಿಸಿದ ಕ್ರಿ.ಶ. ೪೩೮ರ ತಾಮ್ರಪಟದ ಮೇರೆಗೆ, ಆ ಹಳ್ಳಿಯನ್ನು ಒಬ್ಬ ಅರಸನು ಪಾಂಡುರಂಗನಿಗೆ ದತ್ತಿಯಾಗಿ ಕೊಟ್ಟಿದ್ದನು. ಆದರೆ ಈ ಪ್ರಶ್ನೆಯು ಇನ್ನೂ ಪೂರ್ತಿಯಾಗಿ ನಿರ್ಣಯಿಸಲಾಗಿರುವದಿಲ್ಲ. ಆದುದರಿಂದ ನಾನು ಈ ಚರ್ಚೆಯಲ್ಲಿಯೆ ಸೇರಬಯಸುವದಿಲ್ಲ. ಆದರೆ ವಿಠ್ಠಲಮಂದಿರವು ಮಧ್ವಾಚಾರ್ಯರ ಪೂರ್ವದಲ್ಲಿ ಸ್ಥಾಪಿಸಲಾಗಿದೆ ಎಂದು ಸಪ್ರಮಾಣವಾಗಿ ಕಾಣಿಸಬಲ್ಲ ಪ್ರತ್ಯಕ್ಷ ಸಂಶೋಧನವು ಪಂಢರಪುರದಲ್ಲಿ ತೀರ ಇತ್ತೀಚೆಗೆ ಆಗಿದೆ ಎಂಬುದು ಮಾತ್ರ ಸ್ಪಷ್ಟ.

ಇದಾದ ಮೇಲೆ, ಮೂರು ಅವತಾರಗಳ ಎರಡನೆಯ ವಿಷಯದೆಡೆ ಬರುವೆವು. ಇದರ ಪ್ರಾಚೀನತಮ ಉಲ್ಲೇಖವು, ನಮಗೆ ಋಗ್ವೇದದಲ್ಲಿಯ 'ಬಳಿತ್ಥಾಸೂಕ್ತ'ದಲ್ಲಿ ದೊರೆಯುವದು. ಇದನ್ನು ವೈಷ್ಣವರನೇಕರು ಬಲ್ಲರು. ಆದರೆ ಈ ಸೂಕ್ತವನ್ನು ಸೂಕ್ಷ್ಮವಾಗಿ ಓದಿದರೆ, ಅದು ಭಾಷ್ಯಕಾರರಾದ ಸಾಯಣಾ ಚಾರ್ಯರ ಅಭಿಪ್ರಾಯದ ಮೇರೆಗೆ, ಅಗ್ನಿಯ ಮೂರು ಅವತಾರಗಳನ್ನು ಅರುಹುವದು: (೧)ಭೂಮಂಡಲದಲ್ಲಿಯ ಅಗ್ನಿ; (೨)ಅಂತರಿಕ್ಷದಲ್ಲಿಯ ಅಗ್ನಿ; ಹಾಗೂ (೩)ಸ್ವರ್ಗೀಯ ಅಗ್ನಿ. ಇವೇ ಅಗ್ನಿಯ ಅವತಾರಗಳು. ಭೂಮಂಡಲ ದಲ್ಲಿಯ ಅಗ್ನಿಯು 'ವಹ್ನಿ'; ಅಂತರಿಕ್ಷದ ಅಗ್ನಿಯು 'ವಿದ್ಯುತ್'; ಹಾಗೂ ಸ್ವರ್ಗೀಯ ಅಗ್ನಿಯ 'ಸೂರ್ಯ'. ಆ ಸೂಕ್ತವು ಸ್ವರ್ಗೀಯ ಅಗ್ನಿಯನ್ನು 'ವೃಷಭ' ಎಂದು ಕರೆಯುವದು. 'ವೃಷಭ'ನೆಂದರೆ ಪೃಥಿವಿಯ ಮೇಲೆ ಮಳೆಯ ಪ್ರಚಂಡ ಧಾರೆಯನ್ನು ಸುರಿಸುವವನು. 'ವಿದ್ಯುತ್ತು' ಸಪ್ತಲೋಕಗಳನ್ನೆಲ್ಲ ಆವರಿಸುವದೆಂದು ಬಗೆಯಲಾಗಿದೆ; ಮತ್ತು ಪಾರ್ಥಿವ ಅಗ್ನಿಯಾದ 'ವಹ್ನಿ'ಯು 'ಪೃಕ್ಷೋವಪುಃ' ಎಂದು ಕರೆಯಲಾಗಿರುವುದು. ಆ ಸೂಕ್ತವನ್ನು ಕೆಳಗೆ ಕಾಣಬಹುದು.

'ಪೃಕ್ಷೋವಪುಃಪಿತುಮನ್ನಿತ್ವ ಆಶಯೆ।
ದ್ವಿತೀಯಮಾ ಸಪ್ತಶಿವಾಸು ಮಾತೃಷು॥
ತೃತೀಯಮಸ್ಯ ವೃಷಭಸ್ಯ ದೋಹಸೇ ।
ದಶ ಪ್ರಮತಿಂ ಜನಯಂತ ಯೋಷಣಃ ॥

ಇದು ಈ ಮೂರು ಅವತಾರಗಳ ಪ್ರಾಚೀನತಮ ವೃತ್ತಾಂತ.. ಸಾಯಣಾಚಾರ್ಯರ ಅಭಿಮತದ ಮೇರೆಗೆ ಇರುವ ಈ 'ಅಗ್ನಿಸೂಕ್ತವು' ಕೆಲ ಆಧುನಿಕ ಭಾಷ್ಯಕಾರರಿಂದ 'ಪ್ರಾಣಾಗ್ನಿಸೂಕ್ತ'ವಾಗಿ ಇಲ್ಲವೆ 'ವಾಯುಸೂಕ್ತ'ವಾಗಿ ಪರಿವರ್ತಿಸಲಾಯಿತು. ಆದುದರಿಂದಲೇ ಈ ಮೂರು ಅವತಾರಗಳ ಮೂಲ ಸಂಶೋಧನೆಯ ಪ್ರಶ್ನೆಯು ಜನಿಸಿರುವದು.

ಅದೇನೇ ಇದ್ದರೂ ಪ್ರಸ್ತುತ ಪದವು ಅತಿಮಹತ್ವದ್ದಿರುವುದು. ಪ್ರಾಣದೇವರು, ಹನುಮಂತದೇವರು, ಭೀಮದೇವರು ಹಾಗೂ ಮಧ್ವಾಚಾರ್ಯರು-ಇವರ ಸ್ಮರಣೆಯಿಂದ ಅಂಜಿಕೆ, ಪಾಪ,ತಾಪಗಳು ಹಾರಿ ಹೋಗುವವು, ಎಂದು ದಾಸರು ಹೇಳುವರು. ಮೊದಲಿನ ಮೂರು ಸಾಲುಗಳಲ್ಲಿ ಮೂರು ಕಲ್ಪನೆಗಳನ್ನು ಅರುಹಿ, ನಾಲ್ಕನೆಯ ಸಾಲಿನಲ್ಲಿ ಅವೆಲ್ಲವುಗಳ ಸಾರಾಂಶವನ್ನು ಕೊಡಲಾಗಿದ್ದರೆ ಅದಕ್ಕೆ 'ಅರ್ಥಾಂತರನ್ಯಾಸ' ಅಲಂಕಾರವೆಂದು ಕರೆಯಲಾಗುವುದು, ಎಂಬುದನ್ನು ಅಲಂಕಾರಶಾಸ್ತ್ರಜ್ಞರು ಬಲ್ಲರು. ಸಂಜೀವರಾಯನ ಸ್ಮರಣೆಯು ಅಂಜಿಕೆಯನ್ನು ಅಳಿಸುವುದು; ಹನುಮಂತನ ಸ್ಮರಣೆಯು ಪಾಪವನ್ನೂ, ಭೀಮನದು ತಾಪವನ್ನೂ ಕಳೆಯುವರು. ಆದರೆ ಪುರಂದರದಾಸರ ಅಭಿಮತದ ಮೇರೆಗೆ, ಮಧ್ವಾಚಾರ್ಯರ ಸ್ಮರಣೆಯು ಅಂಜಿಕೆ, ಪಾಪ, ತಾಪ- ಈ ಮೂರನ್ನು ಅಳಿಸುವುದು. ಇದನ್ನು ಒಂದು ಬಗೆಯ 'ವ್ಯಂಜನಿಕ ಅರ್ಥಾಂತರನ್ಯಾಸ'ವೆಂದು ನಾವು ಕರೆಯಬಹುದು. ನಾನಿದಕ್ಕೆ ಹೊಸ ಹೆಸರೊಂದನ್ನು ಕಲ್ಪಿಸಿರುವೆ. ಬೇರೆ ಬೇರೆ ಕಲ್ಪನೆಗಳನ್ನು ಬೆರಸಿ ಹೊಸ ಅಲಂಕಾರವನ್ನು ನಿರ್ಮಿಸುವಾಗ ಈ ಬಗೆಯು ಉಂಟಾಗುವುದು. ಅದನ್ನು 'ಅರ್ಥಸಮುಚ್ಚಯ ಅಲಂಕಾರ'ವೆಂದು ಕರೆಯಬಹುದು. ಮೊದಲಿನ ಮೂರು ಸಾಲುಗಳಲ್ಲಿಯ ಮೂರೂ ಅರ್ಥಗಳನ್ನು ಕೂಡಿಸಿ ನಾಲ್ಕನೆಯದರಲ್ಲಿ ಸೂಚಿಸಲಾಗಿದೆ.

ಇನ್ನು ನಾವು 'ದಾಸರಿಗುಂಟೇ? ಭಯಶೋಕಾ?' ಎಂಬ ಪದದ ವಿಚಾರದೆಡೆ ತೆರಳುವೆವು. ಈ ಪದದಲ್ಲಿ ಭಗವಂತನು ಹರಿಭಕ್ತರ ಮನಸ್ಸಿನಿಂದ ಭಯಶೋಕ ಗಳನ್ನು ಪೂರ್ತಿಯಾಗಿ ಅಳಿಸುವನೆಂದು ಜಗನ್ನಾಥದಾಸರು ಹೇಳುವರು. ಇದರಲ್ಲಿ ಮೂರು ವಿಷಯಗಳ ನಿರೂಪಣೆಯಿದೆ. ಅಚ್ಯುತ, ಅನಂತ, ಗೋವಿಂದ ಎಂಬೀ ಭಗವಂತನ ಮೂರು ನಾಮಗಳು ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಗಳಿಗಿಂತ ಹಿರಿದಾದವುಗಳು. ಕಾಮಧೇನ್ವಾದಿಗಳು ನಮ್ಮ ಬಯಕೆಗಳನ್ನು ಪೂರ್ಣಗೊಳಿಸು

ವವು. ಆದರೆ 'ಅಚ್ಯುತಾನಂದಗೋವಿಂದ' ಎಂಬ ನಾಮಗಳು ಈ ಕಾಮಿತ ಫಲವೀವ ಮೂರೂ ಒಡವೆಗಳಿಗಿಂತ ಹೆಚ್ಚಿನ ಫಲವನ್ನು ನೀಡಬಲ್ಲವು, ಎಂಬುದು ಕವಿಯು ಹೇಳುವ ಮೊದಲನೆಯ ಮಾತು. ದಾಸರು ಅರುಹುವ ಎರಡನೆಯ ಮಾತು ಈ ಬಗೆಯದಿರುವುದು: 'ಭಗವಂತನ ನಾಮವು ಪಾತಕಗಳನ್ನೆಲ್ಲ 'ಧೂಮಕೇತು ಭುಂಜಿಸುವಂದದಿ' ಸುಟ್ಟುಬಿಡುವುದು.' ರಾಮನು ನಿಷ್ಪಾಪಳಾದ ಶಬರಿಯ ಎಂಜಲು ಬೋರೇ ಹಣ್ಣುಗಳನ್ನು ಸ್ವೀಕರಿಸಿದನು. ಭಗವಂತನು ಅಜಮಿಳನ್ನು ಪಾಪಗಳನ್ನೆಲ್ಲ ದಹಿಸಿದನು. ಅವನು ಅಗ್ನಿಯಂತೆ ಮೇಧ್ಯ-ಅಮೇಧ್ಯ ವಸ್ತುಗಳೆಡರನ್ನೂ ಸುಡುವನು. ಭಗವಂತನು ಹಿರಿಯ ವಿನಾಶಕನು. ಅವನು ಒಳಿತು-ಕೆಡಕು ಒಡವೆಗಳನ್ನು ಸಮನಾಗಿಯೆ ಸೆಳೆದೊಯ್ಯುವನು. ದಾಸರು ಅರುಹುವ ಮೂರನೆಯ ಮಾತು ಒಳ್ಳೆ ಸ್ವಾರಸ್ಯವುಳ್ಳದ್ದಿರುವುದು. ಸಾಮಾನ್ಯವಾದ ವೇದಾಂತದ ಪದ್ಧತಿಯನ್ನು ಅನುಸರಿಸಿ, ಅವರು ಭಗವಂತನನ್ನು 'ಅಂತರ್ಯಾಮಿನ್' ಎಂದು ಸಂಬೋಧಿಸಿರುವರು. ಅವರ ಅಭಿಮತದ ಮೇರೆಗೆ, ಅಂತರ್ಯಾಮಿಯು ಬಹಿರ್ಯಾಮಿಗಿಂತ ಮೇಲು. ಪ್ರಹ್ಲಾದನ ಅಂತರ್ಯಾಮಿಯಾದ ಭಗವಂತನು ಬಹಿರ್ಯಾಮಿಗಿಂತ ಹಿರಿಯನಾದವನು. ತುಲಸಿದಾಸರದು ಇದಕ್ಕೆ ತೀರ ವಿರುದ್ಧವಾದ ಅಭಿಪ್ರಾಯ. ಅವರು ತಮ್ಮ ಒಂದು 'ದೋಹ'ದಲ್ಲಿ ಹೇಳುವುದೇನೆಂದರೆ: ಅಂತರ್ಜಾಮಿ ಹುತೇ ಬಡ ಬಾಹರ ಜಾಮಿ ಹೈ ರಾಮ, ಜೇ ನಾಮ ಲಿಯೇ ತೇ। ಪೈಜಿ ಪರ ಪ್ರಹಲಾದ ಹು ಹೋ ಪ್ರಗಟೇ ಪ್ರಭು ಪಾಹನತೇ, ನಹಿಯೇ ತೇ॥ 'ಅಂತರ್ಯಾಮಿಗಿಂತಲೂ ಬಹಿರ್ಯಾಮಿಯು ಹಿರಿಯನು. ಭಗವಂತನ ನಾಮವನ್ನು ಉಚ್ಚರಿಸುವಾಗ ಪ್ರಹ್ಲಾದನು ಪಣತೊಟ್ಟನು. ಆಗ ಪ್ರಭುವು ಪಾಷಾಣದೊಳಗಿಂದ ಪ್ರಕಟನಾದನು, ಹೃದಯದೊಳಗಿಂದಲ್ಲ.' ಭಗವಂತನು ಸರ್ವವ್ಯಾಪಿಯಿರುವ ಎಂಬುದನ್ನು ಪ್ರಹ್ಲಾದನು ಗಂಭೀರವಾಗಿ ಸಾರಿದಾಗ, ಭಗವಂತನು (ಕಂಬದ) ಕಲ್ಲಿನಿಂದ ಪ್ರಕಟವಾದ, ಹೃದಯದಿಂದಲ್ಲ. ಆದುದರಿಂದ ಬಹಿರ್ಯಾಮಿಯು ಅಂತರ್ಯಾಮಿಗಿಂತ ಮೇಲು ಎಂಬುದು ತುಲಸಿದಾಸರ ಹೇಳಿಕೆ. ನಮಗೆ ಅಂತರ್ಯಾಮಿಯು ಮೇಲೋ, ಬಹಿರ್ಯಾಮಿಯು ಮೇಲೋ ಎಂಬುದು ಅಷ್ಟೊಂದು ಮಹತ್ವದ ವಿಷಯವಲ್ಲ. ಭಗವಂತನು ವಿಶ್ವಂಭರನೂ ಇರುವ, ವಿಶ್ವಾತೀತನೂ ಇರುವ. ಅವನು ಒಳಗೂ ಇರುವ, ಹೊರಗೂ ಇರುವ. ಆದುದರಿಂದ ನಾವು ಈ ಬಗೆಯಾಗಿ ಭಗವಂತನನ್ನು ನೆನೆದರೆ, ನಮ್ಮ ದುಃಖಭೀತಿಗಳೆಲ್ಲ ಅಳಿಯಲೇ ಬೇಕು.

ನಾನಿನ್ನು ಮುಂದಿನ ಪದವನ್ನು ವಿವರಿಸಲು ಹವಣಿಸುತ್ತೇನೆ. 'ಕೆಂಡಕ್ಕೆಗೊರಲಿ ಮುಟ್ಟುವುದುಂಟೇ?' ಎಂಬ ಪ್ರಸ್ತುತ ಪದದಲ್ಲಿಯೂ, ಮತ್ತು

'ಹಾವಿನ ಹೆಡೆಯ ಕೊಂಡು ಕೆನ್ನೆಯ ತುರಿಸಿಕೊಂಡಂತೆ' ಎಂಬ ವಚನದಲ್ಲಿಯೂ ಪುರಂದರದಾಸರ ಹಾಗೂ ಬಸವೇಶ್ವರರ ಬೋಧೆಯ ಅತ್ಯುತ್ತಮ ಸಾರವೇ ಕಾಣಬರುವುದು. ಸಂತರನ್ನು ಯಾವ ಬಗೆಯ ಹಿಂಸೆ-ಪೀಡೆಗಳು ಎಂದೂ ಸೋಂಕಲರಿಯವು ಎಂಬುದೇ ಅವರ ಬೋಧೆಯ ರಹಸ್ಯ. ಇಲ್ಲಿ ಮನುಜನು ಶಿಕ್ಷೆಯ ಭಯವಿಲ್ಲದೆ ಸಂತರನ್ನು ಕಾಡಬಲ್ಲನೇ, ಹಿಂಸಿಸಬಲ್ಲನೇ ಎಂಬ ಪ್ರಶ್ನೆಯು ಉದ್ಭವಿಸುವುದು. ಸಂತರನ್ನು ಯಾವುದೇ ಬಗೆಯ ಚಿತ್ರಹಿಂಸೆಗೆ ಗುರಿಮಾಡುವುದು ಯಾವ ಮನುಜನಿಗೂ ಸಾಧ್ಯವಿಲ್ಲ ಎಂಬುದೇ ಈ ಸಂತರೀರ್ವರ ಅಭಿಮತ. ಸಂತರು ಭಯಾತೀತರು, ದುಃಖಾತೀತರು ಎಂಬುದನ್ನು ನಾವು ಈ ವರೆಗೆ ಕಂಡಿರುವೆವು. ಆದರೆ ಈಗವರು ಎಲ್ಲ ಬಗೆಯ ಹಿಂಸೆಗಳಿಗೂ ಅತೀತರಿರುವರು ಎಂದು ಹೇಳಲಾಗಿರುವುದು. 'ಕೆಂಡಕ್ಕೆ ಗೊರಲಿ ಹತ್ತುವದುಂಟೆ? ಅದನ್ನದು ನುಂಗುವದುಂಟೇ? ಕಪ್ಪೆಯು ಹಾವಿನ ಹುತ್ತವನ್ನು ಸೇರುವದುಂಟೇ? ನಾಯಿಯು ಹೆಬ್ಬುಲಿಗೆ ಬೊಗಳುವದುಂಟೇ?' ಹಾಗೂ ಆನೆಯು ಸಿಂಹದೆದುರು ತನ್ನ ಸೊಂಡಿಲನ್ನು ತಿರುಗಿಸುವದುಂಟೇ ಎಂದು ಪುರಂದರದಾಸರು ಕೇಳುವರು. ಇವೆಲ್ಲ ಅಸಾಧ್ಯ ಸಂಗತಿಗಳು. ಸಂತರನ್ನು ಕಾಡುವ ಹಾಗೂ ಹಿಂಸಿಸುವ ಮನುಜನು ನಿಜವಾಗಿ ಎಂಟೆದೆಯ ಬಂಟನೇ ಇರಬೇಕು. ಪುರಂದರದಾಸರು ಮತ್ತೂ ಕೇಳುವದೇನೆಂದರೆ: "ನಾವು ನಮ್ಮ ಕೈಗಳಿಂದಲೂ, ಮುಷ್ಟಿಯಿಂದಲೂ ಗಾಳಿಯನ್ನು ಗುದ್ದಬಲ್ಲೆವೇ? ಹಾಗೆ ಮಾಡಿದ ಪಕ್ಷದಲ್ಲಿ, ನಮಗೆಯೆ ನೋವಾಗ ಬಹುದು, ವ್ಯಸನವಾಗಬಹುದು. ಬಿರುಗಾಳಿಯು ಗಿರಿಯನ್ನು ಹಾರಿಸಬಲ್ಲುದೇ? ವಜ್ರವು ಹೇಮಗಿರಿಯನ್ನು ಸೀಲಬಲ್ಲುದೇ? ಹುಡಿಗೂಡಿಸ ಬಲ್ಲುದೇ? ಕೊನೆಯ ದಾಗಿ, ಧೂಳಿ-ಕತ್ತಲುಗಳು ಸೂರ್ಯನನ್ನು ಮುಸುಕ ಬಲ್ಲವೇ?" ಈ ಸಂಗತಿಗಳೆಲ್ಲ ಅಸಾಧ್ಯವಿದ್ದರೆ, ಸಾಧುಸಂತರನ್ನು ನೋಯಿಸುವುದು ಹಾಗೂ ಹಿಂಸಿಸುವುದು ಅಷ್ಟೇ ಅಸಾಧ್ಯವಾದುದು. ಸಂತರನ್ನು ಹಿಂಸಿಸುವ ಅಸಾಧ್ಯತೆಯನ್ನು ಕುರಿತು, ಬಸವಣ್ಣ ನವರೂ ಸುಮಾರಾಗಿ ಇದೇ ಮಾತನ್ನು ಹೇಳಿರುವರು: ಮೊದಲನೆಯದಾಗಿ, 'ನಾವು ಹಾವಿನ ಹೆಡೆಯ ಕೊಂಡು ಕೆನ್ನೆಯ ತುರಿಸಿಕೊಂಡರೆ' ಅದರ ಪರಿಣಾಮ ವೇನಾಗಬಹುದು? ಎರಡನೆಯದಾಗಿ, 'ನಾವು ಹುಲಿಯ ಮೀಸೆಯ ಎಳೆದು ಅದರೊಡನೆ ಆಣಕವಾಡಬಲ್ಲೆವೇ?' ನಿಜವಾಗಿ, ಅದೂ ಕೂಡ ಅಸಾಧ್ಯವೇ ಸರಿ! ತರುವಾಯ, 'ಉಡಿಯಲ್ಲಿ ಸುಣ್ಣದ ಕಲ್ಲು ಕಟ್ಟಿಕೊಂಡು, ನಾವು ಹೊಳೆಯೊಳಗಿಂದ ಹಾದು ಹೋಗಬಹುದೇ?' ಸುಣ್ಣನೀರಿನ ಸಂಪರ್ಕದಿಂದ ಜನಿಸಿದ ಉಷ್ಣತೆಯಿಂದ ನಾವು ಸುಟ್ಟು ಸಾಯಬಹುದು. ಕೊನೆಯದಾಗಿ, 'ನಮ್ಮ ಕೈಯಲ್ಲಿ ಉರಿಯ ಕೊಳ್ಳಿಯನ್ನು ಹಿಡಿದು, ಅದರಿಂದ ನಮ್ಮ ಕೂದಲುಗಳ ಗುಂಜನ್ನು ಬಿಡಿಸಲು ಪ್ರಾರಂಭಿಸಿದರೆ, ಅದರ ಪರಿಣಾಮ ವೇನಾಗಬಹುದು?' ಕೂದಲೂ, ಮನುಜನೂ ಇಬ್ಬರೂ ಸುಟ್ಟುಹೋಗಬಹುದು. ಈ ರೀತಿ, ಸಂತರನ್ನು ನಿರ್ಭೀತಿಯಿಂದ

ಹಿಂಸಿಸುವದು ಸಾಧ್ಯವಿಲ್ಲ ಎಂಬ ವಿಷಯದಲ್ಲಿ ಪುರಂದರ-ಬಸವಣ್ಣನವರಲ್ಲಿ ಒಮ್ಮತವಿರುವುದು.

ಇದಾದ ತರುವಾಯ ನಾವು ಸಂತರ ಕೆಲ ಶಾರೀರಿಕ ಹಾಗೂ ಮಾನಸಿಕ ಲಕ್ಷಣಗಳನ್ನು ಅರುಹುವೆವು. ನಾನೀಗ ವಿವರಿಸಲಿರುವ 'ಹೌದಪ್ಪಾ! ಹೌದಪ್ಪಾ! ಹೌದು ದೇವರ' ಎಂಬ ಪದವು ನಿಂಬರಗಿಯ ನೆರೆಯಲ್ಲಿಯ ಬರ್ಡೋಲ ಎಂಬ ಗ್ರಾಮದ ಓರ್ವ ಜಂಗಮನಿಂದ, ಇಪ್ಪತ್ತೈದು ವರುಷಗಳ ಪೂರ್ವದಲ್ಲಿ, ನನಗೆ ದೊರೆಯಿತು. ಆ ಪದವನ್ನು ಕೇಳಿದಾಗ ನಾನು ತುಂಬ ಬೆರಗಾದೆ. ಅದನ್ನು ನಿರುಪಾದಿಸಿದ್ಧರು ರಚಿಸಿರುವಂತೆ. ಈ ಕವಿಯ ಬಗೆಗೆ ನಮಗೆ ಏನೂ ಗೊತ್ತಾಗಿಲ್ಲ. ಆದುದರಿಂದ ಇವರಾರೆಂಬುದನ್ನು ಓದುಗರೇ ಕಂಡುಹಿಡಿಯಬೇಕು. ನಾನು ಆ ಕೆಲಸವನ್ನು ಅವರಿಗೆಯೆ ಒಪ್ಪಿಸುವೆ. ಆದರೆ ಅದೊಂದು ತುಂಬ ಪ್ರಭಾವಿಯಾದ ಪದ. ಅದರಲ್ಲಿ ಸಂತರ ಕೆಲ ಶಾರೀರಿಕ ಹಾಗೂ ಮಾನಸಿಕ ಲಕ್ಷಣಗಳನ್ನು ಬಣ್ಣಿಸಲಾಗಿದೆ. ಅವುಗಳಲ್ಲಿ ಮೂರು ಲಕ್ಷಣಗಳು ಮುಖಮುದ್ರೆಗೆ ಸಂಬಂಧಿಸಿದವುಗಳೂ ಇರುವವು. ಈ ರೀತಿ, ನಿರುಪಾಧಿಸಿದ್ಧರ ಅಭಿಮತದ ಮೇರೆಗೆ, ಈ ಒಂಬತ್ತು ಲಕ್ಷಣಗಳು ಸಂತರಲ್ಲಿ ಕಂಡುಬರುವವು. ಸಂತರ ಮುಖದೆಡೆ ನಿಮ್ಮ ಕಂಗಳನ್ನು ಹೊರಳಿಸಿದಾಗ, ನೀವಲ್ಲಿ ಏನನ್ನು ಕಾಣುವಿರಿ? ಅವರು ತಂಬಾಕ ಸೇದುವವರಂತೆ ದಿರ್ಘವಾದ ಉಸಿರುಗಳನ್ನು ಎಳೆಯುವರು. ಹೊಗೆಬತ್ತಿಯನ್ನು ಸೇದದೆಯೇ ಅವರ ಶ್ವಾಸ-ಉಚ್ಛ್ವಾಸವು ನಡೆಯಬೇಕು-ಉಸಿರು ಒಳಗೆ-ಹೊರಗೆ ಸಾಗಬೇಕು. ನಾಲಿಗೆಗೆ ಪಾರ್ಶ್ವವಾಯುವಾದಾಗಿನಂತೆ, ದುರುಕ್ತಿಗಳನ್ನಾಡುವ ಸಾಮರ್ಥ್ಯವೇ ಇರಬಾರದು; ಮತ್ತು ಕೊನೆಯದಾಗಿ, ಮುಖವು ಚಂದ್ರ-ಸೂರ್ಯರ ಕಳೆಯಿಂದ ಹೊಳೆಯಬೇಕು. ಇವು ಸಂತರ ಮುಖಮುದ್ರೆಯ ಲಕ್ಷಣಗಳು. ಇನ್ನು ಅವರ ಶಾರೀರಿಕ ಕುರುಹುಗಳನ್ನು ಕಾಣುವಾ! ಸಂತರ ಶರೀರವು ಜಳಕ ಮಾಡದೆಯೂ ತುಂಬ ನಿರ್ಮಲವಾದುದು ಇರಬೇಕು. ನನ್ನ ಸದ್ಗುರುಗಳಾದ ಉಮದಿಯ ಮಹಾರಾಜರವರ ವಿಷಯದಲ್ಲಿ ಈ ಸಂಗತಿಯನ್ನು ನಾನು ಕಂಡಿರುವೆ. ಅವರು ಧ್ಯಾನ ಮಾಡಿ ಹೊರಬಂದಾಗ, ಅದೇ ಅಭ್ಯಂಗಸ್ನಾನ ಮಾಡಿದವರಂತೆ ಕಾಣುತ್ತಿದ್ದರು. ಎರಡನೆಯದಾಗಿ, ಧ್ಯಾನವು ಅವರಿಗೊಂದು ಹಿರಿದಾದ ಸಾಮರ್ಥ್ಯವನ್ನೂ ಸಮಾಧಾನವನ್ನೂ ನೀಡಬೇಕು. ಅದರ ಫಲವಾಗಿ ಅವರು ಅನ್ನವನ್ನು ಸೇವಿಸದಿದ್ದರೂ, ಅವರ ಹೊಟ್ಟೆಯು ತುಂಬಿರಬೇಕು. ಧ್ಯಾನದ ತರುವಾಯ 'ಅಚ್ಚೇರ ಹಾಲ ಕುಡಧಾಂಗ ಆಗತದ' ಎಂಬ ಅಂದವಾದ ಪದ ವಿನ್ಯಾಸದಿಂದ ಈ ಅವಸ್ಥೆಯನ್ನು ಉಮದಿ ಮಹಾರಾಜರವರು ಬಣ್ಣಿಸುತ್ತಿದ್ದರು.

ಮೂರನೆಯದಾಗಿ, ಶಿಷ್ಯನು ಗುರುವನ್ನು ಕಂಡಸಮಯ ಕ್ಕೆಲ್ಲ 'ಝೋಲೀ ಹೋಗಿ ಗುರುಪಾದಕೆ ಎರಗಿರಬೇಕು; ಆಗ ಅವನು ತನ್ನನ್ನು ನಿಯಂತ್ರಿಸಲರಿಯ ದವನಾಗಬೇಕು. ಇವು ಮೂರು ಶಾರೀರಿಕ ಕುರುಹುಗಳು. ಇನ್ನು ಮಾನಸಿಕ ಲಕ್ಷಣಗಳನ್ನು ನೋಡಿ: ಸಂತರು ಸೆರೆಯನ್ನು ಸೇವಿಸದೆಯೆ ಅಮಲೇರುವವರು, ಮೈಮರೆಯುವವರು. ಅವರು ಪೂರ್ಣ ಎಚ್ಚರಿದ್ದು ನಿದ್ರೆಗೈಯಬೇಕು. ಇದೊಂದು ಬಗೆಯ ಸಮಾಧಿಯೆ ಸರಿ. ಕೊನೆಯದಾಗಿ, ಅವರು ಭಾಗವತದಲ್ಲಿ ಹೇಳಿರುವಂತೆ ಜನರಿಗೆ ಜಡ-ಮೂಢ-ಪಿಶಾಚವತ್ ಕಾಣಬೇಕು. ಈ ಬಗೆಯಾಗಿ, ಈ ಒಂಬತ್ತು ಕುರುಹುಗಳಿಂದ ಸಂತರ ಮುಖ, ಶರೀರ, ಹಾಗೂ ಮನಸ್ಸುಗಳು ಹೇಗಿರ ಬೇಕೆಂಬುದನ್ನು ನಾವು ಅರಿತುಕೊಳ್ಳಬಹುದು. ಆದರೆ ಅವರಲ್ಲಿ ಇನ್ನೊಂದು ವಿಶೇಷವಾದ ಸಾಮರ್ಥ್ಯವು ನೆಲೆಸಿರುವುದು: ಅವರು ಭೂತ-ಭವಿಷ್ಯವನ್ನು ಅರಿಯಬಲ್ಲವರಿರುವರು. ಇತಿಹಾಸಕಾರರು ಭೂತವನ್ನು ಅರಿಯಬಹುದು. ಆದರೆ ಭವಿಷ್ಯವನ್ನು ಅರಿಯುವ ಪಾತ್ರತೆಯು ಅವರಿಗಿರುವುದಿಲ್ಲ. ಸಂತರು ಭವಿಷ್ಯವನ್ನು ಅರಿಯಬಲ್ಲವರಿರಬೇಕು. ಅದು ಕೂಡ ಸಾಧುತ್ವದ ಒಂದು ಕುರುಹು ಎಂದು ನಿರುಪಾಧಿಸಿದ್ಧರು ಬಗೆವರು.

ಮಹಾಲಿಂಗರಂಗರ 'ಹೇಗಿದ್ದರೂ ಚಂದ ಜ್ಞಾನಿಯು' ಎಂಬ ಮುಂದಿನ ಪದವು, ಸಂತರು ಸದೈವ ದ್ವಂದ್ವಾತೀತರು ಎಂಬುದನ್ನು ಅರುಹುವದು. ಉದಾಹರಣಾರ್ಥವಾಗಿ: ಅವರು ನಗರದಲ್ಲಿದ್ದರೂ ಅಷ್ಟೇ ಇಲ್ಲವೆ ವನದಲ್ಲಿದ್ದರೂ ಅಷ್ಟೇ. ಅವರಿಗೆ ಅವೆರಡೂ ಒಂದೆ ಎಂದೆನಿಸುವುದು ನಿಜ. ಆದರೆ ತುಲಸಿದಾಸರು ಇವೆರಡರಲ್ಲಿಯ ನಡುದಾರಿಯೊಂದನ್ನು ಕಂಡುಹಿಡಿದರುವರು. ಅವರು ಹೇಳುವ ದೇನೆಂದರೆ: ತುಲಸಿ ಘರ ಬನ ಬೀಚ ರಹು । ರಾಮ ಪ್ರೇಮ ಪುರ ಛಾಯೆ॥ "ತುಲಸಿದಾದರು ಹೇಳುವರು: ಮನೆ ಬನಗಳ ನಡುವೆ ರಾಮ-ಪ್ರೇಮದ ನಗರವನ್ನು ನಿರ್ಮಿಸಿ, ಅಲ್ಲಿ ಇರಬೇಕು." ತುಲಸಿದಾಸರು ಒಂದು ಯುಕ್ತಿಯನ್ನು ಮಾಡಿ, ಅವೆರಡರ ನಡುವೆ ಒಂದು ಪಟ್ಟಣವನ್ನು ಕಟ್ಟಿದರು. ಅದಕ್ಕವರು 'ರಾಮ-ಪ್ರೇಮಪುರ' ಎಂದು ಕರೆದರು. ಅದು ಮನೆ-ಬನಗಳ ಮಧ್ಯದಲ್ಲಿ ನೆಲೆಸಿರುವದು.

ಎರಡನೆಯದಾಗಿ, ಅವರು 'ಬಲು ಶೂರರಿರಬಹುದು ಇಲ್ಲವೆ ರಣಹೇಡಿ ಗಳಿರಬಹುದು.' ಸಂತರು ಅವೆರಡನ್ನು ಮೀರಿರುವರು. ಅವರು 'ಇಳೆಯಾಣ್ಮರಿರ ಬಹುದು ಇಲ್ಲವೆ ಸತಿಭಂಡರಿರಬಹುದು.' ಅವೆರಡೂ ಅವರಿಗೆ ಒಂದೇ-ಅಷ್ಟೇ ಬೆಲೆಯುಳ್ಳವುಗಳು. ಅವರು 'ಯೋಗಿಗಳಿದ್ದರೂ ಅಷ್ಟೇ, ಇಲ್ಲವೆ ಭೋಗಿಗಳಿದ್ದರೂ ಅಷ್ಟೇ;' ಅವರು ಲೌಕಿಕ ವ್ಯವಹಾರದಲ್ಲಿ ರತರಾದರೂ ಅಷ್ಟೇ, ಇಲ್ಲವೆ ಆಗದಿದ್ದರೂ ಅಷ್ಟೇ. ಅವರಿಗೆ ಅವೆರಡರ ಬೆಲೆಯು ಅಷ್ಟೇ ಇರುವುದು. ಈ ಸಂದರ್ಭದಲ್ಲಿ

ಒಂದು ನೂತನ ಸಂಗತಿಯು ಇತ್ತೀಚೆಗೆ ನನ್ನ ನಿದರ್ಶನಕ್ಕೆ ಬಂದಿರುವುದು. ಜನಕ ರಾಜನು ಸಾರ್ವಭೌಮನಿದ್ದರೂ ಮುಕ್ತಿಯನ್ನು ಪಡೆದನು ಎಂದು ಹೇಳುವುದು ವಾಡಿಕೆ. ಆದರೆ, ಜನಕನು ಸನ್ಯಾಸವನ್ನು ಸ್ವೀಕರಿಸುವವರೆಗೆ ಮುಕ್ತಿಯನ್ನು ಪಡೆಯಲು ಸಮರ್ಥನಾಗಲಿಲ್ಲ ಎಂದು ಅಣುಗೀತೆಯಲ್ಲಿ ಅರುಹಲಾಗಿದೆಯಂತೆ. ನಾನಿದನ್ನು ಓರ್ವ ನಂಬಲು ಅರ್ಹನಾದ ಅಧಿಕಾರಿ ಪುರುಷನಿಂದ ಕೇಳಿರುವೆ. ಅದರ ಸಂದರ್ಭವನ್ನು ನಾನಿನ್ನೂ ಕಂಡುಹಿಡಿದಿಲ್ಲ. ಅದೇನೇ ಇರಲಿ! ಸಂತರು ನಿಜವಾಗಿ ಈ ಎರಡು ಗುಣಗಳನ್ನು ಮೀರಿರುವರು. ಯೋಗ-ಭೋಗಗಳೆರಡೂ ಅವರಿಗೆ ಸಮಾನವಾದವುಗಳು.

ಕೊನೆಯದಾಗಿ, ಸಂತರು ವೇದಾಂತಿಗಳಿದ್ದರೂ ಅಷ್ಟೇ, ಇಲ್ಲವೆ ಸಿದ್ಧಾಂತಿಗಳಿದ್ದರೂ ಅಷ್ಟೇ. ಅವರು ವೇದಾಂತವನ್ನು ಕುರಿತು ಒಂದು ಉಪನ್ಯಾಸ ಮಾಲೆಯನ್ನು ಹೆಣೆದರೂ ಅಷ್ಟೇ. ಇಲ್ಲವೆ ತಮ್ಮ ಆದರ್ಶವನ್ನು ಪಡೆದು ಸಿದ್ಧಾಂತಿಯಾದರೂ ಅಷ್ಟೇ. ಇಲ್ಲಿ 'ಸಿದ್ಧಾಂತ' ಶಬ್ದಕ್ಕೆ ಸಂಬಂಧಿಸಿದ ಒಂದು ಸಣ್ಣ ಕಥೆಯನ್ನು ಹೇಳಬಯಸುವೆ. ನನಗಿಂತ ಒಂದೆರಡು ವರುಷ ಕಿರಿಯನಾದ ನನ್ನ ಗೆಳೆಯನೊಬ್ಬನಿದ್ದ. ಸಾವಳಗಿ ಲಿಂಗಪ್ಪನೆಂಬುದು ಆತನ ಹೆಸರು. ಅವನು ಡೆಕ್ಕನ್ ಕಾಲೇಜದಲ್ಲಿ ಓದುತ್ತಿದ್ದ. ಅವನು ಉಮದಿ ಮಹಾರಾಜರವರ ಒಬ್ಬ ಒಳ್ಳೆಯ ಶಿಷ್ಯನಾಗಿದ್ದ. ಕ್ರಿ.ಶ. ೧೯೧೩ರಲ್ಲಿ, ನಾವು ಆರೇಳು ಜನ ಯುವಕರೊಮ್ಮೆ ಮಹಾರಾಜರವರನ್ನು ಕಾಣಲು ಸೊಲ್ಲಾಪುರಕ್ಕೆ ತೆರಳಿದೆವು. ನಾವೆಲ್ಲರು ನಮ್ಮ ಸದ್ಗುರುಗಳ ಬಳಿಯಲ್ಲಿ ಕುಳಿತೆವು. ಆದರೆ ಲಿಂಗಪ್ಪನು, ತನ್ನ ಒಂದು ಕಾಲನ್ನು ಇನ್ನೊಂದರ ಮೇಲಿರಿಸಿ, ಒಂದು ಮೂಲೆಯಲ್ಲಿ ನಿಂತುಕೊಂಡನು. ಅದನ್ನು ಕಂಡು ಮಹಾರಾಜರವರು, 'ಬೇರೆ ಜನರು ಕುಳಿತಿರುವಾಗ ನೀನು ನಿಲ್ಲಬಾರದು. ಕುಳಿತುಕೊ!' ಎಂದು ಅವನಿಗೆ ಹೇಳಿದರು. ಆಗ ಲಿಂಗಪ್ಪನೆಂದ 'ಮಹಾರಾಜ! ನನಗೆ ಜೀವನದಲ್ಲಿ ಬೇಸರ ಬಂದಿದೆ. ನಾನಿನ್ನು ಜೀವಿಸಲು ಬಯಸುವುದಿಲ್ಲ. ನನಗೆ ಸಾವು ಬಂದರೆ ಒಳಿತಾಗುವುದು, ಎಂದೆನಿಸುವುದು. ಆದುದರಿಂದ ನಾನಿಂತು ನಿಂತರೆ ಏನಾಗುವುದು?' ಅದನ್ನು ಕೇಳಿ ಸದ್ಗುರುಗಳು ಸಿಟ್ಟಿನಿಂದ ಈ ರೀತಿ ನುಡಿದರು: "ಯಾಕೋ! ಭಾಳ ಸಿದ್ಧಾಂತದ ಮಾತ ಮಾತಾಡತೀ!" ಇದು ಸಿದ್ಧಾಂತ, ಸ್ವತಃಸಿದ್ಧ ಮಾತು, ಆದರ್ಶ. ಈ ಸಿದ್ಧಾಂತವನ್ನು ಕುರಿತು ಮಾತಾಡುವವನು ಸಿದ್ಧಾಂತಿಯು. ವೇದಾಂತಮಾರ್ಗದ ಅನುಸರಣವಿರಲಿ, ಇಲ್ಲವೆ ಸಿದ್ಧಾಂತಮಾರ್ಗದ ಅನುಸರಣವಿರಲಿ, ನಿಜವಾದ ಸಂತರಿಗೆ ಎರಡೂ ಸಮಾನವಾದವುಗಳು.

ಕೊನೆಗೆ ನಾವು ಜಗನ್ನಾಥದಾಸರ 'ದೇವಗಂಗೆಯೊಳುಳ್ಳವಗೆ' ಎಂಬ ಪದವನ್ನು ವಿವರಿಸುವೆವು. ಇದು ಕನ್ನಡ ಸಾಹಿತ್ಯದಲ್ಲಿಯ ಅತಿ ಮಹತ್ವದ ಪದಗಳಲ್ಲಿ

ಒಂದಾಗಿರುವುದು. ಹೀಗೆನ್ನಲು ಒಂದು ವಿಶೇಷ ಕಾರಣವುಂಟು: ಇದರಲ್ಲಿ ಕವಿಯು ತುಂಬ ಆಳವಾದ ದಾರ್ಶನಿಕ ಸಮಸ್ಯೆಗಳನ್ನು ಉಲ್ಲೇಖಿಸಿರುವನು. ವಿಶೇಷವಾಗಿ, ಮಾನವನ ಆತ್ಮಸ್ವಾತಂತ್ರ್ಯದ ಸಮಸ್ಯೆಯನ್ನು ಉಲ್ಲೇಖಿಸಿರುವನು. ವಿಶೇಷವಾಗಿ, ಮಾನವನ ಆತ್ಮಸ್ವಾತಂತ್ರ್ಯದ ಸಮಸ್ಯೆಯನ್ನು ಹಾಗೂ ಭಗವಂತನ ಪೂರ್ವಜ್ಞತೆಯ –ಸರ್ವಜ್ಞತೆಯ ಇಲ್ಲವೆ ಸರ್ವಸಾಮರ್ಥ್ಯದ ಕೂಡ ಇರುವ ಅದರ ಸಂಬಂಧವನ್ನು ಅವನು ಅರುಹಿರುವನು. ಪಾಶ್ಚಿಮಾತ್ಯ ದರ್ಶನವನ್ನು ಅಭ್ಯಸಿಸಿದವರು ಆತ್ಮಸ್ವಾತಂತ್ರ್ಯದ ಸಮಸ್ಯೆಯು ಅದೆಷ್ಟು ಕಠಿಣವಾದುದಿರುವುದು ಎಂಬುದನ್ನು ಬಲ್ಲರು. ಜಗನ್ನಾಥದಾಸರು ಈ ಸಮಸ್ಯೆಯನ್ನು ಎತ್ತಿ ಅದನ್ನು ತುಂಬ ಜಾಣ್ಮೆಯಿಂದ ಚರ್ಚಿಸಿರುವರು. ಅವರದನ್ನು ಬಿಡಿಸಿದ ರೀತಿಯನ್ನು ನಾನೀಗ ತಿಳಿಸುವೆ. ಅದಕ್ಕವರು ಮೂರು ಪರ್ಯಾಯಗಳನ್ನು ಸೂಚಿಸಿರುವರು. ನಾಲ್ಕನೆಯ ಪರ್ಯಾವನ್ನವರು ಅರುಹಿಲ್ಲ. ನಾನದನ್ನೂ ಅರುಹಿ ಈ ಪರ್ಯಾಯಗಳ ಪಟ್ಟಿಯನ್ನು ಪೂರ್ಣಗೊಳಿಸುವೆ. ದಾಸರ ಅಭಿಪ್ರಾಯದ ಮೇರೆಗೆ ಮುಂದೆ ಕಾಣಿಸಿದ ಜನರ ಮಾದರಿಗಳು ಮೂರು: 'ಒಳಿತು –ಕೆಡಕು ಕರ್ಮಗಳೆರಡನ್ನೂ ಭಗವಂತನೇ ಮಾಡುವ' ಎಂದು ಭಾವಿಸುವ ಮನುಜನು 'ನರೋತ್ತಮನು'. ವಿಶ್ವದೇವೈಕ್ಯವಾದದ ಈ ಅಂಗವನ್ನೇ ಯುರೋಪದ ದಾರ್ಶನಿಕರು ತಮ್ಮ ಟೀಕಾಸ್ತ್ರದ ಗುರಿಯನ್ನಾಗಿ ಮಾಡಿರುವರು. ಮಾನವನ ಇಚ್ಛಾ–ಸ್ವಾತಂತ್ರ್ಯದ ಈ ಬಗೆಯ ನಿರಾಕರಣೆಯು ಅವರಿಗೆ ಮಾನ್ಯವಿರುವುದಿಲ್ಲ. ಆದರೆ ಜಗನ್ನಾಥದಾಸರು ಕೇಳುವುದೇನೆಂದರೆ: "ವಿಶಗಾಧಿಪನಾದ ಗರುಡನ ಮಂದಿರದಲ್ಲಿ ಸೇರಿದವನಿಗೆ ಹಾವುಗಳ ಭಯವುಂಟೆ? ಗಂಗಾಜಲದಲ್ಲಿ ಆಳವಾಗಿ ಮುಳುಗಿದ ಮನುಜನ ಹೃಯದಲ್ಲಿ ಪಾಪವಾಸನೆಗಳು ನೆಲಸಬಲ್ಲವೇ?" ಇದು ಸುತಾರಾಂ ಸಾಧ್ಯವಿಲ್ಲ. ನಾವು ಸಾಕ್ಷಾತ್ ಭಗವಂತನೆದುರು ನಿಂತಾಗ ನಮ್ಮ ಪಾಪಗಳೆಲ್ಲ ಅಳಿಯುವವು. ನಾನು ಸತ್ಕರ್ಮಗಳನ್ನು ಮಾಡಿದೆ, ಅಥವಾ ದುಷ್ಕರ್ಮಗಳನ್ನು ಮಾಡಿದೆ ಎಂದು ಹೇಳುವುದು ಮಾನವನ ಮರುಳತನವಲ್ಲದೆ ಮತ್ತೇನು? ಭಗವಂತನೇ ಎರಡನ್ನೂ ಮಾಡಲಿರುವನು. ಇದು ಜಗನ್ನಾಥದಾಸರ ಕೊನೆಯ ಪರಿಹಾರ. ನಿಮ್ಮಲ್ಲಿಯ ನೀತಿಶಾಸ್ತ್ರ ಇಲ್ಲವೆ ಮೂಲ್ಯಶಾಸ್ತ್ರದ ವಿದ್ಯಾರ್ಥಿಗಳೆದುರು ನಾನೀ ಅಂಶಗಳನ್ನು ಇರಿಸುವೆ. ಎರಡನೆಯದಾಗಿ, ಒಳಿತು–ಕೆಡಕು ಕರ್ಮಗಳಿಗೆ ನಾನೇ ಹೊಣೆಗಾರನು, ಎಂದು ಹೇಳುವ ಮನುಜನನ್ನು ದಾಸರು 'ಅಧಮ'ನೆಂದು ಕರೆವರು. ಆದರೆ ಇದೇನು ಈ ಸಮಸ್ಯೆಯ ಸಮಾಧಾನಕಾರವಾದ ಪರಿಹಾರವಲ್ಲ. ಮಾನವನು ಈ ಬಗೆಯ ಭಾವನೆಯನ್ನೆ ತಳೆಯಬೇಕೆಂಬ ಅಭಿಪ್ರಾಯವನ್ನು ಸಾಮಾನ್ಯವಾಗಿ ಎಲ್ಲ ಯುರೋಪದ ದಾರ್ಶನಿಕರು ತಳೆದಿರುವರು. ಮನುಜನು ತನ್ನ ಸತ್ಕರ್ಮ–ದುಷ್ಕರ್ಮಗಳಿಗೆ ತಾನೇ ಹೊಣೆಗಾರನಿರುವನು ಮತ್ತು ಈ ಮಾತನ್ನು ನ್ಯಾಯಶಾಸ್ತ್ರವೂ ಗಮನಿಸುವುದು. ಆದರೆ ಜಗನ್ನಾಥದಾಸರು ಅವರನ್ನು

'ಅಧಮ'ರೆಂದು ಕರೆವರು. ದಾಸರು ಅರುಹುವ ಮೂರನೆಯ ಮಾದರಿಯ ಮನುಜನು 'ನಾನು ದುಷ್ಕರ್ಮಗಳನ್ನು ಎಸಗುವೆ ಆದರೆ ಭಗವಂತನು ಸತ್ಕರ್ಮಗಳನ್ನು ಮಾಡುವನು' ಎಂದು ಹೇಳುವನು. ಇದು ಅವರು ಹೇಳಿದ ಮೂರನೆಯ ಪರ್ಯಾವು. ಇದನ್ನು ನಾವು 'ಮಂಡೆಯೂರುವಿಕೆ' (Genuflection) ಎಂಬ ವಿಲಕ್ಷಣ ಶಬ್ದದಿಂದ ಬಣ್ಣಿಸಬಹುದು. ನಾವು ಭಗವಂತನೆದುರು ಮೊಳಕಾಲೂರಿ 'ನೀನು ಸತ್ಕರ್ಮಗಳಿಗೆ ಹೊಣೆಗಾರನು; ನಾನು ದುಷ್ಕರ್ಮಗಳಿಗೆ ಹೊಣೆಗಾರನು' ಎಂದು ಹೇಳುವೆವು. ಈ ಮೂರು ಪರ್ಯಾಯಗಳನ್ನು ಜಗನ್ನಾಥದಾಸರು ಹೇಳಿರುವರು. ನಾಲ್ಕನೆಯದನ್ನು ಅವರು ಹೇಳಿಲ್ಲ. ಕೆಲ ಜನರು ಈ ರೀತಿ ಹೇಳುವುದುಂಟು: 'ನಾನು ಸತ್ಕರ್ಮಗಳನ್ನು ಮಾಡುತ್ತಿರುವೆ; ಆದರೆ ಭಗವಂತನು ದುಷ್ಕರ್ಮಗಳನ್ನು ಮಾಡುತ್ತಿರುವ' ಈ ಮನೋವೃತ್ತಿಯನ್ನು ನೀವು ಏನೆಂದು ಕರೆಯಬಹುದು. ದುರ್ಯೋಧನನು ಈ ಸಿದ್ಧಾಂತದ ಪ್ರತಿಪಾದಕನೆಂದು ತಿಳಿದುಕೊಳ್ಳಬಹುದು. ದೇವರು ನನ್ನಿಂದ ದುಷ್ಕರ್ಮಗಳನ್ನು ಮಾಡಿಸುವನೆಂದು ಅವನನ್ನುವನು. ಅವನು ತನ್ನ ದುಷ್ಕರ್ಮಗಳ ಹೊಣೆಯನ್ನು ಅಂತಿಮವಾಗಿ ದೇವರ ಮೇಲೆ ಹೊರಿಸುವನು. ಸತ್ಕರ್ಮದ ಪ್ರಶಸ್ತಿಯನ್ನು ತಾನೇ ಸ್ವೀಕರಿಸುವನು. ಇದು ನಾಲ್ಕನೆಯ ಪರ್ಯಾಯ.

ಭಗವಂತನು ಒಳಿತು-ಕೆಡಕು ಕರ್ಮಗಳೆರಡಕ್ಕೂ ಹೊಣೆಗಾರರಿರುವ ಎಂಬುದು ಜಗನ್ನಾಥದಾಸರ ಶ್ರೇಷ್ಠತಮ ಬೋಧೆ. ಈ ಸಂದರ್ಭದಲ್ಲಿ ಅಮೆರಿಕೆಯ ದಾರ್ಶನಿಕನಾದ ಜೇಮ್ಸನು ತನ್ನ 'ನಿಯತಿಯ ಶೃಂಗಾಪತ್ತಿ' (Dilema of Determinism)ಎಂಬ ನಿಬಂಧದಲ್ಲಿ ಒಂದು ಸ್ವಾರಸ್ಯದ ಉದಾಹರಣೆಯನ್ನು ಕೊಟ್ಟಿರುವನು. ಅಲ್ಲಿ ಅವನು ಮಾನವನ ಸ್ವಾತಂತ್ರ್ಯ ಹಾಗೂ ದೇವರ ಪೂರ್ವಜ್ಞತೆ ಇಲ್ಲವೆ ಸರ್ವಸಮರ್ಥತೆ ಇವುಗಳ ಸಂಬಂಧವನ್ನು ಅರುಹಿರುವನು. ಹೊಸಬನೊಬ್ಬನು ಒಬ್ಬ ನಿಪುಣ ಆಟಗಾರ ನೊಡನೆ ಚದುರಂಗದ ಆಟವನ್ನು ಆಡಲಿರುವನೆಂದು ಭಾವಿಸಿರಿ. ಹೊಸನು ಒಂದು ಬಗೆಯಾಗಿ ಕಾಯಿಯನ್ನು ನಡೆಯಿಸಿ, ಕೊನೆಗೆ ಗೆಲ್ಲುವನು. ಇದು ಜಗನ್ನಾಥ ದಾಸರ ಬೋಧೆಯ ಅಂತಿಮ ಪರ್ಯವಸಾನ. ಅವರು ಅತಿ ಉತ್ತಮವಾದ 'ದಾರ್ಶನಿಕ' ಪದವನ್ನು ಬರೆದಿರುವರು. ಇಂಥ ಪದವು ದಾಸಕೂಟದ ಅನುಭಾವಸಾಹಿತ್ಯದಲ್ಲಿ ದೊರೆಯುವುದು ಅಪರೂಪ.

■■

ಪ್ರಕರಣ ಹತ್ತು

ಸಂತ–ದೇವರ ಸಂಬಂಧ

ಸಂತರ ಲಕ್ಷಣಗಳನ್ನು ವಿಚಾರಿಸಿದ ತರುವಾಯ, ನಾನು ಸಂತ–ದೇವರ ಸಂಬಂಧವನ್ನು ವಿವರಿಸಬಯಸುವೆ. ಈ ಸಮಸ್ಯೆಯನ್ನು ಕೆಳಗಣ ನಾಲ್ಕು ಬೇರೆ ಬೇರೆ ದೃಷ್ಟಿಕೋನಗಳಿಂದಲೂ, ಮನೋವೃತ್ತಿಗಳಿಂದಲೂ ಕಾಣಬಹುದು: ೧) ದಾರ್ಶನಿಕ ಮನೋವೃತ್ತಿ, ೨)ಪ್ರಾರ್ಥನೆಯ ಮನೋವೃತ್ತಿ, ೩) ಕಲಹದ ಮನೋವೃತ್ತಿ ಹಾಗೂ ೪) ಅನುಭಾವದ ಮನೋವೃತ್ತಿ.

ದಾರ್ಶನಿಕ ಮನೋವೃತ್ತಿಯಿಂದ ನೋಡುವಾಗ, ನಾವು ಬಸವೇಶ್ವರರ 'ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯ!' ಹಾಗೂ 'ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು' ಎಂಬ ಎರಡು ವಚನಗಳನ್ನು ವಿವರಿಸುವೆವು. ಅವುಗಳಲ್ಲಿ ಭಗವಂತನ ಸರ್ವವ್ಯಾಪಕಕೆ, ಸರ್ವಜ್ಞತೆ ಹಾಗೂ ಸರ್ವಸಮರ್ಥತೆಯನ್ನು ಬಣ್ಣಿಸಲಾಗಿದೆ. ಮೊದಲನೆಯ ವಚನದಲ್ಲಿ ಆತನ ಸರ್ವವ್ಯಾಪಕತೆಯು ಹಾಗೂ ಸರ್ವಜ್ಞತೆಯು ಉಲ್ಲೇಖಿಸಲ್ಪಟ್ಟಿದ್ದರೆ, ಎರಡನೆಯದರಲ್ಲಿ ಆತನ ಸರ್ವಸಮರ್ಥತೆ ಯು ಸೂಚಿತವಾಗಿದೆ. ಭಗವಂತನ ಸರ್ವವ್ಯಾಪಕತೆಯ ಬಗೆಗೆ ಮೊದಲನೆಯ ವಚನದಲ್ಲಿಯ ಮೂರು ಮಾತುಗಳನ್ನು ನಾವು ಲಕ್ಷಿಸಬೇಕು. ಭಗವಂತನು ಜಗತ್ತನ್ನು ವ್ಯಾಪಿಸುವನು– 'ಸುತ್ತು'ವನು; ಮತ್ತು ಭಕ್ತನೂ ಕೂಡ ತುಂಬ ವಿಶಾಲನೂ, ವಿಸ್ತಾರಶೀಲನೂ ಇರುವುದರಿಂದ ಅವನು ಸಹ ಭಗವಂತನನ್ನು ಸುತ್ತುವರಿಯುವನು ಎಂದು ಬಸವಣ್ಣನವರು ಹೇಳಿರುವರು. ಆದುದರಿಂದಭಕ್ತನೂ ಕೂಡ ಜಗತ್ತನ್ನು ಸುತ್ತುವನು ಎಂಬುದು ಇದರಿಂದ ಸ್ಪಷ್ಟವಾಗುವುದು. ಭಕ್ತನು ಭಗವಂತನನನ್ನು ಸುತ್ತುವರಿಯುವನೆಂದ ಮೇಲೆ, ಆತನನ್ನು ಭಗವಂತನೇ ಅಪ್ರತ್ಯಕ್ಷ ವಾಗಿ ತನಗಿಂತ ಹಿರಿಯನನ್ನಾಗಿ ಮಾಡಿರಲು ಸಾಕು. ಆದರೆ ಭಗವಂತನು ಜಗತ್ತನ್ನು ಅವಕಾಶದೃಷ್ಟಿಯಿಂದ ಸುತ್ತುವರಿದರೆ, ಭಕ್ತನು ಭಗವಂತನನ್ನು ಪ್ರೀತಿ–ಭಕ್ತಿಯ ದೃಷ್ಟಿಯಿಂದ ಸುತ್ತುವರಿಯುವನು. ಈ ರೀತಿ ಭಗವಂತನು ತನ್ನ ಭಕ್ತನ ಪ್ರೀತಿಯ ಜಾಲದಲ್ಲಿ ಪೂರ್ತಿಯಾಗಿ ಸಿಲುಕಿರುವನು. ಇದು ಮೊದಲನೆಯ ಮಾತು. ಭಗವಂತ–ಭಕ್ತರ ಅನ್ಯೋನ್ಯ ವ್ಯಾಪಕತೆಯು ಆ ವಚನದಲ್ಲಿ ಬಂದಿರುವ ಎರಡ ನೆಯ ಮಾತು. ಭಗವಂತನು ಭಕ್ತನಲ್ಲಿ ಪೂರ್ತಿಯಾಗಿ ವ್ಯಾಪಿಸಿರುವನು ಹಾಗೂ ಭಕ್ತನು ಭಗವಂತನಲ್ಲಿ ಪರಿಪೂರ್ಣವಾಗಿ ವ್ಯಾಪಿಸಿರುವನು. ಇದೊಂದು ಬಲು

ಬಿಗಿಯಾದ ಸಮಸ್ಯೆ. ಅವರಿಬ್ಬರೂ ಏಕರೂಪರಿರುವರು ಎಂದು ಹೇಳುವುದರಿಂದ ಈ ಸಮಸ್ಯೆಯು ಬಿಡಲರಿಯದು. ಭಗವಂತನು ಭಕ್ತನಲ್ಲಿ ತುಂಬಿದ್ದರೆ, ಭಕ್ತನು ಭಗವಂತನಲ್ಲಿ ತುಂಬಿರುವನು. ನಾವು ಅನ್ಯೋನ್ಯ ವ್ಯಾಪಕತೆ ಎಂದು ಕರೆಯಬಹುದಾದ ಈ ಅಲೌಕಿಕ ಘಟನೆಯು ಸಂಭವಿಸಬೇಕಾದರೆ ಅವರಿಬ್ಬರೂ ಏಕರೂಪರಿರಬೇಕು-ಅಭಿನ್ನರಿರಬೇಕು.ಪ್ರತಿಬಿಂಬದ ಘಟನೆಯು ಅಲ್ಲಿ ಅರುಹಲಾದ ಮೂರನೆಯ ಮಾತು. 'ಆನೆಯು ಕನ್ನಡಿಯಲ್ಲಿ ಪ್ರತಿಬಿಂಬವಾಗುವಂತೆ, ದೇವರೆ! ನೀನು ನನ್ನಲ್ಲಿ ಪ್ರತಿಬಿಂಬಿತನಾಗಿರುವೆ' ಎಂದು ಬಸವಣ್ಣನವರು ಹೇಳುವರು. ಇದೂ ಒಂದು ಅತಿ ಮಹತ್ವದ ದಾರ್ಶನಿಕ ಸಮಸ್ಯೆಯನ್ನು ನಿರ್ಮಿಸುವುದು. ಆನೆಯು ಕನ್ನಡಿಯಲ್ಲಿ ಅಂಶತಃ ಪ್ರತಿಬಿಂಬಿತವಾಗುವುದು, ಪೂರ್ತಿಯಾಗಲ್ಲ. ವೇದಾಂತ ದರ್ಶನದ ಮುಂದಿನ ಬೆಳವಣಿಗೆಗಳನ್ನು ಅಭ್ಯಸಿಸಿದವರು ಈ ವಿಷಯವು ಮೂರು ದೃಷ್ಟಿಕೋನಗಳಿಂದ ನೋಡಲಾಗಿರುವುದನ್ನು ಬಲ್ಲರು: (೧) ಮೊದಲನೆಯದು 'ಅಂಗಾಂಗಭಾವ'- 'ಆತ್ಮನು ಪರಮಾತ್ಮನ ಪ್ರತ್ಯಕ್ಷ ಅಂಗ' ಎಂಬ ಕಲ್ಪನೆ. (೨) ಎರಡನೆಯದು 'ಬಿಂಬ ಪ್ರತಿಬಿಂಬ ಭಾವ' ಅಂದರೆ 'ಆತ್ಮನು ಪರಮಾತ್ಮನ ಪ್ರತಿಬಿಂಬ' ಎಂಬ ಕಲ್ಪನೆ, ಹಾಗೂ (೩) ಮೂರನೆಯದು, 'ತಾದಾತ್ಮ್ಯಭಾವ' ಅಂದರೆ 'ಆತ್ಮನು ಪರಮಾತ್ಮನಿಂದ ಅಭಿನ್ನನು' ಎಂಬ ಕಲ್ಪನೆ. ಈ ಮೂರು ಸಿದ್ಧಾಂತಗಳನ್ನು ಕುರಿತು, ಶಂಕರಾಚಾರ್ಯರ ಅನುಯಾಯಿಗಳಲ್ಲೇ ಹಿರಿಯ ವಿವಾದವು ಜನಿಸಿರುವುದು. ನಿಜವಾಗಿ, ಆನೆಯು ಕನ್ನಡಿಯಲ್ಲಿ ಸಮಗ್ರವಾಗಿ ಚಿತ್ರಿತವಾಗುವುದು ಸಾಧ್ಯವಿಲ್ಲ. ಆದರೆ ಬಸವಣ್ಣನವರ ಹೇಳಿಕೆಯ ನಿಶ್ಚಿತವಾದ ಅರ್ಥವನ್ನು ನಾವು ಅರಿಯೆವು. ಒಂದು ವೇಳೆ, ಪರಮಾತ್ಮನು ಅಂಶತಃ ವ್ಯಾಪಕನಿರುವ ಎಂಬುದು ಅವರ ಹೇಳಿಕೆಯ ಅರ್ಥವಿರಬಹುದು. ಆದರೆ ಅವನು ಸಮಗ್ರವಾಗಿ ವ್ಯಾಪಕನಿರುವನೆಂದು ಹೇಳಲಾಗಿದ್ದರೆ, ಅವನು ಪೂರ್ತಿಯಾಗಿ ಪ್ರತಿಬಿಂಬಿತ ನಾಗಿರಲು ಬೇಕು. ಆದರೆ ನಾನು ಇದರ ನಿರ್ಣಯ ವನ್ನು ಬಸವಣ್ಣನವರ ಸಾಹಿತ್ಯದ ಆಳವಾದ ಅಧ್ಯಯನವನ್ನು ಮಾಡಿದ ವಿದ್ಯಾರ್ಥಿ ಗಳಿಗೆ ಒಪ್ಪಿಸುವೆ. ಅವರು ಈ ವಿಷಯವನ್ನು ಕುರಿತ ಬೇರೆ ಸಂದರ್ಭಗಳನ್ನು ಕಂಡು, ಬಸವಣ್ಣನವರು ಇಲ್ಲಿ ಸಾಧರ್ಮ್ಯವನ್ನು ಸೂಚಿಸುವರೋ ಇಲ್ಲವೇ ತಾದಾತ್ಮ್ಯವನ್ನು ಸೂಚಿಸುವರೋ ಎಂಬುದನ್ನು ಗುರುತಿಸಬೇಕು. ಇಲ್ಲಿ ಸಾಧರ್ಮ್ಯದ ಉದಾಹರಣೆಯನ್ನು ಕೊಟ್ಟಿದ್ದರೂ, ಬಸವಣ್ಣನವರು ಬಹುತರವಾಗಿ ತಾದಾತ್ಮ್ಯ ವನ್ನೇ ಸೂಚಿಸಿರಬಹುದು ಎಂದೆನಿಸುವುದು. 'ಉಪಮೆಯು ಸಾದೃಶ್ಯವು ಭಿನ್ನತೆ ಯನ್ನು ಆಶ್ರಯಿಸಿರುವುದು' ಎಂದು ಮಮ್ಮಟನು ಹೇಳುವನು. ಅದೇ ಮೇರೆಗೆ ಭಕ್ತ-ಭಗವಂತರಲ್ಲಿಯ ಸಾಮ್ಯವು ಅವರೀರ್ವರಲ್ಲಿಯ ವೈಷಮ್ಯವನ್ನು ಆಧರಿಸಿದೆ. ಇದಾಯಿತು ಸರ್ವವ್ಯಾಪಕತೆಯ ವಿಚಾರ.

ಇನ್ನು ಸರ್ವಜ್ಞತೆಯನ್ನು ಕುರಿತು ವಿಚಾರಿಸುವಾ! ಬಸವಣ್ಣನವರ ವಚನದಲ್ಲಿ ಒಂದು ಅರ್ಥಪೂರ್ಣವಾದ ಸಾಲು ಬಂದಿರುವುದು. ಅದನ್ನು ಬೇರೆ ಬರೆಹ ಗಾರರೂ ಪುನರುಚ್ಚರಿಸಿರುವರು: 'ನೀನು ಜಗಕೆ ಬಲ್ಲಿದನು; ಆನು ನಿನಗೆ ಬಲ್ಲಿದನು ಕಂಡಯ್ಯಾ'! ಇದೇ ಆ ಸಾಲು. ಭಗವಂತನು ಎಲ್ಲವನ್ನು ಬಲ್ಲನು ಎಂಬುದರಲ್ಲಿ ಸಂದೇಹವೇ ಇಲ್ಲ. ಭಗವಂತನು ಸರ್ವಜ್ಞನೇ ಇರುವ. ಆದರೆ ಭಕ್ತನು ಭಗವಂತ ನನ್ನು ಬಲ್ಲನು. ಆದುದರಿಂದ ಅವನು ಈ ಸರ್ವಜ್ಞನಿಗಿಂತ ಮಿಗಿಲಾದವನು. ಇದನ್ನೇ ಬಸವಣ್ಣನವರು ಹೇಳಿರುವರು. ತಾವು ಸರ್ವಜ್ಞರೆಂದು ಜಂಬಕೊಚ್ಚಿ ಕೊಳ್ಳುವ ಜನರನ್ನು ಭಗವಂತನು ಬಲ್ಲನು. ಆದರೆ ಭಕ್ತನು ಭಗವಂತನನ್ನು ಕೂಡ ಬಲ್ಲನು. ಭಗವಂತನ ಸರ್ವಜ್ಞತೆಯನ್ನು ಕುರಿತು ಇನ್ನೊಂದು ಪ್ರಸಿದ್ಧ ವಚನ ವಿರುವುದು. ಅದನ್ನು ನಾನು ಸಿದ್ಧಲಿಂಗೇಶ್ವರನೆಂಬ ಲೇಖಕನ ಬರಹದಿಂದ ಪಡೆದಿರುವೆ. ಅದು ಈ ರೀತಿಯಿರುವುದು:

ಸರ್ವಮನಃಪ್ರೇರಕ, ಸರ್ವಜ್ಞ, ಸಂವಿತ್ಪ್ರಕಾಶ ಪರಮೇಶ್ವರನ
ಮನವೆಂಬ ದರ್ಪಣದೊಳಗೆ ಬಿಂದು ಆಕಾಶ ರೂಪನಾಗಿ,
ಬೆಳಗಿ ತೋರುವ ಶಿವ ನೋಡಿ ಕೂಡಬಲ್ಲಾತನೆ ಪರಶಿವಯೋಗಿ!

ಈ ವಚನದಲ್ಲಿ ಸಿದ್ಧಲಿಂಗೇಶ್ವರನು, ಭಗವಂತನು 'ಸರ್ವಜ್ಞನು' ಹಾಗೂ 'ಸಂವಿತ್‌ಪ್ರಕಾಶನು' ಎಂದು ಹೇಳಿರುವನು. ಭಗವಂತನ ಆ ಪ್ರಕಾಶವು ಮನವೆಂಬ ಕನ್ನಡಿಯಲ್ಲಿ 'ಬಿಂದು' ರೂಪದಿಂದ, 'ಚೈತನ್ಯಾಣು'ವಿನ ರೂಪದಿಂದ ಪ್ರತಿಬಿಂಬಿ ತವಾಗುವದು; ಮತ್ತು ಭಕ್ತನು ಆ 'ಬಿಂದು'ವನ್ನು ಅರಿವನು. ಅದು ಪ್ರಕಾಶ ರೂಪದ್ದಿದ್ದು, ಭಗವಂತನ "ಸಂವಿತ್" ಅಂದರೆ ಜ್ಞಾನರೂಪದಿಂದ ಬಂದಿರುವುದು. ಆದುದರಿಂದ ಭಗವಂತನು ತಾನೇ ಸರ್ವಜ್ಞನೆಂಬ ಅಭಿಮಾನ ತಳೆಯುವ ಅಗತ್ಯವಿಲ್ಲ. ಅವನ ಇರವೆಲ್ಲ ಪ್ರಕಾಶಮಯವು. ಅವನದು 'ಕೋಟಿ-ಪ್ರಕಾಶ'- ಶ್ರೇಷ್ಠತಮ ಬೆಳಕು. ಆದರೆ ಭಕ್ತನು ತನ್ನ ಹೃದಯದಲ್ಲಿ ಪ್ರತಿಬಿಂಬಿತವಾದ ಈ ಬೆಳಕಿನ 'ಬಿಂದು' ರೂಪವನ್ನು ಕಾಣುವದರಿಂದ ತಾನು ಪ್ರತ್ಯಕ್ಷ ಭಗವಂತ ನಿಗಿಂತಲೂ ಮಿಗಿಲಾದ ಸರ್ವಜ್ಞನು ಎಂದವನು ಬಗೆವನು.

ಸರ್ವಸಮರ್ಥತೆಯ ಬಗೆಗೆ ಬಸವಣ್ಣನವರ ವಚನದಲ್ಲಿ ನಾಲ್ಕು ಉದಾ ಹರಣೆಗಳು ಕೊಡಲಾಗಿವೆ: ಸೌಭಾಗ್ಯದೇವತೆಯೆ ನಮ್ಮನ್ನು ಆಶೀರ್ವದಿಸಲು ಬಯಸಿದಾಗ ಅವಳನ್ನು ತಡೆಯಬಲ್ಲವರಾರು? ನೀವು ಹೋದಲ್ಲೆಲ್ಲ ನಿಮ್ಮನ್ನವಳು ಹಿಂಬಾಲಿಸುವಳು. ಎರಡನೆಯದಾಗಿ, ಹಿರಿಯ ತೊರೆಯು ಹರಿದು ಒಳಸೇರಿದಾಗ, ಕೆರೆಯು ಅರೆನಿಮಿಷದಲ್ಲಿ ತಾನಾಗಿಯೆ ತುಂಬಿಬಿಡುವುದು. ಈ ಘಟನೆಯನ್ನು ನನ್ನ ಜನ್ಮಸ್ಥಳವಾದ ಜಮಖಂಡಿಯಲ್ಲಿ ಕಾಣಬಹುದು. ಅಲ್ಲಿಯ ನಾಗಝರಿ ಎಂಬ ತೊರೆಯು ಲಕ್ಕಣಕೆರೆ ಎಂಬ ಕೆರೆಯಲ್ಲಿ ಹರಿದು ಬರುವುದು. ನಾಲ್ಕು ತಿಂಗಳ ಪೂರ್ವದಲ್ಲಿ ನಾನಲ್ಲಿಗೆ ಹೋದಾಗ, ನಾನಿದನ್ನು ಕಂಡೆ. ಈ ರೀತಿ, ಕೆರೆಯಲ್ಲಿ

ಹರಿದು ಬರುವ ಒಂದು ತೊರೆಯು, ಅದನ್ನು ಅಲ್ಪಾವಧಿಯಲ್ಲಿ ಪೂರ್ತಿಯಾಗಿ ತುಂಬಿ ಬಿಡಬಲ್ಲದು. ಅದೇ ಮೇರೆಗೆ, ಭಗವಂತನ ಚೈತನ್ಯ ಪ್ರವಾಹವು ಸಂತರ ಹೃದಯದಲ್ಲಿ ಸೇರಿದಾಗ ಸಂತರು ಸರ್ವಸಮರ್ಥರಾಗುವರು. ಬಸವಣ್ಣನವರು ಕೊಟ್ಟಿರುವ ಮೂರನೆಯ ಉದಾಹರಣೆಯು 'ಅರಸು ಪರಿವಾರ ಕೈವಾರ'ದ್ದು. ಇಲ್ಲಿಯ 'ಕೈವಾರ'ವೆಂದರೆ 'ನೆರವು' ಹಾಗೂ 'ಹೊಗಳಿಕೆ'. ಅರಸನ ಪರಿವಾರವು ಸಂಕಟದಲ್ಲಿ ನಿಮಗೆ ನೆರವಾಗುವುದು. ಇಲ್ಲವೆ ನಿಮಗೆ ಹೊಗಳಿಕೆಯನ್ನು ಸಲ್ಲಿಸುವದು. ಇದು ಅರಸು ಪರಿವಾರವು ನಿಮಗೆ ಸಲ್ಲಿಸುವ ಇಬ್ಬಗೆಯ ಕಾಣಿಕೆ. ನಿಮ್ಮ ಭಕ್ತಿಯಿಂದ ಭಗವಂತನು ಪ್ರೀತನಾದಾಗ ಅವನು ಈ ಬಗೆಯ ಪ್ರಸಾದವನ್ನು ದಯಪಾಲಿಸುವನೆಂದು ಬಸವಣ್ಣನವರು ಹೇಳಿರುವರು. ಆದರೆ ಅವನು ಅಪ್ರೀತನಾದಾಗ ಏನಾಗುವುದು ಗೊತ್ತೇ? ನೀರಿನಿಂದ ತುಂಬಿದ ಹರವಿಗೆ ಕಲ್ಲು ತಾಗಿದರೆ ಅದು ಒಡೆದು ಅದರಲ್ಲಿಯ ನೀರು ಒಂದು ನಿಮಿಷದಲ್ಲಿ ಚೆಲ್ಲಿ ಹೋಗುವಂತೆ, ಭಗವಂತನು ಅಸಂತುಷ್ಟನಾದ ಕೂಡಲೆ ನಿಮ್ಮ ಆಶೆ ಆಕಾಂಕ್ಷೆಗಳೆಲ್ಲ ನಿಷ್ಫಲವಾಗುವವು. ಇದು ಭಗವಂತನ ಸರ್ವಸಮರ್ಥತೆಯ ನಿದರ್ಶನ. ಈ ಬಗೆಯಾಗಿ ಭಗವಂತನ ಸರ್ವವ್ಯಾಪಕತೆ, ಸರ್ವಜ್ಞತೆ ಹಾಗೂ ಸರ್ವಸಮರ್ಥತೆಗಳನ್ನು ಬಸವಣ್ಣನವರು ಈ ಎರಡು ವಚನಗಳಲ್ಲಿ ಎತ್ತಿತೋರಿಸಿರುವರು.

ಈ ವರೆಗೆ ಭಗವಂತನ ನಿರ್ಗುಣಸ್ವರೂಪವನ್ನು ಕುರಿತು ವಿಚಾರಿಸಿದ್ದಾಯಿತು. ಇನ್ನು ನಾವು ಸಗುಣ ಭಗವಂತನಿಗೆ ಮಾಡಲಾದ ಪ್ರಾರ್ಥನೆಗಳೆಡೆಗೆ ಸಾಗುವೆವು. ಅವುಗಳಲ್ಲಿಯ ಒಂದು ರಾಘವೇಂದ್ರ ಸ್ವಾಮಿಗಳದು ಹಾಗೂ ಇನ್ನೊಂದು ಮಹಿಪತಿನಂದನರದು. ಇವೆರಡೂ ಪ್ರಾರ್ಥನೆಯ ಮನೋಭಾವವನ್ನು ಬಣ್ಣಿಸುವವು. 'ಇಂದು ಎನಗೆ ಗೋವಿಂದ, ನಿನ್ನ ಪಾದಾರವಿಂದ ತೋರೋ!' ಎಂಬ ಪದವು ತುಂಬ ಪ್ರಸಿದ್ಧವಾದುದು. ಅದರಿಂದ ಉದ್ಭವಿಸುವ ಕೆಲ ಅಂಶಗಳನ್ನು ತಮ್ಮ ಗಮನಕ್ಕೆ ತರುವದನ್ನುಳಿದು ಇಲ್ಲಿ ಹೆಚ್ಚಿಗೆ ಏನನ್ನೂ ಅರುಹುವ ಅಗತ್ಯವಿಲ್ಲ. ಆದರೆ ಪ್ರಾಸ್ತಾವಿಕವಾಗಿ ರಾಘವೇಂದ್ರ ಸ್ವಾಮಿಗಳ ಅಲ್ಪ ಇತಿಹಾಸವನ್ನು ಹೇಳುವುದು ಅವಶ್ಯ. ಅದು ಅತೀ ಮಹತ್ವದ್ದಿರುವುದು. ರಾಘವೇಂದ್ರ ಸ್ವಾಮಿಗಳ ಇಲ್ಲವೆ ರಾಘವೇಂದ್ರ ತೀರ್ಥರ ಬೌದ್ಧಿಕ ಹಾಗೂ ಪಾರಮಾರ್ಥಿಕ ಹಿರಿಮೆಯನ್ನು ಅವರ ಪ್ರತಿಸ್ಪರ್ಧಿಗಳು ಮೆಚ್ಚಲಿಲ್ಲವೆಂಬುದು ನಾವು ಅರಿಯಬೇಕಾದ ಮೊದಲನೆಯ ವಿಷಯ. ಆದುದರಿಂದ ಅವರ ಆಪ್ತರಿಂದಾಗಲಿ ಇಲ್ಲವೆ ಅವರ ಪೀಠಕ್ಕಾಗಿ ಸ್ಪರ್ಧಿಸುವವರಿಂದಾಗಲಿ ಅವರು ಕುತ್ತಿಗೆಯ ವರೆಗೆ ಮಳಲಿನಲ್ಲಿ ಹೂಳಲ್ಪಟ್ಟರೆಂದು ಬಗೆಯಲಾಗಿರುವುದು. ಯಾದವೇಂದ್ರತೀರ್ಥರು ಅವರಲ್ಲಿ ಒಬ್ಬರಂತೆ. ಅದೇನೇ ಇದ್ದರೂ ರಾಯರು ಕುತ್ತಿಗೆಯ ವರೆಗೆ ಹೂಳಲ್ಪಟ್ಟಾಗ, ಆ ಸ್ಥಿತಿಯಲ್ಲಿ ಅವರೀ ಪದವನ್ನು ಹಾಡಿ ಭಗವಂತನ ನೆರವನ್ನು ಕೋರಿದರು. ತನಗೆ ನೆರವಾಗುವದಕ್ಕೆ

ಧಾವಿಸಲು ಭಗವಂತನನ್ನು ಪ್ರಾರ್ಥಿಸಿದರು. ಇದೊಂದು ಕರುಣಾರಸಪೂರ್ಣಕವನ. ಅದನ್ನು ಕೇಳಿ ಭಗವಂತನು ಅವರನ್ನು ಬಿಡಿಸಿದನೆಂದು ಹೇಳಲಾಗುತ್ತದೆ. ಇದು ಈ ಪದವನ್ನು ಕುರಿತು ಗಮನಿಸತಕ್ಕ ಮೊದಲನೆಯ ಅಂಶ. ಎರಡನೆಯದಾಗಿ, ರಾಯರು ಹಿರಿಯ ಸಾಹಿತ್ಯಕರು, ಒಳ್ಳೆಯ ವಿಚಾರವಂತ ದಾರ್ಶನಿಕರು. ಅವರು ಕನ್ನಡದಲ್ಲಿ ವಿಶೇಷವಾಗಿ ಬರೆದಿಲ್ಲವಷ್ಟೇ. ಇದು ನನ್ನ ಭಾವನೆ. ಅವರು ಬರೆದ ಕನ್ನಡ ಪದವು ಇದೊಂದೆ ಇರುವದೆಂದು ಕೇಳಿರುವೆ. ಅವರು ಅದೆಷ್ಟೋ ಸಂಸ್ಕೃತ ಭಾಷ್ಯಗಳನ್ನು ಬರೆದಿರುವರು. ಅವರ ಭಾಷ್ಯಗಳಲ್ಲೊಂದು ಮಧ್ವಾಚಾರ್ಯರನ್ನು ಕುರಿತು ಬರೆಯಲಾದುದು. ಎರಡನೆಯದು 'ಋಗ್ವೇದದ ಕೆಲಭಾಗ'ಗಳನ್ನು ಕುರಿತು ಬರೆಯಲಾದುದು. ಮೂರನೆಯದು 'ಐತರೇಯ ಉಪನಿಷತ್ತ'ನ್ನು ಕುರಿತು ಬರೆಯಲಾದುದು. ಅವರು ಮೇಲ್ತರಗತಿಯ ಪಂಡಿತರಿದ್ದರೆಂಬುದರಲ್ಲಿ ಸಂದೇಹ ವಿಲ್ಲ. ಅವರು ಶ್ರೇಷ್ಠ ಸಂಗೀತಗಾರರೂ ಇದ್ದರು. ಇದನ್ನು ಈ ಪದದಲ್ಲಿಯ ಸಂಗೀತದಿಂದ ಕಾಣಬಹುದಲ್ಲದೆ, ಅವರ 'ವೇಣುಗೋಪಾಲ' ಎಂಬ ಮುದ್ರಿಕೆ ಯಿಂದಲೂ ಊಹಿಸಬಹುದು. ಈ ರೀತಿ ಅವರು ಹೆಸರಾಂತ ಸಾಹಿತ್ಯಕರು, ದಾರ್ಶನಿಕರು ಹಾಗೂ ಸಂಗೀತಗಾರರಿದ್ದರು. ಅವರು ಪರಂಧಾಮವನ್ನೈದುವ ಸಮಯ ಬಂದಾಗ, ಸಜೀವ ಇಲ್ಲವೆ ಜೀವಂತ ಸಮಾಧಿಯನ್ನು ತೆಗೆದುಕೊಂಡ ರೆಂದು ಹೇಳಲಾಗುವುದು. ಇದು ಈ ಪದಕ್ಕೆ ಸಂಬಂಧಿಸಿದ ಮೊದಲನೆಯ ಅಂಶ. ಅವರ ಸಮಾಧಿಯು ಜ್ಞಾನೇಶ್ವರರ ಹಾಗೂ ಇನ್ನೋರ್ವ ಹಿರಿಯ ಕನ್ನಡ ಸಂತರೂ ದಾರ್ಶನಿಕರೂ ಆದ ವಾದಿರಾಜರ ಸಜೀವ ಸಮಾಧಿಯನ್ನು ಹೋಲುವದು. ವಾದಿರಾಜರು ರಾಯರಿಗಿಂತಲೂ ಸುಮಾರು ಎರಡುನೂರು ವರುಷಗಳ ಪೂರ್ವದಲ್ಲಿ ಬಾಳಿದರು. ಅವರು ಕೂಡ ಸಜೀವ ಸಮಾಧಿಯನ್ನು ತೆಗೆದುಕೊಂಡ ರೆಂದು ಹೇಳಲಾಗುವುದು. ರಾಘವೇಂದ್ರ ಸ್ವಾಮಿಗಳು ಸಜೀವ ಸಮಾಧಿಯನ್ನು ತೆಗೆದುಕೊಂಡಾಗ ಅವರ ಕೆಲ ಶಿಷ್ಯರು ಅವರ ಬಳಿಯಿದ್ದರು. ಆದರೆ ಅವರ ಪ್ರಿಯತಮ ಪಂಡಿತ, ಪ್ರಸಿದ್ಧ ಶಿಷ್ಯನಾದ ಅಪಣಾಚಾರ್ಯನು ಅವರ ಹತ್ತಿರ ಇರಲಿಲ್ಲ. ರಾಘವೇಂದ್ರ ಸ್ವಾಮಿಗಳು ಸಮಾಧಿಸ್ಥರಾದ ವಾರ್ತೆಯನ್ನು ಕೇಳಿ, ಅಪಣಾಚಾರ್ಯನು ಅಲ್ಲಿ ಬಂದು ತುಂಬ ಕಳವಳಗೊಂಡನು. ಅವನ ಶೋಕಾವೇಗವು ತಡೆಯಲಾರದಂತಾಯಿತು. ಅತೀವ ವಿಹ್ವಲನಾಗಿ, ಅವನು ತನ್ನ ಅಂತರಂಗದ ದುಗುಡವನ್ನು ಕಂಬನಿಗಳ ಮುಖಾಂತರ ತೋಡಿಕೊಂಡನು. ಕೊನೆಗೆ ತನ್ನ ಶ್ರೇಷ್ಠಸದ್ಗುರುಗಳನ್ನು ಸ್ತುತಿಸಲು ಒಂದು ಅಷ್ಟಕವನ್ನು ರಚಿಸಬೇಕೆಂದು ಅವನು ಬಗೆದನು. ಅವನು ಅದರಲ್ಲಿ ಏಳು ಶ್ಲೋಕಗಳನ್ನೂ, ಎಂಟನೆಯ ಶ್ಲೋಕದ ಮೂರು ಸಾಲುಗಳನ್ನೂ ರಚಿಸಿದನು. ಆದರೆ ಅದರ ಕೊನೆಯ ಸಾಲಿನ ಉತ್ತರಾರ್ಧವನ್ನು ರಚಿಸುವ ಅವನ ಯತ್ನಗಳೆಲ್ಲ ವಿಫಲವಾದವು. ಅವನ ಗಂಟಲು ಉಬ್ಬಿತು. ಅವನಿಗೆ ಮಾತಾಲು ಬರದಾಯಿತು. ಅವನ ಕೈಗಳು ಅಲೆಯದಾದವು;

ಮತ್ತು ಅವನು ತನ್ನ ಸಮಾಧಿಸ್ಥರಾದ ಸದ್ಗುರುಗಳ ಬಗೆಗೆ ಶೋಕಪೂರಿತನಾದನು. ಆಗ ರಾಘವೇಂದ್ರ ಸ್ವಾಮಿಗಳು ತಮ್ಮ ಸಮಾಧಿಯೊಳಗಿಂದ ಮುಂದಿನ ಶಬ್ದಗಳನ್ನು ಅರುಹಿದರು: 'ಸಾಕ್ಷೀ ಹಯಾಸ್ಯೋತ್ರಹಿ' 'ಹಯಗ್ರೀವನು ನಿನ್ನ ಶ್ರೇಷ್ಠ ಶಕ್ತಿಗಳ ಬಗೆಗೂ, ನನ್ನಲ್ಲಿಯ ನಿನ್ನ ಭಕ್ತಿಯ ಬಗೆಗೂ ಸಾಕ್ಷಿಯಾಗಿರುವನಯ್ಯ!' (ಆದುದರಿಂದ ನಿನಗೆ ನನ್ನ ಆಶೀರ್ವಾದವಿರುವುದು. ನೀನು ಅಳುವದೇತಕ್ಕೆ? ಈ ಬಗೆಯಾಗಿ ಗಂಟಲನ್ನು ಉಬ್ಬಿಸಿಕೊಳ್ಳುವುದೇತಕ್ಕೆ?) ಇದನ್ನು ಕೇಳಿ ಅಪಣಾಚಾರ್ಯನ ದುಃಖವು ಅಳಿಯಿತು. ಇಡಿಯ ಕಥೆಯು ಈ ಬಗೆಯದಿರುವುದು. ಈ ಪ್ರಾರ್ಥನೆಯ ಒಳತಿರುಳನ್ನು ದಾರ್ಶನಿಕ ದೃಷ್ಟಿಯಿಂದ ಕಂಡರೆ, ಅದರಲ್ಲಿ ಕೆಲ ವಿಚಾರಣೀಯ ಅಂಶಗಳು ದೊರೆಯುವವು. ಆದರೆ, ಅದರ ಬಗೆಗಿರುವ ಕಥೆಯು ಹೆಚ್ಚು ಮಹತ್ವದ್ದಿರುವುದರಿಂದ ಅದನ್ನು ಮೊದಲು ಅರುಹಿದ್ದಾಯಿತು. ಈ ಪದದಲ್ಲಿ ಕವಿಯು ಹೇಳುವದೇನೆಂದರೆ: "ಈ ಜಗತ್ತಿನಲ್ಲಿ ನಾನು ಅತಿಯಾಗಿ ನೊಂದೆನಯ್ಯ! ನಾನು ದಾರಿತಪ್ಪಿ ನಡೆದೆ. ಕುಜನರ ಸಂಗದಲ್ಲಿ ಸೇರಿದೆ. ಈ ಸಂಕಟದಿಂದ ಪಾರಾಗುವ ದಾರಿಯನ್ನು ನನಗಾರೂ ತೋರಲಿಲ್ಲ. ಆದುದರಿಂದ ಈ ದುಃಖದಿಂದ ಮುಕ್ತನಾಗುವ ಯುಕ್ತಿಯನ್ನು ದಯವಿಟ್ಟು ತೋರಯ್ಯ ದೇವಾ! ಕೃಷ್ಣಾ! ಅಂತಿಮವಾಗಿ ನಿನಗೆ ಅಸಾಧ್ಯವಾದುದಾವುದು? ಹೇಳಿ ಕೇಳಿ ನೀನು ಗಾಡಿಕಾರ–ಪವಾಡ ಪುರುಷ! ನೀನು ನನ್ನಿಂದ ಅಪೇಕ್ಷಿಸಿದ ಮಟ್ಟವನ್ನು ನಾನು ಮುಟ್ಟಿರಲಿಕ್ಕಿಲ್ಲ. ಆದರೆ ನನ್ನ ಹೃದಯವನ್ನು ನಿನಗೆ ಒಪ್ಪಿಸಲಾಗಿದೆ. ಅದು ನಿನ್ನದೇ ಇರುವುದು. ಆದುದರಿಂದ ನನ್ನನ್ನು ಕರುಣಿಸು, ನನ್ನ ಭವಬಂಧನವನ್ನು ಬಿಡಿಸಯ್ಯ!" ಇದು ಈ ಹೆಸರಾಂತ ಭಕ್ತಿಗೀತದ ಒಳತಿರುಳು.

ಇನ್ನು ಮುಂದೆ ನಾವು ಮಹಿಪತಿನಂದನನ 'ಓ ಎನ್ನಬಾರದೆ ಹರಿಯೆ ನಾ ಕರೆದರೆ?' ಎಂಬ ಪದದತ್ತ ಸಾಗುವಾ. ಇಲ್ಲಿ ನಾವೊಂದು ಮಾತನ್ನು ಗಮನಿಸಬೇಕು. ಮಹಿಪತಿನಂದನ ಇಲ್ಲವೆ ಮಹಿಪತಿಸುತನು ಕೃಷ್ಣರಾಯ ಎಂಬ ಹೆಸರಿನಿಂದ ಪರಿಚಿತನಿರುವನು. ಅವೆರಡು ಕೃಷ್ಣರಾಯನ ಮುದ್ರಿಕೆಗಳಿರಬಹುದು. ಮಹಿಪತಿನಂದನನು ಕೃಷ್ಣರಾಯನೇ ಇಲ್ಲವೆ ಮಹಿಪತಿರಾಯರ ಬೇರೊಬ್ಬ ಮಗನೇ ಎಂಬುದನ್ನು ರಾಯರ ಸಾಹಿತ್ಯವನ್ನು ಅಭ್ಯಸಿಸಿವರು ಹೇಳಬಹುದು. ಅದೇನೇ ಇದ್ದರೂ, ಇದೊಂದು ಬಲು ಅಂದವಾದ ಪದವು. ಮಹಿಪತಿರಾಯರು ವಿಜಾಪುರ ಜಿಲ್ಲೆಯಲ್ಲಿಯ ಕಾಖಂಡಕೀ ಎಂಬ ಗ್ರಾಮದಲ್ಲಿ ವಾಸಿಸಿದ ಹಿರಿಯ ಸತ್ಪುರುಷರು. ಅವರು ಶ್ರೇಷ್ಠತಮ ಕನ್ನಡ ಕವಿಗಳಲ್ಲಿ, ವಿಶೇಷತಃ ಸಂತಕವಿಗಳಲ್ಲಿ ಒಬ್ಬರೆಂಬುದು ನನ್ನ ಅಭಿಮತ. ನನ್ನ ಸ್ನೇಹಿತರೊಬ್ಬರು ಅವರ ಪದಗಳನ್ನೆಲ್ಲ ಸಂಗ್ರಹಿಸಿರುವರು; ಮತ್ತು ಅವು ಕ್ಷಿಪ್ರದಲ್ಲಿಯೆ ಪ್ರಸಿದ್ಧವಾಗುವ ಸಂಭವವಿದೆ.

ಪ್ರಸ್ತುತ ಪದವು ಕೂಡ ಭಗವಂತನ ಬಗೆಗೆ ಪ್ರಾರ್ಥನೆಯ ಮನೋಭಾವವನ್ನು ವ್ಯಕ್ತಗೊಳಿಸುವುದು. 'ಓ ಎನ್ನ ಬಾರದೆ ಹರಿಯೆ ನಾ ಕರೆದರೆ?' ಎಂದು ಮಹಿಪತಿನಂದನನು ಆದಿಯಲ್ಲಿಯೆ ಕೇಳುವನು. 'ಇತಿಹಾಸ-ಪುರಾಣಗಳಲ್ಲಿ ನೀನು ಅನೇಕ ಜನರ ಕರೆಯನ್ನು ಕೇಳಿದ ಸಂಗತಿಯು ಅರುಹಲಾಗಿದೆ. ಉದಾಹರಣಾರ್ಥವಾಗಿ, ಕೃಷ್ಣಾವತಾರದಲ್ಲಿ, ನೀನು ಮರೆಯಾದಾಗ, ಅವುಗಳು ನಿನ್ನನ್ನು ಕಾಣಲರಿಯದೆ ಹುಂಕರಿಸಿ ಒದರಿದವು. ಕೂಡಲೆ ದೂರದಿಂದ ನಿನ್ನ ಮಧುರ ದನಿಯು ಅವಕ್ಕೆ ಕೇಳಿಸಿ, ಅವನ್ನು ಸಂತೈಸಿತು. ಗಜೇಂದ್ರನಿಗೆ ಮೊಸಳೆಯು ಹಿಡಿದಾಗ, ಆ ತನ್ನ ಸಂಕಟದಲ್ಲಿ ಅವನು ನಿನ್ನನ್ನು ಪ್ರಾರ್ಥಿಸಲು, ನೀನು ಆತನನ್ನು ಸಲುಹಲಿಲ್ಲವೇ!' ಎಂದು ಮಹಿಪತಿನಂದನನು ಮರಳಿ ಕೇಳುವನು. ಇದಾಯಿತು ಬರಿ ಪ್ರಾಣಿಗಳಾದವುಗಳ ಮಾತು.

ಭಗವಂತನು ತನ್ನ ಹಿರಿಯ ಸಾಮರ್ಥ್ಯವನ್ನು ಪ್ರದರ್ಶಿಸಿದ ಅನೇಕ ನಿದರ್ಶನಗಳನ್ನು ನಮ್ಮ ಪುರಾಣಗಳು ಕಾಣಿಸುವವು. ಮೊದಲು ಉಪಮನ್ಯುವಿನ ಕಥೆಯನ್ನೇ ನೋಡಿ. ಜನರಿಗೆ ಈ ಕಥೆಯ ಪರಿಚಯವು ಅಷ್ಟೊಂದಿರುವುದಿಲ್ಲ. ಬೇರೆ ಬೇರೆ ಪುರಾಣಗಳಲ್ಲಿ ಈ ಕಥೆಯ ಬೇರೆ ಬೇರೆ ಅಂಶಗಳನ್ನು ಅರುಹಲಾಗಿದೆ. ಆದರೆ ಅವುಗಳಿಂದ ಆರಿಸಬಹುದಾದ ಅತಿ ಮಹತ್ವದ ಅಂಶಗಳಲ್ಲಿ ಕೇವಲ ಎರಡು ಇಲ್ಲವೆ ಮೂರು ಇರುವವು. ಉಪಮನ್ಯು ಓರ್ವ ಋಷಿಗಳ ಹಸುಗಳನ್ನು ಕಾಯುವ ಹುಡುಗನಿದ್ದ. ಋಷಿಗಳು ಅವನಿಗೆ ಅವನ್ನು ಮೇಯಿಸಿಕೊಂಡು ಬರಲು ಹೇಳಿದರು. ಅವನ್ನವನು ಹುಲ್ಲುಗಾವಲಿಗೆ ಒಯ್ಯುತ್ತಿದ್ದನು. ಅವನು ತೀರ ಬಡವನಿದ್ದುದರಿಂದ, ಅವನ ಹತ್ತಿರ ಯಾತಕ್ಕಾಗಿಯೂ ಹಣವಿರಲಿಲ್ಲ. ಹತ್ತಿರ ಹಣವಿಲ್ಲದ ಮೂಲಕ, ಅವನು ತಿನ್ನಲು ಕೂಡ ಏನನ್ನೂ ಕೊಳ್ಳಲು ಅರಿಯದವನಾಗಿದ್ದನು. ಆದುದರಿಂದ ಕರುಗಳು ಹಸುಗಳ ಮೊಲೆಯನ್ನು ಕುಡಿದು, ಅವುಗಳ ಹೊಟ್ಟೆ ಪೂರ್ತಿಯಾಗಿ ತುಂಬಿದ ಮೇಲೆ, ಉಪಮನ್ಯು ಆ ಮೊಲೆಗಳಿಗೆ ಬಾಯಿಯನ್ನು ಹಚ್ಚಿ ಅವುಗಳಲ್ಲಿ ಉಳಿದಿರಬಹುದಾದ ಹಾಲನ್ನು ಹೀರಿಕೊಳ್ಳುತ್ತಿದ್ದನು. ಇದನ್ನರಿತು ಅವನ ಗುರುಗಳು ಅವನಿಗೆ ಹಾಗೆ ಮಾಡದಿರಲು ಎಚ್ಚರಿಸಿದರು. ಯಾಕಂದರೆ ಗೋವುಗಳು ಮನೆಗೆ ಮರಳಿದಾಗ ಆ ಹಾಲು ಬೇರೆ ಜನರಿಗೆ ಬೇಕಾಗಿದ್ದಿತು. ಅದಕ್ಕಾಗಿ ಅವನದನ್ನು ತನಗಾಗಿ ತೆಗೆದುಕೊಳ್ಳುವುದನ್ನು ತಡೆಯಲಾಯಿತು. ಗುರುಗಳ ಈ ಆಜ್ಞೆಯನ್ನು ಕೇಳಿ, 'ಆಗಲಿ! ಅಡ್ಡಿಯಿಲ್ಲ' ಎಂದ ಉಪಮನ್ಯು. ಮುಂದೆ ಕರುಗಳು ಹಾಲನ್ನು ಕುಡಿವಾಗ ಭೂಮಿಯ ಮೇಲೆ ಚಲ್ಲಿದ ಹಾಲಿನ ಹನಿಗಳನ್ನು ಕುಡಿದು ಅವನು ತನ್ನ ಹಸಿವನ್ನು ಹಿಂಗಿಸತೊಡಗಿದನು. ಆ ಹಾಲು ಅವನ ಗುರುಗಳಿಗಾಗಲಿ, ಕರುಗಳಿಗಾಗಲಿ, ಇಲ್ಲವೆ ಗೋವುಗಳಿಗಾಗಲಿ-ಯಾರಿಗೂ ಬೇಕಾಗಿರಲಿಲ್ಲ.

ಅದನ್ನುಂಡು ಅವನು ಸಂತೋಷಪಡುತ್ತಿದ್ದ. ಆದರೆ ಅದನ್ನು ಕಂಡ ಗುರುಗಳು: 'ಅಲ್ಲಯ್ಯ! ನೀನು ಅದನ್ನು ಕೂಡ ಸೇವಿಸಕೂಡದು!' ಎಂಬುದಾಗಿ ಆಜ್ಞಾಪಿಸಿದರು. ಈ ಆಜ್ಞೆಯು ಉಪಮನ್ಯುವಿನೆದುರು ಒಂದು ಹಿರಿಯ ಸಮಸ್ಯೆಯನ್ನೆ ಒಡ್ಡಿತು. ಅವನು ಭಗವಂತನನ್ನು ಅನನ್ಯಭಾವದಿಂದ ಪ್ರಾರ್ಥಿಸುವದನ್ನುಳಿದು ಬೇರೆ ಉಪಾಯವನ್ನೇ ಕಾಣದವನಾದನು. ಆ ಇಕ್ಕಟ್ಟಿನಲ್ಲಿ ಅವನಿಗೆ ತೋಚಿದುದು ಅದೊಂದೇ ಸಾಧನ. ಅವನ ಪ್ರಾರ್ಥನೆಗೆ ಒಲಿದು ಭಗವಂತನು ಅವನಿಗೆ ಕ್ಷೀರಸಾಗರವನ್ನು ದಯಪಾಲಿಸಿದನು.

ಕವಿಯು ಅರುಹಿದ ಎರಡನೆಯ ಉದಾಹರಣೆಯು ದ್ರೌಪದಿಯದು. "ನೀನು ಎರಡು ತೀರ ವಿಷಮ ಪ್ರಸಂಗಗಳಲ್ಲಿ ದ್ರೌಪದಿಯ ನೆರವಿಗೆ ಬಂದಿರಲಿಲ್ಲವೇ ದೇವಾ? ದೂರ್ವಾಸನು ಆಕೆಯ ಧರ್ಮವೃತ್ತಿಯನ್ನು ಪರೀಕ್ಷಿಸಲು ನೂರಾರು ಶಿಷ್ಯರಿಂದೊಡಗೂಡಿ ರಾತ್ರಿಯಲ್ಲಿ ಅವಳಲ್ಲಿಗೆ ಬಂದುದು ಮೊದಲನೆಯ ಪ್ರಸಂಗ. ದ್ರೌಪದಿಯ ಬಳಿ ಆಗ ನೀಡಲು ಅನ್ನವಿರಲಿಲ್ಲವಾದ್ದರಿಂದ ಅವಳು ಒಳ್ಳೆಯ ಧರ್ಮಸಂಕಟದಲ್ಲಿ ಬಿದ್ದಳು. ಅವಳಾಗ ಅತಿ ಉತ್ಕಟತೆಯಿಂದ ನಿನ್ನನ್ನು ಪ್ರಾರ್ಥಿಸಿದಳು. ನೀನು ಆ ಪ್ರಸಂಗದಲ್ಲಿ ಅವಳಿಗೆ ನೆರವನ್ನು ನೀಡಿದೆ. ಎರಡನೆಯ ಪ್ರಸಂಗವು ಅದಕ್ಕೂ ಹೆಚ್ಚು ವಿಷಮವಾದುದು. ಕೌರವರ ರಾಜಸಭೆಯಲ್ಲಿ ದುಃಶಾಸನನು ಅವಳ ಸೀರೆಯನ್ನು ಸೆಳೆಯಲೆತ್ನಿಸಿ ಅವಳ ಮಾನಭಂಗವನ್ನು ಮಾಡಿದಾಗ ಅದು ಉದ್ಭವಿಸಿತು. ದೇವಾ! ಆಗ ನೀನವಳ ನೆರವಿಗೆ ಧಾವಿಸಿದೆ ಮತ್ತು ಆಕೆಯ ಮರ್ಯಾದೆಯನ್ನು ಉಳಿಸಿದೆ" ಎಂದು ಕವಿಯು ಹೇಳುವನು. ಅವನು ಕೊಟ್ಟ ಮೂರನೆಯ ಉದಾಹರಣೆಯು ಪಾಂಡವರದು. ಅದನ್ನು ಕುರಿತು ಕವಿಯು ಹೇಳುವುದೇನೆಂದರೆ: "ಪಾಂಡವರು ಲಾಕ್ಷಾಗೃಹದಲ್ಲಿರುವಾಗ ಕೌರವರು ಅದಕ್ಕೆ ಬೆಂಕಿ ಹಚ್ಚುವವರಿದ್ದರು. ದೇವರೆ! ನೀನಾಗ ಪಾಂಡವರಿಗೆ ನೆರವಾಗಿ ಅವರನ್ನು ರಕ್ಷಿಸಿದೆ." 'ಈ ಬಗೆಯಾಗಿ ನೀನು ಪ್ರಾಣಿಗಳನ್ನೂ ಪೌರಾಣಿಕ ವ್ಯಕ್ತಿಗಳನ್ನೂ ಸುರ-ನರ-ಮುನಿಗಳನ್ನೂ ರಕ್ಷಿಸಿರುವೆ. ಹೀಗಿರಲು ನನ್ನಂಥ ಬಡಪಾಯಿಯೆಡೆ ಬಂದು ನನಗೆ ಅದೇಕೆ ನೆರವಾಗಲೊಲ್ಲೆ?' ಎಂದು ಮಹಿಪತಿನಂದನನು ಕೇಳುವ. ಅವನ ಈ ಮೊರೆಯನ್ನು ಕೇಳಿ ಭಗವಂತನು ಅವನ ನೆರವಿಗಾಗಿ ಬಂದನಂತೆ. ಇದೊಂದು ಪ್ರಾರ್ಥನೆಯ ಮನೋಭಾವ ದೃಷ್ಟಾಂತ.

ಇನ್ನು ನಾವು ಹಿರಿಯ ಸಂತರೀರ್ವರ, ಎರಡು ಮಹತ್ವದ ದೂಷಣಪರ ಪದಗಳೆಡೆ ತೆರಳೋಣ. ಇವರಿಬ್ಬರೂ ತುಕಾರಾಮರಂತೆ ದೇವನೊಡನೆ ಕಲಹ ವೆಸಗಿದರು. ಆದರೆ ಇವರು ತುಕಾರಾಮರಿಗಿಂತ ಹೆಚ್ಚು ಕಟುತರ ಭಾಷೆಯನ್ನು ಬಳಸಿರುವರು. ಇವರಲ್ಲಿ ಒಬ್ಬರು ನಿಂಬರಗಿ ಮಹಾರಾಜರವರು; ಎರಡನೆಯವರು

ಕನಕದಾಸರು. 'ಏನು ಮಾಡಿದ್ಯೋ ಕೇಳೆನ್ನ' ಎಂಬ ಮೊದಲನೆಯ ಪದವು ತುಂಬ ಪ್ರಭಾವಶಾಲಿಯಾದುದು. ಇದರಲ್ಲಿ ನಿಂಬರಗಿ ಮಹಾರಾಜರವರು ಭಗವಂತನ ವಿರುದ್ಧವಾಗಿ ಒಂದು ಆಪಾದನೆಗಳ ಪಟ್ಟಿಯನ್ನೇ ಕೊಟ್ಟಿರುವರು. ಅವರು ಭಗವಂತನನ್ನು ಸಂತರ ನ್ಯಾಯಾಲಯದಲ್ಲಿ ತಂದಿರುವರು. 'ದೇವರೇ! ನಿನ್ನ ವಿರುದ್ಧ ನಾನೀ ಆಪಾದನೆಯ ಪಟ್ಟಿಯನ್ನು ಸಲ್ಲಿಸುತ್ತಿರುವೆ!' ಎಂದವರು ನುಡಿವರು. ಅದರಲ್ಲಿ ನಾಲ್ಕು ಆಪಾದನೆಗಳಿರುವವು. ಅವರ ಮೊದಲನೆಯ ಆಪಾದನೆಯು ಈ ಬಗೆಯದಿರುವುದು: 'ದೇವಾ! ನಾವಿಬ್ಬರು ಗೆಳೆಯರಂತೆ ಕೂಡಿ ಆಡಿದೆವು. ಆಟದಲ್ಲಿ ಒಬ್ಬ ಗೆಳೆಯನು ಇನ್ನೊಬ್ಬನನ್ನು ಮೋಸಗೊಳಿಸದಿರುವುದು ಅವನ ಕರ್ತವ್ಯ. ಇಬ್ಬರೂ ಕೂಡಿಯೆ ಗೆಲ್ಲಬೇಕು ಇಲ್ಲವೆ ಸೊಲ್ಲಬೇಕು. ಇದು ಆಟಗಾರರ ಕರ್ತವ್ಯ. ಆದರೆ ನೀನೇನನ್ನು ಮಾಡಿರುವೆ ನೋಡು! ನೀನು ನನ್ನನ್ನು ವಂಚಿಸಿ, ಭವದ ಜಾಲದಲ್ಲಿ ಸಿಲುಕಿಸಿದೆ- 'ಫಾಸಿ ಹಾಕಿದೆ' ಮತ್ತು ನೀನು ಮಾತ್ರ ಅದರೊಳಗಿಂದ ಜಾರಿದೆ-ಪಾರಾದೆ-'ಫಾಸಿಯ ಜರಿದು ಜಾರಿ ನಿಂತೀದಿ.' ನನ್ನನ್ನು ನೀನು ಮುಳ್ಳುತಂತಿಯ ಬೇಲಿಯಲ್ಲಿ ಹಾಕಿ, ನೀನು ಮಾತ್ರ ಅದರ ಹೊರಗಡೆ ನಿಂತುಬಿಟ್ಟೆ. ಇದು ಸರಿಯಾದ ರೀತಿಯಲ್ಲ-ಆಟವಲ್ಲ.' ಇದು ಮಹಾರಾಜರವರ ಮೊದಲನೆಯ ಆಪಾದನೆ. ಅವರ ಎರಡನೆಯ ಆಪಾದನೆಯು ಈ ಬಗೆಯ ದಿರುವದು: "ನನ್ನೀ ದೇಹವು ಕ್ಷುದ್ರವಾದುದು-ನಿಸ್ಸತ್ವವಾದುದು. ಅದರೊಳಗಿಂದ ನೀನು ಹೊಳೆಯುವೆ ಮತ್ತು ಅದರಲ್ಲಿ ನಿಶ್ಚಿಂತನಾಗಿ ಘೂಳಿಯಂತೆ ಅತ್ತಿತ್ತ ಅಲೆಯುವೆ, ಮೆರೆಯುವೆ. ನೀನೊಬ್ಬ ನನ್ನ 'ಖಿಲ್ಲ' (ಕ್ಷುದ್ರ) ದೇಹದಲ್ಲಿ ನಿರಾತಂಕವಾಗಿ ಅಲೆಯುವ ಗೂಳಿಯಾಗಿರುವೆ. ನೀನದನ್ನು ಬಗೆಬಗೆಯ ಕ್ಲೇಶ ಗಳಿಗೆ ಗುರಿಮಾಡುತ್ತಿರುವೆ. ಆದರೂ ನೀನೆನಗೆ ಬೇಕು. ಕರುಣಿಸಲೊಲ್ಲೆ!" ಇದು ಎರಡನೆಯ ಆಪಾದನೆ. ಮೂರನೆಯದು ಅತಿ ಮಹತ್ವದ್ದಿರುವುದು: "ನಾನು ಇಡಿಯ ಜೀವನವನ್ನು ನಿನಗಾಗಿ ಮೀಸಲಾಗಿರಿಸಿದ್ದರೂ, ಇಡಿಯ ಜೀವನದಲ್ಲಿ ನಿನಗೆ ಭಕ್ತಿಯನ್ನು ಸಲ್ಲಿಸುತ್ತಿದ್ದಲಿದ್ದರೂ, ನಿನಗೆ ಎಲ್ಲವನ್ನೂ ಅರ್ಪಿಸುತ್ತ ಬಂದಿದ್ದರೂ, ನೀನು ನನ್ನನ್ನು ಹಾಳು ಮಾಡಲು ಇಷ್ಟಪಟ್ಟೆ, 'ನನ್ ಘನ ಘಾತ' ಮಾಡಿದೆ. ದೇವಾ! ನಾನು ಒಳ್ಳೆಯ ಬಾಳನ್ನು, ಅರ್ಪಣಯುಕ್ತ ಬಾಳನ್ನು ನಡೆಸಿರುವಾಗ ಹೀಗೆ ಮಾಡುವುದು ನಿನಗೆ ಶೋಭಿಸುವುದೇ! ನನ್ನ ಮೇಲೆ ಕೆಂಡಗಳನ್ನು ಕಾರುವುದು- ಸುರಿಯುವುದು ಸರಿಯಲ್ಲ." ಇದು ಮಹಾರಾಜರವರ ಮೂರನೆಯ ಆಪಾದನೆ. ಅವರ ನಾಲ್ಕನೆಯ ಆಪಾದನೆಯು ಈ ಬಗೆಯ ದಿರುವುದು: "ಭೇದವಿಲ್ಲದಲ್ಲಿ ನೀನು ಭೇದಗಳನ್ನು ನಿರ್ಮಿಸಿದೆ. ಇಲ್ಲಿ ಅದಾವ ಭೇದವು ನಿರ್ಮಿಸಲಾಗಿದೆ? ಎಂದು ಯಾರಾದರೂ ಕೇಳಬಹುದು. ನೀನು ನಿರ್ಮಿಸಿದುದು ಜೀವ-ಶಿವರಲ್ಲಿಯ ಭೇದವನ್ನು ನಿಜವಾಗಿ ಅವರೀರ್ವರಲ್ಲಿ ಭೇದವೇ ಇರುವುದಿಲ್ಲ. ಆದರೆ, ನನಗೆ ಅವರಿಬ್ಬರು ಅಭಿನ್ನರಿರುವರೆಂಬುದನ್ನು

ಗಮನಿಸದೆ, ನೀನು ಜೀವ-ಶಿವರಲ್ಲಿ ಭೇದಚನ್ನು ಹುಟ್ಟಿಸಲು ಅನುವಾದೆ. ಭೇದವನ್ನು ಹುಟ್ಟಿಸುವವರನ್ನು ನ್ಯಾಯಾಲಯಕ್ಕೆ ಎಳೆಯಲೇ ಬೇಕು. ಆದುದರಿಂದ ನಿನ್ನನ್ನು ಈ ತಪ್ಪಿಗಾಗಿ ಸಂತರ ನ್ಯಾಯಾಲಯದಲ್ಲಿ ನಿಲ್ಲಿಸಲುಬೇಕು. ಇನ್ನು ದೇವಾ! ನೀನು ಗುರುಲಿಂಗಜಂಗಮರ ಚರಣಗಳಿಗೆ ಶರಣಾಗತನಾಗುವದೊಂದೇ ಈ ಆಪಾದನೆಗಳಿಂದ ಪಾರಾಗುವ ದಾರಿ. ಆದುದರಿಂದ ನೀನೆನ್ನ ಸದ್ಗುರುಗಳೆಡೆ ಹೋಗು, ಅವರಿಗೆ ಸಾಷ್ಟಾಂಗವೆರಗು, ಅಂದರೆ ಇವುಗಳಿಂದ ನಿನ್ನ ಬಿಡುಗಡೆ ಯಾಗಬಹುದು." ಇದು ನಿಂಬರಗಿ ಮಹಾರಾಜರವರ ಹೇಳಿಕೆ.

ಕನಕದಾಸರು ಇದಕ್ಕೂ ಹೆಚ್ಚು ಪ್ರಭಾವಿಯಾದ ರೀತಿಯಲ್ಲಿ 'ನನ್ನಿಂದ ನಾನೇ ಜನಿಸಿ ಬಂದೆನೇ ದೇವಾ!' ಎಂಬ ತಮ್ಮ ಪದದಲ್ಲಿ ಭಗವಂತನನ್ನು ದೂಷಿಸಿರುವರು. ಈ ಬಗೆಯ ದೂಷಣದ ಇದೊಂದು ಎರಡನೆಯ ನಿದರ್ಶನ. ಇದು ಅತ್ಯುತ್ತಮ ದಾರ್ಶನಿಕ ಪದಗಳಲ್ಲಿಯೂ ಒಂದಾಗಿರುವುದು. ನೀವು ಕನಕದಾಸರ ಸಾಹಿತ್ಯವನ್ನು ಓದಿಕೊಂಡಿರಬಹುದು. ಆದರೆ ಈ ಕವನದ ಸಂಪೂರ್ಣ ಗರ್ಭಿತಾರ್ಥವನ್ನು ಬಹುತರವಾಗಿ ಅನೇಕರು ಅರಿಯರು. ಕನಕದಾಸರು ಕೆಳಗಿನದೆಂದು ಭಾವಿಸಲಾದ ಪಂಗಡಕ್ಕೆ ಸೇರಿದವರಾದರೂ ಅವರದು ಅಲೌಕಿಕ ಬುದ್ಧಿವೈಭವ. ಅವರು ಹಿರಿಯ ಭಕ್ತರೆಂಬುದರಲ್ಲಿ ಸಂದೇಹವಿಲ್ಲ. ಆದರೆ ನಾನು ನಿಮಗೆ ಅವರನ್ನು ಕುರಿತ ಬೇರೆ ಕೆಲ ಅತಿ ಮಹತ್ವದ ಮಾತುಗಳನ್ನು ಹೇಳಬಯಸುವೆ. ಮೊದಲು ಇದರಲ್ಲಿಯ ಅವರ ದಾರ್ಶನಿಕ ಜ್ಞಾನವನ್ನೇ ನೋಡಿ! "ದೇವಾ! ನಾನು ನನ್ನಿಂದಲೇ ಜನಿಸಿಲ್ಲ, ಜನಿಸುವುದು ಸಾಧ್ಯವೂ ಇಲ್ಲ. ನೀನು ನನಗೆ ಜನಿಸಲು ಹಚ್ಚಿದೆ. ನೀನು ಎಲುವುಗಳನ್ನೂ, ಸ್ನಾಯುಗಳನ್ನೂ, ನರಗಳನ್ನೂ, ಮಲಮೂತ್ರಗಳನ್ನೂ ಒಂದೆಡೆ ತಂದು, ಅವುಗಳ ಮಿಶ್ರಣದಲ್ಲಿ ಚೈತನ್ಯದ ಅಂಶವನ್ನು ಬೆರಿಸಿದೆ" ಎಂದು ದಾಸರು ಹೇಳುವರು. ಇದನ್ನೆ ನಮ್ಮ ಪ್ರಾಚೀನ ಋಗ್ವೇದದಲ್ಲಿಯ ಮುಂದಿನ ಅವತರಣದಲ್ಲಿ ಹೇಳಲಾಗಿದೆ: ಅಸ್ಥನ್ವಂತಂ ಯದನಸ್ಥಾ ಬಿಭರ್ತಿ। 'ಎಲುವಿಲ್ಲದ ಆತ್ಮನು ತನಗಾಗಿ ಎಲುವಿನ ಹಂದರವನ್ನು ನಿರ್ಮಿಸಿದನು.' ಮನುಜನು ಎಲುವುಗಳಿಂದ ಮಾಡ ಲ್ಪಟ್ಟಿರಬಹುದು. ಆದರೆ ಭಗವಂತನು ಆ ಎಲುವುಗಳಲ್ಲಿ ಅಡಗುವನು-ಅಂತ ರ್ಯಾಮಿಯಾಗುವನು, ಮತ್ತು ಅದರ ಮೂಲಕ ಮನುಜನು ಮನುಜ ನಾಗುವನು. ಈ ವಸ್ತುಗಳ ಗುಂಪು ಇಲ್ಲವೆ ಮಿಶ್ರಣವು ಭಗವಂತನ ಚೈತನ್ಯದಿಂದ ಕೂಡಿರುವುದು. ಈ ಬಗೆಯಾಗಿ ಕನಕದಾಸರ ಈ ವಿಷಯದ ಜ್ಞಾನವು ನೋಡು ವಂತಿದೆ. ಎರಡನೆಯದಾಗಿ, 'ನಾನು ತಾಯಿಯ ಗರ್ಭದೊಳಗಿಂದ ಹೊರಬರಲು ಬಯಸುತ್ತಿರಲಿಲ್ಲ' ಎಂದು ಕವಿಯು ಹೇಳುವನು. ಶುಕನು ತನ್ನ ತಾಯಿಯ ಒಡಲಲ್ಲಿ ಬಹುಕಾಲ ನಿಲ್ಲಲಿಲ್ಲವೇ? ಅವನು ಅಲ್ಲಿ ಹನ್ನೊಂದು ತಿಂಗಳು ಇದ್ದನಂತೆ.

ವಾಮದೇವನೂ ಕೂಡ ತನ್ನ ತಾಯಿಯ ಗರ್ಭದಲ್ಲಿ ಬಹುಕಾಲ ನಿಂತಿದ್ದನು. ದಾರ್ಶನಿಕನಾದ ವಾಮದೇವನು ಉಪನಿಷತ್ತಿನಲ್ಲಿ ಹೇಳುವದೇನೆಂದರೆ:

ಅಹಂ ಮನುರಭವಂ ಸೂರ್ಯಶ್ಚ ।

'ನಾನು ಮನುವಾದೆ ಮತ್ತು ಸೂರ್ಯನಾದೆ.' ಇದು ವಾಮದೇವನು ತಾಯಿಯ ಒಡಲಲ್ಲಿರುವಾಗಿನ ಅವನ ಅನುಭವ. ಇನ್ನು ಪರೀಕ್ಷಿತನದೂ ಇದೇ ಬಗೆಯ ಅನುಭವ. 'ಪರೀಕ್ಷಿತ' ಎಂಬ ಶಬ್ದದ ಅರ್ಥವೇನು? ಅವನು ತನ್ನ ತಾಯಿಯ ಒಡಲಲ್ಲಿ ಭಗವಂತನ ರೂಪವನ್ನು ತನ್ನ ಸುತ್ತಲು ಕಂಡನು (ಪರಿ+ಈಕ್ಷೆ) ಆದುದರಿಂದ ಅವನು 'ಪರೀಕ್ಷಿತ'ನೆಂದು ಕರೆಯಲ್ಪಟ್ಟನು. ಆ ರೀತಿ 'ನಾನು ತಾಯಿಯ ಉದರದಲ್ಲಿ ಇರಬಯಸಿದೆ. ಆದರೆ ಕ್ರೂರನಾದ ನೀನು, ತುಂಬ ಕರುಣಯಿಲ್ಲದ ಡಾಕ್ಟರನಂತೆ, ನನ್ನನ್ನು ಒಳಗಿನಿಂದ ಹೊರದೂಡಿದೆ. ಗರ್ಭದಲ್ಲಿ ಮಗುಗಳನ್ನು ಹೊರದೂಡುವ ಒಂದು ಶಕ್ತಿಯುಂಟು. ಆ ನಿನ್ನ ಶಕ್ತಿಯಿಂದ ನೀನು ನನ್ನನ್ನೂ ಹೊರನೂಕಿದೆ. 'ಇಲ್ಲಿ ಗರ್ಭದ ಚಲನೆಗಳ ಮುಖಾಂತರ ಕಾರ್ಯಕಾರಿ ಯಾಗುವಂತೆ ಕಾಣುವ ಭಗವಂತನ ಆಂತರಿಕ ಇಕ್ಕುಳಗಳು, ಆಧುನಿಕ ಪ್ರಸವಶಾಸ್ತ್ರಜ್ಞರ ಬಾಹ್ಯ ಇಕ್ಕುಳಗಳು–ಇವುಗಳಲ್ಲಿಯ ವಿರೋಧವನ್ನು ಕಾಣಿಸಲಾಗಿದೆ. "ಮೊದಲು ನನ್ನಿಂದಲೇ ನಾನು ಜನಿಸಲಿಲ್ಲ. ಎರಡನೆಯದಾಗಿ, ನೀನು ನನಗೆ ಚೈತನ್ಯವನ್ನು ದಯಪಾಲಿಸಿ, ನನ್ನನ್ನು ಹೊರದೂಡಿದೆ. ಮೂರನೆಯದಾಗಿ, ನಾನು ಜನಿಸಿದಾರಭ್ಯ ನನ್ನ ನಡತೆಗೆಲ್ಲ ನೀನೇ ಹೊಣೆಗಾರನಿರುವಿ. ಎಲ್ಲ ಜನರಂತೆ, ನನಗೆ ನೀನೊಂದು ಪ್ರೇರಕಶಕ್ತಿಯನ್ನು ನೀಡಿರುವೆ. ಆದುದರಿಂದ, ನಾನು ಮಾಡಿದ ಒಳಿತು ಇಲ್ಲವೆ ಕೆಡಕು ಕರ್ಮಗಳೆಲ್ಲ, ಈ ಚಾಲಕಶಕ್ತಿಯ ಫಲ" ಎಂದು ದಾಸರು ಹೇಳುವರು. ಅನೇಕ ಹಿರಿಯರು ಈ ಬಗೆಯಾಗಿ ಹೇಳಿದುದುಂಟು. ದಾಸರು ಮತ್ತೂ ಹೇಳುವದೇನೆಂದರೆ: "ಈ ರೀತಿ ಪ್ರೇರಣೆಗಳಿಗೆ ನೀನು ಹೊಣೆಗಾರನಿದ್ದರೂ, ಈ ಕರ್ಮಗಳ ಪರಿಣಾಮಕ್ಕೆ ನಾನು ಹೊಣೆಗಾರನೆಂದು ಭಾವಿಸಲಾಗಿದೆ; ಮತ್ತು ದೇವಾ! ನೀನು ಮಾತ್ರ ನಿನ್ನ ಪ್ರೇರಣೆಗಳ ಪರಿಣಾಮಗಳಿಂದ ಹಾಗೂ ಫಲಗಳಿಂದ ಪಾರಾಗುವಿ. ನೀನು ನನಗೆ ಒಂದು ಕರ್ಮವನ್ನು ಮಾಡಲು ಹೇಳುವೆ, ಮತ್ತು ಅದರ ಫಲಭೋಗವನ್ನು ಮಾತ್ರ ತಪ್ಪಿಸಿಕೊಳ್ಳುವೆ. ನಾನು ನಿನಗದನ್ನು ಮಾಡಗೊ ಡುವುದಿಲ್ಲ. ನೀನು ಪರಿಣಾಮಗಳ ಪ್ರಧಾನ ಭಾರವನ್ನು ವಹಿಸಲೇಬೇಕು. ಇನ್ನು ಈ ಕರ್ಮಯೋಜನೆಯಲ್ಲಿ ನಿನ್ನ ಪಾತ್ರವೇನು? ಎಂಬುದನ್ನು ನೀನು ಗಮನಿಸಬೇಕು. ನೀನು ಮುಂದಾಳು ಇರುವಿಯಯ್ಯಾ ಕೃಷ್ಣಾ! ನೀನು ಮನುಜನನ್ನು ಮುಂದಕ್ಕೆ ಒಯ್ಯುವವನು. ಅಂಧನಾದ ಮನುಜನನ್ನು ಮುಂದೆ ಒಯ್ಯುವದು ಮುಂದಾಳಿನ ಕೆಲಸ. ಅವನನ್ನು ಹಿಂದಿಡುವುದಿಲ್ಲ. ಅದಕ್ಕಾಗಿ 'ಹಿಂದಾಡಬೇಡಯ್ಯ'! ಮುಂದಡಿ ಯಿಡು." ಇಲ್ಲಿ 'ಹಿಂದಾಡಬೇಡ' ಎಂಬ ಪದವಿನ್ಯಾಸಕ್ಕೆ ಎರಡರ್ಥಗಳುಂಟು.

೧) 'ನನ್ನ ಹಿಂದೆ ಆಡಬೇಡ' ಎಂಬುದು ಒಂದು ಮತ್ತು ೨) 'ನನ್ನ ಹಿಂದೆ ನನ್ನನ್ನು ನಿಂದಿಸಬೇಡ' ಎಂಬುದು ಎರಡನೆಯದು. "ಮುಂದಾಳಾಗಿ ಮುಂದುವರಿಯುದಷ್ಟೇ ನಿನ್ನ ಕೆಲಸ. ಆದರೆ ನೀನು ಮಾಡಿರುವುದೇನನ್ನು? ನೀನು ಕುರುಡನ ಕೈಯಲ್ಲಿ ಕೋಲೊಂದನ್ನು ಕೊಟ್ಟು, ಅವನನ್ನು ಮುಂದೆ ಸಾಗಿಸಲು ಯತ್ನಿಸಿದೆ. ಆದರೆ ಅವನು ಮುಂದುವರಿದ ಕೂಡಲೆ ಅವನ ಕೈಯೊಳಗಿಂದ ಕೋಲನ್ನು ಸೆಳೆದು ಅವನಿಂದ ದೂರ ತೆರಳಿದೆ. ಪಾಪ! ಆ ಕೋಲಿಲ್ಲದ ಕುರುದನು, ಹಾಗೆಯೆ ಮುಂದುವರಿದು, ಭಾಗವತದ ಕಥೆಯಲ್ಲಿಯ ಜಿಂಕೆಯಂತೆ ಬಾವಿಯೊಂದರಲ್ಲಿ ಬಿದ್ದನು. ನಾನೊಬ್ಬ ಅಂಥ ಕುರುಡನಿರುವೆ. ನಾನು ಬಾವಿಯಲ್ಲಿ ಬಿದ್ದರೆ, ನನ್ನ ಸಾವಿನ ಹೊಣೆಯು ನಿನ್ನ ಮೇಲೆ ಬೀಳುವುದು ಎಂಬುದನ್ನು ಮರೆಯದಿರು ದೇವಾ" ಎಂದು ಕನಕದಾಸರು ನುಡಿಯುವರು. ಕೊನೆಯದಾಗಿ, ಕನಕದಾಸರು ಮುಂದಿನ ನುಡಿಯಲ್ಲಿ ಭಕ್ತಿಯ ಅಂಶವೂ ಇಲ್ಲದಿಲ್ಲ: "ನಾನು ನನ್ನ ಸರಕುಗಳನ್ನೆಲ್ಲ ನಿನಗೆ ಕಾಣಿಕೆಯಾಗಿ ಒಪ್ಪಿಸಿರುವೆ. ಇನ್ನು ನನ್ನಿಂದ ಸುಂಕವನ್ನೇಕೆ ತೆಗೆದುಕೊಳ್ಳುವೆ? ಅದನ್ನು ಮರಳಿ ನನ್ನ ಮೇಲೆ ಹೇರುವ ಅಧಿಕಾರವು ನಿನಗೆಲ್ಲಿಂದ ಬಂತು? ಮೇಲಾಗಿ ನಾನು ಆ ಸುಂಕವನ್ನು ನಿನಗೆ ಕೊಡುವುದಾದರೂ ಎಲ್ಲಿಂದ? ನೀನು ಸ್ವಲ್ಪ ಸಹಾನುಭೂತಿಯನ್ನು ತಳೆಯಬೇಕು. ನನ್ನಿಂದ ಕರ್ಮವನ್ನು ಪ್ರೇರಿಸಿದವನು ನೀನೆಂಬುದನ್ನು ಮರೆಯದಿರು. ನೀನೆನ್ನ ಮುಂದಾಳಾಗಿದ್ದಿ-ನೇತಾರನಾಗಿದ್ದಿ. ಹೀಗಿರಲು ನನ್ನಿಂದ ತಪ್ಪಾದರೆ ಅದರ ದುಷ್ಪರಿಣಾಮಗಳನ್ನು ಸಹಿಸುವ ಹೊಣೆಯು ನಿನ್ನದಿರುವುದು. ಇನ್ನು ಹೆಚ್ಚಿನ ಸುಂಕವನ್ನು ಹೇರದಿರಯ್ಯ!" ಇದು ಕನಕದಾಸರ ಹೇಳಿಕೆ.

ತರುವಾಯ ನಾವು ಆನುಭಾವಿಕ ಮನೋಭಾವದೆಡೆ ತೆರಳುವೆವು. ಈ ಭಾವವನ್ನೊಳಗೊಂಡ ಎರಡು ಪದಗಳಿರುವವು: ಒಂದು ಪುನಃ ನಿಂಬರಗಿ ಮಹಾರಾಜರವರದು ಹಾಗೂ ಎರಡನೆಯದು ವಿಜಯದಾಸರದು. 'ಅಂದಿಲ್ಲಾ ಸ್ವಾಮಿ ಇಂದಿಲ್ಲಾ'! ಎಂಬ ಮೊದಲನೆಯ ಪದದಲ್ಲಿ ಐದು ಮಹತ್ವದ ವಿಷಯಗಳಿರುವವು. ಅದರಲ್ಲಿ ನಿಂಬರಗಿ ಮಹಾರಾಜರವರು ಹೇಳುವುದೇನೆಂದರೆ: "ದೇವರೆ! ನಾನು ನಿನ್ನಿಂದ ಆಗಲಿ ಎಂದೂ ಇರಲಿಲ್ಲ. ನಾವಿಬ್ಬರೂ ಸದೈವ ಕೂಡಿಯೆ ಇರುವೆವು. ನೀನು 'ನಿರ್ಬೈಲೆ'ಂದು ಅಭಿಮಾನದಿಂದ ಕರೆಯಿಸಿಕೊಂಡರೆ, ನಾನು ಅಷ್ಟೇ ಅಭಿಮಾನದಿಂದ 'ನಿರ್ವಿಕಾರ'ನೆಂದು ಕರೆಯಿಸಿಕೊಳ್ಳುವೆ." ಆದರೆ ಇವೆರಡೂ ಅಭಾವಾತ್ಮಕ ಲಕ್ಷಣಗಳು. ಅಭಾವವನ್ನು ಎದುರಿಸಲು ಅಭಾವವೇ ಬೇಕಲ್ಲವೇ? "ನೀನು ಸಗುಣರೂಪನಾದರೆ ನಿನಗೆ ಸಮರ್ಪಣ ಮಾಡುವುದು ನನ್ನ ಕೆಲಸ- 'ಶರಣು ಮಾಡುವೆ ನಾನು'. ನೀನು ಪ್ರಣವಸ್ವರೂಪನಾದರೆ, ನಿನ್ನ ನಾಮವನ್ನುಜಪಿಸುವದಷ್ಟೇ ನನ್ನ ಕೆಲಸ. ಹಿಂದೀ ಸಂತರು ಹೇಳುವ ಮೇರೆಗೆ 'ಮಂತ್ರಜಾಪ'ವನ್ನು ಮಾಡುವದಷ್ಟೇ ನನ್ನ ಕಾರ್ಯ. ಕೊನೆಯದಾಗಿ, ನೀನು ಪಂಚಮನಾದರೆ, ನಾನು

ಕೇವಲ ನಿನ್ನ ಪಾದಗಳಿಗೆ ಎರಗುವೆ." ಇನ್ನು ಪಂಚವನದನೆಂದರೇನು? ದೇವರು ಪಂಚ ಮುಖವುಳ್ಳವ ನಿರುವನು ಎಂಬುದು ಅದರ ಅರ್ಥ. ದೇವರಿಗೆ ಅಷ್ಟು ಮುಖಗಳಿರುವವೆ? ದೇವರು ತ್ರಿನಯನನಂತೆ-ಮುಕ್ಕಣ್ಣನಂತೆ. ಅವನಿಗೆ ಮೂರು ಕಂಗಳು ಇರುವವೇ? ಆ ಬಗೆಯ ಸಾಕ್ಷಾತ್ಕಾರದ ಅನುಭವವಿದ್ದವರು, ದೇವರು ತ್ರಿನಯನನು ಇಲ್ಲವೆ ಪಂಚವದನನು ಇರುವನೋ ಹೇಗೆಂಬುದನ್ನು ಅರಿವರು. ಆದರೆ ದೇವರು ಎಂದಾದರೂ ಕಾಣಿಸಿಕೊಂಡರೆ, ಅವನು ಪಂಚವದನ ನಿರುವುದೇನೂ ಅಸಾಧ್ಯ ವಿರುವಂತೆ ಕಾಣುವುದಿಲ್ಲ. ಆದುದರಿಂದ ನಿಂಬರಗಿ ಮಹಾರಾಜರವರು ಹೇಳುವದೇನೆಂದರೆ: "ನೀನು ಪಂಚವದನನಾದರೆ, ನಿನ್ನ ಪಾದಗಳನ್ನು ನಂಬುವದು ನನ್ನ ಕರ್ತವ್ಯ-ಪಾದ ನಂಬುವೆ ನಾನು." ನನ್ನ ಪಾರಮಾರ್ಥಿಕ ಭಗಿನಿಯಾದ ಶಿವಲಿಂಗವ್ವನವರು, ನಿಂಬರಗಿ ಮಹಾರಾಜರವರು ಪಂಚವದನವುಳ್ಳ ದೇವರನ್ನು ಪ್ರತ್ಯಕ್ಷ ಕಂಡಿದ್ದರು ಎಂದು ನಮಗೆ ಹೇಳುತ್ತಿದ್ದರು. ಕೊನೆಯದಾಗಿ, 'ಸದ್ಗುರುವೇ! ನಮ್ಮಿಬ್ಬರಲ್ಲಿ ಅಂತಿಮವಾದ ಭೇದವಿರುವುದಿಲ್ಲ.' 'ಗುರುಲಿಂಗ ಜಂಗಮ ನೀನೇ! ನಾನೂ ನೀನೇ!' ಈ ರೀತಿ ಭಗವಂತ, ಭಕ್ತ ಹಾಗೂ ಸದ್ಗುರು ಇವರಲ್ಲಿ ತ್ರಿತಯ ಏಕತೆಯು ನೆಲೆಸಿರುವುದು. ನಾವು ಈ ಮೂವರ ಐಕ್ಯದಲ್ಲಿ ವಿಶ್ರಮಿಸುವಾ!' 'ಅದನ್ನು ಆಶ್ರಯಿಸುವಾ!' ಎಂದು ಮಹಾರಾಜರವರು ಹೇಳಿರುವರು.

ನಾವಿನ್ನು ವಿಜಯದಾಸರ 'ಸದಾ ಎನ್ನ ಹೃದಯದಲ್ಲಿ ವಾಸಮಾಡೋ ಶ್ರೀಹರಿ!' ಎಂಬ ತುಂಬ ಅರ್ಥಗರ್ಭಿತವಾದ ಪದವನ್ನು ವಿವರಿಸುವೆವು. ಇದೊಂದು ಸ್ಪಷ್ಟವಾಗಿ ಭಕ್ತಿಗೀತವಿರುವಂತೆ ಕಾಣುವುದು. ಆದರೆ ಇದು ಅದಕ್ಕೂ ಮಿಗಿಲಾದುದಿರುವುದು. ಇಮೊಂದು ಹಿರಿಯ ಅನುಭಾವದ ಪದವು. ಇದರಲ್ಲಿ ವಿಜಯದಾಸರು ವಿಸ್ತಾರವಾಗಿ ವಿವರಿಸಿದ ಭಕ್ತ-ಭಗವಂತರಲ್ಲಿಯ ಹಿರಿಯ ಸಂಬಂಧದ ಮೂರು ಕುರುಹುಗಳನ್ನು ಕಾಣಿಸಲಿರುವೆ: 'ಅಯ್ಯ! ನನ್ನ ಹೃದಯದಿಂದ ಒಂದರಗಳಿಗೆ ಕೂಡ ಕದಲಬೇಡ! ನೀನು ನಾದಮೂರ್ತಿಯಿರುವೆ, ಮೂಲನಾದದ ಪ್ರತೀಕನಿರುವೆ!' ಇಲ್ಲಿ 'ನಾದಮೂರ್ತಿ' ಎಂದರೇನು? 'ನೀನು ನಾದ-ಜ್ಯೋತಿಗಳ ದೃಶ್ಯರೂಪ ಇಲ್ಲವೆ ಬೆಳಗುವ ನಾದ ಇರುವಿ' ಎಂದು ದಾಸರು ಅರುಹುವರು. ಎರಡನೆಯದಾಗಿ "ಸುತ್ತಲು ಜ್ಞಾನದ ಅಂದರೆ ಚಿಜ್ಯೋತಿಯ ಉತ್ಥಾನವಿರುವುದು. ಅದಕ್ಕೆ ನವರತ್ನಗಳನ್ನು ಹಚ್ಚಿರುವರು. ಈ ಜ್ಞಾನವೆಂಬ ನವರತ್ನದ ಮಂಟಪದ ಮಧ್ಯದಲ್ಲಿ ನಿನ್ನನ್ನು ಕುಳ್ಳಿರಿಸಿ ಪೂಜಿಸಬಯಸುವೆನಯ್ಯ!" ಎಂದು ದಾಸರು ಹೇಳುವರು. ಈ ರೀತಿ ಅವರು ಭಗವಂತನನ್ನು ಜ್ಯೋತಿ ಮಂಟಪದ ಮಧ್ಯದಲ್ಲಿ ಕುಳ್ಳಿರಿಸಿ ಅಲ್ಲಿ ಆತನನ್ನು ಪೂಜಿಸುವರು. ಆದರೆ ಅವರು ಆತನನ್ನು ಪೂಜಿಸುವುದೆಂತು? ಹೂಗಳಿಂದಲೇ? ಸುತರಾಂ ಅಲ್ಲ. 'ಧ್ಯಾನದಿಂದ

ಭಜಿಸುವೆ.' ನಾನು ಮಾಡಲಿರುವ ಧ್ಯಾನವೇ ನಿನ್ನ ಪೂಜೆ. ಅದನ್ನುಳಿದು ಬೇರೆ ಬಗೆಯ ಪೂಜೆಯನ್ನು ನಾನರಿಯೆ. ನಾನು ನಿನ್ನ ನಾಮ-ರೂಪಗಳ ಧ್ಯಾನವನ್ನು ಮಾಡುವೆ. ಅದೇ ನನಗೆ ಸಾಕು. ಅದಕ್ಕೂ ಕೆಳಗಿನ ಮಟ್ಟಕ್ಕೆ ನಾನು ಇಳಿಯಬಯಸುವುದಿಲ್ಲ. ನಾನು ಹೂಗಳನ್ನೂ, ಬೇರೆಲ್ಲ ಪಾರ್ಥಿವ ಪದಾರ್ಥ ಗಳನ್ನೂ ನಿನ್ನ ಸಿರಿಯುಡಿಗಳಲ್ಲಿ ಇರಿಸಬಯಸುವುದಿಲ್ಲ; ಮತ್ತು ಪೂಜೆಯ ಅಂತ್ಯದಲ್ಲಿ ನಾನು ಏನನ್ನು ಮಾಡುವೆ ಗೊತ್ತೇ? ನಾನು ಭಕ್ತಿರಸದಿಂದ ತುಂಬಿದ ಒಂದು ಹರಿವಾಣದಲ್ಲಿ ಮತ್ತು-ಮಾಣಿಕಗಳನ್ನು ಇರಿಸಿ, ನಿನಗೆ ಭಕ್ತಿಯ ಆರತಿಯನ್ನು ಬೆಳಗುವೆ." ಈ ರೀತಿ ತಮ್ಮ ರೂಪ, ತೇಜ, ನಾದ, ಇತ್ಯಾದಿಗಳ ಅನುಭವಗಳನ್ನು ಅರುಹಿ ವಿಜಯದಾಸರು ಕೊನೆಗೆ ಹೇಳುವುದೇನೆಂದರೆ: "ಅಯ್ಯ! ಪ್ರಭುವೆ! ನಿನ್ನನ್ನು ನಾನು ಬಿಡಲರಿಯೆ. ನಿನ್ನನ್ನು ತೊರೆಯುವದು ನನ್ನ ಶಕ್ತಿಗೆ ಮೀರಿದ ಮಾತು. ಅದು ನನ್ನ ವಶದಲ್ಲಿಲ್ಲ. ನಾನು ನಿನ್ನನ್ನು ತೊರೆದು ತೆರಳಲರಿಯೆ! ಇನ್ನು ನಿನ್ನ ಮಾತನ್ನು ಸಾರ್ಥಗೊಳಿಸುವುದು ನಿನ್ನ ಕೆಲಸ. ನನ್ನ ಮಾತನ್ನು ನೋನು ಕೇಳದಿದ್ದರೆ ನಾನು ನಿನ್ನನ್ನು 'ಸಂತರ ನ್ಯಾಯಾಲಯಕ್ಕೆ' ಒಯ್ಯುವೆ; ಮತ್ತು ನೀನು ನಿನ್ನ ಪಾಲಿನ ಕರ್ತವ್ಯವನ್ನು ಮಾಡಲೇಬೇಕು ಎಂದು ಹೇಳುವೆ. 'ಎನ್ನ ನೀನು ಬಿಡಲು ಸಲ್ಲ.' ಆಮೇಲೆ ನಿನಗೆ ಸಂತರ ಮಾತನ್ನು ಕೇಳಲೇಬೇಕಾಗುವುದು."

ಈ ಬಗೆಯಾಗಿ ನಾವು ವಿವರಿಸಿದ ಈ ಮೂರು-ನಾಲ್ಕು ಪದಗಳಲ್ಲಿ ಮುಂದಿನ ಕೆಲ ಮಹತ್ವದ ವಿಚಾರಗಳು ಬಂದಿರುವವು: 'ಸಂತರ ನ್ಯಾಯಾಲಯ' 'ಪಾರಮಾರ್ಥಿಕ ಸುಂಕ' 'ಸದ್ಗುರುವಿನ ಚರಣಗಳಿಗೆರಗುವುದು' ಮತ್ತು ಕೊನೆಗೆ 'ಭಗವಂತ-ಭಕ್ತ-ಸಂತರ ಏಕತ್ವ' ಭಕ್ತ ಭಗವಂತರ ಸಂಬಂಧವು ಈ ವಿವಿಧ ಬಗೆಯದಿರುವುದು.

■■

ಪ್ರಕರಣ ಹನ್ನೊಂದು

ಭಗವಂತನ ಸ್ವರೂಪ

ಕಳೆದ ಪ್ರಕರಣದಲ್ಲಿ ನಾನು ಸಂತ-ದೇವರ ಸಂಬಂಧವನ್ನು ವಿವರಿಸಿದೆ. ಇದರಲ್ಲಿ ದೇವರ ಸ್ವರೂಪವನ್ನು ವಿವರಿಸುವೆ. ಎಲ್ಲ ದರ್ಶನ-ಧರ್ಮಗಳಲ್ಲಿ ಇದೊಂದು ಪ್ರಧಾನ ಸಮಸ್ಯೆಯಾಗಿರುವುದು. ನಾನು ಈ ಸಮಸ್ಯೆಯನ್ನು ಭಾರತೀಯ ದರ್ಶನದ ದೃಷ್ಟಿಯಿಂದಲೂ, ಆಧುನಿಕ ಒಲವುಗಳನ್ನೊಳಗೊಂಡ ಪಾಶ್ಚಾತ್ಯ ದರ್ಶನಗಳ ದೃಷ್ಟಿಯಿಂದಲೂ ಮತ್ತು ಕನ್ನಡ, ಹಿಂದಿ, ಮಹಾರಾಷ್ಟ್ರದ ಹಾಗೂ ಬೇರೆಡೆಯ ಸಂತರ ಅನುಭಾವದ ದೃಷ್ಟಿಯಿಂದಲೂ ಚರ್ಚಿಸುವುದರಲ್ಲಿ ನನ್ನ ಜೀವನದ ನಾಲ್ವತ್ತು ವರ್ಷಗಳನ್ನು ಕಳೆದಿರುವೆನು. ಇದು ತುಂಬ ವಿಶಾಲವಾದ ಸಮಸ್ಯೆ ಇರುವುದರಿಂದ ಇದನ್ನು ಒಂದೇ ಪ್ರಕರಣದಲ್ಲಿ ಚೆನ್ನಾಗಿ ವಿವರಿಸುವುದು ಸಾಧ್ಯವಿಲ್ಲ. ಕನ್ನಡ ಸಂತರ ಅನುಭಾವದಲ್ಲಿಯ ದೇವರ ಸಮಸ್ಯೆಯನ್ನು ಕುರಿತೇ ಒಂದು ಹಿರಿಯ ಗ್ರಂಥವನ್ನು ಬರೆಯಬಹುದು. ಅಂಥ ಗ್ರಂಥವನ್ನು ಇನ್ನೂವರೆಗೆ ಬರೆಯಲಾಗಿಲ್ಲ. ನಾನಿಲ್ಲಿ ಆ ಸಮಸ್ಯೆಯ ರೂಪರೇಷೆಗಳನ್ನಷ್ಟೇ ತಮ್ಮೆದುರು ಇರಿಸಬಯಸುವೆ. ಭಗವಂತನು ಸಗುಣನೋ ಇಲ್ಲವೆ ನಿರ್ಗುಣನೋ ಎಂಬುದು ಎಲ್ಲ ಯುರೋಪದ ದರ್ಶನಗಳಲ್ಲಿಯ ಈಶ್ವರವಾದಿಗಳೂ-ವಿಶ್ವೇಶ್ವರವಾದಿಗಳೂ ಈ ಸಮಸ್ಯೆಯನ್ನು ಬಹುತರವಾಗಿ ಡೆಬಿಡದೆ ಚರ್ಚಿಸುವರು. ಆದರೆ, ಸಂತರು ಪ್ರಗತಿ ಹೊಂದಿದಂತೆ ನೂತನ ಅನುಭವಗಳನ್ನು ಪಡೆವರು ಮತ್ತು ಆ ಅನುಭವಗಳಿಗೆ ಅನುಗುಣವಾಗಿ ಅವರು ತಮ್ಮ ದೇವರ ವಿಷಯಕ ಸಿದ್ಧಾಂತಗಳನ್ನು ರೂಪಿಸುವರು ಎಂಬುದನ್ನು ನಾವು ನೆನೆಯಬೇಕು.

ನೀವು ಪುರಂದರದಾಸರ ಹಿರಿಯ ಪದಗಳನ್ನು ಅಭ್ಯಸಿಸಿದಿರೆಂದರೆ, ಅವುಗಳಲ್ಲಿ ಬೆಳವಣಿಗೆಯ ಮೂರು ಹಂತಗಳನ್ನು ಕಾಣುವಿರಿ: ಮೊದಲನೆಯದು ಸಗುಣ ಹಂತ: ಎರಡನೆಯದು ಸಗುಣ-ನಿರ್ಗುಣ ಹಂತ: ಮತ್ತು ಕೊನೆಯದು ನಿರ್ಗುಣ ಹಂತ. ಪುರಂದರದಾಸರು ಮೇಲಿಂದ ಮೇಲೆ, 'ದೇವರ ಸಗುಣ ಸ್ವರೂಪವನ್ನಷ್ಟೇ ವಿವರಿಸುವರು ಎಂಬುದು ನಿಜ. ಆದರೆ ಅವರು ವಿವರಿಸುವ ದೇವರ ಬೇರೆ ಸ್ವರೂಪಗಳೂ ಉಂಟು. ಅವನ್ನಿಲ್ಲಿ ನಾವು ವಿಚಾರಿಸಲಿರುವೆವು. ಆದರೆ ನಾನು

ಪುರಂದರದಾಸರೆಡೆ ತೆರಳುವ ಪೂರ್ವದಲ್ಲಿ ಅವರ ಹಿರಿಯ ಅನುಯಾಯಿಗಳಾದ ವಿಜಯದಾಸರನ್ನು ಕುರಿತು ಕೆಲ ಮಾತುಗಳನ್ನು ಹೇಳುವೆನು. ವಿಜಯದಾಸರು ಪುರಂದರದಾಸರ ತರುವಾಯ ೧೫೦ ವರ್ಷಗಳಾದ ಮೇಲೆ ಬಾಳಿದರು ಎಂದು ನಂಬಲಾಗಿದೆ. ಅವರು ಕನ್ನಡ ಅನುಭಾವಕ್ಕೆ ತುಂಬ ಬೆಲೆಯುಳ್ಳ ಕಾಣಿಕೆಯನ್ನು ಸಲ್ಲಿಸಿದ ಶ್ರೇಷ್ಠತಮ ಸಂತ-ಕವಿಗಳಲ್ಲಿ ಒಬ್ಬರು.

ನಾನು ವಿವರಿಸಲಿರುವ ವಿಜಯದಾಸರ ಮೊದಲನೆಯ ಪದವು 'ಅಂತರಂಗದ ಕದವು ತೆರೆಯಿತಿಂದು' ಎಂಬುದು. ಇದರಲ್ಲಿ ಕನ್ನಡ ಸಾಹಿತ್ಯದಲ್ಲಿಯ ಅತ್ಯುತ್ತಮ ಪದಗಳಲ್ಲಿ ಒಂದಾಗಿರುವುದು. ಇದರಲ್ಲಿ ವಿಜಯದಾಸರು ತಮ್ಮ ಪಾರಮಾರ್ಥಿಕ ಅನುಭವವನ್ನು ಅಂದವಾಗಿ ಬಣ್ಣಿಸಿರುವರು. ಇದು, ಸಾಧಕನು ಭ್ರಾಂತಿ-ಕತ್ತಲೆಗಳಿಂದ ತನ್ನ ಪಾರಮಾರ್ಥಿಕ ಜೀವನವನ್ನು ಪ್ರಾರಂಭಿಸಿದಾಗಿನಿಂದ, ಮುಂದೆ ನಿಧಾನವಾಗಿ ಬಾಗಿಲು ತೆರೆಯುವ ವರೆಗಿನ ಅವನ ಇಡಿಯ ಜೀವನ ವೃತ್ತಾಂತವನ್ನು ಅರುಹುವದು. ಅವರೇ ಒಪ್ಪಿಕೊಂಡ ಮೇರೆಗೆ, ಅದು ಅವರ ಸ್ವಂತ ಜೀವನ ಚರಿತ್ರೆಯೆ ಸರಿ. 'ಇಂದು (ಈ ಪದವು ರಚಿಸಲಾದ ದಿನ) ಎನ್ನ ಪಾರಮಾರ್ಥಿಕ ಅನುಭವ ಪ್ರಾಸಾದದ ಕದವು ತೆರೆಯಿತು!' ಎಂಬುದಾಗಿ ವಿಜಯದಾಸರು ಆನಂದದಿಂದ ಉದ್ಘೋಷಿಸುವರು. ಇದಕ್ಕೂ ಪೂರ್ವದಲ್ಲಿ 'ಎಲ್ಲೆಡೆ ಕಗ್ಗತ್ತಲೆಯು ಮುಸುಕಿದ್ದರಿಂದ ನಾನು ಏನನ್ನು ಕಾಣುವುದೂ ಸಾಧ್ಯವಿರಲಿಲ್ಲ. 'ಸೂಸಿರ್ದ ತಮಸಿನಿಂ ಕಾಣುತ್ತಿದ್ದಿಲ್ಲ'. ಭಗವಂತನ ಕರುಣ, ಸದ್ಗುರುವಿನ ಶಕ್ತಿ, ಹಾಗೂ ಸಂತರ ಸಹವಾಸ, ಈ ಮೂರರ ನೆರವಿನಿಂದ ನಾನು ಬಾಗಿಲನ್ನು ತೆರೆಯಬಲ್ಲವನಾದೆ' ಎಂದು ಅವರು ಹೇಳುವರು. ಈ ಮೂರು ಶಕ್ತಿಗಳ ಸಂಯುಕ್ತ ನೆರವಿನ ಫಲವಾಗಿ, ಅವರು ಪಾರಮಾರ್ಥಿಕ ಅನುಭವ-ಪ್ರಾಸಾದವನ್ನು ಸೇರಬಲ್ಲವರಾದರು. ಭಗವಂತನ ಕರುಣವು ಅವರಿಗೆ ಕೀಲಿಕೈಯನ್ನು ಒದಗಿಸಿಕೊಟ್ಟಿತು; ಅವರ ಸದ್ಗುರುಗಳು ಬಾಗಿಲನ್ನು ತೆರೆಯುವ ಬಲವನ್ನು ಸಲ್ಲಿಸಿದರು; ಮತ್ತು ತರುವಾಯ ಬಾಗಿಲುಗಳೆಲ್ಲ ತೆರೆಯಲಾದವು. ಆದರೆ ಮೊದಲನೆಯ ಬಾಗಿಲು ತೆರೆದೊಡನೆ ಏನಾಯಿತು? ಬಾಗಿಲಲ್ಲಿ ಕಾಯುತ್ತ ನಿಂತಿರುವ ಭ್ರಾಂತಿ-ಅಜ್ಞಾನಗಳ ರಕ್ಷಕರು 'ಎತ್ತಲೋ ಓಡಿದರು' ಸದ್ಗುರುಗಳ ಕರುಣವು ವಿಜಯದಾಸರಿಗೆ ಲಭಿಸಿದ್ದರಿಂದ ಅವರು ಓಡಿಹೋದರು. ವಿಜಯದಾಸರು ಭಗವಂತನ ಧ್ಯಾನರೂಪಿಯಾದ ಪಂಜನ್ನು ಕೈಯಲ್ಲಿ ಹಿಡಿದುಕೊಂಡು, ಏನಾಯಿತೆಂಬುದನ್ನು ಕಾಣಲು ಪ್ರಾರಂಭಿಸಿದರು. ಆ ಅಂದವಾದ ಅರಮನೆಗೆ ಒಂಬತ್ತು ಬಾಗಿಲುಗಳಿದ್ದವು- ಐದು ಒಳಗಿದ್ದವು, ನಾಲ್ಕು ಹೊರಗಿದ್ದವು-ಎಂದು ವಿಜಯದಾಸರು ಹೇಳುವರು. ಈ ಬಗೆಯ ಬಣ್ಣನೆಯನ್ನು, ಮನಃಶಾಸ್ತ್ರಜ್ಞರೂ, ಶರೀರಶಾಸ್ತ್ರಜ್ಞರೂ, ದಾರ್ಶನಿಕರೂ ಪೂರ್ತಿಯಾಗಿ ಒಪ್ಪರು. ಆದರೆ ಆ ಮಾತಿಗೆ ನಾನಿಲ್ಲಿ ಅಷ್ಟೊಂದು ಮಹತ್ವವನ್ನು ಕೊಡಬಯಸುವುದಿಲ್ಲ. ಈ

ಅರಮನೆಗೆ ಒಂಬತ್ತು ಬಾಗಿಲುಗಳು ಇರುವುದೇನೋ ನಿಜ. ಆದರೆ ಅವುಗಳಲ್ಲಿ ಒಳಗೈದು, ಹೊರಗೆ ನಾಲ್ಕು ಇರುವವೆಂದು ವಿಜಯದಾಸರು ಹೇಳಿರುವರು. ಈ ಬಾಗಿಲುಗಳನ್ನು ತೆರೆದು, ಒಳಗೆ ತೆರಳಿದಾಗ, ಮೊದಲು ಅವರಿಗೆ ಭಗವಂತನ ರಕ್ಷಕರು ಕಾಣಿಸಿದರು. ಆಮೇಲೆ ಅವರು ವಿಜಯವಿಠ್ಠಲನು ಒಳ್ಳೆ ವೈಭವದಿಂದ ಕುಳಿತಿರುವದನ್ನು ಕಂಡರು. ಅವನದು ನಗೆಮುಖ, ಸಾವಿರ ಸೂರ್ಯರ ತೇಜ. ಅವನು 'ಕೋಟಿ' ರವಿಯಂತೆ ಮಿರುಗುತ್ತಿದ್ದನಂತೆ; ಮತ್ತು ಅವನ ಜತೆಯಲ್ಲಿ ಅನೇಕ ಅನುಚರರು ಇದ್ದರಂತೆ.

ಸ್ವಮೂರ್ತಿಗಣಮಧ್ಯ ಸಚ್ಚಿದಾನಂದೈಕ್ಯ
ರಮೆಯೊಡೆಯ ನಗೆಮೊಗದಿ ಮಿನುಗುತಿರುವಾ!

ಎಂಬುದು ಇಲ್ಲಿ ಅರುಹಲಾದ ಒಂದು ಮಹತ್ವದ ವಿಷಯ. ಈ ಎರಡು ಸಾಲುಗಳಲ್ಲಿ ವಿಜಯದಾಸರು ಮುಂದಿನ ಮೂರು ದೃಷ್ಟಿಕೋನಗಳನ್ನು ಒಂದೆಡೆ ತಂದಿರುವರು. 'ರಮೆಯೊಡೆಯ' ಎಂಬುದು ಸಗುಣದೃಷ್ಟಿಯನ್ನೂ, 'ಸ್ವಮೂರ್ತಿಗಣ ಮಧ್ಯ' ಎಂಬುದು ಅನೇಕ ತತ್ವವಾದದ ದೃಷ್ಟಿಯನ್ನೂ ಮತ್ತು 'ಸಚ್ಚಿದಾನಂದೈಕ್ಯ' ಎಂಬುದು ಏಕತತ್ವವಾದದ ದೃಷ್ಟಿಯನ್ನೂ ಸೂಚಿಸುವುದು. ಆದರೆ ತೋರಿಕೆಗೆ ಬೇರೆ ಬೇರೆ ಕಾಣುವ ಈ ಪರತತ್ವದ ಎಲ್ಲ ಅಂಗಗಳ ಬಗೆಗೆ ಇವರಂಥ ಹಿರಿಯ ಸಂತರು ವೃಥಾಭಿಮಾನವನ್ನು ತಳೆಯುವುದಿಲ್ಲ. ಅವನ್ನು ಅಷ್ಟೊಂದು ಲಕ್ಷಿಸುವುದಿಲ್ಲ.

ರಮೆಯೊಡೆಯನನ್ನು ಅನೇಕ ಅನುಚರರು ಸೇವಿಸುತ್ತಿರುವರು. ನೀವು ಭಾಗವತ ಪುರಾಣದಲ್ಲಿ ಜಯ-ವಿಜಯರೆಂಬ ಶ್ರೀಹರಿಯ ದ್ವಾರಪಾಲರ ವೃತ್ತಾಂತವನ್ನು ಓದಬಹುದು. ಅವರಿಗೆ ವಿಷ್ಣುವು ತನ್ನ ರೂಪವನ್ನೇ ದಯಪಾಲಿಸಿದ್ದನು. ಅವರು ಸನತ್ಕುಮಾರಾದಿ ಋಷಿಗಳನ್ನು ವಿಷ್ಣುವಿನ ದರ್ಶನಕ್ಕಾಗಿ ಒಳಗೆ ಬಿಡದ ಮೂಲಕ ಆ ಋಷಿಗಳ ಅಸಂತೋಷಕ್ಕೆ ಗುರಿಯಾದರು. ಸನತ್ಕುಮಾರರು ಅವರನ್ನು ಶಪಿಸಿದರು. ಅದರ ಫಲವಾಗಿ ಅವರು ಕ್ರಮಶಃ ಹಿರಣ್ಯಾಕ್ಷ ಮತ್ತ ಹಿರಣ್ಯಕಶಿಪು. ರಾವಣ ಮತ್ತು ಕುಂಭಕರ್ಣ, ಶಿಶುಪಾಲ ಮತ್ತು ವಕ್ರದಂತ- ಈ ಮೂರು ಜನ್ಮಗಳೊಳಗಿಂದ ಹಾದುಹೋಗಬೇಕಾಯಿತು. ಆಮೇಲೆಯೆ ಅವರು ವೈಕುಂಠವನ್ನು ಮರಳಿ ಸೇರಬಲ್ಲವ ರಾದರು. ಆದರೆ ಇಲ್ಲಿ, ಕೇವಲ ಜಯ-ವಿಜಯರಷ್ಟೇ ದೇವರ ವರ್ಣ-ರೂಪಗಳನ್ನು ಪಡೆದಿದ್ದರೆಂದು ಹೇಳಲಾಗಿಲ್ಲ. ಭಾಗವತದಲ್ಲಿ ಅರುಹಲಾದ ಮೇರೆಗೆ, 'ವೈಕುಂಠ ದಲ್ಲಿದ್ದವರೆಲ್ಲರೂ ದೇವರ ರೂಪವನ್ನೇ ಪಡೆದಿದ್ದರು' 'ವಸಂತಿಯತ್ರ ಪುರುಷಾಃ ಸರ್ವೇ ವೈಕುಂಠ ಮೂರ್ತಯಃ' 'ಅಲ್ಲಿದ್ದ ಪುರುಷರೆಲ್ಲ ವಿಷ್ಣುರೂಪರಿದ್ದರು' ಎಂದು

ಹೇಳಲಾಗಿದೆ. ಆದುದರಿಂದ ವಿಜಯದಾಸರು 'ಸ್ವಮೂರ್ತಿಗಣಮಧ್ಯ ಸಚ್ಚಿದಾನಂದೈಕ್ಯ ರಮೆಯೊಡೆಯ' ಎಂದು ಭಗವಂತನನ್ನು ಬಣ್ಣಿಸಿರುವರು. ಭಾರತೀಯ ದರ್ಶನವನ್ನು ವಿಶೇಷತಃ ಅದರಲ್ಲಿಯ ಮುಕ್ತಿಯ ವಿಚಾರವನ್ನು-ಅಭ್ಯಸಿಸಿದವರು ಮುಕ್ತಿಯು ನಾಲ್ಕು ಬಗೆಯದಿರುವುದನ್ನು ಬಲ್ಲರು; ಸಲೋಕತಾ ಸಮೀಪತಾ, ಸರೂಪತಾ ಹಾಗೂ ಸಾಯುಜ್ಯತಾ-ಇವೇ ಆ ನಾಲ್ಕು ಬಗೆಗಳು. ಇಲ್ಲಿ ಸರೂಪತಾ ಹಾಗೂ ಸಾಯುಜ್ಯತಾ ಇವುಗಳ ಸ್ವರೂಪದ ಪ್ರಶ್ನೆಯು ಉದ್ಭವಿಸುವುದು. ವೈಕುಂಠದಲ್ಲಿಯ ಅನುಚರರೆಲ್ಲ ವಿಷ್ಣುವಿನ ರೂಪವನ್ನು ತಳೆದವರಿದ್ದರು. ಹೊರಗಿನಿಂದ ಅಲ್ಲಿ ಬಂದ ಮನುಜನು ವಿಷ್ಣುವನ್ನು ಗುರುತಿಸಲು ಸಮರ್ಥನಾಗಬಾರದೆಂಬುದು ಅದರ ಉದ್ದೇಶ. ಬಾದರಾಯಣರು ತಮ್ಮ ಸೂತ್ರಗಳ ಕೊನೆಗೆ, ಭಗವದ್ರೂಪರು ಹಾಗೂ ಪ್ರತ್ಯಕ್ಷ ಭಗವಂತ ಇವರಲ್ಲಿ ಭೇದವನ್ನು ಕಲ್ಪಿಸಿರುವುದೇನೋ ನಿಜ. ಇವರು ಭಗವಂತನ ರೂಪವನ್ನು ಪೂರ್ತಿಯಾಗಿ ಪಡೆದಿರುವರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಸೃಷ್ಟಿಯನ್ನು ನಿರ್ಮಿಸುವ ಸಾಮರ್ಥ್ಯವು ಕೇವಲ ಭಗವಂತನಿಗೇ ಮೀಸಲಾಗಿರುವುದು ಎಂದು ತಮ್ಮ ಸೂತ್ರಗ್ರಂಥದ ನಾಲ್ಕನೆಯ ಪ್ರಕರಣದ ಕೊನೆಯಲ್ಲಿ ಬಾದರಾಯಣರು ಅರುಹಿರುವರು. ಭಗವಂತನ ಎಲ್ಲ ಅನುಚರರು ಭಗವದ್ರೂಪವನ್ನೆ ಪಡೆದಿದ್ದರು ಎಂಬುದಿಷ್ಟೇ ನಮಗಿಲ್ಲಿ ಅಭಿಪ್ರೇತವಾದ ವಿಷಯ. ಈ ರೀತಿ, ವಿಜಯದಾಸರು ಮೋಹಾಂಧಕಾರದೊಳಗಿಂದ ಹೊರಬಿದ್ದು, ಭಗವಚ್ಚಿಂತನದ ಪಂಜಿನ ನೆರವಿನಿಂದ ವಿಜಯವಿಠ್ಠಲನ ವೈಭವವನ್ನು ಕಾಣಬಲ್ಲವರಾದರು. ಕೊನೆಗೆ ಅವರು ಭಗವಂತನ ಅರಮನೆಗೆ ಹೋಗಿ ವಿಷ್ಣುರೂಪರಾದ ಅನುಚರರಿಂದ ಒಡಗೂಡಿದ ಶ್ರೀಹರಿಯ ದಿವ್ಯದರ್ಶನವನ್ನು ಪಡೆದು ಧನ್ಯರಾದರು. ಈ ಬಗೆಯಾಗಿ ಪಾರಮಾರ್ಥಿಕ ಜೀವನದ ಇಡಿ ಇತಿಹಾಸವನ್ನು ತಿಳಿಸುವ ಅತ್ಯುತ್ತಮ ಪದಗಳಲ್ಲಿ ಇದೂ ಒಂದಾಗಿರುವುದು.

ಇನ್ನು ನಾನು ಈ ಮೊದಲು ಉಲ್ಲೇಖಿಸಿದ ಪುರಂದರದಾಸರ ಮೂರು ದೃಷ್ಟಿಕೋನಗಳೆಡೆ ಬರಲಿರುವೆ. ಇವನ್ನು ಕೂಡ ನಾನು ಇಡೀ ಪಾರಮಾರ್ಥಿಕ ಜೀವನದ ಸಂಕ್ಷಿಪ್ತ ನಿರೂಪಣೆಯೆಂದೆ ಬಗೆಯುವೆ. ಸಗುಣ, ಸಗುಣ-ನಿರ್ಗುಣ ಹಾಗೂ ನಿರ್ಗುಣ-ಇವೇ ಆ ಮೂರು ದೃಷ್ಟಿಗಳು. ಪುರಂದರದಾಸರು ತಮ್ಮ ಕವನಗಳಲ್ಲಿ ಈ ಮೂರೂ ಅವಸ್ಥೆಗಳನ್ನು ಬಣ್ಣಿಸಿದುದು ಒಂದು ತುಂಬ ಸೋಜಿಗದ ಸಂಗತಿ. 'ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿರುತ್ತದೆ' ಎಂಬುದು ಭಗವಂತನ ಸಗುಣರೂಪವನ್ನು ಕಾಣಿಸುವುದು. 'ಕೂಸನು ಕಂಡಿರಾ' ಎಂಬುದು ಭಗವದ್ರೂಪಿಯಾದ ಕೂಸನ್ನು ಬಣ್ಣಿಸುವ ಅವರ ಎರಡನೆಯ ಪದವು ಭಗವಂತನ ಸಗುಣ-ನಿರ್ಗುಣ ರೂಪವನ್ನು ತೋರಿಸುವುದು; ಮತ್ತು 'ಬ್ರಹ್ಮಾನಂದದ ಸಭೆಯೊಳಗಲ್ಲಿಸುಮ್ಮನೆ ಇರುತಿಹುದೇನಯ್ಯ!' ಎಂಬ ಮೂರನೆಯ ಪದದಲ್ಲಿ ಅವರು 'ಸುಮ್ಮನಿರುವ'

ಭಗವಂತನನ್ನು ಬಣ್ಣಿಸುವಾಗ, ಆತನ ನಿರ್ಗುಣ ರೂಪವನ್ನು ಕಾಣಿಸುವರು ಈ ರೀತಿ, ಈ ರೂಪಗಳೆಲ್ಲ ಪುರಂದರದಾಸರ ಪದಗಳಲ್ಲಿ ಕಾಣಬರುವವು. ಮೊದಲು ನಾನು ಸಗುಣರೂಪವನ್ನು, ತರುವಾಯ ಸಗುಣ–ನಿರ್ಗುಣ ರೂಪವನ್ನು ಮತ್ತು ಕೊನೆಗೆ ನಿರ್ಗುಣ ರೂಪವನ್ನು ವಿವರಿಸಲಿರುವೆ. ಎರಡನೆಯ ಸಗುಣ–ನಿರ್ಗುಣ ರೂಪವನ್ನು ವಿವರಿಸುವಾಗ, ನಾನು ಹಿರಿಯ ಅನುಭಾವಿ–ಕವಿಯತ್ರಿಯರಾದ ಮಹಾದೇವಿಯಕ್ಕನವರ ಅಂಥ ಬಣ್ಣನೆಯನ್ನೊಳಗೊಂಡ ವಚನವೊಂದನ್ನು ಉಲ್ಲೇಖಿಸುವೆ.

'ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿರುತ್ತದೆ' ಎಂಬ ಪದದಲ್ಲಿ ದಾಸರಾಯರು ಭಗವಂತನ ಸಗುಣರೂಪವನ್ನು ಬಣ್ಣಿಸಿರುವರು. ನಾನು 'ನಿಂತಿದಂತಿದೆ' ಇದರ ಬದಲು 'ನಿಂತಿರುತ್ತದೆ' ಎಂಬ ಪಾಠಭೇದವನ್ನು ಸೂಚಿಸಿರುವೆ. ಯಾಕಂದರೆ, ಪಾರಮಾರ್ಥಿಕ ಅನುಭವದ ದೃಷ್ಟಿಯಿಂದ ಅದು ಹೆಚ್ಚು ಒಳ್ಳೆಯ ಪಾಠವಿರುವಂತೆ ಕಾಣುವುದು. ಪುರಂದರದಾಸರು ಕೃಷ್ಣದರ್ಶನವನ್ನು ಪಡೆದುದು ಖಂಡಿತ. ಅವರು ಕೃಷ್ಣನನ್ನು ಕಂಡಿದ್ದರು. ತಾವು ಕೃಷ್ಣನನ್ನು ಕಂಡಂತೆ ಆಯಿತು ಎಂದು ಅವರು ಹೇಳುವುದಿಲ್ಲ. ಹನ್ಸವೇ ಹಿಂಜರ ಎಂಬ ಹೆಸರಾದ ಜರ್ಮನ್ ದಾರ್ಶನಿಕನೋರ್ವನು "'ಅಂತೆ'ಯ ದರ್ಶನ" (The Philosophy of As If)ಎಂಬ ಹಿರಿಯ ದಾರ್ಶನಿಕ ಗ್ರಂಥವೊಂದನ್ನು ಬರೆದಿರುವರು. ಈ 'ಅಂತೆ'ಯ ದರ್ಶನವನ್ನು ಯಾಜ್ಞವಲ್ಕ್ಯರಲ್ಲಿಯೂ ನಾವು ಕಾಣಬಹುದು. ಅಲಹಾಬಾದ ವಿಶ್ವವಿದ್ಯಾಲಯದವರು ಪ್ರಕಟಿಸಿದ ಗಂಗಾನಾಥ ಝಾರವರ ಸ್ಮಾರಕ ಗ್ರಂಥದಲ್ಲಿ ನಾನಿದನ್ನು ಕುರಿತು ಒಂದು ಲೇಖನವನ್ನು ಬರೆದಿರುವೆ. ಆದರೆ ಪುರಂದರದಾಸರು ಕೇವಲ 'ಅಂತೆ'ಯ ದರ್ಶನವನ್ನೆ ನಂಬಿದ್ದರು, ಇಲ್ಲವೆ 'ಅಂತೆ'ಯ ಬೋಧೆಯನ್ನೆ ನೀಡಿದ್ದರು ಎಂದು ಹೇಳಿಯೆ ನಾವು ವಿಶ್ರಮಿಸತಕ್ಕದ್ದಲ್ಲ. ತಮ್ಮ ಅವಗಾಹನೆಗಾಗಿ ನಾನೀ ಸೂಚನೆಯನ್ನು ಮಾಡಲಿರುವೆ. ಅದೇನೇ ಇದ್ದರೂ, ನಾವು ಯಾವ ಪಾಠವನ್ನು ಸ್ವೀಕರಿಸಿದರೂ, ಈ ಕವನದಲ್ಲಿ ಭಗವಂತನ ಮುಡಿಯಿಂದ ಅಡಿಯ ವರೆಗಿನ ಬಣ್ಣನೆ ಇದ್ದುದು ಕಾಣದಿರದು. ಭಗವಂತನ ರೂಪದಲ್ಲಿಯ ಎಲ್ಲ ಅಂಗಗಳನ್ನು ದಾಸರಾಯರು ಬಣ್ಣಿಸುತ್ತಲಿರುವರು. ಮಸ್ತಕದ ಮೇಲೆ ಮಾಣಿಕದ ಕಿರೀಟವಿದೆ. ಲಲಾಟದ ಮೇಲೆ ಕಸ್ತೂರಿಯ ತಿಲಕವಿದೆ. ಆತನ ಸೊಬಗಿನ ಸುಳಿಗುರುಳು ಸುಗಂಧಿತವಾದ ಕಂಪಿನಿಂದ ಮಗಮಗಿಸುವುದು. ಮುರಲೀಧರ ಕೃಷ್ಣನ ಚಿತ್ರದಲ್ಲಿ ಕಾಣುವಂತೆ. ಅವನ ಕಂಗಳು ಓರೆಯಾಗಿ ನೋಡುವವು. ಮಥುರೆಗೆ ಹೋದವರೆಲ್ಲ ಇದನ್ನು ಕಾಣುವುದುಂಟು. ಕೊಳಲನೂದುವಾಗ ಕೈಗಳು, ಮುಖ ಇವನ್ನು ಉಪಯೋಗಿಸಬೇಕಾಗುವುದು. ಆದುದರಿಂದ ಕೊಳಲನೂದುವಾಗ ಕೃಷ್ಣನು ಓರೆಗಣ್ಣಿನಿಂದ ನೋಡುತ್ತಿರುವನಷ್ಟೇ ಅಲ್ಲದೆ ತನ್ನ ಮುಖಕೈಗಳನ್ನು ಉಪಯೋಗಿಸುತ್ತಿರುವನು ಮಧ್ಯದಲ್ಲಿ ಕೌಸ್ತುಭಮಣಿಯುಳ್ಳ ಒಂದು ರತ್ನಹಾರವು ಆತನ ಕೊರಳನ್ನು

ಅಲಂಕರಿಸುವುದು. ಆತನ ನಾಭಿಯು ತಾವರೆಯರಳಿನಂತೆ ಶೋಭಿಸುವುದು. ಆತನ ಕಟಿಯ ಉಡುದಾರ ಒಡ್ಯಾಣಾದಿ ನಿಖಿಲ ಸುವರ್ಣಾಭರಣಗಳಿಂದಲೂ, ರವಿಶತಕಿರಣವುಳ್ಳ ಪೀತಾಂಬರದಿಂದಲೂ ಹೊಳೆಯುತ್ತಿರುವುದು. ಕೊನೆಯದಾಗಿ, ಆತನ ಚರಣಗಳಲ್ಲಿ ಕಡಗ ಗೆಜ್ಜೆಗಳಿರುವವು ಮತ್ತು ಅವು ಆತನು ಕುಣಿದಾಗ ಮಂಜುಲರವವನ್ನು ಮಾಡುತ್ತಿರುವವು. ಈ ರೀತಿ ಇಲ್ಲಿ ಪ್ರಾಚೀನ ಭಾರತೀಯ ಪದ್ಧತಿಯನ್ನನುಸರಿಸಿದ ಭಗವಂತನ ಪೂರ್ಣವರ್ಣನೆಯು ಇರುವುದು. ಆದರೆ, ಪ್ರಾಚೀನ ಪರಂಪರೆಯು ಭಗವಂತನನ್ನು ಅಡಿಯಿಂದ ಮುಡಿಯ ವರೆಗೆ ಬಣ್ಣಿಸಿದರೆ, ದಾಸರಾಯರು ಇಲ್ಲಿ ಆತನನ್ನು ಮುಡಿಯಿಂದ ಅಡಿಯ ವರೆಗೆ ಬಣ್ಣಿಸಿರುವರು ಎಂಬುದನ್ನು ಗಮನಿಸಬೇಕು.

ಇನ್ನು ನಾನು ಇನ್ನೊಂದು ಮಹತ್ವದ ಸಮಸ್ಯೆಯೆಡೆಗೆ ನಿಮ್ಮ ಅವಧಾನವನ್ನು ಸೆಳೆಯಬಯಸುವೆ. ಅದು ಪುರಂದರದಾಸರಲ್ಲಿಯ ಸ್ವಪ್ನ-ಸಮಸ್ಯೆ. ಕನಸಿನ ಅನುಭವವು ಕೇವಲ ವೈಯಕ್ತಿಕವಾದುದೂ ಅಲ್ಲ ಇಲ್ಲವೆ ಅಲೌಕಿಕವಾದುದೂ ಅಲ್ಲ. ಅದು ಅರೆಅನುಭಾವದ್ದೂ ಅಲ್ಲ, ಇಲ್ಲವೆ ಪೂರ್ಣ ಅನುಭಾವದ್ದೂ ಅಲ್ಲ. ಈ ವಿಷಯಗಳನ್ನು ಸ್ವಲ್ಪ ಮುಂದೆ ಚರ್ಚಿಸಲಿರುವೆ. ಇಲ್ಲಿ ನಾನು ದಾಸರಾಯರ ಕನಸಿನ ಅನುಭವದ ಅಲ್ಪ ಪರಿಚಯವನ್ನು ಮಾಡಿಕೊಡುವೆ. ಕನಸಿನ ಅನುಭವಗಳನ್ನು ಕುರಿತು ಬಗೆಬಗೆಯ ಗ್ರಂಥಗಳು ಪ್ರಕಟವಾಗಿವೆ; ಮತ್ತು ಪುರಂದರದಾಸರು ತಮ್ಮ ಕವನಗಳಲ್ಲಿ ತಮ್ಮ ಅನೇಕ ಕನಸುಗಳನ್ನು ಅರುಹಿರುವರು. ಸ್ವಪ್ನದೃಷ್ಟಿಯ ಅಭ್ಯಾಸವನ್ನು ಮಾಡದಿರುವವರು, ಇಂಥ ಕನಸುಗಳ ಮಹತ್ವವನ್ನು ವಿವರಿಸಬಹುದು. ನಾನದನ್ನು ಅವರಿಗೆ ಒಪ್ಪಿಸುವೆ. ನನ್ನ ಕನಸುಗಳನ್ನೇ ಹೇಳಬೇಕಾದರೆ ಅನೇಕ ಕನಸುಗಳನ್ನು ಹೇಳಬಹುದು. ಉದಾಹರಣಾರ್ಥವಾಗಿ ಕ್ರಿ.ಶ.೧೯೧೦ರಲ್ಲಿ ಇಂಥ ಕೆಲಕನಸುಗಳನ್ನು ನಾನು ನನ್ನ ಸದ್ಗುರುಗಳಿಗೆ ಹೇಳಿದೆ. ಆಗ ಅವರೆಂದರು: "ಬಿಡಯ್ಯಾ! ಅವೇನು ಕೇವಲ ಕನಸುಗಳು, ಅವನ್ನು ನಂಬಬೇಡ" ಅದಕ್ಕೆ ನಾನೆಂದೆ: "ಮಹಾರಾಜ! ಅವು ಬರಿ ಕನಸುಗಳಿದ್ದರೆ ಅವು ಪ್ರತ್ಯಕ್ಷ ನಿಜವಾಗುವುದು ಹೇಗೆ?" ಇದನ್ನು ಕೇಳಿ ಅವರು ಈ ರೀತಿ ಉತ್ತರಿಸಿದರು. "ಸರಿ ಅಡ್ಡಿ ಇಲ್ಲ. ನಿನ್ನ ಅಂತಃಕರಣವು ಒಳ್ಳೆಯದಿರುವುದರಿಂದ ಕನಸಿನಲ್ಲಿ ಕಂಡದ್ದನ್ನು ನೀನು ಪ್ರತ್ಯಕ್ಷ ಅನುಭವಿಸಿದೆಯಷ್ಟೆ" ಮತ್ತು ದಾಸಬೋಧದಲ್ಲಿಯ ಮುಂದಿನ ಸಾಲುಗಳನ್ನು ಉದ್ಧರಿಸಿದರು.

ಜ್ಞಾನೀ ಮುಕ್ತ ಹೋವೂನಿ ಗೇಲೇ । ತ್ಯಾಂಚೇ ಸಾಮರ್ಥ್ಯ ಉಗೇಚಿ ಚಾಲೇ।
ಕಾ ತೇ ಪುಣ್ಯ ಮಾರ್ಗೇ ಚಾಲಿಲೇ । ಮ್ಹಣೋನಿಯಾ॥

'ಹಿಂದಿನ ಹಿರಿಯ ಸಂತರು ಮುಕ್ತರಾಗಿರುವರು. ಅವರು ಪುಣ್ಯಮಾರ್ಗದಿಂದ

ನಡೆದಿರುವ ಮೂಲಕವೇ ಅವರ ಸಾಮರ್ಥ್ಯವು ಅವರ ಹಿಂದೆ ಕಾರ್ಯಕಾರಿಯಾಗುವುದು'. ಈಗ ನಾನು ಕೂಡ, ಕನಸುಗಳನ್ನು ನಾವು ಅತಿಯಾಗಿ ನಂಬಬಾರದು ಎಂದು ಭಾವಿಸುವೆನು. ಒಮ್ಮೊಮ್ಮೆ ಜನರು ತುಂಬ ವಿಲಕ್ಷಣವಾದ ಕನಸುಗಳನ್ನು ಕಾಣುವುದನ್ನು ನೀವು ಬಲ್ಲಿರಿ. ಭಗವಂತನು ತನ್ನೆಡೆ ಬಂದು, ಒಂದು ಪದವನ್ನು ಹೇಳಲು ತನಗೆ ಆಜ್ಞಾಪಿಸಿದನು ಎಂದು ಪುರಂದರದಾಸರು ಹೇಳುವರು. ದಾಸರಾಯರು ಪದವನ್ನು ಹಾಡಲು ಪ್ರಾರಂಭಿಸಿದರು ಮತ್ತು ಭಗವಂತನು ಅದನ್ನು ಮುಗಿಸಿದನಂತೆ. ದೇವರು ಅವರಿಗೆ ದೋಸೆಯನ್ನು ಬೇಡಿದನಂತೆ. ಅವರದನ್ನು ಮೊದಲೆ ಆಸ್ವಾದಿಸಿದ್ದರಿಂದ ದೇವರಿಗೆ ಅದನ್ನು ಸಲ್ಲಿಸಲು ಬಯಸಲಿಲ್ಲ. ಅದನ್ನರಿತು 'ಅದನ್ನೇನು ಅಷ್ಟೊಂದು ಗಮನಿಸಬೇಕಾಗಿಲ್ಲವಯ್ಯ' ಎಂದು ದೇವರೆಂದರು. ಈ ಅನುಭವವು ಮಹಾರಾಷ್ಟ್ರದ ಸಂತ-ಕವಿಗಳಾದ ತುಕಾರಾಮರು ತಮ್ಮ ಅಭಂಗವೊಂದರಲ್ಲಿ ಭಣ್ಣಿಸಿದ ಅನುಭವವನ್ನು ಹೋಲುವುದು. ತುಕಾರಾಮರ ಮೊದಲನೆಯ ಪಾರಮಾರ್ಥಿಕ ಅನುಭವವು ಕನಸಿನ ರೂಪದ್ದಿತ್ತು. ಆ ಕನಸಿನಲ್ಲಿ ಅವರ ಸದ್ಗುರುಗಳು ಕಾಣಿಸಿಕೊಂಡು ಅವರಿಗೆ 'ಊಟಕ್ಕಾಗಿ ಪಾವುಸೇರು ತುಪ್ಪವನ್ನು ಬೇಡಿದರಂತೆ' (ಭೋಜನಾ ಮಾಗತೀ ತೂಪ ಪಾವಸೇರ) ಕ್ರಿ.ಶ. ೧೯೦೯ರಲ್ಲಿ ನಾನು ತುಕಾರಾಮರ ಈ ಕನಸಿನ ಅನುಭವದಿಂದ ತುಂಬ ಪ್ರಭಾವಿತನಾಗಿದ್ದೆ. ಆದರೆ ನನ್ನ ದರ್ಶನದ ಇಷ್ಟೊಂದು ಅಧ್ಯಯನದ ಫಲವಾಗಿಯೂ ಮತ್ತು ಅನುಭವದಲ್ಲಿ ಇಷ್ಟೊಂದು ಪ್ರಗತಿಯ ಫಲವಾಗಿಯೂ ಈಗ ನನಗನಿಸುವುದೇನೆಂದರೆ: ಈ ಕನಸಿನ ಅನುಭವಗಳು ಪ್ರತ್ಯಕ್ಷ ಪಾರಮಾರ್ಥಿಕ ಅನುಭವಗಳ ದೃಷ್ಟಿಯಿಂದ ತೀರ ಗಣನೆಗೆ ಬಾರದಂತಹವು ಇರುವವು.

ಇನ್ನು ನಾನು ಪುರಂದರದಾಸರ ಒಂದು ಕನಸಿನ ಅನುಭವವನ್ನು ಅರುಹುವೆ. ಅದನ್ನು ಅವರ 'ಕಂಡೆ ನಾ ಕನಸಿನಲಿ ಗೋವಿಂದನ' ಪದದಲ್ಲಿ ಬಣ್ಣಿಸಲಾಗಿದೆ. ಈ ಪದದಲ್ಲಿ ಅವರು ಬೇರೊಂದು ಪದ್ಧತಿಯನ್ನು ಬಳಸಿರುವರು. ಇಲ್ಲಿ ಅವರು ದೇವರನ್ನು ಮುಡಿಯಿಂದ ಅಡಿಯ ವರೆಗೆ ಬಣ್ಣಿಸುವುದರ ಬದಲು, ಅಡಿಯಿಂದ ಮುಡಿಯವರೆಗೆ ಬಣ್ಣಿಸಿರುವರು. ಅವರ ಮೇಲ್ಕಾಣಿಸಿದ ಪದದಲ್ಲಿ ಬಂದ ದೇವರ ಸಗುಣರೂಪದ ಬಣ್ಣನೆಯಲ್ಲಿಯ ಲಕ್ಷಣಗಳ ಹೊರತಾಗಿ, ಅವರು ಈ ಪದದಲ್ಲಿ ಮೂರು ಇಲ್ಲವೆ ನಾಲ್ಕು ಹೆಚ್ಚಿನ ಮಾತುಗಳನ್ನು ವಿವರಿಸಿರುವರು. ಮೊದಲು ಅವರು 'ಕೃಷ್ಣನು ಕಾಳಿಂಗನ ಹೆಡೆಯನೇರಿ..... ಆನಂದದಿ ಕುಣಿವ' ಎಂದು ಹೇಳಿರುವರು. ಈ ರೀತಿ, ಇದರಲ್ಲಿ ಕಾಳಿಂಗನ (ಕಾಲಿಯನ) ಉಲ್ಲೇಖವಿರುವುದು. ಎರಡನೆಯದಾಗಿ, ಇಲ್ಲಿ ಕೃಷ್ಣನು ಚತುರ್ಭುಜನೂ, ಶಂಖ-ಚಕ್ರ-ಗದಾ-ಪದ್ಮಧಾರಿಯೂ ಎಂದು ಬಣ್ಣಿಸಲಾಗಿರುವುದು. ಮೂರನೆಯದಾಗಿ ಇಲ್ಲಿ ವಿಜನಯನಗರದ ಬಳಿಯಲ್ಲಿಯ

ತುಂಗಭದ್ರೆಯ ಉಲ್ಲೇಖವಿರುವುದು. ಅಲ್ಲಿಯೇ ಪುರಂದರದಾಸರು ಬಹುಕಾಲ ವಾಸಿಸಿದ್ದರು. ಇದೊಂದು ಸೋಜಿಗದ ಸಂಗತಿ. ಇವೆಲ್ಲ ಅವರ ದೇವರ ವಿಷಯಕ ಕನಸಿನ ಅನುಭವದ ಬಣ್ಣನೆಯಲ್ಲಿ ಬಂದ ಉಲ್ಲೇಖಗಳು. ಈ ಬಗೆಯಾಗಿ ನಾನು ಕನಸಿನಲ್ಲಿ ದೇವರನ್ನು ಕಂಡೆ ಎಂದು ಪುರಂದರದಾಸರು ಹೇಳುವರು. ಇವೆಲ್ಲ ಆನುಷಂಗಿಕವಾದವುಗಳು, ಸಾರಭೂತವಾದವುಗಳಲ್ಲ. ಆದರೆ, ಇಲ್ಲಿ ಒಂದು ಮಹತ್ವದ ಮಾತಿನೆಡೆ ನಾನು ನಿಮ್ಮ ಗಮನವನ್ನು ಸೆಳೆಯಬಯಸುವೆ. ಯಾವ ಕನಸಿನಲ್ಲಿ ಅನುಭಾವಿಯು ಕಾಣಿಸಿಕೊಳ್ಳುವನೋ ಅದು ನಿಜವಾಗಿ ಪರಿಣಮಿಸಲೇಬೇಕು. ನೀವು ಇಂಥ ಕನಸಿನ ಅನುಭವಗಳ ಸಪ್ರಮಾಣತೆಯನ್ನೂ ಸತ್ಯತೆಯನ್ನೂ ಚೆನ್ನಾಗಿ ಪರೀಕ್ಷಿಸಬಹುದು. ನಿಮ್ಮ ಕನಸಿನಲ್ಲಿ ಅನುಭಾವಿಯು ಕಾಣಿಸಿಕೊಂಡಾಗ ನಿಮ್ಮ ಆಕಾಂಕ್ಷೆಯು ಕೈಗೂಡದಿದ್ದರೆ ಅವರು ಅನುಭಾವಿಯೇ ಅಲ್ಲ ಎಂದು ಖಂಡಿತವಾಗಿ ಭಾವಿಸಬಹುದು. ಅನುಭಾವಿಯು ಪರಮಾತ್ಮನೊಡನೆ ಒಂದಾಗಿರುವುದರಿಂದ ಅವನು, ಪರತತ್ವವೇ ಸರಿ! ಈ ರೀತಿ, ಪರಮಾತ್ಮನಲ್ಲಿ ಬೆರೆತ ಅನುಭಾವಿಯು ಕನಸಿನಲ್ಲಿ ಕಾಣಿಸಿಕೊಂಡರೆ, ಪರಮಾತ್ಮನೇ ಕಾಣಿಸಿಕೊಂಡಂತೆ. ಇದೊಂದು ಒಳ್ಳೇ ನಂಬಲರ್ಹವಾದ ಪ್ರಮಾಣ.

ನಾನಿನ್ನು ಪುರಂದರದಾಸರ 'ಕೂಸನು ಕಂಡೀರಾ?' ಎಂಬ ಪದವನ್ನು ವಿವರಿಸುವೆ. ಇದರಲ್ಲಿ ಅವರು ತಾವು 'ಕೂಸಿನ ರೂಪ'ದಲ್ಲಿ ಪರಮಾತ್ಮನನ್ನು ಕಂಡುದನ್ನು ಹೇಳಿರುವರು. ಇದೊಂದು ಸುಪ್ರಸಿದ್ಧ ಪದವು. ಇದನ್ನು ವಿವರವಾಗಿ ವಿಶದೀಕರಿಸುವ ಅಗತ್ಯವಿಲ್ಲ. ಆದರೆ ಇದರಲ್ಲಿಯ ಕೆಲ ವಿಷಯಗಳನ್ನು ತಮ್ಮ ನಿದರ್ಶನಕ್ಕೆ ತರುವೆ. ಪುರಂದರದಾಸರು ಇದರಲ್ಲಿ ಅರುಹಲಿರುವುದು ತಮ್ಮ ಪ್ರತ್ಯಕ್ಷ ಅನುಭವವನ್ನು. ದಾಸರಾಯರು ಬಾಲರೂಪದಲ್ಲಿ ಭಗವಂತನನ್ನು ಕಂಡಿರುವರು. ತುಕಾರಾಮರು ಕೂಡ ಇದೇ ಬಗೆಯಾಗಿ ಭಗವಂತನನ್ನು ಕಂಡದ್ದುಂಟು. ಅವರು ಹೇಳುವುದೇನೆಂದರೆ: 'ತೂ ಕೃಪಾಳು ಮಾವುಲೀ ಬಾಲವೇಷೇ ಆಲೀ ಜವಳೀ।' 'ಒಲವಿನ ತಾಯಿಯಂತಿರುವ ನೀನು ಬಾಲವೇಷ ತಾಳಿ ನನ್ನ ಬಳಿ ಬಂದೆ!' ಜತ್ತಿಯಲ್ಲಿ ನನ್ನ ಗುರು-ಭಗಿನಿಯರಾದ ಶಿವಲಿಂಗವ್ವನವರೆಂಬ ಓರ್ವ ಸಂತ-ಮಹಿಳೆಯರಿದ್ದರು. ಅವರು 'ಮಗಾ ಹುಟ್ಟಿದವ್ವಾ ಎನಗೊಬ್ಬ' ಎಂಬ ಒಳ್ಳೆ ಅಂದವಾದ ಪದವನ್ನು ರಚಿಸಿ ರುವರು. ಅವರು ಕೂಡ ಭಗವಂತನನ್ನು ಬಾಲ-ರೂಪದಲ್ಲಿ ಕಂಡಿದ್ದರು. ಆದುದರಿಂದ ಭಗವಂತನ ಈ ಅನುಭವವು ನಿಜವಾದುದಿರುವುದು. ಇದೇನೂ ಭ್ರಾಮಕವಾದುದಲ್ಲ, ಅದ್ಭುತವಾದುದಲ್ಲ, ಇಲ್ಲವೆ ಕನಸಿನ ಅನುಭವವಲ್ಲ. ಇದು ನಿಜವಿದ್ದರೂ ಇದೇನು ಪಾರಮಾರ್ಥಿಕ ಅನುಭವದ ಪೂರ್ಣತೆಯಲ್ಲ ಎಂಬುದನ್ನು ನೆನೆಯಬೇಕು.

ಮೊದಲನೆಯದಾಗಿ ಈ 'ಕೂಸನು ಕಂಡೀರಾ?' ಎಂಬ ಪದದಲ್ಲಿ ಬಣ್ಣಿಸಲಾದ ಕೂಸಿಗೆ ಸಾಸಿರ ನಾಮಗಳು. ಅದು ಸಾಸಿರ ಸೂರ್ಯರ ಪ್ರಭೆಯಿಂದ ಹೊಳೆಯುವುದು. ಅದು 'ಸೂಸುವ ಸುಖಮಯ ಜ್ಞಾನದ ಕೂಸು' ಅದು ಜ್ಞಾನಾನಂದಗಳಿಂದ ತುಂಬಿರುವುದು. ಅದು ಜ್ಞಾನ-ಪ್ರಭೆಯನ್ನು ಅರಸುವವರಿಗೆ ಕಾಣುವುದು, ಬಾಯಬಲ್ಲಿನ ಅರ್ಥದಲ್ಲಿ ಬಳಸಲಾದ 'ದೀನದಾಸ'ರಿಗೆ ಕಾಣುವುದು. ತಮ್ಮನ್ನೇ ಅರ್ಪಿಸಿದವರಿಗೆ ಭಗವಂತನು ಕಾಣುವನು. ಭಗವಂತನು ಪಾರಮಾರ್ಥಿಕ ಅಂತಃಪ್ರಜ್ಞೆ-ಪ್ರತಿಭೆಯುಳ್ಳ ವರಿಗೂ ಪಾರಮಾರ್ಥಿಕ ದೈನ್ಯವನ್ನು ಪಡೆದವರಿಗೂ ಕಾಣಿಸಿಕೊಳ್ಳುವನು. ಇವನು 'ಬೇಕಾದ ಭಕ್ತರೊಳು' ಆಡುವನು ಭಗವಂತನನ್ನು ಬಯಸುವ ಹಾಗೂ ಆತನನ್ನು ಪಡೆಯುವ ಪಾತ್ರತೆಯನ್ನು ಗಳಿಸಿದ ಭಕ್ತರಿಗೆಯೆ ಆತನು ಕಾಣುವನು. ಇದರಿಂದ ಭಗವಂತನು ಭಕ್ತರನ್ನು ಆರಿಸುವನು ಎಂಬುದು ಗೊತ್ತಾಗುವದು. ಆದರೆ ಈ ಕೂಸಿನ ನಿಜವಾದ ಸ್ವರೂಪವನ್ನೂ, ಅದರ ಮಹಿಮೆಯನ್ನೂ ಯಾರೂ ಅರಿಯರು. 'ತಾನೆ ಬಲ್ಲುದು ತನ್ನ ಮಹಿಮೆಯ' ಎಂದು ದಾಸರಾಯರು ಹೇಳಿರುವರು. ಯಾಕೆಂದರೆ, ಅದು 'ಆಕಾರವಿದ್ದು ನಿರಾಕಾರ'ವಾದುದಿರುವದಂತೆ. ಇದೊಂದು ಅದ್ಭುತವಾದ ಪದವಿನ್ಯಾಸ. ಈ ಕೂಸಿಗೊಂದು ರೂಪವಿರುವುದು. ಆದರೂ ಅದು ರೂಪರಹಿತ ವಾದುದು. ಈ ಸಾಕಾರ-ನಿರಾಕಾರಗಳ ಸಂಯೋಗದ ಅರ್ಥವೇನು? ಅದೊಂದು ಬಲು ಬಿಗಿಯಾದ ಸಮಸ್ಯೆ. ಅದನ್ನು ನೀವೇ ನಿಮಗೆ ಸರಿದೋರಿದಂತೆ ಬಿಡಿಸಲು ಯತ್ನಿಸಬಹುದು. ನಾನೂ ಇದನ್ನು ಒಂದು ಬಗೆಯಾಗಿ ಬಿಡಿಸಿರುವೆ. ಆದರೆ ಆ ಬಗೆಯನ್ನು ಇಲ್ಲಿಯೆ, ಈಗಲೇ ತಮ್ಮೆದುರು ಇರಿಸುವ ಅಗತ್ಯವಿಲ್ಲ. ಪುರಂದರದಾಸರು ನಮಗೆ ಅಸತ್ಯ ಸಂಗತಿಯನ್ನು ಹೇಳಲಿರುವುದಿಲ್ಲ ಎಂಬುದನ್ನು ನೆನೆಯಬೇಕು. ಅವನಿಗೆ ದೇವರ 'ಸಾಕಾರ' 'ನಿರಾಕಾರ' ಎಂಬ ಎರಡೂ ಬಗೆಯ ರೂಪದ ದರ್ಶನವಾಗಿದ್ದಿತು. ಇದು ಅವರು ಕಂಡ ದೇವರ ಬಾಲ-ರೂಪದ ಬಣ್ಣನೆ.

ಭಗವಂತನ ಸಾಕರ-ನಿರಾಕಾರ ರೂಪಗಳ ಈ ಬಣ್ಣನೆಯು ಮಹಾದೇವಿಯಕ್ಕನವರ 'ಹೊಳೆವ ಕೆಂಜೆಡೆಗಳ' ಎಂಬ ಅಂದವಾದ ವಚನದಲ್ಲಿಯ ಬಣ್ಣನೆಯನ್ನು ತುಂಬ ಹೋಲುವುದು. ಅಕ್ಕನವರು ಕಂಡ ಭಗವಂತನು ಜಟಾಧಾರಿಯಾದ ಶಿವನಿದ್ದುದರಿಂದ, ಸುಳಿಗುರುಳಿನ ಕೃಷ್ಣನಲ್ಲದ್ದರಿಂದ, ಅವರು ಅವನನ್ನು 'ಕೆಂಪು ಜಡೆಗಳುಳ್ಳವನು' ಎಂದು ಬಣ್ಣಿಸಿರವರು. ನಾವು ಈ ಮೊದಲು ಕಂಡ ಮೇರೆಗೆ ಭಗವಂತನದು ನಗೆಮೊಗ. ಅವನು ತನ್ನ ಕಾಂತಿಯಿಂದ ಈರೇಳು ಭುವನಗಳನ್ನು ತುಂಬುವನು. ಆದರೆ ಇದರ ಜತೆಯಲ್ಲಿ ಅಕ್ಕನವರು ಬೇರೆ ಕೆಲ ವಿಧಾನಗಳನ್ನು ಮಾಡಿರುವರು. ಮೊದಲನೆಯದಾಗಿ, ಅವರು ಭಗವಂತನನ್ನು ಕಂಡು 'ಎನ್ನ ಕಂಗಳ-ಬರವು-

ಹಸಿವು-ಹಿಂಗಿತು' ಎಂದು ಹೇಳುವರು. ಆದರೆ ತುಕಾರಾಮರು ಭಗವದ್ದರ್ಶನ ದಿಂದ ತಮ್ಮ ಹಸಿವು ಹಿಂಗಲಿಲ್ಲ ಎಂದು ಅರುಹಿರುವರು. ಹೀಗಿದ್ದರೂ ಈ ಎರಡೂ ಪದಸಮುದಾಯಗಳ ಅರ್ಥವು ಒಂದೇ ಬಗೆಯದಿರುವುದು. ಹಸಿವು ಹಿಂಗುವುದು ಹಾಗೂ ಹಿಂಗದಿರುವುದು ಅಂತಿಮವಾಗಿ ಒಂದೇ ಸ್ಥಿತಿಯನ್ನು ಅರುಹುವವು. ಒಬ್ಬರು ಈ ಅನುಭವದಿಂದ ಸಮಾಧಾನ ಹೊಂದಿದರು, ಇನ್ನೊಬ್ಬರು ಹೊಂದಲಿಲ್ಲ. ಈ ತೋರಿಕೆಯ ಭೇದವು ಅಷ್ಟೊಂದು ಮಹತ್ವದ್ದಿರುವುದಿಲ್ಲ. 'ಡೋಳ್ಯಾಚೀ ಭೂಕ ನ ಜಾಯ ಮಾಝಿಯಾ।' 'ನನ್ನ ಕಂಗಳ ಹಸಿವು ಹಿಂಗದಾಗಿದೆ' ಎಂದು ತುಕಾರಾಮರು ಹೇಳಿದರೆ, 'ಕಂಗಳ ಬರ-ಹಸಿವು-ಹಿಂಗಿತಿಂದು' ಎಂದು ಅಕ್ಕನವರು ಹೇಳುವರು. ಆದರೆ ಅಕ್ಕನವರ ಇನ್ನೊಂದು ವಿಧಾನವು ತುಂಬ ವಿಲಕ್ಷಣ ವಾದುದರಿರುವುದು. ಹಿರಿಯ ದಾರ್ಶನಿಕ ಅನುಭಾವಿಗಳೂ ಕೂಡ ಅದನ್ನು ಅಷ್ಟೊಂದು ಮಾಡಲರಿಯರು. "ಜಗದಾದಿ ಶಕ್ತಿಯೊಳು ಬೆರಸಿ ಒಡನಾಡುವ ಪರಮಗುರಿವಿನ..... ನಿಲವ ಕಂಡು ಬದುಕಿದೆನು"-ಜಗತ್ತನ್ನು ವ್ಯಾಪಿಸಿರುವ ಆದಿಶಕ್ತಿಯಲ್ಲಿ ಬೆರೆತು ಆನಂದಿತನಾಗುವ ನನ್ನ ಸದ್ಗುರುವಿನ ಪರಮಾನಂದದ ಧ್ಯಾನವನ್ನು ಮಾಡುತ್ತ ನಾನು ಬಾಳುವೆನು ಎಂಬುದು ಅಕ್ಕನವರ ವಿಧಾನ. ಅದರಲ್ಲಿ ಮುಂದಿನ ಮೂರು ಮಾತುಗಳಿರುವವು: (i) ಇಡಿಯ ವಿಶ್ವವನ್ನು ತುಂಬಿರುವ ಒಂದು ಅಂತಿಮ ಆದಿಶಕ್ತಿಯಿರುವುದು. (ii) ಸದ್ಗುರು ಅವಳೊಡನೆ ಒಂದಾಗಿ ಆನಂದಿತನಾಗುವನಷ್ಟೇ ಅಲ್ಲದೆ ಅವಳೊಡನೆ ಕ್ರೀಡೆಯನ್ನು ಕೂಡ ಮಾಡುವನು. 'ಬೆರಸಿ ಒಡನಾಡುವ'. (iii) ಭಗವಂತನಲ್ಲಿಯ ಕ್ರೀಡಾಯುಕ್ತ ಏಕತೆಯಿಂದ ನನ್ನ ಸದ್ಗುರುವು ಅನುಭವಿಸುವ ಪರಮಾನಂದದ ಧ್ಯಾನದಲ್ಲಿಯೆ ನಾನು ಬಾಳುವೆ ಎಂದು ತುಂಬಾ ಭಾವಿಕ ಶಿಷ್ಯೆಯರಾದ ಮಹಾದೇವಿಯಕ್ಕನವರು ಹೇಳುವರು. ಇದೊಂದು ಅದ್ಭುತವಾದ ವಿಧಾನವು. ಅದೊಂದರಲ್ಲಿಯೆ ಶಿಷ್ಯ, ಗುರು, ದೇವರು ಎಲ್ಲರ ವಿಷಯವು ಬಂದಿದೆ. ಭಗವಂತನ ಶಕ್ತಿಯು ಇಡಿ ವಿಶ್ವವನ್ನು ತುಂಬಿರುವುದು; ಆ ಶಕ್ತಿಯೊಡನೆ ಆಡಿ ಪರಮಾನಂದವನ್ನು ಉಪಭೋಗಿಸುವವನೇ ನಿಜವಾದ ಸದ್ಗುರು; ಇದು ತುಂಬಾ ಬಿಗಿಯಾದ ಮಾತು; ಮತ್ತು ಆ ಪರಮಾನಂದದ ಧ್ಯಾನದಿಂದಲೆ ತೃಪ್ತನಾಗುವನೇ ನಿಜವಾದ ಪಾರಮಾರ್ಥಿಕ ಶಿಷ್ಯ. ಈ ರೀತಿ, ಮಹಾದೇವಿಯಕ್ಕನವರ ಅಭಿಮತದ ಮೇರೆಗೆ, ಈ ಎರಡನೆಯ ಭೂಮಿಕೆಯ ಸಮಾಧಾನವು ಕೂಡ ಪಾರಮಾರ್ಥಿಕ ಸಾಧನದ ಒಂದು ಬಗೆಯ ಕಿರೀಟವಿರುವದು.

ಇನ್ನು ನಾನು ಪುರಂದರದಾಸರೇ ತಮ್ಮ 'ಬ್ರಹ್ಮಾನಂದದ ಸಭೆಯೊಳಗಲ್ಲಿ' ಎಂಬ ಪದದಲ್ಲಿ ಬಣ್ಣಿಸಿದ ಭಗವಂತನ ನಿರ್ಗುಣ ರೂಪವನ್ನು ಕುರಿತು ವಿಚಾರಿಸಲು ಪ್ರಾರಂಭಿಸುವೆ. ಇದರಲ್ಲಿ ದಾಸರಾಯರು ಭಗವಂತನ ನಿರ್ಗುಣ-ಲಕ್ಷಣಗಳನ್ನು

ಅರುಹಿರುವರು. ಉಪನಿಷತ್ತುಗಳನ್ನು ಅಭ್ಯಸಿಸಿದವರು ಆ ವಾಙ್ಮಯದಲ್ಲಿ ಅಲ್ಲಲ್ಲಿ ಕಾಣಬರುವ ಇಂಥ ಅನೇಕ ವಚನಗಳನ್ನು ಜ್ಞಾಪಿಸಿಕೊಳ್ಳಬಹುದು. ಉದಾಃ–

ಅಶಬ್ದಮಸ್ಪರ್ಶಮರೂಪಮವ್ಯಯಮ್।
'ಶಬ್ದ, ಸ್ಪರ್ಶ, ರೂಪ, ವ್ಯಯ ಇಲ್ಲದುದು'.

ಈ ವಿಷಯವನ್ನು ನಾವು ಈ ಪ್ರಕರಣದ ಕೊನೆಗೆ ಕೂಡಲೂರೇಶನ ಪದವನ್ನು ವಿವರಿಸುವಾಗ ಚರ್ಚಿಸುವೆವು. ತತ್ಪೂರ್ವದಲ್ಲಿ, 'ಬ್ರಹ್ಮಾನಂದವನ್ನು ಅನುಭವಿಸುವ ಸಂತರ ಸಭೆಯಲ್ಲಿ ಭಗವಂತನು ಮೊದಲಿನಿಂದ ಇರುವ' ಎಂಬ ಒಂದು ಮಹತ್ವದ ಮಾತನ್ನು ಪುರಂದರದಾಸರು ಹೇಳಿರುವರು. 'ನನಗಾಗಿ(ನನ್ನನ್ನು ಭಜಿಸಲು) ಇಬ್ಬರು ಇಲ್ಲವೆ ಮೂವರು (ಭಕ್ತರು) ನೆರೆದಲ್ಲಿ ನಾನಿರುವೆ' ಎಂದು ಬಾಯ್ಬಲ್ಲಿನಲ್ಲಿ ಹೇಳಲಾಗಿದೆ. ಭಾಗವತಪುರಾಣದಲ್ಲಿಯೂ ಕೂಡ ನಾವು ಇಂಥ ವಚನವೊಂದನ್ನು ಕಾಣಬಹುದು. ಅದರಲ್ಲಿ ಹೇಳಿರುವದೇನೆಂದರೆ: ಮದ್ಭಕ್ತಾ ಯತ್ರ ಗಾಯಂತಿ ತತ್ರತಿಷ್ಠಾಮಿ ನಾರದ। 'ನಾರದನೇ, ನನ್ನ ಭಕ್ತರು ನನ್ನನ್ನು ಹಾಡಿ ಹರಿಸುವಲ್ಲಿ ನಾನು ನಿಲ್ಲುವೆನಯ್ಯ!' ಪುರಂದರದಾಸರೂ ಒಂದೆಡೆ ಇದೇ ರೀತಿಯಾಗಿ 'ಬ್ರಹ್ಮಾನಂದವನ್ನು ಸವಿಯುವ ಸಂತರ ನೆರವಿದ್ದಲ್ಲೆಲ್ಲ ಭಗವಂತನಿರುವ' ಎಂದು ಅರುಹಿರುವರು. ಈ ಪದದಲ್ಲಿ ಅವರು ಇಂಥ ಸಂತರ ಸಭೆಯನ್ನು ಉಲ್ಲೇಖಿಸಿರುವರು. ಎರಡನೆಯದಾಗಿ ಅವರು ಉಪನಿಷತ್ತುಗಳಲ್ಲಿ ಬಣ್ಣಿಸಲಾದ ಅವರು ಉಪನಿಷತ್ತುಗಳಲ್ಲಿ ಬಣ್ಣಿಸಲಾದ ಬ್ರಹ್ಮನನ್ನೆ ಈ ಪದದಲ್ಲಿ ಬಣ್ಣಿಸಿರುವರು. ಭಗವಂತನು ಇಲ್ಲವೆ ಬ್ರಹ್ಮನು ಇಲ್ಲವೆ ಪರಾತ್ಪರ ಸತ್ಯವು ಕಾಣುವುದೂ ಇಲ್ಲ ಹಾಗೂ ಕಾಣದಿರುವುದೂ ಇಲ್ಲ. ಅದಕ್ಕೆ ಆದಿಯೂ ಇಲ್ಲ, ಅಂತವೂ ಇಲ್ಲ. ಅದೇ ಮೇರೆಗೆ ಅದನ್ನು ಹಿಡಿಯಲೂ ಬರುವಂತಿಲ್ಲ ಎಂದು ದಾಸರಾಯರು ಹೇಳಿರುವರು. ರಾಮದಾಸರೂ ಕೂಡ ಇದೇ ರೀತಿ 'ಧರೂ ಜಾತಾ ಧರಿತಾ ನಯೇ।' (ಅದನ್ನು) ಹಿಡಿಯ ಹೋದರೆ ಹಿಡಿಯಲು ಬರುವುದಿಲ್ಲ. ಅದು ನಮ್ಮ ಬೆರಳುಗಳೊಳಗಿಂದ ಜಾರಿಹೋಗುವುದು ಎಂದು ಬ್ರಹ್ಮನನ್ನು ಬಣ್ಣಿಸಿರುವರು. ಅನೇಕ ಜನರು ತಮ್ಮ ಬುದ್ಧಿವೈಭವವನ್ನು ಕುರಿತು ಅಭಿಮಾನ ತಳೆಯುವದುಂಟು. ಆದರೆ ಅವರು ಭಗವಂತನನ್ನು ಅರಿಯಲರಿಯರು. ಭಗವಂತನು ಬೌದ್ಧಿಕ ಜ್ಞಾನದ ಮೇರೆಯಲ್ಲಿ ಬರಲರಿಯನು. ಜನರು ತಮ್ಮ ಜಾಗತಿಕ ಹಿರಿಮೆಯ ಅಭಿಮಾನವನ್ನು ತಳೆವರು. ಆದರೆ ಭಗವಂತನ ಹಿರಿಮೆ ಯೆದುರು ಅವರದು ಕಃಪದಾರ್ಥವಾದುದು–ತೀರ ಗಣನೆಗೆ ಬಾರದಂತಹದು. ಭಗವಂತನು ಎಲ್ಲ ಬಲ್ಲವರಿಗಿಂತ ಹೆಚ್ಚಿಗೆ ಬಲ್ಲವನು. ಹಿರಿಯರೆಂದು ಮೆರೆಯು ವವರೆಲ್ಲರಿಗಿಂತ ಹೆಚ್ಚಿನ ಹಿರಿಮೆಯನ್ನು ತಳೆದವನು. ಕೊನೆಯದಾಗಿ, ಪುರಂದರ ದಾಸರು ಮುಂದಿನ ಅತಿಮಹತ್ವದ ಮಾತನ್ನು ಹೇಳಿರುವರು. ದಾಸರಾಯರು ಬಣ್ಣಿಸ ಲಿರುವ ಈ ಭಗವಂತನನನ್ನು ಪುರಂದರ ವಿಠ್ಠಲನೇ ಅರಿವನು, ಬೇರಾರೂ ಆತನನ್ನು ಅರಿಯರು. 'ಬಲ್ಲಿದ ನಮ್ಮ ಪುರಂದರ ವಿಠ್ಠಲಗಲ್ಲದೆ ತಿಳಿಯದು'. ದಾಸರಾಯರ

ಈ ಮಾತಿಗೆ ಎರಡರ್ಥಗಳು. ಇದರಲ್ಲಿಯ 'ಪುರಂದರ ವಿಠ್ಠಲ' ಎಂಬುದು ದಾಸರಾಯರಿಗೆ ಅನ್ವಯಿಸಬಹುದು. ಆಗ 'ನಾನೇ ಭಗವಂತನನನ್ನು ಬಲ್ಲೆ' ಎಂಬುದು ಮೇಲಿನ ಮಾತಿನ ಮೊದಲನೆಯ ಅರ್ಥ; ಅಥವಾ 'ಪುರಂದರ ವಿಠ್ಠಲ' ಎಂಬುದು ಭಗವಂತನಿಗೆ ಅನ್ವಯಿಸಬಹುದು. ಆಗ ಮೇಲಿನ ಮಾತಿಗೆ 'ಭಗವಂತನೇ ಭಗವಂತನನನ್ನು ಬಲ್ಲ' ಎಂಬ ಎರಡನೆಯ ಅರ್ಥವು ಬರುವುದು. ಪುರಂದರ ವಿಠ್ಠಲನನ್ನುಳಿದು (ಅವನು ಸಂತನಿರಬಹುದು ಇಲ್ಲವೆ ದೇವರಿರಬಹುದು) ಇನ್ನಾರೂ ಭಗವಂತನನ್ನು ಅರಿಯಲರಿಯರು.ಭಗವಂತನು ತನ್ನನ್ನು ತಾನು ಅರಿಯುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಸಂತನು ಭಗವಂತನನ್ನರಿವುದು ನಿಜವಾಗಿ ಆಶ್ಚರ್ಯ ಕಾರಕವು. ಈ ರೀತಿ, ಪುರಂದರದಾಸರು ಅಹಂಕಾರಕ್ಕೆ ಒಳಗಾಗದೆ, ಪುರಂದರ ವಿಠ್ಠಲನ ಶಬ್ದವನ್ನು ಶ್ಲೇಷೆಯಿಂದ ಬಳಸಿ, ದೇವರು ತನ್ನನ್ನು ಅರಿವನಷ್ಟೆ ಅಲ್ಲದೆ, ಸಂತರಾದ ತಾವು ಕೂಡ ಆತನನ್ನು ಅರಿವರು ಎಂಬುದನ್ನು ಸೂಚಿಸುತ್ತಿರಬಹುದು.

ಇನ್ನು ನಾನು ಮಹಾದೇವಿಯಕ್ಕನವರ 'ಅಯ್ಯ ಪಾತಾಳವಿತ್ತಿತ್ತ, ಶ್ರೀಪಾದ ವತ್ತತ್ತ' ಎಂಬ ಪ್ರಸಿದ್ಧವಾದ ನಿರ್ಗುಣ ಬಣ್ಣನೆಯುಳ್ಳ ವಚನದತ್ತ ಸಾಗುವೆ. ನಾವು ಪಾತಾಳಲೋಕವನ್ನು ಕುರಿತು ಆಡುವೆವು; ಆದರೆ ಅದೆಂತಹದಿರುವದೆಂಬುದು ಯಾರಿಗೆ ಗೊತ್ತು? ಭಗವಂತನ ಚರಣಗಳು ಅದಕ್ಕೂ ಕೆಳಗಿನ ಪ್ರದೇಶವನ್ನು ನಿಲುಕುವವು. ಭಗವಂತನು ಪಾತಾಳಲೋಕವನ್ನೂ ಭೇದಿಸಿ ಅದರ ಕೆಳಗೆ ಹೋಗುವನು. ನಾವು ಉನ್ನತತಮ ಸ್ವರ್ಗಲೋಕವನ್ನು ಕುರಿತು ಆಡುವೆವು. ಆದರೆ ಭಗವಂತನ ತಲೆಯ ಮೇಲಿನ ಮಣಿಮುಕುಟವು ಅದನ್ನು ಮೀರುವುದು. ನಾವು ವಿಶ್ವವನ್ನು ಆವರಿಸಿರುವ ದಶದಿಕ್ಕುಗಳನ್ನು ಕುರಿತು ಆಡುವೆವು. ಆದರೆ ಭಗವಂತನು ತನ್ನಕೈ-ಕಾಲುಗಳನ್ನು ಅವುಗಳಾಚೆ ಚಾಚುವನು. ಈ ರೀತಿ, ಭಗವಂತನು ಸರ್ವ ವ್ಯಾಪಕನು. ಭಗವಂತನಿಂದ ಭರಿತವಾಗದ ಸಂದಿಗೊಂದಿ ವಿಶ್ವದಲ್ಲಿ ಒಂದೂ ಇರುವುದಿಲ್ಲ. ಇದು ಅಕ್ಕನವರ ವಚನದ ಸಾರ. ಕೊನೆಯದಾಗಿ, ಭಗವಂತನು ಬ್ರಹ್ಮಾಂಡದ ಬೃಹದ್ರೂಪವನ್ನು ತಳೆದಿರುವನಲ್ಲದೆ, ಪಿಂಡಾಂಡದ ಸೂಕ್ಷ್ಮರೂಪ ವನ್ನೂ ತಳೆದಿರುವನು. 'ಅಯ್ಯ! ದೇವರೇ! ಇಡಿ ವಿಶ್ವವನ್ನು ವ್ಯಾಪಿಸಿರುವ ನೀವು, ಸೂಕ್ಷ್ಮರೂಪವನ್ನು ತಳೆದು ನನ್ನ ಅಂಗೈಯಲ್ಲಿ ನೆಲೆಸಿದಿರಯ್ಯ! ಚುಳುಕಾದಿರಯ್ಯಾ! ಸಣ್ಣಾದಿರಯ್ಯಾ! ಸೂಕ್ಷ್ಮ ಆದಿರಯ್ಯ! ಉಪನಿಷತ್ತು ಸಾರುವಂತೆ ನೀವು 'ಅಣೋರಣೀಯಾನ್ । ಮಹತೋ ಮಹೀಯಾನ್।' 'ಕಿರಿಯದಕ್ಕಿಂತ ಕಿರಿಯರು; ಹಿರಿಯದಕ್ಕಿಂತ ಹಿರಿಯರು ಇರುವಿರಿ!' ಎಂಬುದು ಅಕ್ಕನವರ ಹೇಳಿಕೆಯ ಆಶಯ. ತುಕಾರಾಮರ ಮುಂದಿನ ವಚನವು ಇದನ್ನು ಚೆನ್ನಾಗಿ ಹೋಲುವುದು.

'ಖಾಲತಾ ಸಪ್ತಹೀ ಪಾತಾಳಾ । ವರತಾ ಸ್ವರ್ಗಾಹೂನಿ ಥಿಸಳಾ।
ಹೋಯೀಮಾಝಾ ತೈಸಾ । ಸಾನಾ ಸುಕುಮಾರ ಹೃಷಿಕೇಶ॥

'ನೀನು ಸಪ್ತಪಾತಾಳ ಲೋಕಗಳಿಗಿಂತಲೂ ಕೆಳಗಿರುವಿ, ಅತ್ಯುನ್ನತವಾದ ಸ್ವರ್ಗ ಲೋಕಕ್ಕಿಂತಲೂ ಮೇರಿರುವೆಯಯ್ಯ ದೇವಾ! ಆದರೆ ಹೃಷೀಕೇಶನೇ! ನೀನು ನನಗೆ ಅರಿಯಲು ಬರುವಂತೆ ಕಿರಿಯನಾಗಯ್ಯ, ಸುಕುಮಾರನಾಗಯ್ಯ!' ದೇವರು ನನಗೆ ಸಣ್ಣ ವಸ್ತುವಾಗಿ, ಸೂಕ್ಷ್ಮರೂಪನಾಗಿ, ಅಣುವಿಗಿಂತ ಅಣುವಾಗಿ ಕಾಣುವನು ಎಂದು ತುಕಾರಾಮರು ಹೇಳುವರು. ಪ್ರಭುದೇವರೂ ಕೂಡ ಇದನ್ನೇ ಹೋಲುವ ಕಲ್ಪನೆಯನ್ನು ಒಂದೆಡೆ ತುಂಬ ಚೆನ್ನಾಗಿ ವಿವರಿಸಿರುವರು. ಪರಮಾತ್ಮನ ಸೂಕ್ಷ್ಮ ರೂಪವು ರೂಪಾಂತರಿತವಾಗಿ ವಿಶ್ವಾತೀತವಾಗುವುದು. ದೃಷ್ಟಾರನಾದ ಆತನು ಕಿರಿಯ ನಿದ್ದರೂ ಹಿರಿಯನಾಗಿ ಅತೀತನಾಗುವನು ಎಂದು ಅವರು ಹೇಳಿರುವರು. ಈ ರೀತಿ, ಹಿರಿಯ ಸಂತರ ವಚನಗಳಲ್ಲಿಯ ಸಮಾನತೆಯನ್ನು ನಾವು ಕಾಣಬಹುದು.

ನಾನಿನ್ನು ಕೂಡಲೂರೇಶನ ಎರಡು ಅತಿ ಉತ್ತಮವಾದ ಪದಗಳನ್ನು ವಿವರಿಸುವೆ. ಅವೆರಡೂ ಪರಮಾತ್ಮನ ನಿರ್ಗುಣ ರೂಪವನ್ನು ಬಣ್ಣಿಸುವವು. ಅವುಗಳಲ್ಲಿ 'ಕಾಣಬಾರದಂಥಾ ವಸ್ತು ಕಂಡೆನೋ' ಎಂಬುದು ಮೊದಲನೆಯದು; 'ನೋಡಿರಿ ಬ್ರಹ್ಮನಾಟವ' ಎಂಬುದು ಎರಡನೆಯದು. ಮೊದಲನೆಯ ಪದದಲ್ಲಿಯ ಕೆಲ ವಿಷಯಗಳನ್ನು ನಾನು ಎರಡನೆಯ ಪದಕ್ಕೆ ಸೇರಿಸುವೆ. ಅಂದರೆ ಅವೆಲ್ಲ ಒಂದೆಡೆ ಕೂಡಿದ ಮೂಲಕ, ಅದರಲ್ಲಿಯ ವಿಷಯ ಪ್ರತಿಪಾದನೆಗೆ ಪೂರ್ಣತ್ವ ಬರುವುದು. ನಮ್ಮ ನಿಂಬರಗಿ ಮಹಾರಾಜರವರ ಸಂಪ್ರದಾಯದಲ್ಲಿ ಕೂಡಲೂ ರೇಶರ ಅನೇಕ ಪದಗಳು ಪ್ರಚಲಿತವಿರುವ ಮೂಲಕ, ನಾನು ಆ ಸಂತ-ಕವಿಗಳಲ್ಲಿ ಆಸ್ಥೆಯುಳ್ಳವನಿರುವೆ. ಇವೆಲ್ಲ ತುಂಬ ಪ್ರಸಿದ್ಧ ಪದಗಳಿರುವವು. ಅವು ನಮ್ಮ ವಿಚಾರ ಪದ್ಧತಿಯಲ್ಲಿ ನಮ್ಮ ಬಾಲ್ಯದಿಂದಲೂ ಸೇರಿಕೊಂಡಿರುವವು.

'ನಿರ್ಗುಣರೂಪದ ಅನುಭವ ಸುಖವು ಅರುಹಲು ಬಾರದಂತಹುದು. ಬ್ರಹ್ಮಾನಂದವನ್ನು ಶಬ್ದಗಳಿಂದ ಬಣ್ಣಿಸಲು ಬಾರದು. ಕಂಡ ಸುಖವ ಕೇಳಿದರೆ ಹೇಳಲಿಕ್ಕೆ ಬಾರದಯ್ಯಾ!' ಎಂಬುದು ಕೂಡಲೂರೇಶರು ಅರುಹುವ ಮೊದಲನೆಯ ಮಾತು. ಇದರ ಜತೆಯಲ್ಲಿ, ಅವರು ಈ ಅವಸ್ಥೆಯನ್ನು ಪಡೆದ ಬಗೆಯು ಕೂಡ ಬಣ್ಣಿಸಲು ಬಾರದಂತಹದೆಂಬುದು ಅವರು ಅರುಹುವ ಎರನಡಯ ಮಾತು. ಅವರು 'ಜಪ ಮಾಡಲಿಲ್ಲ, ತಪ ಮಾಡಲಿಲ್ಲ, ನಿತ್ಯನೇಮಗಳನ್ನು ಮಾಡಲಿಲ್ಲ.' ಆದರೂ ಪರಮಾತ್ಮನು ಅವರಿಗೆ ಕರುಣದಿಂದ ಕಾಣಿಸಿಕೊಂಡನಂತೆ. "ನಾನು ತುಂಬ ಅನುಭವವನ್ನು ಪಡೆದಿರುವೆ. ಆದರೆ ಅದನ್ನು ಮುಂದಿನ ಮೂವರನ್ನುಳಿದು ಯಾರೂ ಅರಿಯರು: ನನ್ನ ದೇವರು, ನನ್ನ ಸದ್ಗುರುಗಳು ಮತ್ತು ನಾನು." ಈ

ಬಗೆಯಾಗಿ ಕೂಡಲೂರೇಶರು ಶಿಷ್ಯರ ಪಾರಮಾರ್ಥಿಕ ಅನುಭವವನ್ನು ಅರಿಯುವ ಹೊಣೆಯನ್ನು ಸದ್ಗುರುವಿಗೆ ಒಪ್ಪಿಸಿರುವರು. ತರುವಾಯ ಅವರು ಒಂದು ಅಂದವಾದ ಮಾತನ್ನು ಉಸುರಿರುವರು. 'ಮುಟ್ಟಿಕೊಟ್ಟ ಗುರುರಾಯ!' ಎಂಬುದೇ ಆ ಮಾತು. ಸದ್ಗುರು 'ದೇವರನ್ನು ಮುಟ್ಟಿದ, ಆತನನ್ನು ಎತ್ತಿದ ಮತ್ತು ನನ್ನ ಕೈಯಲ್ಲಿ ಇರಿಸಿದ'ನಂತೆ. ಇದರಲ್ಲಿ ಎರಡು ತೋರಿಕೆಗೆ ಅಸಾಧ್ಯವಾದ ಸಂಗತಿಗಳ ಸಂಯೋಗ ವಿರುವುದು. ದೇವರೇನೂ ಬೇರೆ ಒಡವೆಗಳಂಥ ಒಡವೆಯಲ್ಲ. ಆದುದರಿಂದ ಆತ ನನ್ನು ಪಿಡಿಸು ಕೊಡುವುದೆಂತು? ಈ ವಿಷಯವನ್ನು ಕುರಿತು, ಈ ಪೂರ್ವದಲ್ಲಿ ಅರುಹಲಾದ ಮೇರೆಗೆ, ರಾಮದಾಸರು ಕೂಡ ದೇವರನ್ನು ಹಿಡಿಯಲುಬಾರದು, ಎಸೆಯಲು ಬಾರದು ಎಂದು ಹೇಳಿರುವರು. ತನ್ನ ಗುರುರಾಯನು ಕೃಪಾದಯ ದಿಂದ ತನಗೆ ದೇವರನ್ನು ಮುಟ್ಟಿಕೊಟ್ಟನು ಎಂದು ಕೂಡಲೂರೇಶರು ಹೇಳುವರು. ಇವೆರಡು ತೋರಿಕೆಗೆ ಅಸಾಧ್ಯ ಕರ್ಮಗಳೆಂದು ಕಾಣುವವು. ನೀವು ಪರಮಾತ್ಮನ ರೂಪವನ್ನು ಮುಟ್ಟಲರಿಯಿರಿ. ಒಂದು ವೇಳೆ ಮುಟ್ಟಿದರೂ ಕೂಡ ಅದನ್ನಾರಿಗೂ ಕೊಡಲರಿಯಿರಿ. ಆದರೂ 'ಕೃಪಾದಯದಿಂದ ಮುಟ್ಟಿಕೊಟ್ಟ ಗುರುರಾಯ' ಎಂದು ಕೂಡಲೂರೇಶರು ಹೇಳುವರು. ಪಾರಿಭಾಷಿಕ ಶಬ್ದಗಳನ್ನು ಬಲ್ಲಿರಿ. ಇವು ಪರಮಾತ್ಮನ ಅನುಭಾವದ ಕೊನೆಯ ಮೂರು ಅವಸ್ಥೆಗಳೆಂದು ಬಗೆಯಲಾಗಿರುವವು. 'ಮುಟ್ಟಿ ಕೊಟ್ಟ ಗುರುರಾಯ' ಎಂಬಲ್ಲಿ ಅರ್ಥಾತ್ ಸ್ಪರ್ಶನವು ಸೂಚಿಸಲಾಗಿದೆ. ಮೇಲ್ಕಾಣಿ ಸಿದ ಶಬ್ದಗಳ ಸೂಚಿತಾರ್ಥವನ್ನು ನಾವಿಲ್ಲಿ ವಿವರಿಸಲಿರುವುದಿಲ್ಲ. ಈ ರೀತಿ, ತಮ್ಮ ಹಿರಿಯ ಸದ್ಗುರುಗಳ ಕರುಣದಿಂದ ಕೂಡಲೂರೇಶರು 'ಅನಂತವಾದ ಅವಕಾಶ ವನ್ನು ತುಂಬಿರುವ ಹಿರಿಯ ಬೆಳಕಿನಲ್ಲಿ' ಬೆರೆತುಹೋದರಂತೆ, ಬಟ್ಟಬಯಲು ಪ್ರಭೆ ಯಾದರಂತೆ. ಇದು ಕೂಡಲೂರೇಶರ ನಿರ್ಗುಣ ಬ್ರಹ್ಮನ ಅನುಭವದ ಬಣ್ಣನೆಯು.

ನಾನು ಈ ಪ್ರಕರಣವನ್ನು ಕೂಡಲೂರೇಶರ 'ನೋಡಿರಿ ಬ್ರಹ್ಮನಾಟವ' ಎಂಬ ಪದವನ್ನು ವಿವರಿಸಿ ಮುಗಿಸುವೆ. ಈ ಪದವು ಹಿಂದಿನ ಪದದಲ್ಲಿಯ ವಿಚಾರವನ್ನೇ ತಿಳಿಸುವುದಲ್ಲದೆ ಅದನ್ನು ಸ್ವಲ್ಪ ಬೆಳೆಸಿಯೂ ಹೇಳುವುದು. ನೀವು ಜೀವನದ ಗೂಢವನ್ನು ಅರಿಯಬಯಸುವಿರಾದರೆ, ನೀವು ಈ ಜಾಗತಿಕ ಅನುಭವದ ಎಲ್ಲೆಯನ್ನು ಮೀರಬೇಕಾಗುವುದು. 'ನೀವು ಈ ಬ್ರಹ್ಮನಾಟವ ನೋಡಬೇಕಾದರೆ, ಮಾಡಿ ಗುರುವಿನಸೇವೆ' ಎಂಬುದು ಕೂಡಲೂರೇಶರು ಇಲ್ಲಿ ಹೇಳಿರುವ ಮೊದಲ ನೆಯ ಮಾತು. ಇದು ಒಪ್ಪೋ ತಪ್ಪೋ ಎಂಬುದನ್ನು ನೀವೇ ನಿರ್ಣಯಿಸಬೇಕು. ಆದರೆ ಅವರ ಹೇಳಿಕೆಯು ಮಾತ್ರ ಆ ಬಗೆಯದಿರುವುದು. ಎರಡನೆಯದಾಗಿ, ನಾನು ಇದರಲ್ಲಿಯ ಮೂರು ವಚನಗಳನ್ನು ಉಲ್ಲೇಖಿಸಬಯಸುವೆ. ಅವು ಪೂರ್ತಿ ಯಾಗಿ ಉಪನಿಷತ್ತುಗಳಲ್ಲಿಯ ವಚನಗಳಂತೆಯೆ ಇರುವವು. ಕೂಡಲೂರೇಶರು

ಉಪನಿಷತ್ತುಗಳನ್ನು ಓದಿದ್ದರು ಎಂದು ನನಗೆನಿಸುವುದಿಲ್ಲ. ಆದರೆ ಅವರ ವಚನಗಳು ಮಾತ್ರ ಉಪನಿಷತ್ತುಗಳಲ್ಲಿಯ ಅವತರಣಗಳ ಅನುವಾದಗಳಿದ್ದಂತೆ ಕಾಣುವವು. ಅವನ್ನೀಗ ನಾನು ಉದ್ಧರಿಸಲಿರುವೆ. ಮೊದಲನೆಯದಾಗಿ, ಬ್ರಹ್ಮನು 'ನಯನವಿಲ್ಲದೆ ನೋಡುವವನು. ಕಿವಿಯಿಲ್ಲದೆ ಕೇಳುವವನು, ಬಾಯಿಯಿಲ್ಲದೆ ಉಂಬುವವನು' ಎಂದು ಅವರು ಹೇಳುವರು. ಉಪನಿಷತ್ತು ಕೂಡ, 'ಪಶ್ಯತ್ಯಚಕ್ಷು; ಸ ಶೃಣೋತಿ ಅಕರ್ಣಃ' ಎಂಬುದಾಗಿ ಉಸುರುವುದು. ಎರಡನೆಯದಾಗಿ, 'ದೇವರು ಕಾಲಿಲ್ಲದೆ ನಡೆವನು, ಕರವಿಲ್ಲದೆ ಪಿಡಿವ'ನಂತೆ ಇದು ಕೂಡ ಉಪನಿಷತ್ತಿನ 'ಅಪಾಣಿಪಾದೋ ಜವನೋ ಗೃಹೀತಾ।' ಎಂಬ ವಚನವನ್ನು ಹೋಲುವುದು. ಇದು ತುಲಸಿದಾಸರ ಮುಂದಿನ ವಚನವನ್ನು ಕೂಡ ಹೋಲುವುದು. 'ಬಿನು ಪಗಚಲೈ, ಸುನೈ ಬಿನು ಕಾನಾ।' 'ದೇವರು ಕಾಲಿಲ್ಲದೆ ನಡೆವನು, ಕಿವಿಯಿಲ್ಲದೆ ಕೇಳುವವನು'. ಇದನ್ನು ನಾನು ನನ್ನ ಹಿಂದಿ ಸಂತರ ಅನುಭಾವವನ್ನು ಕುರಿತು ಬರೆದ ಗ್ರಂಥದಲ್ಲಿ ಚರ್ಚಿಸಿರುವೆ. ಇಲ್ಲಿ ನಾನು 'ಟಾವೋ'ಪಂಥದ ಗ್ರಂಥದಲ್ಲಿಯ ಒಂದು ಸಮಾನಾರ್ಥ ವಚನವನ್ನು ಕೊಡಬಹುದು. ಚೀನದಲ್ಲಿಯ ಧರ್ಮವಾದ 'ಟಾವೋ' ಪಂಥವು ಅಲ್ಲಿಯ ಕಾನ್‌ಫೂಶಿಯಸ್ ಎಂಬ ಪಂಥದ ಪ್ರತಿರೂಪವು. ಆ ಪಂಥದಲ್ಲಿಯ ಮುಂದಿನ ವಚನವು ಸುಮಾರಾಗಿ ಕೂಡಲೂರೇಶನ ವಚನದ ಭಾಷಾಂತರದಂತೆಯೆ ಕಾಣುವುದು. "ದೇವರು ಅದೃಶ್ಯನು–ಅಗೋಚರನು; ಆದರೂ ಅವನಲ್ಲಿ ರೂಪಗಳಿರುವವು. ಅವನು ಅದೃಶ್ಯನು–ಅಗೋಚರನು; ಆದರೂ ಅವನಲ್ಲಿ ವಸ್ತು ಇರುವದು ಶ್ರದ್ಧೆ ಇರುವುದು" ಈ ರೀತಿ 'ಟಾವೋ' ಅವರು ದೇವರು ಅದೃರ್ಶಯನೂ ಅಗೋಚರನೂ ಎಂದು ಹೇಳುವರು. ಆದರೂ ಆತನಲ್ಲಿ ರೂಪಗಳು, ವಸ್ತು ಹಾಗೂ ಶ್ರದ್ಧೆ– ಈ ಸಂಗತಿಗಳು ಉದಿಸುವುದುಂಟು. ಕೂಡಲೂರೇಶರು ಅರುಹಿರುವ ಕಲ್ಪನೆಯೂ ಇದೇ ಮಾದರಿಯದಿರುವುದು. ಅವರು ಅರುಹುವ ಮೂರನೆಯ ಮಾತು ಇಂತಿರುವುದು: ದೇವರು ಗಂಡೂ ಇರುವುದಿಲ್ಲ ಹೆಣ್ಣೂ ಇರುವುದಿಲ್ಲ. 'ನಸ್ತ್ರೀ ನ ಪುಮಾನ್,' 'ಹೆಣ್ಣೂ ಅಲ್ಲ, ಗಂಡೂ ಅಲ್ಲ' ಎಂದು ಉಪನಿಷತ್ತು ಸಾರುವುದು. ಇವು ಕೂಡಲೂರೇಶನ ಸಾಕ್ಷಾತ್ ಅನುಭವಗಳು, ಬರಿ ಕಾಲ್ಪನಿಕ ವಿಧಾನಗಳಲ್ಲ. ಇದಾದ ಮೇಲೆ ಅವರು, 'ದೇವರು ನಿರ್ಬಯಲಲ್ಲಿ ಹಿರಿಯ ಪ್ರಭೆಯಿಂದ ಬೆಳಗುತ್ತಿರುವ!' ಎಂದು ಹಿಂದಿನಂತೆ ಹೇಳಿರುವರು. ನಮ್ಮ ಬಯಲಿನ ಆಚೆ ಒಂದು ಬಯಲಿರುವುದು. ನಮ್ಮ ಬಯಲಿಗೆ (ಇನ್ನೊಂದು) ಬಯಲಿರುವುದು; ಮತ್ತು ಈ ಬಯಲನ್ನು ಮೀರುವ ಬಯಲೇ ನಿರ್ಬಯಲು. ಈ ರೀತಿ 'ದೇವರು ಸತ್–ಅಸತ್ ಎರಡನ್ನೂ ಇಡಿಯಾಗಿ

ವ್ಯಾಪಿಸಿರುವ.' ಕೊನೆಯದಾಗಿ, ನಾವು ಕೂಡಲೂರೇಶರ ಇನ್ನೊಂದು ಸುಪ್ರಸಿದ್ಧ ವಿಧಾನದೆಡೆ ಸಾಗೋಣ. ಅವರು ದೇವರ ಸಾಕ್ಷಾತ್ಕಾರದ ಆರು ಅವಸ್ಥೆಗಳಿರುವವು ಎಂದು ಹೇಳಿರುವರು. "ನೆಲೆಯಿಲ್ಲದ ಭೂಮಿಯ ಮೇಲೆ ಎಲೆಯಿಲ್ಲದ ಗಿಡ ಹುಟ್ಟಿತಂತೆ. ಅದಕ್ಕೆ ದೊಡ್ಡದೊಂದು ಹಣ್ಣಾಯಿತಂತೆ. ಕೂಡಲೂರೇಶರು ಅದನ್ನು 'ತನ್ನ ಮೇಲೆ ತಕ್ಕೊಂಡರಂತೆ' ಇಲ್ಲಿ 'ತನ್ನ ಮೇಲೆ' ಎಂಬ ಶಬ್ದ ಸಮೂಹವನ್ನು ಗಮನಿಸಬೇಕು. 'ತನ್ನ ಮೇಲೆ' ಎಂದರೆ ಮೇಲಲ್ಲ, ಹೆಗಲ ಮೇಲಲ್ಲ. ಯಾಕೆಂದರೆ, ಅವರಿಗೆ ತಲೆಯೂ ಇರಲಿಲ್ಲ, ಹೆಗಲೂ ಇರಲಿಲ್ಲವಂತೆ. ಅವರದನ್ನು ಬೆಲೆಯಿಲ್ಲದೆ ಮಾರಿದರು. "ತಲೆಯಿಲ್ಲದೆ ಪೊತ್ತು, ಬೆಲೆಯಿಲ್ಲದೆ ಮಾರಿದರ'ಂತೆ. ಇದು ಮುಂದಿನ ಎರಡು ಸಂಗತಿಗಳನ್ನು ಸೂಚಿಸುವುದು. (i) ಅದನ್ನವರು, ಎಲ್ಲ ಸದ್ಗುರುಗಳ ಪರಿಪಾಠದಂತೆ, ಶಿಷ್ಯರಿಗೆ ಪುಕ್ಕಟೆಯಾಗಿ ಕೊಟ್ಟರು. ಇಲ್ಲವೆ (ii) ಆ ವಸ್ತುವೇ ಬೆಲೆಯಿಲ್ಲದಿದ್ದಿತು(Priceless). ಅಂದರೆ ಬೆಲೆಕಟ್ಟಲು ಬಾರದಂತಹದಿದ್ದಿತು, ತುಂಬ ಬೆಲೆಯುಳ್ಳದಿದ್ದಿತು. ಈ ಎರಡೂ ಬಗೆಯಾಗಿ ಸದ್ಗುರುಗಳು ಸಲ್ಲಿಸಿದ ಕಾಣಿಕೆಯು ಅಮೌಲ್ಯವಾಗಿದ್ದಿತು. ಕೊನೆಯದಾಗಿ, ಕೂಡಲೂರೇಶರು ಹೇಳುವುದೇನೆಂದರೆ : "ಸದ್ಗುರು ನಮ್ಮ ಬಾಧೆ ತಕ್ಕೊಂಡ" ನಮ್ಮ ಆಧಿಭೌತಿಕ, ಆಧಿದೈವಿಕ, ಹಾಗೂ ಆಧ್ಯಾತ್ಮಿಕ ತಾಪತ್ರಯಗಳನ್ನು ತಾನು ಸ್ವೀಕರಿಸಿದ; ಮತ್ತು ನಮ್ಮೆಲ್ಲ ಬಾಧೆಗಳನ್ನು ವಿಶೇಷತಃ ನೈತಿಕ ಬಾಧೆಯನ್ನು ಬಿಡಿಸಿದ. ಕ್ರಿಸ್ತನು ಜಗತ್ತಿನ ಪಾತಕಗಳಿಗಾಗಿ ಮಡಿದನೆಂಬುದು ಸರ್ವಶ್ರುತವು. 'ಪಾಪ ವಿಮೋಚನೆ' (Redemption)ಎಂಬ ಶಬ್ದವೇ ಕ್ರಿಸ್ತನು ಮಾನವತೆಯ ಪಾಪ ಪರಿಹಾರಕ್ಕಾಗಿ ಮಡಿದನು ಎಂಬುದನ್ನು ಸೂಚಿಸುವುದು. ತಮ್ಮ ಶಿಷ್ಯರ ಪಾತಕಗಳನ್ನು ಪರಿಹರಿಸಲು ದೇಹವನ್ನಿಟ್ಟ ಸಂತರ ಕಥೆಗಳನ್ನು ನಾನು ಕೇಳಿರುವೆ. ಕೂಡಲೂರೇಶರ ಸದ್ಗುರು ಜಾಗತಿಕ ಪಾತಕಗಳನ್ನಳಿಸಲು ಆತ್ಮಯಜ್ಞ ಮಾಡಿದರು. ಬುದ್ಧನಂತೆ ಜಗತ್ತಿನ ಎಲ್ಲ ಸಂಕಟಗಳನ್ನು ನೈತಿಕ ಬಾಧೆಗಳನ್ನು ತಾವು ಸ್ವೀಕರಿಸಿದರು. ಪುಣೆಯ ಡೆಕ್ಕನ್ ಕಾಲೇಜದಲ್ಲಿಯ ಪ್ರಾ. ಕೇ.ಬಿ. ಪಾಠಕ ಎಂಬ ನನ್ನ ಅಧ್ಯಾಪಕರು ಕ್ರಿ.ಶ. ೧೯೦೩ರಲ್ಲಿ ಬುದ್ಧನ ಮುಂದಿನ ವಚನವನ್ನು ನನಗೆ ಹೇಳಿದರು:

"ನಾನು ಪ್ರಪಂಚದಲ್ಲಿಯ ಪಾತಕಗಳಿಗಾಗಿ ಕಲಹವೆಸಗಲಿರುವುದಿಲ್ಲ. ಅವು ಅಲ್ಲಿರುವುದೇನೋ ನಿಜ. ಆದರೆ, ಅವುಗಳಿಂದ ಇಡಿ ಪ್ರಪಂಚದ ಬಿಡುಗಡೆ ಯಾಗುವಂತಿದ್ದರೆ, ಆ ಪಾತಕಗಳೆಲ್ಲ-ಸಂಕಟಗಳೆಲ್ಲ ನನ್ನ ಮೇಲೆ ಬೀಳಲಿ!"

■■

ಪ್ರಕರಣ ಹನ್ನೆರಡು

ಭಗವಂತನ ನಾಮ-(ಭಾಗ ೧)

ಈ ಪ್ರಕರಣದಲ್ಲಿ ಭಗವಂತನ ನಾಮದ ಪಾರಮಾರ್ಥಿಕ ಜೀವನದಲ್ಲಿಯ ಮಹತ್ವವನ್ನು ಚೆನ್ನಾಗಿ ವಿವರಿಸಲಾಗಿದೆ. ಅದಕ್ಕಾಗಿ ಬೇರೆ ಬೇರೆ ಸಂತ ಕವಿಗಳಿಂದ ಆರು ಪದಗಳನ್ನು ಆರಿಸಲಾಗಿದೆ. ಅವುಗಳಲ್ಲಿ ವ್ಯಕ್ತವಾದ ವಿಚಾರಗಳನ್ನು ಈ ದಿವ್ಯನಾಮದ ಧ್ಯಾನಪದ್ಧತಿಯ ದೃಷ್ಟಿಯಿಂದ ಕ್ರಮಶಃ ಬೆಳೆಯಲಿರುವ ಬಗೆಯಿಂದ ರಚಿಸಲಾಗಿದೆ. ಶರೀಫ ಸಾಹೇಬರವರ ಮೊದಲನೆಯ ಪದದಲ್ಲಿ ನಾಮವನ್ನು ಪರ ತತ್ವದೊಡನೆ ಹೊಂದಿಸಲಾಗಿದೆ. ಮನುಜನು ಸಮತೆಯಿಂದಲೂ ಭಕ್ತಿಯಿಂದಲೂ ಭಗವಂತನ ನಾಮವನ್ನು ನೆನೆವಾಗ. ಅವನ ಅಂತರಂಗದ ಅಂತರಾಳದಿಂದ ಹೊರಹೊಮ್ಮುವ ಮಧುರ ಸಂಗೀತವನ್ನು ಅವನು ಕೇಳುವನು. ಅದರ ಅನುಭವ ವನ್ನು ಪಡೆವನು. ಎರಡನೆಯ ಪದದಲ್ಲಿ ಪಂಚಾಕ್ಷರಿ ಎಂಬ ಹೆಸರಿನ ನೀರಲಕೇರಿಯ ಸಂತರು ಹೇಳುವದೇನೆಂದರೆ: ಭಗವಂತನ ಸಾಕ್ಷಾತ್ಕಾರದ ಪ್ರತಿಕ್ರಿಯೆಯಲ್ಲಿ ಜಪ (ಮಣಿಗಳನ್ನು ಎಣಿಸುವುದು), ತಪ, ಉಪವಾಸ, ದೇಹದಂಡನೆ ಈ ಬಾಹ್ಯ ಸಾಧನ ಗಳು ಮಾತಿಗೆ ಬಾರದಂತಹವು. ಭಗವಂತನ ನಾಮವನ್ನು ಪ್ರತಿಯೊಂದು ಉಸುರಿ ನೊಡನೆ, ಅಡಿಗಡಿಗೆ, ಹೃದಯದಲ್ಲಿ ಗುಪ್ತತನದಿಂದ ನೆನೆದರೆ ಅದು ಸುಲಭ ಸಾಧ್ಯವು. ಇದರ ಮುಂದಿನ ಮೂರು ಪದಗಳಲ್ಲಿ ಪಂಚಾಕ್ಷರೀ-ಷಡಕ್ಷರೀ ಮಂತ್ರಗಳ ಹಾಗೂ ಸಂತವರರಾದ ಅಲ್ಲಮಪ್ರಭುವಿನ ಹೆಸರಿನ ಅಕ್ಷರಗಳ ದಾರ್ಶನಿಕ ಹಾಗೂ ಅನುಭಾವ ವಿಷಯಕ ಮಹತ್ವವನ್ನು ಅರುಹಲಾಗಿದೆ. ಅವುಗಳ ತರುವಾಯ ಬಂದ ಶರೀಫಸಾಹೇಬರ ಎರಡನೆಯ ಪದದಲ್ಲಿ ಒಂದಕ್ಷರದ, ಎರಡಕ್ಷರದ, ಮೂರಕ್ಷರದ, ನಾಲ್ಕಕ್ಷರದ, ಐದಕ್ಷರದ ಶ್ರೀಗುರುಮಂತ್ರವನ್ನು ಪ್ರೀತಿಯಿಂದ ಜಪಿಸಲು, ಭೌತಿಕ-ಪಾರಮಾರ್ಥಿಕ ವೈಭವವೂ, ಪಾಪವಿಹೀನತೆಯೂ, ಉನ್ನತತಮ ಸಾಕ್ಷಾತ್ಕಾರವೂ ಲಭಿಸುವವು ಎಂದು ಹೇಳಲಾಗಿದೆ. ಅದರ ಮುಂದಿನ ಪದದಲ್ಲಿ ಮಹಲಿಂಗರಂಗರಿಂದ, ಭಗವಂತನ ನಾಮವನ್ನು ಜೀವನದಲ್ಲಿಯ ಅತಿ ದುಃಖಮಯ ಅವಸ್ಥೆಯಲ್ಲಿಯೂ, ಆತ್ಯಂತಿಕವಾದ ಸುಖಮಯ ಅವಸ್ಥೆಯಲ್ಲಿಯೂ ಅವಶ್ಯವಾಗಿ ನೆನೆಯಬೇಕೆಂದು ಒತ್ತಿ ಹೇಳಲಾಗಿರುವುದು. ಈ ಪ್ರಕರಣದ ಕೊನೆಯ ಪದದಲ್ಲಿ ಸಂತರ ಸಹವಾಸದಲ್ಲಿ ಆನಂದದಿಂದ ಸಾಧಕನು ತನ್ನ ಸ್ವರೂಪವನ್ನು ಕಾಣಬೇಕು ಎಂದು ಬೋಧಿಸಲಾಗಿದೆ.

ಶರೀಫ ಸಾಹೇಬರವರ 'ಇದೇ ಬ್ರಹ್ಮಜ್ಞಾನಾ' ಎಂಬ ಮೊದಲನೆಯ ಪದದಲ್ಲಿ ಭಗವಂತನ ನಾಮದ ನೆನಹೇ ಬ್ರಹ್ಮಜ್ಞಾನ ಎಂದು ಹೇಳಲಾಗಿದೆ. ಇಲ್ಲಿ ಬ್ರಹ್ಮಜ್ಞಾನದ ಲಕ್ಷಣವನ್ನು ಮುಂದಿನ ಮೂರು ದೃಷ್ಟಿಕೋನಗಳಿಂದ ನಿರೂಪಿಸಲಾಗಿರುವುದು: ವೇದಾಂತದ ದೃಷ್ಟಿ, ದರ್ಶನ-ಶ್ರವಣರೂಪಿಯಾದ ಅನುಭಾವದ ದೃಷ್ಟಿ, ಹಾಗೂ ಭಕ್ತಿಯ ದೃಷ್ಟಿ.

(ಅ) ವೇದಾಂತಿಕ ವ್ಯಾಖ್ಯೆಯು ಆನಂದ-ಬೋಧೆಗಳನ್ನು ಕೂಡಿಸುವುದು. ಇಲ್ಲಿ ಭಗವಂತನು ಆನಂದಮಯನೋ? ಆನಂದಪೂರ್ಣನೋ? ಎಂಬ ಸಮಸ್ಯೆಯು ಉದ್ಭವಿಸುವುದು. ನಾವು ಪರಾತ್ಪರ ಸತ್ಯವನ್ನು ವಿಶೇಷ ವಾಚಕವೆಂದು ಭಾವಿಸಬೇಕೋ ವಿಶೇಷಣವಾಚಕವೆಂದು ಭಾವಿಸಬೇಕೋ? ಶ್ರೀ ಬಾದರಾಯಣರ 'ಆನಂದಮಯೋಭ್ಯಾಸಾತ್' ಎಂಬ ಸೂತ್ರದ ಅರ್ಥವಿವರಣೆಯನ್ನು ಇತ್ತೀಚಿನ ಭಾಷ್ಯಾಕಾರರು ಬಗೆಬಗೆಯಾಗಿ ಮಾಡಿರುವರು. ಈ ಸೂತ್ರದ ಅರ್ಥವಿವರಣೆಯ ಇತಿಹಾಸದಲ್ಲಿ ಬುದ್ಧಿವಾದಿ ಹಾಗೂ ಪ್ರಜ್ಞಾವಾದಿ ವೇದಾಂತಿಗಳಲ್ಲಿಯ ವಾಗ್ವಾದವು ಪ್ರಸಿದ್ಧವಿರುವುದು. ಆದರೂ ಆನುಷಂಗಿಕವಾಗಿ, 'ಆನಂದಮಯ' ಎಂಬುದನ್ನು ಶಂಕರಾಚಾರ್ಯರು 'ಆನಂದದ ಅತಿರೇಕ'ವೆಂದೂ (ಪ್ರಾಚುರ್ಯಾರ್ಥೇ), ರಾಮಾನುಜರು 'ಆನಂದಪೂರ್ಣ'ವೆಂದೂ (ಗುಣಾರ್ಥೇ), ಬಗೆದಿರುವರು-ವಿವರಿಸಿರುವರು ಎಂಬುದನ್ನು ನಾವು ಗಮನಿಸಬೇಕು. ಮೂರನೆಯ ವಿಚಾರ ಪರಂಪರೆಯವರು ಪರಾತ್ಪರ ಸತ್ಯದ ಅಂತಿಮ ಸ್ವರೂಪದ ಬಗೆಗಿರುವ ವಿಶೇಷಣ-ವಿಶೇಷ್ಯವಾಚಕ ದೃಷ್ಟಿಗಳೆರಡನ್ನೂ ಕೂಡಿಸಲು ಬಯಸುವರು.

(ಆ) ಬ್ರಹ್ಮಜ್ಞಾನದ ಅನುಭಾವ ವಿಷಯಕ ಅರ್ಥವನ್ನು ಕವಿಯು ಈ ರೀತಿ ಅರುಹುವನು: ನಾವು ಹೃದಯಕಮಲದಲ್ಲಿ ಗುರುಪಾದವನ್ನು ನೆನೆದು, ಸುಧಾಕಿರಣಗಳನ್ನು ಹೊರಚೆಲ್ಲುವಂಥ ಅವನ್ನು ಕಂಡಾಗ ನಮಗೆ ಬ್ರಹ್ಮಜ್ಞಾನವು ಲಭಿಸುವುದು. 'ನಿದಾನದೊಳು ನಿಜಹೃದಯಕಮಲದೊಳು ಸುಧಾಕಿರಣ ಗುರು ಪಾದವ ಕಾಣಲು' ಅದೇ ಬ್ರಹ್ಮಜ್ಞಾನವೆನಿಸುವುದು. ಅನುಭಾವಿಯು ತನ್ನ ಹೃದಯ ಕಮಲದಲ್ಲಿ ಪ್ರಭುವಿನ(ಗುರುಗಳ) ಚರಣಗಳನ್ನು ಕಾಣಬಲ್ಲವನಾಗಬೇಕು. ಅಂದರೇನೇ ಅವನಿಗೆ ಬ್ರಹ್ಮಜ್ಞಾನವಾಯಿತೆಂದೆನಬಹುದು. ಮೇಲ್ಕಾಣಿಸಿದ ಪದಪಂಕ್ತಿಯಲ್ಲಿಯ 'ನಿದಾನದೊಳು' ಎಂಬ ಶಬ್ದಕ್ಕೆ ಮೂರು ಅರ್ಥಗಳನ್ನು ಕಲ್ಪಿಸಬಹುದು. ಮೊದಲನೆಯದು 'ಮನಸ್ಸಿನ ಸಮತೆ'. ಅದು ಭಗವಂತನ ಸಾಕ್ಷಾತ್ಕಾರಕ್ಕೆ ಅವಶ್ಯವಾದುದು. ಎರಡನೆಯದು 'ಸಂತತ ಪ್ರಯತ್ನ'. ಅದೂ ಸಾಕ್ಷಾತಾರಕ್ಕೆ ಬೇಕಾಗುವುದು. ಮೂರನೆಯದು ಸಾಧಕನ ಪ್ರಯತ್ನದ 'ಪರಿಣತಿ'. ಪಾರಮಾರ್ಥಿಕ ಸಾಧನದ ಅತ್ಯುನ್ನತ ಸ್ಥಿತಿಯಲ್ಲಿಯೆ ಸಾಧಕನು ಭಗವಂತನ ಪಾದಗಳನ್ನು

ಹೃದಯದಲ್ಲಿ ಕಾಣಬಲ್ಲವನಾಗುವುದು. ತುಂಬ ಪ್ರಗತನಾದ ಅನುಭಾವಿಯೆ ಭಗವಂತನ ಇಲ್ಲವೆ ಸದ್ಗುರುವಿನ ಸಮನಾಗಿ ಇರಿಸಲಾದ ಚರಣಗಳ ದರ್ಶನವನ್ನು ಪಡೆಯಬಲ್ಲನು. ಆದುದರಿಂದ ಆ ಬಗೆಯ ಅನುಭವವು ಅತಿ ಬೆಲೆಯುಳ್ಳದ್ದೆಂದು ತುಕಾರಾಮರಂಥ ಸಂತರ ಅಭಿಮತ. ಅವರು 'ಸಮಚರಣ ವಿಟೇವರಿ'– 'ಇಟ್ಟಂಗಿಯ ಮೇಲಿರಿಸಲಾದ ಸಮಚರಣಗಳನ್ನು'– ಕುರಿತು ಹೇಳುವರು. 'ಅವನ್ನು ನಾವು ನಮ್ಮ ಹೃದಯದಲ್ಲಿ ಇರಿಸಿ, ಈ ಪ್ರಪಂಚದಲ್ಲಿ ನಮಗೆ ಬೇಕಾದುದನ್ನು ಅವಕ್ಕೆ ಬೇಡಬೇಕು' ಎಂಬುದು ಅವರ ಬೋಧೆ ಆದರೆ ಏಕನಾಥರು ದೇವರು ಒಂದು ಕಾಲಿನಿಂದ ಕುಂಟನಿರುವನೆಂದು ಹೇಳುವರು. ಅದೇನೇ ಇದ್ದರೂ ಚರಣದರ್ಶನವು ಸಾಧಕನು ತನ್ನ ತುಂಬ ಪ್ರಗತವಾದ ಪಾರಮಾರ್ಥಿಕ ಜೀವನದಲ್ಲಿ ಭಗವಂತನ ಪ್ರಸಾದರೂಪದಿಂದ ಪಡೆವ ತೀರ ವಿರಲವಾದ ಹಾಗೂ ಅತಿ ಬೆಲೆಯುಳ್ಳದ್ದಾದ ಪಾರಮಾರ್ಥಿಕ ಅನುಭವವೆಂಬುದು ನಿಶ್ಚಿತ.

(ಇ) ಶರೀಫ ಸಾಹೇಬರು ಈ ಪದದಲ್ಲಿ ಇನ್ನೊಂದು ತೀರ ಮಹತ್ವದ ಮಾತನ್ನು ಹೇಳಿರುವರು. ಅದು ನೂತನವಾದುದೂ, ಸ್ವತಂತ್ರವಾದುದೂ ಇರುವುದು. ಅವರು ಅನುಭಾವ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಕಾಣಬರುವ ಅನಾಹತನಾದದ ಅನುಭವದ ಬದಲಾಗಿ ತಮ್ಮ ಪಾರಮಾರ್ಥಿಕ ಸಂಗೀತದ ಅನುಭವವನ್ನು ಅರುಹುವರು. ಅದನ್ನು ಅರುಹುವಾಗ ಅವರು ಆನುಷಂಗಿಕವಾಗಿ ಯೋಗ, ಭೋಗ, ರೋಗ, ರಾಗ–ಈ ಶಬ್ದಗಳನ್ನು ಬಳಸಿರುವರು. ಅವುಗಳ ಮುಖಾಂತರ ಅವರು ಯೋಗಿ, ಭೋಗಿ, ರೋಗಿ, ರಾಗಿಗಳೆಂದು ಹೆಸರಾದ ನಾಲ್ಕು ಬಗೆಯ ಸಂತವರರನ್ನು ಸೂಚಿಸುವಂತೆ ಕಾಣುವುದು. ಈ ನಾಲ್ಕು ಬಗೆಗಳಿಗೆ ಒಮ್ಮೊಮ್ಮೆ 'ತ್ಯಾಗಿ' ಎಂಬುದನ್ನು ಸೇರಿಸಿ, ಒಟ್ಟು ಐದು ಮಾದರಿಯ ಅನುಭಾವಿಗಳು ವಿಜಾಪುರ ಜಿಲ್ಲೆಯಲ್ಲಿ ಇದ್ದರೆಂದು ಹೇಳಲಾಗುತ್ತಿದೆ. ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಒಂದು ಬಗೆಯ ಶಾರೀರಿ ಇಲ್ಲವೆ ಯೋಗಿಕ ಪದ್ಧತಿಯನ್ನು ಬಳಸಿದವನು 'ಯೋಗಿ'ಯು. ಕಾಖಂಡಕಿಯ ಮಹಿಪತಿದಾಸರು ಯೋಗಿಗಳೆಂದು ಬಗೆಯಲಾಗಿರುವುದು. ರೋಗಗಳಿಗೆ ಸಂಬಂಧಿಸಿರುವವನು 'ರೋಗಿ'ಯು. ಅವನೊಬ್ಬ ಮಾನವತೆಯ ಶಾರೀರಿಕ ಹಾಗೂ ಮಾನಸಿಕ ರೋಗಗಳನ್ನು ನಿವಾರಿಸುವ ಅನುಭಾವಿಯು. ರುಕ್ಮಾಂಗದವರು ಇಲ್ಲವೇ ರುಕ್ಮಿಣೀ ಪಂಡಿತರು ಎಂಬ ಹೆಸರಿನ ವಿಜಾಪುರದ ವೈದ್ಯ–ಸಂತರು 'ರೋಗಿ'ಗಳೆಂದು ಹೆಸರಾಗಿರುವರು. ಇಡೀ ಜೀವನದಲ್ಲಿ ಅವರು ರೋಗಗ್ರಸ್ತರಿದ್ದರೂ, ತಮ್ಮ ಶಿಷ್ಯರ ಆಧಿ–ವ್ಯಾಧಿಗಳನ್ನೆಲ್ಲ ಅವರು ನೆಟ್ಟಗೆ ಮಾಡಿದರು. ಪ್ರಾಪಂಚಿಕ ಸುಖೋಪಭೋಗಗಳ ಮಧ್ಯದಲ್ಲಿ ಪರಮಾತ್ಮನನ್ನು ಹಿಂಬಾಲಿಸುವ ಅನುಭಾವಿಯು 'ಭೋಗಿ'ಯು. ಅಗರಖೇಡದ ಕೃಷ್ಣದ್ವೈಪಾಯನರು 'ಭೋಗಿ' ಮಾದರಿಯ ಸಂತರು. ಪ್ರಾಪಂಚಿಕ ಸುಖಗಳನ್ನೆಲ್ಲ ತ್ಯಜಿಸಿ, ಆತ್ಮಯಜ್ಞದಿಂದ

ಪರತಮ ತತ್ವವನ್ನು ಪಡೆದ ಅನುಭಾವಿಯೆ 'ತ್ಯಾಗಿ'ಯು. ವಿಜಾಪುರ ಜಿಲ್ಲೆಯಲ್ಲಿಯ ಸಿಂದಗಿಯವರಾದ ಜಕ್ಕಪ್ಪಯ್ಯನವರು ಹಿರಿಯ 'ತ್ಯಾಗಿ' ಸಂತರೆಂದು ಹೆಸರಾದವರು. ಶರೀಫಸಾಹೇಬರವರು ಈ ಪದದಲ್ಲಿ ಉಲ್ಲೇಖಿಸಿದ 'ರಾಗಿ' ಎಂಬ ಐದನೆಯ ಮಾದರಿಯ ಸಂತರನ್ನು ಕಾಣುವುದು ಬಿಗಿಯಾದುದು. ಸಂಗೀತ-ಸಾಕ್ಷಾತ್ಕಾರಗಳನ್ನು ಕೂಡಿಸುವುದೇನೂ ಅಸಾಧ್ಯವಿಲ್ಲ. ಅದು ತೀರ ಸುಸಾಧ್ಯವು. ಅವೆರಡನ್ನು ಕೂಡಿಸುವವನೇ 'ರಾಗಿ'ಯೆಂದು ಕರೆಯಿಸಿಕೊಳ್ಳುವನು. 'ರಾಗಿ' ಶಬ್ದವು 'ರಾಗ' ಶಬ್ದದಿಂದ ಹುಟ್ಟಿರುವುದು. 'ರಾಗ' ಎಂದರೆ 'ಅನುರಾಗ'- 'ಅನುರಕ್ತಿ', ಎಂದರೆ ಪ್ರೀತಿ. ರಾಗಿಯು ಪ್ರೀತಿಯಿಂದ ಪೂರ್ಣನು. ಇಂಥ ರಾಗಿಯ ಹೃದಯದಲ್ಲಿಯೆ ದೈವೀ ಸಂಗೀತದ ಸೆಲೆಯು ಪುಟಿಯುವುದು. ಅದೇ 'ನಿಜರಾಗ'. ಆದರೆ 'ಈ ನಿಜರಾಗವನ್ನು ಅರಿಯುವುದೂ ಬಿಗಿಯಾದುದು, ನುಡಿಸುವುದೂ ಬಿಗಿಯಾದುದು' ಎಂದು ಶರೀಫ ಸಾಹೇಬರು ಹೇಳುವರು. ಅದು ವೀಣೆಯ ಸಂಗೀತವಲ್ಲ. ಇಲ್ಲವೆ ಬೇರೆ ವಾದ್ಯಗಳ ಸಂಗೀತವಲ್ಲ; ಇಲ್ಲವೆ ತಮ್ಮ ಮನಬಂದಂತೆ ಸ್ವೈರವಾಗಿ ಹಾಡಿದ ಸಂಗೀತವಲ್ಲ. 'ನಿಜರಾಗವು' ನಮ್ಮ ಅಂತರಂಗದಲ್ಲಿಯ ಚೈತನ್ಯದ ಆಳದಿಂದ ಹೊರಹೊಮ್ಮಿದ ಶ್ರುತಿ. 'ಯೋಗಿಯಾಗಿ ಸಂಭೋಗವನಳಿದು, ರೋಗವಳಿದು ನಿಜರಾಗವ ನುಡಿಯಲು' ಸಾಧಕನು ಆ ದೈವೀ ಸಂಗೀತವನ್ನು ಕೇಳುವನು. ಅದು ಅವನ ಆತ್ಮನ ಅಂತರಾಳದಿಂದ ಸಹಜವಾಗಿ ಹೊರಹೊಮ್ಮುವುದು. ಅದೇ ಮೇರೆಗೆ ಅಂಥ ನಿಜರಾಗವು ನಮ್ಮ ಜೀವನದ ಅಂತರತಮ ಮೂಲೆಯಿಂದ ತನ್ನಿಂದ ತಾನೆ ಚಿಮ್ಮಬೇಕು. ಈ ಅವಸ್ಥೆಯಲ್ಲಿ ನಾವು ಪ್ರಾಪಂಚಿಕ ಭೋಗಗಳಿಂದಲೂ, ಎಲ್ಲ ಆಧಿ-ವ್ಯಾಧಿಗಳಿಂದಲೂ ಮುಕ್ತರಾಗುವೆವು; ಮತ್ತು ನಾವು ಪರಮಾತ್ಮಭರಿತರಾದುದನ್ನು ಅನುಭವಿಸುವೆವು ಈ ಅವಸ್ಥೆಯಲ್ಲಿ ಪರಮಾತ್ಮನ ಆಜ್ಞೆಯ ಮೂಲಕ ಈ ಸಂಗೀತವು ಹೊರಚಿಮ್ಮುವುದು. ಇದು ಬೇರೆ ಬಗೆಯ ಎಲ್ಲ ಸಂಗೀತದಿಂದ ತೀರ ಭಿನ್ನವಾದುದು, ಅಸಾಧಾರಣವಾದುದು.

ಈ 'ನಿಜರಾಗದ' ಇನ್ನೊಂದು ಬಗೆಯ ಬಸವಣ್ಣನವರ 'ತಾಳಮಾನಸರಿಸವನರಿಯೆ' ಎಂಬ ವಚನದಲ್ಲಿ ಅರುಹಲಾಗಿದೆ. 'ನಾನು ತಾಳವನ್ನೂ, ಪ್ರಮಾಣವನ್ನೂ, ಕಾಲಸಮಾನತೆಯನ್ನೂ ಅರಿಯುವುದಿಲ್ಲ. ನನಗೆ ಹಾಡುವ, ಬಾರಿಸುವ ಪದ್ಧತಿಯು ಗೊತ್ತಿರುವುದಿಲ್ಲ. ನನಗೆ ಬೇರೆ ಬೇರೆ ಗಣಗಳ ಪರಿಚಯವಿಲ್ಲ. ನಾನು ದೇವತೆಗಳನ್ನೂ, ಅವರನ್ನು ಹಾಡಿ ಹರಸುವ ನಾರದ-ತುಂಬರಾದಿ ಅನುಚರರನ್ನೂ ಅರಿಯುವುದಿಲ್ಲ. ಅಯ್ಯ! ಪ್ರಭು ಕೂಡಲಸಂಗಮದೇವಯ್ಯ! ಆನು ಒಲಿದಂತೆ ಹಾಡುವೆ. ಆದರೂ ಅದರಿಂದ ನಿನ್ನ ಅಮರ ವೈಭವ ಮರೆಯದಂತೆ ಮಾಡುವೆ' ಎಂದು ಬಸವಣ್ಣನವರು ಹೇಳಿರುವರು.

ಪ್ರಸ್ತುತ ಪದದಲ್ಲಿ ಶರೀಫಸಾಹೇಬರವರು ಹೇಳುವ ಎರಡನೆಯ ಮಾತು 'ಹೆಸರು ಪೊಗಳಿ' ಎಂಬುದು. ಅದರ ಎರಡನೆಯ ಪಾಠಭೇದವಾದ 'ಹೆಸರು ಬೊಗಳಿ'(ಬಗುಳಿ) ಎಂಬುದು ಅದಕ್ಕೂ ಹೆಚ್ಚು ಒಳ್ಳೆಯದು. ಯಾಕಂದರೆ ದೇವರನ್ನು ಹೊಗಳುವುದು ಅಷ್ಟೇನೂ ಬಿಗಿಯಾದುದಲ್ಲ. ಆತನ ಹೆಸರನ್ನು 'ಬಗಳು'ವುದು ಬಲು ಬಿಗಿಯಾದುದು. ತುಕಾರಾಮರು 'ಅನಂತಯುಗಾಚಾ ದೇವ್ಹಾರಾ' 'ಅನಂತ ಯುಗಗಳಿಂದ ಬಂದ ದೇವರ ಮಂಟಪ' ಎಂಬ ತಮ್ಮ ಹೆಸರಾದ ಅಭಂಗ ವೊಂದರಲ್ಲಿ ನಾವು ದೇವರ ನಾಯಿ, ದೇವರು ತನ್ನನ್ನು ಬಗುಳ ಹಚ್ಚಿದನು ಎಂದು ಹೇಳಿದ್ದಾರೆ. ನಾವು ಪ್ರತಿಕ್ರಿಯಾತ್ಮಕವಾಗಿ, ತಾವಾಗಿ ತಿಳಿಯದೆಯೆ, ದೇವರ ನಾಮವನ್ನು ಬಗುಳಿದೆವೆಂದರೆ–ಉಚ್ಚರಿಸಿದೆವೆಂದರೆ, ನಾವು ದೇವರ ನಾಯಿಗಳೆಂದು ಯಥಾರ್ಥವಾಗಿ ಕರೆಇಸಿಕೊಳ್ಳಬಹುದು. ನಮಗೆ ಶರೀಫ ಸಾಹೇಬರ ಬಗೆಗೂ, ಅವರ ಸ್ವಂತ ಪಾರಮಾರ್ಥಿಕ ಅನುಭವಗಳ ಬಗೆಗೂ ಪೂರ್ಣವಾದ, ಸಪ್ರಮಾಣವಾದ ಪರಿಚಯವಿಲ್ಲ. ಆದರೆ, ಅವರು ದೇವರ ನಾಮವನ್ನು ಬ್ರಹ್ಮಜ್ಞಾನದೊಡನೆ ಸಮೀಕರಿಸಿರುವರೆಂಬುದನ್ನೂ ಮತ್ತು ಅದು ಶಾಶ್ವತವಾದ ಆನಂದ–ಬೋಧೆಗಳಿಂದ ತುಂಬಿರುವದೆಂಬುದನ್ನೂ ನಿಶ್ಚಿತವಾಗಿ ಬಲ್ಲೆವು.

ನಾವಿನ್ನು ಎರಡನೆಯ ಪದವಾದ 'ಓಂ ನಮಃ ಶಿವಾ ಎನ್ನಿರೋ' ಎಂಬುದರೆಡೆ ತೆರಳುವೆವು. ಇದು ರಾಯಚೂರು ಜಿಲ್ಲೆಯಲ್ಲಿಯ ನೀರಲಕೇರಿ ಎಂಬ ಗ್ರಾಮದ ಸಂತರ ಪದ. ಅವರು 'ಪಂಚಾಕ್ಷರಿ' ಎಂದು ಹೆಸರಾಗಿರುವರು. ಬೇರೆಡೆ ಉಲ್ಲೇಖಿಸಲಾದ 'ಷಡಕ್ಷರಿ'ಯವರಿಂದ ಅವರು ಭಿನ್ನರು. ಅವರು ಲಿಂಗಾಯತ ಮತಕ್ಕೆ ಸೇರಿದ ಓರ್ವ ಜಂಗಮರಿದ್ದಂತೆ ಕಾಣುವುದು; ಯಾಕಂದರೆ ತಮ್ಮ ಪದವನ್ನವರು ಓಂಕಾರದಿಂದ ಪ್ರಾರಂಭಿಸುವರು. ವಿಶೇಷವಾಗಿ ಶಿವನ ನಾಮದ ನೆರವಿನಿಂದ ಧ್ಯಾನವನ್ನು ಮಾಡುವ ಪದ್ಧತಿಯನ್ನವರು ಆಗ್ರಹದಿಂದ ಪ್ರತಿಪಾದಿಸಿರುವರು. ಶಿವನ ನಾಮವನ್ನು ಅಂದದಿಂದ, ಆನಂದದಿಂದ, ಗಾಂಭೀರ್ಯದಿಂದ ನುಡಿಯಿರಿ! 'ಓಂ ನಮಃ ಶಿವಾ ಎನ್ನಿರೋ ಒಯ್ಯಾರದಿ!' ಪುರಂದರದಾಸಾದಿ ಸಂತರಂತೆ, ಅದನ್ನು ಸರಾಗವಾಗಿ, ತಾಳ–ವೀಣೆಗಳ ಸುಸ್ವರದೊಡನೆ ನಾಮವನ್ನು ನುಡಿಯಿರಯ್ಯ! ಪ್ರಾಚೀನಕಾಲದಿಂದ ಸುರ–ನರರೆಲ್ಲ ಕೇವಲ ದೇವರ ನಾಮೋಚ್ಚಾರದಿಂದಲೇ ಕೈವಲ್ಯವ ಪಡೆದಿರುವರು. ಮಣಿಗಳ ಎಣಿಕೆಯಿಂದ ಕೂಡಿದ ಜಪವು ಬೇಕಾಗಿಲ್ಲ. ತಲೆಯ ಮೇಲೆ ಇಲ್ಲವೆ ಒಂಟಿ ಕಾಲಿನ ಮೇಲೆ ನಿಲ್ಲುವಂಥ ಅಥವಾ ವ್ರತ ಉಪವಾಸಾದಿಗಳಿಂದ ದೇಹದಂಡನ ಮಾಡುವಂಥ ಉಗ್ರತಪವು ಬೇಕಾಗಿಲ್ಲ. ಇವೆಲ್ಲ ತಾಮಸ ಪದ್ಧತಿಗಳು. ಬಾಹ್ಯಾಚಾರಗಳಿಂದ ಕೂಡಿದವುಗಳು. ಆದುದರಿಂದ ಇಂಥ 'ಜಪ ತಪ ವ್ರತವ್ಯಾತಕೆ?' ಎಂದು ಕವಿಯು ಕೇಳುವನು. ನಮ್ಮ ದೇಹವು ಒಂದು ದಿನ ಅಳಿಯುವುದರಿಂದ, ದೇಹವೇ ನಾವೆಂಬ ದೇಹಭಾವವನ್ನು ನಾವು

ತಳೆಯಕೂಡದು. ನಾವು ನಮ್ಮ ಹೃದಯದ ಅಂತರಾಳದಲ್ಲಿ ಭಗವಂತನ ನಾಮವನ್ನು ಭಗವಂತನನ್ನು ಮರೆಯಲ್ಲಿ, ಭಕ್ತಿಯಿಂದ, ಮೌನದಿಂದ, ಹಗಲಿರುಳೆನ್ನದೆ ನೆನೆಯಬೇಕು. ನಾವು ದಂಭಮೋಸಗಳಿಂದ ಕೂಡಿದ ಸಾಧನಗಳನ್ನು ಅನುಕರಿಸಬಾರದು. ಭ್ರಮೆಗಳಿಂದ ನಾವು ದೂರಿರಬೇಕು. ಅಡಿಗಡಿಗೆ ಜೀವನದಲ್ಲಿ ಒದಗುವ ಗಂಡಾಂತರಗಳ ಬಗೆಗೆ ಎಚ್ಚರಿಕೆಯನ್ನು ವಹಿಸಬೇಕು. ಎಡೆಬಿಡದೆ ಭಗವಂತನನ್ನು ನೆನೆಯಬೇಕು, ಎಂಬುದಾಗಿ ಈ ನೀರಲಕೇರಿ ಸಂತರು ನಮ್ಮನ್ನು ಹುರಿಗೊಳಿಸಿರುವರು. ಕವಿಯು 'ಓಂ ನಮಃ ಶಿವಾ' ಎಂಬ ಪಂಚಾಕ್ಷರದ ಮಂತ್ರವನ್ನು ವಿಶೇಷವಾಗಿ ಮೆಚ್ಚಿರುವ. ಯಾಕೆಂದರೆ, ಈ ಪಾವನ ಶಿವನಾಮವು ಏಳುಕೋಟಿ ಮಂತ್ರಗಳಿಗೆ 'ತಾಯಿಯೊಡಲು'; 'ಮನೆ; ಮೂಲ'. ಅವುಗಳಿಗೆ ಸಮಾನವಾದ ಪ್ರಭಾವವುಳ್ಳದ್ದು. ಅದು ಅಂದವಾದುದು, ಚಂದವಾದುದು. ಉತ್ತಮೋತ್ತಮವಾದುದು ಎಂದು ಅವನ ಬಗೆಯುವನು. ಈ ದೇವರ ನಾಮವನ್ನು ಅಡಿಗಡಿಗೆ ಉಸಿರು ಉಸಿರಿನೊಡನೆ, ಮರೆಯಲ್ಲಿ ವಿನೀತನಾಗಿ ನೆನೆಯಲು ಕವಿಯು ನಮಗೆ ಬೋಧಿಸಿರುವನು. ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಬೇರಾವ ಸಾಧನವನ್ನು ಆಶ್ರಯಿಸುವ ಅಗತ್ಯವಿಲ್ಲ ಎಂದು ಹೇಳಿರುವನು.

ಸದ್ಗುರುಗಳು ನೀಡಿರುವ ನಾಮಮಂತ್ರದಲ್ಲಿಯ ಪ್ರತಿಯೊಂದು ಅಕ್ಷರದ ಅರ್ಥವನ್ನು ಬೌದ್ಧಿಕವಾಗಿಯೂ, ನೈತಿಕವಾಗಿಯೂ, ಪಾರಮಾರ್ಥಿಕವಾಗಿಯೂ ವಿವರಿಸುವ ವಾಡಿಕೆಯುಂಟು. ಈ ಪದ್ಧತಿಯು ಪ್ರಾಚೀನ ಸಂಸ್ಕೃತ ವಾಙ್ಮಯದಲ್ಲಿಯೂ ಕಾಣಬರುವುದು. ಈ ಪರಂಪರೆಯು ಈವರೆಗೆ ಹಾಗೆಯೆ ನಡೆಯುತ್ತ ಬಂದಿರುವುದು. ಜೀವನದ ಯಾವುದೇ ಕ್ಷೇತ್ರದಲ್ಲಿಯ ಗಣ್ಯವ್ಯಕ್ತಿಗಳನ್ನು ಗೌರವಿಸುವ ಸಮಯದಲ್ಲೆಲ್ಲ, ಅವರ ಗೌರವಾರ್ಥವಾಗಿ ಸಂಸ್ಕೃತ ಕವನಗಳನ್ನು ರಚಿಸಲಾಗುವುದು. ಅವುಗಳಲ್ಲಿಯ ಶ್ಲೋಕಗಳ ಪ್ರತಿಯೊಂದು ಸಾಲಿನ ಆದಿಯಲ್ಲಿ ಒಂದೊಂದರಂತೆ ಅವರ ಹೆಸರಿನ ಅಕ್ಷರಗಳನ್ನು ಕ್ರಮಶಃ ಸೇರಿಸುವುದುಂಟು. ಈ ರೀತಿ ಒಂದು ವಿಶೇಷ ಪ್ರಕಾರದಿಂದ ಆ ಇಡೀ ಕವನದಲ್ಲಿಯ ವಿಚಾರ ಭಾವಗಳಲ್ಲಿಯ ಇಡೀ ಒಳತಿರುಳು ವ್ಯಕ್ತಗೊಳಿಸಲಾಗುವುದು. ನಮ್ಮ ಅಭಿಮತದ ಮೇರೆಗೆ ಪ್ರಸ್ತುತ ಅನುಭಾವ ಪದದಲ್ಲಿ ಕವಿಯು ಬಳಸಿದ ಪಂಚಾಕ್ಷರೀ ಮಂತ್ರದ ಅರ್ಥವನ್ನು ವಿವರಿಸುವವರ ಪಾರಮಾರ್ಥಿಕ ಉದ್ದೇಶವು, ಸಾಧಕನು ತನ್ನ ಮನಸ್ಸನ್ನು ಪ್ರಾಪಂಚಿಕ ವಿಷಯಗಳನ್ನು ಕುರಿತ ಬಗೆಬಗೆಯ ಕಲ್ಪನೆಗಳಿಂದ ನಿವೃತ್ತಗೊಳಿಸಿ ಪಾರಮಾರ್ಥಿಕ ವಿಷಯಗಳ ಮೇಲೆಯೇ ಏಕಾಗ್ರಗೊಳಿಸಲು ನೆರವಾಗುವುದೇ ಇರುವಂತೆ ಕಾಣುವುದು. ಶ್ರೀ ಶಂಕರಾಚಾರ್ಯರ ಷಡಕ್ಷರಸ್ತೋತ್ರದ ಉದ್ದೇಶವೂ, 'ಅಲ್ಲಮಪ್ರಭು' ಹಾಗೂ 'ಬಸವ' ಈ ಹೆಸರುಗಳ ಅರ್ಥವನ್ನು ವಿಶದೀಕರಿಸುವ ಉದ್ದೇಶವೂ ಇದೇ ಬಗೆಯದಿರುವುದು. ಅಲಕ್ಷವೆಂದರೆ ಆಯಾಕಾಲದ ನಮ್ಮ ಉದ್ದೇಶಕ್ಕೆ ಅಸಂಗತವಾದ

ವಿಷಯಗಳನ್ನು ಲಕ್ಷಿಸುವುದು. ಅದಕ್ಕೆ ಸುಸಂಗತವಾದ ವಿಷಯಗಳನ್ನು ಲಕ್ಷಿಸುವುದೇ ಅದರ ಮೇಲೆ ಮನಸ್ಸನ್ನು ಏಕಾಗ್ರಗೊಳಿಸುವ ಸಾಧನ. ಅದೇ ಮೇರೆಗೆ ಭಗವಂತನಿಗೆ ಸಂಬಂಧಿಸಿದ ಹೆಚ್ಚು ಸ್ವಾರಸ್ಯವುಳ್ಳ ಹಾಗೂ ಮಹತ್ವವುಳ್ಳ ವಿಷಯದ ಮೇಲೆ ಮನಸ್ಸನ್ನು ಸ್ಥಿರಗೊಳಿಸುವದೇ, ಆತನ ಮೇಲೆ ಅದನ್ನು ಏಕಾಗ್ರಗೊಳಿಸುವ ವಾಸ್ತವಿಕ ಹಾಗೂ ಪರಿಣಾಮಕಾರಿಯಾದ ಏಕಮೇವ ಪದ್ಧತಿಯು. ಅದರ ಫಲವಾಗಿ, ನಮ್ಮ ಮನಸ್ಸು ಎಲ್ಲ ಪ್ರಾಪಂಚಿಕ ವಿಚಾರಗಳಿಂದಲೂ, ಭಾವನೆ–ವಾಸನೆ ಗಳಿಂದಲೂ ತಾನಾಗಿಯೆ ಪರಾವೃತ್ತವಾಗುವುದು. 'ಆರುಅಕ್ಷರ ಭೇದ' ಎಂಬ ಪದದಲ್ಲಿ ಇದೇ ಪ್ರಧಾನ ವಿಷಯವಿರುವಂತೆ ಕಾಣುವುದು. ಅದನ್ನೂ, ಅದರ ಜತೆಯಲ್ಲಿ ಅದ ರೊಡನೆ ಸರಿಹೋಲಿಸಲಾಗುವ ಬೇರೆ ಪದಗಳನ್ನೂ ಇದೀಗ ವಿಶದೀಕರಿಸಲಿರುವೆನು.

ಪ್ರಸ್ತುತ ಪದವಾದ 'ಆರು ಅಕ್ಷರ ಭೇದ, ಹರಿ ಕೇಳಲು ಬಂದ' ಎಂಬುದನ್ನು ರಚಿಸಿದ ಕವಿಯು ಬೀಳಗಿ ಪೇಠಾದಲ್ಲಿಯ ಬಬಲಾದಿ ಗ್ರಾಮದವನಿರುವಂತೆ ಕಾಣುವುದು. ಅವನು ಸಿದ್ಧರಾಮೇಶ್ವರರ ಶಿಷ್ಯನಿರಬಹುದು. ಯಾಕೆಂದರೆ, ಈ 'ವರಮಂತ್ರವನ್ನು'– ಉಚ್ಚತಮ ಬೆಲೆಯುಳ್ಳ, ಬಯಕೆಗಳನ್ನೆಲ್ಲ ಪೂರೈಸುವ ಹಾಗೂ ಸಾಧಕನು ಬೇಡುವ ವರಗಳನ್ನೆಲ್ಲ ಸಲ್ಲಿಸುವ ಮಂತ್ರವನ್ನು–ಸಿದ್ಧರಾಮೇಶ್ವರರು ತಂದರೆಂದು ಕವಿಯು ಹೇಳುವನು. ಅವನು 'ಷಡಕ್ಷರಿ' ಎಂಬುವರ ಶಿಷ್ಯನೂ ಇರುವ ಸಂಭವವಿದೆ. ಯಾಕಂದರೆ ಅವನು 'ಷಡಕ್ಷರ ಮುನಿಗಳು ಹೊಸ ಮಂತ್ರ ಹೇಳಿದರು' ಎಂದು ಅರುಹಿರುವನು. ಅದೇ ಮೇರೆಗೆ, ಅವನು ಮರುಳಸಿದ್ಧ, ಕಾಡ ಸಿದ್ಧ, ಷಣ್ಮುಖರು–ಈ ತೇಜಸ್ವಿಯಾದ ಸಂತರ ಪುಂಜವು,– ಬಹುತರವಾಗಿ ತನ್ನ ಗುರುಗಳಾದ ಸಿದ್ಧರಾಮರೊಡನೆ, ತನ್ನ ಬಬಲಾದಿ ಗ್ರಾಮದಲ್ಲಿ, ದೇಹರೂಪ ದಿಂದಲ್ಲದಿದ್ದರೂ ಚೈತನ್ಯರೂಪದಿಂದ ಇದ್ದಿತೆಂದು ಅರುಹುವನು. 'ಷಡಕ್ಷರಮುನಿ' ಎಂಬುದು ಕವಿಯ ಮುದ್ರಿಕೆಯಿರುವಂತೆ ಕಾಣುವುದು. 'ಷಡಕ್ಷರಲಿಂಗ'ದಂತೆ ಅದು ಕೂಡ 'ಮುಪ್ಪಿನ ಷಡಕ್ಷರಿ'ಯ ವರಮುದ್ರಿಕೆಯಿರುವ ಸಂಭವವಿದೆ. ಹಾಗಿದ್ದ ಪಕ್ಷದಲ್ಲಿ, ಅವರೇ ಈ ಪದವನ್ನು ರಚಿಸಿದವರೆನ್ನಲು ಅಡ್ಡಿಯಿಲ್ಲ. ಈ ರೀತಿ, ಈ ಪದದ ಕರ್ತರಾದ (?) 'ಮುಪ್ಪಿನ ಷಡಕ್ಷರಿ'ಯವರು ನಿಜಗುಣ ಶಿವಯೋಗಿಗಳ ಸಮಕಾಲೀನರೆಂದು ಭಾವಿಸಲಾಗಿದೆ. ಆದರೆ ಅವರು ಬಸವಣ್ಣನವರನ್ನು ಸ್ತುತಿಸಿರುವು ದರಿಂದ, ನಿಜಗುಣರಿಗಿಂತ ಹಿಂದಿನವರಿರುವಂತೆ ಕಾಣುವುದು. ನಿಜಗುಣರು ಹೆಚ್ಚಾಗಿ ದಾರ್ಶನಿಕ ಮನೋವೃತ್ತಿಯವರು. ಆದರೆ ಮುಪ್ಪಿನ ಷಡಕ್ಷರಿಗಳು ವಿಶೇಷವಾಗಿ ಭಕ್ತಿಯ–ಅನುಭಾವದ ಮನೋವೃತ್ತಿಯವರು. ಯಾಕಂದರೆ ಅವರು ಪಾರಮಾ ರ್ಥಿಕ ಜೀವನದಲ್ಲಿ ಸಂತರ ಸಂಗದ ಮಹಿಮೆಯನ್ನು ಎತ್ತಿ ತೋರಿಸಿರುವರು. "ನಾನು ಸಂತರ ಸೇವೆಯಲ್ಲಿ ತೀರ ದೈನ್ಯಪೂರ್ಣ ಜೀವನವನ್ನು ಬಾಳಬಯಸುವೆ. ಅವರು ಬಿಟ್ಟ ಎಂಜಲವನ್ನುಣ್ಣುವೆ, ಉಗಿದ ತಾಂಬೂಲವ ಸವಿವೆ, ಅವರ ಕೀಲದಲಿ

ಇರುವೆ" ಎಂದು ಅವರು ಬೇರೆಡೆ ಹೇಳಿರುವರು. ಈ ಪದದ ಎರಡನೆಯ ಸಾಲಿನಲ್ಲಿ ಉಲ್ಲೇಖಿಸಲಾದ 'ಸಿದ್ಧರಾಮೇಶ'ರೂ ಕೊನೆಯ ಸಾಲಿನಲ್ಲಿ ಉಲ್ಲೇಖಿಸಲಾದ 'ಷಡಕ್ಷರ ಮುನಿಗಳೂ' ಒಬ್ಬರೇ ಇರುವ ಸಂಭವವೂ ಇಲ್ಲದಿಲ್ಲ.

ಆಮೇಲೆ, ಈ ಸಂತ-ಕವಿಗಳು 'ಓಂ-ನ-ಮಃ-ಶಿ-ವಾ-ಯ'ಎಂಬ ಷಡಕ್ಷರ ಮಂತ್ರದ ಪ್ರತಿಯೊಂದು ಅಕ್ಷರದ ಅರ್ಥವನ್ನು ವಿಶದೀಕರಿಸಿರುವರು. ಈ 'ಆರು ಅಕ್ಷರಗಳ ಭೇದ(ಅರ್ಥ) ಹರಿ ಕೇಳಲು ಬಂದ'. ಆದುದರಿಂದ 'ಸುರಮುನಿಗಳೇ! ಅದನ್ನು ಕೇಳಿರಣ್ಣ!' ಎಂದು ಅವರು ಆದಿಯಲ್ಲೇ ಹೇಳುವರು.

ನೀವು 'ಓಂ'ಕಾರದ ಮೂಲವನ್ನು-ಬೀಜವನ್ನು-ಅಂದರೆ ಅದು ಯಾವ ಸತ್ತತ್ವದಿಂದ ಉದಿಸಿರುವುದೋ ಅದನ್ನು ಸಾಕ್ಷಾತ್ಕರಿಸಿಕೊಂಡರೇನೇ, ಓಂಕಾರದ ಅರ್ಥವನ್ನು ಅರಿಯಬಹುದು. ಅದೇ ಮೇರೆಗೆ 'ನ' ಅಕ್ಷರವು ನಿರಹಂಕಾರವನ್ನೂ, 'ಮಃ' ಎಂಬುದು ಹದಿನಾಲ್ಕು ಲೋಕಗಳ ಮರ್ಮವನ್ನೂ, 'ಶಿ' ಎಂಬುದು ಆಕಾಶವನ್ನೂ, ಅದರಲ್ಲಿಯ ಆಕಾರಗಳನ್ನೂ, 'ವಾ' ಎಂಬುದು ವಾಯು, ತೇಜ, ಆಪ, ಪೃಥಿವಿಗಳನ್ನೂ ಸೂಚಿಸುವುದು. ಈ ರೀತಿ, 'ಶಿ' ಮತ್ತು 'ವಾ' ಅಕ್ಷರಗಳು ಪ್ರಪಂಚದಲ್ಲಿಯ ಎಲ್ಲ ಒಡವೆಗಳಲ್ಲಿ ನೆಲೆಸಿರುವ ಪಂಚಮಹಾಭೂತಗಳನ್ನು ಪ್ರತಿನಿಧಿಸುವವು. 'ಯ' ಎಂಬ ಅಕ್ಷರವು 'ದೇವರು ಯಾರಿಗೂ ನಿಲುಕಿಲ್ಲ. ತಾನೆ ತನ್ನನ್ನು ಬಲ್ಲನು' ಎಂಬುದನ್ನು ಅರುಹುವದು. ಇದೇ ಬಗೆಯಾಗಿ ಉಮದಿಯ ಮಹಾರಾಜರವರು ಕೂಡ ಪಂಚಾಕ್ಷರೀ ಮಂತ್ರದ ಅರ್ಥವನ್ನು ವಿವರಿಸುತ್ತಿದ್ದರು.

ಈ ಮಂತ್ರದ ಬೇರೆ ಬೇರೆ ಅಕ್ಷರಗಳ ಮೇಲ್ಕಾಣಿಸಿದ ಅರ್ಥವಿವರಣೆಯು ಇದೇ ಮಂತ್ರದ ಅಕ್ಷರಗಳ ಶ್ರೀ ಶಂಕರಾಚಾರ್ಯರದೆಂದು ಬಗೆಯಲಾದ ಕೆಳಗಣ ಅರ್ಥವಿವರಣೆಯನ್ನು ಕೆಲಮಟ್ಟಿಗೆ ಹೋಲುವುದು: "ಓಂಕಾರವೆಂಬುದು ಮಾನವನ ಬಯಕೆಗಳನ್ನು ಪೂರೈಸಿ, ಆತನನ್ನು ಮುಕ್ತಗೊಳಿಸುವುದು. ಆದುದರಿಂದ ಅದನ್ನು ಯೋಗಿಗಳು ನೆನೆಯುವರು. 'ನ' ಎಂದರೆ 'ನಮಂತಿ'. ಸಂತರಿಂದಲೂ, ಸುರಅಪ್ಸರೆಯರಿಂದಲೂ ವಂದಿಸಿಕೊಳ್ಳುವಂಥಹದು. 'ಮ' ಎಂದರೆ ಮಹಾದೇವ, ಮಹಾಧ್ಯಾನಿ ಹಾಗೂ ಮಹಾಶಕ್ತಿ. 'ಶಿ' ಎಂದರೆ ಶಾಂತವಾದುದು. ಶಿವವಾದುದು, ಕಲ್ಯಾಣಕಾರಕವಾದುದು. 'ವಾ' ಎಂದರೆ, ವಾಹನ, ಶಿವನ ವಾಹನವಾದ ನಂದಿಕೇಶ್ವರ ಮತ್ತು ವಾಸುಕಿ-ಶಿವನ ಆಭರಣವೂ, ಪೃಥಿವಿಯ ಆಧಾರವೂ ಆದ ಶೇಷ. 'ಯ' ಎಂದರೆ ಸರ್ವವ್ಯಾಪಿಯಾದ ದೇವರು".

ಅಲ್ಲಮಪ್ರಭುವಿನ ತಾಯಿಯ ಹೆಸರು 'ಸುಜ್ಞಾನಿ'. ತಂದೆಯ ಹೆಸರು 'ನಿರಹಂಕಾರ'. ಈ ಹೆಸರುಗಳನ್ನು ಕಂಡು ಕಪಟರಾಳ ಕೃಷ್ಣರಾಯರೆಂಬ

ಸಂಶೋಧಕ ವಕೀಲರು, ಅಲ್ಲಮಪ್ರಭುವಿನದು ಬರಿ ಕಟ್ಟುಕಥೆ, ಅದನ್ನು ರೂಪಕಕಥೆಯೆಂದು ವಿವರಿಸಬೇಕು ಎಂಬ ತಮ್ಮ ಸಿದ್ಧಾಂತವನ್ನು ನಿರೂಪಿಸಿ ರುವರು. 'ಸುಜ್ಞಾನಿ' 'ನಿರಹಂಕಾರ' ಎಂಬ ಹೆಸರುಗಳಿಗೆ ರೂಪಕಾತ್ಮಕ ಅರ್ಥವಿರುವು ದೇನೋ ನಿಜ. ಅದೇ ಮೇರೆಗೆ 'ಅಲ್ಲಮಪ್ರಭು' ಎಂಬ ಹೆಸರನ್ನು ರೂಪಾತ್ಮಕ ವಾಗಿಯೂ ಈ ರೀತಿ ವಿವರಿಸಲಾಗಿರುವುದು: 'ಅಲ್ಲ ಅಲ್ಲ ಎನ್ನುವ ಮಹಾಪ್ರಭುವೇ ಅಲ್ಲಮಪ್ರಭು.' ಪ್ರಭುಲಿಂಗಲೀಲೆಯ ಕರ್ತನಾದ ಚಾಮರಸನು ಅಲ್ಲಮಪ್ರಭುವಿನ ಹಿರಿಯಚರಿತ್ರಕಾರನು. ಪ್ರಭುವು ಜನಿಸಿದಾಗ, ಆತನ ತಂದೆ-ತಾಯಂದಿರು, ಅವ ನೊಂದು ಸಗುಣ-ನಿರ್ಗುಣವಾದ ಅಪ್ರತಿಮ ವ್ಯಕ್ತಿಯೆಂದು ಬಗೆದು, ಅವನೆಡೆ ಆಶ್ಚರ್ಯ-ಅನುರಾಗಗಳಿಂದ ಕಂಡರೆಂದು ಅವನು ತನ್ನ ಪ್ರಭುಲಿಂಗಲೀಲೆಯಲ್ಲಿ ಹೇಳಿರುವನು.

ಅದೇ ಹಿರಿಯ ಸಂತರಾದ ಅಲ್ಲಮಪ್ರಭುವಿನ ಹೆಸರಿನ ಅರ್ಥವಿವರಣೆಯನ್ನು ಅನುಭಾವದ ದೃಷ್ಟಿಯಿಂದಲೂ ಇದೇ ಬಗೆಯಾಗಿ ಮಾಡಲಾಗಿರವುದು; ಮತ್ತು ಆ ಹೆಸರಿನ ಪ್ರತಿಯೊಂದು ಅಕ್ಷರವನ್ನು ನಾವು ನೆನೆಯಬೇಕು ಎಂದು ಹೇಳಲಾಗಿ ರುವುದು. 'ಅ' ಎಂಬ ಅಕ್ಷರವನ್ನು ನೆನೆದರೆ ನಮ್ಮ ಐಶ್ವರ್ಯವು ವರ್ಧಿಸುವದು; 'ಲ' ಎಂಬ ಅಕ್ಷರವನ್ನು ನೆನೆದರೆ 'ಲಕುಳೀಶ' ಮುನಿಯ ಘನಪದವು ಲಭಿಸುವುದು. 'ಲಕುಳೀಶ' ಇಲ್ಲವೆ 'ನಕುಳೀಶ'ನು ಕೈಯಲ್ಲಿ 'ಲಗುಡವನ್ನು'- 'ಡೊಣ್ಣೆಯನ್ನು' ಹಿಡಿದ ಪ್ರಭುವು. ಈ 'ಲಕುಳೀಶ' ಇಲ್ಲವೆ 'ನಕುಳೀಶ' ಎಂಬ ಶಬ್ದಗಳ ಉಲ್ಲೇಖವು ಜಯಪುರದ ನೆರೆಯಲ್ಲಿಯ ಶಾಸನದಲ್ಲಿ (ಕ್ರಿ.ಶ.ಸ ೯೭೧) ಬಂದಿರುವುದು.* ಅದೇ ಮೇರೆಗೆ 'ಮ' ಎಂಬ ಅಕ್ಷರವನ್ನು ನೆನೆದರೆ, ಮಾಯಾಬ್ಧಿ ಯನ್ನು ದಾಟಬಹುದು. 'ಪ್ರ' ಎಂಬ ಅಕ್ಷರದ ನೆನವು ಕಾಯದ ಹೀನ ಗುಣಗಳನ್ನು ಅಳಿಸುವುದು, ದಿವ್ಯಪ್ರಭೆಯನ್ನು ಕಾಣಿಸುವುದು. 'ಭು' ಎಂಬ ಅಕ್ಷರದ ನೆನವು ಭೂತೇ ಶನ ದರ್ಶನವನ್ನು ದಯಪಾಲಿಸುವುದು. ಈ ಬಗೆಯಾಗಿ, ನಮ್ಮ ಮನಸ್ಸನ್ನು ನಾವು 'ಅಲ್ಲಮಪ್ರಭು' ಎಂಬ ಮಂತ್ರದ ಮೇಲೆ ಶ್ರದ್ಧೆಯಿಂದಲೂ, ಒಯ್ಯಾರದಿಂದಲೂ ಏಕಾಗ್ರಗೊಳಿಸಿ, ಅದನ್ನು ಜಪಿಸಬೇಕು ಎಂದು ಕವಿಯು ಹೇಳಿರುವನು.

ಇದೇ ಬಗೆಯಾಗಿ 'ಬಸವ' ಎಂಬ ಹೆಸರಿನ ಅರ್ಥವಿವರಣೆಯನ್ನೂ ಅನುಭಾವದ ದೃಷ್ಟಿಯಿಂದ ಮಾಡಲಾಗಿರುವುದು. ಅದು ನಾದ, ಬಿಂದು, ಕಲೆ(ತೇಜ) ಇವುಗಳ ಸಂಯೋಗದ ಪ್ರತೀಕವೆಂದು ಬಗೆಯಲಾಗಿದೆ. ವೇದಾಂತದ

---

* 'Age of Imperial Unity'ದಲ್ಲಿಯ ಶ್ರೀ ಮಹಾದೇವನ್ ಅವರ ಲೇಖ ನೋಡಿ. ಪು. ೪೫೪

ದೃಷ್ಟಿಯಿಂದ ಅದು 'ಸತ್ ಚಿತ್-ಆನಂದ'ಗಳ ಸಂಯೋಗವನ್ನು ಸೂಚಿಸುವುದು; ಮತ್ತು ಶೈವ ಸಿದ್ಧಾಂತಿಗಳ ದೃಷ್ಟಿಯಿಂದ ಅದು ಗುರು-ಲಿಂಗ-ಜಂಗಮ ಇವುಗಳ ಸಂಯೋಗವನ್ನು ಅರುಹುವದಂತೆ.

ಶಿಶುನಾಳದ ಶರೀಫ ಸಾಹೇಬರ 'ಶ್ರೀಗುರು ಮಂತ್ರವ' ಎಂಬ ಪದವು ಸದ್ಗುರುಗಳು ಅನುಗ್ರಹಿಸಿದ ನಾಮಮಂತ್ರವನ್ನು ಪ್ರೀತಿಯಿಂದಲೂ ಭಕ್ತಿಯಿಂದಲೂ ಜಪಿಸುವ ಮಹತ್ವವನ್ನು ಎತ್ತಿ ತೋರಿಸುವುದು. ಅದರಿಂದ ಭೌತಿಕ ಮತ್ತು ಪಾರಮಾರ್ಥಿಕ ಸುಖವು ಲಭಿಸುವುದೆಂದು ಕವಿಗಳು ಹೇಳುವರು. ಇದೇ ಸಂದರ್ಭದಲ್ಲಿ ಅವರು ಭಗವಂತನ ಶಿವನ-(?) ನಾಮದ ಬೇರೆ ಬೇರೆ ಅಕ್ಷರ ಸಂಯೋಗಗಳ ದಾರ್ಶನಿಕ ಹಾಗೂ ಅನುಭಾವ ವಿಷಯಕ ಗರ್ಭಿತಾರ್ಥವನ್ನು ಬೆಳಿಸಿ ಹೇಳಿರುವರು. ನಾವು 'ಓಂ' ಎಂಬ ಏಕಾಕ್ಷರದ ಅಮರ ಮಂತ್ರವನ್ನು ಸಂತತವಾಗಿ, ಮುಂಡಕೋಪನಿಷತ್ತಿನಲ್ಲಿ ಅರುಹಲಾದ 'ತೈಜಸ್' ಎಂಬ ರೂಪದಲ್ಲಿ ನೆನೆದರೆ, ನಾವು ಆ ಮಂತ್ರವನ್ನು ಬೆಳಕಿನ ಹೊನಲಲ್ಲಿ ಕಾಣಬಹುದು. ನಡುವೆ ಶೂನ್ಯವುಳ್ಳ-ಅನುಸ್ವಾರವುಳ್ಳ-ಎರಡಕ್ಷರಗಳ ಮಂತ್ರಗಳು-ಸಾಂಬ, ಹಂಸ, ಇಲ್ಲವೆ ಶಂಭು-ಇರಬಹುದು (ಇವುಗಳಲ್ಲಿ ಮೊದಲನೆಯದನ್ನು ಆರಿಸಬಹುದು ಯಾಕಂದರೆ ಅದು ಶಿವನ ನಾಮವಿರುವುದು.) ಇಂಥ ಎರಡಕ್ಷರಗಳ ಮಂತ್ರವನ್ನು ದೃಢವಾಗಿ ಹಿಡಿದು, ಅದನ್ನು ಏಕಾಗ್ರತೆಯಿಂದ ಆತ್ಮನಲ್ಲಿ ನಿಲ್ಲಿಸಬೇಕು. ಅಲ್ಲಿಯೆ ಅದು ನಿತ್ಯವಾಗಿ ಪ್ರವಹಿಸುವಂತೆ ಮಾಡಬೇಕು. ನೀವು 'ಶಂಕರ' ಎಂಬ ಮೂರಕ್ಷರಗಳ ಮಂತ್ರವನ್ನು ನೆನೆದರೆ, ನಿಮ್ಮ ಪಾತಕಗಳೆಲ್ಲ ಅಳಿಯುವವು; ಮತ್ತು ಆ ನಾಮವೇ ಸೂಚಿಸುವಂತೆ, ಅದು ನಿಮಗೆ ಜೀವನದಲ್ಲಿ ಎಲ್ಲ ಬಗೆಯ ಕಲ್ಯಾಣವನ್ನು ದಯಪಾಲಿಸುವುದು ಎಂದು ಕವಿಯು ಹೇಳುವನು. ಅಂಥ ಇಂಥ ಮಂತ್ರಗಳ ಗೋಜಿಗೆ ಹೋಗದೆ, ನೀವು ನಾಲ್ಕಕ್ಷರಗಳ ಮಂತ್ರವನ್ನು ಜಪಿಸಿರಿ. ನಿಮ್ಮ ಗುರುಗಳು ಶೈವ ಇಲವೆ ವೈಷ್ಣವರಿದ್ದರೆ, ಅವನು ಸದಾಶಿವ ಇಲ್ಲವೆ ನಾರಾಯಣ ಎಂಬ ಮಂತ್ರವನ್ನು ನಿಮಗೆ ಅನುಗ್ರಹಿಸಿರಬಹುದು. ಇವುಗಳಲ್ಲಿ ಒಂದನ್ನು ನೆನೆದರೆ ನಿಮ್ಮ ಪಾರಮಾರ್ಥಿಕ ಆಕಾಂಕ್ಷೆಗಳೆಲ್ಲ ಫಲಿಸುವವು. ನೀವು ಐದಕ್ಷರಗಳ ನಾಮಮಂತ್ರವನ್ನು ನೆನೆದರೆ ನೀವು ಪಡೆಯಬಯಸುವ ಪರತಮ ಸತ್ಯವು ನಿಮಗೆ ಖಂಡಿತವಾಗಿ ದೊರೆತೇ ದೊರೆಯುವುದು. ಅದರಿಂದ ನಿಮಗೆ 'ಅಹುದು ಅಹುದು ಎನಿಸುವುದು' ಎಂದು ಶಿಶುನಾಳಧೀಶರು ಹೇಳುವರು. ಶ್ರೀ ಉಮದಿ ಮಹಾರಾಜರೂ ಕೂಡ ತಮ್ಮ ಇಂಥ ಅನುಭವವನ್ನು 'ಹೌಂದ ಹೌಂದ ಆಗಿ ಹೋಗತದ' ಎಂಬ ಅರ್ಥವತ್ತಾದ ಶಬ್ದಗಳಿಂದ ಬಣ್ಣಿಸಿರುವರು. ಇದೊಂದು ಎಪಿಕ್ಯೂರಿಯನ್ ದಾರ್ಶನಿಕರ ಒಂದು ಬಗೆಯ 'ಪುಷ್ಟೀಕರಣ'ವೇ ಸರಿ.

'ಮಾತು ಮಾತಿಗೆ ಶಂಕರಾ!' ಎಂಬ ಮುಂದಿನ ಪದವನ್ನು ರಚಿಸಿದ ಕವಿಯು 'ಮಹಾಲಿಂಗರಂಗ.' ಈ ಕವನವು ದುಃಖಮಯ ಜೀವನದಿಂದ ಬಿಡುಗಡೆಯನ್ನು ಮಾಡಿಕೊಳ್ಳಲು ನಮಗೆ ನೆರವಾಗುವ ಧ್ಯಾನ ಪದ್ಧತಿಯನ್ನು ವಿವರಿಸುವುದು. ಪೂರ್ವ-ಪಶ್ಚಿಮಗಳ ಹಿರಿಯ ಸಂತರು ಅರುಹಿರುವ ಒಂದೇ ಒಂದಾದ ಸಾಧನ ವೆಂದರೆ, ಭಗವಂತನ ನಾಮದ ನೆನಹು. ಅದೆಂತಹದಿರಬೇಕು, ಅದನ್ನು ಸದ್ಗುರುಗಳು ಹೇಗೆ ಅನುಗ್ರಹಿಸಬೇಕು, ಅದರ ವಿವರಗಳಾವವು. ಪರಿಣಾಮಗಳೇನು ಇತ್ಯಾದಿ ವಿಷಯಗಳನ್ನು ನಾವಿಲ್ಲಿ ವಿವರಿಸಲಿರುವುದಿಲ್ಲ. ಜೀವನದಲ್ಲಿಯ ಸುಖಮಯ ದುಃಖಮಯ ಎಲ್ಲ ಅವಸ್ಥೆಗಳಲ್ಲಿ ನಾವದನ್ನು ನೆನೆಯಬೇಕೆಂದು ಕವಿ ಮಹಾಲಿಂಗರಂಗರು ಹೇಳಿರುವರು. ಈ ವಿಷಯವನ್ನಷ್ಟೇ ನಾವು ಈಗ ಅರುಹ ಲಿರುವೆವು. "ಎಲ್ಲ ದೈಹಿಕ, ಮಾನಸಿಕ, ಪ್ರಾಸಂಗಿಕ ಅವಸ್ಥೆಗಳಲ್ಲಿ ನೀನು ಭಗವಂತನ ನಾಮವನ್ನೇಕೆ ಉಚ್ಚರಿಸುವುದಿಲ್ಲ?" ಎಂದು ಕವಿಯು ಕೇಳುವನು. ಭಗವಂತನ ನಾಮವು ತ್ರಿವಿಧ ತಾಪಗಳನ್ನು ಅಳಿಸುವುದು. 'ಜ್ಯೋತಿಸಂಗದಿ ಉರಿದು ಹೋಗುವ ಕರ್ಪೂರದಂತೆ ಪಾತಕರಾಶಿಯು ಉರಿದುಹೋಗುವುದು.' ಅನ್ನ ಉದಕ ಸೇವಿಸು ವಾಗ, ಮಲಗಿದಾಗ, ಎಚ್ಚರಿದ್ದಾಗ, ನಾವು ಭಗವಂತನ ನಾಮವನ್ನು ನೆನೆಯಬೇಕು. ಈ ರೀತಿ, ಎಲ್ಲ ಕಾಲದಲ್ಲಿ ನಾವು ನಮ್ಮ ಮನಸ್ಸನ್ನು ಸಂತತವಾಗಿ ಭಗವಂತನ ನಾಮದ ಮೇಲೆ ಏಕಾಗ್ರಗೊಳಿಸಬೇಕು. ನಾವು ಆನೆಯ ಮೇಲೆ ಇಲ್ಲವೆ ಪಲ್ಲಕ್ಕಿಯಲ್ಲಿ ಕುಳಿತಾಗ, ಇಲ್ಲವೇ ತೇಗುವಾಗ ಹಾಗೂ ಆಕಳಿಸುವಾಗ ಕೂಡ ಭಗವಂತನ ನಾಮವನ್ನು ನೆನೆಯಬೇಕೆಂದು ಜಗನ್ನಾಥದಾಸರು ಹೇಳುವರು. 'ಛಳಿಜ್ವರ, ಕೆಮ್ಮು, ಉಬ್ಬಸರೋಗ ಬಂದಾಗಲೂ, ಬಿಸಜಾಕ್ಷಿಯೊಡನೆ ಒಲಿದು ಮಾತಾಡುವಾಗಲೂ ನೀವು ದಿವ್ಯ ನಾಮವನ್ನು ನೆನೆಯಬೇಕಯ್ಯ! ನೀವು ಭಗವಂತನ ನೆನವಿಲ್ಲದೆ ಒಂದರಗಳಿಗೆಯನ್ನೂ ವ್ಯರ್ಥ ಕಳೆಯಬಾರದು' ಎಂದು ಕವಿಗಳು ಬೋಧಿಸಿರುವರು. ಅದೇ ಮೇರೆಗೆ, ಮನುಜನ ಜೀವನದಲ್ಲಿ ಕೆಲ ಕಠಿನ ಪ್ರಸಂಗಗಳು ಒದಗುವವು. ಆಗ ಭಗವಂತನ ನಾಮವೊಂದೇ ಅವನಿಗೆ ಆಶ್ರಯ ಸ್ಥಾನವಾಗುವುದು. ಆದುದರಿಂದ 'ಅಂಥ ಸಮಯದಲ್ಲಿ, ಉದಾಹರಣಾರ್ಥವಾಗಿ ಬೆಟ್ಟವನೇರುವಾಗ, ಕಾಲೂರಿದಲ್ಲಿ ಥಟ್ಟನೆ ಬೀಳುವಾಗ, ಮಳೆಗಾಳಿಯಲ್ಲಿ ಸಿಡಿಲಿನ ಆರ್ಭಟದಲ್ಲಿ ನಿಂತಾಗ, ಅಯ್ಯ ಮನವೇ! ಭಗವಂತನನ್ನು ನೆನೆಕಂಡ್ಯಾ! ಸುಲಿವ ಕಳ್ಳರು ಬಂದಾಗ, ಘೋರ ಅರಣ್ಯದಲ್ಲಿ ವ್ಯಾಘ್ರವು ನಿನ್ನ ದೇಹವನ್ನು ಹರಿಯುವಾಗ, ಮತ್ತು ಬೇರೆಲ್ಲ ಸಂಭಾವ್ಯ ಸಂಕಟಗಳಲ್ಲಿ ಗುರುವೆ! ಗುರುವೇ! ಕಲ್ಪತರುವೆ! ಪಾಲಿಸು! ಎಂದು ಪ್ರಾರ್ಥಿಸಯ್ಯ ಮನವೇ!' ಎಂಬುದಾಗಿ ಅವರು ತಮ್ಮ ಮನಸ್ಸಿಗೆ ಬಿನ್ನವಿಸಿರುವರು.

ಈ ಕವನವು ನನ್ನ ಜೀವನದಲ್ಲಿಯ ಎರಡು ಪ್ರಸಂಗಗಳಿಗೆ ಸಂಬಂಧಿಸಿರುವುದು. ಅವನ್ನೀಗ ಅರುಹಬಯಸುವೆ. ಮೊದಲನೆಯ ಸಲ, ನಾನೀ ಕವನವನ್ನು ನನ್ನ

ಪರಾತ್ಪರ ಗುರುಗಳಾದ ಶ್ರೀ ನಿಂಬರಗಿ ಮಹಾರಾಜರವರ ಮನೆಯಲ್ಲಿ ಕೇಳಿದೆನು. ಅದೇ ಸಮಯಕ್ಕೆ ಒಂದು ಸಿಡಿಲು ಆ ಮನೆಗೆ ಎರಗಿ, ಅದರ ಒಂದು ಗೋಡೆಯನ್ನು ಕೆಡಹಿತು. ಅದೇ ಮೇರೆಗೆ ಹೋದ ವರುಷ ನಿಂಬಾಳದಲ್ಲಿಯ ನನ್ನ ಮನೆಯ ಮೇಲೆ ಸಿಡಿಲು ಬಿದ್ದು, ಅದರ ಮೇಲಿನ ಗೋಡೆಗೆ ಎರಗಿ, ಅದರ ಮೊಗಸಾಲೆಯೊಳಗಿಂದಲೂ, ಕೋಣೆಯೊಳಗಿಂದಲೂ ಹಾದುಹೋಯಿತು. ಆದರೆ ಭಗವಂತನ ಕರುಣದಿಂದ ಯಾರಿಗೂ ಯಾವ ಬಗೆಯ ಅಪಾಯವೂ ಆಗಲಿಲ್ಲ. ಎಷ್ಟೋ ವರುಷಗಳ ಪೂರ್ವದಲ್ಲಿ ನಿಂಬರಗಿಯಲ್ಲಿ ಆ ಪದವನ್ನು ಹಾಡಿದ ವ್ಯಕ್ತಿಯೇ ಅಂದು ನಿಂಬಾಳದಲ್ಲಿ ಅದನ್ನು ಹಾಡಿದುದು ಒಂದು ಅರ್ಥಪೂರ್ಣವಾದ ಸಹಘಟನೆಯಲ್ಲವೇ?

ಇದರ ಮುಂದಿನ ಪದವಾದ 'ನಿನ್ನ ನಿಜವ ನೀ ನೋಡೋ' ಎಂಬುದು ನೀರಲಕೇರಿ ಸಂತರ ಪದವು. ಅವರು ನಮ್ಮ ನಿಜವಾದ ಆತ್ಮನ ಪಾರಮಾರ್ಥಿಕ ಸ್ವರೂಪದ ಬಗೆಗೆ ಯಾವ ಬಗೆಯ ಸಂದೇಹವನ್ನು ತಳೆಯದೆ ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ನಮ್ಮನ್ನು ಪ್ರಚೋದಿಸಿರುವರು. "ನೀವು ನಿಮ್ಮ ತನುವಿನ ಅರಿವನ್ನು ಮರೆದು, ಘನವಾದ ಪರಮಾನಂದದಲ್ಲಿ ಬೆರೆದು, ಜನನ ಮರಣದ ಭಯವನ್ನೆಲ್ಲ ತೊರೆದು ಪರಬ್ರಹ್ಮನಲ್ಲಿ ಒಂದಾಗಿರಯ್ಯ! ಈವರೆಗೆ ನೀವು ಮರಳಿ ಮರಳಿ ಹುಟ್ಟಿ ಮರೆವಿಗೆ ಮೈಕೊಟ್ಟಿರಿ. ಆದುದರಿಂದ ಇನ್ನಾದರೂ ಗರಿಗಟ್ಟಿ ಶರಣರೊಳಾಡಿರಿ! ಅನುಭವ ಪಡೆಯಿರಿ!" ಎಂದು ಕವಿಯು ಬೋಧಿಸುವನು. ಇಲ್ಲಿ 'ಗರಿಗಟ್ಟು' ಎಂದರೆ, ರುಮಾಲಿನ ಅಗ್ರದಲ್ಲಿ ಗರಿಗಳನ್ನು ಇರಿಸು. ಓರ್ವ ಹಿಂದೀ ಕವಿಯು ಹೇಳಿದ ಮೇರೆಗೆ, 'ಧರ ಪಗಡೀ ಮೇ ಫೂಲ'– 'ಟೊಪ್ಪಿಗೆಯಲ್ಲಿ ಹೂವನ್ನಿಡು' ಅಂದರೆ, ಹಿರಿಯ ಸಂತರ ಶಿಷ್ಯರಾದುದಕ್ಕಾಗಿ ಅಭಿಮಾನವನ್ನು ತಳೆ. 'ಗರಿಗಟ್ಟು' ಎಂಬುದು ನವಿಲಿನಂತೆ ತುಂಬ ಆನಂದದಿಂದ ಗರಿಗಳನ್ನು ಪಸರಿಸು ಎಂಬರ್ಥವನ್ನು ತಳೆಯಬಲ್ಲದು. ಮರಿಪಕ್ಕಿಯು ಹೊಸದಾಗಿ ರೆಕ್ಕೆಗಳನ್ನು ಪಡೆದಾಗ, ಅದಕ್ಕೆ ಒಂದು ವಿಶೇಷವಾದ ಆನಂದಾನುಭವವು ಲಭಿಸುವುದುಂಟು. ಆ ಬಗೆಯ ಆನಂದದಿಂದ ನೀವು ಶರಣರೊಡನೆ ಆಡಿರಿ! ಎಂಬುದು ಕವಿಯ ಹೇಳಿಕೆ. ಅವನು ಮತ್ತೂ ಹೇಳುವುದೇನೆಂದರೆ: "ನೀವು ನೀರಲಕೇರಿ ಒಡೆಯನಿಂದ ಪಡೆದ ಪಂಚಾಕ್ಷರೀ ಮಂತ್ರವನ್ನು ಉಚ್ಚರಿಸಿರಿ. ಅದರ ಫಲವಾಗಿ ಒಡೆಯನನ್ನು ಒಲಿಸಿಕೊಂಡು, ಆತನ ಕರುಣವನ್ನು ಪಡೆದು ಆತನಲ್ಲಿ ಕೂಡಬೇಕು; ಮತ್ತು ಈ ಏಕಮೇವ ಸಾಧನದಿಂದಲೇ ಜಾಗತಿಕ ಜೀವನವನ್ನು ಸಂಸಾರ ಸಾಗರವನ್ನು ದಾಟಬೇಕು" ಎಂದು ಅವರು ಉಪದೇಶಿಸಿರುವರು.

■■

ಪ್ರಕರಣ ಹದಿಮೂರು

ಭಗವಂತನ ನಾಮ- (ಭಾಗ ೨)

ಈ ಪ್ರಕರಣದಲ್ಲಿ ನಾವು ಭಗವಂತನ ನಾಮವನ್ನು ಕುರಿತು ಬೇರೆ ಕೆಲ ವಿಷಯಗಳನ್ನು ವಿವರಿಸುವೆವು. ನಾವು ಪುರಂದರದಾಸರ 'ಹರಿ ನಾರಾಯಣ ಗುರು ನಾರಾಯಣ' ಎಂಬ ಪದದಿಂದಲೇ ಪ್ರಾರಂಭಿಸುವೆವು. ಅದೊಂದು ಪಾರಮಾರ್ಥಿಕ ಜೀವನಕ್ಕೆ ಅನ್ವಯಿಸುವ ತೋಟಗಾರಿಕೆಯ ರೂಪಕವನ್ನು ಒಳಗೊಂಡಿರುವುದು. ಅದರಲ್ಲಿ 'ನಾರಾಯಣ' ಎಂಬ ನಾಮದ ಬೀಜವು ಮೊಳೆತು, ಬೆಳೆದ ಬಗೆಯನ್ನು ಅಂದವಾಗಿಯೂ, ವಿವರವಾಗಿಯೂ ಬಣ್ಣಿಸಲಾಗಿದೆ. ಮುಂದಿನ ಪದವಾದ- 'ಸುಮ್ಮನೇ ದೊರಕುವುದೇನೊ, ಶ್ರೀರಾಮನ ದಿವ್ಯನಾಮವು' ಎಂಬುದರಲ್ಲಿ ಭಗವಂತನ ನಾಮದ ದುರ್ಲಭತೆಯನ್ನೂ ಅರುಹಲಾಗಿದೆ. ಅದೇ ಕವಿಯ ಇನ್ನೊಂದು ಪದದಲ್ಲಿ ದೇವ ನಾಮವು ಅವಿನಾಶಿಯಾದ ಕಲ್ಲುಸಕ್ಕರೆ ಎಂದು ಬಣ್ಣಿಸಲಾಗಿದೆ. ಬೇರೊಂದರಲ್ಲಿ ಅದನ್ನು ಬೇರೆಬೇರೆ ಔಷಧಗಳೊಡನೆ ಹೋಲಿಸ ಲಾಗಿದೆ; ಮತ್ತು ಅವುಗಳಂತೆ ಈ ನಾಮವು ನಮ್ಮ ರೋಗಗಳನ್ನೆಲ್ಲ ಅಳಿಸುವುದಲ್ಲದೆ, ಜಾಗತಿಕ ಜೀವನದಲ್ಲಿಯ ಕೇಡುಗಳನ್ನೆಲ್ಲ ನಾಶಗೊಳಿಸುವುದೆಂದು ಹೇಳಲಾಗಿದೆ. ತರುವಾಯ ಬಂದ ಅವರ ಪದದ್ವಯದಲ್ಲಿಯ ಮೊದಲನೆಯದರಲ್ಲಿ, ಈ ದಿವ್ಯ ನಾಮವು, ಮರಣಭಯವನ್ನು ಅಳಿಸುವ ಹಾಗೂ ಮಾನವನಿಗೆ ಒದಗುವ ತ್ರಿವಿಧ ತಾಪಗಳನ್ನು ಕಳೆದು, ಅವನ ಮನಸ್ಸನ್ನು ವಿರುದ್ಧಗೊಳಿಸುವ ಒಂದೇ ಒಂದಾದ ಸಾಧನವೆಂದು ಸಾರಲಾಗಿದೆ. ಎರಡನೆಯದರಲ್ಲಿ ಭಗವಂತನ ನಾಮದ ಸಂತತವಾದ ಹಾಗೂ ಭಾವಪೂರ್ಣವಾದ ಸ್ಮರಣೆಯು ಸಾಧಕನಿಗೆ ಶ್ರೇಷ್ಠತಮ ಸಾಕ್ಷಾತ್ಕಾರವನ್ನು ಖಂಡಿತವಾಗಿ ದೊರಕಿಸಿಕೊಡಬಲ್ಲುದು ಎಂದು ಹೇಳಲಾಗಿದೆ. ಆಮೇಲೆ ಬರುವ 'ನೀ ಯಾಕೋ ನಿನ್ನ ಹಂಯಾಕೋ?' ಎಂಬ ಪದದಲ್ಲಿ ಪ್ರಹ್ಲಾದ, ಅಜಮಿಳ, ದ್ರೌಪದಿ, ಧ್ರುವ, ವಾಲ್ಮೀಕಿ ಹಾಗೂ ಗಜೇಂದ್ರ ಇವರ ಉದಾಹರಣೆಗಳನ್ನು ಕೊಟ್ಟು, ಇವರೆಲ್ಲ ಕೇವಲ ನಾಮದ ಬಲದಿಂದಲೇ ಭಗವಂತನನ್ನು ಪಡೆದರೆಂದು ಅರುಹ ಲಾಗಿದೆ. ಅದರ ಮುಂದಿನ 'ಏನ ಸವಿ ಏನ ಸವಿ ಹರಿನಾಮ' ಎಂಬ ಪದವು ಭಗವಂತನ ನಾಮದ ಅವರ್ಣನೀಯ ಮಾಧುರ್ಯವನ್ನು ಕಾಣಿಸುವುದು. ತರುವಾಯ ಬಂದ 'ಕರೆಯದಲೆ ಬಂದಿಹುದು ಹರಿನಾಮ ಕಾಮಧೇನು' ಎಂಬ ಪದವು ಈ ದಿವ್ಯನಾಮವನ್ನು ಪೆಂಪಿನಿಂದ-ಭವ್ಯ ಉದಾತ್ತರೀತಿಯಿಂದ ಬಣ್ಣಿಸು

ವುದು. ಕೊನೆಯ ಎರಡು ಪದಗಳಾದ 'ದಾಸನೆಂದರೆ ಪುರಂದರದಾಸನಯ್ಯ!' ಹಾಗೂ 'ಕೇಳನೋ ಹರಿ ತಾಳನೋ' ಎಂಬುವು ಭಗವಂತನ ಪ್ರಾಪ್ತಿಗಾಗಿ, ಸ್ಮರಣ, ಕೀರ್ತನ ಹಾಗೂ ಪ್ರೇಮಯುತ ಗಾನ ಇವುಗಳ ಆವಶ್ಯಕತೆಯನ್ನೂ, ಮಹತ್ವವನ್ನೂ ಬಣ್ಣಿಸುವವು.

'ಹರಿನಾರಾಯಣ' ಎಂಬ ಪದದಲ್ಲಿ ಬಳಸಲಾದ ತೋಟಗಾರಿಕೆಯ ಪರಂಪರಿತ ರೂಪಕವು, ಒಂದು ಲೋಕಪ್ರಿಯವಾದ ವಿಚಾರ-ವಿವರಣೆಯ ರೀತಿಯಿರುವಂತೆ ಕಾಣುವುದು. ಅದರ ಮುಖಾಂತರ, ವಿಚಾರಪರಂಪರೆಯ ಇಲ್ಲವೆ ದಾರ್ಶನಿಕ ಪದ್ಧತಿಯ ಇಲ್ಲವೆ ವ್ಯಕ್ತಿ ಪಾರಮಾರ್ಥಿಕ ಜೀವನದ ಬೆಳವಣಿಗೆಯಲ್ಲಿಯ ವಿವಿಧ ಅವಸ್ಥೆಗಳನ್ನು ಚೆನ್ನಾಗಿ ಬಣ್ಣಿಸಲಾಗಿದೆ. ಮಧ್ವಾಚಾರ್ಯರ ಇತ್ತೀಚಿನ ಅನುಯಾಯಿಯೋರ್ವನು ಈ ರೂಪಕವನ್ನು ತನ್ನ ಪ್ರಸಿದ್ಧ ಶ್ಲೋಕವೊಂದರಲ್ಲಿ ಉಪಯೋಗಿಸಿರುವನು. ಅದರಲ್ಲಿ ಶ್ರೀ ಮಧ್ವಾಚಾರ್ಯರ ಪ್ರಧಾನ ಶಿಷ್ಯರ ಪ್ರಯತ್ನದ ಫಲವಾಗಿ, ಅವರ ದ್ವೈತಸಿದ್ಧಾಂತದ ಬೆಳವಣಿಗೆಯಲ್ಲಿಯ ವಿವಿಧ ಅವಸ್ಥೆಗಳನ್ನು ವಿವರಿಸಲಾಗಿದೆ. ಆ ಶ್ಲೋಕವನ್ನು ಕೆಳಗೆ ಕಾಣಬಹುದು:

ವ್ಯಾಸೇನ ವ್ಯುಪ್ತಬೀಜಃ, ಶ್ರುತಿ-ಭುವಿ-ಭಗವತ್ಪಾದಲಬ್ಧಾಂಕುರ ಶ್ರೀಃ।
ಪ್ರತ್ನೈರೀಷತ್ಪ್ರಭಿನ್ನೋ, ಜನಿ ಜಯಮುನಿನಾ ಸಮ್ಯಗುದ್ಭಿನ್ನ ಶಾಖಃ॥
ಮೌನೀಶ-ವ್ಯಾಸರಾಜಾತ್,ಉದಿತ-ಕಿಸಲಯಃಪುಷ್ಪಿತೋಽಯಂ ಜಯೀಂದ್ರಾತ್।
ಅದ್ಯಶ್ರೀ ರಾಘವೇಂದ್ರಾತ್, ವಿಲಸತಿ ಫಲಿತೋ ಮಧ್ವಸಿದ್ಧಾಂತಶಾಖೀ॥

'ಹಿರಿಯ ದಾರ್ಶನಿಕರಾದ ವ್ಯಾಸಮುನಿಗಳು ಈ ಸಿದ್ಧಾಂತದ ಜನಕರಿರುವದರಿಂದ, ಅವರು ಅದರ ಬೀಜ ಇಲ್ಲವೆ ಮೂಲವೆಂದು ಬಣ್ಣಿಸಲಾಗಿರುವರು; ಮಧ್ವಾಚಾರ್ಯರು ಅದರ ಅಂಕುರ; ವ್ಯಾಸರಾಯರು ಅದರ ಎಲೆ; ಜಯತೀರ್ಥರು ಅದರ ಹೂವು; ಹಾಗೂ ಶ್ರೀ ರಾಘವೇಂದ್ರರು ಅದರ ಪರಿಪಕ್ವ ಹಣ್ಣು.' ತುಕಾರಾಮರ ಹಾಗೂ ಹಿಂದೀ ಸಂತರ ಅನುಭವ ಪದಗಳಲ್ಲಿಯೂ ನಾವು ಈ ಮಾದರಿಯ ಪರಂರಿತರೂಪಕಗಳನ್ನು ಕಾಣಬಹುದು.

ಹಿರಿಯ ಸಂತರಾದ ಪುರಂದರದಾಸರು ತಮ್ಮ ಮೇಲ್ಕಾಣಿಸಿದ 'ಹರಿನಾರಾಯಣ' ಎಂಬ ಪದದಲ್ಲಿ, ಈ ಪರಂಪರಿತರೂಪಕವನ್ನು ತುಂಬ ಕಾವ್ಯಮಯವಾಗಿ ಬಳಸಿ ಭಗವಂತನ ನಾಮದ ಮಹಿಮೆಯನ್ನು ಚೆನ್ನಾಗಿ ವಿಶದಗೊಳಿಸಿರುವರು. ಪ್ರಾಚೀನ ಕಾಲದಲ್ಲಿ ಎಷ್ಟೋ ಹಿರಿಯ ಭಕ್ತರು ಭಗವಂತನ ಧ್ಯಾನದಲ್ಲಿ ರತರಾಗಿದ್ದರು. ಪ್ರಾಚೀನತಮ ಭಕ್ತಶ್ರೇಷ್ಠರಾದ ನಾರದರು ಧರೆಯೊಳಗೆ ಮಾನವನ ಹೃದಯದಲ್ಲಿ 'ನಾರಾಯಣ' ಎಂಬ ನಾಮದ ಬೀಜವನ್ನು ಬಿತ್ತಿದರು. ಅದು ತರಳ ಧ್ರುವನಲ್ಲಿ ಅಂಕುರಿಸಿತು. ವರ ಪ್ರಹ್ಲಾದನಲ್ಲಿ ಅದು ಮೊಳಕೆಯಾಯಿತು.

ಸಹೃದಯನಾದ ರುಕ್ಮಾಂಗದರಾಜನ ಪ್ರಯತ್ನದ ಫಲವಾಗಿ ಅದು ಚಿಗುರಿ, ಕೋಮಲವಾದ ಎಲೆಗಳನ್ನು ತಳೆಯಿತು. ಕುರುಪಿತಾಮಹರಾದ ಭೀಷ್ಮಾಚಾರ್ಯರ ಅನನ್ಯಭಕ್ತಿಯಿಂದ ಅದಕ್ಕೆ ಹೂವಾಯಿತು. ಹಿರಿಯ ಭಕ್ತಳಾದ ದ್ರೌಪದಿಯಿಂದ ಅದು ಕಾಯಾಯಿತು. ಮುಂದೆ ಗಜೇಂದ್ರನ ಯತ್ನದಿಂದ ಅದು ಚೆನ್ನಾಗಿ ಬೆಳೆದು ಅರೆಪಕ್ವವಾಯಿತು. ಶುಕಮುನಿಯಿಂದ ಅದು ಪೂರ್ಣ ಪಕ್ವವಾದ ಹಣ್ಣಾಯಿತು; ಮತ್ತು ಅದರ ತನಿರಸವನ್ನು ಸವಿಯುವ ಭಾಗ್ಯವು ಅಜಮಿಳನಿಗೆ ಲಭಿಸಿತು. "ಕಾಮಿತ ಫಲವನ್ನು ನೀಡುವ ಇಂಥ ದಿವ್ಯನಾಮವೊಂದಿರಲಿಕ್ಕೆ ಹೋಮ, ನೇಮ, ಜಪ, ತಪಗಳ ಅವಶ್ಯಕತೆಯೇನು? ಆದುದರಿಂದ ಈ ಭಗವಂತನ ನಾಮವನ್ನು ಏಕೋಭಾವದಿಂದ ನೆನೆಯಿರಯ್ಯ!" ಎಂದು ದಾಸರಾಯರು ಬೋಧಿಸಿರುವರು.

ಪುರಂದರದಾಸರ ಎರಡನೆಯ ಪದವಾದ 'ಸುಮ್ಮನೆ ದೊರಕುವದೇನೋ!' ಎಂಬುದರಲ್ಲಿಯ ನಾಲ್ಕು ಮಹತ್ವದ ವಿಷಯಗಳೆಡೆ ನಾನು ನಿಮ್ಮ ಗಮನವನ್ನು ಸೆಳೆಯಬಯಸುವೆ. ಅವುಗಳಲ್ಲಿಯ ಮೊದಲನೆಯದು 'ದಿವ್ಯನಾಮವು'. ಈ ದಿವ್ಯನಾಮವೆಂದರೇನು? ಅದು ಸಾಮಾನ್ಯ ನಾಮಗಳಿಂದ ಯಾವ ಬಗೆಯಾಗಿ ಭಿನ್ನವಾಗಿರುವುದು? ತುಕಾರಾಮರು ಇದನ್ನು ಕುರಿತು ಹೇಳುವುದೇನೆಂದರೆ:

ರಾಮ, ರಾಮ, ರಾಮ, ಅವಘೇಚಿ ಮ್ಹಣತೀ।
ಕೋಣ್ಹೀ ನ ಜಾಣತೀ ಆತ್ಮಾರಾಮ ॥
ರಾಮ ಹಾ ಕಾಲಚಾ ಸುತ ದಶರಥಾಚಾ ।
ಅನಂತ ಯುಗಾಚಾ ಆತ್ಮಾರಾಮ॥
ರಾಮಾಸೀ ಹಾ ರಾಮ ಜರೀ ಠಾವೇ ಅಸತಾ ।
ತರೀ ಕಾ ಶರಣ ಜಾತಾ ವಸಿಷ್ಠಾಸೀ॥

'ರಾಮನಾಮವನ್ನು ಎಲ್ಲರೂ ಯಾಂತ್ರಿಕವಾಗಿ ಉಚ್ಚರಿಸುವರು; ಆದರೆ ಯಾರೂ ಆತ್ಮಾರಾಮನನ್ನು–ಆತ್ಮರೂಪಿಯಾದ ನಿಜವಾದ ರಾಮನನ್ನು ಅರಿಯರು. ರಾಮನೆಂಬ ಹೆಸರಿನ ಇತಿಹಾಸ ಪುರುಷನು ದಶರಥರಾಜನ ಮಗನು. ಅವನು ತೀರ ಇತ್ತೀಚಿನವನು. ಆದರೆ ಆತ್ಮಾರಾಮನು ಅನಂತಯುಗದವನು. ಇತಿಹಾಸ ಪುರುಷನಾದ ರಾಮನು ಈ ಆತ್ಮಾರಾಮನನ್ನು ಅರಿತಿದ್ದರೆ, ಅವನು ಆತನನ್ನು ಸಾಕ್ಷಾತ್ಕರಿಸಿಕೊಳ್ಳಲು ವಸಿಷ್ಠನಿಗೆ ಶರಣುಹೋಗುವ ಅಗತ್ಯವೇನಿತ್ತು? ಆತ್ಮಾರಾಮನ ಅನುಭವಜನ್ಯ ಜ್ಞಾನಕ್ಕಾಗಿ ಈ ಹಿರಿಯ ರಾಮನಿಗೂ ಸದ್ಗುರುಗಳ ನೆರವನ್ನು ಪಡೆಯಬೇಕಾಯಿತು. ಇಂಥ ಆತ್ಮಾರಾಮನ ನಾಮವೇ 'ದಿವ್ಯನಾಮ'ವು ದೇವರ ಪೆಂಪುಳ್ಳನಾಮವು. ಅದನ್ನು ಶ್ರೀ ನಿಂಬರಗಿ ಮಹಾರಾಜರವರು ಸ್ವರ್ಗದಿಂದ ಇಲ್ಲಿಗೆ ತಂದರಂತೆ ಅಂಥ ನಾಮವನ್ನೇ ಸದ್ಗುರುಗಳು ಶಿಷ್ಯರಿಗೆ ಅನುಗ್ರಹಿಸುವರು. ಅದು

ಭಗವಂತನಿಂದ ಸಾಕ್ಷಾತ್ತಾಗಿ ಬರುವುದು; ಮತ್ತು ಅದು 'ಭಗವಂತನ ಚೈತನ್ಯರೂಪ'ವೆಂದೇ ಶಿಷ್ಯನಿಗೆ ನೀಡಲಾಗುವುದು. ಇದನ್ನೇ ಪುರಂದರದಾಸರು 'ದಿವ್ಯನಾಮ'ವೆಂದು ಒತ್ತಿಹೇಳಿರುವರು. ನಾವೀ ದಿವ್ಯನಾಮವನ್ನು ಪಡೆಯಲು ಬಲು ಹೆಚ್ಚಿನ ಬೆಲೆಯನ್ನು ತೆರಬೇಕಾಗುವದೆಂಬುದು ದಾಸರಾಯರು ಈ ಪದದಲ್ಲಿ ಅರುಹಿದ ಎರಡನೆಯ ವಿಷಯ. ನಮಗೆ ಈ ನಾಮವು ದೊರೆಯಬೇಕಾದರೆ ಮುಂದಿನ ಮೂರು ಮಾತುಗಳು ಅವಶ್ಯವಾದವುಗಳು: (೧) ಮೊದಲನೆಯದು ನಿಷ್ಪಾಪತೆ. 'ಜನ್ಮಜನ್ಮಾಂತರದ ದುಷ್ಕರ್ಮ ಅಳಿದವಗಲ್ಲದೆ' ಅನ್ಯರಿಗೆ ಇದು ದೊರೆಯದು ಎಂದು ದಾಸರಾಯರು ಹೇಳಿರುವರು. ನಾವು ಇಂದಿನ ಜನ್ಮದ ಹಾಗೂ ಸಾಧ್ಯವಾದರೆ ಹಿಂದಿನ ಜನ್ಮದ ಪಾತಕಗಳಿಂದ ಮುಕ್ತರಾದೆವು ಎಂದು ನಮಗೆ ಅನಿಸಬೇಕು. ಅದರ ಸಾಕ್ಷಾತ್ ಅನುಭವವನ್ನು ನಾವು ಪಡೆಯಬೇಕು- ನಾವು ಪಾಪವಿಹೀನರಾಗಬೇಕು. ಅಂದರೇನೇ ನಮಗೆ ಭಗವಂತನ 'ದಿವ್ಯನಾಮ'ವು ಲಭಿಸಬಹುದು. ಇದೊಂದು ಮಹತ್ವದ ಸಮಸ್ಯೆಯನ್ನು ನಿರ್ಮಿಸುವುದು. ನಿಷ್ಪಾಪತೆ ಹಾಗೂ ಭಗವದ್ದರ್ಶನ ಇವುಗಳಲ್ಲಿಯ ಸಂಬಂಧವು ಅದೆಂತಹುದು? ನಾವು ನಿಷ್ಪಾಪರಾಗದೆ ಭಗವಂತನ ದರ್ಶನವನ್ನು ಪಡೆಯಲರಿಯೆವು; ಮತ್ತು ಭಗವಂತನ ದರ್ಶನವನ್ನು ಪಡೆಯದೆ ನಿಷ್ಪಾಪರಾಗಲರಿಯೆವು. ಈ ರೀತಿ ಇವು ಪರಸ್ಪರಾವಲಂಬಿಗಳು. ಸಾಧಕನ ದಾರಿಯು ಕತ್ತಿಯ ಮೊನೆಯಂತೆ ಹದನಾದುದಿರುವುದು. ಪರಮಾರ್ಥ ಪಥವು ತುಳಿಯಲು ಅತಿ ಕಠಿಣವಾದುದೆಂದು ಹಿಂದಿನ ಸಂತರು ಸಾರಿರುವರು:

ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ।
ದುರ್ಗಂ ಪಥಸ್ತತ್ಕವಯೋ ವದಂತಿ॥

ಆದುದರಿಂದ ಪಾಪವಿಹೀನತೆಯು ನಾವು ನೆರವೇರಿಸಬೇಕಾದ ಮೊದಲನೆಯ ಆವಶ್ಯಕತೆ ಕರಾರು.

ತರುವಾಯ ನಾವು ಎಲ್ಲ ಬಗೆಯ ಚಿಂತೆ-ಕ್ಲೇಶಗಳಿಂದ ಮುಕ್ತರಾಗಬೇಕು. 'ಚಿಂತೆಯೆಲ್ಲ ಬಿಟ್ಟು ನಿಶ್ಚಿಂತನಾದವಗಲ್ಲದೆ' ಶ್ರೀರಾಮನ ದಿವ್ಯನಾಮ ದೊರೆಯದು ಎಂದು ದಾಸರಾಯರು ಅರುಹುವರು. ಇಲ್ಲಿ 'ನಿಶ್ಚಿಂತ' ಎಂದರೇನು? ನಾವು ಭಗವಂತನ ಸಾಮರ್ಥ್ಯವನ್ನು ನೆಮ್ಮಬೇಕು; ಮತ್ತು ನಮ್ಮ ಅಂತಿಮ ಕಲ್ಯಾಣಕ್ಕಾಗಿ ಅವಶ್ಯವಿರುವ ಎಲ್ಲ ಸಂಗತಿಗಳನ್ನು ಆತನು ನೆರವೇರಿಸುವನು ಎಂಬುದನ್ನು ಅರಿಯಬೇಕು. ನಿಜವಾಗಿ ಅದು ಶ್ರೀಅರವಿಂದರ 'ಸಮರ್ಪಣದ ಸದ್ಗುಣ'ವನ್ನು ಹೋಲುವುದು. ನೀವು ಎಲ್ಲವನ್ನು ಭಗವಂತನಿಗೆ ಒಪ್ಪಿಸದೆ 'ನಿಶ್ಚಿಂತ'ರಾಗಲರಿಯರಿ. ಇದು ಸಾಧಕನು ಪರಮಾರ್ಥ ಪ್ರಾಪ್ತಿಗಾಗಿ ತೆರಬೇಕಾದ ಎರಡನೆಯ ಬೆಲೆ. 'ಭಕ್ತಿರಸ'ವು ಅದಕ್ಕಾಗಿ ನಾವು ನೀಡಬೇಕಾದ ಮೂರನೆಯ ಮೂಲ್ಯ. 'ನಮ್ಮ ಚಿತ್ತವು

ಭಕ್ತಿರಸದಲ್ಲಿ ಪರವಶವಾಗಬೇಕು'. ಅಂದರೇನೇ ನಮಗೆ ಭಗವಂತನ ದರ್ಶನವು ಲಭಿಸಬಹುದು. ಮನುಜನು ಭಗವಂತನನ್ನು ಪಡೆಯಲು ನೀಡಬೇಕಾದ ಬೆಲೆಯ ಸ್ವರೂಪವು ಈ ಬಗೆಯದಿರುವುದು. ಆದುದರಿಂದ ಭಗವತ್ಪ್ರಾಪ್ತಿಯ ಬೆಲೆಯು ತುಂಬ ಹಿರಿದಾದುದೆಂದು ದಾಸರಾಯರು ಹೇಳಿದುದು ತೀರ ಯಥಾರ್ಥ ವಾದುದು. ಭಗವಂತನನ್ನು ಪಡೆಯಬಲ್ಲ ಈ ಬೆಲೆಯೆ 'ಅಂತಃಕರಣದ ದೈನ್ಯ' ವೆಂದು ಕರೆಯಿಸಿಕೊಳ್ಳಲ್ಪಟ್ಟಿದೆ. ಇದಾದ ಮೇಲೆ, ಭಗವಂತನ ದಿವ್ಯನಾಮವನ್ನು ನಾಲಿಗೆಯಿಂದ ನುಡಿಯತಕ್ಕದ್ದಲ್ಲ ಎಂಬುದು ದಾಸರಾಯರು ಒತ್ತಿ ಹೇಳುವ ಇನ್ನೊಂದು ಮಾತು. 'ಅಚ್ಯುತನ ನಾಮವನ್ನು ಬಚ್ಚಿಟ್ಟುಕೊಳ್ಳ'ಬೇಕೆಂಬುದು ಅವರ ಹೇಳಿಕೆಯ ತಿರುಳು. 'ಬಚ್ಚಿಟ್ಟು' ಈ ಶಬ್ದದೊಡನೆ ಪ್ರಾಸಕ್ಕಾಗಿ ದಾಸರು 'ಅಚ್ಯುತ' ಎಂಬ ಶಬ್ದವನ್ನು ಉಪಯೋಗಿಸಿದ್ದರೂ. ಅವರು ಭಗವಂತನ ಬೇರೆ ಬೇರೆ ನಾಮಗಳಲ್ಲಿ ಭೇದವನ್ನು ಮಾಡುತ್ತಿರಲಿಲ್ಲ ಎಂಬುದನ್ನು ನೀವು ಗಮನಿಸಬೇಕು. ಉದಾಹರಣಾರ್ಥವಾಗಿ, ಇದೇ ಪದದಲ್ಲಿ ಅವರು ರಾಮ, ಕೃಷ್ಣ, ಅಚ್ಯುತ, ವಿಠ್ಠಲ– ಈ ನಾಮಗಳನ್ನು ಬಳಸಿರುವರು. ಈ ರೀತಿ ಅವರ ಅಭಿಮತದ ಮೇರೆಗೆ ನಾವು ಯಾವ ನಾಮದಿಂದ ಭಗವಂತನನ್ನು ಕರೆದರೂ ಅಷ್ಟೇ! ಆದರೆ ಆ ನಾಮವನ್ನು ನಾವು ನಿಗೂಢವಾದ ಪಾರಮಾರ್ಥಿಕ ಅಗ್ನಿಯಂತೆ, ನಮ್ಮ ಹೃದಯದಲ್ಲಿ ಇರಿಸಬೇಕು. ಕೊನೆಯದಾಗಿ, ಭಗವಂತನನಾಮದ ಪ್ರಾಪ್ತಿಯೂ, ಆತನ ರೂಪ ದರ್ಶನವೂ ಸಹಭಾವಿಯಾಗಿರುವವು. ಇನ್ನು ಆತನ ರೂಪದರ್ಶನವೆಂದರೇನು? ಈ ಸಂದರ್ಭದಲ್ಲಿ ಈ ಪದದಲ್ಲಿಯ ಎರಡು ಭಿನ್ನ ಪಾಠಗಳನ್ನು ನಾವು ಲಕ್ಷಿಸಬೇಕು. 'ಮೂರುತಿ ತನ್ನೊಳಗೆ ತಾ ತಂದು' ಎಂಬುದು ಒಂದು ಪಾಠ' 'ಮೂರುತಿ ತನ್ನೊಳಗೆ ತಾ ಬಂದು' ಎಂಬುದು ಎರಡನೆಯದು 'ತಂದು' ಎಂಬುದನ್ನು ಶಬ್ದಶಃ ತಿಳಿದರೆ ಮೇಲಿನ ಮೊದಲನೆಯ ಪಾಠದ ಅರ್ಥವು ಈ ಬಗೆಯದಾಗುವುದು: ನಾವು ಧ್ಯಾನ ಮಾಡಲಿರುವ ಭಗವಂತನ ರೂಪವನ್ನು ಕಲ್ಪನೆಯನ್ನು ಬಲದಿಂದ ಕಣ್ಣಿಗೆ ಕಟ್ಟುವಂತೆ ನಿರ್ಮಿಸದೆ ಧ್ಯಾನವು ಸಫಲವಾಗದು. ಆದರೆ ಈ ಪದ್ಧತಿಗೆ ವಿಶೇಷವಾದ ಪಾರಮಾರ್ಥಿಕ ಬೆಲೆ ಇರುವುದಿಲ್ಲ. ಆದುದ ರಿಂದಲೇ ಅದರ ಬದಲು 'ಬಂದು' ಇಲ್ಲವೆ 'ಕಂಡು' ಎಂಬ ಹೆಚ್ಚು ಒಳ್ಳೆಯ ಪಾಠಗಳು ಸೂಚಿಸಲಾಗಿವೆ. ಯಾಕಂದರೆ, ನೀವು ಭಗವಂತನ ರೂಪವನ್ನು ಒಂದು ಬಗೆಯ ಅತೀಂದ್ರಿಯ ರೀತಿಯಿಂದ ಕಾಣಬಲ್ಲವರಾಗಬೇಕು. ಅದೇ ನಿಜವಾದ ದರ್ಶನ. ಅದೊಂದು ಅತೀಂದ್ರಿಯಅನುಭವ. ಅದು ಕಣ್ಣಿಲ್ಲದೆ ಕಾಣುವ, ಕಿವಿಯಿಲ್ಲದೆ ಕೇಳುವ ಅನುಭವ. ನಾನೀಗ ಅವರ ವಿವರಗಳಲ್ಲಿ ಸೇರಬಯಸುವುದಿಲ್ಲ. ನೀವು ಇಂಥ ಅನು ಭವ ವನ್ನು ನಿಮ್ಮಂತರಂಗದಲ್ಲಿ ಪಡೆಯಬಲ್ಲವ ರಾದಾಗಲೇ ನಿಮಗೆ ಭಗವಂತನ ನಿಜವಾದ ರೂಪವು ಕಾಣುವುದು ಹಾಗೂ ಆತನ ದಿವ್ಯ ನಾಮವು ಲಭಿಸುವುದು.

ಪುರಂದರದಾಸರು ತಮ್ಮ 'ಕಲ್ಲು ಸಕ್ಕರೆ ಕೊಳ್ಳಿರೋ' ಎಂಬ ಬೇರೊಂದು ಪದದಲ್ಲಿ ಫುಲ್ಲಲೋಚನನಾದ ಶ್ರೀಕೃಷ್ಣನ ಇಂಥ ನಾಮವನ್ನು ಅವಿನಾಶಿಯಾದ ಕಲ್ಲುಸಕ್ಕರೆ ಎಂದು ಬಗೆದುದು ತುಂಬ ಯಥಾರ್ಥವಾದುದು. ಇಂಥ ಕಲ್ಲುಸಕ್ಕರೆ ಯನ್ನು ಕೊಳ್ಳಿರಯ್ಯಾ! ಯಾಕಂದರೆ ಇದನ್ನು ಎಷ್ಟು ಒಯ್ದರೂ ಇದಕ್ಕೆ ಬೆಲೆಯನ್ನು ಕೊಡಬೇಕಾಗುವುದಿಲ್ಲ. ಇದನ್ನು ಸಂತೆಗೆ ಒಯ್ಯುವ ಶ್ರಮಪಡುವ ಅಗತ್ಯವಿಲ್ಲ. ಇದಕ್ಕೆ ಬಾಡಿಗೆ, ಸುಂಕವನ್ನು ಕೊಡಬೇಕಾಗಿಲ್ಲ. ಇದು ಪ್ರಸಿದ್ಧವಾದ ಪಟ್ಟಣಗಳಲ್ಲಿಯ ಸಂತೆಯಲ್ಲಿ ಇಟ್ಟು ಮಾರುವ ಒಡವೆಯಲ್ಲ. ಇದು ಒತ್ತೊತ್ತಿ ಗೋಣಿಯಲ್ಲಿ ತುಂಬುವಂತಹದಲ್ಲ. ಬಂಡಿಗಳಲ್ಲಿ ಇಲ್ಲವೆ ಎತ್ತುಗಳ ಬೆನ್ನಿನ ಮೇಲೆ ಹೇರಿ ಒಯ್ಯುವಂತಹದಲ್ಲ. ಆದರೂ ಇದಕ್ಕೆ ಬಹಳ ಬೇಡಿಕೆಯುಂಟು; ಮತ್ತು ಭಕ್ತರಿಗಿದು ವಿಪುಳ ಲಾಭವನ್ನು ನೀಡುವುದುಂಟು. ಇದು ನಷ್ಟ ಬೀಳುವುದಲ್ಲ, ನಾತ ಹುಟ್ಟುವುದಲ್ಲ, ಕಟ್ಟಿರುವೆಯು ತಿಂದು ಕಡಿಮೆಯಾಗುವದಲ್ಲ. ಇದು ಪುರಂದರ ವಿಠಲನ ಅನನ್ಯ ಭಕ್ತರ ಹೃದಯದಲ್ಲಿ ಹಾಗೂ ನಾಲಿಗೆಯ ಮೇಲೆ ಸಂತತವಾಗಿ ನೆಲೆಸಿರುವುದು' ಎಂದು ದಾಸರಾಯರು ಹೇಳಿರುವರು. ಈ ಬಗೆಯ ಕಲ್ಪನೆಯನ್ನು ಒಂದು ಹಿಂದೀ ಪದದಲ್ಲಿಯೂ ಅರುಹಲಾಗಿದೆ. ಅದರಲ್ಲಿ ಭಗವಂತನ ನಾಮವನ್ನು ಬೇರೆ ಬೇರೆ ಸವಿಯಾದ ಪಕ್ವಾನ್ನಗಳೊಡನೆ ಹೋಲಿಸಲಾಗಿದೆ. ಪುರಂದರದಾಸರು ತಮ್ಮ ಬೇರೊಂದು ಪದದಲ್ಲಿ, ಭಗವಂತನ ಬೇರೆ ಬೇರೆ ನಾಮಗಳನ್ನು, ಜಾಗತಿಕ ಜೀವನದಲ್ಲಿಯ ಭೀಕರ ಬೇನೆಗಳನ್ನು ನಾಶಗೊಳಿಸುವ ಕೆಲ ಮಹತ್ವದ ಆಯು ರ್ವೇದಿಕ ಔಷಧಗಳೊಡನೆ ಸರಿಹೋಲಿಸಿ ರುವರು. ಉದಾಹರಣಾರ್ಥವಾಗಿ, 'ಸೀತಾಪತಿ' ಎಂಬುದು ದಿವ್ಯ 'ಸಿಂದೂರ', 'ವಾಸುದೇವ' ಎಂಬುದು 'ವಾತ ವಿಧ್ವಂಸನ'; ಹಾಗೂ 'ನಾರಾಯಣ' ಎಂಬುದು 'ತಾಮ್ರಭಸ್ಮ'ವಂತೆ. ಈ ಔಷಧಗಳ ಹಣರೂಪದ ಬೆಲೆಯು ಕಿರಿದು, ಆದರೆ ಇವುಗಳಿಂದ ಭಕ್ತರಿಗೆ ದೊರೆಯುವ ಲಾಭ ಹಿರಿದು. ಈ ಔಷಧಗಳನ್ನು ಸೇವಿಸುವಾಗ ಇಂದ್ರಿಯನಿಗ್ರಹವೊಂದೆ ಕಠೋರವಾಗಿ ಪಾಲಿಸಬೇಕಾದ ಪಥ್ಯ. ಜೀವನ-ಯಜ್ಞವೊಂದೇ ಈ ದಿವ್ಯನಾಮರೂಪಿಯಾದ ಅಮೂಲ್ಯ ಔಷಧಗಳಿಗೆ ಕೊಡಬೇಕಾದ ಬೆಲೆ.

ದಾಸರು ತಮ್ಮ 'ಇನ್ನೇಕೆ ಯಮನ ಬಾಧೆಗಳು' ಎಂಬ ಪದದಲ್ಲಿ ಮುಂದಿನ ವಿಚಾರಗಳನ್ನು ಒತ್ತಿ ಹೇಳಿರುವರು: "ಭಗವಂತನ ನಾಮವನ್ನು ಎಡೆಬಿಡದೆ ನೆನೆ ವವನಿಗೆ ಮರಣದ ಅಂಜಿಕೆಯಿರುವುದಿಲ್ಲ. ಅದು ಪತಿತರೊಳು ಪತಿತರಾದವರನ್ನು ಪಾವನಗೊಳಿಸುವುದು. ಅದು ಕೋಟಿ ಯಜ್ಞಗಳ ಫಲವನ್ನು ನೀಡುವುದು. ಅದು ಅತ್ಯುನ್ನತ ಪಾರಮಾರ್ಥಿಕ ಅನುಭವವನ್ನು ಪಡೆವ ಒಂದೇ ಒಂದಾದ ಸಾಧನವು. ಇದಕ್ಕೆ ಹಿಂದಿನ ಹಿರಿಯ ಭಕುತರೆಲ್ಲ ಸಾಕ್ಷಿಯಾಗಿರುವರು." ತಮ್ಮ 'ಸ್ಮರಣೆಯೊಂದೇ ಸಾಲದೇ?' ಎಂಬ ಪದದಲ್ಲಿ ದಾಸರಾಯರು ಭಗವಂತನ ನಾಮದ ನೆನೆವೊಂದೇ ಆತನನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಕಾಗುವ ಸಾಧನವು ಎಂದು ಆಗ್ರಹಪೂರ್ವಕವಾಗಿ

ಹೇಳಿರುವರು. ಭಗವಂತನು ತನ್ನ ಭಕುತನ ಬುದ್ಧಿಮಾಂದ್ಯವನ್ನು ನೋಡುವುದಿಲ್ಲ. ಅವನ ಕಡು ಪಾಪಪ್ರವೃತ್ತಿಯನ್ನೂ ಲಕ್ಷಿಸುವುದಿಲ್ಲ.. ಭಕುತನು ಎಂಥ ಕೀಳು ಜಾತಿ, ಕುಲ, ವೃತ್ತಿಯವನಿದ್ದರೂ, ಅವನು ಕೇವಲ ಭಗವಂತನಿಗೆ ಸರ್ವಸಮರ್ಪಣ ಮಾಡಿ, ಆತನ ನಾಮವನ್ನು ಸಂತತವಾಗಿ ಶ್ರದ್ಧೆಯಿಂದ ನೆನೆದರೆ, ಅವನು ಭಗವಂತನ ಶ್ರೇಷ್ಠತಮ ಸಾಕ್ಷಾತ್ಕಾರವನ್ನು ಪಡೆಯುವುದು ಖಂಡಿತ ಎಂಬುದು ದಾಸರಾಯರ ಆಶ್ವಾಸನ.

ಪುರಂದರದಾಸರು ತಮ್ಮ 'ನೀ ಯಾಕೋ ನಿನ್ನ ಹಂಗ್ಯಾಕೋ?' ಎಂಬ ಮುಂದಿನ ಪದದಲ್ಲಿ ಭಗವಂತನ ನಾಮವು ಭಗವಂತನಿಗಿಂತಲೂ ಹೆಚ್ಚು ಪ್ರಭಾವ ಶಾಲಿಯಾದುದು ಎಂದು ಅರುಹಿರುವರು. "ಅಯ್ಯ! ಪ್ರಭುವೇ! ನಿನ್ನ ನಾಮವೇ ಜೀವನದಲ್ಲಿಯ ಸಂಕಟಗಳಲ್ಲಿ ಭಕುತರನ್ನು ರಕ್ಷಿಸಲು ಸಮರ್ಥವಿರುವಾಗ, ನಾನು ನಿನ್ನನ್ನೇಕೆ ಲೆಕ್ಕಿಸಬೇಕು? ಕರಿರಾಜನು ಮಕರದಿಂದ ಹಿಡಿಯಲ್ಪಟ್ಟು ನಿನಗೆ ಮೊರೆಯಿಡುವಾಗ, ನಿನ್ನ 'ಆದಿಮೂಲ' ಎಂಬ ನಾಮವೇ ಆತನನ್ನು ಮರಣದಿಂದ ಕಾಯಲಿಲ್ಲವೇ? ಪ್ರಹ್ಲಾನ ಪಿತನು ಆತನನ್ನು ಬಗೆಬಗೆಯಾಗಿ ಹಿಂಸಿಸುತ್ತಿರುವಾಗ 'ನರಹರಿ' ಎಂಬ ನಿನ್ನ ನಾಮವೇ ಆತನನ್ನು ರಕ್ಷಿಸಲಿಲ್ಲವೇ? ಕೌರವ-ಪಾಂಡವರ ಸಭೆಯಲ್ಲಿ, ಯುವತಿಯಾದ ದ್ರೌಪದಿಯ ಸೀರೆಯು ಸೆಳೆಯಲಾದಾಗ, 'ಶ್ರೀಕೃಷ್ಣ' ಎಂಬ ನಿನ್ನ ನಾಮವೇ ಆಕೆಯ ಮರ್ಯಾದೆಯನ್ನು ಉಳಿಸಲಿಲ್ಲವೇ? ಯಮನ ದೂತರು ಆ ಘೋರ ಪಾತಕಿಯಾದ ಅಜಮಿಳನ್ನು ಎಳೆದೊಯ್ಯುತ್ತಿರುವಾಗ 'ನಾರಾಯಣ' ಎಂಬ ನಿನ್ನ ನಾಮವೇ ಆತನನ್ನು ಕಾಯಲಿಲ್ಲವೇ? ಅತಿಯಾಗಿ ಪಾಪಿಯೂ, ಕಾಡ-ಕ್ರೂರ ಕಳ್ಳನೂ ಆದ ವಾಲ್ಮೀಕಿಯು 'ಆ ಮರಾ' 'ಈ ಮರಾ' ಎಂದು ಕೂಗುತ್ತಿರುವಾಗ, ಅದರ ವಿಪರ್ಯಯವಾದ 'ರಾಮ' 'ರಾಮ' ಎಂಬ ನಿನ್ನ ನಾಮವೇ ಆತನಿಗೆ ನೆರವಾಗಿ ಆತನನ್ನು ಉದ್ಧರಿಸಲಿಲ್ಲವೇ? ಹಸುಳೆ ಧ್ರುವರಾಯ ತಪಸ್ಸಿಗಾಗಿ ಕಾಡಿಗೆ ತೆರಳಿದಾಗ 'ವಾಸುದೇವ' ಎಂಬ ನಿನ್ನ ನಾಮವೇ ಆತನನ್ನು ರಕ್ಷಿಸಲಿಲ್ಲವೇ? ಪುರಂದರ ವಿಠ್ಠಲನೇ! ಈ ರೀತಿ ನಿನ್ನ ನಾಮಕೆ ಸರಿ ಕಾಣೆನು ಜಗದೊಳು. ನಿಜವಾಗಿ ನಿನ್ನ ನಾಮವು ನಿನಗಿಂತ ಮಿಗಿಲಾದುದಿರುವುದು ಕಾಣಯ್ಯ!" ಎಂದು ದಾಸರಾಯರು ಹೇಳಿರುವರು. ಈ ಬಗೆಯ ವಿಚಾರಗಳನ್ನೇ ತುಲಸಿದಾಸರು ತಮ್ಮ ಪದಗಳಲ್ಲಿ ಉಸುರಿರುವರು. ನಿಂಬರಗಿ ಮಹಾರಾಜರವರು ತಮ್ಮ 'ಓನಾಮ ಕಾಯುವುದು' ಎಂಬ ಪ್ರಸಿದ್ಧ ಪದದಲ್ಲಿ ಇಂಥ ವಿಚಾರಗಳನ್ನು ವಿಶೇಷವಾಗಿ, ಅರುಹಿರುವರು. ಈ ಸಂದರ್ಭದಲ್ಲಿ ನಿಂಬರಗಿ ಮಹಾರಾಜರವರ ಜೀವನದಲ್ಲಿಯ ಒಂದು ಪ್ರಸಂಗವನ್ನು ಬಣ್ಣಿಸಬಹುದು. ಅವರೊಮ್ಮೆ ಒಂದು ಹಳೆಯ ಬಾವಿಗೆ ಸ್ನಾನಕ್ಕಾಗಿ ಹೋಗಿದ್ದರು. ಅದರಲ್ಲಿ ಇಳಿಯುವ ದಾರಿಯು ಬಲು ಇಕ್ಕಟ್ಟಿನದಿದ್ದಿತು. ತಮ್ಮ ಸ್ನಾನವನ್ನು ತೀರಿಸಿಕೊಂಡು ಅವರು ಮೇಲಕ್ಕೆ ಬರಲು

ಹೊರಟರು. ಅವರು ಒಂದೆರಡು ಹೆಜ್ಜೆ ಮೇಲೆ ಬಂದಿರಬಹುದು. ಅಷ್ಟರಲ್ಲಿ ಒಂದು ಭೀಕರವಾದ ಹಾವು ತನ್ನ ಹೆಡೆಯನ್ನು ಪಸರಿಸಿ, ಪೂತ್ಕರಿಸುತ್ತ ತಮ್ಮೆಡೆ ಬರುತ್ತಿರುವುದನ್ನು ಅವರು ಕಂಡರು. ಈ ರೀತಿ ಅವರು ಒಳ್ಳೆಯ ವಿಷಮ ಸ್ಥಿತಿಯಲ್ಲಿ ಬಿದ್ದರು. ಆಗ ಅವರು ತಮ್ಮ ಕಂಗಳನ್ನು ಮುಚ್ಚಿ ಭಗವಂತನ ನಾಮವನ್ನು ನೆನೆಯಲು ಪ್ರಾರಂಭಿಸಿದರು. ಮುಂದೆ ಕೆಲ ನಿಮಿಷಗಳ ತರುವಾಯ ಅವರು ಕಂಗಳನ್ನು ತೆರೆದಾಗ ಆ ಹಾವು ತೆರಳಿದ್ದನ್ನು ಕಂಡರು. ಈ ಬಗೆಯಾಗಿ ಅವರು ಭಗವಂತನ ನಾಮದ ಬಲದಿಂದ ರಕ್ಷಿಸಲ್ಪಟ್ಟರು. ಅದರ ಫಲವಾಗಿಯೆ ಮೇಲ್ಕಾಣಿಸಿದ ಪದವನ್ನು ರಚಿಸಲು ಸ್ಫೂರ್ತಿಯನ್ನು ಪಡೆದರು.

'ಏನ ಸವಿ ಏನ ಸವಿ ಹರಿನಾಮಾ!' ಎಂಬ ಮುಂದಿನ ಪದವು ಭೀಮದಾಸ ಎಂಬ ಕವಿಯದು. ಇದರಲ್ಲಿ ಕವಿಯು ಕೆಲ ಪೌರಾಣಿಕ ಸಂತರೊಡನೆ ಕೆಲ ಮಹಾರಾಷ್ಟ್ರದ ಹಾಗೂ ಕರ್ನಾಟಕದ ಸಂತರನ್ನು ಉಲ್ಲೇಖಿಸಿರುವನು. "ಹರಿನಾಮವು ಅದೆಂಥ ಸವಿಯಾದುದು! ನಾವು ಅದನ್ನು ಸವಿದಷ್ಟು, ನಮ್ಮ ಸವಿಯುವ ಬಯಕೆ ಬೆಳೆಯುವುದು. ಅದನ್ನು ಸವಿಯುವ ತೃಷ್ಣೆಯು ನಿಜವಾಗಿ ಅತೃಪ್ತವಾಗಿಯೆ ಉಳಿಯುವುದು. ಸಾಮಾನ್ಯ ಜನರು ಅದರ ನಿಜರೂಪ, ಕಾರ್ಯ, ಮರ್ಮ ಮಹಿಮೆಗಳನ್ನು ಅರಿಯಲರಿಯರು. ವಿಷ್ಣುವಿನ ಸಾಸಿರ ನಾಮಗಳಲ್ಲಿ ಅನಂತ ಸಾಮರ್ಥ್ಯವು ನೆಲೆಸಿರುವುದು. ಈ ನಾಮದ ಸವಿಯನ್ನು ವಾಲ್ಮೀಕನು ಉಂಡನು, ನರಹರಿ-ಕನಕರು ಉಂಡರು, ಪಂಢರಿಯ ವಿಠ್ಠಲನ ಹಿರಿಯ ಭಕ್ತನಾದ ಪುಂಡಲೀಕನು ಉಂಡನು. ಆತ್ಮನ ಸವಿಯನ್ನು ಪಡೆದವರಲ್ಲಿ ಪ್ರಾಚೀನ ಸಂತರಾದ ನಾರದ ತುಂಬರರು ಹಾಗೂ ಆರ್ವಾಚೀನ ಸಂತರಾದ ಪುರಂದರದಾಸರು ಗಣ್ಯರು. ಅದೇ ಮೇರೆಗೆ ಹಿಂದಿನ ಸಂತರಾದ ಅಂಬರೀಷ-ದುರ್ವಾಸರೂ, ಇಂದಿನವರಾದ ವ್ಯಾಸರಾಯರೂ ಈ ನಾಮಸುಧೆಯನ್ನು 'ತುಂಬಿಕೊಂಡರು'. ಹರಿಯ ಸ್ಮರಣೆಯಿಂದಲೆ ನಾವು ಮೂರು ಗುಣಗಳನ್ನು ಗೆಲ್ಲಬಹುದೆಂದು ನಾಲ್ಕು ವೇದಗಳು ಸಾರುತ್ತಿರುವವು" ಎಂದು ಪರಮ ಭಕ್ತರಾದ ಭೀಮದಾಸರು ಬೋಧಿಸಿರುವರು. ಉಮದಿ ಮಹಾರಾಜರವರಸನ್ನಿಧಿಯಲ್ಲಿ ಈ ಪದವು ತುಂಬ ಲೋಕಪ್ರಿಯತೆಯನ್ನು ಪಡೆದಿತ್ತು. ಅವರ ಅತ್ಯಂತ ಭಾವಿಕ ಶಿಷ್ಯರಲ್ಲಿ ಒಬ್ಬರಾದ ಸುಂಕದ ಬಾಳಪ್ಪನವರು ಅವರಿಗೆ ಪಿಟೀಲು ಬಾಳಪ್ಪನವರು ಎಂದು ಕರೆಯುವ ವಾಡಿಕೆ- ಈ ಪದವನ್ನು ತಮ್ಮ ಪಿಟೀಲು ವಾದ್ಯದೊಡನೆ ಹಾಡುತ್ತಿದ್ದರು. ನಿಜವಾಗಿ, ಪಿಟೀಲು ಈ ಪದ ಹಾಗೂ ಬಾಳಪ್ಪನವರು ಬಿಡಿಸಲಾಗದಂತೆ ಪರಸ್ಪರ ಹೊಂದಿಕೊಂಡಿದ್ದರು. ಕಾಲಕ್ರಮದಲ್ಲಿ ಅವರ ಪಿಟೀಲು ಜೀರ್ಣವಾಗಿ ಮುರಿದುಹೋದಾಗ, ಅವರು ಅದನ್ನು ಉಮದಿ ಮಹಾರಾಜರವರ ಸಮಾಧಿ ಯೆದುರು ಹೂಳಿಬಿಟ್ಟರು.

ಇದರ ಮುಂದಿನ 'ಕರೆಯದಲೆ ಬಂದಿಹುದು ಹರಿನಾಮ-ಕಾಮಧೇನು' ಎಂಬುದು ಮಹಿಪತಿ-ಸುತರಾದ ಕೃಷ್ಣರಾಯರ ಪದವು. ಇದರಲ್ಲಿ ಭಗವಂತನ ನಾಮವನ್ನು ಕಾಮಧೇನು ಎಂದು ಬಣ್ಣಿಸಲಾಗಿದೆ. ಇದು 'ಕರೆಯದಲೆ ತಾನಾಗಿಯೆ ಬಂದಿಹು'ದಂತೆ. ಇದಕ್ಕೆ ಇನ್ನೊಂದು ಪಾಠವುಂಟು. 'ಕರೆದುಣ್ಣಲಿಲ್ಲ ಹರಿನಾಮ ಕಾಮಧೇನು ಮನುಜಾ!' ಎಂಬುದೇ ಆ ಪಾಠಭೇದವು. ಕರೆಯದಲೆ ಬಂದ ಕಾಮಧೇನುವನ್ನು ಕರೆದುಣ್ಣಬಾರದೇ? ಎಂದು ಕವಿಯು ಕೇಳುವನು. ಈ ಸಂದರ್ಭದಲ್ಲಿ ಸಿದ್ಧಲಿಂಗ ಶರಣರ ಜೀವನದಲ್ಲಿಯ ಮುಂದಿನ ಸನ್ನಿವೇಶವು ತುಂಬ ಸುಸಂಬದ್ಧವಾದುದೂ ಸ್ವಾರಸ್ಯಮಯವಾದುದೂ ಇರುವುದರಿಂದ ಅದನ್ನಿಲ್ಲಿ ಅರುಹುವದು ಅಪ್ರಸ್ತುತವಾಗಲಾರದು. ಸಿದ್ಧಲಿಂಗರು ಮೈಸೂರು ರಾಜ್ಯದಲ್ಲಿಯ ತುಮಕೂರು ಪಟ್ಟಣದ ನೆರೆಯಲ್ಲಿರುವ ಯಡೂರ ಎಂಬ ಗ್ರಾಮದಲ್ಲಿ ವಾಸಿಸಿದ್ದರು. ಅವರು ನೆಲದೊಳಗಿನ ಗವಿಯೊಂದರಲ್ಲಿ ಇರುತ್ತಿದ್ದರಂತೆ. ಆ ವಿಶಿಷ್ಟವಾದ ಸ್ಥಲದ ಮೇಲೆಯೆ ಒಂದು ಆಕಳು ದಿನಾಲು ಬಂದು ಹಾಲನ್ನು ಕರೆಯುತ್ತಿದ್ದಿತು. ಅದರ ಮೂಲಕ, ಅದು ತನ್ನ ಒಡೆಯನಿಗೆ ಸಾಕಷ್ಟು ಹಾಲನ್ನು ಕೊಡುತ್ತಿರಲಿಲ್ಲ. ಅದನ್ನು ಕಂಡ ಒಡೆಯನಿಗೆ ಅದರ ಕಾರಣವು ತಿಳಿಯಲಿಲ್ಲ. ತನ್ನ ಆಕಳಿಗೆ ಏನಾಗಿರುವುದೆಂಬುದನ್ನು ಅರಿಯುವ ಕುತೂಹಲದಿಂದ ಅವನು ಕೆಲದಿನ ಅದನ್ನು ಹಿಂಬಾಲಿಸಿದನು; ಮತ್ತು ಅದು ಒಂದು ವಿಶಿಷ್ಟ ಸ್ಥಲದಲ್ಲಿ ತಾನಾಗಿಯೆ ಹಾಲನ್ನು ಕರೆಯುವುದನ್ನು ಕಂಡನು. ಅದರಿಂದ ಅವನ ಕುತೂಹಲವು ಹೆಚ್ಚಾಗಿಯೆ ಕೆರಳಿ, ಅವನು ಆ ಸ್ಥಲವನ್ನು ಅಗಿದನು. ಆಗವನಿಗೆ ಸಿದ್ಧಲಿಂಗ ಶರಣರು ಕಾಣಿಸಿದರು. ಈ ಪದದಲ್ಲಿಯ ಕರೆಯದಲೆ ಬಂದ ಕಾಮಧೇನು ಈ ಹಸುವಿನ ಮಾದರಿಯದು. "ಅಯ್ಯ! ಮನುಜನೇ! ಈ ನಾಮ-ಕಾಮಧೇನುವನ್ನು ನೀನೇನು ಅರಸಿರಲಿಲ್ಲ. ಅದು ತಾನಾಗಿಯೆ ನಿನ್ನೆಡೆ ಬಂದಿರುವುದು. ನೆನೆವವರನ್ನು ಪೊರೆಯಲು ಅನುವಾಗಿ ಬಂದಿರಲು ನೀನು ಮೈಮರೆತು ಕೊಡಬೇಕೇ? ಮನವೆಂಬ ಕರುವನ್ನು ಬಿಡು, ಘನಭಕುತಿಯ ಮುರವನ್ನಿಡು. ಅದು ಕರುಣದಾ ಕೆಚ್ಚಲು ತೊರೆದು ಭೋರ್ಗರೆಯುತಿದೆ. ಅರುವಿನಾ ಕೈಯಿಂದ ಅದರ ಹಾಲನ್ನು ತನುವಿನಾ ಪಾತ್ರೆಯಲ್ಲಿ ಕರೆದು, ನಿಜಾನಂದದ ಸಿರಿಸುಖವ ಪಡೆಯಯ್ಯ!" ಎಂದು ಕವಿಗಳು ನಮ್ಮೆಲ್ಲರಿಗೆ ಬಿನ್ನವಿಸುವರು.

'ದಾಸರೆಂದರೆ ಪುರಂದರದಾಸನಯ್ಯ!' ಎಂಬುದು ಪುರಂದರದಾಸರ ಸದ್ಗುರುಗಳಾದ ವ್ಯಾಸರಾಯರ ಪದ. ಕೃಷ್ಣ ಎಂಬುದು ಅವರ ಮುದ್ರಿಕೆ. ಇದರಲ್ಲಿ ನಿಜವಾದ ಸಂತರ ಭಾವಯುತ ಹರಿನಾಮಗಾನ ಹಾಗೂ ಸುಳ್ಳು ಸಂತರ ದಾಂಭಿಕ ಹರಿಸ್ಮರಣೆ ಇವುಗಳಲ್ಲಿಯ ವ್ಯತ್ಯಾಸಗಳನ್ನು ಕಾಣಿಸಿ, ಭಾವಪೂರ್ಣವಾಗಿ ಹಾಡಲಾದ ದಿವ್ಯ ನಾಮದ ಮಹತ್ವವನ್ನು ಅರುಹಲಾಗಿದೆ. ಇಲ್ಲಿ ವ್ಯಾಸರಾಯರು ತಮ್ಮ ಶಿಷ್ಯರಾದ

ಪುರಂದರ ದಾಸರನ್ನು ಮನವಾರೆ ಹೊಗಳಿರುವರು. ಸದ್ಗುರುಗಳಿಂದ ದೊರೆತ ಇಂಥ ಹೊಗಳಿಕೆಯನ್ನುಳಿದು, ಶಿಷ್ಯನು ಇದಕ್ಕೂ ಮಿಗಿಲಾದ ಅದಾವ ಸ್ತುತಿಯನ್ನು ಅಪೇಕ್ಷಿಸಬಲ್ಲ? 'ದಾಸನೆಂದರೆ ಭಗವಂತನನ್ನು ಸೂಸಿ ಪೂಜಿಸುವ ಪುರಂದರ ದಾಸನಯ್ಯ!' ಎಂದು ವ್ಯಾಸರಾಯರು ಹೇಳುವರು. ಇಂಥ ನಿಜದಾಸರಿಗೆ ವಿಪರೀತವಾಗಿ, ಹುಸಿದಾಸರು ತುಲಸಿಮಾಲೆಯ ಧರಿಸಿ, ಪರರ ಮನೆಗಳ ಪೊಕ್ಕು, ಬ್ಯಾಸರಿಲ್ಲದೆ, ಅವರಿಗೆ ಕಾಡಿ ಬೇಡಿ ಕಾಸಗಳಿಸುವರು. ದಂಭಾಚಾರಿಗಳಾದ ಅವರು ಸಂಭ್ರಮದಿ ಜನರ ಮುಂದೆ ಹರಿಸ್ಮರಣೆ ಮಾಡುವರು. ತಮ್ಮ ನಾಲಿಗೆಯು ಬಯಸುವ ಮೃಷ್ಟಾನ್ನವನ್ನು ಬೇಡುವರು. ಭಕ್ತಿ-ಆಗಮಗಳನ್ನರಿಯದೆ, ಬರೀ ತಂಬೂರಿ ಮೀಟುವುದರಲ್ಲಿಯೇ ಆನಂದಪಡುವರು. ಭಿಕ್ಷೆಗಾಗಿ ಅತ್ತಿತ್ತ ಅಲೆದಾಡಿ, ವಿಪ್ರರಿಗೆ ಮೃಷ್ಟಾನ್ನದ ಅಂಶವನ್ನೂ ಸಲ್ಲಿಸದೆ, ಎಲ್ಲವನ್ನು ತಾವೇ ಸೇವಿಸುತ್ತ, ಸಂಸಾರದಲ್ಲಿ ಮಮತೆಯನ್ನು ಹೆಚ್ಚಾಗಿಟ್ಟು ಬರೀ ಗಾಯನದಲ್ಲಿಯೆ ರತರಾಗಿರುವರು. ಪಾಠಕನ ತೆರನಂತೆ ಪದಗಳನ್ನು ಬೊಗಳಿ, ಕೂಟ ಜನರ ಮನವ ಸಂತೋಷಪಡಿಸಿ, ಹಣೆಯ ಮೇಲೆ ಗೂಟನಾಮವನ್ನಿಟ್ಟು, ಭಿಕ್ಷೆ ಸಲ್ಲಿಸಲಾದಾಗ ಮರಳಿ ಹೆಚ್ಚಿನದನ್ನು ಪಡೆಯಲು ತೋಟಿ ಮಾಡುವರು. ಇಂಥವರೆಲ್ಲ ಹರಿದಾಸರಾಗಬಲ್ಲರೇ? ಇದರ ಬದಲು, ಪುರಂದರದಾಸರು ನೀತಿಯೆಲ್ಲವನರಿತು, ವಾತಸುತನ ಹೃದಯದಲ್ಲಿ ನೆಲೆಸಿದ ನಿಗಮವೇದ್ಯನಾದ ಭಗವಂತನ ನಾಮ-ಗಾನದಲ್ಲಿಯೆ ನಿರತರಾಗುವರು. (ಇಲ್ಲಿ ಮಧ್ವಾಚಾರ್ಯರು ಪ್ರಾಣದೇವರ ಅವತಾರವೆಂಬುದನ್ನು ನೆನೆಯಬೇಕು.) ಪೂತಾತ್ಮರಾದ ಅವರು ಭಕ್ತಿಪರವಶರಾಗಿ ಗೀತ-ನರ್ತನದಿಂದ ಶ್ರೀಕೃಷ್ಣನನ್ನು ಪೂಜಿಸುವರು. ಆದುದರಿಂದ, ಪುರಂದರದಾಸರನ್ನುಳಿದು 'ಹರಿದಾಸ'ರೆಂದು ಕರೆಯಿಸಿಕೊಳ್ಳಲು ಅದಾರು ಯೋಗ್ಯರು?" ಎಂದು ವ್ಯಾಸರಾಯರು ಪ್ರಬಲರಾಗಿ ಕೇಳುವರು.

ವೈಷ್ಣವ ಸಂತರಲ್ಲಿ ಪುರಂದರದಾಸರು ಆದರ್ಶದಾಸರಿದ್ದಂತೆ ವೀರಶೈವರಲ್ಲಿ ಬಸವಣ್ಣನವರು ಆದರ್ಶಭಕ್ತರು; ಭಕ್ತಿ ಭಾಂಡಾರಿಗಳು. ಕಲ್ಯಾಣದ 'ಅನುಭವ ಮಂಟಪ'ದಲ್ಲಿ ಒಮ್ಮೆ "ಬಸವ ಬಾರಯ್ಯ! ಮರ್ತ್ಯಲೋಕದೊಳಗೆ ಭಕ್ತರುಂಟೇ? ಹೇಳಯ್ಯ!" ಎಂದು ಕೇಳಲಾಗಿ, "ಮತ್ತಾರೂ ಇಲ್ಲಯ್ಯ! ನಾನೊಬ್ಬನೇ ಭಕ್ತನು!" ಎಂದು ಅವರು ಹೇಳಿದರಂತೆ. ಆಗ ಅಲ್ಲಿ ನೆರೆದವರೆಲ್ಲ ರೊಚ್ಚಿಗೆದ್ದು, ಅವರ ಹೇಳಿಕೆಯ ಸತ್ಯತೆಯನ್ನು ಕುರಿತು ಅವರಿಗೆ ಕೇಳಲು ಪ್ರಾರಂಭಿಸಿದರಂತೆ. ಆಗ ಅವರು "ಉಳಿದ ಭಕ್ತರೆಲ್ಲರೂ ಜಂಗಮರು. ನಾನೊಬ್ಬನೇ ಭಕ್ತನು' ಎಂದು ಉತ್ತರಿಸಿದರಂತೆ. ಬಸವಣ್ಣನವರು ಇಲ್ಲಿ ಬಳಸಿದ 'ಭಕ್ತ' ಶಬ್ದಕ್ಕೆ ಎರಡರ್ಥಗಳು: (೧) ದೇವರ ಭಕ್ತ ಹಾಗೂ (೨) ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಷಟ್‌ಸ್ಥಲಗಳಲ್ಲಿಯ ಕನಿಷ್ಠಸ್ಥಲ. ಅದೇ ಮೇರೆಗೆ, ಕನಕದಾಸರೂ ಕೂಡ 'ದಾಸರದಾಸ' ಎಂದು ತಮ್ಮನನು ಕುರಿತು ಆಡಿದ್ದುಂಟು.

ಕೊನೆಯ ಪದವಾದ 'ಕೇಳನೋ ಹರಿ ತಾಲನೋ!' ಎಂಬುದರಲ್ಲಿ ಪುರಂದರದಾಸರು ಗಾನ-ಕೀರ್ತನಗಳೂ, ಭಜನ-ಧ್ಯಾನಗಳೂ ನಾಮಸ್ಮರಣಕ್ಕೆ ನಿಕಟವರ್ತಿಗಳೆಂದು ಹೇಳಿರುವರು. ಭಗವಂತನ ಪ್ರೇಮವೇ ಅತ್ಯುತ್ತಮ ಸಂಗೀತದ ಕುರುಹೆಂದು ಅರುಹಿರುವರು. ಹಿಂದಿನ ಪದದಂತೆ, ಇದರಲ್ಲಿಯೂ ಅವರು ನಾರದ ತುಂಬರರೊಡನೆ ಸರಿಹೋಲಿಸಿದರೆ, ಬೇರೆ ಬೇರೆ ವಾದ್ಯಗಳಿಂದ ಸುಸಜ್ಜಿತರಾದ ಸಂಗೀತಕಾರರು ಬರೀ ದಾಂಭಿಕರು ಎಂದು ಸಾರಿರುವರು. ಭಗವಂತನ ಭಕ್ತಿಯಿಂದ ಕೂಡಿದ ಗೀತದ ತುಲನೆಯಿಂದ, ಬೇರೆ ಬೇರೆ ರಾಗ-ಸ್ವರಗಳಿಗೆ ಬೆಲೆಯೇ ಇರುವುದಿಲ್ಲ. ಭಕ್ತನು ಅನನ್ಯಭಾವದಿಂದ ಭಗವಂತನ ನಾಮಸಂಕೀರ್ತನ ಮಾಡುತ್ತಿರುವಾಗ ಆತನ ಹೃದಯದಲ್ಲಿ ಅಷ್ಟಸಾತ್ವಿಕ ಭಾವಗಳು ಉದಿಸುವವು. ಅಡಿಗಡಿಗೆ ಆನಂದಬಾಷ್ಪ ಪುಲಕಗಳಿಂದ ಕೂಡಿದವನಾಗಿ ಅವನು ನುಡಿನುಡಿಗೆ ಶ್ರೀಹರಿ ಎನ್ನುವನು; ಮತ್ತು ಕೊನೆಗೆ, ಇಂಥ ಆನಂದಭರಿತ ಭಗವಂತನ ನಾಮಸಂಕೀರ್ತನವು, ಭಗವಂತನಿಂದ ಸರಿಯಾದ ಉತ್ತರವನ್ನು-ಫಲವನ್ನು ಪಡೆದೇ ತೀರುವದು.

■■

ಪ್ರಕರಣ ಹದಿನಾಲ್ಕು

ಧ್ಯಾನ-ಪದ್ಧತಿ

ಕನ್ನಡ ಅನುಭಾವಿಗಳು ಹಾಗೂ ಜಗತ್ತಿನ ಬೇರೆ ಅನುಭಾವಿಗಳು ಇವರಲ್ಲಿ ಪಾರಮಾರ್ಥಿಕ ಅನುಭವಗಳ ದೃಷ್ಟಿಯಿಂದ ತುಂಬ ಹೋಲಿಕೆಯಿರುವುದು. ಕನ್ನಡ ಸಂತರು ಬರೆದಿಟ್ಟ ಅನುಭವಗಳು ವಿವರಣದಲ್ಲಿಯೂ, ಸಾಹಿತ್ಯಗುಣದಲ್ಲಿಯೂ ಬೇರೆ ಕಡೆಯ ಸಂತರು ಬರೆದಿಡಲಾದ ಸುಮಾರಾಗಿ ಯಾವುದೇ ಅನುಭವಗಳನ್ನು ಮೀರಿರುವವು. ಈ ಸಂದರ್ಭದಲ್ಲಿ ಒಂದು ಅತಿ ಮಹತ್ವದ ವಿಷಯವಾದ ಧ್ಯಾನ ಪದ್ಧತಿಯನ್ನು ವಿವರಿಸಲಿರುವೆನು. ನಾನಿಲ್ಲಿ ಅದರಲ್ಲಿಯ ಕೆಲ ಮಾತುಗಳನ್ನಷ್ಟೆ ಆರಿಸುವೆ. ಪ್ರಪಂಚದ ಅನುಭಾವದಲ್ಲಿಯ ಇಡಿಯ ಧ್ಯಾನಪದ್ಧತಿಯನ್ನು ವಿವರಿ ಸುವುದು ಸಾಧ್ಯವಿಲ್ಲ. ಕನ್ನಡ ಸಂತರ ಧ್ಯಾನಪದ್ಧತಿಯಲ್ಲಿಯ ಐದಾರು ವಿಷಯ ಗಳನ್ನಷ್ಟೇ ನಾನೀ ಪ್ರಕರಣದಲ್ಲಿ ಚರ್ಚಿಸುವೆನು. ನಾವು ವಿವರಿಸಲಿರುವ ಅವುಗಳ ಲ್ಲಿಯ ಮೊದಲನೆಯ ವಿಷಯವು ಅನುಭಾವದಲ್ಲಿಯ ದೃಷ್ಟಿಯ ಅಗತ್ಯ-ಮಹತ್ವ ಗಳು; ಎರಡನೆಯದು ಏಕಾಗ್ರತೆಯ ಪ್ರಭಾವ; ಮೂರನೆಯದು ಅನುಭಾವಿಗಳಲ್ಲಿ ಹುಟ್ಟಿದ ಹಾಗೂ ಅವರು ಅನುಭವಿಸಿದ ಪಾರಮಾರ್ಥಿಕ ಶಕ್ತಿಯ-ಕುಂಡಲಿನಿಯ- ಮೂಲ್ಯ; ನಾಲ್ಕನೆಯದು ಸಂತ ಪುರಂದರರ ಒಂದು ಪದದಲ್ಲಿಯ ಧ್ಯಾನಪದ್ಧತಿಯ ಅಲ್ಪ ಪರಿಚಯ. ಅವರ ಆ ಅದ್ಭುತವಾದ ಪದವನ್ನು ಮುಂದೆ ವಿವರಿಸಲಿರುವೆನು. ಕೊನೆಯದಾಗಿ, ನಾವು ಇನ್ನೆರಡು ಪದಗಳನ್ನು ವಿವರಿಸುವೆವು. ಒಂದರಲ್ಲಿ ಗುರುಸಿದ್ಧರು ತಾವು ಶ್ರೀಗಿರಿ ಮಲ್ಲಿಕಾರ್ಜುನನನ್ನು ಅಂತರಂಗದಲ್ಲಿ ಕಂಡ ರೀತಿಯನ್ನು ಬಣ್ಣಿಸಿರುವರು. ಇನ್ನೊಂದರಲ್ಲಿ ಕನ್ನಡ ನಾಡಿನ ಹಿರಿಯ ಅನುಭಾವಿ ದಾರ್ಶನಿಕರಾದ ನಿಜಗುಣ ಶಿವಯೋಗಿಗಳು ತಾವು ಉಪಯೋಗಿಸಿದ ಹಾಗೂ ಉಪದೇಶಿಸಿದ ಪದ್ಧತಿಯನ್ನು ಬಣ್ಣಿಸಿರುವರು.

ಇನ್ನು ನಾನು 'ಬಿಲ್ವಪತ್ರಿಯ ಧರಿಸಬೇಕಣ್ಣಾ' ಎಂಬ ಮೊದಲನೆಯ ಪದವನ್ನು ತೆಗೆದುಕೊಳ್ಳುವೆನು. ಈ ಪದವನ್ನು ರಚಿಸಿದ ಕವಿಯ ಹೆಸರು ಗೊತ್ತಿಲ್ಲ. ಕವಿಯು ಈ ಪದದಲ್ಲಿ ಮಾಡಿದ 'ಉರಗಗಿರಿನಿಲಯ'ನ ಉಲ್ಲೇಖವು ಕೆಲವೊಂದು ಸೂಚನೆಯನ್ನು ಸಲ್ಲಿಸುವುದು. ಅದೇ ಆತನ ವಾಸಸ್ಥಲವಿರಬಹುದು. ಪುರಂದರ ದಾಸರು ಶ್ರೀ ವೆಂಕಟೇಶನನ್ನು 'ಉರಗಗಿರಿಯಲಿರ್ಪ' ಎಂದು ಬಣ್ಣಿಸಿರುವರು.

ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡಿದವರು, ಅಲ್ಲಿ ಒಂದು ದೊಡ್ಡ ಪರ್ವತಾವಳಿಯಿರುವದೆಂಬುದನ್ನು ಬಲ್ಲರು. ಅದರ ದಕ್ಷಿಣ ತುದಿಗೆ ವೆಂಕಟಗಿರಿಯೂ ಮಧ್ಯದಲ್ಲಿ ಅಹೋಬಲಗಿರಿಯೂ ಉತ್ತರ ತುದಿಯಲ್ಲಿ ಶ್ರೀಶೈಲವೂ ಇರುವವು. ಈ ಮೂರು ಪರ್ವತಗಳು ಅಂಕುಡೊಂಕಾಗಿರುವ ಮೂಲಕ ಹಾವಿನಂತೆ ಕಾಣುವವು. ಆದುದರಿಂದ ಆ ಇಡೀ ಪರ್ವತಾವಳಿಯನ್ನು 'ಉರಗಗಿರಿ' ಎಂದು ಕರೆಯಲಾಗಿದೆ. ಈ 'ಉರಗಗಿರಿ' ಪರ್ವತಾವಳಿಯಲ್ಲಿ ಶಿವನೂ ವಿಷ್ಣುವೂ ಕೂಡಿಯೆ ವಾಸಿಸುವರು. ಆದುದರಿಂದ ಈ ಕವಿಯು ಈ ಉರಗಗಿರಿಯನ್ನು ಅರಿತವನಿರಬೇಕು. ಈ ಪರ್ವತಾವಳಿಯ ಮೂರು ಸ್ಥಲಗಳಲ್ಲಿ ಮೂರು ಅಂಗಗಳಿರುವವು. ಅವನ್ನು ಕೂಡಿಸಿದರೆ ಒಂದು ತ್ರಿಕೋನವಾಗುವುದು. ಉರಗಗಿರಿಯನ್ನು ಬೆನ್ನು ಮೂಲೆಯಲ್ಲಿಯ ಸರ್ಪವೆಂದೂ-ಕುಂಡಲಿನಿ ಯೆಂದೂ-ಆ ಸರ್ಪದ ಹೆಡೆಯಲ್ಲಿರುವದೆಂದು ಬಗೆಯಲಾದ ರತ್ನವನ್ನು ಚಿತ್ಪ್ರಕಾಶವೆಂದೂ ಮತ್ತು ಅದರ ಬುಸ್ ಎಂಬ ಧ್ವನಿಯನ್ನು ಅನಾಹತನಾದ ವೆಂದೂ ಭಾವಿಸಬಹುದು-ವಿವರಿಸಬಹುದು. ಸರ್ಪವು ನಾಗಸ್ವರದ ಸಂಗೀತವನ್ನು ತುಂಬ ಮೆಚ್ಚುವದು; ಮತ್ತು ಅದರಿಂದ ಮುಗ್ಧವಾಗಿ ಎಷ್ಟೋ ಸಲ ಅದನ್ನು ಬಾರಿಸುವ ಹಾವಾಡಿಗನ ಬುಟ್ಟಿಯಲ್ಲಿ ಅದು ತಾನಾಗಿಯೆ ಸೇರುವದುಂಟು.

ಈ ಪದದಲ್ಲಿ ಕವಿಯು ಹೇಳುವ ಮೊದಲನೆಯ ಮಾತು ಅದಾವುದೆಂದರೆ: ನಾವು ನಮ್ಮ ಬಿಲ್ವಪತ್ರಿಯನ್ನು ಭಗವಂತನ ಅಡಿಗಳ ಮೇಲೆ ಏರಿಸಬೇಕು. ಈ ಬಿಲ್ವಪತ್ರವು ಅದೆಂತಹದು? ಬಿಲ್ವಪತ್ರಕ್ಕೆ ಮೂರು ಎಲೆಗಳಿರುವವು. ಎರಡು ಕಂಗಳೂ ಒಂದು ಮೂಗೂ ಇವೇ ಈ ಬಿಲ್ವಪತ್ರದ ಎಲೆಗಳು. ನಾಸಿಕಾಗ್ರದಲ್ಲಿ ದೃಷ್ಟಿಯನ್ನು ಸ್ಥಿರವಾಗಿ ನಿಲ್ಲಿಸುವುದೇ ಬಿಲ್ವಪತ್ರವನ್ನು ಏರಿಸುವುದು. ಆ ರೀತಿ ಮಾಡಿದರೆ ಏನಾಗುವುದು? ಮೊದಲು ನೀವು ಭಗವಂತನ ಕರುಣವನ್ನು ಪಡೆಯ ಬಲ್ಲವರಾದರೆ, ನಿಮಗೆ ಸುತ್ತಲೂ ಸ್ವಲ್ಪ ಬೆಳಕು ಕಾಣಬಹುದು. ಆದರೆ ನೀವು ಹೆಚ್ಚಿನ ಅಭ್ಯಾಸದಿಂದ ಸಹಸ್ರದಳಕಮಲವನ್ನು ಹತ್ತಿದಿರೆಂದರೆ, ನಿಮಗೆ ಎಲ್ಲೆಡೆ 'ಸಾರಿ ಶಿವನ ಬೆಳಕು ತೋರುವುದು' ಎಂದು ಕವಿಯು ಹೇಳುವನು. ಇದೇ ನಿಮ್ಮ ಧ್ಯಾನದ ಸತ್ಯತೆಯ ಪರಿಣಾಮಕಾರಿಯಾದ ಪ್ರಮಾಣವು. ಇದಾಯಿತು ಜ್ಯೋತಿ ದರ್ಶನದ ವಿಷಯ. ಎರಡನೆಯದಾಗಿ, ನೀವು 'ಭೋರನೆಂಬ ನಾದ'ದಲ್ಲಿ ಮುಳುಗಬೇಕು. ಝುಂಝಾವಾತದ ಪ್ರಚಂಡ ಕೋಲಾಹಲದಲ್ಲಿ ನೀವು ಬೆರೆತುಬಿಡಬೇಕು. ಎಷ್ಟೋ ಸಲ ಅನಾಹತನಾದವು ಮಧುರವಾದುದು ಇರುವುದು. ಆದರೆ ಒಮ್ಮೊಮ್ಮೆ ಅದು 'ಭೋರ'ವಾದುದು, 'ಘೋರ'ವಾದುದು ಇಲ್ಲವೆ ಭಯಂಕರವಾದುದು ಇರಬಹುದು. ಈ ಅನಾಹತನಾದ ಶ್ರವಣವು ಎರಡನೆಯ ವಿಷಯ. ನೀವೆಲ್ಲರೂ ಇದನ್ನು ಅರಿತಿರುವಿರೆಂದು ಬಗೆದು ನಾನೀಗ ಅದರ ವಿವರಗಳಲ್ಲಿ ಸೇರಬಯಸುವದಿಲ್ಲ. ಈ

ಪ್ರಚಂಡ ಅನಾಹತನಾದ ಶ್ರವಣವು ಪಾರಮಾರ್ಥಿಕ ಅನುಭವದ ಸತ್ಯತೆಯ ಇನ್ನೊಂದು ಪ್ರಮಾಣವಾಗಬಹುದು. ಮೂರನೆಯದಾಗಿ, ಈ ತೇಜ-ನಾದಗಳ ಅನುಭವವು ನಿಮಗೆ ಬಂದಾಗ, ದೇವರು ಪ್ರತ್ಯಕ್ಷವಾಗಿ ನಿಮ್ಮೆದುರು ಮೈದಳೆದು ಕಾಣಿಸಿಕೊಳ್ಳಲು ಬಯಸಬಹುದು. ಆದರೆ ಅವನು ಮಿಂಚಿ ಮರೆಯಾಗ ಬಾರದೆಂದು, ನಾವು ಆತನನ್ನು ಮೆಲ್ಲಗೆ, ಸಂತತವಾಗಿ ನೋಡಬೇಕು. ಅವನಿಗೆ ಮರೆಯಾಗಲು ಅವಸರ ಕೊಡಬಾರದು. ಈ ರೀತಿ ನಾವು 'ಸೊಲ್ಲಿನಲ್ಲಿ ಇರುವ ಶಿವನ' ಕಣಸಿನ ಕಾಣ್ಕೆಯನ್ನು ಪಡೆಯಬೇಕು. ಅಂದರೆ, ನೀವು ನೆನೆಯುತ್ತಿರುವ ನಾಮವು ನಿಮಗೆ ತೇಜ-ನಾದವನ್ನೂ, ದೇವರ ರೂಪವನ್ನೂ ದಯಪಾಲಿಸು ವುದು. ಭಗವಂತನ ದರ್ಶನದ ಕೆಲ ಕಾಣ್ಕೆಗಳು ಲಭಿಸಿದವೆಂದರೆ, ನಿಮಗೆ 'ಘೋರ ಪಾತಕ ದೂರವಾದ' ಅನುಭವ ಬರುವುದು. ಅದು ಕೂಡ ನಿಮ್ಮ ಅನುಭವದ ಸತ್ಯತೆಯ ಹೆಚ್ಚಿನ ಪ್ರಮಾಣವೇ ಸರಿ! ಈ ಘೋರ ಪಾತಕಗಳು ಅಳಿಯದೆ, ಅಳಿಯುವ ವರೆಗೆ, ನೀವು ಭಗವಂತನ ಸಾಕ್ಷಾತ್ಕಾರವನ್ನು ಪಡೆಯಲರಿಯಿರಿ. ಈ ಪಾತಕಗಳು ಅಳಿದ ಮೇಲೆ ಏನಾಗುವುದು ಗೊತ್ತೇ? ನೀವು ಹಿರಿಯ ಪಾವಕರಾಗುವಿರಿ. 'ಮರ್ತ್ಯದೊಳು ಚರಿಸುವಂಥ ನಿತ್ಯ ನಿರ್ಮಲರಾಗುವಿರಿ!' ನೀವು ಸ್ವತಃ ನಿರ್ಮಲರಾಗುವಿರಿ. ಅಷ್ಟೇ ಅಲ್ಲದೆ, ಈ ಮರ್ತ್ಯಲೋಕದಲ್ಲಿಯ ಬೇರೆ ಜನರನ್ನು ನಿರ್ಮಲ ಮಾಡುವಿರಿ. ಬಿಲ್ವಪತ್ರದಂತೆ ನಾಸಾಗ್ರದೃಷ್ಟಿಯನ್ನಿರಿಸಿ, ಸಂತತವಾಗಿ ಮಾಡಲಾದ ಭಾವಪೂರ್ಣಧ್ಯಾನದಿಂದ ನಿಮ್ಮಂತರಂಗದಲ್ಲಿ ಆ ಬಗೆಯ ಮನವರಿಕೆಯು ಬೆಳೆಯುವುದು.

ನಾವು ವಿವರಿಸಲಿರುವ ಎರಡನೆಯ ಪದವು ಇನ್ನೊಬ್ಬ ಅಪ್ರಸಿದ್ಧ ಸಂತಕವಿಯದು. ಆದರೆ ಈ ಕವನವು ಬಲು ಅಂದವಾದುದು. ನಾವು ಕವನದ ಹಿರಿಮೆಯನ್ನೇ ಹೆಚ್ಚಾಗಿ ಗಮನಿಸಬೇಕಲ್ಲದೆ, ಕವಿಯ ಹೆಸರನ್ನಲ್ಲ. 'ಗುರಿಯಾ ಒಗೆದೆನೋ ಬ್ರಹ್ಮಕೆ' ಎಂಬುದು 'ನರಸಿಂಹ' ಎಂಬ ಕವಿಯ ಕವನ. ಇದರಲ್ಲಿ ನೀವು ಭಗವಂತನ ಸಾಕ್ಷಾತ್ಕಾರವನ್ನು ಕುರಿತ ಬಿಲ್ಲುಗಾರಿಕೆಯ ಬಣ್ಣನೆಯನ್ನು ಕಾಣಬಹುದು. ಈ ಬಗೆಯ ವಿಚಾರದ ಮೊದಲನೆಯ ಸೂಚನೆಯನ್ನು, ನಾವು ಈ ಮೊದಲು ಅರುಹಿದ ಮೇರೆಗೆ ಉಪನಿಷತ್ ಒಂದರಲ್ಲಿ ಕಾಣುವೆವು. ಅದರಲ್ಲಿ ಕವಿಯು,

ಪ್ರಣವೋ ಧನುಃ ಶರೋ ಹ್ಯಾತ್ಮಾ । ಬ್ರಹ್ಮತಲ್ಲಕ್ಷ್ಯಮುಚ್ಯತೇ।
ಅಪ್ರಮತ್ತೇನ ವೇದ್ಧವ್ಯಂ । ಶರವತ್ತನ್ಮಯೋ ಭವೇತ॥

'ಪ್ರಣವವು ಧನಸ್ಸು, ಆತ್ಮನು ಶರ, ಬ್ರಹ್ಮವು ಲಕ್ಷ್ಯವಿರುವುದು. ಅದನ್ನು ಶುದ್ಧ ಮನಸ್ಸಿನಿಂದ ವೇಧಿಸಿ ಶರದಂತೆ ತನ್ಮಯವಾಗಬೇಕು' ಎಂದು ಹೇಳಿರುವನು. ಅಚಲವಾದ ಮನಸ್ಸಿನಿಂದ ಬ್ರಹ್ಮಕ್ಕೆ ಬಾಣವನ್ನು ಎಸೆ! ಬ್ರಹ್ಮನೆಡೆ ಬಾಣವನ್ನೆಸೆಯು

ವದು ಅದೆಂಥ ಎದೆಗಾರಿಕೆ! ಪ್ರಸ್ತುತ ಕವನದ ಕವಿಯು ಭಗವಂತನಿಗೆ ಬಾಣವನ್ನೆಸೆಯುವ ಅಭ್ಯಾಸವನ್ನು ಅನುಸರಿಸುವನು. ಆದರೆ ಇದನ್ನು ಮಾಡುವಾಗ ಏನಾಗುವುದು ಗೊತ್ತೆ? ನೀವು ಭಗವಂತನ ಮೇಲೆ ಬಾಣಗಳನ್ನು ಎಸೆಯಲು ಯತ್ನಿಸುವಾಗ, ಬಾಣವು ಗುರಿಯನ್ನು ಸೇರುವಂತೆ ನೀವು ಭಗವಂತನಲ್ಲಿ ಲೀನರಾಗುವಿರಿ! ಈ ರೀತಿ ಈ ಕವನದಲ್ಲಿ ಬ್ರಹ್ಮನಿಗೆ ಗುರಿಯನ್ನು ಹೊಡೆಯುವ ಪದ್ಧತಿಯನ್ನು ಒಳಗೊಂಡ ಒಂದು ಅಂದವಾದ ಪರಂರಿತ ರೂಪಕವನ್ನು ನಾವು ಕಾಣಬಹುದು.

ನಾವು ಶಿವಗೀತೆಯಲ್ಲಿಯೂ ಒಂಥ ಅನುಭವಗಳ ಬಣ್ಣನೆಯನ್ನು ಕಾಣಬಹುದು. ಈ ಸುಪ್ರಸಿದ್ಧವಾದ ಶಿವಗೀತೆಯಲ್ಲಿಯ ಮೂರನೆಯ, ನಾಲ್ಕನೆಯ ಹಾಗೂ ಐದನೆಯ ಅಧ್ಯಾಯಗಳನ್ನು ನೀವು ಓದಬೇಕೆಂದು ನಾನು ನಿಮ್ಮನ್ನು ಜಿನ್ನವಿಸುವೆನು. ಅದರಲ್ಲಿ ರಾಮನು ಶಿವನಿಗೆ ಶರಸಂಧಾನ ಮಾಡುವನು, ಮೂರ್ಛೆಗೈಯುವನು, ಹಾಗೂ ನೆಲಕ್ಕೆ ಉರುಳುವನು–ನೆಲದ ಮೇಲೆ ಸಾಷ್ಟಾಂಗವೆರಗುವನು. ಮುಂದೆ ಅವನು ಸಚೇತನವಾದ ಮೇಲೆ ಶಿವನಿಗೆ ಶರಣಾಗತನಾಗುವನು; ಮತ್ತು ಅವನ ವಿಶ್ವರೂಪದರ್ಶನವನ್ನೂ, ಅವನಿಂದ ತನಗೆ ಬೇಕಾದ ಎಲ್ಲ ಜ್ಞಾನವನ್ನೂ ಪಡೆಯುವನು. ಶಿವಗೀತೆಯಲ್ಲಿ ಬಂದ ಈ ಬಣ್ಣನೆಯು ಬೇರೆಡೆಯಲ್ಲಿ ಉದಾಹರಣಾರ್ಥವಾಗಿ ಪ್ರತ್ಯಕ್ಷ ಭಗವದ್ಗೀತೆ ಯಲ್ಲಿಯೂ ಬಂದ ಅಂಥ ಎಲ್ಲ ಬಣ್ಣನೆಗಳನ್ನು ಮೀರುವುದು. ಅರ್ಜುನ–ಕೃಷ್ಣರಲ್ಲಿಯ ಸಂಬಂಧವು, ರಾಮ–ಶಿವರ ಸಂಬಂಧದ ಉನ್ನತ ಭೂಮಿಕೆಯನ್ನು ಪಡೆಯಲರಿಯದು. ರಾಮನು ಒಂದು ಭೀಕರವಾದ ಸಪ್ಪಳವನ್ನು ಕೇಳಿದ ಮೂಲಕ, ಅವನು ಓರ್ವ ರಾಕ್ಷಸನು ತನ್ನ ಮೇಲೆ ದಾಳಿ ಮಾಡಲು ಬಂದನೆಂದು ಬಗೆದು ಶರಸಂಧಾನವನ್ನು ಪ್ರಾರಂಭಿಸಿದನು. ಆದರೆ ಅವನು ಬಾಣಗಳನ್ನು ಎಸೆಯುವುದಾದರೂ ಎಲ್ಲಿ? ಯಾರಿಗೆ? ಆ ಸಪ್ಪಳವು ಸಾಕ್ಷಾತ್ ಶಿವನಿಂದಲೇ ಬಂದಿತ್ತು. ಆದುದರಿಂದ ಅವನು ಎಸೆದ ಬಾಣಗಳು ಅವನೆಡೆಗೆಯೆ ಮರಳಿ ಬಂದವು, ಅವನಿಗೆಯೆ ತಾಗಿದವು; ಮತ್ತು ಅವನು ಮೂರ್ಛೆ ಹೋಗಿ ನೆಲದ ಮೇಲೆ ಬಿದ್ದನು. ಇದು ಶಿವಗೀತೆಯಲ್ಲಿ ಬಂದ ಬಣ್ಣನೆಯು.

ನಮ್ಮ ದೈಹಿಕ ಜೀವನದ ಅರಿವನ್ನು ಕಳೆದುಕೊಳ್ಳುವುದು, ಬ್ರಹ್ಮನಿಗೆ ಮಾಡುವ ಈ ಬಗೆಯ ಶರಸಂಧಾನದ ಮೊದಲನೆಯ ಆವಶ್ಯಕತೆ–ಕರಾರು. ಆರ್ಕಿಮಿಡಿಸ್ ಎಂಬ ಹಿರಿಯ ಸಂಶೋಧಕನು ತನ್ನ ಸ್ನಾನಗೃಹದಲ್ಲಿಯ ಸ್ನಾನದ ಡೋಣಿಯೊಳ ಗಿಂದ ನಗ್ನಸ್ಥಿತಿಯಲ್ಲಿಯೆ 'ಪಡೆದೆ' 'ಪಡೆದೆ' ಎಂದು ಕೂಗುತ್ತ ಹೊರಗೆ ಧಾವಿಸಿ ದನಂತೆ. ಯೋಗಸಾಧನದಲ್ಲಿಯೂ ಅದೇ ಬಗೆಯಾಗಿ ದೈಹಿಕ ಜೀವನದ ಅರಿವು ಅಳಿಯುವಷ್ಟು ಹಿರಿಯ ಪ್ರಗತಿಯನ್ನು ಸಾಧಿಸಬೇಕು. ಇದು ಮೊದಲನೆಯ

ಕರಾರು. ಆ ಮೇಲೆ ನೀವು ನಿಮ್ಮ ದೇಹವನ್ನು ಗುಂಡು ಹಾರಿಸುವ ತುಬಾಕಿಯೆಂದು ಬಗೆಯಬೇಕು. ಕವಿಯು ಆರೂಪಕವನ್ನೆ ಮುಂದುವರಿಸಿ, ಬ್ರಹ್ಮನಿಗೆ ಗುಂಡು ಹೊಡೆಯಲು ದೇಹವನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ಹೇಳುವನು. ಸದ್ಗುರುವಿನ ಅನುಗ್ರಹವೇ ನಾವು ಬಳಸಬೇಕಾದ ಸಿಡಿಮದ್ದು. "ಆ ಸಿಡಿಮದ್ದನ್ನು ಭಕ್ತಿ, ಜ್ಞಾನ, ವೈರಾಗ್ಯವೆಂಬ ಮೂರು ಬೆರಳುಗಳಿಂದ ಶರೀರದಲ್ಲಿ ಹಾಕಿರಿ; ಮತ್ತು ಅದನ್ನು ಇಡಾ-ಪಿಂಗಳಾ ಎಂಬ ನಾಡಿರೂಪಿಯಾದ ಕೊಳವಿಗಳಲ್ಲಿ ತುಂಬಿರಿ. ಹಾಗೂ ಸುಷುಮ್ನೆಯ ಶಲಾಕೆಯಿಂದ ಅದನ್ನು ಜಡಿಯಿರಿ. ಈ ರೀತಿ ಎಲ್ಲ ಸಿದ್ಧತೆಯಾದೊಡನೆ ನೀವು ವೀರಾಸನದಲ್ಲಿ ಕುಳಿತುಕೊಳ್ಳಿರಿ. ತುಬಾಕಿ ಹೊಡೆಯುವವನು ತನ್ನ ತುಬಾಕಿಯನ್ನು ಸ್ವಲ್ಪವೂ ಅಲ್ಲಾಡಗೊಡದಂತೆ, ನೀವು ನಿಮ್ಮ ತನು ತುಬಾಕಿಯನ್ನು ಎಳ್ಳಷ್ಟೂ ತೂಗಾಡಗೊಡಬೇಡಿರಿ." ಪತಂಜಲಿಗಳೂ ಕೂಡ ತಮ್ಮ ಯೋಗಸೂತ್ರಗಳಲ್ಲಿ ಆಸನಸ್ಥೈರ್ಯವನ್ನು ಒತ್ತಿ ಹೇಳಿರುವರು. 'ಸ್ಥಿರ ಸುಖಮಾಸನಮ್'- 'ಸ್ಥಿರವಾದುದೂ ಸುಖಕರವಾದುದೇ ಆಸನವು' ಎಂಬುದು ಅವರ ಹೇಳಿಕೆ. ಅದೇ ಮೇರೆಗೆ, ಭಗವದ್ಗೀತೆಯೂ ಕೂಡ, 'ಸ್ಥಿರಮಾಸನಮಾತ್ಮನಃ' 'ತಮ್ಮ ಆಸನವು ಸ್ಥಿರವಾಗಿರಬೇಕು' ಎಂದು ಬೋಧಿಸುವುದು. ನಿಮ್ಮ ಆಸನವನ್ನು ಬದಲಿಸಬೇಡಿರಿ! ಶಾಂತರಾಗಿ ಕುಳಿತು ಮೇಲಕ್ಕೆ ನೋಡಿರಿ! ಈ ಮೇಲಕ್ಕೆ ನೋಡುವದರ ಅರ್ಥವೇನು? ಆ ಬಗೆಯ ಯೋಗವನ್ನು ಮಾಡುವವರೇ ಅದನ್ನು ಅರಿಯಬಹುದು. ನಿಮ್ಮ ದೃಷ್ಟಿಯನ್ನು ಏಕಾಗ್ರಗೊಳಿಸಿರಿ! ತುಬಾಕಿಯನ್ನು ಅಲೆಯ ಗೊಡದಿರಿ! ಮತ್ತು ಬ್ರಹ್ಮನಿಗೆ ಗುಂಡು ಹೊಡೆಯಿರಿ! ಅಂದರೆ, ಹುಲಿ, ಸಿಂಹ, ಗಂಡಕಗಳೂ ಮತ್ತು ಕಾಮದುರ್ಗುಣ ರೂಪಿಯಾದ ಎಲ್ಲ ಕಾಡ ಪಶುಗಳೂ ತಾವಾಗಿಯೆ ನಾಶಹೊಂದುವವು. ಅವುಗಳಲ್ಲಿ ಕೆಲವು ದಿಕ್ಕಾಪಾಲಾಗಿ ಬೆದರಿ ಓಡಿಹೋಗುವವು, ಬೇರೆ ಕೆಲವು ನೆಲಕ್ಕುರುಳುವವು. ಒಟ್ಟಾರೆ ಎಲ್ಲ ಪ್ರಾಣಿಗಳಲ್ಲಿ ಭೀತಿಯ ಕೋಲಾಹಲವೇ ಉಂಟಾಗುವುದು. ನೀವು ಬ್ರಹ್ಮನಿಗೆ ಗುಂಡು ಹೊಡೆ ದೊಡನೆ, ಆ ಎಲ್ಲ ದುರ್ಗುಣಗಳು ಓಡಿಹೋಗುವವು. ನೀವು ಇದನ್ನು ಮಾಡಿದಿ ರೆಂದರೆ, ಅದು ನಿಮ್ಮ ಪರಮಾತ್ಮನ ಸಾಕ್ಷಾತ್ಕಾರದ ಪ್ರಾರಂಭವೆಂದು ಹೇಳಬಹುದು. ನಾನು ಈ ಮೊದಲು ಹೇಳಿದ ಮೇರೆಗೆ ಇದು ನೈತಿಕ ಸಿದ್ಧತೆ. ಆ ಮೇಲೆ ಸಾಧು ಸಂತರು ಏನನ್ನು ಮಾಡುವರು? ಅವರು 'ಅಹುದು' 'ಅಹುದು' ಎನಬಹುದು. 'ನೀವು ಈ ವಿಕಾರಗಳನ್ನೆಲ್ಲ ಕೊಂದಿರಿ! ಇನ್ನು ನಿಮ್ಮ ಮುಂದಿನ ದಾರಿಯು ತೆರೆದಿರುವುದು' ಎಂದು ಅವರು ಉಸುರಬಹುದು. ಇದೇ ಈ ಪದದಲ್ಲಿ ಆಗ್ರಹಪೂರ್ವಕವಾಗಿ ಅರುಹಲಾದ ಏಕಾಗ್ರತೆಯ ಪದ್ಧತಿಯ ಮಹತ್ವ

ನಾವು ವಿವರಿಸಲಿರುವ 'ಗೊಲ್ಲರೋ ನಾವು ಗೊಲ್ಲರೋ!' ಎಂಬ ಮುಂದಿನ ಕವನವು ಹಾವಾಡಿಗಳನ್ನು ಕುರಿತು ಬರೆಯಲಾದುದು. ನೋಡಿ! ಎಂಥ ವಿಲಕ್ಷಣ

ವಿಷಯಗಳು ಇಲ್ಲಿ ಬಂದಿರುವವು. ಒಂದು ವಿಷಯ ಬಿಲ್ವಪತ್ರ, ಇನ್ನೊಂದು ಬಿಲ್ಲುಗಾರ ಇಲ್ಲವೆ ತುಬಾಕಿಗಾರ, ಬೇರೊಂದು ಹಾವಾಡಿಗ. ಇಂಥ ಕವನಗಳ ಬರಹಗಾರರು ಎಷ್ಟೋ ಸಲ ತಮ್ಮ ವ್ಯಕ್ತಿತ್ವವನ್ನು ತಮ್ಮ ಸದ್ಗುರುಗಳ ಇಲ್ಲವೆ ದೇವರ ವ್ಯಕ್ತಿತ್ವದಲ್ಲಿ ಬೆರೆಯಿಸುವುದು ವಾಡಿಕೆ. ಇಲ್ಲಿ ಕವಿಯು ತನ್ನ ವ್ಯಕ್ತಿತ್ವವನ್ನು 'ಬಲಭೀಮ'ನೆಂಬ ತನ್ನ ಆರಾಧ್ಯದೇವತೆಯಲ್ಲಿ ವಿಲೀನಗೊಳಿಸಿರುವರು. ಈವರೆಗೆ ನಾವು ಧ್ಯಾನ-ಪದ್ಧತಿಯಲ್ಲಿಯ ದೃಷ್ಟಿ ಹಾಗೂ ಏಕಾಗ್ರತೆ ಈ ಎರಡು ಅಂಶಗಳನ್ನು ಕಂಡಿರುವೆವು. ಮೂರನೆಯ ಅತಿ ಮಹತ್ವದ ಅಂಶವು ಮಿದುಳುಬಳ್ಳಿಯ ಚೈತನ್ಯದ ಕುಂಡಲಿನಿಯ ಉಪಯೋಗ. ಈ ಕುಂಡಲಿನಿಯು ಮಿದುಳುಬಳ್ಳಿಯ ನಲಿಕೆಯಲ್ಲಿ ಹರಿಯುವ ಕೇವಲ ಒಂದು ಸಾಮಾನ್ಯ ದ್ರವವೇ ಇರಲರಿಯದು. ಅದು ಪಾರಮಾರ್ಥಿಕ ಚೈತನ್ಯದ ವಾಹಕವೂ ಕೂಡ ಇರಬಲ್ಲದು. ಅರ್ಥಾತ್ ಈ ವಿಷಯದ ಬಗೆಗೆ ಅಂಗರಚನಾಶಾಸ್ತ್ರಜ್ಞರೂ, ಅನುಭಾವಿಗಳೂ ನನಗಿಂತಲೂ ಹೆಚ್ಚು ಒಳ್ಳೆಯ ನಿರ್ಣಯವನ್ನು ಹೇಳಬಲ್ಲರು. ಆದರೆ, ಈ ಚೈತನ್ಯದ ಮೂಲಕವೇ ಮನುಜನು ತನ್ನ ಪಾರಮಾರ್ಥಿಕ ಜೀವನವನ್ನು ನಡೆಯಿಸಬಲ್ಲನು ಎಂಬುದು ಮಾತ್ರ ಸ್ಫುಟವಾದುದು. ಓರ್ವ ಕ್ರಿಸ್ತಮತದ ಅನುಭಾವಿಯು ಹೇಳಿರುವುದೇನೆಂದರೆ: "ಅನುಭಾವಿಯ ಜೀವನಕ್ಕೆ ಅತ್ಯವಶ್ಯವಾದ ಚೈತನ್ಯವು ಎಲ್ಲಿಂದಲೋ ಆತನಿಗೆ ಲಭಿಸುವುದು. ಅದು ಎಲ್ಲಿಂದ ಬರುವದೆಂಬುದು ಮಾತ್ರ ತಿಳಿಯುವುದಿಲ್ಲ." ಈ ಬಗೆಯ ಪಾರಮಾರ್ಥಿಕ ಚೈತನ್ಯವು ಮಿದುಳಿಬಳ್ಳಿಯಲ್ಲಿಯ ದ್ರವದ ಮುಖಾಂತರ ಹರಿದು, ಮಿದುಳಿನ ಕುಹರಗಳಲ್ಲಿ ಸೇರುವುದು. ಈ ಚೈತನ್ಯವು ಅಂತಿಮವಾಗಿ ಭಾರತೀಯ ವೈದ್ಯಶಾಸ್ತ್ರದಲ್ಲಿ 'ಓಜ'ವೆಂದು ಕರೆಯಲಾದ ಶಕ್ತಿಗಿಂತಲೂ ಇಲ್ಲವೆ ಆಧುನಿಕ ಮನೋ-ಭೌತವಿಜ್ಞಾನದಲ್ಲಿಯ ನರಗಳ ವಿದ್ಯುತ್ತಿನ ಶಕ್ತಿಗಿಂತಲೂ ಹಿರಿದು, ಅವನ್ನು ಮೀರುವಂತಹದು. ಇದನ್ನು ನಾವು ಹಿಂದೀ ಸಂತರ 'ಆಮೀರಸ' ವೆಂದೂ ಯಥಾರ್ಥವಾಗಿ ಕರೆಯಬಹುದು.

'ಗೊಲ್ಲರೋ! ನಾವು ಗೊಲ್ಲರು! ಹಾವನ್ನು ಹಿಡಿಯುವುದು ನಮ್ಮ ಕೆಲಸ' ಎಂದು ಕವಿಯು ಹೇಳುವನು. ಸರ್ಪಶಕ್ತಿಯನ್ನು ಕುರಿತು ಎಷ್ಟೋ ಗ್ರಂಥಗಳನ್ನು ಬರೆಯಲಾಗಿವೆ; ಮತ್ತು ಕಾಲ್ಪನಿಕವಾಗಿರಲಿ ಇಲ್ಲವೆ ಬೇರೆ ಅರ್ಥದಲ್ಲಿರಲಿ, 'ಕುಂಡಲಿನಿ'ಶಕ್ತಿಯು ಸರ್ಪವೆಂದು ಬಗೆಯಲಾಗಿದೆ. ಯೋಗ ಹಾಗೂ ತಂತ್ರಗ್ರಂಥಗಳಲ್ಲಿ ಉಲ್ಲೇಖಿಸಲಾದ 'ಕುಂಡಲಿನಿಯು' ಇರುವಳೋ ಇಲ್ಲವೋ ಎಂಬುದನ್ನು ಹೇಳಲು ಬರುವುದಿಲ್ಲ. ಅದೊಂದು ಇಂದ್ರಿಯವಿರಬಹುದು ಇಲ್ಲವೆ ಒಂದು ಕ್ರಿಯೆ-ವ್ಯಾಪಾರ ಇರಬಹುದು. ಈ ಸಮಸ್ಯೆಯಲ್ಲಿ ನಾನೀಗ ಸೇರಬಯಸು ವುದಿಲ್ಲ. 'ಕುಂಡಲಿನಿ' ಎಂಬುದೇ ಮೂಲತಃ ಇರುವುದೋ ಇಲ್ಲವೋ ಎಂಬ ಪ್ರಶ್ನೆಯನ್ನು ಅನುಭಾವಿಗಳು ಹಾಗೂ ಅಂಗರಚನಾಶಾಸ್ತ್ರಜ್ಞರೇ ನಿರ್ಣಯಿಸಬೇಕು.

ಕುಂಡಲಿನಿಯ ಬಣ್ಣನೆಯು ಯಾವ ಬಗೆಯದೇ ಇರಲಿ-ಜ್ಞಾನೇಶ್ವರರ ಹೇಳಿಕೆಯಂತೆ ಅದು ಒಂದು ಕುಂಕುಮ ವರ್ಣದ, ನಾಭಿಯ ಕೆಳಭಾಗದಲ್ಲಿರುವ ದುಂಡಾದ ಸಣ್ಣ ಹಾವಿನಂತಿರಲಿ, ಇಲ್ಲವೆ ಡಾ. ರೇಳೆಯವರ ಹೇಳಿಕೆಯ ಮೇರೆಗೆ ಅದು ಮಿದುಳುಕೋಶದ ಹತ್ತನೆಯ ನರದಂತಿರಲಿ, ಇಲ್ಲವೆ ಡಾ. ರಾಯರವರ ಹೇಳಿಕೆಯಂತೆ ಅದು ಮಿದುಳುಬಳ್ಳಿಯಲ್ಲಿರದೆ, ಮಿದುಳಿನಲ್ಲಿಯೆ ಚಕ್ರಗಳೊಡನೆ ಇರುವಂತಹದಿರಲಿ-ಈ ಎಲ್ಲ ಮಾತುಗಳ ಸತ್ಯತೆಯನ್ನು ಪರೀಕ್ಷಿಸಬೇಕಾಗುವುದು. ಇದೆಲ್ಲ ಇಡಿಯಾಗಿ ಕಾಲ್ಪನಿಕವಿರುವದೆಂದಲ್ಲ. ಆದರೆ ನಾವು ಆ ಶಕ್ತಿ ವಿಶೇಷವನ್ನು ಸಾಕ್ಷಾತ್ಕರಿಸಿಕೊಂಡು, ಅದರ ಮೂಲಭೂತವಾದ ಸ್ವರೂಪವನ್ನು ನಿಶ್ಚಯಿಸ ಬೇಕಾದುದು ಅವಶ್ಯವು. ಹೀಗಿದ್ದರೂ, ಈ ಕವನದಲ್ಲಿ ಅರುಹಲಾದ ಸರ್ಪವು ವೈಷಯಿಕ ಶಕ್ತಿಯ-ವಿಷಯ ವಿಕಾರಗಳ-ಪ್ರತೀಕವಿರುವದೆಂಬುದು ಒಂದು ಮಹತ್ವದ ಸಂಗತಿ. ಪಾತಂಜಲ ಸೂತ್ರವೊಂದರಲ್ಲಿ (II-೪೭)'ಅನಂತ ಸಮಾ ಪತ್ತಿಭ್ಯಾಂ।' 'ಅನಂತನೊಡನೆ, ಶೇಷನೊಡನೆ ಬೆರೆಯುವದರಿಂದ' ಎಂಬ ಪದ ವಿನ್ಯಾಸವಿರುವುದು. ಅದರ ಭಾಷ್ಯಕಾರರು, ಶೇಷನು ತನ್ನ ಹಡೆಯನ್ನು ಮೇಲಕ್ಕೆತ್ತಿ ಸ್ಥಿರವಾದಾಗಲೇ ನಾವು ನಿಜವಾದ ಧ್ಯಾನವನ್ನು ಮಾಡಬಲ್ಲೆವು ಎಂದು ಅರುಹಿರುವರು. ಇಲ್ಲದಿದ್ದರೆ, ಈ ಬಗೆಯ ಸ್ಥಿತಿಯು ಉಂಟಾಗುವುದು: ಓರ್ವ ಹಿರಿಯ ಸಂತರು ಹೇಳುತ್ತಿದ್ದ ಮೇರೆಗೆ, ಸಾಮಾನ್ಯವಾಗಿ ಈ ಹಾವಿನ ಹೆಡೆಯು ಕೆಳಮುಖವಾದುದರಿವುದು, ಹಾಗೂ ಬಾಲವು ಮೇಲ್ಮುಖವಾದುದಿರುವುದು. ಹೆಡೆಯು ಕೆಳಮುಖವಾದುದಿರುವಾಗ, ಅದು ಮನುಜನ ಒಲವು ವಿಷಯ ವಿಕಾರಗಳೆಡೆ ಹೆಚ್ಚಾಗಿರುವುದು ಎಂಬುದನ್ನು ಸೂಚಿಸುವುದು. ಮೇಲ್ಮುಖವಾದು ದಿರುವಾಗ, ಅದು ಆತನ ಭಗವದ್ಭಕ್ತಿಯ ಒಲವನ್ನು ಕಾಣಿಸುವುದು. ಆದುದರಿಂದ ಈ ಹಾವಿನ ಕೆಳಮುಖವಾದ ಹೆಡೆಯನ್ನು ಮೇಲ್ಮುಖವಾಗುವಂತೆ ಮಾಡುವುದೇ ಹಾವಾಡಿಗನ ಕಾರ್ಯ. ಇದನ್ನು ಕೆಳಗಣ ಒಂದೇ ಮಾತು ಮಾಡಬಲ್ಲುದು: 'ಕಡಿದೀತೆಂಬುವ ಅಂಜಿಕೆಯಿಲ್ಲದೆ ಶ್ರೀಗುರುಮಂತ್ರವ ಅಡಿಗಡಿಗೆ ಉಸಿರುಸಿರಿಗೆ ಜಪಿಸುವುದೇ' ಆ ಮಾತು. ನೀವು ಅಷ್ಟೊಂದು ಭಾಗ್ಯಶಾಲಿಗಳಿದ್ದರೆ, ಇದೇ ಜನ್ಮದಲ್ಲಿ, ಕೆಳಮುಖವಾದ ಹಾವಿನ ಹೆಡೆಯು ಮೇಲ್ಮುಖವಾಗಿ ತಿರುಗಬಲ್ಲುದು. ತನ್ನ ಸ್ಥಲದಿಂದ ಕದಲಿಸಲಾದ ಸರ್ಪದಂತೆ, ಅದು ತ್ರಿಕೋಣಾಕೃತಿಯ ಬೆನ್ನು ಮೂಳೆಗಳ ಸಾಲಿನಲ್ಲಿ ಹುದುಗಿರುವ ಮಿದುಳುಬಳ್ಳಿಯ ಪೊರೆಗಳಲ್ಲಿ ಸೇರುವುದು. 'ಒಳಗಿರುವ ತ್ರಿಕೋಣ ಗಳಗಿಯೊಳಗೆ ಪೋಗುವುದು' ಮತ್ತು 'ತನ್ನ ಹೆಡೆಯ ಮೇಲಕ್ಕೇರಿಸಿ, ಬಾಲ ಕೆಳಭಾಗಕ್ಕೆ ಇಳಿಸುವುದು.' ತನ್ನ ಸ್ಥಳದಿಂದ ಕದಲಿಸಲಾದ ಹಾವು ಹೀಗೆಯೆ ಮಾಡುವದುಂಟು.

ಗೊಲ್ಲನು ಇನ್ನೊಂದು ಕೆಲಸವನ್ನು ಮಾಡುವನು. ಅವನು ಧೈರ್ಯದಿಂದ ಹಾವನ್ನು ಹಿಡಿಯುವ; ಮತ್ತು ನಿರ್ಭೀತಿಯಿಂದ ಅದರ 'ಕಟಬಾಯಿಯೊಳಗಿಂದ ಕಡಿಯುವ ಹಲ್ಲನ್ನು-ವಿಷಯುಕ್ತ ಹಲ್ಲನ್ನು ಮುರಿಯುವ.' ಈ ರೀತಿ ಅದರ ವಿಷದ ಹಲ್ಲನ್ನು ಕೀಳುವುದು ಅವನ ಕರ್ಯ. ಆಮೇಲೆ ಏನಾಗುವುದು? ಆ ಹಾವು ಸಾದಾ ಆಗುವದು. ನಾವು ಅದರ ಫಣಿಯಲ್ಲಿರುವ ರತ್ನವನ್ನು ಪಡೆಯುವೆವು. ಅದನ್ನು ಕವಿಯು ಕಳೆ-ನಾದಗಳಿಂದ ಕೂಡಿದ ರತ್ನವೆಂದು ಬಣ್ಣಿಸಿರುವನು. ಹಾವುಗಳು ರಾತ್ರಿಯಲ್ಲಿ ಆ ರತ್ನವನ್ನು ಬದಿಗಿಟ್ಟು, ಇಬ್ಬನ್ನಿಯನ್ನು ಸೇವಿಸುವವು ಎಂದು ಭಾವಿಸಲಾಗಿದೆ. ಹಿಂದೀ ಸಾಹಿತ್ಯದಲ್ಲಿಯ ಒಂದು ಪ್ರಸಿದ್ಧವಾದ ಪದ್ಯವು ಇದನ್ನು ಉಲ್ಲೇಖಿಸುವುದು: ಉದಾಹರಣಾರ್ಥವಾಗಿ, 'ಓಸ ಚಾಟನೇ ಆವೈ ಕಬಹುಂ ಮಣೀ ಚಿತಾವೈ!' ಹಾವಿನ ಹೆಡೆಯಲ್ಲಿಯ ಈ ರತ್ನವನ್ನು ನಾನು ಪಡೆದೆ ಎಂದು ಗೊಲ್ಲನು ಹೇಳುವನು. 'ಆ ರತ್ನವು ಪಾರಮಾರ್ಥಿಕ ತೇಜ-ನಾದಗಳ ರತ್ನವಿರುವುದು' ಮತ್ತು ಆ ಹಾವು ಸಾದಾ ಆದಾಗ ನಾವದನ್ನು ನಮ್ಮ ಆತ್ಯಂತಿಕ ಭಕ್ತಿಯ ಬುಟ್ಟಿಯಲ್ಲಿ ಇಡಲು ಸಮರ್ಥರಾಗುವೆವು. ತರುವಾಯ, ಆ ಹಾವನ್ನು ಮೇಲಕ್ಕೆ ನಡೆಸಲು ನಾವು ಭಗವಂತನನ್ನು ಅನನ್ಯಭಾವದಿಂದ ಪ್ರಾರ್ಥಿಸುವೆವು. ಅಂದಾಗಲೇ ಅದು ಮೇಲಕ್ಕೆ ಸಾಗಬಲ್ಲದುದಾಗಿ ಭಗವಂತನನ್ನು ಮತ್ತೂ ಹೆಚ್ಚಾಗಿ ಸಮೀಪಿಸುವುದು.

ಪಾರಮಾರ್ಥಿಕ ಉನ್ನತಿಗಾಗಿ ಮಿದುಳುಬಳ್ಳಿಯ ಚೈತನ್ಯದ ಉಪಯೋಗದ ವಿವೇಚನೆಯ ತರುವಾಯ, ನಾವು ಪುರಂದರದಾಸರ 'ಕಣ್ಣಿನೊಳಗೆ ನೋಡೋ ಹರಿಯ' ಎಂಬ ಮುಂದಿನ ಅತಿ ಮಹತ್ವದ ಪದದೆಡೆ ಸಾಗುವೆವು. ಈ ಕವನದಲ್ಲಿ ಇಡೀ ಯೋಗದ ಪ್ರಕ್ರಿಯೆಯ ಪೂರ್ಣ ಬಣ್ಣನೆಯಿರುವುದು ಮತ್ತು ಅದರಲ್ಲಿಯ ವೈಯಕ್ತಿಕ ಉಲ್ಲೇಖಗಳಿಂದ ಪುರಂದರದಾಸರು ಆ ಅನುಭವಗಳನ್ನೆಲ್ಲ ಪಡೆದಿದ್ದರೆಂಬುದನ್ನು ನಾವು ಸಹಜವಾಗಿ ಕಾಣಬಲ್ಲೆವು. ಈವರೆಗೆ ನಾವು ವಿವರಿಸಿದ ಕವನಗಳನ್ನು ರಚಿಸಿದ ಕವಿಗಳು ಅಜ್ಞಾತರಿದ್ದರು, ಸಂಶಯಾಸ್ಪದರಿದ್ದರು. ಅವರು ಅವುಗಳಲ್ಲಿ ಕೇವಲ 'ಉರಗಗಿರಿ, ಬಲಭೀಮ ಹಾಗೂ ನರಸಿಂಹ' ಎಂಬ ಹೆಸರುಗಳನ್ನಷ್ಟೇ ಉಲ್ಲೇಖಿಸಿರುವರು. ಈ ಕವನವು ಪುರಂದರದಾಸರೆಂಬ ನಿಜ ವಾದ, ಪರಿಚಿತರಾದ ಕವಿಗಳದು. ಈ ಕವನವು ಇಡೀ ಪಾರಮಾರ್ಥಿಕ ಜೀವನದ ಸಾರವನ್ನು ಒಳಗೊಂಡಿರುವುದು. ಪುರಂದರದಾಸರ ಬೇರೆ ಅನುಭಾವ ಕವನ ಗಳಿರುವವು. ಆದರೆ ಇದೊಂದೆ ನಮ್ಮ ಉದ್ದೇಶ ಸಾಧನೆಗೆ ಸಾಕಾದುದು. ಈ ಕವನ ದಲ್ಲಿ ಪುರಂದರದಾಸರು ತಮ್ಮ ಪಾರಮಾರ್ಥಿಕ ಸಾಧನ-ಸಿದ್ಧಿಯ ಪರಿಚಯವನ್ನು ಮಾಡಿಕೊಟ್ಟಿರುವರು. ಪುರಂದರದಾಸರು ಹಿರಿಯ ಯೋಗಿಗಳಿದ್ದರೆಂಬುದು ಜನರಿಗೆ ಚೆನ್ನಾಗಿ ಪರಿಚಿತವಿಲ್ಲ. ಆದರೆ ಅವರು ಯೋಗಸಾಧನದಿಂದ ಸಾಕ್ಷಾತ್ಕಾರ ಪಥದಲ್ಲಿ ಎಷ್ಟು ಹಿರಿಯ ಪ್ರಗತಿಯನ್ನು ಪಡೆದಿದ್ದರೆಂಬುದನ್ನು ಈ ಕವನವು ಚೆನ್ನಾಗಿ

ಅರುಹುವದು. 'ನಾವು ಈಷಣ–ತ್ರಯವನ್ನು, ಮೂರು ಬಯಕೆಗಳನ್ನು ತೊರೆದು ನಮ್ಮ ಸಾಧನವನ್ನು ಪ್ರಾರಂಭಿಸೋಣ!' ಎಂದು ಅವರು ಹೇಳುವರು. ಈ ಕವನವನ್ನು ನಾನು ಪಾರಮಾರ್ಥಿಕ ಜೀವನವನ್ನು ಪ್ರಾರಂಭಿಸಲು, ಬೆಳೆಸಲು ಹಾಗೂ ಪೂರ್ಣಗೊಳಿಸಲು ಬೇಕಾದ ಎಲ್ಲ ವಿಷಯಗಳನ್ನು ಅರುಹುವದು. 'ಬಿಡಬೇಕು ಈಷಣ ಮೂರು' ಎಂಬ ಅವರ ಮಾತಿನಲ್ಲಿಯ ಪಾಂಡಿತ್ಯವನ್ನು ನೋಡಿ! ಅವರು ಅದರಲ್ಲಿ ಉಪನಿಷತ್ತಿನಲ್ಲಿಯ ಮುಂದಿನ ಈಷಣ ತ್ರಯವನ್ನು ಉಲ್ಲೇಖಿಸಿರುವರು: 'ಪುತ್ರೇಷಣಾಯಾಶ್ಚ, ವಿತ್ತೇಷಣಾಯಾಶ್ಚ, ಲೋಕೇಷಣಾ ಯಾಶ್ಚ' – 'ಮಗನ ಬಯಕೆ, ಧನದ ಬಯಕೆ, ಸ್ವರ್ಗವಾಸದ ಬಯಕೆ.' ಈ ಮೂರನ್ನು ಮೀರಿ, ನೈತಿಕ ಸಿದ್ಧತೆಯನ್ನು ಮಾಡಿಕೊಳ್ಳಿರಿ!' ಎಂಬುದು ದಾಸರಾಯರು ನಮಗೆ ಮಾಡಲಿರುವ ಮೊದಲನೆಯ ಬೋಧೆ. 'ಎವೆಹಾಕದೆ ಮೇಲೆ ನೋಡಿ!' ಎಂಬುದು ಅವರ ಎರಡನೆಯ ಉಪದೇಶ. ಭಗವದ್ಗೀತೆಯು ಹೇಳುವ ಮೇರೆಗೆ, 'ನೀವು ನಿಮ್ಮ ಕಂಗಳ ಎವೆಗಳನ್ನು ಅಲ್ಲಾಡಿಸಬೇಡಿ!' 'ನೇರವಾಗಿ ಮೇಲಕ್ಕೆ ನೋಡಿ, ಪದವನದಿಂದಲಿ ವಾಯುಬಂಧನ ಮಾಡಿರಿ!' 'ಉಸಿರಿನಿಂದ ಉಸಿರನ್ನು ಬಂಧಿಸಿರಿ.' ಈ ಉಸಿರಿನಿಂದ ಉಸಿರನ್ನು ಬಂಧಿಸುವದೆಂದರೇನು? ಪ್ರಾಣಾಯಾಮದ ಅಭ್ಯಾಸವನ್ನು ಮಾಡಲು ಪ್ರಾರಂಭಿಸಿದವರು ಅದನ್ನು ಅರಿಯ ಬಹುದು. ಆಮೇಲೆ ಅವರು, ನಾವು ಆರೂ ಚಕ್ರಗಳನ್ನು ಪರಿಶುದ್ಧ ಗೊಳಿಸ 'ಬೇಕೆಂದು ಹೇಳುವರು. ಈ ಸಂದರ್ಭದಲ್ಲಿ ಅವರು ಬಳಸಿದ 'ಶೋಧಿಸಿ' ಎಂಬ ಶಬ್ದದ ಅರ್ಥವು 'ಹುಡುಕಿ' ಇಲ್ಲವೆ 'ಪವಿತ್ರಗೊಳಿಸಿ' ಎಂದು ಎರಡು ಬಗೆಯಾಗಿ ಆಗಬಹುದು. ಈ ಚಕ್ರಗಳು ಆರಿರುವವೋ ಅಥವಾ ಏಳಿರುವವೋ ಇಲ್ಲವೆ ಒಂಬತ್ತಿರುವವೊ ಎಂಬುದು ಬಹಳ ಮಹತ್ವದ ವಿಷಯವಲ್ಲ. ಆದರೆ ನಮ್ಮ ಶರೀರದಲ್ಲಿ ಕೆಲ ನರಗಳ ಜಾಲಗಳಿರುವವು ಎಂಬುದು ನಿರ್ವಿವಾದವಾದುದು. "ಅವನ್ನು ವಿಶುದ್ಧಗೊಳಿಸಿ, ಭಗವಂತನ ಚೈತನ್ಯವನ್ನು ಸ್ವೀಕರಿಸಲು ಅವನ್ನು ಸಿದ್ಧಗೊಳಿಸಿರಿ. ಈ ಚಕ್ರಗಳೆಲ್ಲ ಪರಿಶುದ್ಧವಾದ ಬಳಿಕ, ಮಿದುಳು ಬಳ್ಳಿಯಲ್ಲಿಯ ವಿವರವಾದ ಸುಷುಮ್ನೆಯೊಳಗಿಂದ ಮೇಲಕ್ಕೆ ಏರಿ, ಭಗವಂತನ ನಿವಾಸವಾದ ಸಹಸ್ರಾರವನ್ನು ಸೇರಿರಿ!" ಎಂದು ದಾಸರಾಯರು ಹೇಳಿರುವರು. ಈ ರೀತಿ ಇಲ್ಲಿ, ನಾವು ಸುಷುಮ್ನೆಯ ಮಾರ್ಗವಾಗಿ ಕುಂಡಲಿನಿಯ ಮುಡಿಯಲ್ಲಿರುವ ಭಗವಂತನಿದ್ದ ಸ್ಥಲವನ್ನು ಹೇಗೆ ಮುಟ್ಟಬೇಕು ಎಂಬುದನ್ನು ಅರುಹುವ ಪ್ರತ್ಯಕ್ಷ ಪುರಂದರದಾಸರ ಇನ್ನೊಂದು ಪ್ರಮಾಣಭೂತವಾದ ಹೇಳಿಕೆಯು ಬಂದಿರುವುದು. ಆಮೇಲೆ ನಿಮಗೆ ಭಗವಂತನ ಕೆಲ ಬಗೆಯ ದರ್ಶನವು ಲಭಿಸುವುದು. ದಾಸರಾಯರ ಅನುಯಾಯಿಗಳಲ್ಲೊಬ್ಬರಾದ ವಿಜಯದಾಸರು ಅದನ್ನು ಕುರಿತು ಹೇಳಿರುವ

ದೇನೆಂದರೆ: "ಎತ್ತನೋಡಿದಡತ್ತ ಶೃಂಗಾರ ಸದನವೇ" ನನಗೆ ಕಾಣಿಸಿತು. ನಾನು ಸ್ವರ್ಗವನ್ನು ಸೇರಿದ ಕೂಡಲೆ ಎಲ್ಲೆಡೆ ಆನಂದಾತಿರೇಕವನ್ನು, ಉತ್ಸವವನ್ನು, ಹಾಗೂ ಉತ್ಸವಕ್ಕೆ ಸಂಬಂಧಿಸಿದ ಪ್ರಕಾಶ-ಸಂಗೀತಗಳನ್ನು ಕಂಡೆನು; ಮತ್ತು ಸ್ವಮೂರ್ತಿ ಗಣದ ಮಧ್ಯದಲ್ಲಿ ಸಚ್ಚಿದಾನಂದರೂಪಿಯಾದ ಭಗವಂತನನ್ನು ನೋಡಿದೆನು." ಪುರಂದರದಾಸರು ಈ ಬಗೆಯಾಗಿ ತಮ್ಮ ಅನುಭವದ ವಿವರಗಳನ್ನು ಹೇಳಿಲ್ಲ. ಆದರೆ ಅವರಿಗಾದ ಭಗವಂತನ ದರ್ಶನದ ಕೆಲ ಮಾತುಗಳಷ್ಟೇ ಇಲ್ಲಿ ಬಂದಿರುವವು. 'ಒಳಗಣ್ಣಿನೊಳಗೆ ನೋಡು' ಎಂಬುದು ಪುರಂದರದಾಸರು ಹೇಳುವ ಇನ್ನೊಂದು ವಿಷಯ. ನಾವು ಶಾರೀರಿಕ ಕಣ್ಣಿನಿಂದ ದೇವರನ್ನು ಕಾಣಲರಿಯೆವು. ಇದೇ ದೇವದರ್ಶನದ ಸ್ವರೂಪವು ಅತೀಂದ್ರಿಯವಿರುವುದು ಎಂಬ ವಿಧಾನದ ಅರ್ಥ. ಈ 'ಒಳಗಣ್ಣೆಂದ'ರೆ ಕಲ್ಪನೆಯ ಕಣ್ಣಲ್ಲ. ಆದರೆ ಇದು ಪಾರಮಾರ್ಥಿಕ ದರ್ಶನವನ್ನು ದರ್ದನವನ್ನು ಪಡೆಯಬಲ್ಲ ಸಾಕ್ಷಾತ್ ಪ್ರಾತಿಭ ಕಣ್ಣು ಈ ಇಡೀ ವಿಷಯವನ್ನು ನಾನು ಬೇರೆಡೆ ನನ್ನ ಹಿಂದೀ ಅನುಭಾವವನ್ನು ಕುರಿತು ಬರೆಯಲಾದ ಗ್ರಂಥದಲ್ಲಿ ಸವಿವರವಾಗಿ ಚರ್ಚಿಸಿರುವೆ. ನಿಜವಾಗಿ ಇದು ಮಹತ್ವದ ಮಾತು: ನೀವು ಒಂದು ಒಡವೆಯನ್ನು ಕಂಡು ತರುವಾಯ ಕಂಗಳನ್ನು ಮುಚ್ಚಿ, ಅದನ್ನು ನಿಮ್ಮೆದುರು ಚಿತ್ರಿಸಿದರೆ ಅದು ಕಲ್ಪನೆಯ ಕೃತಿಯಾಗಬಹುದು, ಇಲ್ಲವೆ ಭ್ರಾಂತಿಯೂ ಕೂಡ ಆಗಬಹುದು. ನೀವು ಪ್ರಾಮಾಣಿಕರಿದ್ದರೆ ಅಂಥ ಸಂದರ್ಭದಲ್ಲಿ ನಾವು ಏನನ್ನೂ ಕಾಣುವುದಿಲ್ಲ ಎಂದು ನೀವು ಹೇಳಬಹುದು. ನಾನೀಗ ನಿಮ್ಮೆಡೆ ನೋಡುತ್ತಲಿರುವೆ. ನಾನು ಕಂಗಳನ್ನು ಮುಚ್ಚಿದರೆ ನಿಮ್ಮನ್ನು ಕಾಣಲರಿಯೆ. ನಾನು ಪ್ರಾಮಾಣಿಕನಿದ್ದರೆ, ನಾನು ನಿಮ್ಮನ್ನು ಕಾಣಲರಿಯೆನೆಂದು ಹೇಳಬಹುದು. ಆದರೆ 'ನಾನು ನಿಮ್ಮನ್ನು ಕಾಣುತ್ತಿರುವೆ ಮತ್ತು ನೀವು ನನಗೆ ಅಂತರ್ದೃಷ್ಟಿಯಿಂದಲೂ ಕಾಣಿಸುತ್ತಿರುವಿರಿ' ಎಂದು ಯಾರಾದರೂ ಹೇಳಿದಾಗ, 'ಒಳಗಣ್ಣಿನ'-ಅಂತರ್ದೃಷ್ಟಿಯ ಪ್ರಶ್ನೆಯು ಉದ್ಭವಿಸಿರುವದು. ನಿಜವಾಗಿ ನಾವು ಈ ಹಿರಿಯ ಅನುಭಾವಿಗಳಲ್ಲಿ ಯಾರನ್ನೂ ನಂಬದಿರಲರಿಯೆವು. ಆದರೆ, ಇದರ ಜತೆಯಲ್ಲಿ ಇನ್ನೊಂದು ಮಾತು ಮಹತ್ವದ್ದಿರುವುದು. ಕಬೀರರು ಹೇಳುವ ಮೇರೆಗೆ, ನೀವು ಒಳಗಣ್ಣಿನಿಂದ ಭಗವಂತನನ್ನು ಕಾಣಬಲ್ಲವರಾದಾಗ ಕಂಗಳನ್ನೂ ತೆರೆಯರಿ ಮತ್ತು ನೀವು ದೈಹಿಕ ಕಂಗಳಿಂದ ಆತನನ್ನು ಕಾಣಬಲ್ಲಿರೋ ಹೇಗೆಂಬುದನ್ನು ನೋಡಿರಿ! ನೀವು ಹಾಗೆ ಕಾಣಬಲ್ಲವರಾದರೆ, ಅದೊಂದು ನಿಮ್ಮ ಒಳಗಣ್ಣಿನ ದರ್ಶನದ ಸತ್ಯತೆಯ ಸಮರ್ಥನವಾಗಬಹುದು. ಆದುದರಿಂದ ಅಂತರ್ದರ್ಶನ ಹಾಗೂ ಬಹಿರ್ದರ್ಶನ ಇವೆರಡು ಏಕಕಾಲದಲ್ಲಿ ಮತ್ತು ಸರಿಸಮವಾಗಿ ಜರುಗಬೇಕು. ಅವೆರಡೂ ಒಂದನ್ನೊಂದು ಸಮರ್ಥಿಸಿದಾಗಲೇ ಅದು ಪರತಮ ಸತ್ಯದ ಅನುಭವವಾಗಬಲ್ಲುದು.

ಇನ್ನು ಪುರಂದರದಾಸರ ಪಾರಮಾರ್ಥಿಕ ಅನುಭವದ ಹಾಗೂ ಧ್ಯಾನ ಪದ್ಧತಿಯ ವಿವರಗಳನ್ನು ನೋಡಿ! ಮೊದಲು ನೀವು ಅನಾಹತನಾದದ ಅಲ್ಪರುಚಿ ಯನ್ನು ಸವಿಯುವಿರಿ. ತರುವಾಯ ಅದರ ಹಿರಿಯ ಗುಟುಕುಗಳನ್ನು ಕುಡಿಯಲು ಸಮರ್ಥರಾಗುವಿರಿ. ಮೊದಲು ನೀವು ಅದರ ಅಲ್ಪ ಅನುಭವದಿಂದ ಪ್ರಾರಂಭಮಾಡಿ, ಬರಬರುತ್ತ ಅದನ್ನು ದೊಡ್ಡ ಪ್ರಮಾಣದಲ್ಲಿ ಸೇವಿಸ ಬಲ್ಲವರಾಗುವಿರಿ; ಮತ್ತು ನೀವು ಭಗವಂತನ ದರ್ಶನವನ್ನೂ, ಅನಾಹತ ನಾದವನ್ನೂ ಪಡೆದಾಗ ಮುಂದೇನಾಗು ವುದು ಗೊತ್ತೇ? ನವವಿಧ ಭಕ್ತಿಯ ಪ್ರಭಾವದ ಮೂಲಕ ನೀವು ಪ್ರತಿಕ್ರಿಯಾತ್ಮಕವಾಗಿ ತಲೆತೂಗುವಿರಿ. 'ನವವಿಧ ಭಕ್ತೀಲಿ ನಲಿನಲಿದಾಡುವಿರಿ!' ನವವಿಧ ಭಕ್ತಿಯು ನಿಮ್ಮ ಶರೀರದಲ್ಲಿ ಒಂದು ಬಗೆಯ ಪಾರಮಾರ್ಥಿಕ ಸ್ಫೂರ್ತಿಯನ್ನೂ ಹಾಗೂ ಒಂದು ಬಗೆಯ ಪಾರ್ಥಿವ ಶಕ್ತಿಯನ್ನೂ ಕೂಡ ಬೀರುವುದು. ಅದರ ಫಲವಾಗಿ ನೀವು ಸ್ವಯಂ ಸ್ಫೂರ್ತಿಯಿಂದ ತಲೆದೂಗಿಸಲು ಸಮಥರಾಗುವಿರಿ. ಜ್ಞಾನೇಶ್ವರರು ಒಂದೆಡೆ, 'ಕೃಷ್ಣಾ ಹಾಲ ಕಾರೇ, ಕೃಷ್ಣಾ ಡೋಲ ಕಾರೇ!' 'ಅಲ್ಲಾಡಯ್ಯ ಕೃಷ್ಣನೇ! ತೂಗಾಡಯ್ಯ ಕೃಷ್ಣನೇ!' ಎಂದು ಬಣ್ಣಿಸಿರುವರು. ಇಂಥ ಸಹಜ ತೂಗಾಡು ವಿಕೆಯನ್ನು ನೀವು ಅನುಭವಿಸುವಿರಿ, ಎಂದು ಪುರಂದರದಾಸರು ಹೇಳುರುವರು. ಅದು ಬುದ್ಧಿ ಪುರಸ್ಸರವಾದ ತೂಗಾಟವಲ್ಲ, ಸ್ವಯಂ-ಪ್ರೇರಣೆಯ ತೂಗಾಟವಲ್ಲ. ಆದರೆ ನಿಮ್ಮಂತರಂಗದಲ್ಲಿ ಜನಿಸಿದ ಈ ನವವಿಧ ಭಕ್ತಿಯ ಪ್ರಭಾವದಿಂದ, ತನ್ನಿಂದ ತಾನೇ ಉಂಟಾದ ತೂಗಾಟವು. ಈ ಬಗೆಯಾಗಿ ನಿಮ್ಮ ಪಾರಮಾರ್ಥಿಕ ಅನು ಭಾವವು ನಿಮ್ಮ ಶರೀರ ವಿನ್ಯಾಸದಿಂದಲೂ, ಚಲನೆಯಿಂದಲೂ ವ್ಯಕ್ತವಾಗುವುದು. ಕೊನೆಯದಾಗಿ, ತಮಗೆ ನಾರಯಣನ ಪರಿಚಯವಿಲ್ಲದಂತೆ 'ನಾರಯಣ ನೆಂಬುವನು ಅಂಡಜದೊಳಾಡುತಾನೆ' ಎಂದು ಅವರು ಹೇಳುವರು. ನಿಜವಾಗಿ ದಾಸರಾಯರು ನಾರಾಯಣನನ್ನು ಬಲ್ಲರು; ಮತ್ತು ಅವರು ನಾರಾಯಣನೆಂದು ಕರೆಯಿಸಿಕೊಳ್ಳಲಾದ ಭಗವಂತನು ವಿಶ್ವಂಭರನೂ ವಿಶ್ವಾತೀತನೂ ಇರುವನೆಂಬು ದನ್ನು ನೀವು ಕಾಣುವಿರಿ ಎಂದು ಹೇಳುವರು. ಆತನು ಇಡಿಯ ವಿಶ್ವವನ್ನು ತುಂಬಿರುವುದನ್ನೂ, ಸುತ್ತಿರುವುದನ್ನೂ ಕಾಣುವಿರಿ. ಇಲ್ಲಿ ಬಳಸಲಾದ 'ಅಂಡಜ' ಎಂಬ ಶಬ್ದವನ್ನು ನೋಡಿ. 'ಸ್ವೇದಿಜ' 'ಬೆವರಿನಿಂದ ಜನಿಸಿದ', 'ಉದ್ಭಿಜ' 'ಬೀಜದಿಂದ ಜನಿಸಿದ' ಮತ್ತು 'ಜರಾಯುಜ' 'ಸಸ್ತನ ಪ್ರಾಣಿಯಿಂದ ಜನಿಸಿದ' ಎಂಬುವು ಇವರಂಥ ಬೇರೆ ಶಬ್ದಗಳು. ಇಲ್ಲಿ 'ಅಂಡ' ಎಂದರೆ ಬ್ರಹ್ಮಾಂಡ-ವಿಶ್ವ, ವಿಶ್ವದಲ್ಲಿ ಜನಿಸಿದ ಎಲ್ಲ ಒಡವೆಗಳೂ 'ಅಂಡಜ' ಎಂದು ಕರೆಯಲ್ಪಡುವವು. ಆದುದರಿಂದ ಭಗವಂತನು ವಿಶ್ವದಲ್ಲಿಯ ಎಲ್ಲ ಪ್ರಾಣಿಗಳಲ್ಲಿ ನೆಲೆಸಿರುವನು. ಇದು 'ಅಂಡಜದೊ ಳಾಡುತಾನೆ' ಎಂಬುದರ ಅರ್ಥ, ನಾವಿದನ್ನು ನಾನಕರು ದೇವರ ವಿಶ್ವಂಭರತ್ವವನ್ನು ಕುರಿತು ಉಸುರಿದ ಮುಂದಿನ ವಚನದೊಡನೆ ಹೋಲಿಸಬಹುದು: 'ಸಬ ಮೇಂ

ರಮ ರಹಾ ಪ್ರಭು ಏಕಾಕೀ' 'ಒಬ್ಬನೇ ಒಡೆಯನು ಎಲ್ಲರಲ್ಲಿ ನಲಿಯುತಿರುವ.' ಅವನು 'ಭಾನುಮಂಡಲದೊಳು' ಕಾಣುವನೆಂತಲೂ ದಾಸರಾಯರು ಹೇಳಿರುವರು. ಇದು 'ಸವಿತೃಮಂಡಲಮಧ್ಯವರ್ತೀ' 'ಸೂರ್ಯಮಂಡಲದಲ್ಲಿರುವ' ಎಂಬ ಸಂಸ್ಕೃತ ವಚನವನ್ನು ಹೋಲುವುದು. ಅದೇ ಮೇರೆಗೆ 'ಅಂಡಜದೊಳಾಡುತಾನೆ, ಭಾನುಮಂಡಲದೊಳು ನಾರಾಯಣ ನೆಂಬುವನೆ' ಎಂದು ಪುರಂದರದಾಸರು ಕೂಡ ಅರುಹಿರುವರು. ಕೊನೆಯದಾಗಿ, ಅವನು ನಿಮ್ಮಂತರಂಗಲ್ಲಿಯ ಕುಂಡಲಿ ನಿಯ ತುದಿಯಲ್ಲಿ ಕಾಣಿಸಿಕೊಳ್ಳುವನು 'ಕುಂಡಲಿ ತುದಿಯೊಳಿದ್ದಾನೆ.' ಈ ರೀತಿ ನೀವು ದೇವರು ಸೂರ್ಯನ ಮೇಲೆ ಹಾಗೂ ಸುತ್ತಲೂ ಪಸರಿಸಿರುವುದನ್ನು ಕಾಣುವಿರಷ್ಟೇ ಅಲ್ಲದೆ ಆತನನ್ನು ಸೂರ್ಯನಲ್ಲಿಯೂ ಕೂಡ ಕಾಣುವಿರಿ! ಅದೇ ಮೇರೆಗೆ, 'ಕುಂಡಲಿನಿಯ ತುದಿಯಲ್ಲಿಯೂ' ಆತನನ್ನು ಕಾಣುವಿರಿ. ಈ 'ನಾರಾ ಯಣನೆಂಬುವವನು' ನಿಮಗೀಗ ಸಾಕ್ಷಾತ್ತಾಗಿ ಕಾಣಿಸುವನು. ಅವನು 'ಎಂಬುವವ ನಾಗಿ' ಉಳಿಯದೆ 'ಪ್ರತ್ಯಕ್ಷ'ನಾಗುವನು. ಭಗವಂತನೇ ಇಡೀ ಮಾನವತೆಯ ಪಾರಮಾರ್ಥಿಕ ಆದರ್ಶನಾಗಿರುವನು. ಆತನೇ ಮಾನವರ ಪ್ರಯತ್ನದ ಅಂತಿಮ ಗುರಿ–ಆದರ್ಶ. ಅದೇ 'ನಾರಾಯಣ' ಎಂಬ ಶಬ್ದದ ನಿಜವಾದ ಅರ್ಥ. ನೀವು ಈ ಪಾರಮಾರ್ಥಿಕ ಆದರ್ಶವನ್ನು ಪಡೆಯುವಿರಿ; ಮತ್ತು ಈ ನಾರಾಯಣನನ್ನು ನೀವು ಸಾಕ್ಷಾತ್ಕರಿಸಿಕೊಂಡಾಗ, ಅವನು ನಿಮ್ಮನ್ನು ಪಾಲಿಸುವನು ಹಾಗೂ ಪೋಷಿಸುವನು. 'ಪುರಂದರ ವಿಠ್ಠಲ ಪಾಲಿಸುತಾನೆ' ಎಂದು ಪುರಂದರದಾಸರು ಹೇಳಿರುವರು. 'ನಳಿನ ನಾಭನ ನೀ ಪಾಡೋ!' ಎಂಬ ಪುರಂದರದಾಸರ ಇನ್ನೊಂದು ಪದವೂ ಅವರ ಯೋಗಾನುಭವವನ್ನು ಒಳಗೊಂಡಿರುವದು. ಅದೂ ಕೂಡ ಅವರದೇ ಇರುವದೆಂಬುದು ಖಂಡಿತವು. ಇವು ಹಾಗೂ ಬೇರೆ ಕೆಲ ಇಂಥ ಪದಗಳು ಅವರಿಂದಲೇ ರಚಿತವಾದವುಗಳಿರುವವು ಎಂದು ಬಲ್ಲವರಿಂದ ನಿರ್ಧರಿಸಲಾಗಿದೆ. ಅದರ ಸತ್ಯತೆಯ ಬಗೆಗೆ ಸಂದೇಹವಿರುವುದಿಲ್ಲ. ಆದರೆ ನಾನು ಅವನ್ನೆಲ್ಲವನ್ನು ಚರ್ಚಿಸಬಯಸುವುದಿಲ್ಲ. ಪ್ರಾತಿನಿಧಿಕವಾದ ಒಂದು ಪದದ ವಿವರಣವು ಸಾಕಾಗಬಹುದು.

ಕೊನೆಗೆ ನಾವು ಎರಡು ಪದಗಳನ್ನು ವಿಚಾರಿಸುವೆವು. ಮೊದಲನೆಯದು 'ಶ್ರೀಗಿರಿಯ ಸುಕ್ಷೇತ್ರಕಿಂದು ಹೋಗಿ ಯಾತ್ರೆಯ ಮಾಡಿ ಬಂದೆ' ಎಂಬುದು. ಶ್ರೀಗಿರಿಯ ದಕ್ಷಿಣಭಾರತದಲ್ಲಿಯ ಒಂದು ಪವಿತ್ರ ಸ್ಥಲ. ಆದರೆ ಈ ಹೊರಗಣ ಶ್ರೀಗಿರಿಗೆ ಅದೇತಕ್ಕೆ ಹೋಗುವದು? 'ಶ್ರೀಗಿರಿಯನ್ನು ನಾನು ಅಂತರಂಗದಲ್ಲಿಯೆ ಪಡೆದಿರುವೆ!' ಎಂದು ಕವಿಗಳಾದ ಗುರುಸಿದ್ಧರು ಹೇಳಿರುವರು. ಭೌತಿಕ ಶ್ರೀಗಿರಿಗೆ ಇಲ್ಲವೆ ಶ್ರೀಶೈಲ ಪರ್ವತಕ್ಕೆ ಹೋಗುವ ಆವಶ್ಯಕತೆಯಿಲ್ಲವೆಂಬುದು ಅವರ ಹೇಳಿಕೆ. 'ಶ್ರೀಗಿರಿಗೆ ಯಾತ್ರೆಗಾಗಿ ಹೋಗಬೇಕೆಂಬ ಬಯಕೆಯನ್ನು ಬಹುದಿನದಿಂದ ತಳೆದಿದ್ದೆ.

ಇಂದು ನಾನು ಶ್ರೀಶೈಲವನ್ನು ನನ್ನ ಅಂತರಂಗದಲ್ಲಿ ಕಂಡೆ. ಶ್ರೀಗಿರಿಯು ಶರೀರದೊಳಗುಂಟು' ಎಂದು ಸರ್ಪಭೂಷಣರು ಅರುಹುವರು. ಆದುದರಿಂದ ಶ್ರೀಶೈಲ ಪರ್ವತಕ್ಕೆ ಹೋದಾಗ, ಮನುಜನು ಅಲ್ಲಿ ಕಾಣುವ ಎಲ್ಲ ವಿಷಯಗಳನ್ನು, ಒಂದು ಬಗೆಯ ಮನೋ-ವೈಜ್ಞಾನಿಕ ಪರಂಪರಿತ ರೂಪಕದಿಂದ ಗುರುಸಿದ್ಧರು ಈ ಕವನದಲ್ಲಿ ಬಣ್ಣಿಸಿರುವರು. ಇಲ್ಲಿ ಆನುಷಂಗಿಕವಾಗಿ ಒಂದು ಮಾತನ್ನು ಉಲ್ಲೇಖಿಸ ಬಯಸುವೆ. ಇಲ್ಲಿ ಶ್ರೀಶೈಲವನ್ನು ಸೂಚಿಸಲು ಬಳಸಲಾದ ಶ್ರೀಗಿರಿಯಲ್ಲಿಯೂ ಹಾಗೂ 'ಗಿರಿ' ಎಂದು ಕರೆಯಿಸಿಕೊಳ್ಳುವ 'ವೆಂಕಟಗಿರಿ' ಎಂಬುದರಲ್ಲಿಯೂ 'ಗಿರಿ' ಎಂಬ ಶಬ್ದವು ಸಮಾನವಾದುದರಿವುದು. ಈ ರೀತಿ 'ಗಿರಿ'ಯು ಶೈವ ವೈಷ್ಣವರಿ ಬ್ಬರಿಗೂ ಸಾಮಾನ್ಯವಾಗಿರುವುದು. ಶ್ರೀಗಿರಿಯು ಒಳ್ಳೇ ಹೆಸರಾದ ಪರ್ವತ ವೆಂಬುದನ್ನು ನಾವು ಇದೀಗ ಕಾಣಬಹುದು. "ಈ ಪರ್ವತವನ್ನೂ, ಅದಕ್ಕೆ ಸಂಬಂಧಿಸಿದ ಎಲ್ಲ ವಸ್ತುಗಳನ್ನೂ ನಾನು ನನ್ನಂತರಂಗದಲ್ಲಿ ಕಾಣಬಲ್ಲವನಾದೆ" ಎಂದು ಸರ್ಪಭೂಷಣರು ಹೇಳುವರು. ತಮ್ಮಲ್ಲಿ ಅನೇಕರು ಶ್ರೀಶೈಲಕ್ಕೆ ಹೋಗಿ ಬಂದಿರಬಹುದು. ಇಲ್ಲಿ ಬಂದ ವರ್ಣನೆಯು ಕೇವಲ ರೂಪಾತ್ಮಕವಿರುವ ದೆಂಬುದನ್ನು ತಾವು ಕಾಣಬಹುದು. 'ನಾನು ಆರು ಬೆಟ್ಟಗಳನ್ನೂ, ಮೂರು ಕೊಳಗಳನ್ನೂ ದಾಟಿದೆ' ಎಂದು ಸರ್ಪಭೂಷಣರು ಅರುಹುವರು. 'ಈ ಆರು ಬೆಟ್ಟಗಳೆಂದರೆ ಆರು ವಿಕಾರಗಳು. ಮೂರು ಕೊಳ್ಳಗಳೆಂದರೆ ಮೂರು ಗುಣಗಳು. ನಾವು ಇವುಗಳನ್ನು ಏರಬೇಕು-ಮೀರಬೇಕು.' ಇದು ಈ ಕವನದಲ್ಲಿಯ ಶಬ್ದ ಚಿತ್ರದ ರೂಪಾತ್ಮಕ ರೀತಿಯ ಅರ್ಥವಿವರಣೆ. 'ತರುವಾಯ ನಾನು ಆರು ಹುಲಿಗಳನ್ನು ಅಂದರೆ ಆರು ಇಂದ್ರಿಯಗಳನ್ನು ತಡೆದು, ಎಂಟು ಕೋಣಗಳನ್ನು ಅಂದರೆ ಅಷ್ಟ ಮದಗಳನ್ನು ಬಡಿದೆ. ಅದೇ ಮೇರೆಗೆ ಇನ್ನೆರಡು ಪ್ರಾಣಿಗಳನ್ನು ಸರ್ಪ ಹಾಗೂ ಮಂಗಗಳನ್ನು ನಿಗ್ರಹಿಸಿದೆ. ಸರ್ಪವು ವಿಷಯ ವಾಸನೆಗಳ ಪ್ರತೀಕವಿರುವದು. ನಾನು ಸರ್ಪದ ಹೆಡೆಯ ಮೆಟ್ಟಿದೆನ; ಮತ್ತು ಮನಸ್ಸು ರೂಪಿಯಾದ ಚರಿಪ ಕಪಿಯನ್ನು ಒಂದು ಕಂಬಕ್ಕೆ ಹಿಡಿದು ಕಟ್ಟಿದೆ. ಯಾಕಂದರೆ, ಅದು ನನ್ನನ್ನು ಸದೈವ ವಂಚಿಸುತ್ತಿತ್ತು. ಆದುದರಿಂದ ನಾನು ಮಂಗನನ್ನು ಹಿಡಿದೆ, ಸರ್ಪವನ್ನು ಮೆಟ್ಟಿದೆ, ಬೇರೆ ಕ್ರೂರ ಪ್ರಾಣಿಗಳನ್ನು ನಾಶಗೊಳಿಸಿದೆ; ಮತ್ತು ಆಮೇಲೆ ಮುಂದಕ್ಕೆ ಸಾಗಿದೆ' ಎಂದು ಸರ್ಪಭೂಷಣರು ಹೇಳುವರು.

ಸ್ವಲ್ಪ ಮುಂದುವರಿದ ಮೇಲೆ, ನಾವು ಒಂದು ಕೋಟೆಯ ಗೋಡೆಯನ್ನು ಕಾಣುವೆವು ಎಂದು ಅವರು ಹೇಳುವರು. ವಿಜಯನಗರದ ಕೃಷ್ಣರಾಯರು ತಮ್ಮ ಆಳಿಕೆಯಲ್ಲಿ ಕಟ್ಟಿಸಿದ ಕೋಟೆಗೋಡೆಯನ್ನು ಪ್ರತ್ಯಕ್ಷವಾಗಿ ಇಂದಿಗೂ ನಾವಲ್ಲಿ ಕಾಣಬಹುದು. ಅದಕ್ಕೆ ಏಳು ಬುರುಜುಗಳು ಇರುವವು. ಪ್ರತಿಯೊಂದು ಬುರುಜಿಗೆ ಒಂದೊಂದು ಉಪ್ಪರಿಗೆಯಿರುವುದು. ಅಲ್ಲಿ ಎಲ್ಲೆಡೆ ತಾಳ, ಮದ್ದಲಿ, ಭೇರಿ,

ಝಾಂಗಟೆ, ಗಂಟೆ ಇತ್ಯಾದಿ ವಾದ್ಯಗಳು ಬಾರಿಸಲಾಗುತ್ತವೆ. ನೀವಲ್ಲಿ ಬಗೆಬಗೆಯ ವಾದ್ಯಗಳನ್ನು ಕೇಳಬಲ್ಲಿರಿ. 'ಆಮೇಲೆ ನಾನು ಮೇಲಕ್ಕೇರಿ ಕೈಲಾಸದ್ವಾರಕ್ಕೆ ಬಂದೆನು. ಅಲ್ಲಿ ನಾನು ಒಂಬತ್ತು ಬಾಗಿಲುಗಳನ್ನೂ ನಾಲ್ಕು ಇಂಬಾದ ದಾರಿಗಳನ್ನೂ ಕಂಡೆನು. ಅಲ್ಲಿ ಎರಡು ಸ್ತಂಭಗಳೂ ಒಂದು ಶಿಖರವೂ ಇದ್ದವು,' ಎಂದವರು ಹೇಳುವರು. ಇಡಾ, ಪಿಂಗಳಾ ಎಂಬ ನಾಡಿಗಳೇ ಈ ಕಂಬಗಳು ಮತ್ತು ಸುಷುಮ್ನೆಯೆ ಶಿಖರ. ಶರೀರದ ನವದ್ವಾರಗಳೇ ಒಂಬತ್ತು ಬಾಗಿಲುಗಳು ಹಾಗೂ ರಾಜಯೋಗ, ಭಕ್ತಿಯೋಗ, ಕರ್ಮಯೋಗ ಮತ್ತು ಜ್ಞಾನಯೋಗಗಳೇ ಭಗವಂತನೆಡೆ ಹೋಗುವ ನಾಲ್ಕು ರಾಜಪಥಗಳು. ಈ ಬಗೆಯಾಗಿ ಇವೆಲ್ಲವನ್ನು ರೂಪಕಾತ್ಮಕ ರೀತಿಯಿಂದ ವಿವರಿಸಬಹುದು.

"ನಾನು ಮುಂದಕ್ಕೆ ಹೋದ ಮೇಲೆ, ಏಳು ಬಣ್ಣಗಳಿಂದ ಹೊಳೆಯುತ್ತಿರುವ ಜ್ಯೋತಿರ್ಲಿಂಗವನ್ನು ಕಂಡೆ– 'ಸಪ್ತವರ್ಣದ ಲಿಂಗ ಕಂಡಿಹನೋ!" ಎಂದು ಸರ್ಪಭೂಷಣರು ಉಸುರುವರು. ಕಾಮನಬಿಲ್ಲಿನಲ್ಲಿ ಕಾಣುವ ಸಪ್ತವರ್ಣಗಳು (Vibgyor) ಪಾರಮಾರ್ಥಿಕ ದರ್ಶನದಲ್ಲಿ ಕಾಣಬರುವ ಬಣ್ಣಗಳ ಕೇವಲ ತೀರಕಿರಿಯ ಪ್ರತಿನಿಧಿಗಳು. ಸರ್ಪಭೂಷಣರು ಹೇಳುವುದೇನೆಂದರೆ: "ನಾನು ಆ ಲಿಂಗವನ್ನು ಕಂಡೆನಷ್ಟೇ ಅಲ್ಲದೆ, ಮತ್ತೊಂದು ಸೋಜಿಗದ ಸಂಗತಿಯು ಆಗ ಜರುಗಿತು. ಆ ಲಿಂಗವು ಬಂದು ನನ್ನ ಅಂಗೈಯಲ್ಲಿ ನೆಲೆಸಿತು. ಅದು ನಾನು ಮಾಡಿ ಇಲ್ಲವೆ ಮಾಡಿಸಿ ಅಂಗೈಯಲ್ಲಿರಿಸಿದ ಪ್ರತೀತಾತ್ಮಕವಾದ ಶಿವಲಿಂಗವಿರಲಿಲ್ಲ. ಅದು ತಾನಾಗಿಯೆ ಬಂದು ಜ್ಯೋತಿರ್ಲಿಂಗವಿದ್ದಿತು. 'ಜ್ಯೋತಿರ್ಲಿಂಗವು ಕರದಿ ಕಾಣಿಸಿತೋ." ಇದು ನಿಜವಾದ ಲಿಂಗಪೂಜೆ. "ನಾನು ಗುಡಿಯನ್ನು ಸೇರಿದ ತರುವಾಯ, ಸ್ವಲ್ಪ ಮೇಲಕ್ಕೆ ಏರಿದೆ. ನಾನು 'ಅಡಕೇಶ್ವರ'ನೆಂಬ ಸಣ್ಣ ಲಿಂಗದೆಡೆ ಹೋದೆ. ಈ ಲಿಂಗವು ಮಿದುಳಿನ ಮಧ್ಯದಲ್ಲಿರುವ Pituitary Body ಎಂಬ ಗ್ರಂಥಿಯಂತಹದೇ ಇರುವುದು. ಈ ಗ್ರಂಥಿಯ ಹಿಂಭ್ಬದಿಯಲ್ಲಿ ಮಧುರವಾದ ಅಮೃತರಸದ ಪಂಚಧಾರೆಗಳು ಪ್ರವಹಿಸುವವು. ಇವೇ ಪಂಚವಿಧ ಅತೀಂದ್ರಿಯ ಅನುಭವಗಳು ಮತ್ತು ದರ್ಶನ, ಶ್ರವಣ, ಗಂಧ, ಸ್ಪರ್ಶ, ರುಚಿ ರೂಪಿಯಾದ ಈ ಐದು ಮಧುರವಾಹಿನಿಗಳ ನೀರನ್ನು ಪೂರ್ಣ ಅರಿವಿನಿಂದ ಸೇವಿಸಿದವರು ಮೃತ್ಯುವಿನ ಬಾಧೆಯನ್ನು ಮೀರುವರು.

"ಈ ಅಡಕೇಶ್ವರನ ಆಚೆಗೆ ಹೋಗ, ನಾನು ಆ ಹೆಸರಾದ ಕದಳಿ ಬನವನ್ನು ಸೇರಿದೆ. ಕನ್ನಡ ಸಾಹಿತ್ಯದಲ್ಲಿ ಸುಪ್ರಸಿದ್ಧವಾದ ಬಾಳೆಯ, ಗಿಡಗಳಿಂದ ದಟ್ಟಾಗಿ ತುಂಬಿದ ಈ 'ಕದಳಿಬನ'ವು ಪಾರಮಾರ್ಥಿಕ ಸಾಧನ–ಸಿದ್ಧಿಗಳ ನೆಲೆವೀಡಾಗಿತ್ತು. ಸಂತರನೇಕರು ಅಲ್ಲಿ ಅಮರತ್ವವನ್ನು ಪಡೆದುದುಂಟು. ಪ್ರಭುದೇವರು ಆ 'ಕದಳಿ

ಬನ'ದಲ್ಲಿಯೇ ಐಕ್ಯವನ್ನು ಪಡೆದರು. ಅವರು ಗುಹೆಯನ್ನು ಸೇರಿದಾಗ, ಗುಹೇಶ್ವರನನ್ನು ಕಂಡರು. ಇದನ್ನು ನಾವು ಮುಂದೆ ಕಾಣಬಹುದು. ಅದರ ಮೂಲಕ ಗುಹೇಶ್ವರ ಎಂಬುದು ಅವರ ಮುದ್ರಿಕೆಯಾಗಿ ಪರಿಣಮಿಸಿತು. ಆ ಹಿರಿಯ 'ನರಸಿಂಹ ಸರಸ್ವತಿ'ಯವರು ಪ್ರತ್ಯಕ್ಷವಾಗಿ ಈ ಕದಳಿ ಬನಕ್ಕೆ ತೆರಳಿ, ಈ ಜಗತ್ತಿಗೆ ಶರಣುಹೊಡೆದರು. ಶಂಕರಾಚಾರ್ಯರು ಕೂಡ ಶ್ರೀಶೈಲ ಪರ್ವತದ ಮೇಲೆಯೆ ಭಗವಂತನ ಸಾಕ್ಷಾತ್ಕಾರವನ್ನು ಪಡೆದರೆಂಬುದು ತುಂಬ ವಿಲಕ್ಷಣ ವಾದುದು.

"ಸಿದ್ಧಿಂ ತಥಾವಿಧಂ ಮನೋವಿಲಯಂ ಸಮಾಧೀ।
ಶ್ರೀಶೈಲ ಶೃಂಗ ಕುಹರೇಷು ಕದೋಪಲಪ್ಸ್ಯೇ॥
ಗಾತ್ರಂ ಯದಾ ಮಮ ಲತಾಃ ಪರಿವೇಷ್ಟಯಂತಿ ।
ಕರ್ಣೇ ಯದಾ ವಿರಚಯಂತಿ ಖಗಾಶ್ಚ ನೀಡಾಃ॥

ಶ್ರೀಶೈಲ ಪರ್ವತದ ಶೃಂಗದಲ್ಲಿಯ ಗವಿಯಲ್ಲಿ ನಾನಿರುವಾಗ ಪಡೆದಂಥ ಮನೋಲಯಾತ್ಮಕ ಸಮಾಧಿಯನ್ನು ಅದೆಂದು ನಾನು ಪಡೆವೆ? ಆಗ ನನ್ನ ಗಾತ್ರಗಳನ್ನು ಲತೆಗಳು ಸುತ್ತುವವು. ನನ್ನ ಕಿವಿಗಳಲ್ಲಿ ಹಕ್ಕಿಗಳು ಗೂಡುಗಳನ್ನು ರಚಿಸುವವು" ಎಂದು ಆಚಾರ್ಯರು ಹೇಳಿರುವರು. ಕದಳೀ ಬನದಲ್ಲಿ ತಾವು ಹಿಂದೊಮ್ಮೆ ಪಡೆದಂಥ ಪಾರಮಾರ್ಥಿಕ ಅನುಭವವನ್ನು ಮರಳಿ ಪಡೆಯು ವುದಕ್ಕಾಗಿ ಶಂಕರಾಚಾರ್ಯರ ಅಂತಃಕರಣವು ಕೂಡ ಕಳವಳಗೊಂಡಿತು. ಆದುದ ರಿಂದಲೇ ಶ್ರೀಶೈಲ ಪರ್ವತವೂ, ಕದಳೀ ಬನವೂ, ಅಲ್ಲಿಯ ಗುಹೆಗಳೂ ಇವೆಲ್ಲ ಪವಿತ್ರ ಹಾಗೂ ಪ್ರಧಾನ ವಸ್ತುಗಳಾಗಿ ಪರಿಣಮಿಸಿರುವವು. ಈ ಕದಳೀ ಬನವನ್ನು ಸಾರಿ, ಅಲ್ಲಿಯ ಗುಹೆಯನ್ನು ಸೇರುವುದು, ಪಾರಮಾರ್ಥಿಕ ಜನರ ಉಚ್ಚತಮ ಆಕಾಂಕ್ಷೆಗಳಲ್ಲಿ ಒಂದಾಗಿರುವದು. ಆ ಬನದಲ್ಲಿ ಒಂದೇ ಗುಹೆಯಿರದೆ, ಅನೇಕ ಗುಹೆಗಳಿರುವವೆಂದು ನಾನು ಕೇಳಿರುವೆ-ಅರಿತಿರುವೆ. ಪ್ರತಿಯೊಬ್ಬನು ತನಗೆ ಸೇರುವ ಯಾವುದೇ ಗುಹೆಯನ್ನು ಸೇರಿ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳ ಬಹುದು. ಈ ಸಾಕ್ಷಾತ್ಕಾರವನ್ನುಳಿದು ಬೇರೆ ಉದ್ದೇಶ ಸಾಧನೆಗಾಗಿ ಗುಹೆಗೆ ಹೋಗಿ ಪ್ರಯೋಜನವೇನು? ನೀವು ಅಲ್ಲಿ ಹೋಗಿ ಹುಲಿಗಳಂತೆ ಬಾಳಕೂಡದು. ನೀವಲ್ಲಿಗೆ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಲು ಹೋಗತಕ್ಕದು. ಅಂದಾಗಲೇ ನೀವು ಗುಹೇಶ್ವರ ನನ್ನು ಕುರಿತು ಮಾತನಡಲು ಅರ್ಹರಾಗುವಿರಿ. ಕೊನೆಯದಾಗಿ, 'ನಾನು ಆ ಅವಸ್ಥೆ ಯಲ್ಲಿ ಕದಳೀ ಬನಕ್ಕೆ ತೆರಳಿ, ಅಲ್ಲಿ ಧ್ಯಾನವನ್ನು ಮಾಡುತ್ತಿರುವಾಗ, ನಾನು ಬಯಲಿಗೆ ಬಯಲು ನಿರ್ಬಯಲಿನ ಅನುಭವವನ್ನು ಪಡೆದೆನೆಂದು' ಸರ್ಪಭೂಷಣರು

ಹೇಳುವರು. ಈ ರೀತಿ, ಗುರುಸಿದ್ಧರು ಅಂದರೆ ಸರ್ಪಭೂಷಣರು, ನಿರ್ಬಯಲಿನ ಅನುಭವವನ್ನು ಪಡೆದರು; ಮತ್ತು ಈ ನಿರ್ಬಯಲೇ ಅಂತಿಮ ಪರತತ್ವವೆಂಬ ಮಾತನ್ನು ನಾನು ಈ ಮೊದಲು ಅರುಹಿರುವನಷ್ಟೇ! ಈ ಪರತತ್ವದ ಸ್ವರೂಪವನ್ನು ಕುರಿತು ಸರ್ಪಭೂಷಣರು ಮತ್ತೊಂದು ಸೂಚನೆಯನ್ನು ಕೊಡುವರು. "ಅಯ್ಯ ಗುರುಸಿದ್ಧನೇ! ಆಗ ತಾನೆ ತಾನಾದೆನಯ್ಯ! ನಾನು ನನ್ನಲ್ಲಿಯೇ ಬೆರೆತು ಬಿಟ್ಟೆನಯ್ಯ" ಎಂದು ಅವರು ಹೇಳುವರು. 'ತದಾದ್ರಷ್ಟುಃ ಸ್ವರೂಪೇ ಅವಸ್ಥಾನಮ್।' 'ಆಗ ದ್ರಷ್ಟಾರನು ತನ್ನ ರೂಪದಲ್ಲಿಯೆ ನೆಲೆಸುವನು' ಎಂದು ಪತಂಜಲಿಯವರು ಕೂಡ ಹೇಳಿರುವರು. 'ನಾನು ನನ್ನ ರೂಪದಲ್ಲಿ ಬಾಳಿದೆ, ನಾನು ನನ್ನ ಸ್ವರೂಪವನ್ನು ಆತ್ಮನನ್ನು ಸಾಕ್ಷಾತ್ಕರಿಸಿಕೊಂಡೆ. ಅದೇ ಕದಳೀ ಬನದಲ್ಲಿಯ ಗುಹೆಯಲ್ಲಿ ನಾನು ಪಡೆದ ಉನ್ನತತಮ ಅನುಭವ' ಎಂದು ಸರ್ಪಭೂಷಣರು ಅರುಹುವರು. ಇದೇ ಸರ್ಪಭೂಷಣರು ನಮಗೆ ಅರುಹಿದ ಮನೋವೈಜ್ಞಾನಿಕ ಪರಂಪರಿತ ರೂಪಕದ ನಿಜವಾದ ಪರಿಣತಿ.

ಇನ್ನು ನಾವು ಹಿರಿಯ ದಾರ್ಶನಿಕ ಅನುಭಾವಿಗಳಾದ ನಿಜಗುಣ ಶಿವಯೋಗಿಗಳ ಕೊನೆಯ ಕವನದತ್ತ ತೆರಳುವಾ! ಅರಲ್ಲಿ ಕೆಲ ಅತಿ ಮಹತ್ವದ ಹಾಗೂ ಅದ್ಭುತವಾದ ದಾರ್ಶನಿಕ ಅಂಶಗಳಿರುವವು. ಅವನ್ನೀಗ ನಿಮಗೆ ಅರುಹಲಿರುವೆ. ಮೊದಲು ನಿಜಗುಣರು ಮೂರು ಲಿಂಗಗಳ ಧ್ಯಾನವನ್ನು ಕುರಿತು ಹೇಳಿರುವುದನ್ನು ಕೇಳಿ! ಅದೊಂದು ದಾರ್ಶನಿಕ ಚರ್ಚೆಯೆ ಇರುವುದು.

ಇದು ಕನ್ನಡ ದಾರ್ಶನಿಕ ಸಾಹಿತ್ಯದಲ್ಲಿಯ ಅತಿ ಕಠಿಣವಾದ ಅವತರಣಗಳಲ್ಲಿ ಒಂದಾಗಿರುವದು. ಅದನ್ನು ನಾವು ದಾರ್ಶನಿಕ ದೃಷ್ಟಿಯಿಂದ ವಿಭಜಿಸಿದೆವೆಂದರೆ, ನಿಜಗುಣರು ಈ ಮೂರು ಅಂಗಗಳಿಗೆ ನಿರ್ದೇಶಿಸಿದ ಕೆಲ ಪ್ರಧಾನ ಲಕ್ಷಣಗಳನ್ನು ನಾವದರಲ್ಲಿ ಕಾಣಬಹುದು. ನಾನು ಮುಖ್ಯ ಅಂಶಗಳನ್ನಷ್ಟೇ ವಿವರಿಸುವೆ ಇಷ್ಟಲಿಂಗವು ಅರ್ಥಾತ್ ಒಂದು ಭೌತಿಕ ಲಿಂಗವು. ಅದರ ಪೀಠ, ಪಿಂಡಿಕೆ ಹಾಗು ಗೋಮುಖಿಗಳು ಬಿಂದು-ನಾದ-ಕಲೆಗಳ ಪ್ರತಿನಿಧಿಗಳು. ಅದು ಪ್ರಪಂಚ ವೃಕ್ಷದ ಬೀಜ-ಬೇರು-ಟೊಂಗೆ ಎಂದೂ ಬಗೆಯಲಾಗಿದೆ. ಇದು ಇಷ್ಟಲಿಂಗದ ಕೇವಲ ಮತಪ್ರಕ್ರಿಯೆಗೆ ಸಂಬಂಧಿಸಿದ ವಿವರಣ. ಆದರೆ ಇದರಲ್ಲಿಯ ಎರಡು ದಾರ್ಶನಿಕ ಅಂಶಗಳು ವಿಚಾರಣೀಯವಾದವುಗಳು. ಈ ಲಿಂಗಬೋಧ ಮಾತ್ರವಿರುವುದು. 'ಅದು ಶುದ್ಧಪ್ರಜ್ಞೆಯೊಡನೆ ಏಕರೂಪವಾದುದಿರುವುದು.' ಅದು ಆತ್ಮ-ಪ್ರಜ್ಞೆ ಇರುವುದೋ ಇಲ್ಲವೋ ಎಂಬುದನ್ನು ನಾವು ಅರಿಯೆವು. ಅದು ಆತ್ಮಪ್ರಜ್ಞೆ ಇರಬಹುದು. ಪಾಶ್ಚಾತ್ಯ ದರ್ಶನದಲ್ಲಿ ಪ್ರಜ್ಞೆ ಹಾಗೂ ಆತ್ಮಪ್ರಜ್ಞೆಗಳನ್ನು ಕುರಿತು ಸಾಕಷ್ಟು ಚರ್ಚೆಯಾಗಿರುವುದು. ಆಮೇಲೆ ಎರಡನೆಯದಾಗಿ, ಈ ಲಿಂಗವು 'ತನಗೆ ತಾನು

ಆಧಾರವಾಗಿರ್ಪುದು.' ನೀವು ಸ್ಪಿನೋಝಾ ಎಂಬ ದಾರ್ಶನಿಕನ ಗ್ರಂಥಗಳನ್ನೋದಿದರೆ, ಅವನು ಮೂಲವಸ್ತುವಿನ ವ್ಯಾಖ್ಯೆಯನ್ನು ಮುಂದಿನಂತೆ ಮಾಡಿರುವುದನ್ನು ಕಾಣಬಹುದು: 'ಯಾವುದು ತನ್ನಲ್ಲಿಯೆ ನೆಲಿಸಿ, ತನ್ನಿಂದಲೇ ತನ್ನನ್ನು ಅರಿಯಬಲ್ಲದೋ ಅದು ಮೂಲವಸ್ತು.' ಆದುದರಿಂದ, ಈ ಲಿಂಗವನ್ನು ಸ್ಪಿನೋಝಾರವರ 'ಮೂಲ ವಸ್ತು'ವೆಂಬುದರೊಡನೆ ಚೆನ್ನಾಗಿ ಹೋಲಿಸಬಹುದು. ಈ ಎರಡು ದಾರ್ಶನಿಕ ಅಂಶಗಳನ್ನು ನಿಜಗುಣರ ತಿಳಿವಳಿಕೆಯಂತಿರುವ ಇಷ್ಟಲಿಂಗದಲ್ಲಿ ಕಾಣಬಹುದು.

ಪ್ರಾಣಲಿಂಗವು ಪಾರಮಾರ್ಥಿಕ ಲಿಂಗ. ಅದರಲ್ಲಿ ನಾವು ನಾಲ್ಕು ಲಕ್ಷಣಗಳನ್ನು ಕಾಣಬಹುದು. ಮೊದಲನೆಯದಾಗಿ, ಅದು ನಾದರೂಪವಿರವುದು. 'ಶ್ರವಣವಿಷಯವಾದ ಪರಮ ನಾದವೇ' ಅದು. ಈ ಪರಮ ನಾದವು ಅನಾಹತನಾದವು. ಅದು ಶ್ರವಣರೂಪಿಯಾದ ಅನುಭವದ ವಿಷಯ. ಎರಡನೆಯದಾಗಿ. ಅದು, ಒಳಗೆ ದೀಪವಿದ್ದ ವಿವರವುಳ್ಳ ಕುಂಭದೊಳಗಿಂದ ಹೊರಬರುವ ಬೆಳಕಿನ ಕಿರಣರೂಪವಿರುವದು. ಅನೇಕ ವಿವರಗಳುಳ್ಳ ಕುಂಭದಲ್ಲಿಯ ದೀಪವು ಆ ವಿವರಗಳೊಳಿಂದ ಬೆಳಕನ್ನು ಹೊರಚೆಲ್ಲುವಂತೆ, ಪ್ರಾಣಲಿಂಗವು ಕೂಡ ದೇಹದೊಳಗಿನ ವಿವರಗಳೊಳಗಿಂದ- 'ದೇಹಕರಣನಿಕರ ಮುಖದೊಳು'- ತನ್ನ ಬೆಳಕನ್ನು ಬೀರುತ್ತಿದೆ. ಮೂರನೆಯದಾಗಿ, ಅದು ಎಲ್ಲ ಬೇರೆ ಬೇರೆ ಚಕ್ರಗಳನ್ನು ನಿಜವಾಗಿ ದೇಹವನ್ನು ವ್ಯಾಪಿಸುವುದು. ಕೊನೆಯದಾಗಿ, ಅದು ಕೆಂಪು, ಮಿಂಚು, ರನ್ನ, ಚಿನ್ನ, ಸೊಡರು, ಚಂಚಲ ಲತಾಗ್ನಿ ಇತ್ಯಾದಿ ಬಗೆಬಗೆಯ ಬಣ್ಣಗಳನ್ನು ಹೊರಚೆಲ್ಲುವುದು. ಆದುದರಿಂದ ಒಟ್ಟಾರೆ ಪ್ರಾಣಲಿಂಗದ ನಾಲ್ಕು ಪ್ರಧಾನ ಲಕ್ಷಣಗಳಿರುವವು: ಅದು ಜ್ಯೋತಿರ್ಮಯವಿರುವುದು; ಅದರಲ್ಲಿ ಆಂತರಿಕ ಸಾಮರಸ್ಯವಿರುವುದು; ಅದು ಬಣ್ಣಗಳಿಂದ ತುಂಬಿರುವುದು; ಹಾಗೂ ಅದು ಇಡೀ ಶರೀರವನ್ನು ವ್ಯಾಪಿಸಿರುವುದು. ಇದು ಪ್ರಾಣಲಿಂಗದ ಸ್ವರೂಪ.

ಭಾವಲಿಂಗವೆಂಬುದು ಒಂದು ಬಲು ಮಹತ್ವದ ದಾರ್ಶನಿಕ ಕಲ್ಪನೆ. ಪಾಶ್ಚಾತ್ಯರ ಹಾಗೂ ಭಾರತೀಯರ ದರ್ಶನವನ್ನು ಚೆನ್ನಾಗಿ ಅಭ್ಯಸಿಸಿದವರೇ ಅದನ್ನು ಪೂರ್ತಿಯಾಗಿ ಅರಿಯಬಲ್ಲರು. ಈ ಭಾವಲಿಂಗದ ಕಲ್ಪನೆಯು ಅದೆಂತಹದು? ನಿಜಗುಣರು ಭಾವಲಿಂಗವನ್ನು ಇಷ್ಟಲಿಂಗ-ಪ್ರಾಣಲಿಂಗಗಳಿಂದ ಹೇಗೆ ಬೇರ್ಪಡಿಸಿರುವರು? ಅದರ ವೈಲಕ್ಷಣ್ಯವನ್ನು ಹೇಗೆ ಕಾಣಿಸಿರುವರು? ಭಾವಲಿಂಗವು ಸರ್ವವ್ಯಾಪಿಯಾದುದು. ಎರಡನೆಯದಾಗಿ, ಇಷ್ಟ-ಪ್ರಾಣಲಿಂಗಗಳು ಅದರ ಆವಿಷ್ಕಾರಗಳೆಂದು ಭಾವಿಸಬಹುದು. ಅದು ಆ ಲಿಂಗಗಳ ಮುಖಾಂತರ ಹೊಳೆಯುವುದು. ಆದುದರಿಂದ, ನೀವು ಈ ಲಿಂಗಗಳನ್ನು ಪರಸ್ಪರರೊಡನೆ ಹೋಲಿಸಿ ನೋಡಿದರೆ, ಯೋಗದ ಪರಿಭಾಷೆಯಲ್ಲಿ ಇಷ್ಟಲಿಂಗವು ಭೌತಿಕಲಿಂಗವಿರುವುದು,

ಪ್ರಾಣಲಿಂಗವು ಪಾರಮಾರ್ಥಿಕ ಲಿಂಗವಿರುವುದು, ಹಾಗು ಭಾವಲಿಂಗವು ದಾರ್ಶನಿಕ ಲಿಂಗವಿರುವುದು, ಎಂಬುದನ್ನು ಕಾಣಬಹುದು. ಈ ರೀತಿ ಭೌತಿಕತೆ, ಪಾರಮಾರ್ಥಿಕತೆ, ಹಾಗೂ ದಾರ್ಶನಿಕತೆ ಇವು ಈ ಲಿಂಗಗಳ ಮೂರು ಪ್ರಧಾನ ಸ್ವರೂಪಗಳು.

ನಿಜಗುಣರು ಮಾಡಿರುವ ಕೆಳಗಣ ಒಂದು ಸುಪ್ರಸಿದ್ಧ ವಿಧಾನವು ಕೊಂಚ ಎದೆಗಾರಿಕೆಯ ನಿಧಾನವೆಂದು ಹೇಳಬಹುದು: "ಈ ಭಾವಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳಲು ನೀವು ಗುರುಮಂತ್ರ ಶಕ್ತಿಯನ್ನು ನೆಮ್ಮಬೇಕಿಲ್ಲ. ಗುರುಮಂತ್ರ ಶಕ್ತಿಯ ನೆರವಿಲ್ಲದೆಯೆ ನೀವದನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲಿರಿ!" ಎಂದು ಅವರು ಹೇಳಿರುವರು. ಇದೊಂದು ಮಹತ್ವದ ವಿಷಯ. ಅದೇ ಮೇರೆಗೆ, "ಈ ಭಾವಲಿಂಗದ ಸಾಕ್ಷಾತ್ಕಾರಕ್ಕೆ ಯೋಗ-ಕರಣ-ಮಥನವೂ ಬೇಕಾಗಿಲ್ಲ. ನಿಮಗೆ ಯೋಗದ ಆವಶ್ಯಕತೆಯೂ ಇರುವುದಿಲ್ಲ' ಎಂದು ಅವರು ಹೇಳುವರು. ಅವರೀ ದಾರ್ಶನಿಕ ಮನೋವೃತ್ತಿಯನ್ನು ನೋಡಿ! ನಿಮಗೆ ಗುರುಮಂತ್ರವೂ ಬೇಕಾಗಿಲ್ಲ, ಯೋಗಸಾಧನವೂ ಬೇಕಾಗಿಲ್ಲ. ಇದೇ ಇಂದಿನ ಸಮಕಾಲೀನ ದರ್ಶನದಲ್ಲಿಯ ಶ್ರೇಷ್ಠ ಅದ್ವೈತದ ಇಲ್ಲವೆ ಅಭಿನ್ನ ಪರತತ್ವ ವಿಷಯಕ ಭೂಮಿಕೆ. ಇದರ ಜತೆಯಲ್ಲಿ. ಸಮಕಾಲೀನ ದಾರ್ಶನಿಕ ವಿಚಾರಗಳ ಕಂಗಳಿಂದ ಕಂಡಾಗ, ನಾವು ಇಲ್ಲಿ ಮೂರು ಮಹತ್ವದ ಮಾತುಗಳನ್ನು ಕಾಣಬಹುದು. ಭಾವಲಿಂಗವು 'ಮೂಲಕಾರಣ' ವಿರುವುದು. ಅದು ದಾರ್ಶನಿಕರು ಹೇಳುವಂತೆ 'ಸ್ವಂತ ಕಾರಣ.' ನಾಔಉ ಹೇಳಲಿರುವ ಕಾರಣ-ಕಾರ್ಯ-ಕರ್ಮಗಳು ಈ ಪರಮ ಕಾರಣದ ಆವಿರ್ಭಾವಗಳು. ಇದು ಕಾರ್ಯ-ಕಾರಣಭಾವದ ಸ್ವರೂಪವನ್ನು ಅರುಹುವ ಒಂದು ಮಾತು. ಎರಡನೆಯದಾಗಿ, ಭಾವಲಿಂಗವು, 'ಅಖಿಲ ಸಾಕ್ಷಿಕ'ವಾದುದು. ಇಲ್ಲವೆ ಪತಂಜಲಿಗಳು ಹೇಳುವಂತೆ 'ಸಾಕ್ಷಿ'ರೂಪವಾದುದು. ಈ ರೀತಿ ಇಡೀ ಪ್ರಪಂಚದ ದೃಷ್ಟಾರನು ಇಲ್ಲವೆ ಸಾಕ್ಷಿಯು ಎಂದರೇನೆಂಬುದನ್ನು ನೀವು ಕಾಣಬಹುದು. ಸಾಂಖ್ಯದರ್ಶನದಲ್ಲಿ ಪುರುಷನು ಪ್ರಕೃತಿಯಿಂದ ಬೇರ್ಪಡಿಸಲಾಗಿರುವನು. ಪ್ರಕೃತಿಯು ಪ್ರಧಾನ ಕರ್ತ್ರಿ ಇಲ್ಲವೆ ಶಿಲ್ಪಿಯೆಂದೂ, ಆದರೆ ಪುರುಷನು ಬರಿಯ ಸಾಕ್ಷಿ ಇಲ್ಲವೆ ದೃಷ್ಟಾರನೆಂದೂ ಬಗೆಯಲಾಗಿರುವದು. ಅರಿಷ್ಟಾಟಲ್‌ನು ಹೇಳುವ ಮೇರೆಗೆ ಸಾಕ್ಷಿತ್ವವು (Theoria) ಪುರುಷನ ಪ್ರಧಾನ ಲಕ್ಷಣವು; ಯಾಕೆಂದರೆ ಸೃಷ್ಟಿಯ ಕಾರ್ಯದಲ್ಲಿ ಅವನು ಸಕ್ರಿಯ ಭಾಗವಹಿಸುವುದಿಲ್ಲ. ಅವನು ಕೇವಲ ಪರಮಸಾಕ್ಷಿಯಾಗಿರುವನು. ಅದೇ ಈ ಭಾವಲಿಂಗದ ಸ್ವರೂಪವು. ಮೂರನೆಯದಾಗಿ, ಭಾವಲಿಂಗವು 'ಸಾಟಿದೋರದ ತೃಪ್ತಿಮಯವಾದುದು'. ಅದು ಉನ್ನತತಮ ಆನಂದಮಯವು. ಆದುದರಿಂದ,

ಇವೇ ನಿಜಗುಣರು ಕಲ್ಪಿಸಿದ ಭಾವಲಿಂಗದ ಗುಣವಿಶೇಷಗಳು. ಅದು ಪರಮಕಾರಣವು, ಅಖಿಲ ಸಾಕ್ಷಿಕವು ಹಾಗೂ ಕೊನೆಯದಾಗಿ ಪರಿಪೂರ್ಣಾನಂದ ಮಯವು. ಪ್ರತ್ಯಕ್ಷವಾಗಿ ಈ ಮಾತುಗಳಿಂದಲೇ ಪಾಶ್ಚಾತ್ಯ ಹಾಗೂ ಭಾರತೀಯ ದಾರ್ಶನಿಕರು ಪರತತ್ತ್ವವನ್ನು ಬಣ್ಣಿಸಿರುವರು.

ನಿಜಗುಣರು ಇನ್ನೊಂದು ಮಹತ್ವದ ಮಾತನ್ನು ಅರುಹಿರುವರು. ಮಾನವನು ಪಡೆಯಬೇಕಾದ ಅಂತಿಮ ಗುರಿ ಯಾವುದು? ಮಂದರಾಚಲ ಮಂಥನವು ನಿಂತಾಗ ಕ್ಷೀರಸಾಗರದಲ್ಲಿ ಉಂಟಾದ ಪರತಮ ಶಾಂತಿಯ ಅವಸ್ಥೆಯೆ ಆ ಗುರಿಯು. ಮಂದರಾಚಲವು ಆ ಸಾಗರವನ್ನು ಬಹುಕಾಲ ಕಡೆಯಿತು. ಅದೀಗ ತನ್ನ ಮಂಥನವನ್ನು ನಿಲ್ಲಿಸಿರುವದು. ಸಾಗರದಲ್ಲೀಗ ಪೂರ್ಣ ಶಾಂತಿಯು ನೆಲೆಸಿರುವುದು. ಅಂಥ ಶಾಂತಿಯೆ ಮಾನವನ ಗುರಿಯಾಗತಕ್ಕದ್ದು. ಆದುದರಿಂದ ಎಲ್ಲ ಮಾನಸಿಕ ಹಾಗೂ ದೈಹಿಕ ಮಂಥನವು ನಿಂತ ಮೇಲೆ ಉಂಟಾಗುವ ಅಖಂಡ ಶಾಂತಿಯನ್ನು ಪಡೆಯುವುದೇ ಮಾನವನ ಪರತಮ ಆದರ್ಶವು. ನಾನಿಲ್ಲಿ ಇನ್ನೊಂದು ಮಾತನ್ನು ಸೂಚಿಸಬಯಸುವೆ. ಸುರಾಸುರರು ಯಾವನನ್ನು ಮಂದರ ಪರ್ವತಕ್ಕೆ ಸುತ್ತಿ ಸಾಗರವನ್ನು ಕಡೆದರೋ, ಆ ಕಡೆಯುವ ಹಗ್ಗವಾದ ವಾಸುಕಿ ಹಾವಿನ ಅವಸ್ಥೆಯು ಏನಾಗುವುದು? ಅದು ಕೂಡಲೇ ಎಲ್ಲಿಯೋ ಮಾಯವಾಗುವುದು; ಎಲ್ಲಿ ಎಂಬುದನ್ನು ನಾವು ಅರಿಯೆವು. ಮಂದರಾಚಲದ ಮಂಥನ ಕಾರ್ಯವು ನಿಂತು, ಸಾಗರವು ಶಾಂತವಾದಾಗ, ವಿಷಯವಾಸನೆಯ ಪ್ರತೀಕವಾದ ಹಾವನ್ನು ಕುರಿತು ಯಾರು ಏನನ್ನು ಅರುಹಬಲ್ಲರು? ಅದರ ಇರವೇ ಎಂದೋ ಇಲ್ಲದಾಗಿರುವುದು. ಆದುದರಿಂದ ನಿಜಗುಣರ ಅಭಿಮತದಂತೆ, ಈ ಬಗೆಯ ಪರಮ ಶಾಂತಿಯನ್ನು ಪಡೆಯುವುದೇ ಧ್ಯಾನದ ಪರಮ ಗುರಿಯಿರುವುದು. ಭಾರತೀಯ ದಾರ್ಶನಿಕರ ಈ ಶಾಂತಿಕಲ್ಪನೆಯು ಸ್ಟೋಯಿಕ್ಸ ಎಂಬ ದಾರ್ಶನಿಕರ 'ಉದಾಸೀನತೆ' ಹಾಗೂ ಎಪಿಕ್ಯೂರಿಯನ್ಸ್ ಎಂಬ ದಾರ್ಶನಿಕರ 'ನಿರ್ಲೇಪತೆ'- ಈ ಕೇವಲ ನೈತಿಕ ಕಲ್ಪನೆಗಳಿಗಿಂತ ತುಂಬ ಮೇಲ್ತರಗತಿಯದಿರುವುದು. ಭಾರತೀಯ ದಾರ್ಶನಿಕರ ಶಾಂತಿಯು ಮೊದಲೆ ಪಡೆಯಲಾದ ಉಚ್ಚತಮ ಪಾರಮಾರ್ಥಿಕ ಅನುಭಾವದ ತರುವಾಯ ಉಂಟಾಗಿರುವುದರಿಂದಲೂ, ಆ ಅನುಭಾವವನ್ನದು ಮೀರುವದ ರಿಂದಲೂ, ಅದು ಈ ನೈತಿಕ ಕಲ್ಪನೆಗಳಿಗಿಂತ ಹೆಚ್ಚು ಶ್ರೇಷ್ಠವಾಗಿರುವುದು.

■■

ಪ್ರಕರಣ ಹದಿನೈದು

ಪಾರಮಾರ್ಥಿಕ ಅನುಭವಗಳ ಪ್ರಮಾಣ-ಪ್ರಾರಂಭಗಳು

ನಾನಿನ್ನು ಪಾರಮಾರ್ಥಿಕ ಅನುಭವಗಳ ಪ್ರಮಾಣ-ಪ್ರಾರಂಭಗಳನ್ನು ವಿವರಿಸುವೆ. ನಿಮ್ಮಲ್ಲಿಯ ಐರೋಪ್ಯ ಹಾಗೂ ಭಾರತೀಯ ದರ್ಶನಗಳನ್ನು ಅಭ್ಯಸಿಸಿದವರು ಮತ್ತು ಅವೆರಡರಲ್ಲಿಯ ವಿವಾದಗಳನ್ನು ಅರಿತವರು, ಪ್ರಮಾಣದ ಸಮಸ್ಯೆಯು ಅದೆಷ್ಟು ಜಟಿಲವಾದುದು ಎಂಬುದನ್ನು ಅರಿಯಬಹುದು. ಭಾರತೀಯ ದರ್ಶನಗಳಲ್ಲಿ ನಾವು ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಇತ್ಯಾದಿ ಪ್ರಮಾಣಗಳ ಬಗೆಗೆ ಕಾದಾಡಿರುವೆವು. ಐರೋಪ್ಯ ದರ್ಶನಗಳಲ್ಲಿ ಅವರು ಪ್ರಾಚೀನ ಕಾಲದಲ್ಲಿ, ಪುಷ್ಟೀಕರಣ, ಆತ್ಮಪ್ರಜ್ಞೆ ಇರುವಿಕೆ ವಿಚಾರಗಳ ಏಕತೆ, ಅನುಬೋಧೆ, ಸಮಗ್ರ ವಿಚಾರ ಇತ್ಯಾದಿಗಳನ್ನು ಕುರಿತು ಕಾದಿದರು. ಆಧುನಿಕ ದರ್ಶನದಲ್ಲಿ ಈ ವರೆಗೆ ಮೂರು ವಿಚಾರಪರಂಪರೆಗಳು ಪ್ರಚಲಿತವಿರುವವು. ಅವು ಪ್ರಮಾಣದ ಸ್ವರೂಪವನ್ನು ಕುರಿತು ಪರಸ್ಪರರೊಡನೆ ಕಾದಾಡುತ್ತಿರುವವು. ವಾಸ್ತವವಾದಿಗಳ ಪ್ರಮಾಣವು ಅನುರೂಪತೆಯೂ, ಆದರ್ಶವಾದಿಗಳದು ಸುಸಂಬದ್ಧತೆಯೂ, ಪ್ರಯೋಜನವಾದಿಗಳದು ಉಪಯುಕ್ತತೆಯೂ ಇರುವುದು. ಅರ್ಥಾತ್ ನಾನಿಂದು ವಿವರಿಸಲಿರುವುದು ವ್ಯಾವಹಾರಿಕ ಪ್ರಮಾಣವನ್ನು, ಸಾಕ್ಷಾತ್ಕಾರದ ಪ್ರಮಾಣವನ್ನು ಕೇವಲ ಬೌದ್ಧಿಕ ಪ್ರಮಾಣವನ್ನಲ್ಲ. ನಾವು ಅನೇಕ ವಿಷಯಗಳಿಗಾಗಿ ವ್ಯರ್ಥವಾಗಿ ಕಾದಿದೆವು, ಕಾದುವೆವು. ಆದರೆ ನಮ್ಮ ಸ್ವಂತ ಅನುಭವವೇ ನಮಗೆ ತುಂಬ ಮಹತ್ವದ್ದಾಗಿರುವುದು; ಮತ್ತು ಆ ಅನುಭವವೇ ಪರಸತ್ಯಕ್ಕೆ ಸತ್ಯತೆಯನ್ನು ನೀಡುವುದು. ಆದುದರಿಂದ ಕನ್ನಡ ಅನುಭಾವದಲ್ಲಿಯ ಸಾಕ್ಷಾತ್ಕಾರದ ಪ್ರಮಾಣದೆಡೆ ಸಾಗುವ ಮುನ್ನ ನಾನು ನಿಜಗುಣರೂ ಮಹಿಪತಿರಾಯರೂ ಅರುಹಿದ ದಾರ್ಶನಿಕ ಹಾಗೂ ನೈತಿಕ ಪ್ರಮಾಣಗಳನ್ನು ಕುರಿತು ಕೆಲ ಮಾತುಗಳನ್ನು ಹೇಳಬಯಸುವೆ.

'ನಿಜ ಊಹಿಸಬಾರದು ಸಂಪನ್ನಾ' ಎಂಬ ತಮ್ಮ ಪದದಲ್ಲಿ ನಿಜಗುಣ ಶಿವಯೋಗಿಗಳು ಔಪನಿಷದಿಕ ದರ್ಶನ ಹಾಗೂ ವೇದಾಂತಗಳ ನಿಕಟ ಪರಿಚಯವನ್ನ ಕಾಣಿಸಿರುವರು. ಮೊದಲು ಅವರು ಹೇಳುವುದೇನಂದರೆ, ನಿಜವಸ್ತು ವಚನಕ್ಕೆ ಗೋಚರವಿರುವುದಿಲ್ಲ ಹಾಗೂ ಮನಸ್ಸಿಗೂ ಗೋಚರವಿರುವುದಿಲ್ಲ. ಇಲ್ಲಿ

ಮನಸ್ಸು ವಿಚಾರ-ಕಲ್ಪನೆಗಳೆರಡನ್ನೂ ಒಳಗೊಂಡಿರುವುದು. ವಾಸ್ತವಿಕವಾಗಿ, ನೀವು ಪರತತ್ವವನ್ನು ಶಬ್ದಗಳ ಮುಖಾಂತರವಾಗಿಯಾಗಲಿ, ಇಲ್ಲವೆ ವಿಚಾರ-ಕಲ್ಪನೆಗಳ ಮುಖಾಂತರವಾಗಿಯಾಗಲಿ ಪಡೆಯಲರಿಯಿರಿ ಎಂಬುದೇ ಈ ವಚನದ ತಿರುಳು. ಉಪನಿಷತ್ತುಗಳೂ ಕೂಡ ಅದು 'ಅವಾಙ್ಮಾನಸಗೋಚರ' 'ಮಾತುಮನಗಳಿಂದ ತಿಳಿಯಬಾರದಂತಹದು' ಇರುವದೆಂದು ಉಸುರಿದಾಗ, ಪ್ರತ್ಯಕ್ಷ ಇದೇ ಮಾತನ್ನು ಹೇಳಿರುವವು. ನೀವು ಈ ಕವನವನ್ನು ಲಕ್ಷ್ಯಗೊಟ್ಟು ಓದಿದಿರೆಂದರೆ ಇದರಲ್ಲಿ ನಿಜಗುಣರೂ ಕೂಡ ಇವೇ ಶಬ್ದಗಳನ್ನು ಬಳಸಿರುವುದನ್ನು ಕಾಣಬಹುದು. ಅವರು 'ವಚನಕೆ ಗೋಚರವಿಲ್ಲೆಂದು, ಮನಸಿಗೆ ಗೋಚರವಿಲ್ಲೆಂದು' ಹೇಳಿರುವರು. ಈ ಬಗೆಯಾಗಿ ಪರತತ್ವದ ಸ್ವರೂಪವನ್ನು ಅರುಹುವ ಇದೊಂದು ಮಾತು. 'ನಿತ್ಯ, ಜ್ಞಾನಪರಿಪೂರ್ಣ, ದೃಶ್ಯವಿಲಕ್ಷಣ' ಎಂಬುದು ಅದನ್ನು ಕುರಿತು ಹೇಳಲಾದ ಎರಡನೆಯ ಮಾತು. ಅದೂ ತುಂಬ ಮಹತ್ವದ್ದಿರುವುದು. ಪರತತ್ವವು ಎರಡು ಬಗೆಯಾಗಿ ಅನಂತವಿರುವುದು: ಒಂದು ಅವಕಾಶದ ಬಗೆ; ಇನ್ನೊಂದು ಕಾಲದ ಬಗೆ. ಅದು 'ದೃಶ್ಯವಿಲಕ್ಷಣ'ವಿರುವುದು. ಇನ್ನು 'ವಿಲಕ್ಷಣ' ಎಂಬ ಶಬ್ದವನ್ನು ನೋಡಿ. ಬಾದರಾಯಣರು ಇಷ್ಟೊಂದು ಮಹತ್ವಕೊಟ್ಟದ್ದು ಇದೇ ಶಬ್ದಕ್ಕೆ. ಪರತತ್ವವು ಪೂರ್ತಿಯಾಗಿ 'ವಿಲಕ್ಷಣ'ವಾದುದು. 'ವಿಲಕ್ಷಣತ್ವಾದಸ್ಯ, ತಥಾತ್ವಂ ಚ ಶಬ್ದಾತ್' '(ಬ್ರಹ್ಮನು) (ಜಗತ್ತಿನ ಕಾರಣವು) ಅಲ್ಲ, ಯಾಕಂದರೆ (ಜಗತ್ತು) (ಬ್ರಹ್ಮನಿಂದ) ತೀರ ಭಿನ್ನಸ್ವರೂಪದ್ದಿರುವುದು; ಮತ್ತು ಅದರ ಹಾಗಿರುವಿಕೆಯು ಪವಿತ್ರ ಗ್ರಂಥಗಳಿಂದ (ತಿಳಿಯುವುದು)' ಎಂಬುದು ಬಾದರಾಯಣರ ಹೇಳಿಕೆ. ನಾವು ಇಂದ್ರಿಯಗೋಚರ ಜಗತ್ತೆಂದು ಬಗೆಯುವ ವಸ್ತುವಿನೊಡನೆ ಅದರ ಯಾವ ಬಗೆಯ ಸಂಬಂಧವೂ ಇರುವುದಿಲ್ಲ. 'ನಿತ್ಯ, ಜ್ಞಾನಪರಿಪೂರ್ಣ, ಸುಖಾತ್ಮಕ' ಎಂಬ ಶಬ್ದಗಳು, ಸಂಸ್ಕೃತ ಪದವಿನ್ಯಾಸವಾದ 'ಸಚ್ಚಿದಾನಂದ' ಎಂಬುದರ ಅರ್ಥವನ್ನು ಪ್ರತ್ಯಕ್ಷವಾಗಿ ಅರುಹುವವು. ಸತ್ ಅಂದರೆ ನಿತ್ಯ; ಚಿತ್ ಅಂದರೆ ಜ್ಞಾನಪರಿಪೂರ್ಣ; ಮತ್ತು ಆನಂದವೆಂದರೆ ಸುಖಾತ್ಮಕ. ಈ ರೀತಿ ಪರತತ್ತ್ವವು ಸ್ಥಲ ಕಾಲಗಳೆರಡರ ದೃಷ್ಟಿಯಿಂದಲೂ ಅನಂತವಾದುದು; ಅದು ಜ್ಞಾನದಿಂದ ಪರಿಪೂರ್ಣವಾದುದು ಹಾಗೂ ಆನಂದಪೂರ್ಣವಾದುದು. ಸಚ್ಚಿದಾನಂದ ಸ್ವರೂಪವಾದುದು. ಇದರ ಅರ್ಥವೇನು? ಐರೋಪ್ಯ ದರ್ಶನದಲ್ಲಿ ಇದರರ್ಥವನ್ನು ಈ ಬಗೆಯಾಗಿ ಅರುಹಲಾಗಿದೆ. ಪರತತ್ವವು ಸತ್ಯ, ಜ್ಞಾನ ಹಾಗೂ ಆನಂದ. ಇದೇ ಮಾತನ್ನೇ 'ಸಚ್ಚಿದಾನಂದ' ಎಂಬ ಪದವಿನ್ಯಾಸವು ಅರುಹುವದು. ಈ ರೀತಿ ಪರತತ್ವವು ದೃಶ್ಯವಿಲಕ್ಷಣವಿರುವುದು, ಸಚ್ಚಿದಾನಂದವಿರುವುದು.

ಇನ್ನು ನಿಜಗುಣರು ಅರುಹಿದ ಸಿದ್ಧಾಂತಕ್ಕೆ ಆಧಾರವಾವುದು? ಪರತತ್ವದ ಸ್ವರೂಪವನ್ನು ಕುರಿತು, ಶ್ರುತಿಗಳೆಲ್ಲ, ಒಟ್ಟುಗೂಡಿ (ಶ್ರುತಿಗಳ ಮೊತ್ತ) ಈ ಸಹಕೃತ ವಿಧಾನವನ್ನು ಮಾಡಿರುವವು. ಮೊತ್ತವೆಂದರೆ ಸಮೂಹ. ಎಲ್ಲ ಶ್ರುತಿಗಳ ಸಮೂಹ ಅಂದರೆ ಎಲ್ಲ ಶ್ರುತಿಗಳು ಕೂಡಿ ಪರತತ್ವದ ಸ್ವರೂಪವನ್ನು ನಮಗೆ ಈ ಬಗೆಯಾಗಿ ತಿಳಿಸಿರುವವು, ಅರಿಯಲು ನೆರವಾಗಿರುವವು. ಬಾದರಾಯಣರ ಸೂತ್ರಗಳನ್ನು ಇಲ್ಲವೇ ಅವರ ಮೊದಲಿನ ೪ ಸೂತ್ರಗಳನ್ನಷ್ಟೇ ಓದಿಕೊಂಡವರು. ಅವರು ಬಹುತರವಾಗಿ ಇವುಗಳಿಗೆ ಸಮಾನವಾದ ಶಬ್ದಗಳನ್ನೆಯೇ ಬಳಸಿರುವರೆಂಬುದನ್ನು ಕಾಣಬಹುದು: ಬಾದರಾಯಣರು (೧) 'ಶಾಸ್ತ್ರಯೋನಿತ್ವಾತ್।' ಶಾಸ್ತ್ರಗಳು (ಬ್ರಹ್ಮನ ಬಗೆಗೆ) ಸರಿಯಾದ ಜ್ಞಾನವನ್ನು ಮಾಡಿಕೊಡುವ ಸಾಧನ; ಮತ್ತು (೨) 'ತತ್ತು ಸಮನ್ವಯಾತ್।' ಯಾಕಂದರೆ ಅದು (ಎಲ್ಲ ವೇದಾಂತ ಗ್ರಂಥಗಳ) ಪ್ರಧಾನ ಅಭಿಪ್ರಾಯವು ಎಂದು ಹೇಳಿರುವರು. ಶಾಸ್ತ್ರವು ಯಾವುದು? ಅದು ನ್ಯಾಯವಲ್ಲ, ವೈಶೇಷಿಕವಲ್ಲ, ಸಾಂಖ್ಯವಲ್ಲ ಇಲ್ಲವೆ ಯೋಗವಲ್ಲ. 'ಶಾಸನಾತ್ ಶಾಸ್ತ್ರಮ್' ಶಾಸನದ ಮೂಲಕ–ಆಳುವ ಸಾಮರ್ಥ್ಯದ ಮೂಲಕ ಅದಕ್ಕೆ ಶಾಸ್ತ್ರವೆಂಬ ಹೆಸರು. ಇದನ್ನೇ ಎಲ್ಲ ಭಾಷ್ಯಕಾರರು ವಿಶೇಷವಾಗಿ ಹೇಳಿರುವರು. ಭಗವಂತನು ಇರುವ. ಯಾಕಂದರೆ ಅವನೇ ಎಲ್ಲ ವೇದಗಳ ಮೂಲ. ಅವನಿಂದಲೇ ಎಲ್ಲ ವೇದಗಳು ಉದಿಸಿರುವವು. ಶಾಸ್ತ್ರಯೋನಿತ್ವಾತ್।ತತ್ತು ಸಮನ್ವಯಾತ್। ಈ ವಿಷಯವನ್ನೊಳಗೊಂಡ ಎಲ್ಲ ವೇದಾಂತ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಇವನ್ನು ಸಿದ್ಧಮಾಡಬೇಕಾಗುವುದು. ಸಮನ್ವಯವೆಂದರೆ ಸಂಯೋಜನ. ನಿಜಗುಣರ 'ಮೊತ್ತ'ವು ಇದನ್ನೆಯೆ ಅರುಹುವದು. ಇನ್ನು 'ವಿಲಕ್ಷಣ, ನಿತ್ಯ ಜ್ಞಾನಪರಿಪೂರ್ಣ ಹಾಗೂ ಸುಖಾತ್ಮಕ' ಈ ಶಬ್ದಗಳನ್ನು ನೋಡಿ. ಈ ರೀತಿ ನಿಜಗುಣರ ಉಪನಿಷತ್ತುಗಳ ಹಾಗೂ ವೇದಾಂತದ ಜ್ಞಾನವು ತುಂಬ ಗಾಢವಾದುದಿದ್ದಿತು. ಇದರ ಮೂಲಕವೇ ಅವರು ಈ ದಾರ್ಶನಿಕ ಅರ್ಥವಿವರಣೆಯನ್ನು ಕೊಡಲು ಸಮರ್ಥರಾದರು.

ನಾನಿನ್ನು ಎರಡನೆಯ ನೈತಿಕ ಪ್ರಮಾಣದೆಡೆ ತೆರಳುವೆ. ಅದನ್ನು ಕಾಖಂಡಿಕೆಯ ಮಹಿಪತಿರಾಯರು ತಮ್ಮ 'ನಿಜಗುಹ್ಯದ ಮಾತು' ಎಂಬ ಪದದಲ್ಲಿ ಅರುಹಿರುವರು. ಈ ಕವನದಲ್ಲಿ ಬುದ್ಧಿ, ಭಕ್ತಿ, ಮತ್ತು ನೀತಿ ಇವೆಲ್ಲ ಭಗವಂತನ ಸಾಕ್ಷಾತ್ಕಾರಕ್ಕೆ ಅವಶ್ಯವಾದವುಗಳು; ಆದರೆ ವಿಶೇಷವಾಗಿ ನೀತಿಯು ಅವಶ್ಯ ವಾದುದು. 'ನೀತಿಗೆ ನಿಜವಾಗಿಹ ಮುಕುಟ' 'ಪರತತ್ವದ ಜ್ಞಾನವು ನೀತಿಯು ಮುಕುಟವು' ಎಂದು ರಾಯರು ಹೇಳಿರುವರು. ನಾನು ಕಾಲೇಜದಲ್ಲಿ ಕಲಿಯುವ

ಕಾಲಕ್ಕೆ ಜನರು ಧರ್ಮನೀತಿಗಳ ಸಂಬಂಧವನ್ನು ಕುರಿತು ಕಾದಾಡುತ್ತಿದ್ದರು. ಎಷ್ಟೋ ಸಲ ದರ್ಶನದ ಪ್ರಾಧ್ಯಾಪಕರು ನೀತಿಗೆ ಅನುಕೂಲರಿದ್ದರು, ಧರ್ಮಕ್ಕಲ್ಲ, ಅದರ ಮೂಲಕವೇ ನೀತಿಯು ಧರ್ಮಕ್ಕಿಂತ ಮೇಲು ಎಂದು ಎಣಿಸಲಾಗಿತ್ತು. ಬುದ್ಧಿಯು ನಮ್ಮನ್ನು ಭಗವಂತನೆಡೆ ನೇರವಾಗಿ ಒಯ್ಯಲರಿಯದು ಎಂದು ಕವಿಯು ಹೇಳುವನು. ನೀವು ನಿಮ್ಮ ಬುದ್ಧಿಯನ್ನು ಕೆಲಮಟ್ಟಿಗೆ ಉಪಯೋಗಿಸ ಲೇಬೇಕು. ಆದರೆ ಅದು ನಿಮ್ಮನ್ನು ಅಂತಿಮವಾಗಿ ನಿಮ್ಮ ಕೊನೆಯ ಗುರಿಯೆಡೆ ಒಯ್ಯಲರಿಯದೆಂಬುದನ್ನು ಮಾತ್ರ ಚೆನ್ನಾಗಿ ಗಮನಿಸಬೇಕು. ಭಕ್ತಿಯ ನಿಜವಾಗಿ ಅಗತ್ಯವಾದುದು. ಅದರ ಹೊರತು ನೀವು ಒಂದಡಿಯನ್ನೂ ಮುಂದುಡಲರಿಯಿರಿ. ಮಹಿಪತಿರಾಯರು ತಮ್ಮ ಬೇರೊಂದು ಪದದಲ್ಲಿ 'ಭಾವಿಕಬಲ್ಲನು ಇದರ ಹುಯಿಲಾ' ಭಾವಿಕನೇ ಭಕ್ತಿಯುಳ್ಳವನೇ ಇದರ ರಹಸ್ಯವನ್ನು ಅರಿಯಬಲ್ಲನು' ಎಂದು ಹೇಳಿರುವರು. ಭಾವಿಕರಷ್ಟೇ ಪರತತ್ವವನ್ನು ಪಡೆಯಬಲ್ಲರು. ಈ ಪದದಲ್ಲವರು, ನಾನು ಇದೀಗ ಅರುಹಿದಂತೆ ನೀತಿಯನ್ನೆ ವಿಶೇಷವಾಗಿ ಒತ್ತಿ ಹೇಳಿರುವರು. ಅದನ್ನು ಒಂದು ಪ್ರಮಾಣವೆಂದು ಕಲ್ಪಿಸಿರುವರು. 'ನೀತಿಗೆ ನಿಜವಾಗಿಹ ಮುಕುಟ' ಎಂದು ಅರುಹಿರುವರು. ಅವರು ಮತ್ತೂ ಹೇಳುವದೇನೆಂದರೆ: ಅದು 'ಯತಿಜನರಿಗೆ ಪ್ರಕಟ'ವಾಗುವುದು. ಪುಣ್ಯವಂತರಿಗೆ ಹೊಳೆಯುವುದು. ನಿಮ್ಮ ನೈತಿಕ ಹಾಗೂ ಧಾರ್ಮಿಕ ಪ್ರಯತ್ನದಿಂದಲೇ ನೀವು ಪರತತ್ವವನ್ನು ಪಡೆಯಬಲ್ಲಿರಿ. ಕೇವಲ ಶಬ್ದಗಳು ನಿಮಗದರ ಪರಿಚಯವನ್ನು ಮಾಡಿಕೊಡಲರಿಯವು. 'ಕಣ್ಣೀಲಿ ಕಂಡು ಹೇಳದ ಮಾತ'ದು. ಕಣ್ಣಿನಿಂದ-ಒಳಗಣ್ಣಿನಿಂದ ಅದನ್ನು ಕಂಡರೂ, ಅದು ಶಬ್ದಗಳಿಂದ ಹೇಳಲು ಬಾರದಂತಹದು ಎಂದು ನಿಜಗುಣರಂತೆ ಮಹಿಪತಿರಾಯರು ಹೇಳುವರು. ನೀವು ಭಗವಂತನ ಕೆಲರೂಪಗಳನ್ನು ಕಾಣಬಲ್ಲಿರಿ ನಿಜ. ಆದರೆ ಅವನ್ನು ನೀವು ಶಬ್ದಗಳಿಂದ ಬಣ್ಣಿಸಲರಿಯರಿ. ಬಣ್ಣನೆಯು ದ್ವೈತವನ್ನು ಸೂಚಿಸುವುದು; ಅನುಭವವು ಏಕತೆಯನ್ನು ಸೂಚಿಸುವುದು. ಆದುದರಿಂದ ಅನುಭವವು ಬಣ್ಣನೆಯಿಂದ ದೊರೆಯಲರಿಯದು ಹಾಗೂ ಅದು ಮಾತಿನಲ್ಲಿ ಮೈದಳೆಯಲರಿಯದು. ಇದು ಮಹಿಪತಿರಾಯರ ಹೇಳಿಕೆ.

ಕೊನೆಗೆ ರಾಯರು ಒಂದು ಮಹತ್ವದ ವಿಧಾನವನ್ನು ಮಾಡಿರುವರು. ನೀವು ಈ ಪರತತ್ವದ ವಿಷಯವನ್ನು ಸದ್ಗುರುಗಳಿಂದ ಕಲಿಯತಕ್ಕದ್ದು. 'ಸೋಽಹಂ' 'ಅವನು ನಾನು' ಎಂಬ ಮಂತ್ರವು ಅನೇಕ ಉಪನಿಷತ್ತುಗಳ ವಚನಗಳನ್ನು ಆಧರಿಸಿರುವುದು. 'ತತ್ವಮಸಿ' 'ಅದು ನೀನಿರುವಿ' ಎಂಬುದು ಅಂಥ ಇನ್ನೊಂದು ಪದವಿನ್ಯಾಸ. ಆದುದರಿಂದ 'ಸೋಽಹಂ' ಹಾಗೂ 'ತತ್ತ್ವಮಸಿ' ಎಂಬೀ ವಚನ

ಗಳಲ್ಲಿಯ ಪರಸ್ಪರ ಸಂಬಂಧವೇನು? ಎಂಬ ಪ್ರಶ್ನೆಯು ಉದ್ಭವಿಸುವುದು. 'ತತ್ತ್ವಮಸಿ' ಎಂಬುದು ತೃತೀಯ ಪುರುಷದಲ್ಲಿಯೂ 'ಸೋऽಹಂ' ಎಂಬುದು ಪ್ರಥಮ ಪುರುಷದಲ್ಲಿಯೂ ಇರುವುದನ್ನು ನೀವು ಕಾಣಬಹುದು. 'ನಾನು ಪರತತ್ತ್ವ' ಎಂಬುದು ಒಂದು ಮಾತು, 'ನೀನು ಪರತತ್ತ್ವ' ಎಂಬುದು ಇನ್ನೊಂದು ಮಾತು. ಅಂತಿಮವಾಗಿ, 'ಸೋऽಹಂ' ಎಂಬುದು 'ತತ್ವಮಸಿ'ಗಿಂತಲೂ ಮೇಲಿನ ಭೂಮಿಕೆಯನ್ನು ಸೂಚಿಸುವುದು ಎಂಬುದನ್ನು ನೀವು ಕಾಣಬಹುದು. ಯಾಕಂದರೆ, ವ್ಯಕ್ತಿ ವಸ್ತುಗಳ ಏಕತೆಯೆಂಬ ಅವುಗಳ ಅಂತಿಮ ಅರ್ಥವು ಒಂದೇ ಇದ್ದರೂ 'ಸೋऽಹಂ' ಎಂಬುದು ನಿಮ್ಮ ಹಾಗೂ ಪರತತ್ತ್ವದ ಮಧ್ಯದಲ್ಲಿ ಸಾಕ್ಷಾತ್ ಹಾಗೂ ವೈಯಕ್ತಿಕ ಸಂಬಂಧವನ್ನು ನಿರ್ಮಿಸುವುದು. ನಾನು ಮಾಣಿಕ ಪ್ರಭುವಿನ ಬೇರೊಂದು ಪದದೆಡೆ ಸಾಗಿದಾಗ 'ತತ್ತ್ವಮಸಿ' ಎಂಬ ಪದವಿನ್ಯಾಸದ ಬೇರೆ ಅಂಗಗಳನ್ನು ವಿವರಿಸಬಹುದು. 'ತತ್ತ್ವಮಸಿ ಮಹಾವಾಕ್ಯವ ಕೇಳಿ ಹಾರಿಹೋಯಿತು ದ್ವೈತದ ಧೂಳಿ' ಎಂದು ಮಾಣಿಕ ಪ್ರಭುಗಳು ಹೇಳಿರುವರು. ಅದೇನೆ ಇದ್ದರೂ, ನಾವು ಪರತತ್ತ್ವವಿರುವೆವು ಎಂಬುದನ್ನು ಮಹಿಪತಿರಾಯರು ಹೇಳಿರುವರು. ಬರೀ ಶಬ್ದಗಳು ನಮಗೆ ಪರತತ್ತ್ವವನ್ನು ಕಾಣಿಸಲರಿಯವು ಎಂಬುದನ್ನರಿತು, ನಾವು ಶ್ರೇಷ್ಠ ತರಗತಿಯ ನೈತಿಕ ಪ್ರಯತ್ನವನ್ನು ಮಾಡಬೇಕು. ನಾವು ಮೈಮನಗಳನ್ನು ದುಡಿಸಿ, ಸಾಧುಸಂತರ ಜೀವನವನ್ನು ಬಾಳಿದಾಗ, ಹಾಗೂ ನಾವು ಭಗವಂತನ ಸೇವೆಯಲ್ಲಿಯೆ ನಮ್ಮನ್ನು ಪೂರ್ತಿಯಾಗಿ ಇರಿಸಿದಾಗ ಮತ್ತು ಆತನಿಗಾಗಿ ನಮ್ಮ ಸರ್ವಸ್ವವನ್ನು ತ್ಯಜಿಸಿದಾಗ ನಾವು ಭಗವಂತನನ್ನು ಕೆಲಮಟ್ಟಿಗೆ ಅರಿಯಬಹುದು. ಇದು ಮಹಿಪತಿರಾಯರ ನೈತಿಕ ಪ್ರಮಾಣವು.

ಈ ಎರಡು ಪದಗಳ ತರುವಾಯ, ನಾವು ಅತೀಂದ್ರಿಯ ಪ್ರಮಾಣವೆಂಬ ನಮ್ಮ ಚರ್ಚೆಯ ಮೂಲ ವಿಷಯದೆಡೆ ಬರುವೆವು. ಅದು 'ಅಂದವಾದ ಶ್ರೀಗಂಧದ ಗಿಡದೊಳು' ಎಂಬ ಮುಂದಿನ ಪದದಲ್ಲಿ ಅರುಹಲಾಗಿದೆ. ಈ ಪದವನ್ನು ನನ್ನ ಹೈದರಾಬಾದದ ಸ್ನೇಹಿತರೋರ್ವರು ನನಗೆ ಹಾಡಿತೋರಿಸಿದರು. ಈ ಪದದಲ್ಲಿಯ ವಿಷಯವು ಪಾಲ್ಮೋರ ಇಲ್ಲವೆ ಮಹಬೂಬನಗರ ಎಂಬ ಗ್ರಾಮಕ್ಕೆ ಸಂಬಂಧಿಸಿವುದು. ಈ ಗ್ರಾಮವು ಮೊಗಲಾಯಿ, ತೆಲಂಗಣ ಹಾಗೂ ಕರ್ನಾಟಕ ಇವುಗಳ ಗಡಿಯ ಮೇಲೆ ನೆಲೆಸಿರುವುದು. ಭೌಗೋಲಿಕ ಗಡಿಗಳು ಬರಬಹುದು, ಹೋಗಬಹುದು. ಆದರೆ ಈ ಪದದ ತಿರುಳು ಮಾತ್ರ ಸನಾತನ ಬೆಲೆಯುಳ್ಳದ್ದಿರುವುದು. ಎಂಟು-ಹತ್ತು ವರುಷಗಳ ಪೂರ್ವದಲ್ಲಿ ಆ ಪ್ರದೇಶದಿಂದ ಬಂದ ಓರ್ವನು ನನಗೀ ಪದವನ್ನು ಕೊಟ್ಟನು. ಅದೊಂದು ವಿಲಕ್ಷಣಯೋಗವೇ ಸರಿ. ಆದಿಯಲ್ಲಿಯೆ ಒಂದು ಮಾತನ್ನು ಹೇಳುವುದು ಅಗತ್ಯವಾದುದು. ಇದರಲ್ಲಿ ಅಲ್ಲಮಪ್ರಭುವು ಅಲ್ಲಮಸಾಹೇಬ ಎಂತಲೂ ಪಾಲ್ಮೋರ ಜಿಲ್ಲೆಯ ದೊರೆಯಂತಲೂ ಉಲ್ಲೇಖಿಸ

ಲಾಗಿರುವನು; ಮತ್ತು 'ದಂಡ' ಎಂಬರ್ಥದಲ್ಲಿ ಉರ್ದು ಶಬ್ದವಾದ 'ಜುಲ್ಮಾನಾ' ಎಂಬುದು ಬಳಸಲಾಗಿರುವುದು. ಈ ರೀತಿ ಈ ಪದದಲ್ಲಿ ಉರ್ದುಮಿಶ್ರಿತ ಕನ್ನಡವು ಕಾಣಬರುವುದು. ಇನ್ನು ಈ ಪದದ ತಿರುಳೇನು? ಇದು ನಮಗೆ ಅತೀಂದ್ರಿಯ ಸ್ವರೂಪದ ಪ್ರಮಾಣವನ್ನು ಅರುಹುವದು. ನಮ್ಮ ಇಂದ್ರಿಯಜನ್ಯ ಅನುಭವವು ಮಹತ್ವದ್ದಲ್ಲ, ಅತೀಂದಿಯ ಅನುಭವವೇ ಮಹತ್ವದ್ದು ಎಂದು ಹೇಳುವುದು.

ಪಾರಮಾರ್ಥಿಕ ಅನುಭವವು ಎಷ್ಟೋ ಸಲ, ಶ್ರೀಗಂಧದ ಇಲ್ಲವೆ ಜಾಲಿಯ ಬೀಜದಂತೆ 'ಪಾರಮಾರ್ಥಿಕ ಬೀಜ'ದ ದರ್ಶನದಿಂದ ಪ್ರಾರಂಭವಾಗುವುದು, ಎಂಬುದು ಈ ಪದದಲ್ಲಿಯ ಮೊದಲನೆಯ ವಿಷಯ. ಈ ಬೀಜಗಳ ಮೇಲೆ ಒಂದು ವರ್ತುಲದಲ್ಲಿ ಇನ್ನೊಂದು ವರ್ತುಲವಿರುವುದು. ಇದನ್ನೆ 'ಆರಕ್ತ ಪರಕೋಟ' 'ಆರಕ್ತವಾದ ಹೊರಗಣ ವಲಯ' ಎಂದು ತುಕಾರಾಮರು ಬಣ್ಣಿಸಿರುವರು. ಒಂದು ವರ್ತುಲದ ಸುತ್ತಲು ಅನಂತ ವರ್ತುಲಗಳಿರಬಲ್ಲವು ಎಂಬ ಕಲ್ಪನೆಯೇನೂ ತೀರ ತಳ್ಳಿಬಿಡುವಂತಹದಲ್ಲ. ಆದರೆ ಅಂತಿಮವಾಗಿ ಅವು ಅನಂತವಿದ್ದರೂ ನಮ್ಮ ಕಿರಿಯ ಬುದ್ಧಿ ಅನುಭವಗಳಿಗೆ ಒಂದೆರಡು ವರ್ತುಲಗಳು ಸಾಕಾಗುವವು. ಆದುದರಿಂದ ಈ ಪಾರಮಾರ್ಥಿಕ ಬೀಜವು ಬಲು ಮಹತ್ವದ ವಿಷಯ ಮತ್ತು ಅದರಿಂದ ನಾವು ನಮ್ಮ ಪಾರಮಾರ್ಥಿಕ ಅನುಭವವನ್ನು ಪ್ರಾರಂಭಿಸಬೇಕಾಗುವುದು. ಈ ಬೀಜಗಳು ಮಧುರವಾದವುಗಳು, ಸುಗಂಧಿತ ವಾದವುಗಳು; ಮತ್ತು ನಾವು ಈ ಬೀಜಗಳನ್ನು ಸವಿಯದೆ-ಸವಿಯುವವರೆಗೆ-ಜೀವನವನ್ನು ತೊರೆಯಬಾರದೆಂದು ಕವಿಯು ಹೇಳುವನು. ನಾವಿಲ್ಲಿಂದ ತೆರಳುವ ಮುನ್ನ ಇವನ್ನು ಸವಿಯೋಣ. ಈ ಪಾರಮಾರ್ಥಿಕ ಮರದ ಮೇಲಿನ ಶ್ರೀಗಂಧದ ಇಲ್ಲವೆ ಜಾಲಿಯ ಬೀಜಗಳಂತೆ, ವರ್ತುಲದಲ್ಲಿ ವರ್ತುಲವಿದ್ದ ಈ ಬೀಜಗಳನ್ನು ಕುರಿತು, ಉಪನಿಷತ್ತುಗಳ ಪದ್ಧತಿಯಂತೆಯೆ ಮುಂದಿನ ಕೆಲ ಮಾತುಗಳನ್ನು ಕವಿಯು ಹೇಳಿರುವನು: ನಾವು ಕಾಲಿಲ್ಲದೆ ಆ ಮರವನ್ನು ಹತ್ತಬಹುದಂತೆ; ಕೈಯಲ್ಲಿದೆ ಹಣ್ಣುಗಳನ್ನು ಹರಿಯಬಹುದಂತೆ, ಅಪಾಣಿಪಾದೋ ಜವನೋ ಹೃಹೀತಾ...' 'ಕಾಲಿಲ್ಲದೆ ನಡೆವನು, ಕೈಯಿಲ್ಲದೆ ಪಿಡಿವನು.' ಕುರುಡನು ಕಾಣಬಲ್ಲ, ಕಿವುಡನು ಕೇಳಬಲ್ಲ, ಇದೇ ಅತೀಂದ್ರೀಯವೆಂದು ಕರೆಯಲಾಗುವ ಅನುಭವ. ಆದುದರಿಂದ ಈ ಪಾರಮಾರ್ಥಿಕ ಬೀಜಗಳು ಒಂದು ಬಗೆಯ ಅತೀಂದ್ರಿಯ ಅನುಭವವನ್ನು ಒಳಗೊಂಡಿರುವವು. ಈ ಅತೀಂದ್ರಿಯತ್ವದ ಕಲ್ಪನೆಯನ್ನೇ ಹಿರಿಯ ಸಂತರನೇಕರು ಉಸುರಿರುವರು. ಅಲ್ಲಮಪ್ರಭುವು ಹೇಳುವದೇನೆಂದರೆ:

ಕಾಲಿಲ್ಲದ ಗಮನ, ಕೈಯಿಲ್ಲದ ಸೋಂಕು, ಬಾಯಿಲ್ಲದ ರುಚಿ
ಭಾವವೇ ಕರ್ಪುರವಾಗಿ, ಪರಮದೇಹಿ! ಎಂದು ಬೇಡುವ
ಪರಮನ ತೋರಯ್ಯ ಗುಹೇಶ್ವರಾ!

ನಾವು ಈ ಪೂರ್ವದಲ್ಲಿ ಅರುಹಿದ ಮೇರೆಗೆ ಕೂಡಲೂರೇಶರು ಕೂಡ ಇದನ್ನೆಯೆ ತಮ್ಮ ಕೆಳಗಿನ ಸಾಲಿನಲ್ಲಿ ಅರುಹಿರುವರು:

ಕಾಲಿಲ್ಲದೆ ನಡೆವುದು, ಕೈಯಿಲ್ಲದೆ ಪಿಡಿವುದು. ತುಲಸೀದಾಸರು. 'ಬಿನು ಪಗಚೆಲೈ!' 'ಕಾಲಿಲ್ಲದೆ ನಡೆವನು' ಎಂಬಲ್ಲಿಯೂ, ಸೂರದಾಸರು 'ಜಾಕೀ ಕೃಪಾ ಪಂಗುಗಿರಿ ಲಂಘೈ!' 'ಯಾವನ ಕರುಣದಿಂದ ಕುಂಟನು ಗಿರಿಯನ್ನು ದಾಟಬಲ್ಲನು' ಎಂಬಲ್ಲಿಯೂ ಇದನ್ನೆಯೆ ಹೇಳುವರು. ಈ ರೀತಿ ಉಪನಿಷತ್ತುಗಳು, ಸೂರದಾಸರು, ತುಲಸೀದಾಸರು, ಕೂಡಲೂರೇಶರು, ಅಲ್ಲಮಪ್ರಭುಗಳು ಹಾಗೂ ಅವರ ಶಿಷ್ಯರು (ತಮ್ಮ ಹೆಸರನ್ನು ಹೇಳದಿರುವುದರಿಂದ ಅವರು ಯಾರೇ ಇರಲಿ)– ಇವರೆಲ್ಲರು ಅತೀಂದ್ರಿಯ ಅನುಭವದ ಸ್ವರೂಪವನ್ನು ಕುರಿತು ಒಂದೇ ಮಾತನ್ನು ಉಸುರಿರುವರು. ಅದರ ಸತ್ಯಾಸತ್ಯತೆಯನ್ನು ವಿವರಿಸಲು ಬರಲರಿಯದು. ನೀವೇ ಅದನ್ನು ಅನುಭವಿಸಬೇಕು. ನೀವದನ್ನು ಪಡೆದರೆ ನಿಮಗದು ಸತ್ಯವಾಗುವುದು, ಪಡೆಯದಿದ್ದರೆ, ಅಸತ್ಯವಾಗುವುದು. ಇದು ಈ ಪದದಲ್ಲಿಯ ಮೊದಲನೆಯ ಮಾತು.

ಇಂಥ ಒಳ್ಳೆಯ ಕಂಪುಳ್ಳ ಬೀಜಗಳಿರುವುದನ್ನು ಕೇಳಿ, ತುಡುಗರು ಇರುಳಿನಲ್ಲಿ ಆ ಮರವನ್ನು ಆಕ್ರಮಿಸಲು, ಹಾಗೂ ಆ ಹಣ್ಣುಗಳನ್ನೆಲ್ಲ ತೆಗೆದುಕೊಳ್ಳಲು ಬಯಸಿದರು. ಈ ರೀತಿ, ಆರು, ಏಳು, ಎಂಟು, ಹತ್ತು ಹಂದಿ ಪರಿಚಿತರಿರುವರು. ಆದರೆ ಏಳು ಮಂದಿ ಅಷ್ಟೊಂದು ಪರಿಚಿತರಿಲ್ಲ. ಏಳು ಮಂದಿ ಅಂದರೆ ಏಳು ವ್ಯಸನಗಳು. ಆರು ಅಂದರೆ ವಿಕಾರಗಳು; ಎಂಟು ಅಂದರೆ ಮದಗಳು; ಹಾಗೂ ಹತ್ತು ಅಂದರೆ ಇಂದ್ರಿಯಗಳು. ಏಳು ವ್ಯಸನಗಳು ಮುಂದೆ ಕಾಣಿಸಲಾಗಿವೆ: ಬೇಟೆ, ಮದ್ಯಪಾನ, ದ್ಯೂತ, ತಿರಸ್ಕಾರ, ದಂಡ, ವ್ಯಭಿಚಾರ ಮತ್ತು ಶಿಕ್ಷೆ. ಈ ತುಡುಗರೆಲ್ಲರು ಆ ಕಂಪುಳ್ಳ ಹಾಗೂ ತುಂಬ ರುಚಿಯುಳ್ಳ ಪಾರಮಾರ್ಥಿಕ ಬೀಜಗಳನ್ನು ಕದ್ದೊಯ್ಯಲು ನಿಶ್ಚಯಿಸಿದರು. ಅಷ್ಟರಲ್ಲಿ ಕೋಳಿ ಕೂಗಿತು. ನಸುಕಿನ ಮೂರು ಗಂಟೆಯಾಯಿತು. ಆ ಮರದ ರಕ್ಷಕನು ಹಾಗೂ ಆ ಸ್ಥಲದ ಕಾವಲುಗಾರರು ಎಚ್ಚತ್ತರು. ಕೆಲ ಕಳ್ಳರು ಆ ತೋಟದಲ್ಲಿ ಪ್ರವೇಶಿಸಿದುದನ್ನು ಅವರು ಕಂಡರು; ಮತ್ತು ಅದನ್ನು ಅರಿತ ಕೂಡಲೆ ಅವರು ಮಿಂಚಿನ ವೇಗದಿಂದ ತಮ್ಮ ವಸ್ತ್ರಗಳನ್ನು ಅವರ ಮೇಲೆ ಎಸೆದರು. ಅದರಿಂದ ಕಳ್ಳರು ಭ್ರಾಂತರಾಗಿ ಕೊನೆಗೆ ಹಿಡಿಯಲ್ಪಟ್ಟರು. ತರುವಾಯ ಏನಾಯಿತು ಗೊತ್ತೇ? ಷಡ್ವಿಕಾರ, ಸಪ್ತವ್ಯಸನ, ಅಷ್ಟಮದ, ದಶೇಂದ್ರಿಯರೂಪಿಯಾದ ಈ ಕಳ್ಳರು, ಪಾಲ್ಮೋರ ಗ್ರಾಮಕ್ಕೆ ಒಯ್ಯಲ್ಪಟ್ಟರು. ಅಲ್ಲಿ ಆ ಜಿಲ್ಲೆಯ ದೊರೆಯಾದ ಅಲ್ಲಮಪ್ರಭುವು ವಾಸಿಸಿದ್ದನು. ಈ ಜನರು ಮಾಡಿದ ಅಪರಾಧದ ಸ್ವರೂಪವನ್ನು ಗಮನಿಸಿ, ಅವನು ಅವರಿಗೆ 'ಅರವತ್ತು' ನಾಣ್ಯಗಳ

ದಂಡವನ್ನು ವಿಧಿಸಿದನು. ಆ ಅರವತ್ತು ನಾಣ್ಯಗಳೆಂದರೆ, ಒಂದು ಗಂಟೆಯಲ್ಲಿಯ ಅರವತ್ತು ಮಿನಿಟುಗಳು; ಇಲ್ಲವೆ ಒಂದು ಮಿನಿಟನಲ್ಲಿಯ ಅರವತ್ತು ಸೆಕೆಂದುಗಳು. ಅವುಗಳಲ್ಲಿಯ ಒಂದರಲ್ಲಿಯೂ ನಾವು ನಮ್ಮ ಮನಸ್ಸನ್ನು ಭಗವಂತನಿಂದ ಬೇರೆಡೆ ಅಲೆಯಲು ಬಿಡಕೂಡದು. ಒಂದು ಶಾಶ್ವವು ಕೂಡ, ಒಂದು ಸೆಕೆಂದು, ಒಂದು ಮಿನಿಟು ಕೂಡ, ಭಗವಂತನ ನೆನವಿಲ್ಲದೆ ವ್ಯರ್ಥವಾಗಿ ಹೋಗಕೂಡದು. ಈ ರೀತಿ, ಅಲ್ಲಮಪ್ರಭುವು ಆ ಕಳ್ಳರಿಗೆ ಈ ದಂಡವನ್ನು ವಿಧಿಸಿದನು; ಮತ್ತು ಅವರೆಲ್ಲ ಆ ಶಿಕ್ಷೆಯನ್ನು ನಿರ್ವಹಿಸಲು ಉಪಭೋಗಿಸಲು ಸಂತೋಷದಿಂದ ಒಪ್ಪಿದರು. ಇಲ್ಲಿ 'ಅರವತ್ತು' ಶಬ್ವು ನಾದದ ದೃಷ್ಟಿಯಿಂದ 'ಅರವು' ಜ್ಞಾನ ಎಂಬ ಶಬ್ದದೊಡನೆ ಸಂಬಂಧಿಸಿರುವುದನ್ನು ಲಕ್ಷಿಸಬೇಕು. ಆದುದರಿಂದ ಅವರು ಭಗವಂತನನ್ನು ಕುರಿತು ಆಲೋಚಿಸತೊಡಗಿದರು. ಆತನ ನಾಮವನ್ನು ನೆನೆಯತೊಡಗಿದರು, ಹಾಗೂ ಕೊನೆಗೆ ಅವರು ಆ ದಂಡವನ್ನು ಸಲ್ಲಿಸಿ, ಜೀವನದ ವ್ಯಸನಗಳೊಳಗಿಂದ ಬಿಡುಗಡೆ ಮಾಡಿಕೊಳ್ಳಲು ಸಮರ್ಥರಾದರು ಹಾಗೂ ಮುಕ್ತಿಯನ್ನು ಪಡೆದರು. ಇದು ಈ ಪದದ ಅರ್ಥ.

ಇನ್ನು ನಾನು ಪಾರಮಾರ್ಥಿಕ ಅನುಭವಗಳಲ್ಲಿಯ ಪರಸ್ಪರ ವಿನಿಮಯ ಹಾಗೂ 'ಅನುಬೋಧೆ'ವೆಂದು ಕರೆಯಬಹುದಾದ ವಿಷಯಗಳ ಸ್ವರೂಪವನ್ನು ಒಳಗೊಂಡ ಮಹಿಪತಿರಾಯರ ಹಾಗೂ ಪುರಂದರದಾಸರ ಎರಡು ಪದಗಳೆಡೆ ಸಾಗುವೆನು. ಶರೀರಶಾಸತ್ರದ ದೃಷ್ಟಿಯಿಂದ ಹೇಳಬೇಕಾದರೆ, ಕಣ್ಣು ಕೇಳಬಲ್ಲುದೇ? ಹಾಗೂ ಕಿವಿಯು ಕಾಣಬಲ್ಲದೇ? ಎಂಬುದು ಒಂದು ಮಹತ್ವದ ಪ್ರಶ್ನೆ. 'ಇಲ್ಲ' ಎಂಬುದೇ ಅದಕ್ಕೆ ನಮ್ಮ ಉತ್ತರ. ಆದುದರಿಂದ, ಇಂದ್ರಿಯಗಳ ದೃಷ್ಟಿಯಿಂದ ಇಂಥ ಪರಸ್ಪರ ವಿನಿಮಯವು ಸಾಧ್ಯವೇ ಇಲ್ಲ. ಆದರೆ ಮಹಿಪತಿರಾಯರು ಸ್ವಲ್ಪ ಮೇಲಿನ ಭೂಮಿಕೆಯನ್ನು ತಳೆಯುವರು. ಅತೀಂದ್ರಿಯ ಅನುಭವಗಳೆಡೆ ಸಾರಿದೆ ವೆಂದರೆ, ಈ ಬಗೆಯ ವಿನಿಮಯವೇನೋ ಅಸಾಧ್ಯವಲ್ಲ ಎಂಬುದು ಗೊತ್ತಾಗು ವುದು. ಕಣ್ಣು ಕೇಳಬಲ್ಲದು; ಕಿವಿಯು ಕಾಣಬಲ್ಲದು. ಇಂತು ಮುಂತಾಗಿ ರಾಯರು ಸೂಚಿಸಿರುವರು ಮಾತ್ರ. ಆದರೆ ಪುರಂದರದಾಸರು ಒಂದು ಸ್ವಾರಸ್ಯಮಯ ವಿಧಾನವನ್ನು ಮಾಡಿರುವರು. ಅದು ಫ್ರೆಂಚ್ ಗಣಿತಜ್ಞನೂ ದಾರ್ಶನಿಕನೂ ಆದ ಡೇಕಾರ್ಟ ಎಂಬವನ ಸಿದ್ಧಾಂತದ ತಿರುಳನ್ನು ಒಳಗೊಂಡಿರುವುದು. ಆತನ ಆ ಆತ್ಮಪ್ರಜ್ಞೆಯ ಸಿದ್ಧಾಂತವೇ ಆಧುನಿಕ ದರ್ಶನದ ತಳಹದಿಯಾಗಿರುವುದು. ನಾವು ನಮ್ಮ ಆತ್ಮನ ಅರಿವನ್ನು ಪಡೆದಾಗಲೇ ಪರತತ್ವದ ಹೊಸ್ತಿಲಲ್ಲಿ ನಿಂತವೆಂದು ಹೇಳಬಹುದು. ಇದೇ ಡೇಕಾರ್ಡೇಯವರ ಆತ್ಮಪ್ರಜ್ಞೆಯತುಂಬ ವೈಶಿಷ್ಟ್ಯಪೂರ್ಣ ಸಿದ್ಧಾಂತ. ಇದನ್ನೇ ಪುರಂದರದಾಸರು ಸೂಚಿಸುವರು. ಆತ್ಮನು ಬೇರೆ ವಸ್ತುಗಳ ದರ್ಶನವನ್ನು ಪ್ರೀತಿಸುವನು. ಆದರೆ ಅವನು ಆತ್ಮದರ್ಶನವನ್ನು ಅಷ್ಟೊಂದು

ಪ್ರೀತಿಸುವುದಿಲ್ಲ. ನಿಜವಾಗಿ ಅವನದನ್ನೇ ಪ್ರೀತಿಸಬೇಕು. ಅವನು ಆತ್ಮದರ್ಶನವನ್ನು ಪ್ರೀತಿಸಿದಾಗ, ಆತ್ಮಪ್ರಜ್ಞೆಯುಳ್ಳವ ನಾಗುವನು-ಆತ್ಮಜ್ಞಾನವನ್ನು ಪಡೆಯುವನು; ಮತ್ತು ಅದಾದ ಮೇಲೆಯೇ ನಾವು ಪರತತ್ತ್ವನ್ನು ಮುಟ್ಟುವೆವು.

ಪುರಂದರದಾಸರು ಇದಕ್ಕೂ ಮುಂದೆ ಒಂದಡಿಯಿಡುವರು. ಅವರು ;ಕಣ್ಣು ಕೇಳಬಲ್ಲುದು' ಎಂಬುದನ್ನು ಅನುಮಾನಿಸುತ್ತ ಹೇಳುವುದಿಲ್ಲ. ಆದರೆ ಅವರದನ್ನು ಖಂಡತುಂಡಾಗಿ ಹೇಳುವರು. ಈ ಎಲ್ಲ ಅನುಭವಗಳ ಹಿಂಬದಿಯಲ್ಲಿ 'ಅನುಬೋಧ' ದ ಏಕತೆಯು ನೆಲೆಸಿರುವುದು. ಕಾಂಟರವರ ಅನುಬೋಧದ ಕಲ್ಪನೆಯು ತರ್ಕ. ಶಾಸ್ತ್ರಕ್ಕೆ ಇಲ್ಲವೆ ಜ್ಞಾನಶಾಸ್ತ್ರಕ್ಕೆ ಸಂಬಂಧಿಸಿರುವುದು. ಪುರಂದರದಾಸರದು ಅವರ ಪಾರಮಾರ್ಥಿಕ ಪಾರ್ಶ್ವದೆಡೆ ಸಾಗುವುದು. ಎಲ್ಲ ಐಂದ್ರಿಯ ಇಲ್ಲವೆ ಅತೀಂದ್ರಿಯ ಅನುಭವಗಳಿಗೆ ಹಿನ್ನೆಲೆಯಾಗಿ ಆತ್ಮನ- ಆ ಪಾರಮಾರ್ಥಿಕ ಪರತತ್ವವು ಇರುವುದರಿಂದ, ಈ ಎಲ್ಲ ವಿನಿಮಯಗಳು ಆಗಬಲ್ಲವು ಹಾಗೂ ಆಗೇ ತೀರುವವು. ಹಿಂದೀ, ಮರಾಠಿ, ಕನ್ನಡ ವಿಚಾರ ಸಾಹಿತ್ಯದಲ್ಲಿ ನಾವು ಇಂಥ ವಚನಗಳನ್ನು ಕಾಣುವೆವು: 'ಜೋ ದೇಖೇ ಸೋ ರಹೇ ನಹೀ । ರಹೇ ಸೋ ದೇಖೇ ನಹಿ।' 'ನೋಡುವವನು ಆಡುವುದಿಲ್ಲ; ಆಡುವವನು ನೋಡುವುದಿಲ್ಲ' ಎಂದು ಕಬೀರರು ಉಸುರಿರುವರು. ಇಂದ್ರಿಯಜನ್ಯ ಅನುಭವದ ದೃಷ್ಟಿಯಿಂದ ಒಂದು ಇಂದ್ರಿಯವು ಒಂದೇ ವಿಶೇಷ ಕಾರ್ಯವನ್ನು ಮಾಡಬಲ್ಲದು, ಇನ್ನೊಂದನ್ನಲ್ಲ, ಎಂಬುದು ಕಬೀರರ ಮೇಲ್ಕಾಣಿಸಿದ ಹೇಳಿಕೆಯ ತಿರುಳು. ಆದರೆ ಮುಂದೆ, ಅತೀಂದ್ರಿಯ ದೃಷ್ಟಿಯಿಂದ ಹೇಳುವಾಗ ಕಬೀರರೇ 'ನಯನಕೋ ಲಗೀ ಪ್ಯಾಸ।' 'ಕಣ್ಣು ನೀರಡಿಸಿತು,' 'ಬಾನೀ ಘೂಟ ಬಾಸ' 'ನನ್ನ ನಾಲಿಗೆಯು-ಮುಖವು-ಕಂಪನ್ನು ಬೀರಲಿದೆ.' ನನ್ನ ನಾಲಿಗೆಯು ಕಂಪನ್ನು ಸವಿಯುವುದು. 'ಕಂಪನ್ನು ಅರಿಯುವ ಮೂಗಿನ ಗುಣವು ಈ ನಾಲಿಗೆಯ ಸೊತ್ತಾಗಿದೆ' ಎಂದು ಉಸುರುವರು. ನಾವು ಪಾರಮಾರ್ಥಿಕ ಭೂಮಿಕೆಯನ್ನೇರಿದಾಗಲೇ, ಈ ಅತೀಂದ್ರಿಯ ಅನುಭವಗಳೆಲ್ಲ ಸಾಧ್ಯವಾಗುವವು. ಈ ಅನುಬೋಧಗಳು ಒದಗುವ ಕಾರಣಗಳನ್ನು ಪುರಂದರ ದಾಸರು 'ಲೋಕವಿಲಕ್ಷಣ, ಅಪ್ರಾಕೃತವಿಗ್ರಹ, ಪುರಂದರವಿಠ್ಠಲ' ಎಂಬ ಒಂದೆರಡು ಮಹತ್ವದ ಸಾಲುಗಳಲ್ಲಿಯೆ ಅರುಹಿರುವರು. ಭಗವಂತನ ಶರೀರವು ಮರ್ತ್ಯರ ಶರೀರದಂತಿರುವುದಿಲ್ಲ. ಅವನು 'ಲೋಕವಿಲಕ್ಷಣ'ನು. ಅವನನ್ನು ಕೇವಲ ಭೌತಿಕ ಇಲ್ಲವೆ ಮಾನವೀಯ ದೃಷ್ಟಿಯಿಂದ ಕಾಣತಕ್ಕದ್ದಲ್ಲ. ಅವನು ತನ್ನಿಂದ ತಾನೇ ಇರುವ, ತನ್ನಲ್ಲಿ ತಾನೇ ಇರುವ ಒಂದು ಅಸ್ತಿತ್ವ-ವಸ್ತು. ಅವನ ಶರೀರವು ಪೂರ್ತಿಯಾಗಿ ಅಪ್ರಾಕೃತವಾದುದು, ಪಾರಮಾರ್ಥಿಕವಾದುದು. ಆದುದರಿಂದ, ಭಗವಂತನ ಅನುಭವದಲ್ಲಿ ಪಾಲುಗಾರರಾದವರ ಅತೀಂದ್ರಿಯ ಅನುಭವಗಳಲ್ಲಿ ಕೂಡ ಇದೇ ಮಾದರಿಯ ಪರಸ್ಪರ ವಿನಿಮಯವೂ ಅನುಬೋಧವೂ ಒದಗುವದೆಂಬುದನ್ನು ಅರಿತಾಗ ಹಾಗೂ ಅದರ ಬಗೆಗೆ ನಮ್ಮ ಮನವರಿಕೆಯಾದಾಗ,

ಭಗವಂತನ ಸಾಮರ್ಥ್ಯವನ್ನು ಕುರಿತು ನಾವು ನಿರ್ಣಯವನ್ನು ಕೊಡಲರಿಯೆವು. ಆದುದರಿಂದ ಎಲ್ಲ ಅನುಭವಗಳ ಮೂಲಭೂತವಾದ ಈ ವಿಷಯವು ಬಲು ಮಹತ್ವದ್ದಿರುವುದು. ತರ್ಕಶಾಸ್ತ್ರ, ಮಾನಸಶಾಸ್ತ್ರ, ಹಾಗೂ ಜ್ಞಾನಶಾಸ್ತ್ರದಲ್ಲಿಯ ಅನುಬೋಧದ ಸ್ವರೂಪವನ್ನು ಚರ್ಚಿಸಲಾಗಿರುವುದು. ಆದರೆ ಪಾರಮಾರ್ಥಿಕ ಅನುಬೋಧದ ಸ್ವರೂಪವನ್ನು ಈವರೆಗೆ ಯಾರೂ ಚರ್ಚಿಸಿಲ್ಲ. ಅದನ್ನು ಪುರಂದರದಾಸರು ಚರ್ಚಿಸಿರುವು. ಅನುಬೋಧದ ಪಾರಮಾರ್ಥಿಕ ಸ್ವರೂಪವನ್ನು ತಿಳಿಸಿದ್ದಕ್ಕಾಗಿ ನಾವು ಅವರಿಗೆ ಧನ್ಯವಾದಗಳನ್ನು ಅರ್ಪಿಸಬೇಕು.

ಪ್ರಮಾಣಗಳ ಚರ್ಚೆಯ ತರುವಾಯ ನಾವು ಪಾರಮಾರ್ಥಿಕ ಅನುಭವದ ಉತ್ಪತ್ತಿಯೆಡೆ-ಪ್ರಾರಂಭದೆಡೆ-ತೆರಳುವಾ! ಉತ್ಪತ್ತಿಯೆಂದರೆ ಸಾಮಾನ್ಯವಾಗಿ ಅನುಭವಗಳು ಇದೀಗ ಪ್ರಾರಂಭವಾಗುವ ಬಗೆ. ಈ ಸಂದರ್ಭದಲ್ಲಿ ನಾವು ಪುರಂದರದಾಸ, ರೇವಣಸಿದ್ಧ ಹಾಗೂ ಚಿದಾನಂದ ಇವರ ಮೂರು ಪದಗಳನ್ನೂ ಕೊನೆಗೆ ಮಹಲಿಂಗರಂಗರ ಒಂದು ಪದವನ್ನೂ ವಿವರಿಸುವೆವು. ಈ ಸಂತರು ಮುತ್ತಿನ ಹಾಗೂ ರತ್ನದ ಅನುಭವದಿಂದ ಪ್ರಾರಂಭಮಾಡಿ ಮುಂದುವರಿಯುವೆವು ಎಂದು ಹೇಳುವರು. ಇದೀಗ ನಾವು ಈ ಪದಗಳ ಸ್ವರೂಪವನ್ನು ಅರಿಯುವಾ! 'ಮುತ್ತು ಕೊಳ್ಳಿರೊ ಜನು' ಎಂಬುದು ಪುರಂದರದಾಸರ ಅತಿ ಮಹತ್ವದ ಪದವು. ಅದು ಪಾರಮಾರ್ಥಿಕ ಅನುಭವದ ಸಗುಣಸ್ವರೂಪವನ್ನಷ್ಟೇ ಚರ್ಚಿಸುವುದಿಲ್ಲ. ಆದರೆ ಅವರು ಬೇರೆಡೆ ತಮ್ಮ 'ಬ್ರಹ್ಮಾನಂದದ ಸಭೆಯೊಳಗಲ್ಲಿ' ಎಂಬ ಪದದಲ್ಲಿ ಅರುಹಿದ ಮೇರೆಗೆ, ಇಲ್ಲಿಯೂ ಕೂಡ ಅವರು ನಿರ್ಗುಣ ಮುತ್ತನ್ನು ಬಣ್ಣಿಸಿರುವರು. ದಾಸರಾಯರು ಇಲ್ಲಿ ಮಾರಾಟಗಾರನ ಭೂಮಿಕೆಯನ್ನು ವಹಿಸಿ ರುವರು. 'ಮುತ್ತು ಕೊಳ್ಳಿರೊ ಜನರು! ಮತ್ತು ಕೊಳ್ಳಿರೊ!' 'ಕೊಳ್ಳಬಯಸುವವರೆಲ್ಲ ಅದನ್ನು ಕೊಳ್ಳಬಹುದು!' ಎಂದು ಅವರು ಸಾರುವರು. 'ಅದರ ಬೆಲೆಯೇನು'? ಎಂದು ಶಿಷ್ಯರು ಕೇಳಿರಬಹುದು. ಅದನ್ನು ಕುರಿತು ಅವರು ಈ ರೀತಿ ಹೇಳುವರು: ಅದರ ಬೆಲೆಯಲ್ಲಿ ಎರಡು ಅಂಶಗಳಿರುವವು. ಒಂದು ಧ್ಯಾನ, ಇನ್ನೊಂದು ದೈನ್ಯ. ನೀವು ಕ್ರೈಸ್ತರ ಅರ್ಥದ ದೈನ್ಯದಿಂದ ಈ ಮುತ್ತನ್ನು ಕೊಳ್ಳಬಲ್ಲಿರಿ. ತಾವು ದೀನರು, ಅಲ್ಪರು ಎಂದು ಬಗೆದ ವಿನಯಶಾಲಿಗಳೇ ಭಗವಂತನನ್ನು ಅರಿಯಬಲ್ಲರು. ಈ ದೈನ್ಯವು ಬರೀ ಆರ್ಥಿಕ ದಾರಿದ್ರ್ಯವಲ್ಲ. ಆದುದರಿಂದ ಧ್ಯಾನವೂ, ದೈನ್ಯವೂ ಈ ಶ್ರೇಷ್ಠವಾದ ದಿವ್ಯ ಮುತ್ತನ್ನು ಕೊಂಡುಕೊಳ್ಳಲು ನಿಮ್ಮನ್ನು ಸಮರ್ಥ ಮಾಡುವವು ಎಂದು ದಾಸರಾಯರು ಹೇಳುವರು. ಜ್ಞಾನೇಶ್ವರರೂ ಕೂಡ, 'ಲಕ್ಷ' ಎಂಬ ಶಬ್ದ ವನ್ನು ಎರಡರ್ಥದಲ್ಲಿ ಬಳಸಿ, "ನಾನು ಈ ಮುತ್ತನ್ನು 'ಲಕ್ಷಾಚೇ ಮೋಲೇ'- 'ಲಕ್ಷದ ಬೆಲೆಯಿಂದ' ಕೊಂಡುಕೊಳ್ಳುವೆ" ಎಂದು ಉಸುರಿರುವರು. 'ಲಕ್ಷದ ಬೆಲೆಯಿಂದ' ಎಂದರೆ ಲಕ್ಷರೂಪಿಯಾದ-ಅವಧಾನ ರೂಪಿಯಾದ ಬೆಲೆಯಿಂದ, ಅಥವಾ ಲಕ್ಷ ನಾಣ್ಯಗಳ ಬೆಲೆಯಿಂದ, ಎಂಬುದು ಅವರ ಹೇಳಿಕೆಯ ರಹಸ್ಯ. ಆ ರೀತಿಯಿಂದಲೇ

ನೀವು ಈ ಮುತ್ತನ್ನು ಕೊಳ್ಳಬಲ್ಲಿರಿ ಎಂದು ಜ್ಞಾನೇಶ್ವರರು ಹೇಳುವರು. ಕಬೀರರು ಕೂಡ ಅಂಥ ಪಾರಮಾರ್ಥಿಕ ಮುತ್ತಿನ ಅನುಭವವನ್ನು ಉಲ್ಲೇಖಿಸಿರುವರು: 'ನಜರನ ಆವ್ಯೆ ಆತಮ ಜ್ಯೋತಿ, ಜೈಸಾ ನಿರ್ಮಲ ಮೋತಿ'– 'ಆತ್ಮನ ಜ್ಯೋತಿಯು ಮುತ್ತಿನಂತೆ ಹೊಳೆಯುವುದನ್ನು ನಾನು ಕಂಡೆ' ಎಂದವರು ಉಸುರಿರುವರು.

ಇಂಥ ಹಿರಿಯರು ಈ ಮುತ್ತಿನ ಅನುಭವವನ್ನು ಅರುಹುತ್ತಿರುವ ಮೂಲಕ ಅದರ ಸತ್ಯತೆಯು ವಿಚಾರಿಸಲು ಯೋಗ್ಯವಾದುದು. ಪುರಂದರದಾಸರು ಈ ಮುತ್ತಿನ ಬೇರೆ ಮೂರು ಲಕ್ಷಣಗಳನ್ನು ವಿವರಿಸಿರುವರು. ನೀವದನ್ನು ಗಟ್ಟಿಯಾಗಿ ಹಿಡಿಯಲು ಬೇಕಾದಷ್ಟು ಯತ್ನಿಸಿದರೂ, ಅದನ್ನು ನೀವು ಹಿಡಿಯಲರಿಯಿರು. ಎರಡನೆಯದಾಗಿ, ಅದು ಪಾರ್ಥಿವ ಮುತ್ತು ಇರದ್ದರಿಂದ, ಅದನ್ನು ನೀವು ಮೂಗಿನ ಮೇಲೆ ಇರಿಸಲರಿಯರಿಮು, ಇಲ್ಲವೆ ಅದರ ಮೂಗುತಿಯನ್ನು ಮಾಡಲ ರಿಯರಿ. ಹಿಂದಿನ 'ಜತ್ತಿ' ಎಂಬ ಸಂಸ್ಥಾನದಲ್ಲಿ, ಶಿವಲಿಂಗವ್ವನವರೆಂಬ ಹೆಸರಿನ ಹಿರಿಯ ಶರಣೆಯರಿದ್ದರು. ಇವರ ಉಲ್ಲೇಖವನ್ನು ನಾನು ಈ ಮೊದಲು ಮಾಡಿರುವೆನಷ್ಟೇ. ಅವರೊಂದು ಅಂದವಾದ ಜೋಗುಳ ಪದವನ್ನು ರಚಿಸಿರುವರು. ಅದರಲ್ಲವರು ತಮ್ಮ ಗೆಳತಿಯರನ್ನು 'ಮುತ್ತಿನ ಮೂಗುತಿಯನ್ನು ಮೂಗಿನಲ್ಲಿಟ್ಟು' ಕೊಂಡು ತೊಟ್ಟಿಲ ತೂಗಲು ಬರಬೇಕೆಂದು ಆಮಂತ್ರಿಸಿರುವರು. ಅವರ ಪಾರಮಾರ್ಥಿಕ ಸಿದ್ಧಿಯನ್ನು ಕುರಿತು ಹೇಳಬೇಕಾದರೆ, ಅವರು ಮುಕ್ತಾಬಾಯಿ ಯವರ ಯೋಗ್ಯತೆಯನ್ನು ಪಡೆದಿದ್ದರು ಎಂಬುದು ನನ್ನ ಭಾವನೆ. (ನನಗವರ ವೈಯಕ್ತಿಕ ಪರಿಚಯವಿದ್ದಿತು. ಅವರೊಂದು ಅಸಾಧಾರಣವಾದ, ಅಪರೂಪವಾದ ವ್ಯಕ್ತಿ. 'ನ್ನ ಸದ್ಗುರು ನನ್ನ ಮೂಗಿನ ಮೇಲೆ ಮುತ್ತಿನ ಮೂಗುತಿಯನ್ನಿಟ್ಟನು' ಎಂದವರು ಹೇಳುವರು) ನಿಮಗೆ ಬೇಕಾದರೆ, ನೀವು ಈ ಮುತ್ತುಗಳ ಹಾರಗಳನ್ನು ಪಡೆಯಬಲ್ಲಿರಿ ಎಂಬುದು ಪುರಂದರದಾಸರು ಹೇಳುವ ಮೂರನೆಯಮಾತು. ಇದೊಂದು ಸಾಮಾನ್ಯವಾದ ವಾಡಿಕೆಯ ಅನುಭವ. ಪಾರಮಾರ್ಥಿಕ ಜೀವನ ಸಾಗರದಲ್ಲಿ ಕೆಲಕಾಲ ಮುಳುಗಿದವರೂ ಕೂಡ, ಈ ಮುತ್ತನ್ನು ಕಾಣಬಲ್ಲರಷ್ಟೇ ಅಲ್ಲದೆ, ಈ ಮುತ್ತುಗಳ ಮಾಲೆಯನ್ನೂ, ಅದೇ ಮೇರೆಗೆ ಇಂಥ ಮಾಲೆಗಳ ಅನಂತ ಸರಗಳನ್ನೂ ಕೂಡ ಕಾಣಬಲ್ಲರು. ಆದುದರಿಂದ, ಈ ಮುತ್ತಿನ ದರ್ಶನವು ಪಾರಮಾರ್ಥಿಕ ಅನುಭವ ಮಂದಿರದ ಹೊಸ್ತಿಲು ಎಂಬುದು ದಾಸರಾಯರ ಅಭಿಮತವು. ಕಬೀರರದೂ ಕೂಡ ಅದೇ ಅಭಿಮತವಿದ್ದಿತು. ತರುವಾಯ ಪುರಂದರ ದಾಸರು ಬಲು ಮಹತ್ವದ ವಿಧಾನವೊಂದನ್ನು ಮಾಡಿರುವರು: 'ಭ್ರಷ್ಟ ಜನರು ಈ ಮುತ್ತನ್ನು ಕಾಣಲರಿಯರು.' ಅದನ್ನು ಕಂಡ ಬಳಿಕ ಕೂಡ, ಅವರು ಪತಿತರಾದರೆ, ಅವರದನ್ನು ಕಳೆದುಕೊಳ್ಳುವರೆಂಬುದನ್ನೂ ಅವರದರಿಂದ ಸೂಚಿಸುವರು. ಆ ಅನುಭವವನ್ನು ಪಡೆದು, ಪತಿತರಾದ ಮೂಲಕ ಅದನ್ನು ಕಳೆದುಕೊಂಡವರ

ಉದಾಹರಣೆಗಳನ್ನು ನಾನು ಕಂಡಿರುವೆ. ಈ ಮುತ್ತನ್ನು ಕಂಡು ಅದನ್ನು ಕಳೆದುಕೊಳ್ಳುವುದಕ್ಕಿಂತ, ಅದನ್ನು ಕಾಣದಿರುವುದೇ ತುಂಬ ಮೇಲು. ಆದುದರಿಂದ 'ಭ್ರಷ್ಟಜನರು ಅದನ್ನು ಕಾಣುವುದು ಸಾಧ್ಯವೇ ಇಲ್ಲ'; ಮತ್ತು ಅದನ್ನು ಕಾಣಬಲ್ಲವರು, ನೀತಿಯನ್ನು ತೊರೆದರೆ ಅದನ್ನು ಕಳೆದುಕೊಳ್ಳುವರು. ಪುರಂದರ ದಾಸರ ಈ ವಿಧಾನವು, ಮಹಿಪತಿರಾಯರ 'ನೀತಿಗೆ ನಿಜವಾಗಿಹ ಮುಕುಟ' ಎಂಬ ವಿಧಾನವನ್ನೂ ಚೆನ್ನಾಗಿ ಸಮರ್ಥಿಸುವುದು. ಪಾರಮಾರ್ಥಿಕ ಅನುಭವದ ಪ್ರಾಪ್ತಿಯು ನೈತಿಕ ಜೀವನದ ಅಂತಿಮ-ಮುಕುಟಮಣಿ, ಕೊನೆಯದಾಗಿ, ಈ ದಿವ್ಯ ಮುತ್ತು ಅದೆಂತಹುದು? ನಿಜವಾಗಿ ಪುರಂದರದಾಸರು ಸಗುಣಪೂಜಕ ರಿದ್ದರೆಂಬುದರಲ್ಲಿ ಸಂದೇಹವೇ ಇಲ್ಲ. ಅವರು ವಿಠ್ಠಲ, ಕೃಷ್ಣ, ಇವರನ್ನು ಈ ಜಗತ್ತಿನಲ್ಲಿಯ ಆರಾಧ್ಯದೈವತ ಎಂದು ಭಾವಿಸಿದ್ದರು. ಆದರೆ, ಅವರು ಈ ಪಾರಮಾರ್ಥಿಕ ಮುತ್ತು ಹಾಗೂ ವಿಠ್ಠಲ ಇವರಲ್ಲಿ ಭೇದವನ್ನು ಕಲ್ಪಿಸಿರಲಿಲ್ಲ.

ನಾವಿನ್ನು ಸುಪ್ರಸಿದ್ಧ ಸಂತರಾದ ರೇವಣಸಿದ್ಧರ 'ಆರಿಗೆ ಕಾಣದೀ ಮುತ್ತು' ಎಂಬ, ಇಂಥ ಮುತ್ತಿನ ಸ್ವರೂಪವನ್ನು ಅರುಹುವ ಪದದೆಡೆ ತೆರಳುವೆವು. ಅವರ ಇತಿಹಾಸವೂ ವ್ಯಕ್ತಿತ್ವವೂ ಕಾಲಪುರುಷನ ಉದರದಲ್ಲಿ ಕೆಲಮಟ್ಟಿಗೆ ಮಾಯ ವಾಗಿರುವವು. ಆದುದರಿಂದ ಅವರ ಬಗೆಗೆ ಎಲ್ಲ ಸಂಗತಿಗಳನ್ನು ಕಂಡುಹಿಡಿಯು ವುದು, ಬಯಲಿಗೆ ತರುವುದು, ಬಲುಬಿಗಿಯಾದುದಾಗಿದೆ; ಆದರೆ ಅವರು ಕಾಡಸಿದ್ಧರ ಪೂರ್ವಕಾಲೀನರು ಎಂದು ಮಾತ್ರ ಹೇಳಬಹುದು. ನಾನು ಈ ಮೊದಲು ಅರುಹಿದ ಮೇರೆಗೆ, ಕರಾಡದ ಬಳಿಯಲ್ಲಿಯ ಒಂದು ಸ್ಥಲವು ಅವರ ವಾಸಸ್ಥಲವೆಂದು ತೋರಿಸಲಾಗುವುದು. ಮುಂದೆ ಕಾಣಿಸಿದ ವಿಲಕ್ಷಣ ಸಂಗತಿಯು ನಿಮ್ಮ ಕುತೂಹಲವನ್ನು ಕೆರಳಿಸದಿರದು. ಸುಮಾರು ಇಪ್ಪತ್ತು ವರುಷಗಳ ಪೂರ್ವದಲ್ಲಿ, ಅಂದಿನ ನಾಗಪುರದ ಗೃಹಮಂತ್ರಿಗಳಾದ ಶ್ರೀ ಎಂ.ವ್ಹಿ. ಜೋಶಿಯವರು ನನಗೊಂದು ಮದುವೆಯ ಔತಣದೋಲೆಯನ್ನು ಕಳುಹಿದ್ದರು. ಅದರ ಮೇಲ್ಭಾಗದಲ್ಲಿ 'ರೇವಣಸಿದ್ಧ ಪ್ರಸನ್ನ' ಎಂದು ಬರೆಯಲಾಗಿದ್ದಿತು. 'ರೇವಣಸಿದ್ಧ ಪ್ರಸನ್ನ' ಎಂಬ ಪದವಿನ್ಯಾಸವೂ ನಾಗಪುರದ ಗೃಹಮಂತ್ರಿಗಳಾದ ಶ್ರೀ ಜೋಶಿಯವರೂ, ಇವರಲ್ಲಿಯ ಸಂಬಂಧವನ್ನು ನಾನು ಅರಿಯದವನಾದೆ. ಆದರೆ ರೇಣಾವಿಯ ರೇವಣಸಿದ್ಧರು ಅವರ ಕುಲದೇವತೆಯಿದ್ದ ಮೂಲಕ, ಅವರದನ್ನು ಔತಣದೋಲೆಯ ಮೇಲ್ಬದಿಯಲ್ಲಿ ಮುದ್ರಿಸಿದರು. ರೇವಣಸಿದ್ಧರ 'ಬಹುದೊಡ್ಡದೀ ಜನ್ಮ' ಎಂಬ ಒಂದು ಪದವನ್ನು ನಾವು ಈ ಮೊದಲೇ ವಿವರಿಸಿರುವೆವು. ಈ ಪದವು ಇದರಷ್ಟು ಉನ್ನತವಾದ ಮಟ್ಟದ್ದಿರುವುದಿಲ್ಲ. ಆದರೂ ಇದೊಂದು ಒಳ್ಳೆಯ ಒದವು. ಅದರಲ್ಲಿ ರೇವಣಸಿದ್ಧರು ಮೊದಲು ಪಾರಮಾರ್ಥಿಕ ಅನುಭವದ ನೈತಿಕ

ಲಕ್ಷಣಗಳನ್ನು ಹೇಳಿರುವರು. 'ಇದು ಕಲ್ಲು ಮೆತ್ತಗೆ ಮಾಡುವವನೇ ಬಲ್ಲ' ಎಂದವರು ಉಸುರುವರು. ಅವರ ಪರಂಪರೆಯಲ್ಲಿಯೆ ಕೆಲ ಶತಕಗಳ ತರುವಾತ ಉದಿಸಿದ ನಿಂಬರಗಿ ಮಹಾರಾಜರವರು, ಇದೇ ಬಗೆಯಾಗಿ 'ಕಲ್ಲು ಮೆತ್ತಗೆ ಮಾಡಿಕೊಳ್ಳಣ್ಣಾ ಬಲ್ಲವನ ಕೇಳಿ!' ಎಂದು ಬೋಧಿಸಿರುವರು. ಹೃದಯದ ಸ್ಥಿರತೆಯು ಭಾವದಾರ್ಢ್ಯವು ನಿಶ್ಚಲವಾದ ದರ್ಶನವನ್ನು ದಯಪಾಲಿಸುವುದು ಎಂಬುದು ಅವರ ಎರಡನೆಯ ಹೇಳಿಕೆ. ನೀವು ಭಗವಂತನ ಅಚಲವಾದ ದರ್ಶನವನ್ನು ಪಡೆಯಬಯಸಿದರೆ, ನಿಮ್ಮಲ್ಲಿ ಹೃದಯದ ಸ್ಥೈರ್ಯವು-ಭಾವದಾರ್ಢ್ಯವು ಅತ್ಯಗತ್ಯವಾದುದು. 'ಆತಾ ದೃಷ್ಟಿಪುಢೇ ಐಸಾಚೀ ತೂರಾಹೇ' "ಇನ್ನು ಭಗವಂತನೇ ನೀನು ಎನ್ನ ಕಂಗಳೆದುರು ಇದೇ ಬಗೆಯಾಗಿ ಸ್ಥಿರವಾಗಿ ನಿಲ್ಲು" ಎಂದು ತುಕಾರಾಮರು ಹೇಳಿರುವರು. ಆದುದರಿಂದ. ಈ ಬಗೆಯಾಗಿ ನೀವು ಭಗವಂತನನ್ನು ಆಜ್ಞಾಪಿಸಬಲ್ಲವರು ಆಗಬೇಕಾದರೆ ನಿಮ್ಮ ಹೃದಯದಲ್ಲಿ ನಿಷ್ಠೆಯು ದೃಢವಾಗಬೇಕು. ನಿಮ್ಮ ನಿಷ್ಠೆಯು ದೃಢವಾದದ್ದಿದ್ದರೆ, ನಿಮ್ಮ ದೇವದರ್ಶನವು ಕೂಡ ನಿತ್ಯವಾದುದೂ ನಿಶ್ಚಲವಾದುದೂ ಆಗುವುದು. ಇಲ್ಲದಿದ್ದರೆ ಅದು ಚಂಚಲವಾಗುವುದು. ಪಾರಮಾರ್ಥಿಕ ಅನುಭವದ ನೈತಿಕ ಲಕ್ಷಣಗಳನ್ನು ಕುರಿತು ರೇವಣಸಿದ್ಧರು ಈ ಎರಡು ಮಾತುಗಳನ್ನು ಹೇಳಿರುವರು.

ಮುಂದವರು 'ಸೂತ್ರದ ಬಲವಿರಬೇಕು' ಎಂಬ ಇನ್ನೊಂದು ಅತಿ ಮಹತ್ವದ ವಿಧಾನವನ್ನು ಮಾಡಿರುವರು. ಈ ಸೂತ್ರವು ತುಂಬ ಮಹತ್ವದ್ದಿರುವುದು. 'ಸೂತ್ರ ಹಿಡಿದು ತಾ ಬಂದಿರಬೇಕು.' ಅಂದರೆ ನಾವು ಯಾವುದಾದರೊಂದು ಪಾರಮಾರ್ಥಿಕ ಪರಂಪರೆಗೆ ಸೇರಿರಬೇಕು. ನಾವು ಪಾರಮಾರ್ಥಿಕ ಪರಂಪರೆಯಲ್ಲಿ ಜನಿಸುವವರೆಗೆ, ನಮಗೆ ಯಾವ ಪಾರಮಾರ್ಥಿಕ ಅನುಭವವೂ ದೊರೆಯಲರಿಯದು. ನಾವು ಪಾರಮಾರ್ಥಿಕ ಅನುಭವವನ್ನು ಪಡೆಯಲು ಬಯಸಬಲ್ಲೆವು. ನಮಗೆ ಪರಂಪರೆಯ ಬೆಂಬಲವಿರಬೇಕು ಎಂಬುದು ಅವರ ಮೊದಲನೆಯ ಅರ್ಥ. 'ಸೂತ್ರದ ಬಲ' ಅಂದರೆ 'ಶ್ವಾಸದ ಬಲ'. ನಮಗೆ ಶಾಸ್ವದ ಬಲವಿರಬೇಕು ಎಂಬುದು ಅದರ ಎರಡನೆಯ ಅರ್ಥ. ನಮ್ಮ ಶ್ವಾಸಗಳನ್ನು ಎಣಿಸಿ, ನಾವು ಭಗವಂತನ ಧ್ಯಾನವನ್ನು ಮಾಡದ ಹೊರತು ಅವನು ನಮ್ಮವನಾಗಲರಿಯ. ಆದುದರಿಂದ ಇವೆರಡರ ನೆರವು ನಮಗೆ ಅವಶ್ಯವಾದುದು. 'ಅಂತರ್ಯಾಮಿನ್' ಎಂಬುದು ಸೂತ್ರ ಶಬ್ದದ ಮೂರನೆಯ ಔಪನಿಷದಿಕ ಅರ್ಥ. ಅಂತರ್ಯಾಮಿಯು ವಿಶ್ವದ ಶಾಸಕನೆಂದು ಬಗೆಯಲಾಗಿರುವನು; ಮತ್ತು ಸೂತ್ರ ಅಂದರೆ ವಿಶ್ವದಲ್ಲಿಯ ಎಲ್ಲ ಒಡವೆಗಳಲ್ಲಿ ಹಾದು ಹೋಗುವ ದಾರ ಎಂದು ಎಣಿಸಲಾಗಿದೆ. ನಾವು ನಮ್ಮ ಶ್ವಾಸ-ಉಚ್ಛ್ವಾಸಗಳನ್ನು ನಿಯಂತ್ರಿಸಬೇಕು, ಭಗವಂತನ ಧ್ಯಾನವನ್ನು ಮಾಡಬೇಕು,

ಪಾರಮಾರ್ಥಿಕ ಪರಂಪರೆಯನ್ನು ಸೇರಬೇಕು ಮತ್ತು ಅಂತರ್ಯಾಮಿಯ ಪ್ರಸಾದವನ್ನು ಪಡೆಯಬೇಕು. ಅಂದರೇನೇ ನಾವು ಭಗವಂತನನ್ನು ಸಾಕ್ಷಾತ್ಕರಿಸಿ ಕೊಳ್ಳಬಹುದು. ತರುವಾಯ, ಅನೇಕ ಸಲ ಹೇಳಲಾದ ಎರಡು ಅಮುಖ್ಯ ಮಾತುಗಳು ಇದರಲ್ಲಿ ಬಂದಿರುವವು. ಆ ಮುತ್ತು ಕತ್ತಲಲ್ಲಿ ಕಾಣಿಸಿದರೇನೇ, ಅದನ್ನು ನಿಜವೆಂದು ಬಗೆಯಬೇಕು. ಅದು ಕಲ್ಪನೆಯ ನಿರ್ಮಿತಿಯಲ್ಲ. ನೀವದನ್ನು ಕತ್ತಲಲ್ಲೂ ಕಾಣಬಲ್ಲವರಾಗಬೇಕು. ಇದು ಇಲ್ಲಿ ಬಂದ ಮೊದಲನೆಯ ಮಾತು. ನೀವದನ್ನು ನೆತ್ತಿಯಲ್ಲಿ ಕಾಣಬೇಕೆಂಬುದು ಎರಡನೆಯ ಮಾತು. ನೆತ್ತಿಯಲ್ಲಿ ಕಾಣಬೇಕು ಎಂದರೇನೆಂಬುದನ್ನು ನಾವು ಹಿಂದಿನ ಪ್ರಕರಣದಲ್ಲಿ ವಿವರಿಸಿರುವೆವು. ಅಲ್ಲಿ ಮನುಜನ ಮಿದುಳಿನಲ್ಲಿಯ ಎಲ್ಲ ಕುಹರಗಳ ಸವಿವರ ಚರ್ಚೆಯನ್ನು ಮಾಡಿರುವೆವು. ಅದನ್ನು ನೆತ್ತಿಯಲ್ಲಿ ಕಾಣಬೇಕೆಂಬುದನ್ನಷ್ಟೇ ಇಲ್ಲಿ ಅರುಹುವೆವು. ನಾವು ಕಂಗಳನ್ನು ಮುಚ್ಚಿ ಆ ಮುತ್ತನ್ನು ಕಾಣಬಲ್ಲವರಾಗಬೇಕು ಎಂಬುದು ರೇವಣಸಿದ್ಧರ ಹೇಳಿಕೆ. ರೇಣಾವಿಯ ಸಿದ್ಧಲಿಂಗದೇವರ ಭಕ್ತನಾದ ಕವಿಯು ಆಮೇಲೆ ಅರುಹುವದೇನೆಂದರೆ: 'ನೀವು ರೇವಗೀಪುರಕ್ಕೆ ಹೋಗಬೇಕು. ಮಹಾ ಮೇರು ಪರ್ವತವನ್ನು ಹತ್ತಬೇಕು, ಅಭಿಮಾನದಿಂದ ಆತ್ಮವಿಶ್ವಾಸದಿಂದ ಭಕ್ತಿಯ ಗವಿಯನ್ನು ಸೇರಬೇಕು ಮತ್ತು ಅಲ್ಲಿಯ ಸಿದ್ಧಲಿಂಗದೇವರನ್ನು ವಂದಿಸಬೇಕು.' ಒಬ್ಬ ಹಿರಿಯ ಸಂತನಿಂದ ಅವತರಿಸುವ ಪಾರಮಾರ್ಥಿಕ ಶಕ್ತಿಯ ಮುಖಾಂತರ ಇದೆಲ್ಲ ಸಾಧ್ಯವಾಯಿತೆಂದರೆ, ನೀವು ಆ ಪಾರಮಾರ್ಥಿಕ ಶಕ್ತಿಯಲ್ಲಿ ಕೆಲಮಟ್ಟಿಗೆ ಪಾಲುಗಾರರಾಗಲು ಸಮರ್ಥರಾಗಬಹುದು.

ಈ ಮುತ್ತನ್ನು ಕುರಿತು ಬರೆಯಲಾದ ಇನ್ನೊಂದು ಪದದೆಡೆ ನಾವು ತೆರಳುವೆವು. 'ಮುತ್ತು ಬಂದಿವೆ ಕೊಳ್ಳಿರಣ್ಣಾ' ಎಂಬ ಆ ಪದವು ಚಿದಾನಂದರೆಂಬ ಬೇರೊಬ್ಬ ಹಿರಿಯ ಸಂತರದು. ನಿಜವಾಗಿ ಮಹಾರಾಷ್ಟ್ರ, ಕರ್ನಾಟಕ ಮತ್ತು ಹಿಂದೀ ಪ್ರದೇಶಗಳ ಈ ಸಂತರೆಲ್ಲರು ಈ ಮುತ್ತುಗಳ ಸ್ವರೂಪವನ್ನು ಕುರಿತು ಒಂದೇ ಬಗೆ ಯಾಗಿ ಉಸುರಲಿರುವಾಗ, ನೀವು ಅವರ ಪಾರಮಾರ್ಥಿಕ ಅನುಭವವನ್ನು ಅಷ್ಟೊಂದು ಸಹಜವಾಗಿ ಕಡೆಗಣಿಸಲರಿಯಿರಿ. ಆದಿಶರಣರು ತಮ್ಮ ತನುಮನಗಳ ತ್ಕಕಡಿಯನ್ನು ಸಮನಾಗಿ ಹಿಡಿದು ಈ ಮುತ್ತನ್ನು ತೂಗಿದರು. ಅವರು ಆ ತರಾಜಿನ ಮಣಿದಾರವನ್ನು ಎಳ್ಳಷ್ಟೂ ಅತ್ತಿತ್ತ ಹೊಯ್ದಾಡಗೊಡಲಿಲ್ಲ. ಅವರಿದನ್ನು ಬೇಸರ ಕಳೆದು ಬೇಸರಿಸದೆ ಮಾಡಿರುವರು. 'ಬೇಸರ ಕಳೆದು' ಎಂಬುದಕ್ಕೆ 'ಬಾಸರ ಕಳೆದು' ಎಂಬ ಇನ್ನೊಂದು ಪಾಠವಿರುವುದು. 'ಬಾಸರ' ಅಂದರೆ 'ಕಾಣಿ' ಹೆಚ್ಚಿನ ತೂಕ. ಅವರಾಹೆಚ್ಚಿನ ತೂಕವನ್ನೆಲ್ಲ ತೆಗೆದ ಮೂಲಕ ಅವರ ತರಾಜು ಸಮನಾಗಿರುವುದು. ತಮ್ಮ ಪಾರಮಾರ್ಥಿಕ ಅನುಭವದಲ್ಲಿ ಅವರು, ಅರಿಸ್ಟಾಟಲ್‌ನು 'ಸುವರ್ಣ ಮಧ್ಯ'

ವೆಂದು ಕರೆದಿರುವ ಅವಸ್ಥೆಯನ್ನು ಮುಟ್ಟಿರುವರು. ಅವರು ತಮ್ಮ ಅನುಭವವನ್ನು ತಕ್ಕಡಿಯಲ್ಲಿ ತೂಗಿ, ಅದು ಸಮನಾದುದನ್ನೂ, ಸಮಾಧಾನಕರ ವಾದುದನ್ನೂ ಕಂಡಿರುವರು' ಎಂದು ಚಿದಾನಂದರು ಹೇಳುವರು. ಅವರ ಬೇರೆ ಕೆಲ ಲಕ್ಷಣ ಗಳನ್ನೂ ಕವಿಗಳು ಈ ರೀತಿ ಅರುಹಿರುವರು: ಅದು 'ಕೂದಲ ಎಳೆಗಿಂತ ಸಣ್ಣ' ದಿರುವದಂತೆ. ಈ ಮಾದರಿಯ ವಚನಗಳನ್ನು ನಾವು ಉಪನಿಷತ್ತು ಗಳಲ್ಲಿಯೂ ಕಾಣಬಹುದು. 'ಅಣೋರಣೀಯಾನ್' 'ಅಣುವಿಗಿಂತ ಅಣುವಾ' 'ಕಿರಿದಕ್ಕಿಂತ ಕಿರಿದಾದ' ಎಂದುಸುರುವುದು ಒಂದು ಉಪನಿಷತ್ತು. 'ಬಾಲಾಗ್ರತ ಶತಭಾಗಸ್ಯ...' 'ಕೂದಲಿನ ನೂರನೆಯ ಅಂಶದ ಒಂದು ಸಾವಿರ ಪಾಲು' ಈ ಮುತ್ತಿನ ಆಕಾರ ವನ್ನು ಸಮೀಪಿಸಬಹುದು ಎಂದರಹುವದು ಇನ್ನೊಂದು ಕುರುಹು. ಮುತ್ತಿನಲ್ಲಿ ತೂತಿದ್ದರೆ, ಅದಕ್ಕೆ ಹೆಚ್ಚಿನ ಬೆಲೆ ಬರುವುದು, ಈ ಮುತ್ತಿನಲ್ಲಿ ತೂತಿಲ್ಲದಿದ್ದರೂ ಇದು ಅಮೂಲ್ಯವಾದುದು, ಅಸಮಾನವಾದುದು. ಇದರ ಬೆಲಯನ್ನು ಕಟ್ಟಲು ಬರಲರಿಯದು. ಈ ಮುತ್ತಿನಲ್ಲಿ ಬದಲಾಗುವ ವಿವಿಧ ಬಣ್ಣಗಳಿರುವವು, ಎಂಬುದು ಕವಿಯು ಇದನ್ನು ಕುರಿತು ಮಾಡಿದ ಮೂರನೆಯ ಅತಿಮಹತ್ವದ ವಿಧಾನವು ಅದನ್ನು ಕೇವಲ ಚಿದಾನಂದರಂಥ ಸಂತರೇ ಮಾಡಬಲ್ಲಲರು. ನಾವು ಮುಂದೆ ಅರುಹಲಿರುವ ಈ ಪಾರಮಾರ್ಥಿಕ ಬಣ್ಣಗಳು ಒಂದು ವಸ್ತುವಿನಲ್ಲಿ ಕಂಗೊಳಿಸ ಬಹುದು. ಇಲ್ಲವೆ ಅದನ್ನುಳಿದು ಸ್ವತಂತ್ರವಾಗಿಯೂ ಕಂಗೊಳಿಸಬಹುದು; ಸ್ವತಂತ್ರವಾಗಿ ಕಾಣುವ ಬಣ್ಣಗಳ ಅನುಭವವು ನಿಜವಿರಬಹುದು; ಆದರೆ ಅವು ಒಂದು ವಸ್ತುವಿನಲ್ಲಿ ಕಾಣುವ ಅನುಭವದಷ್ಟು ನಿಜವಿರುವುದಿಲ್ಲ. ಉದಾಹರ ಣಾರ್ಥವಾಗಿ, ಓತಿಯು ತನ್ನ ಮೈಬಣ್ಣಗಳನ್ನು ಬದಲಿಸುತ್ತದೆ. ಅದೇ ರೀತಿ, ಮಧ್ಯಾಹ್ನದ ಸೂರ್ಯನಲ್ಲಿ ಹೊಳೆಯುವ ಮುತ್ತು ಓತಿಯಂತೆ ತನ್ನ ಬಣ್ಣಗಳನ್ನು ಬದಲಿಸುವುದು. 'ಬಣ್ಣಬಣ್ಣದ ಬ್ರಹ್ಮಲೋಕವಿದಣ್ಣಾ' ಎಂದು ಬಣ್ಣಿಸಲಾದ ಅನುಭವವು ಈ ಬಗೆಯದಿರುವುದು. ಅದನ್ನು ಕುರಿತು ಚಿದಾನಂದರು ಹೇಳುವುದೇನೆಂದರೆ: 'ಅದು ತನ್ನ ಬಣ್ಣಗಳನ್ನು ಬದಲಿಸುವುದು. ಆದುದರಿಂದ ಅದು ಬ್ರಹ್ಮಲೋಕವನ್ನು ಪ್ರತಿನಿಧಿಸುವುದೆಂದು ನಾನು ಅನುಮಾನ ವಿಲ್ಲದೆ ಹೇಳಬಹುದು. ಈ ರೀತಿ, ಈ ಮುತ್ತು ಎಜ್ಜಿಲ್ಲದಿರುವುದು; ಎಣೆಯಿಲ್ಲದುದಿರುವುದು; ಅದು ಕೂದಲ ಎಳೆಗಿಂತ ಸಣ್ಣದಿರುವದು; ಅದು ಅನಂತ ಬಣ್ಣಗಳನ್ನು ಕಾಣಿಸ ಬಲ್ಲದ್ದಿರುವುದು; ಆ ಬಣ್ಣಗಳೆಲ್ಲ ಅದರೊಳಗಿರುವವು; ಅವು ಬರಿ ಅದರ ಮೇಲೆ ತೂಗಾಡುವುದಿಲ್ಲ ಇಲ್ಲವೆ ಗಾಳಿಯಲ್ಲಿ ತೂಗಾಡುವುದಿಲ್ಲ.' ನಮ್ಮ ಪಾರಮಾರ್ಥಿಕ ಸಾಧನದಲ್ಲಿ ನಾವು ಈ ಬಗೆಯ ಅನುಭವವನ್ನು ಪಡೆಯುವೆವು. ಕೊನೆಯದಾಗಿ, 'ಇಂಥ ಅನುಭವವನ್ನು ಪಡೆದಾಗ, ಭಗವಂತನು ನಿಮ್ಮನ್ನು ಈ ಜಗತ್ತಿನಲ್ಲಿ ಇಡ ಬಯಸುವವರೆಗೆ, ನೀವು ಕಾದು ನಿಮ್ಮ ಕಾರ್ಯವನ್ನು ಮುಂದುವರಿಸಿರಿ'

ಎಂದವರು ಸೂಚಿಸಿರುವರು. 'ಮುತ್ತಿನ ಮಹಿಮೆ ಮುಂದದ'. ಅದು ಕಾಲಾಂತರದಲ್ಲಿ ವ್ಯಕ್ತವಾಗುವುದು. ಅದನ್ನು ಕಾಣಲರಿಯದವರು ಮೃತರಾಗಿರುವರು; ಆದರೆ ಕಾಣಬಲ್ಲವರು ಅಮರರಾಗುವರು. ಇಂಥ ಒಂದು ಮುತ್ತಿನ ದರ್ಶನದಿಂದ ಲಭಿಸುವ ಅಮೃತತ್ವಕ್ಕೂ ಮಿಗಿಲಾದ ಅದಾವ ಪಾರಿತೋಷಕವನ್ನು ನೀವು ಪಡೆಯಬಲ್ಲಿರಿ? ಇಂಥ ಮುತ್ತಿನ ದರ್ಶನವೆಂದರೆ ಅದು ನಿಜವಾಗಿ ಭಗವಂತನ ದರ್ಶನವೇ ಸರಿ! ಪುರಂದರದಾಸರು ಹೇಳುವ ಮೇರೆಗೆ, ಈ ಮುತ್ತೆಂದರೆ ಸಾಕ್ಷಾತ್ ವಿಠ್ಠಲನೇ ಅಲ್ಲದೇ ಮತ್ತೇನು?

ಈ ಪ್ರಕರಣದಲ್ಲಿ ವಿವರಿತವಾಗುವ ಕೊನೆಯ ಪದವಾದ 'ರತ್ನ ಬಂದಿದೆ ನೋಡಿರೋ' ಎಂಬುದು ಮಹಾಲಿಂಗರಂಗರದು. ಅದು ರತ್ನವನ್ನು ಬಣ್ಣಿಸುವುದು. ಇದರಲ್ಲಿ ಇದೇ ವಿಷಯದ ಬೇರೊಂದು ಬಗೆಯು-ಅಂದರೆ ರತ್ನದ ದರ್ಶನವು ಬಂದಿರುವದು. ಈ ರತ್ನವು ಮುತ್ತುಗಳಿಂದ ಅಲಂಕೃತವಾದುದು. ಆದುದರಿಂದ ಬಣ್ಣಗಳಿಂದ ಕೂಡಿದ ಮುತ್ತುಗಳೆಂದರೆ ಈ ರತ್ನವೇ ಸರಿ! ಮಹಾಲಿಂಗರಂಗರು ರತ್ನರೂಪಿಯಾದ ಭಗವಂತನ ಅನುಭವವನ್ನು ಅರುಹಿರುವರು. ಅದು ಎಲ್ಲೆಡೆ ನೆಲೆಸಿರುವದೆಂದು ಹೇಳಿರುವರು. ಅದು ಮನುಜನ ಶರೀರದಲ್ಲಿರುವುದು, ಬಯಲಲ್ಲಿರುವುದು, ಹಾಗೂ ದೇವತೆಗಳ ಹೃದಯದಲ್ಲಿರುವುದು. ಅದು ಅಂಗೈಯಲ್ಲಿ (ಕರದೊಳು) ನಿಲ್ಲಬಲ್ಲದು. ಅದು ನಿಮ್ಮ ಶಿರದಲ್ಲಿ ಕಾಣಬಲ್ಲುದು. ಅಷ್ಟದಳಗಳುಳ್ಳ ನಿಮ್ಮ ಹೃತ್ಕಮಲದಲ್ಲಿ ಕಾಣಬಲ್ಲುದು. ಈ ರತ್ನವು ಚಂದ್ರಸೂರ್ಯರಿಂದ ನಿಮ್ಮೆಡೆ ಬರಲಿರುವ ಬೆಳಕಿನ ಕಿರಣಗಳಲ್ಲಿಯೂ ಕೂಡ ಕಾಣಬಲ್ಲುದು. ಅದು ಚಂದ್ರ ಸೂರ್ಯರ ಬೀದಿಗಳೊಳಗಿಟ್ಟಿದೆಯಂತೆ. ನಾನು ಹಿಂದಿನ ಒಂದು ಪ್ರಕರಣದಲ್ಲಿ ಅರುಹಿದ ಮೇರೆಗೆ. ಹಿರಿಯ ಯೋಗಿಕ ದಾರ್ಶನಿಕರಾದ ಪತಂಜಲಿಯವರ ಜನನದ ವಿಷಯದಲ್ಲಿ ಅವರ ತಂದೆಯವರಿಗೆ ಇದೇ ಅನುಭವವು ಬಂದಿದ್ದಿತು. ಎಷ್ಟೋ ವರುಷ ಪತಂಜಲಿಯವರ ತಂದೆಗೆ ಮಕ್ಕಳಿರಲಿಲ್ಲ. ಅವರು ಭಗವಂತನನ್ನು ಪ್ರಾರ್ಥಿಸುತ್ತಿದ್ದರು. ಅವರು ಸೂರ್ಯನಿಗೆ ಅರ್ಘ್ಯವನ್ನು ಕೊಡುತ್ತಿದ್ದರು. ಈ ರೀತಿ ಎಷ್ಟೋ ವರುಷಗಳು ಕಳೆದ ಮೇಲೆ, ಒಂದು ದಿನ, ಅವರು ಅರ್ಘ್ಯವನ್ನು ನೀಡಲು ಸೂರ್ಯನೆಡೆ ನೋಡುತ್ತಿರುವಾಗ, ಸರ್ಪಾಕಾರದ ಭಗವಂತನ ರೂಪವು ಸೂರ್ಯನಿಂದ ಕೆಳಗಿಳಿದು ಅವರ ಅಂಜಲಿಯಲ್ಲಿ ಬಿದ್ದಿತು. ಅದು ಅವರ ಅಂಜಲಿಯಲ್ಲಿ ಬಿದ್ದುದರಿಂದ (ಅಂಜಲೀಪತನ) ಅವರು ತಮ್ಮ ಮಗನನ್ನು 'ಪತಂಜಲಿ' ಎಂದು ಹೆಸರಿಸಿದರು. ಭಾರತದಲ್ಲಿ ಈಬರೆಗೆ ಬಾಳಿದ ಶ್ರೇಷ್ಠತಮ ಸಂತರಲ್ಲಿ ಪತಂಜಲಿಗಳು ಒಬ್ಬರು. 'ದೇವಃ ಅಹೀಶಃ' 'ಅವನು ಸರ್ಪಗಳ ಒಡೆಯನಾದ ದೇವರು' ಎಂಬುದು ಯೋಗಸೂತ್ರಗಳಲ್ಲಿಯ ಕೊನೆಯ ಪ್ರಾರ್ಥನೆ. ಅದರಲ್ಲಿ ಪತಂಜಲಿಯವರು

'ಅಹೀಶ'ನೆಂದು ಬಗೆಯಲಾಗಿರುವರು. ಈ ಬಗೆಯಾಗಿ, ನೀವು ಈ ರತ್ನವನ್ನು ಬೆಳಕಿನ ಕಿರಣಗಳಲ್ಲಿ ಕಾಣಬಲ್ಲಿರಿ. 'ಅದು ಹಿಂದೆ ಮುಂದೆ, ನೋಡಿದಲ್ಲೆಲ್ಲ ಕಾಂಬುದು' ಎಂದು ಮಹಾಲಿಂಗರಂಗರು ಹೇಳುವರು. ಜ್ಞಾನೇಶ್ವರರು ಬಣ್ಣಿಸಿದ ಮೇರೆಗೆ, ಅರ್ಜುನನೂ ಈ ಅನುಭವವನ್ನು ಪಡೆದಿದ್ದನು. "ಅವನು ಹಿಂದೆ ನೋಡಲು ದೇವನನ್ನು ಕಂಡನು; ಮುಂದೆ ನೋಡಲು ದೇವನನ್ನೆ ಕಂಡ'ನಂತೆ. ಈ ರೀತಿ ನಾವು ಹಿಂದೆಯೂ, ಮುಂದೆಯೂ ಭಗವಂತನನ್ನು ಕಾಣಬಹುದು. ಈ ರತ್ನವು ಮನುಜನ ದೇಹವನ್ನು ಎಲ್ಲ ಅವಕಾಶವನ್ನೂ ವ್ಯಾಪಿಸುವುದು. ಅದು ಎಲ್ಲ ದೇವತೆಗಳ ಹೃದಯವನ್ನು ಕೂಡ ವ್ಯಾಪಿಸುವುದು. ವಿಶೇಷವಾಗಿ ಅದು ಶಿವ-ವಿಷ್ಣು ಇವರನ್ನು ಅಲಂಕರಿಸುವುದು. ಪಾರಮಾರ್ಥಿಕ ಸರ್ಪದ ಹೆಡೆಯಲ್ಲಿಯ ಈ ರತ್ನವು ಶೈವ-ವೈಷ್ಣವರ ವಿರೋಧವನ್ನು ಅಡಗಿಸಬಲ್ಲದು. ಯಾಕಂದರೆ ಶಂಕರನು ಈ ಸರ್ಪವನ್ನು ಭೂಷಣವೆಂದು ತನ್ನ ಕೊರಳಿಗೆ ಸುತ್ತಿಕೊಂಡಿರುವನು. ಹಾಗೂ ವಿಷ್ಣುವು ಅದರ ಮೇಲೆ ವಿಶ್ರಮಿಸುವನು. ಆದ್ದರಿಂದ ಈ ರತ್ನಯುತನಾದ ಶೇಷನು ಹಿರಿಯ ಸಮನ್ವಯಕಾರನು. 'ನಾವಿದನ್ನು ಅದೆಂತು ಕಾಣಬಲ್ಲೆವು?' ಎಂದು ಕೇಳಿ, ಮಹಾಲಿಂಗರಂಗರು ಈ ರೀತಿ ಉತ್ತರಿಸುವರು: 'ನಾವು ನಷ್ಟಪಾತಕರಾಗದೆ, ಈ ರತ್ನವನ್ನು ಕಾಣಲರಿಯೆವು.' ನಾವು ಕ್ರಮಶಃ ದೇವದರ್ಶನವನ್ನು ಹೆಚ್ಚು ಹೆಚ್ಚು ಪಡೆದರೇನೇ, ನಾವು ಹೆಚೆಚ್ಚು ನಿಷ್ಪಾಪರಾಗುವೆವು,' ಎಂಬುದು ಅವರ ಇನ್ನೊಂದು ಸಿದ್ಧಾಂತವು. ಪಾಪವಿಹೀನತೆಯೂ, ದೇವದರ್ಶನವೂ ಪರಸ್ಪರಾವಲಂಬಿಗಳು. ಅವೆರಡೂ ಒಂದನ್ನೊಂದು ಹೊಂದಿಕೊಂಡೆ ಸಾಗುವವು. ಆದರೆ ನಿಷ್ಪಾಪತೆಯು ಮೊದಲೋ? ದೇವದರ್ಶನವು ಮೊದಲೋ? ಇಲ್ಲಿ ಒಂದು ಬಗೆಯ ವಿರೋಧವು ನೆಲೆಸಿರುವುದು. ಅದನ್ನು ಅವುಗಳಲ್ಲಿಯ ಪರಸ್ಪರಾವಲಂಬನದ ಸಿದ್ಧಾಂತದಿಂದ ಪರಿಹರಿಸಬಹುದು. ನೀವು ಹೆಚ್ಚು ಹೆಚ್ಚು ನಿಷ್ಪಾಪರಾದಂತೆ, ಹೆಚ್ಚು ಹೆಚ್ಚು ದೇವದರ್ಶನವನ್ನು ಪಡೆಯುವಿರಿ. ನಿಷ್ಪಾಪತೆ-ದೇವದರ್ಶನಗಳನ್ನು ಪರಸ್ಪರರಿಂದ ಪೂರ್ತಿಯಾಗಿ ಬೇರ್ಪಡಿಸಲು ಬರುವುದಿಲ್ಲ.

ಕೊನೆಯದಾಗಿ, ಮಹಾಲಿಂಗರಂಗರ ಅಭಿಮತದ ಮೇರೆಗೆ ಈ ರತ್ನವು ಕೇವಲ ಹೊರಗಿನ ಅವಕಾಶದಲ್ಲಿ ಇಲ್ಲವೆ ಮಾನವನ ಶರೀರದಲ್ಲಿ ಅಷ್ಟೇ ಇರುವುದಿಲ್ಲ. ಆದರೆ ಅದು ಮಹಾಲಿಂಗರಂಗನ ಹೃದಯದಲ್ಲಿಯೂ ಇರುವುದು. ಹೀಗಿದ್ದರೂ, ಅದು ಚಕ್ರವರ್ತಿಗಳ ಬೊಕ್ಕಸಗಳಲ್ಲಿಯೂ, ನವಕೋಟಿನಾರಾಯಣ ರಲ್ಲಿಯೂ ಕೂಡ ದೊರೆಯಲರಿಯದು. ಅಂಥ ರತ್ನವು ಕೇವಲ ಮಹಾಲಿಂಗ ರಂಗರ ಭಾವಪೂರ್ಣ ಹೃದಯದಲ್ಲಿ ದೊರೆಯಬಲ್ಲದು.

■■

ಪ್ರಕರಣ ಹದಿನಾರು

ರೂಪ-ತೇಜ-ನಾದಾದಿಗಳ ಅನುಭವ

ಈ ಪ್ರಕರಣದಲ್ಲಿ ನಾನು ಅತೀಂದ್ರಿಯ ರೂಪ, ತೇಜ, ನಾದ ಮತ್ತು ಬೇರೆ ಪಾರಮಾರ್ಥಿಕ ಅನುಭವಗಳನ್ನು ವಿವರಿಸಲಿರುವೆ. ಪರಮಾರ್ಥದಲ್ಲಿಯ ಅನುಭವಗಳು, ಇಂದ್ರಿಯಗಳಿಂದ ಲಭಿಸಿದ ಅನುಭವಗಳಂತೆ ತೋರಿದರೂ, ಅವು ಒಂದು ಬಗೆಯ ಅತೀಂದ್ರಿಯತೆಯನ್ನು ತಳೆದಿರುವವು. ಪಾರಮಾರ್ಥಿಕ ಅನುಭವವು ನಿಜವಾಗಿ ಪ್ರತಿಭೆಯ-ಅಂತಃಪ್ರಜ್ಞೆಯ ಮುಖಾಂತರದ ಒಳಗಿನಿಂದಲೇ ಲಭಿಸುವುದು. ನಾನೀಗ ಏಳು ಪದಗಳನ್ನು ವಿವರಿಸಲಿರುವೆ: ಅವುಗಳಲ್ಲಿ ಎರಡಿ ಸರ್ಪಭೂಷಣರ ಇಲ್ಲವೆ ಗುರುಸಿದ್ಧರ ಪದಗಳು; ಎರಡು ನಿಂಬರಗಿ ಮಹಾರಜರವರ ಪದಗಳು; ಒಂದು ಗಂಗಾಧರನೆಂಬ ಹೆಸರಿನ ಕವಿಯದು. ಈ ಹೆಸರು ಬಹುತರವಾಗಿ ಕವಿಯು ಧರಿಸಿದ ಉಪನಾಮವಿರಬಹುದು. (ಕವಿಯ ನಿಜವಾದ ಹೆಸರು ಗೊತ್ತಾಗಿಲ್ಲ) ಮತ್ತು ಮಿಕ್ಕ ಎರಡು ಪದಗಳಲ್ಲಿ, ಒಂದು ಚಿದಾನಂದರದು, ಇನ್ನೊಂದು ಮಹಿಪತಿಯವರದು. ನಾವು ಈ ಮೊದಲು ಮಹಿಪತಿಸುತರ ಪದವನ್ನು ಕಂಡಿದ್ದೆವು. ಇಲ್ಲಿ ನಾವು ಪ್ರತ್ಯಕ್ಷ ಮಹಿಪತಿಯವರ ಪದವನ್ನೆ ಕಾಣುವೆವು.

ನಾನು ವಿವರಿಸಲಿರುವ ಮೊದಲನೆಯ ಪದವು ಗುರುಸಿದ್ಧರದು, ಇಲ್ಲವೆ ಸರ್ಪಭೂಷಣರದು. 'ಕಾಣುತಿದೆ ಪರಬಿಂದು' ಎಂಬ ಅವರ ಆ ಪದದಲ್ಲಿ, ಸಾಧಕನಿಗೆ ಪಾರಮಾರ್ಥಿಕ 'ಬಿಂದು' ಹೇಗೆ ಕಾಣಿಸುವುದೆಂಬುದನ್ನು ಅತ್ಯುತ್ತಮ ರೀತಿಯಿಂದ ಬಣ್ಣಿಸಲಾಗಿದೆ. ಸರ್ಪಭೂಷಣರು ಮೊದಲು ಈ 'ಪರಬಿಂದು'ವನ್ನು ಬಣ್ಣಿಸಿರುವರು. ಈ 'ಶಬ್ದವನ್ನು ಮರಾಠೀ ಸಂತಕವಿಗಳೂ ಕೂಡ ಬಳಸಿರುವರು. ಈ ಪಾರಮಾರ್ಥಿಕ ಅಣುವನ್ನು ಅವರು 'ಬಿಂದುಲೆ' ಎಂದು ಕರೆದಿರುವರು. ಈ ಪಾರಮಾರ್ಥಿಕ ಅಣುವಿನ ದರ್ಶನವು, ಪಾರಮಾರ್ಥಿಕ ಜೀವನದಲ್ಲಿಯ ಆದಿಮ-ತೀರ ಪ್ರಾಥಮಿಕ ಅನುಭವಗಳಲ್ಲಿ ಒಂದು. ನಾವು 'ಶಾಂಭವಿ ಕೊನೆಯಲ್ಲಿ' ಇಲ್ಲವೆ 'ನಾಸಾಗ್ರದಲ್ಲಿ' ಚಿತ್ತವನ್ನು ಸ್ಥಿರಗೊಳಿಸಿದ ಕೂಡಲೆ, ನಮಗೆ 'ಪರಬಿಂದು; 'ಚೈತಾನ್ಯಾಣು' ಕಾಣಬೇಕು ಎಂದು ಸರ್ಪಭೂಷಣರು ಹೇಳಿರುವರು. 'ನಾಸಾಗ್ರ'ವು ಮೂಗಿನ ಒಂದು ತುದಿ, 'ಶಾಂಭವಿ ಕೊನೆ'ಯು ಇನ್ನೊಂದು ನೀವು ಮೂಗಿನ ಯಾವುದೇ ತುದಿಯನ್ನು ಕಾಣಬಹುದು-ಅದು ಕೆಳಗಿನದಿರಲಿ, ಇಲ್ಲವೆ

ಮೇಲಿನದಿರಲಿ! ವಾಸ್ತವಿಕವಾಗಿ ನೋಡಿದರೆ, ನೀವು ಎರಡನ್ನೂ ನೋಡುವ ಅಗತ್ಯವಿಲ್ಲ. ಅವನ್ನು ನೋಡದೆಯೆ ನೀವು ಆ ಪರಬಿಂದುವನ್ನು ಕಾಣಬಲ್ಲಿರಿ. ಅದನ್ನು ಕಂಡಾಗಲೇನೇ ನಿಮ್ಮ ಪಾರಮಾರ್ಥಿಕ ಜೀವನವು ಪ್ರಾರಂಭವಾಯಿತು ಎಂದೆನ್ನಬಹುದು. ಮುಂದೆ ಸರ್ಪಭೂಷಣರು ಅರುಹಿದ ಸಾಧನಗಳು ಭಗವದ್ಗೀತೆಯಲ್ಲಿ ಅರುಹಲಾದ ಸಾಧನಗಳನ್ನೇ ಪ್ರತ್ಯಕ್ಷವಾಗಿ ಹೋಲುವವು. ಮೊದಲು ನಾವು ಸ್ಥಿರಾಸನದಲ್ಲಿ ಕುಳಿತುಕೊಳ್ಳಬೇಕು, ನಮ್ಮ ಕರ್ಮೇಂದ್ರಿಯಗಳನ್ನು ನಿಯಂತ್ರಿಸಬೇಕು. ನಮ್ಮ ಜ್ಞಾನೇಂದ್ರಿಯಗಳು ನಮ್ಮನ್ನು ಹಾಳು, ಭೌತಿಕ, ಪಾಪಮಯ ಜೀವನದ ಕಾಡಿನಲ್ಲಿ ಸೆಳೆದೊಯ್ಯದಂತೆ ನೋಡಿಕೊಳ್ಳಬೇಕು. ಈ ಇಂದ್ರಿಯಗಳ ಅನುಭವಗಳ ಜತೆಗೆ, ಅವುಗಳ ಬಗೆಬಗೆಯ ಸ್ಮೃತಿಗಳೂ, ಭಾವಸಾಹಚರ್ಯಗಳೂ ಕೂಡಿಕೊಂಡಿರುವವು. ತಾವು ಧ್ಯಾನಕ್ಕೆ ಕುಳಿತಕೂಡಲೆ, ತಮ್ಮ ಮನಸ್ಸು ಎಲ್ಲ ಬಗೆಯ ಕಲ್ಪನೆಗಳ ಲೀಲಾರಂಗವಾಗುವದೆಂದು ಅನೇಕ ಸಾಧಕರು ದೂರಿಕೊಳ್ಳುವುದುಂಟು. ಅದನ್ನು ತಡೆಯಬೇಕೆಂದು ಸರ್ಪಭೂಷಣರು ಹೇಳುವರು. ಅವರು ಮುಂದೆ ಸೂಚಿಸಿದ ಮೂರನೆಯ ಮಾತು ಬಲು ಮಹತ್ವದ್ದಿರುವುದು: ನಾವು 'ದೃಷ್ಟಿ, ಮನ, ಪವನ'ಗಳನ್ನು ಬೆರೆಸಬೇಕು. ಈ ಮೂರುಶಕ್ತಿಗಳನ್ನು ಏಕಾಗ್ರಗೊಳಿಸಬೇಕು. ಆ ಬಗೆಯ ಬೇರೆ ನೆರವುಗಳು ಅನೇಕ ಇರುವವು. ಅವನ್ನು, ಧ್ಯಾನವನ್ನು ಪ್ರಾರಂಭಿಸಿದವರು ಕಾಲಕ್ರಮದಲ್ಲಿ ಸರಿಯಾದ ಸಮಯಕ್ಕೆ ತಾವಾಗಿಯೆ ಅರಿತುಕೊಳ್ಳಬಹುದು. ಇದು ಅವುಗಳಲ್ಲಿ ಒಂದಾಗಿ ರುವುದು. ಈ ಬಗೆಯಾಗಿ ನಮ್ಮ ಆಸನವು ಸ್ಥಿರವಾಗುವುದು, ಅಚಲವಾಗುದವು ಮತ್ತು ನಾವು ಚೆನ್ನಾಗಿ ಧ್ಯಾನ ಮಾಡಲು ಪ್ರಾರಂಭಿಸುವೆವು. ಎರಡನೆಯದಾಗಿ, ನಾವು ಕೇವಲ ಭಗವಂತನ ಧ್ಯಾನದಿಂದಲೇ ಆತನ ರೂಪದ ಅನುಭವವನ್ನು ಪಡೆಯಲರಿಯೆವು. ಆ ರೂಪವು ನಮ್ಮೆದುರು ಅವತರಿಸಬೇಕು. ಅದಕ್ಕೆ ಉನ್ನತ ಪಾರಮಾರ್ಥಿಕ ಭೂಮಿಕೆಯನ್ನು ಪಡೆದ ಸದ್ಗುರು ಬೇಕಾಗುವನು. ಅಂದರೇನೆ ಅದು ಕೆಳಗಿನ ಭೂಮಿಕೆಯ ಮೇಲಿನ ಶಿಷ್ಯನೆಡೆ ಇಳಿದು ಬರುವುದು. ಸದ್ಗುರು ಏನನ್ನೂ ಪಡೆಯದವನಿದ್ದರೆ, ಶಿಷ್ಯನೂ ಏನನ್ನೂ ಪಡೆಯಲರಿಯ. ಒಮ್ಮೊಮ್ಮೆ ಸದ್ಗುರು ಏನನ್ನೂ ಪಡೆಯದಿದ್ದರೂ, ಶಿಷ್ಯನು ಕೆಲವೊಂದನ್ನು ಪಡೆಯುವನು, ನಿಜ. ಆದರೆ, ಅದಕ್ಕೊಂದು ಮರ್ಯಾದೆಯುಂಟು. ಅದರ ಮುಂದೆ ಶಿಷ್ಯನ ಪ್ರಗತಿಯು ಆಗಲರಿಯದು.

ಮೇಲೆ ಬಣ್ಣಿಸಲಾದ ಮೊಲದನೆಯ ಅನುಭವವು ಒಂದು ಬಗೆಯ ರೂಪಾನು ಭವವು. ಅದನ್ನು 'ಬಿಂದು; ಇಲ್ಲವೆ 'ಬಿಂದುಲೆ' ಎಂದು ಕರೆಯಲಾಗಿದೆ. ಅದನ್ನು 'ಪಾರಮಾರ್ಥಿಕ ಅಣು'ವೆಂತಲೂ ಅಥವಾ 'ಚೈತಾನ್ಯಾಣು'ವೆಂತಲೂ ಕರೆಯ

ಬಹುದು-ಸಂಬೋಧಿಸಬಹುದು. ಕ್ರಿ.ಶ. ೧೯೩೭ರಲ್ಲಿ ನಾಗಪುರದಲ್ಲಿ ಸೇರಿದ ದಾರ್ಶನಿಕ ಪರಿಷತ್ತಿನ ನನ್ನ ಅಧ್ಯಕ್ಷೀಯ ಭಾಷಣದಲ್ಲಿ ನಾನದನ್ನು 'Spiriton' (ಚೈತಾನ್ವಾಣು) ಎಂದು ಮೊದಲನೆಯ ಸಲ ಸಂಬೋಧಿಸಿರುವೆ. 'Spiriton' ಎಂಬ ಶಬ್ದವನ್ನು ನಾನಂದು ಹೊಸದಾಗಿ ತಯಾರಿಸಿದ್ದು. ಇತ್ತೀಚೆಗೆ Ions (ವಿದ್ಯುದ್ವಾಹಕ ಅಣುಗಳು) Electrons (ಋಣವಿದ್ಯುದಣುಗಳು) Protons (ಧನವಿದ್ಯು ದಣುಗಳು) ಇತ್ಯಾದಿ ಶಬ್ದಗಳು ನಮಗೆ ತುಂಬ ಪರಿಚಿತವಾಗಿರುವವು. ಹೀಗಿರಲು ಪಾರಮಾರ್ಥಿಕ ಅಣುವನ್ನು ಇಲ್ಲವೆ ಮಹಾರಾಷ್ಟ್ರ ಸಂತರ 'ಬಿಂದುಲೆ' ಎಂಬುದನ್ನು ಸಂಬೋಧಿಸಲು ನಾವು ಅದೇ ಮಾದರಿಯ 'Spiriton' (ಚೈತಾ ನ್ವಾಣು) ಎಂಬ ಶಬ್ದವನ್ನು ಯಾಕೆ ಬಳಸಬಾರದು? ಈ 'ಬಿಂದುಲೆ' ಎಂಬುದನ್ನು 'ಮತ್ತು' ಇಲ್ಲವೆ 'ರತ್ನ' ಎಂದೂ ಬಣ್ಣಿಸಲಾಗಿದೆ. ಹಲವರು ತಮ್ಮ ಮುತ್ತುಗಳ ಅನುಭವವನ್ನು ಅರುಹಿರುವರು. ಉದಾಹರಣಾರ್ಥವಾಗಿ, ಜ್ಞಾನೇಶ್ವರರು 'ಮೋತಿ ಯಾಚೇ ಜಾಳೇ' 'ಮುತ್ತಿನ ಜಾಳಿಗೆ'ಯನ್ನು ಬಣ್ಣಿಸಿರುವರು. ಈ ಪದದಲ್ಲಿ ಸರ್ಪ ಭೂಷಣರು, ನಾವು ಮುತ್ತಿನ ಹಾರವನ್ನು ಕಾಣಬೇಕೆಂದು ಹೇಳಿರುವರು. ನಾವು ಮುತ್ತುಗಳನ್ನು ಬಿಡಿಬಿಡಿಯಾಗಿ ಕಾಣಬಹುದು, ಇಲ್ಲವೆ ಮುತ್ತಿನ ಸರವನ್ನು ಕೂಡ ಕಾಣಬಹುದು. ಬಸವಪುರಾಣದಲ್ಲಿ 'ಎಳೆಮುತ್ತಿನ' ಉಲ್ಲೇಖವಿರುವುದು. ಸರ್ಪಭೂ ಷಣರು 'ಎಳೆಯಾದ ಮುತ್ತು' 'ಮುತ್ತಿನ ಎಳೆ ಸರ-ಹಾರ'ವನ್ನು ಉಲ್ಲೇಖಿಸಿರುವರು. ಇವೆರಡರಲ್ಲಿ ಭೇದವಿರುವುದು. ಬಸವ ಪುರಾಣದಲ್ಲಿ ಮುತ್ತುಗಳ ಉಲ್ಲೇಖವಿದ್ದರೆ ಸರ್ಪಭೂಷಣರು ಮುತ್ತಿನ ಸರವನ್ನು ಉಲ್ಲೇಖಿಸಿರುವರು. ಮೂರನೆಯದಾಗಿ, ಸಾಧಕನು, ಸಂಸ್ಕೃತ ಭಾಷೆಯಲ್ಲಿ ಪ್ರವಾಳ ಇಲ್ಲವೆ ವಿದ್ರುಮವೆಂದು ಕರೆಯಲಾದ ಹವಳವನ್ನು ಕಾಣುವನು. ಪ್ರವಾಳಭಸ್ಮ ಎಂಬ ಔಷಧವನ್ನು ಈ ವಿದ್ರುಮದಿಂದಲೇ ತಯಾರಿಸುವರು ಎಂಬುದನ್ನು ನಿಮ್ಮಲ್ಲನೇಕರು ಬಲ್ಲರು. ಪ್ರವಾಳವು ಸಾಗರದಲ್ಲಿಯ ಒಂದು ವಿಲಕ್ಷಣವಾದ ರಚನೆ. ಅದು ಸುಣ್ಣ-ಲವಣಗಳ ಮೂಲಧಾತುವಿನಿಂದ (Calcium Carbonat) ತಯಾರಾದ, ವರ್ತುಲ ಸ್ತಂಭಾಕಾರದ ಶರೀರಗಳನ್ನು ಒಳಗೊಂಡಿರುವುದು. ಅದರಲ್ಲಿ ಕೆಲ ಹುಳಗಳಿರುವವು. ಅವು ಸತ್ತ ಮೇಲೆ ಅವುಗಳ ಶರೀರಗಳನ್ನು ಹೊರತಗೆದು, ಅವುಗಳಿಂದ ಪ್ರವಾಳ ಭಸ್ಮ ಎಂಬ ಹೆಸರಾದ ಔಷಧವನ್ನು ಮಾಡಲಾಗುವುದು. ಈ ಪ್ರವಾಳಗಳ ಬೆಳವಣಿಗೆಯು ಎರಡು ಬಗೆಯದಿರುವುದು. ಅವು ಆಳವಾದ ಸಾಗರದ ತಳದಲ್ಲಿರುವಾಗ ಘನವಾದವು ಗಳಿರುವವು. ಆದರೆ ಅವು ಸಾಗರದ ಆಳವಾದ ಮೇಲ್ಭಾಗದ ಬಳಿ ಬಂದಾಗ, ಸಸಿಗಳಂತೆ ಬೆಳೆಯಹತ್ತುವವು. ಆಮೇಲೆ ನಮಗೆ ವಿದ್ರುಮ ಬಳ್ಳಿಗಳು ಲಭಿಸುವವು. ಆದುದರಿಂದ ನೀವು ಹವಳಗಳನ್ನು ಪ್ರತ್ಯೇಕವಾಗಿ ಕಾಣಬಹುದು. ಇಲ್ಲವೆ ಅವುಗಳ ಬಳ್ಳಿಗಳನ್ನು ಕಾಣಬಹುದು. ಇವು ರೂಪಾನುಭವದ ಕೆಲ ಬಗೆಗಳು.

ಇನ್ನು ನಾವು ತೇಜದ ಅನುಭವಗಳನ್ನು ವಿವರಿಸುವೆವು. ಮೊದಲು ನಾವು ಉಪನಿಷತ್ತುಗಳಲ್ಲಿ 'ಅಗ್ನೇರ್ಜ್ವಲನಮ್' 'ಅಗ್ನಿಯ ಜ್ವಾಲೆ' ಎಂದು ಬಣ್ಣಿಸಲಾದ ಅಗ್ನಿಯ ದರ್ಶನವನ್ನು ಪಡೆಯುವೆವು. ತರುವಾಯ ಮಿಂಚಿನ ಅನುಭವವು ಲಭಿಸುವುದು. 'ಸೆಳೆಮಿಂಚಿನಂತೆ' ಎಂದು ಅವನ್ನು ಕವಿಯು ಬಣ್ಣಿಸುವನು. ನೀವು ಮಿಂಚಿನ ಕೋಲನ್ನು ಇಲ್ಲವೆ ಮಿಂಚಿನ ಬಳ್ಳಿಯನ್ನು, ಅಥವಾ ಮಿಂಚಿನ ರೆಂಬೆಗಳನ್ನು ಕಾಣಬಹುದು. ಮೂರನೆಯದಾಗಿ, ಕನ್ನಡ ಸಂತರು 'ಕೋಟಿ ಸೂರ್ಯ'ರ ಪ್ರಭೆಯನ್ನು ಅರುಹುವರು. ನಿಜವಾಗಿ ಇದೊಂದು ಅತ್ಯುಕ್ತಿಯೆ ಸರಿ ಎಂದು ನನಗನಿಸುವುದು. ನೀವು ಒಬ್ಬ ಸೂರ್ಯನನ್ನು ಕಂಡರೂ ಸಾಕು. ಕೋಟಿಸೂರ್ಯನನ್ನು ಕಾಣುವ ಆವಶ್ಯಕತೆಯೇನು? ಇಲ್ಲಿ ಅನುಭಾವಿಯು ಥಳಥಳಿಸುವ ಪ್ರಭೆಯನ್ನು ಕಾಣುವನು ಎಂದು ಹೇಳುವುದಷ್ಟೇ ಸರ್ಪಭೂಷಣರ ಉದ್ದೇಶವಿರುವುದು.

ಆದರೆ ಕೇವಲ ರೂಪದ ಇಲ್ಲವೆ ತೇಜದ ಅನುಭವಗಳಿಗಿಂತ ರೂಪತೇಜಗಳ ಸಮ್ಮಿಶ್ರ ಅನುಭವಗಳು ಮಿಗಿಲಾದವುಗಳು. ಕವಿಯು, ಹೊಳೆಯುವ 'ಆತ್ಮಲಿಂಗ' ಇಲ್ಲವೆ 'ಪ್ರಾಣಲಿಂಗ' ಎಂದು ಬಣ್ಣಿಸಿದ ವಸ್ತುವಿನ ದರ್ಶನವು ಇಂಥ ಅನುಭವಗಳಲ್ಲಿ ಒಂದು. ಅದರಲ್ಲಿ ರೂಪತೇಜಗಳ ಸಮ್ಮೇಲನವಿರುವುದು. ಈ ಪ್ರಾಣಲಿಂಗದ ವರ್ಣನೆಯಲ್ಲಿ 'ಪಳಕ ಕೊಡದೊಳು ದೀವತೆರ' ಎಂಬ ಪದ ವಿನ್ಯಾಸವನ್ನು ಕವಿಯು ಬಳಸಿರುವನು. ಅದೊಂದು ವಿಲಕ್ಷಣ ಕಲ್ಪನೆಯನ್ನು ಒಳಗೊಂಡಿರುವುದು. 'ಪಳಕ'ವಂದರೆ ಅಮೃತಶೀಲೆ ಹಾಗೂ ಸ್ಫಟಿಕ ಹರಳು. ಅಮೃತಶಿಲೆಯು ಅಪಾರ ದರ್ಶಕವು ಮತ್ತು ಹರಳು ಪಾರದರ್ಶಕವು. ಈ ಆತ್ಮಲಿಂಗವು ನಮ್ಮಂತರಂಗದಲ್ಲಿ ಕಾಣಿಸಿಕೊಂಡು ಸ್ಫಟಿಕದ ಕೊಡದಲ್ಲಿಯ ದೀಪದಂತೆ ಹೊಳೆಯಬೇಕು. ನಾವು ಈ ಕಲ್ಪನೆಯನ್ನು ಸ್ವಲ್ಪ ಮುಂದುವರಿಸಬಹುದು-ಹಿಗ್ಗಿಸಬಹುದು. ನಾವು ಅಮೃತಶಿಲೆ ಹಾಗೂ ಹರಳು ಎಂಬ ಸ್ಫಟಿಕದ ಎರಡು ಬಗೆಗಳನ್ನು ಕಂಡಿರುವೆವು. ಈ ಪ್ರಪಂಚದಲ್ಲಿ ಮೂರು ಬಗೆಯ ಜನರಿರುವರು ಎಂದೆನ್ನಬಹುದು. ಒಬ್ಬರನ್ನು ಅಮೃತಶಿಲೆಯೊಡನೆ ಹೋಲಿಸಬಹುದು. ಅವರು ಅಮೃತಶಿಲೆಯಂಥ ಮನಸ್ಸುಳ್ಳವರು. ತಮ್ಮ ಸ್ವಂತ ಪಾರಮಾರ್ಥಿಕ ಅನುಭಾವಾದನಂವನ್ನು ಅವರು ತಮ್ಮಂತರಂಗದಲ್ಲಿ ಸವಿಯುತ್ತ ಕುಳಿತುಕೊಳ್ಳುವರು. ಅದು ಬೇರೆ ಜನರು ಹರಳಿನಂಥ ಮನಸ್ಸುಳ್ಳವರು. ಅವರಂತರಂಗದಲ್ಲಿಯ ಆತ್ಮಲಿಂಗದ ಬೆಳಕು ಅಲ್ಲಿಂದ ಹೊರ ಚೆಲ್ಲುವುದು. ಮೂರನೆಯ ಬಗೆಯ ಜನರ ಮನಸ್ಸು ಕರೇ ಕಲ್ಲಿನಂತಹುದು. ಅಲ್ಲಿ ಬೆಳಕು ಸೇರುವದೂ ಇಲ್ಲ; ಅಲ್ಲಿಂದದು ಹೊರಹೊಮ್ಮುವುದೂ ಇಲ್ಲ. ಇವು ಜನರ ಮೂರು ಬಗೆಗಳು. ಆದರೆ ಈ ಆತ್ಮಲಿಂಗವು ಶರೀರದಲ್ಲಿ ಹೊಳೆಯತೊಡಗಿದಾಗ

ಅದು 'ನೇತ್ರದ್ವಾರದಿ ಹೊರಹೊಮ್ಮಿ ಬೆಳಗಿತು' ಎಂದು ಸರ್ಪಭೂಷಣರು ಹೇಳುವರು. ಕೊನೆಗೆ ಈ ಆತ್ಮಲಿಂಗವು ಗುರುಸಿದ್ಧನ ರೂಪತಾಳಿ ಸಾಧಕ-ದೇವರಲ್ಲಿಯ ಏಕತೆಯನ್ನು ಅರುಹುವುದು.

'ವಸ್ತು ಕಂಡೆನೋ ಒಂದು' ಎಂಬುದು ನಾನು ವಿವರಿಸಲಿರುವ ಮುಂದಿನ ಪದವು. ಇದರಲ್ಲಿ ಮಹಿಪತಿಯವರು ಬಳಸಿದ 'ವಸ್ತು' ಎಂಬ ಶಬ್ದವನ್ನು ಮಹಾರಾಷ್ಟ್ರದ ಸಂತರೂ ಕೂಡ ಮೇಲಿಂದ ಮೇಲೆ ಬಳಸಿರುವರು. 'ವಸ್ತು' ಎಂದರೆ ಒಡವೆ, ಪದಾರ್ಥ. 'ಮೂಲವಸ್ತು' ಎಂಬುದು ಅದರ ದಾರ್ಶನಿಕ ಅರ್ಥ. ಆದರೆ ಮಹಿಪತಿಯವರ ಹಾಗೂ ಬೇರೆ ಸಂತರ 'ವಸ್ತು' ಮತ್ತು ಕಾಂಟ ಹಾಗೂ ಬೇರೆ ಐರೋಪ್ಯ ದಾರ್ಶನಿಕರ 'ಮೂವಸ್ತು' ಇವುಗಳಲ್ಲಿ ತುಂಬ ವ್ಯತ್ಯಾಸವಿರುವುದು. ಮಹಿಪತಿಯವರ 'ವಸ್ತು' 'ನಿಜನಿರ್ವಿಕಲ್ಪ'ವಿರುವುದು. 'ವಸ್ತು' ಎಲ್ಲ ವಿಚಾರ-ಕಲ್ಪನೆಗಳನ್ನು ಮೀರಿರುವದು. ಇದರಲ್ಲಿಯೂ ಕಾಂಟನ 'ಮೂಲವಸ್ತು'ವಿನಲ್ಲಿಯೂ ಯಾವ ಸಮಾನಧರ್ಮವೂ ಇರುವುದಿಲ್ಲ. ಮಾನಸಶಾಸ್ತ್ರದ ದೃಷ್ಟಿಯಿಂದ ಅದನ್ನು 'ಅನುಬೋಧೆಯ ಏಕತೆ' (Unity of Apperception)ಎಂದು ಕರೆಯಬಹುದು. ಈ 'ವಸ್ತು'ವೇ ನಿಜವಾದ ಅಸ್ತಿತ್ವವುಳ್ಳದ್ದು. ಅದೇ 'ಚೈತಾನ್ಯಾಣು' ಇಲ್ಲವೆ ಪರಮಾತ್ಮನ ಅಣುರೂಪ ಅಥವಾ ಪರಮಾಣುರೂಪ ಎಂದು ಕರೆಯಲಾಗುವುದು. ಅದು ತಳೆಯಬಹುದಾದ ಎಲ್ಲ ರೂಪಗಳು 'ವಸ್ತು' ಎಂದೇ ಕರೆಯಲಾಗುವವು. ಈ ಕವನದ ಕರ್ತನು 'ನಿರ್ಬಯಲು' ಎಂಬ ಶಬ್ದವನ್ನು ಉಪಯೋಗಿಸಿರುವನು. 'ನಿರ್ಬಯಲು' ಶಬ್ದವನ್ನು ಬಳಸಿದ ಅತ್ಯಲ್ಪ ವೈಷ್ಣವ ಕವಿಗಳಲ್ಲಿ ಮಹಿಪತಿ ಯವರೊಬ್ಬರು, ಎಂದು ನಾನು ಬಗೆಯುವೆ. ಅವರದನ್ನು ವೀರಶೈವ ಸಾಹಿತ್ಯದಿಂದ ಪಡೆದಿರುವಂತೆ ಕಾಣುವುದು. ವೀರಶೈವ ಸಾಹಿತ್ಯದಲ್ಲಿ 'ಬಯಲಿಗೆ ಬಯಲು ನಿರ್ಬಯಲು' ಎಂಬುದು ಪರತತ್ತ್ವದ ತೀರ ವಾಡಿಕೆಯ ಬಣ್ಣನೆಯಾಗಿರುವುದು. ಇನ್ನು ಈ ವಸ್ತುವಿಗೆ ಒಂದು ವೈಜ್ಞಾನಿಕ ಅಂಗವು ಇರುವುದು. ನೀವು ಅದರ ಆಳವನ್ನು ಅರಿಯಲರಿಯಿರಿ. ಯಾವ ಆಳಗುಂಡೂ ಅದರ ಆಳವನ್ನು ಗುರುತಿಸಲರಿಯದು. ಅದೇ ಕಾಲಕ್ಕೆ ಅದು 'ವ್ಯಾಪಕವಾಗಿಹುದು ಮೂಜಗವೆಲ್ಲಾ'- ಇಡೀ ವಿಶ್ವವನ್ನು ಅದು ತುಂಬಿರುವುದು. ಅದು ವಿಶ್ವವ್ಯಾಪಿ ಯಿರುವುದಷ್ಟೇ ಅಲ್ಲದೇ, ವಿಶ್ವಾತೀತವಾದುದೂ ಇರುವುದು. ಆದುದರಿಂದ ಈ ವಸ್ತುವನ್ನು ನೀವು ವಿಶ್ವದ ಮೂಲೆಮೂಲೆಗಳಲ್ಲಿ ಕಾಣಬಹುದು. ಆಮೇಲೆ ಕವಿಯು ಅದನ್ನು 'ತಜ್ಞನ ಹೃದಯದ ಚಿದ್ಘನ ದೀಪ'ದೊಡನೆ ಹೋಲಿಸುವನು. ಅದೊಂದು ಪಾರಮಾರ್ಥಿಕ ಪ್ರಭೆಯುಳ್ಳ ಪ್ರತ್ಯಕ್ಷ ದೀಪವೇ ಸರಿ. ಆದರೆ ಅದು ಮಾರ್ಟಿನೋ ಹಾಗೂ ಬಟ್ಲರ ಈ ದಾರ್ಶನಿಕರು ಅರುಹಿದ 'ವಿವೇಕ' ಇಲ್ಲವೆ 'ದಿವ್ಯದೀಪ'ದಂತಹದಲ್ಲ. ಬಟ್ಲರರವರ 'ವಿವೇಕ'ವು ಘನತೆ, ಸಾಮರ್ಥ್ಯ ಹಾಗೂ ಯುಕ್ತಾಯುಕ್ತ ಪರಿಜ್ಞಾನವನ್ನು

ಒಳಗೊಂಡಿರುವುದು. ಅವನದನ್ನು ದೀಪದೊಡನೆ ಹೋಲಿಸಿರುವನು. ಮಾರ್ಟಿನೋ ಅವನು ಕೂಡ ಹಾಗೆಯೆ ಮಾಡಿರುವನು. ಆದರೆ ಅವನ ಜ್ಞಾನದೀಪವು ಕೇವಲ ಪರತತ್ತ್ವಶಾಸ್ತ್ರೀಯವಿರುವುದು. ಅದು ಪಾರಮಾರ್ಥಿಕ ಇಲ್ಲವೇ ಅನುಭಾವಿಕ ವಿರುವುದಿಲ್ಲ. ಅದೇ ಆ ಎರಡು ಬಗೆಯ ದೀಪಗಳಲ್ಲಿಯ ವ್ಯತ್ಯಾಸ.

ಇದಾದ ಮೇಲೆ, ನಿಜವಾದ ಭಾವವು ಬಲಿಯದೆ, ಬಲಿಯುವವರೆಗೆ, ಯಾವ ಮನುಜನೂ ಈ 'ವಸ್ತು'ವನ್ನು ಕಾಣಲರಿಯ ಎಂದು ಮಹಿಪತಿಯವರು ಹೇಳಿರುವರು. ಬರಿ ಜಪಮಣಿಗಳನ್ನೆಣಿಸಿ, ಇಲ್ಲವೆ ಏಕಾದಶಿಯ ಉಪವಾಸಗಳನ್ನು ಮಾಡಿ ಫಲವಿಲ್ಲ. ಅವು ನಿಮ್ಮ ಮನಸ್ಸನ್ನು ನಿರ್ಮಲಗೊಳಿಸುವವು ನಿಜ. ಆದರೆ ಅವು ನಿಮ್ಮನ್ನು ಭಗವಂತನ ಸಾಕ್ಷತ್ಕಾರದೆಡೆ ಒಯ್ಯಲರಿಯವು. ಅದಕ್ಕೆ ಮುಖ್ಯವಾಗಿ ಬೇಕಾದುದು ಭಾವ. ಕೇವಲ ಜಪಮಣಿಗಳ ಎಣಿಕೆಯಲ್ಲ. ಭಾವಿಕನೇ ಅದರ ಸ್ವರೂಪವನ್ನು ಬಲ್ಲನು. 'ಭಾವಿಕ ಬಲ್ಲನು ಅದರ ಹುಯಿಲಾ!' ಎಂದು ಕವಿಯು ಹೇಳುವನು. ಬಹುಕಾಲದ ವರೆಗೆ ನಾನು ಭಾವದ ಸ್ವರೂಪವನ್ನು ಅರಿತಿರಲಿಲ್ಲ. ಭಾವವೆಂದರೇನೆಂಬುದನ್ನು ನಾನು ಇತ್ತೀಚೆಗೆ ಅರಿಯಲು ಪ್ರಾರಂಭಿಸಿರುವೆ. ನಮ್ಮ ಸದ್ಗುರುಗಳು ಅದನ್ನು ಕುರಿತು ಮೇಲಿಂದ ಮೇಲೆ ಹೇಳುತ್ತಿದ್ದರು. ಆದರೆ ಭಾವವೆಂದರೇನೆಂಬುದು ನಮಗಾಗ ತಿಳಿದಿರಲಿಲ್ಲ. ಕೊನೆಯದಾಗಿ, 'ಜೀವನ್ಮುಕ್ತಿಗೆ ಇದೆ ಮೂಲ'ವಿರುವುದು. ಇದೊಂದು ಮಹಿಪತಿಯವರು ಮಾಡುವ ಅತಿ ಮಹತ್ವದ ವಿಧಾನವು. ನೀವು ಭಗವಂತನ ರೂಪವನ್ನು ಕಂಡಾಗ ಜೀವನ್ಮುಕ್ತ ರಾಗುವಿರಿ. ಇದೇ 'ಜೀವನ್ಮುಕ್ತಿ'ಯ ಪಾರಮಾರ್ಥಿಕ ಅರ್ಥವಿವರಣೆ. ಇದನ್ನು ಅರುಹಿದವರು ತೀರ ವಿರಲ. ವೇದಾಂತಿಕ ಬರಹಗಾರರು ಕ್ರಮಮುಕ್ತಿ, ವಿದೇಹಮುಕ್ತಿ, ಹಾಗೂ ಜೀವನ್ಮುಕ್ತಿ ಎಂಬ ಬಗೆಬಗೆಯ ಮುಕ್ತಿಗಳನ್ನು ಅರುಹಿರುವರು. ಆದರೆ ಅವರು ಜೀವನ್ಮುಕ್ತಿಯ ಲಕ್ಷಣವನ್ನು ಚೆನ್ನಾಗಿ ವಿಶದಗೊಳಿಸಿರುವುದಿಲ್ಲ. ನೀವು ಭಗವಂತನ ರೂಪವನ್ನು ಕಂಡಾಗ, ಆ ಭಗವದ್ದರ್ಶನವೇ ಜೀವನ್ಮುಕ್ತಿಯ ಕುರುಹು ಎಂದು ಮಹಿಪತಿಯವರು ಹೇಳುವರು. ನೀವು ಜೀವಿಸಿರುವಾಗಲೂ, ಹಾಗೂ ಜೀವಿಸಿರುತ್ತಿದ್ದರೂ ಮುಕ್ತರಾಗು ವಿರಿ. ಮಹಿಪತಿಯವರು ಅರುಹಿದ ಜೀವನ್ಮುಕ್ತಿಯ ವಿಚಾರದಲ್ಲಿ ಇದು ತುಂಬ ಅರ್ಥಪೂರ್ಣವಾದ ಅಂಶವಿರುವುದು.

ನಾವಿನ್ನು 'ಲಿಂಗಪೂಜಿ ಆಗತದಣ್ಣಾ' ಎಂಬ ಮುಂದಿನ ಪದದೆಡೆ ಸಾಗುವೆವು. ದೇಹದಿಂದ ಹೊರತೆರಳುವ ನಿಮಿಷವು ಮಾನವನ ಜೀವನದಲ್ಲಿಯ ಅತಿ ಕಠಿಣವಾದ ನಿಮಿಷವು. ಆ ಸಮಯದಲ್ಲಿ ನಾವು ಗಂಗಾಧರನನ್ನು ನೆನೆಯಬೇಕೆಂದು ಈ

ಕವಿಯು ಹೇಳುವನು. "ಬ್ರಹ್ಮವಾಚಕವಾದ ಓಂ ಎಂಬ ಏಕಾಕ್ಷರವನ್ನು ಉಚ್ಚರಿಸುತ್ತ ದೇಹವನ್ನು ವಿಸರ್ಜಿಸುವವನು ಮುಕ್ತಿಯ ಪರಮಾದರ್ಶವನ್ನು ಪಡೆಯುವನು."

ಓಮಿತ್ಯೇಕಾಕ್ಷರಂ ಬ್ರಹ್ಮವ್ಯಾಹರನ್ ಮಾಮನುಸ್ಮರನ್।

ಯಃ ಪ್ರಯಾತಿ ತ್ಯಜನ್ ದೇಹಂ ಸಯಾತಿ ಪರಮಾಂಗತಿಂ॥

ಎಂದು ಭಗವದ್ಗೀತೆಯು ಉಸುರುವದು. ಇಲ್ಲಿ ಗಂಗಾಧರ ಎಂಬ ಶಬ್ದವು ಎರಡರ್ಥಗಳಲ್ಲಿ ಬಳಸಲಾಗಿರಬಹುದು. ಗಂಗಾಧರನೆಂದರೆ ಶಿವನಿರಬಹುದು ಇಲ್ಲವೆ ಅದು ಒಂದು ಬಗೆಯಾಗಿ ಕವಿಯ ಹೆಸರಿರಬಹುದು. ಆದರೆ ಕವಿಯು ತನ್ನ ಹೆಸರನ್ನು ಸ್ಪಷ್ಟವಾಗಿ ಅರುಹಿರುವುದಿಲ್ಲ. ಆದುದರಿಂದ ನಾವು ಕವಿಯನ್ನು ಗಂಗಾಧರ ಎಂಬ ಹೆಸರಿನಿಂದಲೇ ಸಂಬೋಧಿಸುವೆವು. ಯಾಕಂದರೆ ಈ ಪದದಲ್ಲಿ ಬೇರಾವ ಹೆಸರೂ ಉಲ್ಲೇಖಿಸಲಾಗಿರುವುದಿಲ್ಲ.

ಈ ಕವಿಯ ಅಭಿಮತದ ಮೇರೆಗೆ ನಮ್ಮಂತರಂಗದಲ್ಲಿ ಎಡೆಬಿಡದೆ ಲಿಂಗಪೂಜೆಯು ನಡೆಯುವುದು ಎಂಬುದು ನೀವದರಲ್ಲಿ ಕಾಣಬಹುದಾದ ಮೊದಲನೆಯ ಮಾತು. ಅದೇ ಲಿಂಗಪೂಜೆಯ ನಿಜವಾದ ನಿಕಷ. ಅದು ಕೇವಲ ಬೆಳಗಿನ ೭ ಇಲ್ಲವೆ ೮ ಗಂಟೆಗೆ, ಅಥವಾ ಸಂಜೆಯ ೪ ಇಲ್ಲವೆ ೧೦ ಗಂಟೆಗೆ ಅಷ್ಟೆ ನಡೆಯಕೂಡದು. ನೀವು ಲಿಂಗವನ್ನು ಸದೈವ ಕಾಣಬಲ್ಲವರಾಗಬೇಕು. ನೀವದನ್ನು ಬರಿಯ ಅಂಗೈಯಲ್ಲಿರಿಸುವದರಿಂದ ಏನು ಪ್ರಯೋಜನ? ಅದನ್ನು ಸದೈವ ಕಾಣಬಲ್ಲವರಾದಾಗಲೇ ನಿಮ್ಮ ಆತ್ಮಲಿಂಗವು ಪ್ರಕಟವಾಗಬಹುದು. ಈ ಪದದಲ್ಲಿ ಕವಿಯು ಒಂದೇ ಲಿಂಗವನ್ನು ಉಲ್ಲೇಖಿಸಿರುವ, ಮತ್ತು ವೀರಶೈವ ಶರಣರು ಸಾಮಾನ್ಯವಾಗಿ ಮಾಡುವಂತೆ, ಅವನು ಮೂರು ಬಗೆಯ ಲಿಂಗಗಳಲ್ಲಿ ಯಾವ ರೀತಿಯ ಭೇದವನ್ನೂ ಕಲ್ಪಿಸಿರುವುದಿಲ್ಲ. ಈ ರೀತಿ, ಸಂತತವಾಗಿ ಕಾಣಲಿರುವ ಏಕಮೇವ ಲಿಂಗವೇ ಪರಮಸತ್ಯವು-ಪರತತ್ತ್ವವು. ಈ ಪರತತ್ತ್ವರೂಪಿಯಾದ ಲಿಂಗವನ್ನು ಪಡೆಯುವದೆಂತು? ಮೊದಲಿ ನೈತಿಕಸಿದ್ಧತೆಯಾಗಬೇಕು. ಅಷ್ಟಮದ ಗಳೆಂಬ ಎಂಟು ಕೋಣಗಳನ್ನು ಈ ದೇಹಕ್ಷೇತ್ರದಿಂದ ಹೊರದೂಡಬೇಕು. 'ಆರು ಮೂರು'-ಷಡ್ವಿಕಾರಗಳು ಹಾಗೂ ತ್ರಿಗುಣಗಳು-ಇವನ್ನು ಕಟ್ಟಬೇಕಣ್ಣಾ ಕೆಡಿಸ ಬೇಕಣ್ಣಾ! ಅದೇ ನಿಜವಾದ ಯಜ್ಞ. ಕೋಣಗಳನ್ನು ಸಹಜವಾಗಿ ಕೊಲ್ಲಲು ಬರಲರಿಯದು. ಅವು ಓಡಿಹೋಗುವವು. ಆದುದರಿಂದ ಅವನ್ನು ಹೊರದೂಡ ಬೇಕು. ಅಷ್ಟೇ ನಮಗೆ ಸಾಕಾಗಬಹುದು.

ಇನ್ನು ಈ ಶೈವ ಕವಿಗಳು ಮಾನವ ಶರೀರಶಾಸ್ತ್ರದ ಅಸಾಧಾರಣವಾದ ಜ್ಞಾನವನ್ನು ಪಡೆದಿರುವದು ತುಂಬ ಗಮನಾರ್ಹವಾದ ಸಂಗತಿ. ಸುಮಾರಾಗಿ ಎಲ್ಲ

ಕವಿಗಳು ಶರೀರಶಾಸ್ತ್ರವನ್ನು ಕುರಿತು ಬರೆಯಲು ಹೇಗೆ ಮುಂದಾಗುವರು ಎಂಬುದನ್ನು ನಾನರಿಯೆ, ಮತ್ತು ಅವರ ಯೋಗಿಕ ಶರೀರಶಾಸ್ತ್ರದ ಸ್ವರೂಪವನ್ನು ಅರಿಯುವುದು ಆಧುನಿಕ ವೈದ್ಯ ಡಾಕ್ಟರರಿಗೂ ಬಿಗಿಯಾದುದಾಗಿರುವುದು. ಈ ಪದದಲ್ಲಿ ಕವಿಯು ಶರೀರದಲ್ಲಿ ಮೂರು ನದಿಗಳಿರುವವು ಎಂದು ಹೇಳುವನು. ಅದರಿಂದ ಅವನು ಬಹುತರವಾಗಿ, ಇಡಾ, ಪಿಂಗಳಾ ಮತ್ತು ಸುಷುಮ್ನಾ ಈ ನಾಡಿಗಳನ್ನು ಸೂಚಿಸಿರಬಹುದು. ಈ ಮೂರು ನದಿಗಳ ಸಂಗಮದಲ್ಲಿ ಆರು ನಿಲ್ದಾಣಗಳಿರುವವು. ಅವು ಷಟ್‌ಚಕ್ರಗಳೆಂದು ಕರೆಯಲಾಗಿವೆ. ನೀವು ಆ ಚಕ್ರಗಳನ್ನು ಸೇರಿ ಅವುಗಳೊಳಗಿಂದ ಮೇಲಕ್ಕೇರಬೇಕು. ಅಂದರೆ ನೀವು ಮಿದುಳಿನ ಶಿಖರವನ್ನು ಮುಟ್ಟುವಿರಿ. ಅಲ್ಲಿ ನಾಲ್ಕು ದಾರಿಗಳುಂಟು: ಒಂದು ಮುಂಭಾಗದ ಕುಹರ, ಒಂದು ಹಿಂಭಾಗದ ಕುಹರ, ಎರಡು ಪಾರ್ಶ್ವದ ಕುಹರಗಳು. ಇವೇ ಆ ನಾಲ್ಕು ದಾರಿಗಳು. ನೀವು ಸುಷುಮ್ನೆಯೊಳಗಿಂದ ಹಾದು, ಈ ನಾಲ್ಕು ದಾರಿಗಳು ಕೂಡುವ ಸ್ಥಳಕ್ಕೆ ಹೋಗಬೇಕು. ಈ ಸ್ಥಲವು ಬೇರೆಡೆ ಶೃಂಗಾಟಕವೆಂದು ಹೆಸರಿಸಲಾಗಿದೆ. ಈ ರೀತಿ ನೀವು ಸುಷುಮ್ನೆಯೊಳಗಿಂದ ಏರಿ, ಮಿದುಳಿನಲ್ಲಿಯ ಈ ನಾಲ್ಕು ದಾರಿಗಳನ್ನು ಸೇರಿದಿರೆಂದರೆ, ನಿಮಗೆ ಭಗವಂತನ ದರ್ಶನವು ಲಭಿಸುವುದು. ವೇದಾಂತಿಕ ದರ್ಶನದಲ್ಲಿ ಮಿದುಳಿನಲ್ಲಿಯ ಈ ಸ್ಥಲವು ಬ್ರಹ್ಮರಂಧ್ರವೆಂದೂ ಕೂಡ ಸಂಬೋಧಿಸ ಲಾಗಿದೆ. ಅಲ್ಲಿ ನೀವು ಈ ಲಿಂಗದ ಅನುಭಾವಿಕ ದರ್ಶನವನ್ನು ಪಡೆಯುವಿರಿ. ಈ ನಾಲ್ಕು ದಾರಿಗಳ ನಡುವಿರುವ ಉನ್ನತತಮ ಶಿಖರವನ್ನು ಅಂದರೆ ಶೃಂಗಾಟಕ ಇಲ್ಲವೆ ಬ್ರಹ್ಮರಂಧ್ರವೆಂಬ ಮಧ್ಯ ಕುಹರವನ್ನು ಮುಟ್ಟಿದಿರೆಂದರೆ, ಅಲ್ಲಿ ನೀವು, ಭೇರಿಯ ನಿನಾದವನ್ನು ದಿನದಲ್ಲಿಯ ಕೆಲ ನಿಯತ ಸಮಯಕ್ಕಷ್ಟೇ ಅಲ್ಲ, ಸಂತತವಾಗಿ ಕೇಳಬಹುದು. ಇತ್ತೀಚೆಗೆ ನಾನು ಜಮಖಂಡಿಗೆ ಹೋದಾಗ, ನನ್ನ ಬಾಲ್ಯದಲ್ಲಿ ಭೇರಿಯು ಮೊಳಗುತ್ತಿರುವ ಸ್ಥಲವನ್ನು ಸಂದರ್ಶಿಸಿದೆ. ನಾವು ಪ್ರತ್ಯಕ್ಷವಾಗಿ ಭಗವಂತನೆದುರು ನಿಂತಿರುವಾಗ ಭೇರಿಯು ಎಡೆಬಿಡದೆ ಮೊಳಗುವು ದುಂಟು. ಎರಡನೆಯದಾಗಿ, ನೀವು ಭಗವಂತನ ಥಳಥಳಿಸುವ ರೂಪವನ್ನೂ, ಅದರ ಜತೆಯಲ್ಲಿ ಅದೇ ಕಾಲಕ್ಕೆ ಬಗೆಬಗೆಯ ಬಣ್ಣಗಳನ್ನೂ ಕಾಣಬೇಕು. ಈ ಬೆಳಕಿನಲ್ಲಿ ನಾದ-ಬಣ್ಣಗಳಿಂದ ಒಡಗೂಡಿ ಭಗವಂತನು ಕಾಣಿಸಿಕೊಂಡಾಗ, ಆತನ ಸೌಂದರ್ಯವು ಹೆಚ್ಚಾಗಿ ಕಂಗೊಳಿಸುವುದು. ಕೊನೆಯದಾಗಿ, ಈ ಬಗೆಯಾಗಿ ಭಗವಂತನನ್ನು ಕಾಣುವ ಸೌಭಾಗ್ಯವು ಎಲ್ಲರಿಗೆ ಲಭಿಸುವುದಿಲ್ಲ ಎಂದು ಗಂಗಾಧರನು ಹೇಳುವನು. ಮೇಲಾಗಿ 'ಆಗ ಈಗ ಎನ್ನದೆ ನಿನ್ನ ದೇಹ ಸಾಗಿ ಹೋಗತದ' ಆದುದರಿಂದ ಭಗವಂತನನ್ನು ಕೂಡಲೆ ಅರಿಯುವುದು ಅವಶ್ಯ. ಅದಕ್ಕಾಗಿ ಒಂದರಗಳಿಗೆಯನ್ನೂ ಕಳೆಯದೆ ಭಗವಂತನ ರೂಪದ ಮೇಲೆ ನಮ್ಮ

ಚಿತ್ತವನ್ನು ನಾವು ಏಕಾಗ್ರಗೊಳಿಸಬೇಕು. ನಾವು ಗಂಗಾಧರನ ಪಾರಮಾರ್ಥಿಕ ಅನುಭವವನ್ನು ಪಡೆದಾಗಲೇ ಮುಕ್ತರಾಗಬಹುದು ಎಂಬುದು ಕವಿಯ ಹೇಳಿಕೆ.

ಇದಾದ ಮೇಲೆ ನಾವು 'ಲಿಂಗಪೂಜೆಯ ಮಾಡಿರೋ' ಎಂಬ ಗುರುಸಿದ್ಧರ ಒಂದು ಮಹತ್ವದ ಕವನವನ್ನು ವಿವರಿಸುವೆವು. ಇದೊಂದು ಬಲು ಅಂದವಾದ ಪದ. ಇದು ನಾವು ಮಾಡಬೇಕೆಂದು ಹೇಳಲಾದ ಪ್ರಾಣಲಿಂಗದ ಪೂಜೆಯ ಬಗೆಯನ್ನು ಬಣ್ಣಿಸುವುದು. ನಾವು ಈ ಮೊದಲು 'ಧ್ಯಾನಪದ್ಧತಿ' ಎಂಬ ಪ್ರಕರಣ ದಲ್ಲಿ, ಇಷ್ಟ-ಲಿಂಗ, ಪ್ರಾಣ-ಲಿಂಗ, ಹಾಗೂ ಭಾವಲಿಂಗಗಳನ್ನು ಕುರಿತ ನಿಜಗುಣರ ಹೇಳಿಕೆಯನ್ನು ವಿವರಿಸಿರುವೆವು. ಅವರ ಅಭಿಮತದ ಮೇರೆಗೆ ಇಷ್ಟಲಿಂಗವು ಪಾರ್ಥಿವ ಲಿಂಗ; ಪ್ರಾಣಲಿಂಗವು ಪಾರಮಾರ್ಥಿಕ ಲಿಂಗ; ಹಾಗೂ ಭಾವಲಿಂಗವು ದಾರ್ಶನಿಕ ಲಿಂಗ. ಇಲ್ಲಿ ಗುರುಸಿದ್ಧರು ಪ್ರಾಣಲಿಂಗವನ್ನು, ಇಷ್ಟಲಿಂಗ, ಭಾವಲಿಂಗ ಎಂಬ ಎರಡೂ ಅರ್ಥಗಳಲ್ಲಿ ಬಳಸಿರುವರು. ಬೇಕನ್ನನ ಭಾಷೆಯಲ್ಲಿ ಹೇಳುವು ದಾದರೆ, ಪ್ರಾಣಲಿಂಗವು 'ಜಾನಸ' ಎಂಬ ಇಟಾಲಿಯನ್ನರ ದೇವತೆಯಂತೆ ಎರಡು ಮುಖಗಳುಳ್ಳ ಪರತತ್ತ್ವವು. ಅದು ಒಮ್ಮೆ ಇಷ್ಟಲಿಂಗದೆಡೆ ನೋಡುವುದು, ಇನ್ನೊಮ್ಮೆ ಭಾವಲಿಂಗದೆಡೆ ನೋಡುವುದು. ಅದೇನೇ ಇದ್ದರೂ ನಮ್ಮ ಹೃದಯದಲ್ಲಿಯ ಪ್ರತ್ಯಕ್ಷ ದೇವರೂಪಿಯಾದ ಪ್ರಾಣಲಿಂಗದ ಮೇಲೆ ನಾವು ನಮ್ಮ ಮನಸ್ಸನ್ನು ಏಕಾಗ್ರಗೊಳಿಸಬೇಕೆಂದು ಕವಿಯು ಬೋಧಿಸುವನು. ಸರ್ಪಭೂಷಣರ ಅಭಿಮತದ ಮೇರೆಗೆ ಈ ಪೂಜೆಯು ಎಂಟು ಅವಸ್ಥೆಗಳೊಳಗಿಂದ, ಉಪಚಾರಗಳೊಳಗಿಂದ ಹಾದುಹೋಗಬೇಕು. ಈ ಅವಸ್ಥೆಗಳು-ಉಪಚಾರಗಳು ತುಂಬ ಸುಪರಿಚತವಾದ ವುಗಳು. ಮಜ್ಜನವು ಮೊದಲನೆಯ ಉಪಚಾರ; ಗಂಧಾಕ್ಷತೆಗಳು ಮುಂದಿನ ಎರಡು ಉಪಚಾರಗಳು; ಪುಷ್ಪವು ನಾಲ್ಕನೆಯ ಉಪಚಾರ; ಧೂಪ-ದೀಪ-ನೈವೇದ್ಯಗಳು ಅದರ ಮುಂದಿನ ಮೂರು ಉಪಚಾರಗಳು; ಮತ್ತು ಕೊನೆಯದು ತಾಂಬೂಲ. ಈ ರೀತಿ, ಪ್ರತಿಯೊಂದು ದೇವತೆಯ ಪೂಜೆಯು-ವಿಶೇತಃ ಇಲ್ಲಿ ಪ್ರಾಣಲಿಂಗದ ಪೂಜೆಯು-ಈ ಎಂಟು ಉಪಚಾರಗಳಿಂದ ಕೂಡಿರುವುದು. ಇನ್ನು ಈ ಪೂಜಾ ವಿಧಿಯ ವಿವರಗಳನ್ನು ಅರಿತುಕೊಳ್ಳುವಾ! ಪ್ರಾಣಲಿಂಗವನ್ನು ಪೂಜಿಸ ಬಯಸು ವವನು ಮೊದಲು ಇಡಾ-ಪಿಂಗಳಾ ರೂಪಿಯಾದ ಗಂಗೆಯಮುನೆಗಳ ಸಂಗಮ ದಲ್ಲಿ ಮಿಂದು ತರುವಾಯ, ಶೃಂಗಾಟಕದ ಮೇಲಿನ ರಂಗಮಂಟಪವನ್ನು ಸೇರಿ ಅಲ್ಲಿ ಪ್ರಾಣಲಿಂಗವನ್ನು ಪೂಜಿಸಬೇಕು. ಅರ್ಥಾತ್ ಈ ಮಜ್ಜನವನ್ನು ಭಕ್ತಿಜಲದಿಂದ ಮಾಡಬೇಕು. ನಾವು ಶ್ರೇಷ್ಠ ತರಗತಿಯ ಭಕ್ತಿಜಲವನ್ನು ಲಿಂಗದ ಮೇಲೆ ಸುರಿಯ ಬೇಕು. ಆಮೇಲೆ ನಾವದಕ್ಕೆ ವಿರಕ್ತಿಯ ಭಸ್ಮವನ್ನು ಹಚ್ಚಬೇಕು. ಭಸ್ಮವು ವಿರಕ್ತಿಯ ಕುರುಹು. ತರುವಾಯ ನಾವು ಪ್ರಾಣಲಿಂಗದ ಮೇಲೆ ಹೊಳೆಯುವ ಅಕ್ಷತೆಗಳನ್ನು

ಇಡಬೇಕು. ನಮ್ಮ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೇ ಅಕ್ಷತೆಗಳು. ಅವುಗಳ ನೆರವಿನಿಂದಲೇ ನಾವು ದೇವರನ್ನು ಪೂಜಿಸಬೇಕಾಗುವುದು. ಆಮೇಲೆ ಬರುವುದು ಪುಷ್ಪ; ಪುಷ್ಪವೆಂದರೆ ನಮ್ಮ ಅರಿವು, ಇಲ್ಲವೆ ಎಚ್ಚರ. ನಾವು ಲಿಂಗದೇವರ ಮೇಲೆ ನಮ್ಮ ಅರಿವಿನ ಅಂದವಾದ ಅಲರನ್ನು ಏರಿಸಬೇಕು. ಆ ಮೇಲೆ ಬರುವವು ಧೂಪ-ದೀಪ-ನೈವೇದ್ಯಗಳು. ಧೂಪವು ಒಂದು ಅದ್ಭುತವಾದ ವಸ್ತು. ನಾವು ನಮ್ಮ ಹರ್ಷರೂಪಿಯಾದ ಧೂಪವನ್ನು ಅರ್ಪಿಸಬೇಕು. ಧೂಪವು ಆಗಸಕ್ಕೆ ಏರುವಂತೆ, ನಮ್ಮ ಹರ್ಷವು ಕೂಡ ಸ್ವರ್ಗವನ್ನು ಸೇರಲಿ! ನಾವು ಧೂಪವನ್ನು ಬೆಂಕಿಯ ಮೇಲೆ ಇರಿಸಿದಾಗ ಅದರ ಹೊಗೆಯು ಮೇಲಕ್ಕೆ ಏರುವುದು. ಅದನ್ನು ನಾವು ಉನ್ನಯನ(Anatropism)ವೆಂದು ಕರೆಯಬಹುದು. ನಮ್ಮ ಭಕ್ತಿಯು ಧೂಮದಂತೆ ಭಗವಂತನೆಡೆ ಏರಬೇಕು. ಇದೇ ನಿಜವಾದ ಧೂಪವು. ನಾವು ಪ್ರಾಣಲಿಂಗದೆದುದರು ಪರಬಿಂದುರೂಪಿಯಾದ ಪ್ರದೀಪವನ್ನು ಸಂತತವಾಗಿ ಬೆಳಗುತ್ತಿರಬೇಕು-ಉರಿಸುತ್ತಿರಬೇಕು. ಪರಬಿಂದುವೇ ಚೈತಾನ್ಯಾಣುವೇ ದೀಪ-ಜ್ಞಾನದೀಪ. ಅದರ ಸ್ವರೂಪವನ್ನು ನಾವು ಈ ಮೊದಲೇ ಅರುಹಿರುವೆವು. ಆ ಮೇಲೆ ಬರುವುದು ನೈವೇದ್ಯ. ನೀವು ಪಡೆದದ್ದನ್ನೆಲ್ಲ, ನಿಮ್ಮ ಹತ್ತಿರ ಇದ್ದದ್ದನ್ನೆಲ್ಲ, ಅಥವಾ ನಿಮ್ಮ ಆತ್ಮನನ್ನು ಕೂಡ, ನೀವು ಭಗವಂತನಿಗೆ ಆಹುತಿಯಾಗಿ ಅರ್ಪಿಸಬೇಕು-ಯಜಿಸಬೇಕು, ಇದೇ ನೈವೇದ್ಯ. ಕೊನೆಗೆ ನಾವು, ತ್ರಿಗುಣಗಳ ಮಸಾಲೆಯನ್ನು ಒಳಗೊಂಡ ತಾಂಬೂಲವನ್ನು ಸಮರ್ಪಿಸಬೇಕು. ಅವುಗಳ ಮಿಶ್ರಣದಿಂದ ಅದಕ್ಕೆ ಅಂದವಾದ ಬಣ್ಣವು ಲಭಿಸಬಹುದು. ಈ ರೀತಿ, ಈ ಪಾರಮಾರ್ಥಿಕ ಪೂಜಾವಿಧಿಯನ್ನು ನೆರವೇರಿಸಬೇಕು.

ಈ ಪದದಲ್ಲಿ ಇನ್ನೊಂದು ಅತಿ ಮಹತ್ವದ ವಿಷಯವು ಬಂದಿರುವುದು. ಇದೇ ನಾನು ಹೇಳಿದ ಮೇರೆಗೆ, ನಿಜಗುಣರು ಮೂರು ಅಂಗಗಳನ್ನು ಕುರಿತು ಉಸುರಿದರೆ, ಸರ್ಪಭೂಷಣರು ಪ್ರಾಣಲಿಂಗದ ಮೇಲೆಯೆ ತಮ್ಮ ಅವಧಾನವನ್ನು ಕೇಂದ್ರೀಕರಿಸಿರುವರು. ಸರ್ಪಭೂಷಣರು ತುಂಬ ವಿನಯಶೀಲರು. ಅವರು ಬಲು ಉಜ್ವಲವಾದ ಅನುಭಾವ ಕವಿಗಳು. ನಿಜಗುಣರ ತರುವಾಯ ಎರಡು ಶತಮಾನಗಳು ಕಳೆದ ಮೇಲೆ ಅವರು ಬಾಳಿದುದು. ನಿಜಗುಣರು 'ಕೈವಲ್ಯ ಪದ್ಧತಿ' ಎಂಬ ಗ್ರಂಥವನ್ನು ಬರೆದರು; ಮತ್ತು ಸರ್ಪಭೂಷಣರು ತಮ್ಮ ಗ್ರಂಥವನ್ನು 'ಕೈವಲ್ಯ ಕಲ್ಪವಲ್ಲರಿ' ಎಂದು ಕರೆದರು. 'ವಲ್ಲರಿ' ಎಂದರೆ 'ಬಳ್ಳಿ'. ನಾನು 'ವಲ್ಲರಿ'ಯ ಬದಲಾಗಿ 'ಕಸಿಕೊಂಬೆ' (Graft) ಎಂಬ ಶಬ್ದವನ್ನು ಸೂಚಿಸುವೆ. ನಿಜಗುಣರ ಮೂಲ ವೃಕ್ಷಕ್ಕೆ ಅಂಟಿಸಿದ 'ಕಸಿಕೊಂಬೆ'ಯಂತಿರುವ ಸರ್ಪಭೂಷಣರ ಗ್ರಂಥವು ಮೂಲ ವೃಕ್ಷವನ್ನು ಮತ್ತೂ ಹೆಚ್ಚು ಪರಿಪೂರ್ಣವಾಗಿ ಬೆಳೆಸಿರುವುದು. ಸರ್ಪಭೂಷಣರ 'ಕಲ್ಪವಲ್ಲರಿ'ಯ 'ಕಸಿ'ಯು ನಿಜಗುಣರನ್ನು ತುಂಬ ಪ್ರಸಿದ್ಧ

ಗೊಳಿಸಿರುವುದು. ಆದುದರಿಂದ ಆತ್ಮಲಿಂಗದ ಪಾರಮಾರ್ಥಿಕ ಪೂಜೆಯು ಎಂತಹದಿರಬಹುದು ಎಂಬುದನ್ನರುಹುವ ಹಳೆಯ ಪರಂಪರೆಯನ್ನು ಸರ್ಪಭೂಷಣರು ಒಂದು ಬಗೆಯಾಗಿ ಮುಂದುವರಿಸಿರುವರು. ಪ್ರಾಣಲಿಂಗವು ಈ ಕವನದ ಕೇಂದ್ರ ಕಲ್ಪನೆಯಿರುವುದು. ಅದನ್ನು ಇಷ್ಟಲಿಂಗ ಹಾಗೂ ಪರವಸ್ತುವಿನೊಡನೆ ಒಂದಿಸಲಾಗಿದೆ. ಭಾವಲಿಂಗದೊಡನೆ ಇರುವ ಅದರ ಸಂಬಂಧವನ್ನು ಕುರಿತು ಇಲ್ಲಿ ಸ್ಪಷ್ಟವಾಗಿ ಏನನ್ನೂ ಅರುಹಲಾಗಿಲ್ಲ. ಅಂತೂ ನಾವು 'ಒಳಗೆ' 'ಹೊರಗೆ' ಎಂಬ ಭೇದವನ್ನೂ, ಅರಿತ ಅರಿವನ್ನೂ ಹಾಗೂ ಅದರ ಪ್ರಜ್ಞೆಯನ್ನು ಮೀರಿ 'ಗುರುಸಿದ್ಧನಂಪ್ರಿಯೊಳು ಬೆರೆದೇಕ'ವಾಗಬೇಕು.

'ಕಲ್ಲು ಮೆತ್ತಗೆ ಮಾಡಿಕೊಳ್ಳಣ್ಣಾ' ಎಂಬ ಮುಂದಿನ ಪದದಲ್ಲಿ ನಿಂಬರಗಿ ಮಹಾರಾಜರವರ ಕಾವ್ಯಶಕ್ತಿಯನ್ನೂ, ಅನುಭಾವ ಶಕ್ತಿಯನ್ನೂ ಸಹಜವಾಗಿ ಕಾಣಬಹುದು. ಅವರಿಂದಲೇ ಈ ಪದವು ಬರೆಯಲಾಗಿದೆ. ಅವರದರಲ್ಲಿ ಮೊದಲು ಹೇಳುವುದೇನೆಂದರೆ: ನಮ್ಮೆಲ್ಲರ ಹೃದಯಗಳು ಕಲ್ಲಿನಂತಿರುವವು, ಅವನ್ನು ನಾವು ಮೆತ್ತಗೆ ಮಾಡಿಕೊಳ್ಳಬೇಕು. ನೀವವನ್ನು ಮೆತ್ತಗೆ ಮಾಡಿಕೊಳ್ಳದ ಹೊರತು ನಿಮಗೆ ಪರಮಾರ್ಥದಲ್ಲಿ ಪ್ರವೇಶವೇ ದೊರೆಯಲರಿಯದು. ಅದಕ್ಕಾಗಿ ನೀವು ಅಲ್ಲಮಪ್ರಭು ವಿನಂಥ ಸದ್ಗುರುವನ್ನು ಸಾರಬೇಕು, ನಿಮ್ಮ ಶಿಲೆಯನ್ನು ಸೀಳಬೇಕು, ಮತ್ತು ಅದರೊಳಗಿಂದ ಸೆಲೆಯನ್ನು ತೆಗೆಯಬೇಕು. ಈ ಸೆಲೆಯು ಹರಿಯಲು ಮೊದಲಾಯಿತೆಂದರೆ, ಅದು ಅಮೃತರಸದೊಡನೆ ಹರಿಯತೊಡಗುವದು. ಈ ಹಿರಿಯ ಕಲ್ಲುಕುಟ್ಟಿಗನಾದ ಅಲ್ಲಮಪ್ರಭುವು, ಹಿಂದೆ ಎಲ್ಲ ಕಲ್ಲೆದೆಯವರ ಹೃದಯಗಳನ್ನು ಒಡೆದು, ಅಲ್ಲಿಂದ ಅನುಭವದ ಸೆಲೆಯನ್ನು ಹರಿಯಹಚ್ಚಿದನು. ಅದರ ಫಲವಾಗಿ, ಅಲ್ಲಿಂದ ಅಮೀರಸವು ಹರಿಯತೊಡಗಿತು. ಎರಡನೆಯದಾಗಿ, ನಾವು ಧ್ಯಾನಮಗ್ನರಾಗಿ, ಪರಮಾತ್ಮನು ನಮಗೆ ಕಲ್ಪವೃಕ್ಷದ ಇಲ್ಲವೆ ಪರುಷ ಮಣಿಯ ರೂಪದಿಂದ ಪ್ರತ್ಯಕ್ಷನಾಗಬಹುದೆಂದು ಮಹಾರಾಜರವರು ಹೇಳಿರುವರು. ನೀವು ನಿಮ್ಮ ಹೃದಯದಲ್ಲಿ ಕಲ್ಪವೃಕ್ಷವನ್ನು ಕಾಣುವಿರಿ. ಆಗ ನಿಮ್ಮ ಬಗೆಬಗೆಯ ಬಯಕೆಗಳೆಲ್ಲ ಸಫಲವಾಗುವವು. ಇದೇ ಕಲ್ಪವೃಕ್ಷ ದರ್ಶನದ ನಿಜವಾದ ಅರ್ಥ. ಅದೇ ಮೇರೆಗೆ ನೀವು ನಿಮಮಂತರಂಗದಲ್ಲಿ 'ಪರುಷ'ವನ್ನು ಇಲ್ಲವೆ 'ಪುರುಷ'ನನ್ನು ಕಾಣುವಿರಿ. 'ಪರುಷ' ಮತ್ತು 'ಪುರುಷ' ಎಂಬ ಎರಡು ಪಾಠಗಳು ಪ್ರಚಲಿತವಿರುವವು. ನೀವು ನಿಮ್ಮ ಹೃದಯದಲ್ಲಿ ಪರುಷವನ್ನು ಕಾಣಬಲ್ಲಿರಿ ಇಲ್ಲವೆ ಪುರುಷಾಕಾರದ ಪರಮಾತ್ಮನನ್ನು ಕಾಣಬಲ್ಲಿರಿ. ನೀವು ಕಂಡದ್ದು ಪರುಷವಿದ್ದರೂ ಅಷ್ಟೇ! ಪುರುಷನಿದ್ದರೂ ಅಷ್ಟೇ! ಅವೆರಡರ ಪರಿಣಾಮವು ಒಂದೇ ಆಗುವುದುಂಟು. ಈ ರೀತಿ, ನೀವು ಕಲ್ಪವೃಕ್ಷವನ್ನು ಕಾಣಬಲ್ಲಿರಷ್ಟೇ ಅಲ್ಲದೆ, ಪರುಷವನ್ನು ಇಲ್ಲವೆ ಪುರುಷನನ್ನು ಕಾಣಬಲ್ಲಿರಿ. ಕೊನೆಯದಾಗಿ ಮಹಾರಾಜರವರು ಇಂಥ ಅನುಭಾವಿ

ಗಳ ಮೇಲೆ ಅದರಿಂದುಂಟಾಗುವ ಎರಡು ಬಗೆಯ ಪರಿಣಾಮಗಳನ್ನು ಅರುಹಿರುವರು. "ನೀರು ನೀರು ಕೂಡಿದ ಮೇಲೆ ಭೇದಭಾವಗಳ್ಯಾಕೆ ಬೇಕೋ?" ನೀರು ನೀರಲ್ಲಿ ಬೆರೆಯುವಂತೆ ಜೀವ–ದೇವರು ಪರಸ್ಪರರಲ್ಲಿ ಬೆರೆಯುವರು ಎಂದು ಅವರು ಹೇಳಿರುವರು. ಈ ಪದವಿನ್ಯಾಸವನ್ನೆಯೆ ಉಪನಿಷತ್ತುಗಳು ಕೂಡ ಬಳಸಿರುವವು:

ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ
ಅಸ್ತಂಗಚ್ಛಂತಿ ನಾಮರೂಪಂ ವಿಹಾಯ ॥

'ಸಾಗರದಲ್ಲಿ ಹರಿಯುವ ನದಿಗಳು ತಮ್ಮ ನಾಮರೂಪಗಳನ್ನು ತೊರೆದು ಸಾಗರದಲ್ಲಿ ಮರೆಯಾಗುವಂತೆ'– ಇಲ್ಲಿ ನೀರು ನೀರಿನಲ್ಲಿ ಕೂಡಿ ಅವೆರಡರಲ್ಲಿ ಅಂತಿಮವಾದ ಏಕತೆಯು ನೆಲೆಗೊಳ್ಳುವುದು. ಜೀವ–ದೇವರಲ್ಲಿಯೂ ಇದೇ ಬಗೆಯ ಏಕತೆಯುಂಟಾಗುವುದು. ಆದರೆ ನಿಂಬರಗಿ ಮಹಾರಾಜರವರು ಇದನ್ನು ಕೊಂಚ ಬೇರೆ ಬಗೆಯಾಗಿಯೂ ಅರುಹಿರುವರು: 'ಅಯ್ಯ! ಶಿಷ್ಯನೇ! ನೀನು ಸಕ್ಕರೆಯ ಸವಿಯಂತಿರುವಿ!' ಸಕ್ಕರೆಯು ಒಂದು ವಸ್ತು ಹಾಗೂ ಸವಿಯು ಅದರ ಅಗಲಿಸಬಾರದ ಗುಣ. ಆಧುನಿಕ ದರ್ಶನಗಳಲ್ಲಿ ಜೀವ–ದೇವರ ಸಂಬಂಧವನ್ನು ಕುರಿತು, ವಿಶೇಷಣ ವಿಶೇಷ್ಯ ಸಂಬಂಧ ಮತ್ತು ಆಖ್ಯಾತ–ಆಖ್ಯೇಯ ಸಂಬಂಧ ಇತ್ಯಾದಿ ಬಗೆಬಗೆಯ ಸಿದ್ಧಾಂತಗಳನ್ನು ಕಾಣುವೆವು. ಆದರೆ ನಾವು ಜೀವನನ್ನು ದೇವರೂಪನೆಂದು ಬಗೆದರೂ ಅಷ್ಟೇ, ಇಲ್ಲವೆ ದೇವರ ಅಗಲಿಸಲಾಗದ ಗುಣವೆಂದು ಭಾವಿಸಿದರೂ ಅಷ್ಟೇ! ಅದರಿಂದ ಯಾವ ಬಗೆಯ ವ್ಯತ್ಯಾಸವೂ ಆಗಲರಿಯದು.

ಇದರ ಮುಂದಿನ ಪದವಾದ 'ನಾದವ ಕೇಳುತ' ಎಂಬುದು ಅನಾಹತನಾದವನ್ನು ವಿವರಿಸುವದು. ಇದೇ ಸಂದರ್ಭದಲ್ಲಿ ಆನುಷಂಗಿಕವಾಗಿ ನಾನೊಂದು ಮಾತನ್ನು ನಿಮಗೆ ಅರುಹಬಯಸುವೆ: ಈ ಅನಾಹತನಾದದ ಅನುಭವವೇ ಪರಮಾರ್ಥ ಪಥದಲ್ಲಿ ಮೊದಲು ನನ್ನಡಿಯನ್ನು ಇರಿಸಿತು. ಕ್ರಿ.ಶ. ೧೯೦೧ರಿಂದ ೧೯೦೯ರ ವರೆಗೆ ಎಂಟು ವರುಷ ನಾನು ಧ್ಯಾನಸಾಧನವನ್ನು ಕೆಲಕಾಲ ಮಾಡುತ್ತಿದ್ದೆ. ಆದರೆ ಅದರ ವಿಶೇಷ ಪರಿಣಾಮವೇನೂ ಆಗಿರಲಿಲ್ಲ. ಕ್ರಿ.ಶ. ೧೯೦೯ರಲ್ಲಿ ನಾನು ಗುರುತರ ಬೇನೆಯಿಂದ ಬಳಲಿದೆ; ಆಗ ನನ್ನ ಮನಸ್ಸು ಭಗವಂತನೆಡೆ ಹೊರಳಿತು. ನಿಜವಾಗಿ ಪಾರಮಾರ್ಥಿಕ 'ಬೀಜ'ವು ನನ್ನಲ್ಲಿ ಆ ಮೊದಲೆ, ಕ್ರಿ.ಶ. ೧೯೦೧ರಲ್ಲಿಯೆ ಬಿತ್ತಲ್ಪಟ್ಟಿತ್ತು; ಆದರೆ ಮೇಲ್ಕಾಣಿಸಿದ ಭೀಕರ ಬೇನೆಯ ಮೂಲಕ, ನಾನು ಜೀವಿತದ ಬಗೆಗೆ ತುಂಬ ಹತಾಶನಾಗಿ, ನಾನಿನ್ನು ಸತ್ತರೂ ಅಡ್ಡಿಯಿಲ್ಲ ಎಂದುಕೊಂಡಾಗ, ನಾನು ನನ್ನ ಲಕ್ಷ್ಯವನ್ನೆಲ್ಲ ಭಗವಂತನಲ್ಲಿ ಇರಿಸಿದೆ. ಈ ರೀತಿ, ನಾಲ್ಕು ತಿಂಗಳ ಅವಿಶ್ರಾಂತ ಸಾಧನದ ತರುವಾಯ, ನಾನು ಒಂದು ಬಗೆಯ ಅನುಭವವನ್ನು ಪಡೆದೆ. ಆ ಸಮಯಕ್ಕೆ ನಾನು ಪುಣೆಯಲ್ಲಿ

ವಾಸಿಸುತ್ತಿರುವ ಮನೆಯ ನೆರೆಯಲ್ಲಿಯ ಶಿವಾಲಯದಲ್ಲಿ ದಾಮಭಟ್ಟನೆಂಬ ಅರ್ಚಕನು ದಿನಾಲು ಗಂಟೆಯನ್ನು ಬಾರಿಸುತ್ತಿದ್ದನು. ಅಂಥ ಗಂಟೆಗಳು ಅಂದು ನನ್ನ ಕಿವಿಯಲ್ಲಿ ನಿನದಿಸತೊಡಗಿದವು. ಆಗ ಬಾರಿಸುತ್ತಿರುವುದು ದೇವಾಲಯ ದಲ್ಲಿಯ ಗಂಟೆಯೊ ಇಲ್ಲವೆ ಹೃದಯದಲ್ಲಿಯ ಗಂಟೆಯೊ ಎಂಬುದು ನನಗೆ ತಿಳಿಯಲಿಲ್ಲ. ಅಂದಿನ ವರೆಗೆ ಆ ಮಾದರಿಯ ಅನುಭವವನ್ನೇ ಅರಿತಿರಲಿಲ್ಲ; ಮತ್ತು ನಾನದನ್ನು ಯಾರಿಂದಲೂ ಕೇಳಿರಲಿಲ್ಲ. ಆದುದರಿಂದ ನಾನು ನಿಜವಾಗಿ ಅಸ್ವಸ್ಥನಾದರೆ. ಏನನ್ನು ಮಾಡಬೇಕು? ಯಾರನ್ನು ಕೇಳಬೇಕು? ಎಂಬುದು ನನಗೆ ತಿಳಿಯದಾಯಿತು. ಆಗ ಅಕಸ್ಮಾತ್ತಾಗಿ, ನನ್ನ ಸ್ನೇಹಿತರಾದ ದಿವಂಗತ ಶ್ರೀ ಎಸ್.ವ್ಹಿ. ಮ್ಹಸ್ಕರ ಎಂಬುವವರು ಮೈಸೂರಿನಲ್ಲಿ ಪ್ರಕಟವಾದ ಶಂಕರ ಗ್ರಂಥಾವಲಿಯ ಎರಡನೆಯ ಭಾಗದ ಒಂದು ಪ್ರತಿಯನ್ನು ನನ್ನೆಡೆ ಕಳುಹಿದರು. ಅದೊಂದು ಯದೃಚ್ಛೆಯಿಂದ ನಡೆದ ಸಂಗತಿ; ಮತ್ತು ನಾನು ಸಹಜವಾಗಿ ಅದರ ಪುಟವೊಂದನ್ನು ತೆರೆದಾಗ ಕೆಳಗಿನ ಶ್ಲೋಕವನ್ನು ಕಂಡೆನು:

> ನಾದಾನುಸಂಧಾನ ನಮೋಸ್ತು ತುಭ್ಯಮ್
> ತ್ವಾಂ ಸಾಧನಂ ತತ್ತ್ವಪದಸ್ಯ ಜಾನೇ॥
> ಭವತ್ಪ್ರಸಾದಾತ್ ಪವನೇನ ಸಾಕಂ
> ವಿಲೀಯತೇ ವಿಷ್ಣುಪದೇ ಮನೋ ಮೇ॥

"ಎಲೈ! ದಿವ್ಯನಾದವೇ! ನಿನಗೆನ್ನ ವಂದನೆಗಳು! ನೀನು ಪರತತ್ತ್ವವನ್ನು ಪಡೆಯುವ ಸಾಧನವೆಂಬುದನ್ನು ನಾನು ಬಲ್ಲೆ. ನಿನ್ನ ಪ್ರಸಾದದಿಂದ, ಪ್ರಾಣದಿಂದ ಕೂಡಿದ ನನ್ನ ಮನಸ್ಸು ಶ್ರೀ ಹರಿಯ ಅಡಿದಾವರೆಗಳಲ್ಲಿ ವಿಲೀನವಾಗುವುದು." ಶಂಕರಾಚಾರ್ಯರ ಯೋಗತಾರಾವಲಿಯಲ್ಲಿಯ ಮೇಲ್ಕಾಣಿಸಿದ ಶ್ಲೋಕದಲ್ಲಿಯ ಪರಿಹಾರವನ್ನು ಪಡೆದು, ನಾನು ತುಂಬ ಪ್ರೋತ್ಸಾಹಿತನಾದೆ. ಈ ಪದದೊಡನೆ ಇರುವ ನನ್ನ ಸಂಬಂಧವು ಈ ಬಗೆಯದಿರುವುದು.

ಈ ಕವನದ ಕರ್ತರಾದ ಚಿದಾನಂದರು ಹೇಳುವ ಮೊದಲನೆಯ ಮಾತು ಈ ಬಗೆದಿರುವುದು: ನಾವು ಈ ಬಗೆಯ ನಾದಗಳನ್ನು ಕೇಳಲು ಪ್ರಾರಂಭಿಸಿದಾಗ, ನಮ್ಮ ಮನಸ್ಸು, ಇಂದ್ರಿಯಗಳು ಹಾಗೂ ಎಲ್ಲ ಅವಗುಣಗಳೂ ಕೂಡ ಪೂರ್ತಿಯಾಗಿ ಅಳಿಯುವಂತೆ ಕಾಣುವವು. ನೀವು ಈ ಪಾರಮಾರ್ಥಿಕ ನಾದವನ್ನು ಕೇಳುತ್ತಿರುವಾಗ ನಿಮ್ಮ ಇಂದ್ರಿಯಗಳಾಗಲಿ ಅವುಗಳ ತೊಂದರೆಯಾಗಲಿ ಅದೆಂತು ಇರಬಲ್ಲವು? ಸೂರ್ಯನ ಬೆಳಕಿನಲ್ಲಿ ನೀವು ಕತ್ತಲೆಯನ್ನು ಕಾಣಬಲ್ಲಿರಾ? ದುಷ್ಕರ್ಮಗಳೆಡೆ ಇಲ್ಲವೆ ವೈಷಯಿಕ ಕರ್ಮಗಳೆಡೆ ನಿಮ್ಮನ್ನು ಸೆಳೆಯಲಿರುವ ನಿಮ್ಮ ಜ್ಞಾನೇಂದ್ರಿಯ ಗಳೆಲ್ಲ ಅಳಿದುಹೋಗುವವು. ಅದೇ ಮೇರೆಗೆ ನಿಮ್ಮ ದುರ್ಗುಣಗಳು ಕೂಡ ಮಾಯವಾಗುವವು. ಇದು ಅನಾಹತ-ನಾದ-ಶ್ರವಣದ ಮಾನಸಿಕ ಹಾಗೂ ನೈತಿಕ ಅಂಗದ ವಿಚಾರ.

ಚಿದಾನಂದರು ಇದರಲ್ಲಿ ಇನ್ನೊಂದು ಮಹತ್ವದ ಮಾತನ್ನು ಹೇಳಿರುವರು. ತೇಜನಾದಗಳಲ್ಲಿ ಏಕಕಾಲಿಕತೆಯು ನೆಲೆಸಿರುವುದು. ನೀವು ಮೊದಲು ತೇಜವನ್ನು ನೋಡಿ ತರುವಾಯ ಕೆಲಕಾಲದ ನಂತರ ನಾದವನ್ನು ಕೇಳುವುದಿಲ್ಲ. ಹಾಗಾಗುವುದಿಲ್ಲ. ಅವು ಸಮಕಾಲಿಕವಿರುವವು, ಏಕಕಾಲಿಕವಿರುವವು. ನಿಮ್ಮ ಮನಸ್ಸು ತುಂಬಿ ತುಳುಕುವುದು. ನೀವು ಕೇಳುತ್ತಿರುವಿರೋ ಇಲ್ಲವೆ ಕಾಣುತ್ತಿರುವಿರೋ ಎಂಬುದೇ ನಿಮಗೆ ತಿಳಿಯುವುದಿಲ್ಲ. ಆ ಬಗೆಯ ಸಮಕಾಲಿಕತೆಯನ್ನು ಚಿದಾನಂದರು ಕೆಳಗಿನಂತೆ ಅರುಹುವರು.

ನಾನಾ ವರ್ಣದ ಛಾಯವ ನೋಡುತ..............
ಭಾನುಕೋಟಿ ಪ್ರಕಾಶದ ಬೆಳಕಲಿ ನಾದವ ಕೇಳಿದೆನೋ!

ಇಲ್ಲಿ ಉಲ್ಲೇಖಿಸಲಾದ ನಾನಾ ವರ್ಣಗಳ ಸ್ವರೂಪವನ್ನು ಕಾಮನ ಬಿಲ್ಲಿನಲ್ಲಿಯ ಸಪ್ತವರ್ಣಗಳು ಬಣ್ಣಿಸಲರಿಯವು. ಪಾರಮಾರ್ಥಿಕ ಅನುಭವದಲ್ಲಿ ವಿವಿಧ ಬಣ್ಣಗಳು ಕಾಣಿಸುವವು. ಚಿದಾನಂದರು ಮತ್ತೂ ಹೇಳುವುದೇನೆಂದರೆ: 'ಕಾಣದ ರೂಪವು ಕಾಣುತಲೆ ನಾ ಕಾಮಿಸಿ ಮಲಗಿದೆನು, ಅತ್ಯಾನಂದದಲ್ಲಿ ಮೈ ಮರೆದೆನು' ಅದು ಕಾಣಲು ಬಾರದಂತಹದಿರುವುದರಿಂದ ಅದನ್ನು ಕಾಣುವುದು ಅಷ್ಟೊಂದು ಸುಲಭ ವಿರುವುದಿಲ್ಲ. ಆದರೂ ನಾನದನ್ನು ಕಂಡೆ ಮತ್ತು ಅತ್ಯಾನಂದದಲ್ಲಿ ನಿದ್ರೆಗೈದೆ–ಮೈಮರೆತೆ. ಈ ಬಗೆಯ ಆನಂದಪರವಶತೆಯ ನಿದ್ರೆಯನ್ನು ಬಣ್ಣಿಸುವ ಎರಡು ಬಲು ಮಹತ್ವದ ಅವತರಣಗಳಿರುವವು. ಒಂದು ಮರಾಠಿ ಸಂತಕವಿಗಳಾದ ನಾಮದೇವರ ಪದದಲ್ಲಿರುವುದು: ಅವರದರಲ್ಲಿ 'ಆಶಾ ನಾಹಿ ಪುರಲಿ' 'ನನ್ನ ಬಯಕೆಯು ಫಲಿಸಲಿಲ್ಲ.' ಈ ಪಾರಮಾರ್ಥಿಕ ನಿದ್ರೆಯನ್ನು ನಾನು ಹೆಚ್ಚು ಕಾಲ ಅನುಭವಿಸಿದಂತೆ, ಅದರ ಪೂರ್ಣತೆಯನ್ನು ಮುಟ್ಟುವ ನನ್ನ ಬಯಕೆಯು ಬೆಳೆಯುತ್ತಲೆ ಸಾಗುವುದು ಎಂದವರು ಹೇಳಿರುವರು. ಎರಡನೆಯದು ಓರ್ವ ಬಂಗಾಲಿ ಬರಹಗಾರನಿಂದ ಉದ್ಧರಿಸಲಾದ ಕೆಳಗಿನ ಸಂಸ್ಕೃತ ಶ್ಲೋಕದಲ್ಲಿರುವುದು.

ಭಕ್ತೇಃ ಫಲಂ ಪರಂ ಪ್ರೇಮ
ತೃಪ್ತ್ಯಭಾವ–ಸ್ವಭಾವಕಮ್।
ಅವಾಂತರ–ಫಲೇಷ್ವೇತತ್
ಅತಿ ಹ್ಯೈತತ್ ಸತಾಂ ಮತಮ್॥

ಭಗವಂತನಲ್ಲಿಯ ಪರಮ ಪ್ರೇಮವು ಭಕ್ತಿಯ ಫಲವು. ತೃಪ್ತಿಯ ಅಭಾವವು ಅದರ ಸ್ವಭಾವವು. ಸಂತರ ಅಭಿಮತದ ಮೇರೆಗೆ, ಇದು ಬೇರೆಲ್ಲ ಅಪ್ರಧಾನ ಫಲಗಳಿಗಿಂತ ತುಂಬ ಮೇಲ್ತರಗತಿಯದಿರುವುದು.' ಭಗವಂತನ ಅನುಭವಾನಂದವನ್ನು ನಾವು ಎಷ್ಟು ಆಳವಾಗಿಯೂ ಉತ್ಕಟವಾಗಿಯೂ ಸವಿದರೂ, ಅದರಿಂದ ನಾವು ಎಂದೂ ತೃಪ್ತರಾಗುವುದಿಲ್ಲ. ಇದನ್ನೆಯೆ ಚಿದಾನಂದರು ಅರುಹಿರುವರು.

ನಾವಿನ್ನು ಕೊನೆಯ ಪದದೆಡೆ ತೆರಳುವೆವು. ಇದು ಕೂಡ ನಿಂಬರಗಿ ಮಹಾರಾಜರವರ ಪದವು. 'ನೆಲ್ಲು ಕುಟ್ಟುಣು ಬಾರಮ್ಮಾ' ಎಂಬ ಈ ಪದವು ಬಲು ಅದ್ಭುತವಾದುದು. ಈ ಪದವನ್ನು ಕಂಡರೆ, ಮಹಾರಾಜರವರು ಎಂಥ ಹಿರಿಯ ಪಾರಮಾರ್ಥಿಕ ಅನುಭವಗಳನ್ನು ಪಡೆದಿದ್ದರು ಹಾಗೂ ಅವರ ಕಾವ್ಯಶಕ್ತಿಯು ಅದೆಂಥ ಶ್ರೇಷ್ಠ ತರಗತಿಯದಿದ್ದಿತು ಎಂಬುದು ನಿಮಗೆ ಗೊತ್ತಾಗಬಲ್ಲುದು. ನೆಲ್ಲಿನ ತವುಡನ್ನು ತೆಗೆಯುವುದರಿಂದ ಪ್ರಾರಂಭಿಸಿ, ಕೊನೆಗೆ ಅಕ್ಕಿಯ ಪಕ್ವಾನ್ನಗಳನ್ನು ಪಾರಮಾರ್ಥಿಕ ಪಾಯಸವನ್ನು ಸದ್ಗುರುಗಳ ಹಾಗೂ ಗುರುಬಂಧುಗಳ ಸಹವಾಸದಲ್ಲಿ ಸವಿಯುವ ವರೆಗಿನ ನಾವು ಮಾಡಬೇಕಾದ ಎಲ್ಲ ಪ್ರಕ್ರಿಯೆಗಳನ್ನು ಈ ಪದವು ಅರುಹುವದು. ಇದರಲ್ಲಿ ಒಂದು ಪಾಕಶಾಸ್ತ್ರೀಯ ಪರಂಪರಿತ ರೂಪಕವಿರುವುದು. ಅದರಲ್ಲಿ ಅಕ್ಕಿಯನ್ನು ಹಸನು ಮಾಡುವುದರಿಂದ ಪಾರಮಾರ್ಥಿಕ ಪಾಯಸದ ಸಿದ್ಧಿಯ ವರೆಗಿನ ಎಲ್ಲ ಸಂಗತಿಗಳು ಬಂದಿರುವವು. ಇದು ಈ ಕವನದ ತಿರುಳು. 'ಹನ್ನೆರಡು ಹದಿಮೂರು ನಲ್ಲೆಯರು ಕೂಡಿಕೊಂಡು' ನೆಲ್ಲನ್ನು ಕುಟ್ಟಬೇಕೆಂದು ಮಹಾರಾಜರವರು ಹೇಳಿರುವರು. ನಾವು ಸಂಘಿಕ ಅಥವಾ ಸಾಮೂಹಿಕ ಸಾಧನೆಯನ್ನು ಮಾಡಬೇಕು. ಒಬ್ಬನೆ ಮನುಜನು ಒನಿಕೆ-ಒರಳುಗಳೆರಡನ್ನೂ ಹಿಡಿಯಲರಿಯ. ಅದಕ್ಕೆ ಇಬ್ಬರು, ನಾಲ್ವರು, ಎಂಟು ಜನ ಬೇಕಾಗುವರು. ಸಾಧನಾ ಎಂಬ ಶಬ್ದವನ್ನು ಬಂಗಾಲಿ ಜನರು ಉಪಯೋಗಿಸುವರು. ನಾವು ಸಾಧನ ಎಂಬುದನ್ನೇ ಬಳಿಸುವುದು ಒಳಿತು. ಆದರೆ ರವೀಂದ್ರನಾಥ ಟಾಗೋರರವರು ಸಾಧನಾ ಎಂಬ ಶಬ್ದವನ್ನು ಬಲು ಪ್ರಸಿದ್ಧಿಗೆ ತಂದಿರುವರು. ಆ ರೂಪದಲ್ಲಿ ಅದನ್ನು ಬಳಸಲು ನನ್ನದೇನೂ ಆಕ್ಷೇಪವಿಲ್ಲ. ಈ ರೀತಿ, ಸಾಂಘಿಕ ಸಾಧನೆಯು ನಾವು ಕೈಕೊಳ್ಳಬೇಕಾದ ಮೊದಲನೆಯ ಮಾತು. ಆ ಮೇಲೆ ಶರೀರದಲ್ಲಿಯ ನಾಭಿಯು ಒಳ್ಳಿನಂತಿರುವುದು ಮತ್ತು ಪ್ರಾಣವು ಒನಕೆಯಂತಿರುವುದು. ನೀವು ನಿಮ್ಮ ಪ್ರಾಣವನ್ನು ನಾಭಿಯಿಂದ ಎತ್ತಿ ಮಿದುಳಿನ ತುದಿಯ ವರೆಗೆ ಒಯ್ಯಬೇಕು. ಇವು ಒಳ್ಳು ಒನಕೆಗಳಾದವು. ತರುವಾಯ ನಾಮಸ್ಮರಣವನ್ನು ಬೆಳಸಿ (ನಾಮ) ಧಾನ್ಯದ ರಾಶಿಯನ್ನೆ ಮಾಡಬೇಕಂದು ಮಹಾರಾಜರವರು ಬೋಧಿಸಿರುವರು. ಅದೇ ಕಾಲಕ್ಕೆ ಆ ಧಾನ್ಯದಲ್ಲಿ ಉಸುಬಿನ ಕಣಗಳನ್ನು ತೆಗೆದೊಗೆಯಬೇಕು. ಅವುಗಳ ಜತೆಯಲ್ಲಿ ತವುಡನ್ನು ಕೂಡ ಕಳೆಯಬೇಕು. ಸಾಮೂಹಿಕ ಸಾಧನದಿಂದ ಇದನ್ನು ಸಹಜವಾಗಿ ಮಾಡಬಹುದು. ಎರಡನೆಯದಾಗಿ ನೀವು ಅಡಿಗೆಗಾಗಿ ಒಲೆಯೊಂದನ್ನು ತಯಾರಿಸಬೇಕು. ವಾಸನಾ ತ್ರಯಗಳೇ ಆ ಒಲೆಯ ಗುಂಡುಗಳು. ಅದರ ಮೇಲೆ ಪ್ರಾರಬ್ಧದ ಗಡಿಗೆಯನ್ನಿರಿಸಿ, ಅದರ ಕೆಳಗೆ ಕಾಮಕ್ರೋಧಗಳ ಉರವಲವನ್ನು ಹಾಕಿರಿ. ಅವನ್ನು ಉರಿಸಿ

ಅಡಿಗೆಯನ್ನು ಪ್ರಾರಂಭಿಸಿರಿ. ಇನ್ನೊಂದು ಅವಶ್ಯವಾದ ವಿಷಯ. ಇದನ್ನು ಮಾಡುತ್ತಿರುವಾಗ ನೀವು ತುಂಬ ಎಚ್ಚರದಿಂದಿರಬೇಕು. 'ಒಳಹೊರಗೆ ನೋಡಬೇಕು' ಇದು ಬಲು ಮಹತ್ವದ ಮಾತು. ಆನುಷಂಗಿಕವಾಗಿ ನಾನೊಂದು ಮಾತನ್ನು ಹೇಳಬಹುದು. ನಾನಿನ್ನೂ ಎಂಟು-ಹತ್ತು ವರುಷದ ಬಾಲಕನಿರುವಾಗ, ನನ್ನ ತಾಯಿಯು ಒಲೆಯ ಒಳಗೊಮ್ಮೆ ಹೊರಗೊಮ್ಮೆ ನೋಡುತ್ತಿರುವುದನ್ನು ಕಂಡಿದ್ದೆ. ಆಗ ಅದರ ಅರ್ಥವು ನನಗೆ ತಿಳಿದಿರಲಿಲ್ಲ. ಈ ಪದದಲ್ಲಿಯ 'ಒಳಹೊರಗೆ' ನೋಡುವುದರ ಅರ್ಥವು ನಾವು ಭೌತಿಕ ಹಾಗೂ ಪಾರಮಾರ್ಥಿಕ ಈ ಉಭಯವಿಧ ಕಲ್ಯಾಣವನ್ನು ಲಕ್ಷಿಸಬೇಕು ಎಂಬುದಾಗಿರುವುದು. ನಿಂಬರಗಿ ಮಹಾರಾಜರವರು ಭೌತಿಕ ಪಾರಮಾರ್ಥಿಕ ಕಲ್ಯಾಣಗಳ ಸಂಯೋಗಕ್ಕೆ ಹೆಚ್ಚಿನ ಪ್ರಾಧ್ಯಾನ್ಯವನ್ನು ಕೊಟ್ಟಿರುವುದು ತುಂಬ ಅರ್ಥಪೂರ್ಣವಾಗಿರುವುದು. ಕೇವಲ ಪಾರಮಾರ್ಥಿಕ ವೈಭವವನ್ನೇ ಲಕ್ಷಿಸಬೇಡರಿ! ಇಲ್ಲವೆ ಬರಿ ಭೌತಿಕವೈಭವವನ್ನೇ ಪಡಯಲು ಯತ್ನಿಸಬೇಡಿರಿ! 'ನೀವು ಹಣಕ್ಕಾಗಿ ಬಂದಿರುವಿರಾ? ಇಲ್ಲವೆ ದಾರ್ಶನಿಕ ವಿವಾದದಲ್ಲಿಯ ಗೆಲುವಿಗಾಗಿ ಬಂದಿರುವಿರಾ?' ಎಂದು ಜನಕರಾಜನು ಯಾಜ್ಞವಲ್ಕ್ಯಮುನಿಗಳನ್ನು ಕೇಳಿದಾಗ 'ಉಭಯಮೇವ ಸಮ್ರಾಟ್' 'ನಾನು ಎರಡೂ ವಿಷಯಗಳಿಗಾಗಿ ಬಂದಿರುವೆ' ಎಂದು ಅವರು ಉತ್ತರಿಸಿದರಂತೆ. ಆ ಮೇರೆಗೆ ನಾವು ಭೌತಿಕ ಪಾರಮಾರ್ಥಿಕ ವೈಭವಗಳೆರಡನ್ನೂ ಹೊಂದಿಸಬೇಕು. ನಿಜವಾಗಿ, ಭಗವಂತನ ಧ್ಯಾನ ಮಾಡುವಾಗಲೇ ಉಪನ್ಯಾಸವನ್ನೂ ಅವಧಾನ ಪೂರ್ವಕ ಆಲಿಸುವುದು ಬಲು ಬಿಗಿಯಾದ ಕೆಲಸ. ಮನುಜನು ಪರೀಕ್ಷೆಯಲ್ಲಿ ಮೊದಲನೆಯ ತರಗತಿಯನ್ನು ಪಡೆದಾಗ, ಅವನು ತುಂಬ ಉಬ್ಬುವನು. ಅವನು ಐಶ್ವರ್ಯವಂತನಾಗತೊಡಗಿದಾಗ ಮತ್ತೂ ಹೆಚ್ಚಾಗಿ ಕೊಬ್ಬುವನು. ಅದೇ ಮೇರೆಗೆ ಈ ಪಾರಮಾರ್ಥಿಕ "ಅಕ್ಕಿ, ಸಕ್ಕರೆ ಹಾಗೂ ಹಾಲುಗಳ" ಮಿಶ್ರಣವು "ಕುದಿಯುವ ಸಮಯದಲ್ಲಿ ಮದದ ಉಕ್ಕು ಮೀರಿ ಬರುತಲದ". ಆಗ 'ಸಮತೆ'ಯ ಹುಟ್ಟಿನಿಂದ ಹೊಡೆದು ಆ ಉಕ್ಕನ್ನು ಕೆಳಗಿಳಿಸಬೇಕು. ಆ ಉಕ್ಕನ್ನು ಹೊರಚೆಲ್ಲಗೊಡಬಾರದು. ಈ ಬಗೆಯಾಗಿ ಮಾಡಿದರೆ, ಪರಮಾನ್ನ ಪಾಯಸವನ್ನು ಪೂರ್ತಿಯಾಗಿ ತಯಾರಿಸುವ ಭಾಗ್ಯವು ನಿಮಗೆ ಲಭಿಸಬಹುದು. ಆ ಮಧುರವಾದ ಪಾಯಸವನ್ನು ಸದ್ಗುರು ಗಳೊಡನೆಯೂ ಗುರುಬಂಧುಗಳೊಡನೆಯೂ ಅವರಿಂದ ಕೂಡಿಕೊಂಡು ಮನದಣಿ ಸವಿಯಬೇಕು. ಇದೇ ಪಾರಮಾರ್ಥಿಕ ಅನುಭವದ ಉಚ್ಚತಮ ನೆಲೆ ಎಂದು ಮಹಾರಾಜರವರು ಹೇಳಿರುವರು.

■■

ಪ್ರಕರಣ ಹದಿನೇಳು

ಸಮ್ಮಿಲಿತ ಪಾರಮಾರ್ಥಿಕ ಅನುಭವ

ಈ ಪ್ರಕರಣದಲ್ಲಿ ಸಮ್ಮಿಲಿತ ಅನುಭವವನ್ನು ವಿವರಿಸಲಾಗುವುದು. ಅದು ಅತೀಂದ್ರಿಯ ಅನುಭವಗಳ ಸಂಯೋಗವನ್ನು ಒಳಗೊಂಡಿರುವುದು. ನಾವು ಈ ವಿಷಯವನ್ನು ವಿವರಿಸುವ ಆರು ಪದಗಳನ್ನೂ ಒಂದು ವಚನವನ್ನೂ ಆಯ್ದಿರುವೆವು.

ಮೊದಲನೆಯ ಪದದಲ್ಲಿ ನಾಗಲಿಂಗರು ತಮ್ಮ ಅಂದವಾದ ಬಗೆಬಗೆಯ ಅನುಭವಗಳನ್ನು ಬಣ್ಣಿಸಿರುವರು. ಅವರು ಅದರಲ್ಲಿ ಜ್ಞಾನಾನಂದಗಳ ಘನಪ್ರತೀಕವಾದ ತಮ್ಮ ಕನಸನ್ನೂ, ಭಾನುವಿಲ್ಲದ ಬಿಸಿಲನ್ನೂ, ನೀಲಗನ್ನಡಿಯಲ್ಲಿ ಆಡುವ ಆತ್ಮರೀಪವನ್ನೂ ಬಣ್ಣಿಸಿರುವರು. ಅವರು ಉಕ್ಕಲಿರುವ ಅಮೃತದ ಕೊಡವನ್ನು ಉಲ್ಲೇಖಿಸಿ, ಆ ಅಮೃತಸೇವನೆಯಿಂದ ತಮ್ಮ ಜೀವನವು ಪೂರ್ಣ ಆನಂದಮಯವಾಯಿತೆಂದು ಅರುಹಿರುವರು. ಅವರು ತಮ್ಮ ಗುರುವಿನ ಪ್ರಸಾದದಿಂದ 'ಸ್ಥಿರಮುಕ್ತಿ'ಯನ್ನು ಪಡೆದುದನ್ನೂ ಹೇಳಿರುವರು.

ಎರಡನೆಯ ಪದದಲ್ಲಿ ಮಹಿಪತಿದಾಸರು ತೇಜ, ನಾದ, ಅಮೃತರಸಗಳ ಅನುಭವಗಳನ್ನು ಕೂಡಿಯೆ ಬಣ್ಣಿಸಿ, ಇವೆಲ್ಲ ಸಂತರ ಸಂಗದಲ್ಲಿ ಲಭಿಸುವವು ಎಂದು ಹೇಳಿರುವರು. ಅವರು ವಾಡಿಕೆಯ ಹತ್ತು ನಾದಗಳ ಬದಲು, ಹನ್ನೆರಡು ನಾದಗಳನ್ನು ಉಲ್ಲೇಖಿಸಿರುವರು ಮತ್ತು ಈ ಅಪ್ರತಿಮವಾದ ಎಲ್ಲ ಅನುಭಗಳು ಆಗಸವನ್ನು ತುಂಬಿಬಿಡುವವೆಂದು ಅರುಹಿರುವರು. ಇವನ್ನೆಲ್ಲ ಅವರು ಸದ್ಗುರುಗಳ ಕರುಣದಿಂದ ಪಡೆದರಂತೆ. ಮುಂದಿನ ಎರಡು ಪದಗಳಲ್ಲಿಯ ಮೊದಲನೆಯದರಲ್ಲಿ ಪುರಂದರದಾಸರು ಬ್ರಾಹ್ಮಣನ ವ್ಯಾಖ್ಯೆಯನ್ನು ಕೊಟ್ಟಿರುವರು. ಎರಡನೆಯದರಲ್ಲಿ ಶರಣಬಸವ ಹಾಗೂ ಬಂದೇನವಾಜರ ಸ್ನೇಹವು ಅರುಹಲಾಗಿರುವುದು. ಮೊದಲನೆಯ ಪದದಲ್ಲಿ, ಬ್ರಹ್ಮನನ್ನು ಸಾಕ್ಷಾತ್ಕರಿಸಿ ಕೊಂಡವನೇ ಬ್ರಾಹ್ಮಣ; ಅವನು ಜಗತ್ತಿನಲ್ಲಿ ದೇವರನ್ನುಳಿದು ಬೇರೇ ಏನನ್ನೂ ಪ್ರಿಯಕರವೆಂದು ಬಗೆಯುವುದಿಲ್ಲ. ಅವನು ಪ್ರತಿಯೊಂದು ಉಸಿರಿನೊಡನೆ ದೇವರನ್ನು ನೆನೆವನು; ಬೇರೆ ಬೇರೆ ಚಕ್ರಗಳ ಮುಖಾಂತರ ಸಹಸ್ರದಲ ಕಮಲವನ್ನು ಸೇರುವನು; ಮತ್ತು ಬಗೆಬಗೆಯ ಬೆಳಕುಗಳನ್ನು ಕಾಣುವನು, ನಾದಗಳನ್ನು ಕೇಳುವನು; ಮುತ್ತಿನ ಮಳೆ ಸುರಿಯುವಾಗಲೂ ಅವನದರಿಂದ ತೋಯಿಸಿ ಕೊಳ್ಳುವುದಿಲ್ಲ; ಯಾವ ಧ್ವನಿಯಿಂದ ಗೊಲ್ಲನು ನಾಗರ

ಹಾವನ್ನು ಮುಗ್ಧಗೊಳಿಸುವನೋ, ಆ ನಾಗಸ್ವರವನ್ನು ಅವನು ಕೇಳುವನು ಎಂದು ದಾಸರಾಯರು ಅರುಹುವರು. ಎರಡನೆಯದರಲ್ಲಿ, ಹುಸೇನ ಸಾಹೇಬರ ಬಳಿಗೆ ಹೋಗಿ ತಾವು ಹಸನಾಗಿ–ಪವಿತ್ರವಾಗಿ ಬಂದ ಬಗೆಯನ್ನು ಸಿದ್ಧೇಶ್ವರರು ಅರುಹುವರು. ಅಲ್ಲಿ ತಾವು ಸವಿ ಸವಿ ಪ್ರಸಾದವನ್ನು ಸೇವಿಸಿದುದನ್ನು ಬಣ್ಣಿಸುವರು. ಅವರು ಅದರಲ್ಲಿ ಬರಿದಾದ 'ಡೋಲಿ'ಯನ್ನೂ, ಸೂರ್ಯಚಂದ್ರರೂ ಕೂಡ ಇಲ್ಲದಾಗ ಬಾಳಿದ ಹಿರಿಯ ಪೀರನನ್ನೂ ಉಲ್ಲೇಖಿಸಿರುವರು. ಖತಾಲ ರಾತ್ರಿಯಲ್ಲಿ ಭೌತಿಕ ಜಗತ್ತನ್ನೆಲ್ಲ ಕಗ್ಗತ್ತಲೆಯು ಕವಿದಾಗ, ಅವರು ಸುತ್ತಲೆಲ್ಲ ಹೊಳೆಯುವ ಜ್ಯೋತಿಯನ್ನೂ, ಬಗೆಬಗೆಯ ಬಣ್ಣಗಳನ್ನೂ ಕಂಡರಂತೆ.

ಮೇಲಿನ ಪದಗಳಲ್ಲಿಯ ಸಮ್ಮಿಲಿತ ಅನುಭವಗಳನ್ನು ವಿವರಿಸುವ ಸಾಮಾನ್ಯ ಬಗೆಯನ್ನುಳಿದು, ಬಸವಣ್ಣನವರ ಒಂದು ಪ್ರಸಿದ್ಧ ವಚನವು, ಶರೀರದಲ್ಲಿಯ ಎಲ್ಲ ರೋಮರಂಧ್ರಗಳೂ ಭಗವಂತನ ದರ್ಶನಕ್ಕಾಗಿ ಕಂಗಳಾಗಿ ಪರಿಣಮಿಸಿದುದನ್ನು ಅರುಹುವದು. ಅದೇ ಮೇರೆಗೆ ಮನಸ್ಸು ಕೂಡ ಭಗವಂತನ ಅನುಭವ ಪಡೆಯಲು ತುಂಬ ಆತುರವಾದುದನ್ನು ಅದು ಹೇಳುವುದು. ಇದರ ಮುಂದಿನ ಪದದಲ್ಲಿ ಶಿವಲಿಂಗಪ್ಪನವರು ತಾವು ಕಂಡ ಸಂತರ ಸಭೆಯನ್ನು ಬಣ್ಣಿಸಿರುವರು. ಅದು ರಾಮದಾಸರ ದಾಸಬೋಧದಲ್ಲಿಯ ಸಂತಸಭೆಯ ಬಣ್ಣನೆಯನ್ನು ತುಂಬ ಹೋಲುವುದು. ಈ ಸಂತರ ಸಭೆಯು ತೇಜ, ನಾದ, ಬಣ್ಣಗಳಿಂದ ತುಂಬಿದ್ದಿತಂತೆ. ಕೊನೆಯ ಪದದಲ್ಲಿ ಸಂತಕವಿಗಳು ತಮ್ಮ ಮನಸ್ಸನ್ನು 'ಮೋಹನ ಮನಸೇ' ಎಂದು ಸಂಬೋಧಿಸಿ, ಅದನ್ನು ಪ್ರೀತಿಯಿಂದ ಬೋಧಿಸಿರುವರು. ಮೂಲ ಪರಮಾರ್ಥ ಪರಂಪರೆಗೆ ಸೇರಿದ ಬೀಜಮಂತ್ರವನ್ನು ಓದಿ ಅರಿಯಲು, ಅಮೃತರಸವನ್ನು ಗಟಗಟ ಕುಡಿಯಲು, ಉರಿಯುಂಟ ಕರ್ಪುರದಂತೆ ಹೊಳೆಯುವ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಹಾಗೂ ತನ್ನನ್ನು ತಾನು ನುಂಗಿ ತನ್ನ ಇರವನ್ನೆ ಅಳಿಸಲು, ಅವರು ತಮ್ಮ ಮನಸ್ಸನ್ನು ಬಿನ್ನವಿಸುವರು.

ಮೊದಲನೆಯ ಪದವಾದ 'ಆನಂದವಾದ ಚಿದ್ಘನ ವಸ್ತು ನಾ ಕಂಡೆ' ಎಂಬುದು ಧಾರವಾಡ ಜಿಲ್ಲೆಯಲ್ಲಿಯ ನವಲಗುಂದ ಗ್ರಾಮದ ನಾಗಲಿಂಗ ಶರಣರದು. ಕವಿ ನಾಗಲಿಂಗರು ಕಳೆದ ಶತಮಾನದ ಮಧ್ಯದಲ್ಲಿ ಬಾಳಿದರು. ನಾವು ನಾಗಲಿಂಗರ ಬೇರೊಂದು ಮಹತ್ವದ ಪದವಾದ 'ಯೋಗಿಗಳ ಲೀಲೆ ಪಥವಿದು' ಎಂಬುದನ್ನು ಬೇರೆಡೆ ವಿವರಿಸಿರುವೆವು. ನಾಗಲಿಂಗರು ಕೆಲ ಅತೀಂದ್ರಿಯ ಶಕ್ತಿಗಳನ್ನು ಪಡೆದಿದ್ದರೆಂದು ಹೇಳಲಾಗುತ್ತಿದೆ; ಮತ್ತು ಅದರ ಮೂಲಕ ಅವರು ಸೆರೆಮನೆಯಿಂದ ಅದೃಶ್ಯರಾಗಿ, ಅದರ ಬಾಗಲುಗಳೆಲ್ಲ ಮುಚ್ಚಿರುವಾಗಲೂ, ಅದರ ಹೊರಬದಿಯಲ್ಲಿ ಕಾಣಿಸಿಕೊಂಡರಂತೆ.

ಪ್ರಸ್ತುತ ಪದದಲ್ಲಿ, ಕವಿಯು ತಾನು ಪಡೆದ ಬಗೆಬಗೆಯ ಸಂಪನ್ನ ಅನುಭವಗಳನ್ನು ತುಂಬ ಕಣ್ಣಿಗೆ ಕಟ್ಟುವಂತೆ ಬಣ್ಣಿಸಿರುವನು. "ನಾನು ಭಗವಂತನ ರೂಪವನ್ನು ಕಂಡೆ; ಆನಂದವಾದ ಚಿದ್ಘನ ವಸ್ತು ಕಂಡೆ. ನಾನು ಭಾನುವಿಲ್ಲದ ಬಿಸಿಲನ್ನೂ ಕಂಡೆ. ನಾವು ಪೂರ್ತಿಯಾಗಿ ಮೈಮರೆತಾಗಲೇ ನಮ್ಮ ಆತ್ಮನನ್ನು ಕಾಣ ಬಲ್ಲೆವು, ಆತ್ಮಸಾಕ್ಷಾತ್ಕಾರವನ್ನು ಪಡೆಯಬಲ್ಲೆವು. ನಾವು ಮಾಡಿದ ಪುಣ್ಯ ಕರ್ಮವೇ ನಮಗೆ ನೆರವಾಗುವುದು" ಎಂದು ಕವಿಯು ಹೇಳುವನು. ಅವನು ಮುಂದೆ "ಒಂದು ಕುಂಡಲದಲ್ಲಿ ನೀಲಗನ್ನಡಿಯುಂಟು; ಆ ಕನ್ನಡಿಯಲ್ಲಿ ಒಂದು ಮಂಡಲ ವುಂಟು" ಎಂದು ಅರುಹಿ, "ಆ ಮಂಡಲದಲ್ಲಿ ಆಡುವುದು ಅದೇನಮ್ಮಾ?" ಎಂದು ಕೇಳುವನು. ಕವಿಯು ಮತ್ತೂ ಹೇಳುವದೇನೆಂದರೆ: "ಗುರುವಿನ ಪುಣ್ಯದಿ ಉನ್ಮನಿಯೊಳು ಸೇರಿ ನಾನು ಘನವಸ್ತುವನ್ನು ದೊರಕಿಸಿದೆ." ತರುವಾಯ ಅವನು ತನ್ನ ಕೆಲ ಅಪ್ರತಿಮ ಪಾರಮಾರ್ಥಿಕ ಅನುಭವಗಳನ್ನು ಬಣ್ಣಿಸಲು ಪ್ರಾರಂಭಿಸುವನು: "ನಾನು ನಡುನೀರಿನಲ್ಲಿ ಒಂದು ವಟವೃಕ್ಷವನ್ನು ಕಂಡೆ. ಅದಕ್ಕೆ ಹೂವಿರಲಿಲ್ಲ, ಆದರೆ ಕೋಮಲವಾದ ಕಿರಿಕಾಯಿಗಳೂ, ಪಕ್ವ ಹಣ್ಣುಗಳೂ ಇದ್ದವು. ಅವೆಲ್ಲ ರಸ ಭರಿತವಾಗಿದ್ದವು. ಅಖಂಡವಾದ ವನದಲ್ಲಿ ಒಂದು ಅಮೃತದ ಕೊಡವು ಉಕ್ಕು ತ್ತುದ್ದಿತು. ಅದನ್ನು ಮರಮರಳಿ ಉಂಡುಂಡು ನಾನು ಸುಖದಿಂದ-ಆನಂದದಿಂದ ಬಾಳಿದೆ. ನಾನು ಕಂಡುದು ಕೈಲಾಸವಲ್ಲ. ಅಲ್ಲಿ ಕನಕಭೂಷಣಗಳಿರಲಿಲ್ಲ. ಆದುದ ರಿಂದ ಅದು ವೈಕುಂಠವೂ .ಅಲ್ಲ, ಆದರೂ ಆ ಅನಂತ ಬಯಲಲ್ಲಿ ಅದಾರು ಸಲೀಲವಾಗಿ ಅಲೆಯುತ್ತಿರುವರು? ಬಯಲೊಳಗೆ ಆಡುವುದು ಅದೇನಮ್ಮ?" ಎಂದು ಕವಿಯು ಕೇಳುವನು. ಕೊನೆಗೆ, 'ನಾನು ನನ್ನ ಸದ್ಗುರುಗಳ ಪ್ರಸಾದದಿಂದಲೇ ಸ್ಥಿರಮುಕ್ತಿಯನ್ನು ಪಡೆದೆ' ಎಂದವರು ಒಪ್ಪಿಕೊಳ್ಳುವರು-ಅರುಹುವರು.

ಮುಂದಿನ ಪದವಾದ 'ಇಂಥಾದೆಲ್ಲಿದೆ ತಾ ನೋಡಿ ಸತ್ಸಂಗದ ಸುಖ?' ಎಂಬುದು ಮಹಿಪತಿಯವರದು. ಇದರಲ್ಲಿ ಸತ್ಸಂಗದಲ್ಲಿಯೆ ದೊರೆಯಬಹುದಾದ ಅನಾಹತನಾದದ ಹಾಗೂ ಅಮೃತರಸದ ಅನುಭವವು ಒಳ್ಳೆ ಅಂದವಾಗಿ ಬಣ್ಣಿಸ ಲಾಗಿರುವುದು. ಉಪನಿಷತ್ತುಗಳ ಕಾಲದಿಂದ ಇಂದಿನ ವರೆಗಿನ ಪಾರಮಾರ್ಥಿಕ ಸಾಹಿತ್ಯದಲ್ಲೆಲ್ಲ ದಶವಿಧ ನಾದಗಳನ್ನು ಅರುಹಲಾಗಿದೆ. ಆದರೆ ಮಹಿಪತಿಯವರು ದ್ವಾದಶನಾದಗಳನ್ನು ಉಲ್ಲೇಖಿಸಿರುವರು. 'ಸತ್ಸಂಗದಿಂದ ಲಭಿಸುವಂಥ ಹಿರಿಯ ಸುಖವನ್ನು ನೀವು ಬೇರೆ ಎಲ್ಲಿಯಾದರೂ ಪಡೆಯಬಲ್ಲಿರಾ? ದಯವಿಟ್ಟು ಅರಿಸಿ ನೋಡಿ!' ಎಂದು ಕವಿಗಳು ಕೇಳುವರು. ಅವರು ಮತ್ತೂ ಹೇಳುವುದೇನೆಂದರೆ, "ಒಂದೊಂದು ಪರಿಯಾಗಿ ಕೇಳಿಸುವ ಹನ್ನೊಂದು ಬಗೆಯ ಅಪ್ರತಿಮ ನಾದಗಳ ಮೇಲೆ, ಇನ್ನೊಂದು ಅದಕ್ಕೂ ಹೆಚ್ಚು ವಿಲಕ್ಷಣವಾದ ನಾದವು ಕೇಳಿಸುವುದು. ಭೇರಿಯ ನಾದದಂಥ ಈ ಧಿಮಿ ಧಿಮಿ ನಾದದೊಡನೆ ಇವೆಲ್ಲ ಇಡಿ ಆಗಸವನ್ನು ವ್ಯಾಪಿಸುವವು. ಭಕ್ತರ ಹೃದಯವನ್ನು ಪರಮಾನಂದಭರಿತಮಾಡುವವು. 'ಧಿಮಿ

ಗುಡುತಿದೆ ಆನಂದದ ಘೋಷ! ಉದಯಾಸ್ತಿಲ್ಲದ ಬೆಳಗಿನ ಉತ್ಕಟ ಪ್ರಭೆಯು ತುದಿಮೊದಲಿಲ್ಲದೆ, ಅಂತರಂಗ ಬಹಿರಂಗಗಳಲ್ಲಿ ಪೂರ್ಣ ತುಂಬಿರುವುದು. ಈಪರಮಾನಂದವು ಸದಮಲವಾದುದು, ಸದೈವ ತಪ್ಪದೆ ತುಂಬ ಸವಿಯಾದುದು. ಅದೆಂದೂ ಕಡಿಮೆಯಾಗದು; ಮತ್ತು ಅದನ್ನು ಆತ್ಮಜ್ಞಾನಿಗಳಾದ ಬುಧಜನರು ಅನುದಿನ ಸೇವಿಸುತ್ತಿರುವರು. ಈ ಅನುಭವವು ವಿವೇಕದ ಬಲದಿಂದಲೇ ಲಭಿಸು ವುದು. ಚಿದ್ಘನ. ಪರಮಾತ್ಮನು ಬಾಹ್ಯಾಂತರದಲ್ಲಿ ತೋರುವನು; ಮತ್ತು ಸ್ವಹಿತ ಸುಖದ ಸುಧಾರಸವನ್ನು ಕರೆವನು. ಇದೆಲ್ಲ ಮಹಿಪತಿಯ ಸದ್ಗುರುವಿನ ಕರುಣದ ಕೌತುಕವೇ ಸರಿ!" ಈ ಪದದ ಸಾಹಿತ್ಯಕ ಗುಣಗಳು ಅಪ್ರತಿಮವಾದವುಗಳು. ಅದರ ಲ್ಲಿಯ ಅಂದವಾದ ಶಬ್ದಸಮೂಹಗಳು, ಅನುಪ್ರಾಸಗಳು, ಪದವಿನ್ಯಾಸಗಳು, ಧ್ವನ್ಯನು ಕರಣ ಶಬ್ದರಚನೆಗಳು ಮತ್ತು ಸ್ವರಗತಿ ಸಂಗೀತಗಳು ಈ ಪದಕ್ಕೆ ಕನ್ನಡ ಪಾರಮಾ ರ್ಥಿಕ ಸಾಹಿತ್ಯದಲ್ಲಿಯ ಅತ್ಯುತ್ತಮ ಪದಗಳಲ್ಲಿ ಒಂದು ಸ್ಥಾನವನ್ನು ಸಲ್ಲಿಸಿರುವವು.

'ಬ್ರಾಹ್ಮಣನೆಂದರೆ ಬ್ರಹ್ಮನ ತಿಳಿದವ' ಎಂಬ ಪುರಂದರದಾಸರ ಮುಂದಿನ ಪದದಲ್ಲಿ ಮೊದಲು ಬ್ರಾಹ್ಮಣನ ಸಾಮಾನ್ಯ ವ್ಯಾಖ್ಯೆಯನ್ನು ಕೊಡಲಾಗಿದೆ. ತರುವಾಗ ಅವನ ದಾರ್ಶನಿಕ, ಯೋಗಿಕ, ಹಾಗೂ ಆನುಭಾವಿಕ ಲಕ್ಷಣಗಳನ್ನು ಚೆನ್ನಾಗಿ ವಿವರಿಸಲಾಗಿದೆ. ಸಾಮಾನ್ಯವಾಗಿ ಅರುಹಬೇಕಾದರೆ, ಯಾವನು ತನ್ನಲ್ಲಿಯೂ ಬ್ರಹ್ಮನಲ್ಲಿಯೂ ಸಹಜ ಸಂಬಂಧವನ್ನು ಅರುಹಬೇಕಾದರೆ, ಯಾವನು ತನ್ನಲ್ಲಿಯೂ ಬ್ರಹ್ಮನಲ್ಲಿಯೂ ಸಹಜ ಸಂಬಂಧವನ್ನು ನಿರ್ಮಿಸಬಲ್ಲನೋ, ಮತ್ತು ಯಾವನಿಗೆ ದೇವರ ರೂಪವನ್ನುಳಿದು ಬೇರಾವುದೂ ಪ್ರಿಯತರವಿರುವುದಿಲ್ಲವೋ, ಅವನೇ ಬ್ರಾಹ್ಮಣನು. ದಾರ್ಶನಿಕ ದೃಷ್ಟಿಯಿಂದ, ಬ್ರಹ್ಮನನ್ನು ಅರಿತವನು ಇಲ್ಲವೆ ಸಾಕ್ಷಾತ್ಕರಿಸಿಕೊಂಡವನು, ಮತ್ತು ಜಗತ್ತು ಬ್ರಹ್ಮನ ಭೇದವೆಂದು ಬಗೆದವನೇ ಬ್ರಾಹ್ಮಣನು. ಯೋಗಿಕ ದೃಷ್ಟಿಯಿಂದ ಮೂಗಿನಿಂದ ಸುದೀರ್ಘವಾಗಿ ಶ್ವಾಸೋಚ್ಛ್ವಾಸ ಮಾಡಿ, ಪ್ರತಿಯೊಂದು ಉಸಿರಿನೊಡನೆ ಭಗವಂತನನ್ನು ನೆನೆಯುವವನೇ ಬ್ರಾಹ್ಮಣನು. ಇದು ಮನಸ್ಸನ್ನು ಏಕಾಗ್ರಗೊಳಿಸುವ ಸುಲಭತಮ ಸಾಧನವು. ಈ ಬಗೆಯಾಗಿ ಭಗವಂತನ ನಾಮವನ್ನು ನೆನೆದು ಸಾಧಕನು ಆತನನ್ನು ಸಾಕ್ಷಾತ್ಕರಿಸಿ ಕೊಳ್ಳಬಲ್ಲನು. ಅದೇ ಮೇರೆಗೆ ಅವನು ಬೇಗನೆ ಆರೂ ಚಕ್ರಗಳನ್ನು ಏರಿ, ಹುಬ್ಬುಗಳ ಮಧ್ಯದಲ್ಲಿರುವ ದ್ವಿದಳ ಚಕ್ರದ ಸಿಂಹಾಸನದ ಮೇಲೆ ಕುಳಿತುಕೊಳ್ಳುವನು. ಹಾಗೂ ಸಹಸ್ರದಲ ಕಮಲದಲ್ಲಿ ಸೇರುವನು. ಇನ್ನು ಆನುಭಾವಿಕ ದೃಷ್ಟಿಯಿಂದ, ನಿಜವಾದ ಬ್ರಾಹ್ಮಣನು ಗೊಲ್ಲನಿಗೆ ನಾಗರಹಾವನ್ನು ಹಿಡಿಯಲು ನೆರವಾಗುವ ನಾಗಸ್ವರದ ಧ್ವನಿಯಂಥ ಅನಾಹತ ನಾದವನ್ನು ಕೇಳುವನು, ಹಾಗೂ ಚಂದ್ರಮಂಡದಲ್ಲಿಯ ಅಂದರೆ ಮಿದುಳಿನ ಕುಹರದಲ್ಲಿಯ ಅಮೃತರಸವನ್ನು ಸದೈವ ಸವಿಯುವನು. ಮುತ್ತಿನಂದದಿ ಮಳೆಹನಿ ಸುರಿಯುವಾಗ, ಅವನದರಿಂದ ಎಂದೂ

ತೋಯಿಸಿಕೊಳ್ಳುವುದಿಲ್ಲ. ಒಮ್ಮೆ ಉಮದಿಯ ಮಹಾರಾಜರವರು ಧ್ಯಾನಕ್ಕೆ ಕುಳಿತಿರುವಾಗ, ಒಂದು ಮಳೆಯ ದೊಡ್ಡ ಸರವು ಸುರಿಯತಂತೆ. ಆದರೆ ಅದರಲ್ಲಿಯ ಒಂದು ಹನಿಯೂ ಕೂಡ ಅವರನ್ನು ಸೋಂಕಲಿಲ್ಲವಂತೆ. ಅವರ ಆಸನದ ಕೆಳಭಾಗವು ಪೂರ್ತಿಯಾಗಿ ಒಣಗಿದ್ದು ಇದ್ದಿತಂತೆ ಇಲ್ಲಿ ಉಲ್ಲೇಖಿಸಲಾದ ವೃಷ್ಟಿಯು ಪಾರಮಾರ್ಥಿಕ ಮುತ್ತಿನದಿರುವುದು. ಅವು ಮಳೆಯ ಹನಿಗಳಂತೆ ದೊಡ್ಡವೂ, ಸ್ಫಟಿಕದಂತೆ ನಿರ್ಮಲವಾದುವೂ ಇರುವವು. ಇಲ್ಲಿ ಕವಿಯು ಉಪ ಮೇಯ-ಉಪಮಾನಗಳನ್ನು ಅದಲು ಬದಲು ಮಾಡಿರುವನು. ಅವನು ಮಳೆಯ ಹನಿಗಳು ಮುತ್ತಿನಂಥ ವಿರುವವು ಎಂದು ಹೇಳಿರುವನು; ನಿಜವಾಗಿ ಮುತ್ತುಗಳು ಮಳೆಯ ಹನಿಗಳಂತಿ ರುವವು ಎಂದು ಹೇಳಬೇಕಾಗಿತ್ತು. ಕವಿಯು ತನ್ನ ಹೇಳಿಕೆ ಯನ್ನು ಈ ರೀತಿ ಮುಂದುವರಿಸುವನು: "ಎತ್ತ ನೋಡಿದಡತ್ತ ಸೂಸುವ ಬೆಳದಿಂಗ ಳನ್ನು ಕಾಣುವವನೇ, ಥಳಿಸಳಿಸುವ ಬ್ರಹ್ಮರಂಧ್ರದಲ್ಲಿ ಸುಖದಿಂದ ಮಲಗುವವನೇ, ಹಾಗೂ ಸಾವಿರ ಸೂರ್ಯರ ಪ್ರಭೆಯನ್ನು ಮೀರುವಂಥ ಪ್ರಭೆಯುಳ್ಳ ಶಿಂಶುಮಾರ ಚಕ್ರದಲ್ಲಿ ಸೇರುವವನೇ ಬ್ರಾಹ್ಮಣನು" ಈ ಶಿಂಶುಮಾರ ಚಕ್ರದ ಖಗೋಲಶಾಸ್ತ್ರ ವಿಷಯಕ ಹಾಗೂ ಅನುಭಾವ ವಿಷಯಕ ವಿವರವಾದ ಹಾಗೂ ಸ್ವಾರಸ್ಯಮಯ ವಾದ ವೃತ್ತಾಂತವು ಭಾಗವತದಲ್ಲಿ ಕೊಡಲಾಗಿದೆ. ಕಲಿಯುಗದಲ್ಲಿ ಹರಿನಾಮಾ ಮೃತ ಉಂಡು, ಸುಲಭದಲ್ಲಿ ಪುರಂದರವಿಠ್ಠಲನನ್ನು ಸೇರುವನೇ, ಆತನಲ್ಲಿ ಬೆರೆಯುವವನೇ, ಬ್ರಾಹ್ಮಣನೆಂಬುದು ಕವಿಯ ಕೊನೆಯ ಹೇಳಿಕೆ.

ಮುಂದಣ ಪದವಾದ 'ಹುಸೇನ ಸಾಹೇಬರ ಬಳಿಯಲಿ ಹೋಗಿ' ಎಂಬುದು' ಸಿದ್ದೇಶ್ವರರ ಪದವು. ಈ ಸಿದ್ಧೇಶ್ವರ ಎಂಬುದು ಕಲಬುರ್ಗಿ ಶರಣಬಸವರ ಬೇರೊಂದು ಹೆಸರು ಇರಬಹುದು; ಅಥವಾ ಅವರು ಶರಣಬಸವರ ಸದ್ಗುರುಗಳೂ ಇರುವ ಸಂಭವವಿದೆ. ಈ ವಿಷಯವನ್ನು ಕರ್ನಾಟಕದ ಇತಿಹಾಸದ ವಿದ್ಯಾರ್ಥಿಗಳೇ ನಿರ್ಣಯಿಸಬೇಕು. ಕಲಬುರ್ಗಿಯಲ್ಲಿ ಶರಣಬಸವರ ಗುಡಿಯೂ ಹಾಗೂ ಬಂದೇ ನವಾಜರ ಮಸೀದೆಯೂ ಇರುವವು. ಅವೆರಡೂ ಹುಟಗಿ ಮದ್ರಾಸ ರೈಲುದಾರಿಯ ಎಡಮಗ್ಗುಲಿಗೆ ಇರುವವು. ಬಂದೇನವಾಜರ ಕಿರಿಬೆಟ್ಟವು ಶರಣಬಸವರ ಗುಡಿ ಯಿಂದ ಸುಮಾರು ಮೂರು ಮೈಲು ಅಂತರದಲ್ಲಿ ಇರುವುದು. ಈ ಶರಣಬಸವರ ಗುಡಿಯನ್ನು ಜನರು ಸಿದ್ಧೇಶ್ವರ ಗುಡಿಯೆಂದೂ ಕರೆಯುವರು. ನಿಜಾಮರು ಪ್ರತಿವರುಷ ಈ ಬಂದೇನವಾಜರ ಮಸೀದಿಗೆ ಬರಿಗಾಲಿನಿಂದ ನಡೆಯುತ್ತ ಯಾತ್ರೆಗಾಗಿ ಬರುತ್ತಿದ್ದರು. ಬಂದೇನವಾಜ ಬೆಟ್ಟದ ಮೇಲಿರುವ ಮಸೀದಿಗಳ ಸಮೂಹದಲ್ಲಿ ನವಕೋಟಿ ನಾರಾಯಣದೇವರ ಗುಡಿಯೊಂದು ಇರುವುದು. ಇದು ಹಿಂದೂ-ಮುಸ್ಲೀಮರ ಪಾರಮಾರ್ಥಿಕ ಆದರ್ಶಗಳ ಏಕತೆಯನ್ನು ಸೂಚಿಸುವುದು. ಸಿದ್ಧೇಶ್ವರ ಬಂದೇನವಾಜರು ಸ್ನೇಹಿತರಿದ್ದರು. ಇದು ಕೂಡ ಮೇಲ್ಕಾಣಿಸಿದ

ಏಕತೆಯ ನಿದರ್ಶನವೇ ಸರಿ. ಉಮದಿ ಮಹಾರಾಜರವರ ಪ್ರಗತ ಶಿಷ್ಯರಾದ ಚಡಚಣದ ಶೆಟ್ಯಪ್ಪನವರು, ಮಹಾರಾಜರವರು ಹೇಳಿದಾಗ ಈ ಪದವನ್ನು ಹಾಡುತ್ತಿದ್ದರು. ಅವರು 'ಸವಿ ಸವಿ ಪ್ರಸಾದ ಉಂಡೇವು' ಎಂಬ ಸಾಲನ್ನು ವಿಶೇಷ ಪ್ರೀತಿಯಿಂದ ಮರಮರಳಿ ಅನ್ನುತ್ತಿದ್ದರು.

ಹಸನ–ಹುಸೇನರು ಬಂಧುಗಳು, ಮಹಮ್ಮದ ಪೈಗಂಬರರ ಅಣ್ಣನ ಮಕ್ಕಳು. ಅಲ್ಲೀ ಎಂಬವನು ಪೈಗಂಬರರ ಕಕ್ಕನ ಮಗನು. ಈ ಪದದ ಮೊದಲನೆಯ ಸಾಲಿನಲ್ಲಿ 'ಹಸನ' ಶಬ್ದವನ್ನು ಕುರಿತು ಶ್ಲೇಷ ಮಾಡಲಾಗಿರುವುದು. "ನಾವು ಹುಸೇನಸಾಹೇಬರಲ್ಲಿಗೆ ಹೋಗಿ, ಹಸನಾಗಿ–ಪರಿಶುದ್ಧರಾಗಿ ಬಂದೆವು." :ಮಸೂತಿ ಯೊಳಗಿನ ಮೂಲವನ್ನು, ರಹಸ್ಯವನ್ನು ಅರಿತು, ದೀನದಯಾಳನಾದ ಭಗವಂತ ನನ್ನು ಪ್ರಾರ್ಥಿಸಿದೆವು, ನೆನೆದೆವು. ತುಂಡು ದಟ್ಟಿಯನ್ನು ಧರಿಸಿ, ನಾವದನ್ನು ಲಾಡಿಯಿಂದ ಬಿಗಿಯಾಗಿ ಕಟ್ಟಿದೇವು; ಮತ್ತು ಐದು ಮಂದಿ ಖಲೀಫರ ಪ್ರತೀಕವಾದ ಓಡ್ಯಾಡುವ ಪಂಜೆಯನ್ನು ಗಟ್ಟಿಯಾಗಿ ಹಿಡಿದೆವು. ಸೂರ್ಯಚಂದ್ರರೂ ಇಲ್ಲದಾಗ ಇರುವಂಥ ವೀರನನ್ನು ಕಂಡೆವು." ಎಂದು ಕವಿಯು ಹೇಳುವನು.

ಉಮದಿಯ ಮಹಾರಾಜರವರು ಈ ಪೀರರ ಗುರುಗಳ ಅಮರ ಸ್ವರೂಪವನ್ನು ಆಗಾಗ ಉಲ್ಲೇಖಿಸುತ್ತಿದ್ದರು. ಆಗವರು 'ಜೋ ಪೀರ ಮೇರಾ ಬಡಾ ಅವಲಿಯಾ!' ಎಂಬ ಇನ್ನೊಂದು ಪದವನ್ನು ಹೇಳಿಸುತ್ತಿದ್ದರು. ಮಹಾರಾಜರವರು ಸಮಾಧಿಸ್ಥರಾದ ಮೇಲೆ, ಅವರ ದಿನಚರಿಯಲ್ಲಿ ಈ ಪದವು ದೊರೆಯಿತು. ಅದರಲ್ಲಿ ಮುಂದಿನ ಆರು ವಿಚಾರಣೀಯ ಅಂಶಗಳಿರುವವು: (೧) ಭಗವಂತನು ನನಗೊಂದು ಕುರುಹನ್ನು–ಚಿಹ್ನೆಯನ್ನು ಕೊಟ್ಟಿರುವನು. ಅದರ ನೆರವಿನಿಂದ ನನ್ನ ಪಾರಮಾರ್ಥಿಕ ಗುರಿಯನ್ನು ಮುಟ್ಟಬಲ್ಲವನಾದೆ ಎಂದು ಕವಿಯು ಹೇಳುವನು. ಇದರಲ್ಲಿ ಬಂದ 'ನಿಶಾನ' ಅಂದರೆ ಬಾವುಟ. ಕನ್ನಡದಲ್ಲಿಯ 'ಕುರುಹು' ಎಂಬುದು ಇದೇ ಅರ್ಥವನ್ನು ಸೂಚಿಸುವುದು. ಈ 'ಕುರುಹು' ಜೀವನದ ಕಷ್ಟನಿಷ್ಠುರ ತೆಗಳೊಳಗಿಂದ ಸಾಧಕನನ್ನು ಸುರಕ್ಷಿತವಾಗಿ ಅವನ ಗುರಿಯೆಡೆ ಒಯ್ಯುವದು. ಇದಾಯಿತು ಮೊದಲನೆಯ ಅಂಶ. (೨) ಎರಡನೆಯದಾಗಿ, ಅನುಭಾವಿಯು ಅನುಭವಿಸುವ ರೂಪ, ತೇಜ, ನಾದ, ಬಣ್ಣಗಳು, ಆತನ ಹೃದಯದ ಗುಣಗಳಿಗೆ ಸಂಬಂಧಿಸಿದ ಕೇವಲ ಬಾಹ್ಯ ಅಂಗಗಳಿರುವವು. ಯಾವುದೇ ಇಂದ್ರಿಯದ ಮುಖಾಂತರ ಅನುಭಾವಿಯು ಪಡೆಯುವ ಅನುಭವವು ಅವನ ಸ್ವಂತ ಪಾರಮಾರ್ಥಿಕ ಹದದ ಹಾಗೂ ಪಾತ್ರತೆಯ ಬೆಳವಣಿಗೆಗೆ ಪೂರ್ತಿಯಾಗಿ ಅನುರೂಪವಾದುದು ಇರುವುದು. ಅವನ ಪಾರಮಾರ್ಥಿಕ ನೆಲೆಯನ್ನು ಅವನು ಕಾಣಬಲ್ಲ 'ವಸ್ತು'ವಿನಿಂದ ಅಳೆಯಬಹುದು. ಪಾರಮಾರ್ಥಿಕ ಅನುಭವವೂ,

ಅಂತಃಕರಣದ ಗುಣವೂ ಒಂದಕ್ಕೊಂದು ಅನುಗುಣವಾದ ವುಗಳಿರುವವು. (೩) ಮೂರನೆಯದಾಗಿ, ಕವಿಯು ಕೆಂಪು, ಕರಿ, ನೀಲಿ ಹಾಗೂ ಬಿಳಿ ಎಂಬ ನಾಲ್ಕು ಬಣ್ಣಗಳನ್ನು ಉಲ್ಲೇಖಿಸಿರುವನು. ಅವು ರಜ, ತಮ, ಸತ್ವ ಗುಣಗಳಿಗೂ, ಅವನ್ನು ಮೀರುವ ನಿಸ್ತ್ರೈಗುಣ್ಯ ಅವಸ್ಥೆಗೂ ಸಮಾನವಾದವುಗಳು. ಅವು ಸ್ವಪ್ನ, ಸುಷುಪ್ತಿ, ಜಾಗೃತಿ ಹಾಗೂ ತುರೀಯ ಎಂಬ ಚೇತನದ ನಾಲ್ಕು ಅವಸ್ಥೆಗಳನ್ನು ಹೋಲುವವು. ಕೆಮಪು ಬಣ್ಣವು ರಾಗದ ಪ್ರತೀಕವೆಂದೂ, ಕರಿಯ ಬಣ್ಣವು ದುರ್ಗುಣ ಸೂಚಕವೆಂದೂ, ಬಿಳಿಯ ಬಣ್ಣವು ಪಾವಿತ್ರ್ಯಸೂಚಕವೆಂದೂ, ನೀಲಿ ಬಣ್ಣವು ಜಾಣ್ಮೆಯ ಸೂಚಕವೆಂದೂ, ಅರಸಿನ ಬಣ್ಣವು ಭಕ್ತಿಯ ಸೂಚಕವೆಂದೂ ಹಾಗೂ ಹಸಿರು ಬಣ್ಣವು ಮತ್ಸರ ಸೂಚಕವೆಂದೂ ಬ್ರಹ್ಮವಿದ್ಯಾವಾದಿಗಳು (Theosophists) ಅರುಹುವರು. ಈ ಬಗೆಯಾಗಿ ಅನುಭಾವಿಯು ಕಾಣುವ ಬಣ್ಣಗಳು ಅವನ ಆಂತರಿಕ ಭಾವವನ್ನು ಹೋಲುವವು. (೪) ನಾಲ್ಕನೆಯದಾಗಿ, ಉನ್ಮನೀ ಅವಸ್ಥೆಯಲ್ಲಿ ತಾನು ಪ್ರಭುವನ್ನು ಎಚ್ಚರಿಸಿದುದನ್ನು ಕವಿಯು ಅರುಹುವನು. ನಿಜವಾಗಿ ಭಗವಂತನನ್ನು ಎಚ್ಚರಿಸುವ ಅಗತ್ಯವೇ ಇಲ್ಲ. ಅವನು ಸದೈವ ಎಚ್ಚರುಳ್ಳವನೇ ಇರುವನು. ಮಾನವನಲ್ಲಿಯ ಭಗವಂತನ ಇರವಿನ ಅರಿವು ಜಾಗ್ರತವಾಗಬೇಕು. ಆದುದರಿಂದ ಭಗವಂತನನ್ನು ಎಚ್ಚರಿಸಲು ಹಾಡಲಾದ ಪ್ರಭಾವ ಗೀತಗಳಿಗೆ–ಕಾಕಡಾರತಿಗಳಿಗೆ–ಎಡೆಯೆ ಇರುವುದಿಲ್ಲ. ದಕ್ಷಿಣಭಾರತದ ಓರ್ವ ಪ್ರಸಿದ್ಧ ಸಂತರು, 'ಕಾಕಡಾರತಿ'ಯ ಅರ್ಥವನ್ನು ಕೆಳಗಿನಂತೆ ಅರುಹುತ್ತಿದ್ದರು: ಕಾಕವನ್ನು, ಅಂದರೆ ಹಾಳು ನಿದ್ರೆಯನ್ನು ನಮ್ಮ ಕಂಗಳಿಂದ ಹೊರದೂಡಿ, ಭಗವಂತನನ್ನು ಕಾಣಲು ನಮ್ಮನ್ನು ಎಚ್ಚರಿಸುವ ಪದವೇ ಕಾಕಡಾರತಿ. (೫) ಐದನೆಯದಾಗಿ, ಕವಿಯು ಹಿಂದಿ ಸಂತರಾದ ಚರಣದಾಸರಂತೆ, ಪಾರಮಾರ್ಥಿಕ ಸ್ನಾನವನ್ನು ಬಣ್ಣಿಸುವನು. ಇದರ ಫಲವಾಗಿ, ಸೇವ್ಯ–ಸೇವಕ, ಹಾಗೂ ದೇವ–ಜೀವ ಎಂಬ ಭೇದವು ಅಳಿಯುವುದು. ಎರಡು ನಾಮಗಳು ಒಂದಾಗುವವು, ಜನನ ಮರಣ ಚಕ್ರವು ನಿಂತುಬಿಡುವುದು.

> ಆನಂದ ನಹಾಯಾ ಬಂದಾಖಿದಾ । ದೋನೋ ಬಿಸರಗಯಾ ।
> ಬೇ ನಾಮಕಾ ನಾಮ ಹೋಕರ । ರಹಟಾನಾ ರಹಾ ॥

(೬) ಕೊನೆಯದಾಗಿ, ಅಮೃತರಸವನ್ನು ಕುಡಿದುದರ ಫಲವಾಗಿ, ಅನುಭಾವಿಯು ಆ ಅವಸ್ಥೆಯಲ್ಲಿ 'ವಹೀದ' ಅಂದರೆ ದೇವರೂಪಿಯಾದ ಪರತತ್ವವನ್ನು ಸೇರಬಲ್ಲವನಾಗುವನು. 'ಪ್ಯಾರೇ ಲೇವೇ ಜಾನೇ । ವಹಿತ ಜಾನಾ ಪಾ।' ಈ ವರೆಗಿನ ಅಪ್ರಸ್ತುತ ಪ್ರಸ್ತಾಪವು ಮುಖ್ಯವಾಗಿ, ಪ್ರಸ್ತುತ ಪದದಲ್ಲಿಯ 'ಪೀರ' ಎಂಬ ಶಬ್ದದ ಯಥಾರ್ಥ ಅರ್ಥವನ್ನು ವಿವರಿಸಲು ಮಾಡಲಾಗಿರುವುದು.

ಇನ್ನು ಮೇಲ್ಕಾಣಿಸಿದ 'ಹುಸೇನ ಸಾಹೇಬರ ಬಳಿಗೆ' ಎಂಬ ಪದದಲ್ಲಿ ಕವಿಯು ಮತ್ತೆ ಹೇಳುವದೇನೆಂದರೆ: "ನಾವು ಎತ್ತರವಾದ ಪಾರಮಾರ್ಥಿಕ ಚೌಕಿಗಳನ್ನು ನೋಡಿದೆವು. ಅವುಗಳ ನಾಲ್ಕೂ ಬದಿಗಳು-ಹಸಿರು, ಹಳದಿ, ಬಿಳಿದು, ಕೆಂಪು- ಈ ನಾಲ್ಕು ಬಣ್ಣಗಳಿಂದ ಅಲಂಕೃತವಾಗಿದ್ದವು. ನಮ್ಮ ಮುಸ್ಲೀಮ ಸ್ನೇಹಿತರ ಸಂಗದಲ್ಲಿ ನಾವು ಪಾರಮಾರ್ಥಿಕ ಫಕೀರರಾಗಿ, 'ಸವಿ ಸವಿ ಪ್ರಸಾದ ಉಂಡೆವು'. ಖತಾಲ ರಾತ್ರಿಯ ಕತ್ತಲಲ್ಲಿ, ಸುತ್ತಲೆಲ್ಲ ನಾವು ಪಾರಮಾರ್ಥಿಕ ಜ್ಯೋತಿಯನ್ನು ಕಂಡೆವು, ಮತ್ತು ಭೇರಿಯ ಹಾಗೂ ಬೇರೆ ವಾದ್ಯಗಳ ಮಧುರರವವನ್ನು ಕೇಳಿ ನಾವು ಮೈಮರೆತೆವು. ಕೊನೆಗೆ, ನಾವು ಬರಿದಾದ (ಖಾಲಿ) ಡೋಲಿಗಳನ್ನು ಮುರಿದು ಅದರಲ್ಲಿಯ ಮೂಲವನ್ನು-ರಹಸ್ಯವನ್ನು ತಿಳಿದುಕೊಂಡೆವು. ನಾವು ಕಲಬುರ್ಗಿಯ ಸಿದ್ಧೇಶ್ವರರ ಬಾಲಕರಿದ್ದ ಮೂಲಕ, ಅವರ ಕೃಪಾಪ್ರಸಾದವನ್ನು ಪಡೆಯುವ ಭಾಗ್ಯವು ನಮಗೆ ಲಭಿಸಿತು' ಎಂದು ಕವಿಯು ಹೇಳುವನು.

ಈ ವರೆಗೆ ಕನ್ನಡ ಸಂತರ ಪದಗಳಲ್ಲಿಯ ಸಮ್ಮಿಲಿತ ಅನುಭವಗಳನ್ನು ಅರಿತ ಬಳಿಕ, ನಾವಿನ್ನು ಬಸವಣ್ಣನವರ 'ನಿಮ್ಮ ನೋಟ ಅನಂತ ಸುಖ' ಎಂಬ ವಚನದಲ್ಲಿ ಬಣ್ಣಿಸಲಾದ ವಿಲಕ್ಷಣವಾದ, ಅದ್ವಿತೀಯವಾದ ಅನುಭವವೊಂದನ್ನು ಅರುಹಬಯಸುವೆವು. ಅವರದರಲ್ಲಿ ಈ ರೀತಿ ಹೇಳಿರುವರು: 'ನಾನು ನಿಮ್ಮನ್ನು ಕಂಡು, ಅನಂತವಾದ ಸುಖವನ್ನು ಅನುಭವಿಸುವೆ. ನಿಮ್ಮ ನೋಟವೇ ಸುಖದ ಊಟೆ. ನಿಮ್ಮ ಕೂಟವು ಪರಮಸುಖವಯ್ಯ! ನಿಮ್ಮ ಕೂಟದಿಂದ ನಾನು ಪಡೆಯುವ ಸುಖವು ಅಮರ್ಯಾದಿತವಾದುದು. ನಿಮ್ಮ ಸಂತತವಾದ ದರ್ಶನವು ನನ್ನಂತರಂಗದಲ್ಲಿ ನಿಮ್ಮ ಬಗೆಗೆ ಹುಟ್ಟಿಸಿದ ಪ್ರೀತಿಯು ಹೇಳಲಳವಲ್ಲ. ನನ್ನ ಇಡೀ ಇರವೇ ನಿಮ್ಮನ್ನು ಅನುಭವಿಸಲು ಹಾತೊರೆಯುವುದು. ನನ್ನ ರೋಮರಂಧ್ರಗಳೆಲ್ಲ ಕಂಗಳಾಗಿ ನಿಮ್ಮನ್ನು ನೋಡುತ್ತಿರುವವು. ನಿಮ್ಮನ್ನು ನೋಡಿ ನೋಡಿ ನನ್ನಲ್ಲಿ ಅತ್ಯುತ್ಕಟವಾದ ಭಕ್ತಿಯು ಜನಿಸಿರುವುದು; ಮತ್ತು ನನ್ನ ಇಂದ್ರಿಯಗಳೆಲ್ಲ ನಿಮ್ಮನ್ನು ಪಡೆಯಬಯಸುವವಯ್ಯ! ಕೂಡಲಸಂಗಮದೇವಾ!'

ಈ ವಚನದಲ್ಲಿಯ ಕಲ್ಪನೆಯನ್ನೆ ಭೀಮಕವಿಯು ತನ್ನ ಬಸವಪುರಾಣದಲ್ಲಿ ವಿಸ್ತರಿಸಿರುವನು. ಅದರಲ್ಲಿ 'ಘಂಟಾಕರ್ಣ'ನೆಂಬ ಶರಣನ ವೃತ್ತಾಂತವು ಬಂದಿರುವುದು. ಮೇಲಿನ ವಚನದಲ್ಲಿಯ ಅನಂತ ಕಂಗಳಿಗೆ ಸದೃಶ್ಯವಾಗಿ, ಅವನು ಅನಂದ ಕವಿಗಳನ್ನು ಪಡೆದಿದ್ದನೆಂದು ಅದರಲ್ಲಿ ಹೇಳಲಾಗಿದೆ. ಅವನ ಆ ಕಿವಿಗಳು ಅಸಂಖ್ಯ ಗಂಟೆಗಳ ಅನಾಹತನಾದವನ್ನು ಕೇಳುತ್ತಿದ್ದವಂತೆ. ಆ ಎಲ್ಲ ಗಂಟೆಗಳ ನಾದವು ಅತ್ಯಂತ ಮಧುರವಾದುದೂ, ಅತ್ಯಂತ ಪರವಶಗೊಳಿಸುವಂತಹದೂ ಇದ್ದಿತಂತೆ, ಅವನ ಮಿದುಳಿನ ಪ್ರತಿಯೊಂದು ಕೋಶವು ನಾದದ ಹಲಗೆಯಾಗಿ, ಅನಂತ

ನಾದಗಳನ್ನು ಹುಟ್ಟಿಸುತ್ತಿದ್ದಿತಂತೆ. 'ಘಂಟಾಕರ್ಣ' ಎಂಬ ಹೆಸರಿನ ಬದಲಾಗಿ, ಘಂಟಾಕರಣ ಎಂಬ ಹೆಸರು ಹೆಚ್ಚು ಯೋಗ್ಯವಾಗಬಹುದು. ಯಾಕಂದರೆ, ಆಗ ಎಲ್ಲ ಇಂದ್ರಿಯಗಳು (ಕರಣಗಳು) ಬಾರಿಸುವ ಗಂಟೆಗಳಾಗ ಬಹುದು. ಇವನ್ನು ಹೋಲುವಂಥ ಅನುಭವಗಳನ್ನು ಹಿಂದೀ ಪದಗಳಲ್ಲಿಯೂ ಉಲ್ಲೇಖಿಸಲಾಗಿದೆ. "ಪ್ರತಿಯೊಂದು ಕೂದಲು ದೀಪವಾಗಿ ಭಗವಂತನನ್ನು ಬೆಳಗಿತು. ರೋಮರೋಮ ದೀಪಕ ಭಯಾ। ಪ್ರಗಟೇ ದೀನದಯಾಳ॥ ಪ್ರತಿಯೊಂದು ಕೂದಲಿನಿಂದ ಅನಾಹತನಾದವು ಹುಟ್ಟುತ್ತಿದೆ ಮತ್ತು ಅದು ಭಗವಂತನ ನಾಮವನ್ನು ಹಾಡುತ್ತಿದೆ: ರೋಮ ರೋಮ ಸುರ ಉನತಹೈ । ಬಾಜತ ನಾಮ ತಿಹಾರ॥ ಅದೇ ಮೇರೆಗೆ ಪ್ರತಿಯೊಂದು ಕೂದಲಿನಿಂದ ಬಣ್ಣಗಳು ಉದುರುತ್ತಿವೆ. ಅವುಗಳಿಂದ ಪರಮಾನಂದವು ಹೊರಚೆಲ್ಲುತ್ತಿದೆ: ರೋಮ ರೋಮ ರಂಗ ಸಾರವೇ। ರೋಮ ರೋಮ ಆನಂದ ಉಪಜಕರಿ॥ ಇದು ಹಿಂದೀ ಸಂತರು ಬಣ್ಣಿಸಿದ ಇಂಥ ಅನುಭವಗಳ ಸ್ವರೂಪವು. ಬಸವಣ್ಣನವರ ವಚನದಲ್ಲಿ ದೀಪಗಳ, ನಾದಗಳ, ಬಣ್ಣಗಳ ಬದಲಾಗಿ ಕಂಗಳು ಬಂದಿರುವವು. ಇದು ತುಳಸೀದಾಸರು ಬಣ್ಣಿಸಿದ ಇಂದ್ರನ ಸಾವಿರ ಕಂಗಳನ್ನು ಪೂರ್ತಿಯಾಗಿ ಹೋಲುವುದು. ಇಂಥ ಸಾಸಿರ ಕಂಗಳು ಭಗವಂತನನ್ನು ಏಕಕಾಲಕ್ಕೆ ಕಾಣುತ್ತಿರುವು ದರಿಂದ, ಗೌತುಮನ ಶಾಪವು ಅಂತಿಮವಾಗಿ ಇಂದ್ರನಿಗೆ ವರವಾಗಿಯೆ ಪರಿಣಮಿಸಿತು.

'ಸೈ ಸೈ ಸೈ ಕುಂತಿದೆನೇ' ಎಂಬ ಮುಂದಿನ ಪದವು ಶ್ರೀರಾಮದಾಸರ 'ದಾಸಬೋಧ'ದಲ್ಲಿಯ 'ಸಂತಸಭಾದರ್ಶನ' ಎಂಬ ಸಮಾದಲ್ಲಿಯ (ದಾ. ೧-೯) ಬಣ್ಣನೆಯನ್ನು ಅನುಕರಿಸಿ ಬರೆಯಲಾಗಿದೆ. 'ದಾಸಬೋಧ'ದಲ್ಲಿ ಸಂತಸಭೆಯ ಅತಿ ಉಜ್ವಲವಾದ ಕಣ್ಣಿಗೆ ಕಟ್ಟುವಂಥ ಬಣ್ಣನೆಯು ಬಂದಿರುವುದು. ಈ ಕವನವನ್ನು ರಚಿಸಿದ ಕವಯಿತ್ರಿಯವರು ಇದರಲ್ಲಿ ಹೇಳುವುದೇನೆಂದರೆ: "ನಾನು ಧ್ಯಾನಕ್ಕಾಗಿ ಕುಳಿತುಕೊಂಡಾಗ ಅನೇಕ ಮುಖಗಳನ್ನು ಕಂಡೆ. ನಾನು ಸಾಧುಸಂತರ ಸಭೆಯನ್ನೂ ಕಂಡೆ. ಅಲ್ಲಿ ಸಾಧು ಸಂತರು, ಯೋಗಿ-ಜೋಗಿಗಳು ಕುಳಿತಿದ್ದರು. ನಾನು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ ಶಿವನನ್ನು ಪೂರ್ತಿಯಾಗಿ ನೋಡಿದೆ. 'ಸಭೆಯೊಳಗೆ ಸಾಗ್ರದಲ್ಲಿ ಸಾಂಬನ ಒಡೆನೆ' ಇಂಥ ಈ ಸಭೆಯನ್ನು ಅದೆಂತು ಚೆನ್ನಾಗಿ ಬಣ್ಣಿಸಲಿ? ಈ ಸಭೆಯಲ್ಲಿ ಕಾಣಿಸುವ ದೃಶ್ಯಗಳ ಯಥಾರ್ಥ ಜ್ಞಾನವಾದವರಿಗೆ, ಪ್ರತ್ಯಕ್ಷ ವೈಕುಂಠವೇ ಇಲ್ಲಿ ಇಳಿದು ಬಂದಂತೆ ಕಾಣುವುದು. ಸುತ್ತಲೆಲ್ಲ ತುಂಬಿದ ಗುಲಾಲದ ಹುಡಿಯಲ್ಲಿ ಅಲೆಯುತ್ತಿರುವ ತಾರಕಗಳಿಂದ ಆ ಸಭೆಯು ಬೆಳಗುತ್ತಿತ್ತು. ಆ ಹಿರಿಯ ಶೇಷನು, ನೀಲಿ, ಹಸಿರು, ಹಳದಿ, ಹಾಗೂ ಕೆಂಪು ಈ ಬಗೆಬಗೆಯ ಬಣ್ಣಗಳ ಸಂಚುಗಳಲ್ಲಿ ಶೋಭಿಸುತ್ತಿದ್ದನು. ಇವೆಲ್ಲ ಈಶನ

ಒಂದೊಂದು ಅಂದವಾದ, ಅಪ್ರತಿಮವಾದ ರೂಪಗಳು. ಅವುಗಳ ಆ ಅಂದ-ಛಂದವನ್ನು ಅದೆಂತು ಬಣ್ಣಿಸಲಿ? "ಈಶನ ರೂಪವು ಒಂದೊಂದು ಏನು ಹೇಳಲಿ ಆ ಛಂದ?" ಈ ದೇವನು ಅದೆಂಥ ಸುಲಭನು? ಅವನನ್ನು ಪಡೆಯಲು ಬೇಕಾಗುವುದು ಕೇವಲ ಅಂತಃಕರಣಪೂರ್ವಕವಾದ ಉತ್ಕಟ ಭಕ್ತಿಯು. ಅಂಥ ಭಕ್ತಿಯ ಹೃದಯದಲ್ಲಿಯ ಉದಯ. ನನ್ನ ಹೃದಯದ ಕದವನ್ನು ತೆರೆದು ನಾನು ದೇವನನ್ನು ಕಂಡಾಗ, ಪರನಾದವು ಒಮ್ಮೆಲೆ ಧಿಮಿಗುಡುತ್ತ ಹೊರಹೊಮ್ಮುವುದು ಮತ್ತು ನಾನದರಲ್ಲಿ ಮುಳುಗಿಬಿಡುವೆ. "ದ್ವಾರ ತೆರೆದು ಏರಿ ನೋಡುವೆ ಅವನ । ಪರನಾದ ದಿಮ್ಮಿನೊಳು ಮುಳುಗುವೆ ನಾ।" ಎಂದು ಅಕ್ಕನವರು ಹೇಳುವರು. ಇಂಥ ವಿಧಾನವು ಮಾಡಲಾದುದು ಇದು ಮೊದಲನೆಯ ಸಲ. ಬೇರೊಂದು ಕನ್ನಡ ಅನುಭಾವ ಪದದಲ್ಲಿ, ಧ್ಯಾನದಲ್ಲಿ ಲಭಿಸುವ ಆನಂದವನ್ನು ಈ ಧೂಪದ ಹೊಗೆಯಂತೆ ಆನಂದವು ಮೇಲೆ ಮೇಲೆ ಏರುತ್ತ ಸಾಗಬೇಕೆಂದು ಅದರಲ್ಲಿ ಅರುಹಲಾಗಿದೆ. ಹಾಗಾಯಿತೆಂದರೆ, ನೀವು ಕಂಗಳನ್ನು ತೆರೆದ ಕೂಡಲೆ ಭಗವಂತನನ್ನು ಕಾಣಬಲ್ಲಿರಿ. ಅಷ್ಟು ಸುಲಭನಿರುವ ಭಗವಂತ! "ಇಂಥ ದರ್ಶನವನೆಲ್ಲ ನೀವು ಎಲ್ಲಿ ಪಡೆಯಬಲ್ಲಿರಿ!" ಎಂದು ಕೇಳಿ ಅಕ್ಕನವರು ಕೂಡಲೆ ಈ ಬಗೆಯಾಗಿ ಉತ್ತರಿಸುವರು: "ನೀವದನ್ನು ನಿಮ್ಮ ಹಣೆಯ ಮಧ್ಯದಲ್ಲಿ ಕಾಣಬಹುದು. ಆದರೆ ಮೂರು ಗುಣಗಳನ್ನು ಮೀರಿ, ಸದ್ಗುರುಗಳ ಹಿರಿಯ ಬೋಧೆಯನ್ನು ಭಕ್ತಿಯಿಂದ ಅನುರಿಸಿದವನೇ ಅದನ್ನು ಕಾಣಬಲ್ಲನು. ಯೋಗದ ಮಾರ್ಗದಿಂದ ಸಾಗಿ, ಆತ್ಮನ ಅನುಭವ ಪೂರ್ತಿಯಾಗಿ ಬಲ್ಲವರೂ ಮತ್ತು ತಮ್ಮ ಸದ್ಗುರುಗಳಲ್ಲಿ ತಮ್ಮ ವ್ಯಕ್ತಿತ್ವವನ್ನು ಪೂರ್ತಿಯಾಗಿ ಬೆರೆಸಿದವರೂ ಆದ ನಿಂಬರಗಿ ಮಹಾರಾಜರವರೇ ಅಂಥ ಸದ್ಗುರುಗಳಿದ್ದರು" ಎಂದು ಕವಯತ್ರಿಯವರು ಉಸುರುವರು.

ಈ ಗುಂಪಿನಲ್ಲಿಯ ಕೊನೆಯ ಪದವು ಸಂಗಕವಿಗಳ "ಬಾ ಬಾ ಬಾ ಎನ್ನ ಮೋಹದ ಮನಸ" ಎಂಬುದು. ಈ ಪದದಲ್ಲಿ ಮನಸ್ಸಿಗೆ ಬೆಲೆಯುಳ್ಳ ಬೋಧೆಯನ್ನು ಮಾಡಲಾಗಿದೆ. ಇದೇ ಬಗೆಯಾಗಿ ನಿಜಗುಣರು ಕೂಡ ತಮ್ಮ ಮನಸ್ಸನ್ನು "ಮುದ್ದು ಕೋಗಿಲೆ!" ಎಂದು ಸಂಬೋಧಿಸಿ ಪಾರಮಾರ್ಥಿಕ ಪಥವನ್ನು ತುಳಿಯುವಾಗ ತಮಗೆ ಪ್ರೀತಿಯಿಂದ ನೆರವಾಗಲು ಅದನ್ನು ಈ ರೀತಿ ಬಿನ್ನವಿಸಿರುವರು: "ಮನವೇ! ನೀನು ಮುದ್ದು ಕೋಗಿಲೆಯಂತೆ, ಚೆಲ್ವ ಜಾಣ ಕೋಗಿಲೆಯಂತಿರುವಿ! ಹಿಂದೆ ಈಶನು ತಪಸ್ಸಿನಲ್ಲಿ ತಲ್ಲೀನನಾಗಿರುವಾಗ, ಅವನ ಮೇಲೆ ತನ್ನ ಬಾಣಗಳನ್ನು ಎಸೆದ ಫಲವಾಗಿ ಬೆಂದುಹೋದ ಕಾಮನನ್ನು ತೊರೆದು, ಬಾಲೇಂದುಧರನನ್ನು ಕೂಡಿ ಬಾಳಯ್ಯ!" ಇದೇ ಬಗೆಯಾಗಿ ಸಂಗಯ್ಯನವರು ಕೂಡ ತಮ್ಮ ಮನಸ್ಸನ್ನು ಬೋಧಿಸಿರುವರು: "ಅಯ್ಯ ಮೋಹದ ಮನಸೇ! ನೀನು ಬಯಸಿದರೆ,

ಸಾಧುಸಂತರಿಗೂ ಕೂಡ ಪರಮಾನಂದವನ್ನು ದಯಪಾಲಿಸಬಲ್ಲೆ. 'ಯತಿ-ಮುನೀಶ್ವರರಿಗೆ ಗತಿಗ್ಗಚ್ಚ' ಬಲ್ಲೆ. ಆದರೆ ನೀನು ಹಟಮಾರಿ ಕೂಸಿನಂತೆ, ನಿನ್ನನ್ನು ನೀನು ಅರಿಯಲೊಲ್ಲೆ. 'ನಿಂದು ನೀ ತಿಳಿದರೆ ನೀನೇ ರಾಜಹಂಸನಾಗುವಿಯಯ್ಯ!' ಹರಗುರುಗಳನ್ನು ಒಲಿಸುವುದು ಅಷ್ಟೊಂದು ಬಿಗಿಯಾದುದಲ್ಲ; ನೀನೊಮ್ಮೆ ಒಲಿದಿಯೆಂದರೆ ಮೂರು ಲೋಕ ಒಲಿಯುವವು. ಅಯ್ಯ ಮನವೇ ಮೂಲ ಸಾಲಿಯ ಬೀಜಮಂತ್ರವನ್ನು ಓದು, ಅರಿತುಕೊ, ಮತ್ತು ಆದಿ-ಅನಾದಿಯ ಆಚೆಗಿನ, ಸುದ್ದಿಯನ್ನು ಕದ್ದು, ರಹಸ್ಯವಾಗಿ ನನಗೆ ತಿಳಿಸಯ್ಯಾ!" ನಿಂಬರಗಿ ಮಹಾರಾಜರವರು ನೆಲೆಗೊಳಿಸಿದ ಪಾರಮಾರ್ಥಿಕ ಸಾಲೆಯನ್ನು, ಅವರ ಹಿರಿಯ ಶಿಷ್ಯರಾದ ಉಮದಿ ಮಹಾರಾಜರವರು ಈ ರೀತಿ ಕೊಂಡಾಡುತ್ತಿದ್ದರು: "ಪರಮಾತ್ಮನ ಸಾಕ್ಷಾತ್ಕಾರದ ಪಾಠಗಳನ್ನು ಇನಿತು ಸುಲಭವಾಗಿ, ಇನಿತು ಪರಿಣಾಮಕಾರಿಯಾಗಿ ಕಲಿಸುವ ಇಂಥ ಸಾಲೆಯು, ಭಾರತದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಕಾಶಿಯಿಂದ ರಾಮೇಶ್ವರದ ವರೆಗೆ ಎಲ್ಲಿಯೂ ದೊರೆಯಲರಿಯದು". ಸಂಗಯ್ಯನವರು ಮತ್ತೂ ಈ ರೀತಿ ಬಿನ್ನವಿಸುವರು: "ಕರುಣಪೂರ್ವ ಗುರುವಿಗೆ ಶರಣುಹೋಗಯ್ಯ ಮನವೇ! ಗುರುವಿಗೆ ಶರಣುಹೋಗಿ ಮರಣವನ್ನು ಗೆಲ್ಲು! ಸರಿಯಾಗಿ ಸಾಧನವನ್ನು ಮಾಡಿ, ನೀನು ನಾದ-ಬಿಂದು-ಕಳೆಗಳ ರಹಸ್ಯವನ್ನು ತಿಳಿಯಬಲ್ಲಿ! ಮತ್ತು ಮಿದುಳಿನಲ್ಲಿಯ 'ನೀಲಿ ಮನೆಯ ಮೇಲು ಮಂಟಪದಲ್ಲಿ ಲೋಲ್ಯಾಡಬಹುದು' ತರುವಾಯ ದಿವ್ಯ ಅಮೃತದ ಸರಿಯಾದ ಸ್ವರೂಪವನ್ನು ಅರಿತು, ನೀನದನ್ನು ಗಟಗಟ ಕುಡಿಯ ಬಹುದು; ಮತ್ತು ಬಟ್ಟಬಯಲ ತೊಟ್ಟಿಲಲ್ಲಿ ಸುಖವಾಗಿ ನಿದ್ರೈಯಬಹುದು. ನೀನು ಉರಿಯುಂಡ ಕರ್ಪುರಕ್ಕಿಂತಲೂ ಹೆಚ್ಚು ಉಜ್ಜ್ವಲವಾಗಿ ಹೊಳೆಯಬಹುದು. ಹಾಗೂ ಸಂಗಶರಣರ ಸಂಗದಲ್ಲಿ ಪೂರ್ತಿಯಾಗಿ ಬೆರೆತು ಬಿಡಬಹುದು-ಲಯವಾಗಬಹುದು"

■■

ಪ್ರಕರಣ ಹದಿನೆಂಟು

ಪರತಮ ಅನುಭವ

ಈ ಪ್ರಕರಣದಲ್ಲಿ ನಾವು ಕನ್ನಡ ಸಂತರ ಪರತಮ ಅನುಭವಗಳನ್ನು ವಿವರಿಸುವೆವು. ಅವು ಮೇಲ್ತರಗತಿಯ ಸಮ್ಮಿಲಿತ ಅನುಭವಗಳನ್ನೂ, ಆತ್ಮ-ರೂಪದರ್ಶನದ ಅನುಭವವನ್ನೂ ಒಳಗೊಂಡಿರುವವು. ನಿರುಪಾಧಿಸಿದ್ಧರ ಮೊದಲನೆಯ ಪದವಾದ 'ಸದಾ ಬೆಳಗುತದೇ ಜ್ಯೋತಿ' ಎಂಬುದು ಅತ್ಯುನ್ನತ ಅನುಭವದ ಸಾಮಾನ್ಯ ಪ್ರಸ್ತಾವನೆಯಂತಿರುವುದು. ಭಗವಂತನು ಇಲ್ಲಿಯೇ, ಈಗಲೇ ಕಾಣಬಲ್ಲನು, ಎಂದು ಹೇಳಿ ನಿರುಪಾಧಿಸಿದ್ಧರು ನಮ್ಮ ಅನುಭವದ ಸತ್ಯತೆಯನ್ನು ಪರೀಕ್ಷಿಸಲು ನಮಗೆ ಬೋಧಿಸಿರುವರು. ಭಗವಂತನು ನಿರುಪಾಧಿಯ ಶರೀರವನ್ನು ಸೋಂಕದೆ, ಬಯಲಲ್ಲಿ ಹೊಳೆಯುವನೆಂದೂ ಅವನೇ 'ಕರ್ತೃ-ಮೂರ್ತಿ' ಇರುವನೆಂದೂ ಕವಿಯು ಹೇಳುವನು.

ಎರನೆಯ ಪದವಾದ 'ಅರ್ಥಿಯಾಗಿ ಬನ್ನಿ' ಎಂಬುದರಲ್ಲಿ ಮಹಿಪತಿಯವರು ಎಲ್ಲೆಡೆ ತುಂಬಿರುವ ಸೂರ್ಯನಿಲ್ಲದ ಸುಪ್ರಕಾಶವನ್ನೂ, ಚಂದ್ರನಿಲ್ಲದ ಬೆಳುದಿಂಗಳನ್ನೂ ಬಣ್ಣಿಸಿರುವರು. ಬರೀ ಶಬ್ದ ಜಾಲದಲ್ಲಿ ಸಿಲುಕದೆ, ಹೃದಯದಲ್ಲಿ ಭಗವಂತನ ಅಂದವಾದ ರೂಪವನ್ನು ಕಾಣಲು ಅವರು ನಮಗೆ ಬೋಧಿಸಿರುವರು ಮತ್ತು ಕೊನೆಗೆ 'ಅನುದಿನ ಮಹಿಪತಿ ತಾನೆ ತಾನಾದದ್ದ'ನ್ನು ಉಸುರಿರುವರು.

ತರುವಾಯ ಬರುವುದು 'ಪೇಳಲಳವೆ ಸ್ವಾನುಭವದ ಸುಖವ ಮಾನಿನಿ' ಎಂಬ ಕಲ್ಮೇಶ್ವರ ಎಂಬ ಶರಣರ ಪದ. ಇವರು ಬಸವಣ್ಣನವರ ಸಮಕಾಲೀನರಾದ ಹಾವಿನಹಾಳ ಕಲ್ಲಯ್ಯನವರಿರಬಹುದು. ಈ ಪದದಲ್ಲಿ ಅವರು ಉಣದೆ ಹೊಟ್ಟೆ ತುಂಬಿದ್ದನ್ನೂ, ಆನಂದವು ಉಕ್ಕುವುದನ್ನೂ, ಕೇವಲ ಕುಂಭಕವನ್ನೂ, ಭ್ರಮರಸ್ವನವನ್ನೂ ಹಾಗೂ ತನ್ನೆದುರು ನಿಂತ ಅನಾದಿ ಪುರುಷನ ದರ್ಶನವನ್ನೂ ಉಲ್ಲೇಖಿಸಿರುವರು.

ಪುರಂದರದಾಸರ 'ಕಣ್ಣಿನೊಳಗೆ ನೋಡಿ ಕೈವಲ್ಯವು ನೀವು' ಎಂಬ ನಾಲ್ಕನೆಯ ಪದವು ಪರತಮ ಅನುಭವಗಳಲ್ಲಿ ಒಂದು ವಿವರಿಸುವುದು. ಈ ಪದದ ಐತಿಹಾಸಿಕತೆಯನ್ನು ಕಂಡುಹಿಡಿಯಬೇಕಾಗಿದೆ. ಆತ್ಮನ ಶ್ರೇಷ್ಠತಮ ಅನುಭವವನ್ನು

ಇದರಲ್ಲಿ 'ತಾನೆ ತಾನಾದದ್ದು ತಿಳಿಯಬೇಕು' ಎಂಬುದಾಗಿ ವಿವರಿಸಲಾಗಿದೆ. ಪುರಂದರದಾಸರು ಇದರಲ್ಲಿ ರತ್ನದ ಮಣಿ, ಸುವರ್ಣದ ತಾರಕಗಳು, ಉನ್ಮನಿಯಲ್ಲಿಯ ಓಂಕಾರನಾದ ಆತ್ಮದೊಡನೆ ಬೆರಕೆ–ಇವನ್ನು ಅರುಹಿರುವರು.

ಮುಂದಿನ ಮೂರು ಮಹತ್ವದ ಪದಗಳು, ನೂತನವಾದ ಮೇಲ್ತರಗತಿಯ ಅನುಭವಗಳನ್ನು ವಿವರಿಸುವವು: ಅವು ಕ್ರಮಶಃ ೧) ಭಗವಂತನ ಗತಿ–ಅಲೆದಾಟ, ೨) ನಿರ್ಗುಣ ಬ್ರಹ್ಮನಿಗೆ ಸಂಬಂಧಿಸಿದ ಅತೀಂದ್ರಿಯ ಅನುಭವ ಮತ್ತು ೩) ಪಾರಮಾರ್ಥಿಕ ಪುತ್ರನ (ಆತ್ಮನ) ಜನನವನ್ನು ಕುರಿತ ಜೋಗುಳಪದ–ಇವನ್ನು ಒಳಗೊಂಡಿರುವವು. ಮೊದಲನೆಯದು ಪುರಂದರದಾಸರ ಅಸಾಮಾನ್ಯ ಅನುಭವ ವನ್ನು ಅರುಹುವ 'ಉಗಾಭೋಗವು.' ಈ ಅನುಭವವು ಅವರ ಹಿಂದೆ ವಿವರಿಸಲಾದ ಪದದಲ್ಲಿಯ ಅನುಭವಕ್ಕಿಂತ ತುಂಬ ಬೇರೆಯಾದುದೂ, ಮೇಲ್ತರಗತಿಯದೂ ಇರುವುದು. ಹಿಂದಿನ ಪದವು ಕೇವಲ ಆತ್ಮನ ಅನುಬವವನ್ನು ಅರುಹುವದು. ಈ ಉಗಾಭೋಗವು ಆತ್ಮನ ಚಲನವನ್ನು ವಿವರಿಸುವುದು. ಇದು ಜಗನ್ನಾಥದಾಸರ ಪದ್ಯವೊಂದನ್ನು ಜ್ಞಾಪಕಕ್ಕೆ ತರುವುದುಂಟು. ಇವೆರಡೂ ಈಶಾವಾಸ್ಯ ಉಪನಿಷತ್ತಿನಲ್ಲಿಯ ಶ್ಲೋಕವೊಂದನ್ನೂ, ತುಕಾರಾಮ–ನಾಮದೇವರ ಅಭಂಗಗಳನ್ನೂ ಹೋಲುವವು. ಈ ವಿಷಯವನ್ನೊಳಗೊಂಡ 'ನಿಜಲ್ಯಾನೇ ಗಾತಾ ಉಭಾ ನಾರಾಯಣ' 'ಮಲಗಿ ಪಾಡಲು ಕುಳಿತು ಕೇಳ್ವ ನಾರಾಯಣನು!' ಎಂಬ ತುಕಾರಾಮರ ಅಭಂಗವು ತುಂಬ ಪ್ರಸಿದ್ಧವಾದುದು.

ಮಹಿಪತಿಯವರ 'ಕಣ್ಣಾರೆ ಕಂಡೆವು ಚಿನ್ಮಯದ ರೂಪ' ಎಂಬುದು ಇನ್ನೊಂದು ಬೇರೆ ಬಗೆಯ ಕವನ. ಅದರಲ್ಲಿ ನಿರ್ಗುಣ ಬ್ರಹ್ಮನಿಗೆ ಸಂಬಂಧಿಸಿರುವ ಸಮ್ಮಿಲಿತ ಅನುಭವವು ಬಣ್ಣಿಸಲಾಗಿರುವುದು.

ಕೊನೆಯದಾಗಿ, 'ಮಗಾ ಹುಟ್ಟಿದವ್ವಾ!' ಎಂಬ ಶಿವಲಿಂಗವ್ವನವರ ಸುಪ್ರಸಿದ್ಧ ಪದದಲ್ಲಿ ಪಾರಮಾರ್ಥಿಕ ಮಗನ (ಆತ್ಮನ)ಜನನವನ್ನೂ, ಆತನನ್ನು ತೊಟ್ಟಿಲಲ್ಲಿ ಮಲಗಿಸಿ, ಮುಟ್ಟಿ, ಗಗನ ತಟ್ಟುವಂತೆ ತೊಟ್ಟಿಲ ತೂಗುವುದನ್ನೂ ಬಣ್ಣಿಸಲಾಗಿದೆ.

ಮೊದಲನೆಯ ಪದವಾದ 'ಸದಾ ಬೆಳಗುತದ ಜ್ಯೋತಿ' ಎಂಬುದರಲ್ಲಿ, ತನಗೆ ಲಭಿಸಿದ ಭಗವಂತನ ಅನುಭವವನ್ನು ನಿರುಪಾಧಿಸಿದ್ಧರು ಬಣ್ಣಿಸುವರು. ಭಗವಂತನು ಮುಟ್ಟಲಾಗದಂತಹನೂ ಹಾಗೂ ಮುಟ್ಟಬಾರದಂತಹನೂ, ಬಯಲಲ್ಲಿ ಮೆರೆಯು ವಂತಹನೂ ಮತ್ತು ತಮಗೆ ಅತಿಯಾಗಿ ಪ್ರಿಯನಾದವನೂ ಇರುವನಂತೆ. ಕವಿಯು ಈ ರೀತಿ ಅರುಹುವನು: "ಇಂಥ ಭಗವಂತನ ಜ್ಯೋತಿ ನನ್ನ ಹೃದಯ ಕಮಲದಲ್ಲಿ ಸದೈವ ಬೆಳಗುತಿದೆ. 'ಇಕೋ ಇದೇ ಇಲ್ಯದ ನೋಡು ಸಖಿ'! ಅದು

ಎಲ್ಲೆಡೆ ಕಾಣುವುದು, ವಿಶ್ವದಲ್ಲಿ ತುಂಬಿರುವುದು. ತಾನೆ ತಾನಾಗಿ ಒಬ್ಬರೇ ಕುಳಿತಿರಲು, ನಿಮ್ಮಲ್ಲಿ ಬಣ್ಣಿಸಲು ಬಾರದ ಕಳೆಯು ತುಂಬಿದಾಗ, ಇಂಥ ಸ್ವಾನುಭವದ ಖೂನ ತೋರಿದ ಜ್ಞಾನಮೂರ್ತಿಯಾದ ಸದ್ಗುರುವಿಗೆ ನೀವು ಅದೆಷ್ಟು ಕೃತಜ್ಞತೆಯನ್ನು ಸಲ್ಲಿಸಬೇಡ! ನೀವು ಆತ್ಮನಲ್ಲಿಯೆ ಮುಳುಗಿ, ನಿಮ್ಮ ಆತ್ಮನಲ್ಲಿ ಬೆರೆತಾಗ (ತನ್ನ ತಾನೆ ಬೆರೆತಾಗ) ಹಾಗೂ ನಿಜಸುಖದಲ್ಲಿ ಮೈಮರೆದಾಗ, ನೀವು ಪರತತ್ವವನ್ನು ಇಲ್ಲಿ, ಅಲ್ಲಿ, ಎಲ್ಲೆಲ್ಲಿಯೂ ಕಾಣುವಿರಿ; ಇದು ತುಂಬ ಸೂಕ್ಷ್ಮವಾದ ವಿಷಯ. ಇದನ್ನು ಬಲ್ಲ ಜಾಣರೆ ಅರಿಯಬಲ್ಲರು." ಪಾರಮಾರ್ಥಿಕ ಅನುಭವದಲ್ಲಿಯ ಸತ್ಯ-ಅಸತ್ಯ ಅಂಶಗಳನ್ನು ಅರಿಯುವ ನಿರ್ಣಯಿಸುವ ಸಮಯವು ಅದೇ ಇರುವುದು. ಭಗವಂತನ ರೂಪವು ನಿರುಪಾಧಿಸಿದ್ಧರ ದೇಹವನ್ನು ಸೋಂಕದೆ, ಬಯಲೊಳಗೆ ಮೆರೆಯುವುದು. ಅದು ಸತ್-ಚಿತ್-ಆನಂದರೂಪಿಯಾದ ಪರಬ್ರಹ್ಮನೊಡನೆ ಏಕರೂಪವಾಗುವದು-ತದಾತ್ಮವಾಗುವದು. ಸಚ್ಚಿದಾನಂದನು ಕರ್ತೃಮೂರ್ತಿಯಾಗಿ, ಎಲ್ಲೆಲ್ಲಿಯೂ ಹತ್ತದೆ, ಎತ್ತ ನೋಡಲು ಆಕಾಶದಲ್ಲೆಲ್ಲ ಹೊಳೆಯುವನು ಎಂಬುದು ಕವಿಯ ಹೇಳಿಕೆ.

ಇದಾದಮೇಲೆ ನಾವು "ಅರ್ಥಿಯಾಗಿ ಬನ್ನಿ" ಎಂಬ ಮಹಿಪತಿಯವರ ಪದವನ್ನು ವಿವರಿಸುವೆವು. ಇದರಲ್ಲಿ ಕೆಲ ವಿಲಕ್ಷಣವಾದ ಶಬ್ದಗಳಿರುವವು. ಇದು ಒಳ್ಳೆಯ ವಿಚಾರಗಳಿಂದ ಕೂಡಿರುವುದಾದರೂ, ಸಾಹಿತ್ಯದ ದೃಷ್ಟಿಯಿಂದ ಈ ಪದವು ಅಷ್ಟೊಂದು ಮೇಲ್ತರಗತಿಯದು ಇರುವುದಿಲ್ಲ. ಮಹಿಪತಿಯವರು ತಮ್ಮ ಆತ್ಮನನ್ನು ಸಾಕ್ಷಾತ್ಕರಿಸಿಕೊಂಡರು, ಮತ್ತು ನಿಜವಾಗಿ ಅವರು ಪರತತ್ವದಲ್ಲಿ ಮುಳಗುಹೋದರು. ರಾಯರು ಇದರಲ್ಲಿ ತಾವು ಕಂಡ ಸೂರ್ಯನಿಲ್ಲದ ಸುಪ್ರಕಾಶವನ್ನೂ, ಚಂದ್ರನಿಲ್ಲದ ಬೆಳದಿಂಗಳನ್ನೂ ಸ್ಫುಟವಾಗಿ ಬಣ್ಣಿಸಿರುವರು. ಮಹಿಪತಿರಾಯರ ಆತ್ಮದರ್ಶನದ ಉಲ್ಲೇಖವಿರುವುದರಿಂದಲೇ ಈ ಪದವನ್ನು ಪರತಮ ಅನುಭವದ ಈ ಪ್ರಕರಣದಲ್ಲಿ ಸೇರಿಸಲಾಗಿದೆ. "ನೀವು ಪರಮಾತ್ಮನನ್ನು ಕಾಣಬಯಸುವವರಾದರೆ, ನೀವು ಸದ್ಗುರುಗಳನ್ನು ಪ್ರೀತಿ-ಭಕ್ತಿಗಳಿಂದ ಸಾರಬೇಕು. ಅಂದರೆ ನೀವು ಪರಮಾತ್ಮನನ್ನು ಅರಿಯಬಹುದು ಹಾಗೂ ಕಾಣಬಹುದು, ಇಷ್ಟೇ ಅಲ್ಲದೆ, ಸದ್ಗುರುಗಳ ಕರುಣದಿಂದ ನೀವು ಪರಮಾತ್ಮನಲ್ಲಿ ಪೂರ್ತಿಯಾಗಿ ಬೆರೆಯಬಹುದು" ಎಂದು ಮಹಿಪತಿಯವರು ಹೇಳುವರು. ಅವರು ಮತ್ತೂ ಹೇಳುವುದೇನೆಂದರೆ: "ಏನು ಹೇಳಲಿ? ಎಲ್ಲೆಡೆಯಲ್ಲಿ ಸೂರ್ಯನಿಲ್ಲದೆಯೂ ಸರ್ವವ್ಯಾಪಕವಾದ ಸುಪ್ರಕಾಶವು ತುಂಬಿರುವುದು! ಇದನ್ನು ತುರೀಯ ಅವಸ್ಥೆಯಲ್ಲಿ ಬೆರೆತ ಜ್ಞಾನಿಯೆ ಅರಿಯಬಲ್ಲನು. ಇದು ವಿಪುಲವಾದ ಶಬ್ದಗಳಿಂದ ಬಣ್ಣಿಸಲು ಬರುವಂತಹ ವಿಷಯವಲ್ಲ. ಇದೊಂದು ಶುದ್ಧ ಪರಮಜ್ಞಾನದ ಅವಸ್ಥೆಯು (ಅರವು ಸ್ಥಾನವು).

ನಮ್ಮ ಪರಮ ಪ್ರಾಣದಂತಿರುವ ಪರಮಾತ್ಮನ ಸಾಕ್ಷಾತ್, ನಿಕಟ, ಅನುಭವ ದಿಂದಲೇ ತಿಳಿಯುವಂತಹ ಮಾತಿದು." ಇಲ್ಲಿ ರಾಮದಾಸರ 'ದೇವ ಮ್ಹಣಿಜೇ ಆಪುಲಾ ಪ್ರಾಣ । ಪ್ರಾಣಾ ಸಿ ನ ಕರಾವೇ ನಿರ್ವಾಣ॥" "ದೇವನಂದರೆ ನಮ್ಮ ಪ್ರಾಣವಿದ್ದಂತೆ. ಅವನನ್ನು ನಾವು ಉಪೇಕ್ಷಿಸ ಕೂಡದು" ಎಂಬ ವಚನವು ಜ್ಞಾಪಕಕ್ಕೆ ಬರುವುದುಂಟು. ಮಹಿಪತಿರಾಯರು ಮುಂದೆ ಈ ರೀತಿ ಅರುಹಿರುವರು: "ಚಂದ್ರನಿಲ್ಲದ–ವಿಪುಲವಾದ, ನಿರ್ಮಲವಾದ ಬೆಳುಂದಿಗಳು ಇಡಿ ಪೃಥ್ವಿಯನ್ನು ವ್ಯಾಪಿಸಿರುವುದು; ಮತ್ತು ನಮ್ಮ ಇಂದ್ರಿಯಗಳೆಲ್ಲ ಅದರ ಆನಂದವನ್ನು ತುಂಬ ಹರ್ಷದಿಂದ ಸೇವಿಸುವುದರಲ್ಲಿ ಸಂತತವಾಗಿ ತೊಡಗಿರುವವು. ಹೃದಯದಲ್ಲಿ ಶ್ರೇಷ್ಠತಮ ತರಗತಿಯ ಸುಂದರತಮವಾದ ಪರಮಾತ್ಮನ ರೂಪವು ನೆಲೆಸಿರುವುದು; ಮತ್ತು ಅದರಿಂದ ಸಾಂದ್ರವಾದ ಸುಖ ತುಂಬಿತುಳುಕುತ್ತಲಿರುವುದು. ಮನದ ಕಾರ್ಯವು ನಿಂತು ಅದು ಉನ್ಮನವಾಯಿ ತಂದರೇನೇ ಬ್ರಹ್ಮಾನಂದದ ಪ್ರತೀಕವಾದ ಆ ಘನಸುಖವು ಲಭಿಸುವುದು. ಬ್ರಹ್ಮನನ್ನು ಪಡೆಯಲೆತ್ನಿಸುವವರಿಗೆ ಇದು ತುಂಬ ಅನುಕೂಲವಾಗಿರುವುದು. ರಾಜ ಯೋಗವು ಮನ–ವಿಷಯಗಳಲ್ಲಿ, ನಾನು ನೀನುಗಳಲ್ಲಿ, ಭಕ್ತ–ಭಗವಂತರಲ್ಲಿ, ಯಾವ ಬಗೆಯ ಭೇದವನ್ನೂ ಕಲ್ಪಿಸುವುದಿಲ್ಲ. ಮಹಿಪತಿಯು ಈಗ ಸದ್ಗುರು ವಿನಂತೆ ಅನುದಿನ ತಾನೆ ತಾನಾದನು"

ನಾವಿನ್ನು ಕಲ್ಮೇಶ್ವರರ ಮುಂದಿನ ಪದವನ್ನು ವಿವರಿಸಲು ಪ್ರಾರಂಭಿಸುವೆವು. ನಿಂಬರಗಿಯ ನೆರೆಯಲ್ಲಿರುವ ಹಾವಿನಹಾಳ ಎಂಬ ಗ್ರಾಮದಲ್ಲಿ ಕಲ್ಲಯ್ಯನೆಂಬ ಶರಣರಿದ್ದರು. ಅವರು ಬಸವಣ್ಣನವರ ಸಮಕಾಲೀನರು. ಅವರೇ ಕಲ್ಮೇಶ್ವರರಿರ ಬಹುದೆಂದು ಊಹಿಸಲಾಗಿದೆ. 'ಪೇಳಲಳವೇ ಸ್ವಾನುಭವದ ಸುಖವ ಮಾನಿನೀ!' ಎಂಬ ತಮ್ಮ ಪದದಲ್ಲಿ ಕಲ್ಮೇಶ್ವರರು "ಪರಮಾತ್ಮನ ಸಾಕ್ಷಾತ್ಕಾರದಿಂದ ಅಂತರಂಗ ದಲ್ಲಿ ಅನುಭವಿಸಲು ಲಭಿಸುವ ಅಮೂಲ್ಯವಾದ ಪರಮಾನಂದವನ್ನು ಶಬ್ದಗಳಿಂದ ಬಣ್ಣಿಸಲು ಬಾರದು" ಎಂದು ಹೇಳಿ, ತರುವಾಯ ತಮ್ಮ ಮೇಲಾದ ಆ ಅನುಭವದ ದೈಹಿಕ ಹಾಗೂ ಮಾನಸಿಕ ಪರಿಣಾಮಗಳನ್ನು ಈ ರೀತಿ ಬಣ್ಣಿಸಿರುವರು: "ನಾನು ಆ ಸೌಖ್ಯವನ್ನು ಉಣ್ಣಲು ಪ್ರಾರಂಭಿಸಿದಾಗ, ನಾನದರಲ್ಲಿ ಮುಳುಗಿ ಮೈಮರೆತೆನು. ಮೂಲಾಧಾರ ಚಕ್ರದ ಮೇಲೆ ನನ್ನ ಹಿಂಬಡವನ್ನು ದೃಢವಾಗಿರಿಸಿ, ನಾನು ಮಿದುಳಿನಲ್ಲಿಯ ಕೇಂದ್ರ ಕುಹರದ ತುದಿಗೆ ಏರಿದೆನು. ಭೌತಿಕ ಅನ್ನವನ್ನು ಸೇವಿಸದೆಯೆ ನನ್ನ ಉದರವು ತುಂಬಿತು. ನಾನು ಆನಂದದ ತೇಗನ್ನು ಬಿಡಲು ಪ್ರಾರಂಭಿಸಿದೆ. ಅದರ ಫಲವಾಗಿ ನನ್ನ ಇಂದ್ರಿಯಗಳ ಕಾರ್ಯ ಶಕ್ತಿಯು ಪೂರ್ತಿಯಾಗಿ ಅಡಗಿಹೋಯಿತು. ಅವುಗಳ ಎಲ್ಲ ಬಗೆಯ ಪ್ರಕ್ಷೋಭವೂ ಚಟುವಟಿಕೆಯೂ ನಿಂತುಬಿಟ್ಟಿತು. ನನ್ನ ಇಂದ್ರಿಯಗಳೆಲ್ಲ ಸಂಪೂರ್ಣವಾಗಿ ಸುಮ್ಮ

ಎಲ್ಲೆಡೆ ಕಾಣುವುದು, ವಿಶ್ವದಲ್ಲಿ ತುಂಬಿರುವುದು. ತಾನೆ ತಾನಾಗಿ ಒಬ್ಬರೇ ಕುಳಿತಿರಲು, ನಿಮ್ಮಲ್ಲಿ ಬಣ್ಣಿಸಲು ಬಾರದ ಕಳೆಯು ತುಂಬಿದಾಗ, ಇಂಥ ಸ್ವಾನುಭವದ ಖೂನ ತೋರಿದ ಜ್ಞಾನಮೂರ್ತಿಯಾದ ಸದ್ಗುರುವಿಗೆ ನೀವು ಅದೆಷ್ಟು ಕೃತಜ್ಞತೆಯನ್ನು ಸಲ್ಲಿಸಬೇಡ! ನೀವು ಆತ್ಮನಲ್ಲಿಯೆ ಮುಳುಗಿ, ನಿಮ್ಮ ಆತ್ಮನಲ್ಲಿ ಬೆರೆತಾಗ (ತನ್ನ ತಾನೆ ಬೆರೆತಾಗ) ಹಾಗೂ ನಿಜಸುಖದಲ್ಲಿ ಮೈಮರೆದಾಗ, ನೀವು ಪರತತ್ವವನ್ನು ಇಲ್ಲಿ, ಅಲ್ಲಿ, ಎಲ್ಲೆಲ್ಲಿಯೂ ಕಾಣುವಿರಿ; ಇದು ತುಂಬ ಸೂಕ್ಷ್ಮವಾದ ವಿಷಯ. ಇದನ್ನು ಬಲ್ಲ ಜಾಣರೆ ಅರಿಯಬಲ್ಲರು." ಪಾರಮಾರ್ಥಿಕ ಅನುಭವದಲ್ಲಿಯ ಸತ್ಯ-ಅಸತ್ಯ ಅಂಶಗಳನ್ನು ಅರಿಯುವ ನಿರ್ಣಯಿಸುವ ಸಮಯವು ಅದೇ ಇರುವುದು. ಭಗವಂತನ ರೂಪವು ನಿರುಪಾಧಿಸಿದ್ಧರ ದೇಹವನ್ನು ಸೋಂಕದೆ, ಬಯಲೊಳಗೆ ಮೆರೆಯುವುದು. ಅದು ಸತ್-ಚಿತ್-ಆನಂದರೂಪಿಯಾದ ಪರಬ್ರಹ್ಮನೊಡನೆ ಏಕರೂಪವಾಗುವದು-ತದಾತ್ಮವಾಗುವದು. ಸಚ್ಚಿದಾನಂದನು ಕರ್ತೃಮೂರ್ತಿಯಾಗಿ, ಎಲ್ಲೆಲ್ಲಿಯೂ ಹತ್ತದೆ, ಎತ್ತ ನೋಡಲು ಆಕಾಶದಲ್ಲೆಲ್ಲ ಹೊಳೆಯುವನು ಎಂಬುದು ಕವಿಯ ಹೇಳಿಕೆ.

ಇದಾದಮೇಲೆ ನಾವು "ಅರ್ಥಿಯಾಗಿ ಬನ್ನಿ" ಎಂಬ ಮಹಿಪತಿಯವರ ಪದವನ್ನು ವಿವರಿಸುವೆವು. ಇದರಲ್ಲಿ ಕೆಲ ವಿಲಕ್ಷಣವಾದ ಶಬ್ದಗಳಿರುವವು. ಇದು ಒಳ್ಳೆಯ ವಿಚಾರಗಳಿಂದ ಕೂಡಿರುವುದಾದರೂ, ಸಾಹಿತ್ಯದ ದೃಷ್ಟಿಯಿಂದ ಈ ಪದವು ಅಷ್ಟೊಂದು ಮೇಲ್ತರಗತಿಯದು ಇರುವುದಿಲ್ಲ. ಮಹಿಪತಿಯವರು ತಮ್ಮ ಆತ್ಮನನ್ನು ಸಾಕ್ಷಾತ್ಕರಿಸಿಕೊಂಡರು, ಮತ್ತು ನಿಜವಾಗಿ ಅವರು ಪರತತ್ವದಲ್ಲಿ ಮುಳಗುಹೋದರು. ರಾಯರು ಇದರಲ್ಲಿ ತಾವು ಕಂಡ ಸೂರ್ಯನಿಲ್ಲದ ಸುಪ್ರಕಾಶವನ್ನೂ, ಚಂದ್ರನಿಲ್ಲದ ಬೆಳದಿಂಗಳನ್ನೂ ಸ್ಫುಟವಾಗಿ ಬಣ್ಣಿಸಿರುವರು. ಮಹಿಪತಿರಾಯರ ಆತ್ಮದರ್ಶನದ ಉಲ್ಲೇಖವಿರುವುದರಿಂದಲೇ ಈ ಪದವನ್ನು ಪರತಮ ಅನುಭವದ ಈ ಪ್ರಕರಣದಲ್ಲಿ ಸೇರಿಸಲಾಗಿದೆ. "ನೀವು ಪರಮಾತ್ಮನನ್ನು ಕಾಣಬಯಸುವವರಾದರೆ, ನೀವು ಸದ್ಗುರುಗಳನ್ನು ಪ್ರೀತಿ-ಭಕ್ತಿಗಳಿಂದ ಸಾರಬೇಕು. ಅಂದರೆ ನೀವು ಪರಮಾತ್ಮನನ್ನು ಅರಿಯಬಹುದು ಹಾಗೂ ಕಾಣಬಹುದು, ಇಷ್ಟೇ ಅಲ್ಲದೆ, ಸದ್ಗುರುಗಳ ಕರುಣದಿಂದ ನೀವು ಪರಮಾತ್ಮನಲ್ಲಿ ಪೂರ್ತಿಯಾಗಿ ಬೆರೆಯಬಹುದು" ಎಂದು ಮಹಿಪತಿಯವರು ಹೇಳುವರು. ಅವರು ಮತ್ತೂ ಹೇಳುವುದೇನೆಂದರೆ: "ಏನು ಹೇಳಲಿ? ಎಲ್ಲೆಡೆಯಲ್ಲಿ ಸೂರ್ಯನಿಲ್ಲದೆಯೂ ಸರ್ವವ್ಯಾಪಕವಾದ ಸುಪ್ರಕಾಶವು ತುಂಬಿರುವುದು! ಇದನ್ನು ತುರೀಯ ಅವಸ್ಥೆಯಲ್ಲಿ ಬೆರೆತ ಜ್ಞಾನಿಯೆ ಅರಿಯಬಲ್ಲನು. ಇದು ವಿಪುಲವಾದ ಶಬ್ದಗಳಿಂದ ಬಣ್ಣಿಸಲು ಬರುವಂತಹ ವಿಷಯವಲ್ಲ. ಇದೊಂದು ಶುದ್ಧ ಪರಮಜ್ಞಾನದ ಅವಸ್ಥೆಯು (ಅರವು ಸ್ಥಾನವು).

ನಮ್ಮ ಪರಮ ಪ್ರಾಣದಂತಿರುವ ಪರಮಾತ್ಮನ ಸಾಕ್ಷಾತ್, ನಿಕಟ, ಅನುಭವ ದಿಂದಲೇ ತಿಳಿಯುವಂತಹ ಮಾತಿದು." ಇಲ್ಲಿ ರಾಮದಾಸರ 'ದೇವ ಮ್ಹಣಿಜೇ ಆಪುಲಾ ಪ್ರಾಣ । ಪ್ರಾಣಾ ಸಿ ನ ಕರಾವೇ ನಿರ್ವಾಣ॥" "ದೇವನಂದರೆ ನಮ್ಮ ಪ್ರಾಣವಿದ್ದಂತೆ. ಅವನನ್ನು ನಾವು ಉಪೇಕ್ಷಿಸ ಕೂಡದು" ಎಂಬ ವಚನವು ಜ್ಞಾಪಕಕ್ಕೆ ಬರುವುದುಂಟು. ಮಹಿಪತಿರಾಯರು ಮುಂದೆ ಈ ರೀತಿ ಅರುಹಿರುವರು: "ಚಂದ್ರನಿಲ್ಲದ-ವಿಪುಲವಾದ, ನಿರ್ಮಲವಾದ ಬೆಳುಂದಿಗಳು ಇಡಿ ಪೃಥ್ವಿಯನ್ನು ವ್ಯಾಪಿಸಿರುವುದು; ಮತ್ತು ನಮ್ಮ ಇಂದ್ರಿಯಗಳೆಲ್ಲ ಅದರ ಆನಂದವನ್ನು ತುಂಬ ಹರ್ಷದಿಂದ ಸೇವಿಸುವುದರಲ್ಲಿ ಸಂತತವಾಗಿ ತೊಡಗಿರುವವು. ಹೃದಯದಲ್ಲಿ ಶ್ರೇಷ್ಠತಮ ತರಗತಿಯ ಸುಂದರತಮವಾದ ಪರಮಾತ್ಮನ ರೂಪವು ನೆಲೆಸಿರುವುದು; ಮತ್ತು ಅದರಿಂದ ಸಾಂದ್ರವಾದ ಸುಖ ತುಂಬಿತುಳುಕುತ್ತಲಿರುವುದು. ಮನದ ಕಾರ್ಯವು ನಿಂತು ಅದು ಉನ್ಮನವಾಯಿ ತಂದರೇನೇ ಬ್ರಹ್ಮಾನಂದದ ಪ್ರತೀಕವಾದ ಆ ಘನಸುಖವು ಲಭಿಸುವುದು. ಬ್ರಹ್ಮನನ್ನು ಪಡೆಯಲೆತ್ನಿಸುವವರಿಗೆ ಇದು ತುಂಬ ಅನುಕೂಲವಾಗಿರುವುದು. ರಾಜ ಯೋಗವು ಮನ-ವಿಷಯಗಳಲ್ಲಿ, ನಾನು ನೀನುಗಳಲ್ಲಿ, ಭಕ್ತ-ಭಗವಂತರಲ್ಲಿ, ಯಾವ ಬಗೆಯ ಭೇದವನ್ನೂ ಕಲ್ಪಿಸುವುದಿಲ್ಲ. ಮಹಿಪತಿಯು ಈಗ ಸದ್ಗುರು ವಿನಂತೆ ಅನುದಿನ ತಾನೆ ತಾನಾದನು"

ನಾವಿನ್ನು ಕಲ್ಮೇಶ್ವರರ ಮುಂದಿನ ಪದವನ್ನು ವಿವರಿಸಲು ಪ್ರಾರಂಭಿಸುವೆವು. ನಿಂಬರಗಿಯ ನೆರೆಯಲ್ಲಿರುವ ಹಾವಿನಹಾಳ ಎಂಬ ಗ್ರಾಮದಲ್ಲಿ ಕಲ್ಲಯ್ಯನೆಂಬ ಶರಣರಿದ್ದರು. ಅವರು ಬಸವಣ್ಣನವರ ಸಮಕಾಲೀನರು. ಅವರೇ ಕಲ್ಮೇಶ್ವರರಿರ ಬಹುದೆಂದು ಊಹಿಸಲಾಗಿದೆ. 'ಪೇಳಲಳವೇ ಸ್ವಾನುಭವದ ಸುಖವ ಮಾನಿನೀ!' ಎಂಬ ತಮ್ಮ ಪದದಲ್ಲಿ ಕಲ್ಮೇಶ್ವರರು "ಪರಮಾತ್ಮನ ಸಾಕ್ಷಾತ್ಕಾರದಿಂದ ಅಂತರಂಗ ದಲ್ಲಿ ಅನುಭವಿಸಲು ಲಭಿಸುವ ಅಮೂಲ್ಯವಾದ ಪರಮಾನಂದವನ್ನು ಶಬ್ದಗಳಿಂದ ಬಣ್ಣಿಸಲು ಬಾರದು" ಎಂದು ಹೇಳಿ, ತರುವಾಯ ತಮ್ಮ ಮೇಲಾದ ಆ ಅನುಭವದ ದೈಹಿಕ ಹಾಗೂ ಮಾನಸಿಕ ಪರಿಣಾಮಗಳನ್ನು ಈ ರೀತಿ ಬಣ್ಣಿಸಿರುವರು: "ನಾನು ಆ ಸೌಖ್ಯವನ್ನು ಉಣ್ಣಲು ಪ್ರಾರಂಭಿಸಿದಾಗ, ನಾನದರಲ್ಲಿ ಮುಳುಗಿ ಮೈಮರೆತೆನು. ಮೂಲಾಧಾರ ಚಕ್ರದ ಮೇಲೆ ನನ್ನ ಹಿಂಬಡವನ್ನು ದೃಢವಾಗಿರಿಸಿ, ನಾನು ಮಿದುಳಿನಲ್ಲಿಯ ಕೇಂದ್ರ ಕುಹರದ ತುದಿಗೆ ಏರಿದೆನು. ಭೌತಿಕ ಅನ್ನವನ್ನು ಸೇವಿಸದೆಯೆ ನನ್ನ ಉದರವು ತುಂಬಿತು. ನಾನು ಆನಂದದ ತೇಗನ್ನು ಬಿಡಲು ಪ್ರಾರಂಭಿಸಿದೆ. ಅದರ ಫಲವಾಗಿ ನನ್ನ ಇಂದ್ರಿಯಗಳ ಕಾರ್ಯ ಶಕ್ತಿಯು ಪೂರ್ತಿಯಾಗಿ ಅಡಗಿಹೋಯಿತು. ಅವುಗಳ ಎಲ್ಲ ಬಗೆಯ ಪ್ರಕ್ಷೋಭವೂ ಚಟುವಟಿಕೆಯೂ ನಿಂತುಬಿಟ್ಟಿತು. ನನ್ನ ಇಂದ್ರಿಯಗಳೆಲ್ಲ ಸಂಪೂರ್ಣವಾಗಿ ಸುಮ್ಮ

ನಾದವು, ಶಾಂತವಾದವು. ಆಗ, ಮೊದಲೆ ಸೂಕ್ಷ್ಮವಾದ ನನ್ನ ಉಸಿರು ತುಂಬಾ ನಿಂತೇ ಬಿಟ್ಟಿತು." ಇದೇ ಕೇವಲ ಕುಂಭಕದ ಅವಸ್ಥೆಯು.

ತರುವಾಯ ಕವಿಯ ಮೇಲಾದ ಆತ್ಮಸಾಕ್ಷಾತ್ಕಾರದ ಅನುಭಾವಿಕ ಪರಿಣಾಮಗಳು ಈ ರೀತಿ ಬಣ್ಣಿಸಲಾಗಿವೆ: "ನಾನು ಅಂತರಂಗದಲ್ಲಿ, ಲೀಲೆಯಿಂದ ಮೊರೆಯುವ ಭ್ರಮರದ ಸ್ವರದಂಥ ಅನಾಹತನಾದವನ್ನು ಕೇಳಿದೆ, ಮತ್ತು ಅದರಿಂದ ನನಗೆ 'ಅಮೂಲ್ಯವಾದ ಆನಂದ'ವಾಯಿತು. ನಾನು ಕೇಳಿದ ಆ ಅನಾಹತನಾದದೊಳಗಿಂದ, ಅದರಲ್ಲಿಯೆ ನೆಲೆಸಿದ ಒಂದು ಸೂಸುನಾದವು ಹೊರಹೊಮ್ಮಿ ಎಲ್ಲವನ್ನು ವ್ಯಾಪಿಸಿಬಿಟ್ಟಿತು. ಒಳಗೆ ಹೊರಗೆ ಒಂದೇ ಸವನೆ ಪರತಮ ಪ್ರಕಾಶವು ಬೆಳಗಿತು, ಮತ್ತು ನಾನು ಭಾನುಕೋಟಿ ಪ್ರಭೆಗೆ ಮಿಗಿಲಾದ ಪ್ರಭೆಯನ್ನು ಕಂಡೆನು. ನನ್ನ ಮಿದುಳಿನಲ್ಲಿಯ 'ಮೇಲುಮಂಟಪ'ದಲ್ಲಿ ಆದಿ ಮೂಲಮೂರ್ತಿಯು ಹೊಳೆಯಿತು; ಮತ್ತು ಬೆಳಕಿನ ಮೊತ್ತದಲ್ಲಿ ನನ್ನೆದುರು ನಿಂತಿತು. ಆತ್ಮಬೋಧವಡಗಿ ನಾನು ಬ್ರಹ್ಮನೊಳಗೆ ಐಕ್ಯವನ್ನು ಪಡೆದೆ".

ಮುಂದೆ ನಾವು ವಿವರಿಸಲಿರುವ ಪದವು ಪರಬ್ರಹ್ಮನನ್ನು ಇಲ್ಲವೆ ಪರಮಾತ್ಮನ ನಿರ್ಗುಣ ರೂಪವನ್ನು ಬಣ್ಣಿಸುವುದು. ಇಂಥ ವಿಚಾರವು ಪುರಂದರದಾಸರ ಸಾಹಿತ್ಯದಲ್ಲಿ ಕಾಣಬರುವುದು ತೀರ ವಿರಲ. ಆದುದರಿಂದಲೇ ಅವರೀ 'ಕಣ್ಣಿನೊಳಗೆ ನೋಡಿ' ಎಂಬ ಪದದ ವಿಶೇಷ ಮಹತ್ವವು. ಈ ಪದವನ್ನು, ದಾಸರಾಯರ ಯೋಗಾನುಭವವನ್ನು ಒಳಗೊಂಡ 'ಕಣ್ಣಿನೊಳಗೆ ನೋಡು ಹರಿಯ' ಎಂಬ ಪದದೊಡನೆ ಹೋಲಿಸಬಹುದು.

ದಾಸರಾಯರು ಈ ಪದದಲ್ಲಿ ಈ ಬಗೆಯಾಗಿ ಅರುಹಿರುವರು: "ನೀವು ಕೈವಲ್ಯವನ್ನು ಕಾಣಬಯಸುತ್ತಿದ್ದರೆ, ನೀವದನ್ನು ನಿಮ್ಮ ಕಂಗಳಿಂದಲೇ, ಕಣ್ಣು ತುಂಬ ಕಾಣಬಲ್ಲಿರಿ. ಅದನ್ನು ಬಣ್ಣಿಸಲಳವಲ್ಲ. ಸದ್ಗುರುಗಳ ಕರುಣವನ್ನು ದೃಢವಾಗಿ ನಂಬಿದರೇನೇ ನೀವದನ್ನು ಕಾಣಬಹುದು. ನಿಮ್ಮ ಹೃದಯದ ಅಂತರತಮ ಭಾಗವಾದ 'ಕತ್ತಲಮನೆಯಲ್ಲಿ' ಒಂದು ರತ್ನದ ಮಣಿಯಿರುವುದು. ಅಲ್ಲಿ ನಿಮಗೆ ಬೇಕಾದರೆ ನೀವು ಮಣಿ-ರತ್ನಗಳನ್ನು ಕಾಣಬಲ್ಲಿರಿ. ನೀವಲ್ಲಿ ಥಳಥಳಿಸುವ ಸುವರ್ಣವರ್ಣದ ತಾರಕಗಳನ್ನು ನೋಡಿರಿ. ಉನ್ಮನಿಯನ್ನು ಪಡೆದು ಓಂಕಾರನಾದವ ಕೇಳಿರಿ. ಸಾಧು ಸಂತರನ್ನು ಸನ್ಮನದಿಂದ ಸತ್ಕರಿಸಿ ಅವರಿಂದ ನೈತಿಕ-ಪಾರಮಾರ್ಥಿಕ, ಉಭಯವಿಧ ಬೆಂಬಲವನ್ನು ಪಡೆಯಿರಿ." ತಮ್ಮ ಪಾರಮಾರ್ಥಿಕ ಧನವನ್ನು ಕುಂದಗೊಡದೆ, ಅವರದನ್ನು ನಿಮಗೆ ನೀಡಬಲ್ಲರು. ಯಾಕಂದರೆ, ಬೇರೊಬ್ಬ ಸಂತರ ಪದದಲ್ಲಿ ಬಣ್ಣಿಸಲಾದ ಮೇರೆಗೆ, ಅವರದು 'ಕೊಟ್ಟರೆ ತೀರದಂಥ ಎಷ್ಟು ವಿಪುಲವಾಗಿ ಕೊಟ್ಟರೂ ಎಂದೂ ತೀರದಂತಹ'

ಧನವು. ನಿಮ್ಮ ಚಿತ್ತದ ಕೊನೆಯಲ್ಲಿ ಶ್ರೀಹರಿ ನಿಂತಾನೆ, ಇಲ್ಲವೆ ನಿಮ್ಮ ನಾಸಾಗ್ರದಲಿ ಶ್ರೀಹರಿ ಕುಂತಾನೆ. ಅವನನ್ನು ನೋಡಿಕೊಳ್ಳಿರಿ! ಪರಮಾತ್ಮನ ರೂಪವು ಒಳಹೊರಗೊಂದಾಗಿ ಹೊಳೆಯುತಲಿರುವುದು. ಅದಕ್ಕೆ ವಿನಯದಿಂದ ನಮನ ಮಾಡಿರಿ ನಿಮ್ಮ ಕಾಯವು ಸ್ಥಿರವಿಲ್ಲ. ಆದುದರಿಂದ ಅದು ಬದುಕಿರುವ ವರೆಗೆ ಕಮಲನಾಭನಲ್ಲಿ ಬೆರೆಯಲು ಯತ್ನಿಸಿರಿ. ನೀವು ಆ ಸ್ಥಿತಿಯನ್ನೂ ಮುಟ್ಟಿದಿರೆಂದರೆ, ನಿಮಗೆ ತಾನೆ ತಾನಾದದ್ದು, ನೀವೇ ನಿಮ್ಮ ನಿಜರೂಪವಾದದ್ದು ತಿಳಿಯಬಹುದು."

ಪುರಂದರದಾಸರ 'ಮಲಗಿ ಪಾಡಿದರೆ ಕುಳಿತು ಕೇಳುವ' ಎಂಬ 'ಉಗಾಭೋಗ'ವೆಂದು ಕರೆಯಲ್ಪಡುವ ವಚನದಲ್ಲಿ, ಅತಿ ಮಹತ್ವದ ಪರತಮ ಅನುಭವಗಳಲ್ಲಿ ಒಂದನ್ನು ಈ ರೀತಿ ಬಣ್ಣಿಸಲಾಗಿದೆ: "ಭಕ್ತನು ಭಗವಂತನನ್ನು ಮಲಗಿ ಪಾಡಿದರೆ-ಸ್ತುತಿಸಿದರೆ, ಭಗವಂತನು ಅದನ್ನು ಕುಳಿತು ಕೇಳುವ; ಮತ್ತು ಭಕ್ತನು ನಿಂತು ಪಾಡಿದರೆ, ಭಗವಂತನು ನಲಿದು ಕೇಳುವ; ಮತ್ತು ನಲಿದು ಪಾಡಿದರೆ ಅವನು ಸ್ವರ್ಗದ ಬಾಗಿಲನ್ನೇ ತೆರೆಯುವ; ಭಕ್ತನನ್ನು ಸ್ವರ್ಗದ ಒಡೆಯನನ್ನಾಗಿ ಮಾಡುವ ಮತ್ತು ಅಲ್ಲಿಯ ನಿಧಿಯನ್ನೆಲ್ಲ ಸೂರೆಗೊಳ್ಳಲು ಅನುಮತಿಯನ್ನೀಯುವ'ನಂತೆ. ಸುಮಾರಾಗಿ ಇದೇ ಬಗೆಯಾಗಿ ಜಗನ್ನಾಥ ದಾಸರು ತಮ್ಮ ಅನುಭವವನ್ನು ಪದ್ಯವೊಂದರಲ್ಲಿ ಬಣ್ಣಿಸಿರುವರು. ಅದರ ಮೂರನೆಯ ಸಾಲಿನಲ್ಲಿ ಅರುಹಿದ ಅನುಭವವು ಮಾತ್ರ ಸ್ವಲ್ಪ ಬೇರೆಯಾದು ದಿರುವುದು. ಅದರಲ್ಲಿಯ ಜಗನ್ನಾಥದಾಸರ ಅರಿಕೆಯು ಈ ಬಗೆಯದಿರುವುದು: "ಭಕ್ತನು ನಲಿಯಹತ್ತಿದರೆ, ಭಗವಂತನು ಒಲಿದು-ಆತನಿಗೆ ವಶನಾಗಿ-ಆತನನ್ನು ಪೂರ್ತಿಯಾಗಿ ಆಶೀರ್ವದಿಸುವನು." ಅದರ ಮುಂದಿನ ಅರ್ಧದಲ್ಲಿ ಅವರು ಮತ್ತೂ ಹೇಳುವುದೇನೆಂದರೆ: "ಸುಲಭನೋ ಹರಿಯು! ತನ್ನವರನು ಅರಗಳಿಗೆ ಬಿಟ್ಟು ಅಗಲನವನು! ಆದರೆ ಇಂಥ ಹರಿಯನ್ನು ಒಲಿಸಲರಿಯದೆ ಈ ಪಾಮರರು ಭವದಲ್ಲಿ ಬಳಲುತಿರುವರು. ಇದು ಸೋಜಿಗದ ಸಂಗತಿಯಲ್ಲವೇ?" ಈ ಕೆಲ ಅಲ್ಪ ಬದಲುಗಳನ್ನು ಬಿಟ್ಟರೆ, ಈ ಹಿರಿಯ ಅನುಭಾವಿ ಗಳೋರ್ವರ, ಈ ಪರತಮ ಅನುಭವದ ಬಣ್ಣನೆಯಲ್ಲಿ ಹೊಂದಿಕೆಯಿರುವುದು. ಈ ಕವನಗಳಲ್ಲಿಯ ವಿಚಾರಗಳು ಉಪನಿಷತ್ತುಗಳಲ್ಲಿಯ ಹಾಗೂ ನಾಮದೇವ ತುಕಾರಾಮರ ಅಭಂಗಗಳಲ್ಲಿಯ ಇಂಥ ವಿಚಾರಗಳನ್ನು ತುಂಬ ಹೋಲುವವು: "ಆತ್ಮನು ಒಂದೆಡೆ ಕುಳಿತಿರುವಾಗಲೂ ಬಲು ದೂರ ಹೋಗುವನು; ಮಲಗಿದಾ ಗಲೂ ಎಲ್ಲೆಡೆ ಅಲೆಯುವನು" ಎಂದು ಉಪನಿಷತ್ತುಗಳು ಉಸುರುವವು. ಇಲ್ಲಿ ಆತ್ಮನ ಇಲ್ಲವೆ ಪರಮಾತ್ಮನ ಚಲನವು, ಭಕ್ತನ ಚಲನಕ್ಕೆ ಸಂಬಂಧಿಸಿರುವುದಿಲ್ಲ. ಭಕ್ತನು ಬಹುತರವಾಗಿ ತನ್ನಂತರಂಗದಲ್ಲಿ ಜನಿಸಿದ ಭಾವಗಳ ಮೂಲಕ, ಆತ್ಮನ ಚಲನೆಯನ್ನು ಅರಿಯುವನಷ್ಟೇ!

ಆದುದರಿಂದ ಭಾವಗಳು ಒಂದು ಬಗೆಯಾಗಿ ಚಲನೆಯಯನ್ನು ಮೀರುವವೆನ್ನಬಹುದು. ತುಕಾರಾಮರು ಅಭಂಗವೊಂದರಲ್ಲಿ ತಮ್ಮ ಅನುಭವವನ್ನು ಈ ರೀತಿ ಅರುಹಿರುವರು: "ಭಕ್ತನು ಲಗಿ ಭಗವಂತನನ್ನು ಹಾಡಿಹರಿಸಿದರೆ, ನಾರಾಯಣನು ಅವನೆದುರು ನಿಂತುಬಿಡುವನು. ಇವನು ಕುಳಿತು ಹಾಡಿದರೆ, ಅವನು ಆನಂದದಿಂದ ತಲೆದೂಗುವನು. ಭಕ್ತನು ನಿಂತು ಭಗವಂತನ ನಾಮವನ್ನು ನೆನೆದರೆ, ಗೋವಿಂದನು ಬಗೆಬಗೆಯಾಗಿ ಕುಣಿಯಲು ಮೊದಲು ಮಾಡುವನು. ಭಕ್ತನು ನಡೆಯುತ್ತ ಆತನ ನಾಮವನ್ನು ಉಚ್ಚರಿಸಿದರೆ, ಅವನು ಭಕ್ತನ ಹಿಂದೆ ಮುಂದೆ ಬಂದು ನಿಲ್ಲುವನು." "ಭಗವಂತನು ನಾಮಸಂಕೀರ್ತನ ವನ್ನು ಅತಿಯಾಗಿ ಪ್ರೀತಿಸುವನು. ಆದುದರಿಂದ ತನ್ನ ನಾಮವನ್ನು ನೆನೆವ ಭಕ್ತನ ನೆರವಿಗಾಗಿ ಅವನು ಧಾವಿಸುವನು." ನಾಮದೇವರು ಕೂಡ ತಮ್ಮ ಅಭಂಗ ವೊಂದರಲ್ಲಿ ಸುಮಾರಾಗಿ ಇವೇ ವಿಚಾರಗಳನ್ನು ಉಸುರಿರುವರು: ಅವರದರಲ್ಲಿ ಮುಂದಿನ ವಿಚಾರವೊಂದನ್ನು ಮಾತ್ರ ಹೆಚ್ಚಾಗಿ ಅರುಹಿರುವರು: "ಭಕ್ತನು ನಿಂತು, ಭಕ್ತಿಭಾವದಿಂದ ನಾಮಸಂಕೀರ್ತನ ಮಾಡಿದೆನೆಂದರೆ, ಭಗವಂತನು ಆತನೊಡನೆ ನಲಿದು ಕುಣಿಯತೊಡಗುವನು." ಈ ಎಲ್ಲ ಪದವಿನ್ಯಾಸಗಳಲ್ಲಿ ಭಕ್ತನು ನಿಂತು ಹಾಡುವಾಗ, ಭಗವಂತನು ಆನಂದದಿಂದ ಕುಣಿಯುವನು ಎಂಬ ಮಾತು ಸಮಾನವಾದುದು. ಉಳಿದ ವಿಷಯದಲ್ಲಿ ಅಲ್ಪಸ್ವಲ್ಪ ಭಿನ್ನತೆಯು ಇರುವುದುಂಟು. ಈ ಸಂತರ ಬಣ್ಣನೆಯಲ್ಲಿಯ ಏಕರೂಪತೆಯು ಈ ಅನುಭವದ ಸಾರ್ವತ್ರಿಕತೆ ಯನ್ನು ಹಾಗೂ ಇದು ಉಚ್ಚತಮವಿರುವುದು ಎಂಬುದನ್ನು ಸಿದ್ಧಗೊಳಿಸುವುದು. ಇವೆಲ್ಲವುಗಳನ್ನು ಮೀರಿದ ಇನ್ನೊಂದು ಪರತಮ ಅನುಭವವಿರುವುದು. ಅದರಲ್ಲಿ ಭಕ್ತನು ಅಲೆಯುತ್ತಿದ್ದರೂ, ಸುತ್ತಲು ಪ್ರದಕ್ಷಿಣೆಯನ್ನು ಹಾಕುತ್ತಿದ್ದರೂ ಪರಮಾತ್ಮನು ಅಚಲನಾಗಿಯೆ ಇರುವನು.

'ಕಣ್ಣಾರೆ ಕಂಡೆವು' ಎಂಬ ಮಹಿಪತಿರಾಯರ ಮುಂದಿನ ಪದದಲ್ಲಿ, "ನಾವು ಅಂತರಂಗದಲ್ಲಿ ಚಿನ್ಮಯರೂಪವನ್ನು ಕಣ್ಣಾರೆ ಕಂಡೆವು" ಎಂದು ಅವರು ಹೇಳುವರು. ಇದರಲ್ಲಿ ಪರಬ್ರಹ್ಮನ ನಿರ್ಗುಣರೂಪದ ಬಣ್ಣನೆಯು ನಪುಂಸಕ ಲಿಂಗದಲ್ಲಿ ಮಾಡಲಾಗಿದೆ. ರಾಯರು ಅದನ್ನು ಈ ರೀತಿ ಬಣ್ಣಿಸಿರುವರು: "ಚಿನ್ಮಯ ರೂಪವು ಕಣ್ಣಿಗೆ ಕಣ್ಣಾಗಿ ತೋರುವದು; ಅದು ಕಣ್ಣಿನಲ್ಲಿರುವುದು, ಆದರೆ ಕಾಣಿಸಿ ಕೊಳ್ಳುದು. ಇಂಥ ಕಣ್ಣಿನ ಕಾಣ್ಕೆಯು ಜಾಣರಿಗೆ ಪುಣ್ಯಗೈಸುವುದು." ನಿಜವಾಗಿ ಹಿಂದಿನ ಪುಣ್ಯಸಂಚಯದಿಂದಲೇ ಈ ಕಣ್ಣು ಕಾಣುವುದುಂಟು. ಆದರೆ ಅದೊಮ್ಮೆ ಕಾಣಿಸಿತೆಂದರೆ, ಹೆಚ್ಚಿನ ಪುಣ್ಯವನ್ನು ನೀಡುವುದುಂಟು. ಭಕ್ತನಿಗೆ ಭಗವಂತನು ಚಕ್ರಬಡ್ಡಿಯಿಂದ ಪಾರಿತೋಷಕವನ್ನು ಸಲ್ಲಿಸುವಂತೆ ಕಾಣುವುದು. 'ಕಣ್ಣಿನೊಳು ಕಣ್ಣು ಕಂಡೆ' ಎಂಬ ಪದದಲ್ಲಿ ಬೇರೊಬ್ಬ ಕನ್ನಡ ಅನುಭಾವಿಗಳು, ಈ ಕಣ್ಣಿನ

ನೆರವಿನಿಂದ ತಾವು ಕಂಡ, ಸಾಮಾನ್ಯ ಕಣ್ಣಿನಿಂದ ಕಾಣಬಾರದ ಅನೇಕ ಪಾರಮಾರ್ಥಿಕ ವಸ್ತುಗಳನ್ನು ಬಣ್ಣಿಸಿರುವರು. ಇದಾಯಿತು ದರ್ಶನದ ವಿಷಯ ಇನ್ನು ಶ್ರವಣದ ವಿಷಯವನ್ನು ರಾಯರು ಈ ಬಗೆಯಾಗಿ ಅರುಹಿರುವರು: "ಈ ಚಿನ್ಮಯವು ಕೇಳಿಕೆಯಲ್ಲಿರುವುದು. ಆದರೆ ಅದು ಕೇಳಿಸಗೊಡದು-ಕೇಳಲು ಆಸ್ಪದ, ಅವಕಾಶ ಕೊಡದು." "ಅದು ಕೇಳಿಕೆಯ ವಿಷಯವೇ ಆಗಿರುವದೆಂದಲ್ಲ; ಕೇಳಿಕೆಯ ಪ್ರಕ್ರಿಯೆಯೇ ಕೇಳಿಕೆಯೆ ತಾನಾಗಿರುವುದು" ಮತ್ತು ಅದರ ಫಲವಾಗಿ, ನಾವದನ್ನು ಅವಧಾನಪೂರ್ವಕವಾಗಿ, ಕಿವಿಗೊಟ್ಟು ಕೇಳಲು ಅದು ಘೇಳೆನಿಸುತ ಘೋಷಗೈಯುವದು" ಎಂದು ಕವಿಯು ಹೇಳುವನು. ಈ ಸಂದರ್ಭದಲ್ಲಿ ಒಂದು ಮಾತು ನನ್ನ ಜ್ಞಾಪಕಕ್ಕೆ ಚೆನ್ನಾಗಿ ಬರುವುದುಂಟು. ಸುಮಾರು ಕಾಲು ಶತಕದ ಪೂರ್ವದಲ್ಲಿ ನಾನು ಕೊಲ್ಲಾಪುರದ ನೆರೆಯಲ್ಲಿರುವ ಶ್ರೀ ಕಾಡಸಿದ್ಧೇಶ್ವರರ ಮಠಕ್ಕೆ ಹೋಗಿದ್ದೆ. ಅಲ್ಲಿ ಬೇರೆ ಬೇರೆ ನಾದಗುಣದ ಶ್ರುತಿಯ ಮಟ್ಟದ ಹಾಗೂ ವಿವಿಧ ಅನುರಣವುಳ್ಳ ಅನೇಕ ಗಂಟೆಗಳ ಸಮೂಹವು ಒಂದೆಡೆಯಲ್ಲಿಯೆ ಕಟ್ಟಲಾಗಿದ್ದಿತು. ಅವುಗಳಲ್ಲಿಯ ಒಂದು ಗಂಟೆಯನ್ನು ಬಾರಿಸಿದ ಕೂಡಲೆ, ಇಡಿ ಗುಂಪೇ ಬಾರಿಸುತ್ತಿದ್ದಿತು ಮತ್ತು ಅವುಗಳಿಂದ 'ಘೇಳ್' ಎಂಬ ನಾದವು ಹೊರ ಹೊಮ್ಮುತ್ತಿದ್ದಿತು. ಇಂಥ ಘೇಳೆನಿಸುವ ಘೋಷವನ್ನು ಮಹಿಪತಿಯವರು ಇಲ್ಲಿ ಅರುಹಿರುವರು. ಇಂಥ ಸಮ್ಮಿಲಿತ ನಾದದ ಅನುಭವವು ಕೆಲ ಭಾಗ್ಯವಂತ ಸಾಧಕರಿಗಷ್ಟೇ ಲಭಿಸುವುದು. ಈ ಕಾಣ್ಕೆ-ಕೇಳಿಕೆಗಳ ತರುವಾಯ ಮಹಿಪತಿ ರಾಯರು ಚಿನ್ಮಯರೂಪ ದರ್ಶನ'ವೆಂದು ಯಥಾರ್ಥವಾಗಿ ಹೆಸರಿಸಿರುವ ಅನುಭವವನು ನಾವು ಕಾಣುವೆವು. "ಚಿನ್ಮಯವು ಮೂಡುತ, ಆಡುತ, ಅಡಗುತಲಿ ಹುದ'ಂತೆ. ಪರಮಾತ್ಮನು ಮಗುವಿನಂತೆ ಆಡುತ, ಅಡಗುತ ಬಂದು, ಮೊದಲು ಸ್ವಲ್ಪ ಕಾಣಿಸುವ, ಮತ್ತು ಕೊನೆಗೆ ತನ್ನ ಪೂರ್ಣರೂಪವನ್ನು ತೋರಿಸುವನಂತೆ. ಇದು ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿಯ ಅನೇಕ ಸಂತರ ಅನುಭವ ವಿರುವುದು. ಉದಾಹರಣಾರ್ಥವಾಗಿ; ತುಕಾರಾಮರು ಇಂಥ ಅನುಭವವನ್ನು ಪಡೆದಿದ್ದರು. 'ಭಗವಂತನು ಬಾಲರೂಪದಿಂದ ಅಂಬೆಗಾಲಿಕ್ಕುತ್ತ ನನ್ನೆಡೆ ಬಂದನು. (ನ ಸಾವರಿತ ಆಲೀ। ಬಾಲವೇಶೇ ಜವಳೀ) ಎಂದು ಅವರದನ್ನು ಬಣ್ಣಿಸುವರು. ಪುರಂದರದಾಸರು ಕೂಡ ತಮ್ಮ 'ಕೂಸನು ಕಂಡೀರಾ!' ಎಂಬ ಪ್ರಸಿದ್ಧ ಪದದಲ್ಲಿ ಪರಮಾತ್ಮನ ಕೂಸಿನ ರೂಪವನ್ನು ಅರುಹಿರುವರು. ಜತ್ತಿಯ ಶಿವಲಿಂಗವ್ವ ಎಂಬ ಶರಣೆಯರು ತಮ್ಮ 'ಮಗಾ ಹುಟ್ಟಿದವ್ವಾ' ಎಂಬ ಅಂದವಾದ ಪದದಲ್ಲಿ ಇಂಥ ಅನುಭವವನ್ನು ಬಣ್ಣಿಸಿರುವರು. ಅದನ್ನೂ ನಾವು ಮುಂದೆ ವಿವರಿಸಲಿರುವೆವು. ಪ್ರಸ್ತುತ ಪದದಲ್ಲಿ ಮಹಿಪತಿರಾಯರು ಅದನ್ನು ಈ ರೀತಿ ಬಣ್ಣಿಸಿರುವರು: "ಪರಮಾತ್ಮನ ರೂಪವು ಮೂಡುವುದು, ತರುವಾಯ ಅದು ಅಡಗುವುದು, ಮತ್ತು

ಕೆಲಕಾಲ ಪೂರ್ತಿಯಾಗಿ ಅದೃಶ್ಯವಾಗುವುದು. ಭಗವಂತನು ಸಾಧಕರೆದುರು ನಡೆಯಿಸುವ ಈ ಬಗೆಯ ಆಟವನ್ನು ಜ್ಞಾನೇಶ್ವರರು ಕೂಡ ಅರುಹಿರುವರು. ಈ ಅನುಭವಗಳನ್ನೆಲ್ಲ ಪಡೆದ ತರುವಾಯ, ಮಹಿಪತಿರಾಯರು ಒಂದು ವಿಶೇಷವಾದ ಅವಸ್ಥೆಯನ್ನು ಬಣ್ಣಿಸಿರುವರು. ಅದನ್ನು ನಾವು ಅನುಭಾವದ 'ವಿರೋಧಾಭಾಸ' ವೆಂದು ಕರೆಯಬಹುದು. ನೀತಿಶಾಸ್ತ್ರದ ವಿದ್ಯಾರ್ಥಿಗಳು ಮುಂದೆ ಕಾಣಿಸಿದ 'ಭೌತಿಕ ಸುಖವಾದದ ವಿರೋಧಾಭಾಸವನ್ನು' ಅರಿವರು: 'ನೀವು ಸುಖವನ್ನು ಅರಸಿದರೆ ಅದನ್ನು ಎಂದೂ ಪಡೆಯಲಿರಿಯಿರಿ; ಆದರೆ ನೀವದನ್ನು ಮರೆತರೆ ನಿಮಗದು ದೊರೆಯುವುದು.' ಅದೇ ಮೇರೆಗೆ ನೀವು ಪರಮಾತ್ಮನನ್ನು ಕಾಣಲು ಯತ್ನಿಸಿದರೆ ನಿಗಮವನು ಮರೆಯಾಗುವನು. ಆದರೆ ನೀವು ಅವನಿಂದ ನಿಮ್ಮ ಮುಖವನ್ನು ಬೇರೆಡೆ ತಿರುವಿದಿರೆಂದರೆ, ನೀವು ಮುಖವನ್ನು ತಿರುಗಿಸಿದ ದಿಶೆಯಲ್ಲಿಯೆ ಅವನು ನಿಮ್ಮೆದುರು ಕಾಣಿಸಿಕೊಳ್ಳುವನು. ಶ್ರೀಕೃಷ್ಣನು ಅರ್ಜುನನೆದುರು ಆ ರೀತಿ ನಿಂತು ದನ್ನು ಜ್ಞಾನೇಶ್ವರಿಯ ಹನ್ನೊಂದನೆಯ ಅಧ್ಯಾಯದಲ್ಲಿ ಅಂದವಾಗಿ ಬಣ್ಣಿಸಲಾಗಿ ರುವುದು. 'ನೀವು ಪರಮಾತ್ಮನನ್ನು ಮುಟ್ಟಲು ಹೋದರೆ ಅವನು ತನ್ನನ್ನು ಮುಟ್ಟಗೊಡನು' 'ಹಿಡಿದೇನೆಂದರೆ ಕೈಗೂಡದು' ಎಂದು ರಾಯರು ಹೇಳಿರುವರು. ರಾಮದಾಸರು ಕೂಡ 'ಧರೂ ಜಾತಾ ಧರಿತಾನಯೇ' 'ಹಿಡಿಯ ಹೋದರೆ ಹಿಡಿಯ ಬಾರದು' ಎಂದು ಇಂಥ ಅನುಭವವನ್ನು ಬಣ್ಣಿಸಿರುವರು. ಪರಮಾತ್ಮನು 'ತನ್ನ ಸುಳಿವನ್ನು–ಸೂಕ್ಷ್ಮ ಚಲನವನ್ನು ಸಾಧಕರಿಗೆ ತಿಳಿಯಗೊಡುವುದಿಲ್ಲ,' ಎಂಬುದು ಮಹಿಪತಿಯವರ ಹೇಳಿಕೆ. ಭಗವಂತನ ಭಕ್ತರಿಗೆ ಈ 'ಸುಳುವು' ತುಂಬ ಪರಿಚಿತ ವಿಷಯ. ಅವರು ತಮ್ಮ ಭಕ್ತಿಯುತ ಸಾಧಕ ಜೀವನವನ್ನು ಬಾಳುವಾಗ, ಭಗವಂತನ ಕೇಳಬರದ ಕಾಣಬರದ ಸುಳುವು ಒಮ್ಮೆಲೆ ಅನುಭವಕ್ಕೆ ಬಂದು, ಅವರು ಸಂತತವಾಗಿ ಪಡೆಯಬಯಸಿದ ಫಲವನ್ನು ಅವರಿಗದು ನೀಡುವುದುಂಟು. ರಾಯರು ಮತ್ತೂ ಹೇಳುವದೇನೆಂದರೆ: "ನೀವದನ್ನು ನೋಡಹೋದರೆ ಕಾಣಲರಿ ಯರಿ; ಹಿಡಿಯ ಹೋದರೆ ಮುಟ್ಟಲರಿಯಿರಿ; ಆದರೆ ನೀವದನ್ನು ನೋಡಲು ಹೋಗದಿದ್ದರೆ, ಅದು ತನ್ನ ಮೂಲರೂಪದಲ್ಲಿ ಪೂರ್ತಿಯಾಗಿ ಹೊಳೆಯುವುದು. ಅದು ತನ್ನ ಮೂಲ ವೈಭವದಿಂದ ಮೆರೆಯುವುದು– ತನ್ನ ನೆಲೆ–ನಿಭದೋರುತ ...ಭಾಸುದು." "ಮೂಲ ವೈಭವದಿಂದ" ಎಂಬ ಪದವಿನ್ಯಾಸಕ್ಕಿಂತ ಹೆಚ್ಚು ಒಳ್ಳೆಯ ರೀತಿಯಿಂದ ನೀವದನ್ನು ಬಣ್ಣಿಸಲರಿಯಿರಿ. "ಅದನ್ನು ಕಾಣಲು ಬಾರದು, ಕೇಳಲು ಬಾರದು, ಮುಟ್ಟಲು ಬಾರದು ಇಲ್ಲವೆ ಅದರ ಸುಳಿವನ್ನು ಅರಿಯಲು ಬಾರದು". ಕೊನೆಯದಾಗಿ, ಮಹಿಪತಿಯವರು ಹೇಳುವುದೇನೆಂದರೆ: "ಅನುಭಾವಿಯು ಸಂತರ ಸಂಗದಲ್ಲಿರುವಾಗ, ಈ ಭಗವಂತನ ರೂಪವು ಅವನೆದುರು ಸ್ಥಿರವಾಗಿ ನಿಲ್ಲುವುದು. ಅವನು ಏಕಾಕಿಯಾಗಿರುವಾಗ, ಅವನ ಮನಸ್ಸು ಅಷ್ಟೊಂದು

ಸಮಭಾವದಲ್ಲಿ, ಸಮತೂಕದಲ್ಲಿ ಇರಲರಿಯದು. ಆದರೆ ಅದೇ ಅವನು ಸಂತರ ಸಂಗದಲ್ಲಿರುವಾಗ, ಅದು ಪೂರ್ತಿಯಾಗಿ ಸ್ಥಿರ, ಅಲಿಪ್ತ, ಅಚಲ, ಸಮತೋಲ ಉಳಿಯುವುದು. ಆದುದರಿಂದ ಭಗವಂತನು ಅವನೆದುರು ಸ್ಥಿರವಾಗಿ ನಿಲ್ಲುವನು. ಅದೇ ಶ್ರೇಷ್ಠತಮ ಅನುಭವವೆಂದು ಬಗೆಯಲು ಅಡ್ಡಿಯಿಲ್ಲ. ಭಗವಂತನನ್ನು ಹಾಡಿ ಹರಸುವ ಭಕ್ತರ ಸಹವಾಸದಲ್ಲಿ, ಅವನು ನಿಶ್ಚಿತವಾಗಿ ದೊರೆಯುವನು, ಪೂರ್ತಿಯಾಗಿ ಕಾಣುವನು, ಎಂದು ಭಾಗವತದಲ್ಲಿಯೂ ಹೇಳಲಾಗಿರುವದು.

ಇನ್ನು ನಾವು ಈ ಗುಂಪಿನಲ್ಲಿಯ ಕೊನೆಯ ಪದವಾದ 'ಮಗಾ ಹುಟ್ಟಿದವ್ವಾ' ಎಂಬುದನ್ನು ವಿವರಿಸಲು ಪ್ರಾರಂಭಿಸುವೆವು. ಈ ಪದವನ್ನು ಉಮದಿ ಮಹಾರಾಜರವರ ಪ್ರಧಾನ ಹಾಗೂ ಪ್ರಗತ ಶಿಷ್ಯೆಯರಾದ ಶಿವಲಿಂಗವ್ವನವರು ರಚಿಸಿರುವರು. ತುಂಬುಜವ್ವನದಲ್ಲಿ ಅವರು ತಮ್ಮ ಮಗನನ್ನು ಕಳೆದುಕೊಂಡರು; ಮತ್ತು ತುಂಬ ಉತ್ಸಾಹದಿಂದ ಪಾರಮಾರ್ಥಿಕ ಸಾಧನದಲ್ಲಿ ತೊಡಗಿದರು. ಪರಮಾತ್ಮನಲ್ಲಿಯ ಅವರ ಉತ್ಕಟ ಭಕ್ತಿಯ ಫಲವಾಗಿ, ಅವರಿಗೆ ನೂತನ ಪಾರಮಾರ್ಥಿಕ ಮಗನು ಜನಿಸಿದನು. ಅಂದರೆ ಅವರಿಗೆ ಪಾರಮಾರ್ಥಿಕ ಮಗುವಿನ ದರ್ಶನವಾಯಿತು. ಅದನ್ನವರು ಈ ಪದದಲ್ಲಿ ಬಣ್ಣಿಸಿರುವರು. ರಾಜಸ್ಥಾನದ ಹಿರಿಯ ಸಂತ ಮಹಿಳೆಯರಾದ ಮೀರಾಬಾಯಿಯವರು ಕೂಡ ತಮ್ಮ ಇಬ್ಬರು ಮಕ್ಕಳನ್ನು ಕಳೆದುಕೊಂಡಿದ್ದರು. ಅವರಿಗೂ ಕೂಡ ಇಂಥ ಅನುಭವವು ಲಭಿಸಿರಬೇಕು. ಅದು ಅವರನ್ನು ಪ್ರಗತಿಯುತ ಪಾರಮಾರ್ಥಿಕ ಜೀವನದಲ್ಲಿ ಸ್ಥಿರವಾಗಿ ನಿಲ್ಲಿಸಿರಬೇಕು.

ಶಿವಲಿಂಗವ್ವನವರು ಪರಮಾನಂದಭರಿತರಾಗಿ ಈ ರೀತಿ ಅರುಹುವರು: "ಎನಗೊಬ್ಬ ಮಗಾ ಹುಟ್ಟಿದವ್ವಾ! ಅವನು ನನ್ನ ಸ್ವಂತದ ಬಗೆಯ ಹಾಗೂ ಅದರ ಫಲವಾಗಿ ಪ್ರಪಂಚದ ಬಗೆಯ ಮಾಯೆಯನ್ನು-ಆಸಕ್ತಿಯನ್ನು ಬಿಡಿಸಿದನು. ಅವನು ನನ್ನ ಮುಂದಿನ ಜನ್ಮಗಳನ್ನೆಲ್ಲ ಅಳಿಸಿದನು. ಅವನೊಬ್ಬ ಮಾಯಿಕನು, ಮೋಸಗಾರನು. ಒಂಬತ್ತು ತಿಂಗಳು ನನ್ನ ದೇಹಕ್ಕೆಲ್ಲ ನೋವನ್ನು ಕೊಟ್ಟು, ಅವನು ನ್ನನ ದೇಹವನ್ನು ಸ್ಪರ್ಶಿಸದೆ ಹುಟ್ಟಿದನು. ಅವನು ಮಾಯಾತೀತನಿರುವನು. ಅವನು ಹುಟ್ಟಿದಾಗ, ನನ್ನ ಮನೆಯೆಲ್ಲ ಬೆಳಕಿನಿಂದ ತುಂಬಿಹೋಯಿತು." ಕಂಸನು ಕಳಿಸಿದ ಸೆರೆಮನೆಯಲ್ಲಿ ಕೃಷ್ಣನು ಜನಿಸಿದಾಗ ದೇವಕಿಯೂ ಕೂಡ ಇದೇ ಬಗೆಯ ಅನುಭವವನ್ನು ಪಡೆದಳು. ಅಲ್ಲಮಪ್ರಭುವಿನ ಜನನವನ್ನು ಕುರಿತು ಇದೇ ಬಗೆಯ ಕಥೆಯು ಹೇಳಲಾಗುವುದು. ಅವನೊಂದು ಸಗುಣನಲ್ಲದ ಇಲ್ಲವೆ ನಿರ್ಗುಣನಲ್ಲದ ಮಗುವಾಗಿದ್ದನಂತೆ. ಪಾರಮಾರ್ಥಿಕ ಕೂಸಿನ ಕಲ್ಪನೆಯು ಕನ್ನಡ ಅನುಭಾವ ಸಾಹಿತ್ಯದಲ್ಲಿ ಮಹತ್ವದ ಪಾತ್ರವಹಿಸಿರುವದೆಂಬುದು ಪುರಂದರ 'ಕೂಸನು

ಕಂಡೀರಾ' ಎಂಬ ಪದದಿಂದ ಸ್ಪಷ್ಟವಾಗುವಂತಿದೆ. ಕವಯತ್ರಿಯವರು ಮತ್ತೂ ಉಸುರುವದೇನೆಂದರೆ: 'ಮಗಾ ಹುಟ್ಟಿದಾಗ ನಾನು ಬಗೆಬಗೆಯ ಬೆಳಕು ಬಣ್ಣಗಳ ಅನಂತ ರೂಪಗಳನ್ನು ಕಂಡೆ; ರಾಳ ಜ್ಯೋತಿಗಳನ್ನು ಕಂಡೆ; ಹೂವ ಬಾಣಗಳನ್ನು ಕಂಡೆ, ನಾನು ಭೀಕರವಾದ ನೋವಿನಲ್ಲಿ ಮುಳುಗಿದಾಗ, ನನಗೊಬ್ಬ ನಿಜವಾದ ಮಗನೇ ಹುಟ್ಟಿದನು. ಅವನಿಗಾಗಿ ನಾನೊಂದು ಪಂಚವರ್ಣದ ಗಟ್ಟಿಯಾದ ತೊಟ್ಟಿಲನ್ನು ತಯಾರಿಸಿದೆ. ನಾನದನ್ನು ಮುಟ್ಟಿ, ತೂಗಿ, ಅದನ್ನು ಮೇಲಕ್ಕೆ ಆಕಾಶದಲ್ಲಿ ಕಳುಹಿದೆ. ಅವನಿಗೊಂದು ಹೆಸರನ್ನಿಟ್ಟು, ಅವನಿಗಾಗಿ ಜೋಗುಳ ಪದಗಳನ್ನು ಹಾಡಿದೆ. ಇದೆಲ್ಲ ಅಗಾಧ ಮಹಿಮೆಯ ಸದ್ಗುರುಗಳಾದ ನಿಂಬರಗಿ ಮಹಾರಾಜರವರ ಕರುಣದ ಫಲವೇ ಸರಿ. ಅವರ ಪಾದಗಳಿಗೆ ಅನನ್ಯಭಾವದಿಂದ ಎರಗಿ, ಅವರ ಕರುಣದಿಂದ ನಾನೀ ಮಗನನ್ನೂ ಪಡೆದೆ." ಗುಲಾಲ ಎಂಬ ಹಿಂದಿ ಸಂತ ಕವಿಯು ತನ್ನ 'ತತ್ತ ಹಿಂದೋಲವಾ' ಎಂಬ ಕವನದಲ್ಲಿ ತನ್ನ ಪರಮಾನಂದಜನಿತ ಉದ್ಗಾರಗಳನ್ನು ಇದೇ ಬಗೆಯಾಗಿ ಉಸುರಿರುವನು. ತನ್ನ ಆತ್ಮನನ್ನು ಪರತತ್ವದ ತೊಟ್ಟಿಲಲ್ಲಿಯ ಕೂಸೆಂದು ಬಣ್ಣಿಸರುವನು. ಆ ತೊಟ್ಟಿಲು ಮಾಯಿಕವಿದ್ದಿತಂತೆ. ಅದಕ್ಕೆ ಕಂಬಗಳಿರಲಿಲಲ್ಲ, ಹಗ್ಗಗಳಿರಲಿಲ್ಲವಂತೆ. ಅದಕ್ಕೆ ಕಟ್ಟಿದ ಗಂಟೆಗಳು ಸಂತತವಾಗಿ ಬಾರಿಸಿ ಆತ್ಮನನ್ನು ಸಮಾಧಿಯಲ್ಲಿ ಮಲಗಿಸುವವಂತೆ. ಸದ್ಗುರುಗಳು ಅದನ್ನು ತೂಗುವರು; ಮತ್ತು ಅದು ಜಗತ್ತನ್ನು ಪೂರ್ತಿಯಾಗಿ ತೊರೆದು ಆಗಸದಲ್ಲಿ ಹಾರುವುದು. ಹಾಗೂ ಪ್ರಿಯತಮನಾದ ಆತ್ಮನು ಜಗತ್ತಿನಿಂದ ಅಲಿಪ್ತನೂ, ಪೂರ್ತಿಯಾಗಿ ಅತೀತನೂ ಆಗಿಬಿಡುವನಂತೆ.

■■

ಪ್ರಕರಣ ಹತ್ತೊಂಬತ್ತು

ಆತ್ಮಾನುಭಾವದ ಪರಿಣಾಮಗಳು-(ಭಾಗ-೧)

ನಾವಿನ್ನು ಕನ್ನಡ ಸಂತರು ಶಕ್ತಿಯುತವಾದ ಶಬ್ದಗಳಿಂದ ಬಣ್ಣಿಸಿದ ಆತ್ಮಾನುಭವದ ವಿವಿಧ ಪರಿಣಾಮಗಳನ್ನು ವಿವರಿಸುವೆವು. ಪ್ರಸ್ತುತ ಪ್ರಕರಣದಲ್ಲಿ ನಾವು ಪೂರ್ಣತೆಯನ್ನು ಪಡೆದ ಅನುಭಾವಿಯ ಮೇಲಾಗುವ, ಆತ್ಮಸಾಕ್ಷಾತ್ಕಾರದ, ಮುಕ್ತಿದಾಯಕ, ವಿಶ್ವಿಷಯಕ ಹಾಗೂ ಉನ್ಮಾದಕಾರಕ ಪರಿಣಾಮಗಳನ್ನೂ, ಮುಂದಿನ ಪ್ರಕರಣದಲ್ಲಿ ಅದರ ನೈತಿಕ, ಆನಂದದಾಯಕ ಹಾಗೂ ದೇವರಾಜ್ಯ ವಿಷಯಕ ಪರಿಣಾಮಗಳನ್ನೂ ವಿಶದಗೊಳಿಸುವೆವು.

ಆತ್ಮಸಾಕ್ಷಾತ್ಕಾರದ ಮುಕ್ತಿದಾಯಕ, ವಿಶ್ವವಿಷಯಕ ಹಾಗೂ ಉನ್ಮಾದಕಾರಕ ಪರಿಣಾಮಗಳ ವಿಷಯವನ್ನು ನಾವು ಪರೀಕ್ಷಿಸಲಿರುವ ಮುಂದಿನ ಏಳು ಪದಗಳ ನೆರವಿನಿಂದ ಅರಿಯಬಹುದು, ಅರುಹಬಹುದು. ಮೊದಲಿನ ಎರಡು ಪದಗಳು, ಕನ್ನಡ ಸಂತರು ಒಳ್ಳೆಯ ವಾಕ್ಪಟುತ್ವದಿಂದ ಅರುಹುವ ಜೀವನ್ಮುಕ್ತಿರೂಪಿಯಾದ ಮುಕ್ತಿದಾಯಕ ಪರಿಣಾಮಗಳನ್ನು ಒಳಗೊಂಡಿರುವವು. ಮುಂದಿನ ಎರಡು ಪದಗಳು, ವಿಶ್ವದ ಎಲ್ಲ ಅಂಗಗಳಲ್ಲಿ ಕಾಣುವ ಪರಮಾತ್ಮನ ದರ್ಶನರೂಪಿಯಾದ, ಆತ್ಮಸಾಕ್ಷಾತ್ಕಾರದ ವಿಶ್ವವಿಷಯಕ ಪರಿಣಾಮಗಳನ್ನು ಅರುಹುವವು. ಕೊನೆಯ ಮೂರು ಪದಗಳು, ದೈವೀಉನ್ಮಾದ ರೂಪಿಯಾದ ಉನ್ಮಾದಕಾರಕ ಪರಿಣಾಮ ಗಳನ್ನು ತುಂಬ ಅಂದವಾಗಿ ಚಿತ್ರಿಸುವವು. ಇಂಥ ಉನ್ಮಾದವು ಪರಮಾತ್ಮನ ನಾಮ-ಸುಧೆಯನ್ನು ಸೇವಿಸಿದ ಮೂಲಕ ಉಂಟಾಗಿ, ಅನುಭಾವಿಯನ್ನು ಪರಮಾನಂದದಲ್ಲಿ ಮುಳುಗಿಸಿಬಿಡುವುದು; ಮತ್ತು ಆತನ ಅನುಯಾಯಿಗಳನ್ನು ಪ್ರಪಂಚದ ಕೊಳ್ಳದಿಂದ ಮೇಲಕ್ಕೆತ್ತುವುದು.

ಮೊದಲು ನಾವು ಆತ್ಮಜ್ಞಾನಿಯ ಪುನರ್ಜನ್ಮ-ವಿಮುಕ್ತಿಯ ಉತ್ಕೃಷ್ಟವಾದ ವರ್ಣನೆಯೆಡೆ ಸಾಗುವೆವು. ಅದು ನಮಗೆ ಕೂಡಲೂರೇಶರ 'ಗುರುವೇ ನಿಮ್ಮಾಜ್ಞೆಯನು' ಎಂಬ ಪದದಲ್ಲಿ ಕಾಣಬರುವುದು. "ಜಾತಿಮತಗಳ ನಿರ್ಬಂಧ ಗಳನ್ನು ಬದಿಗೊತ್ತಿ, ಹಾಗೂ ಜನನ-ಮರಣದ ಚಕ್ರವನ್ನು ತಡೆದು ನಿಲ್ಲಿಸಿ, ಸಂತರು ಪರಮಾತ್ಮನೊಡನೆ ಏಕತೆಯನ್ನು ಪಡೆಯುವರು; ಮತ್ತು ಮಾನವತೆಯ ಕಲ್ಯಾಣವನ್ನು ಸಾಧಿಸುವರು." ಎಂದು ಕವಿಗಳು ಹೇಳುವರು. ಪ್ರಸ್ತುತ ಕವನದಲ್ಲಿ

ಅರುಹಲಾಗಿರುವ ಆತ್ಮಜ್ಞಾನಿಯ ಪುನರ್ಜನ್ಮ-ವಿಮುಕ್ತಿಯ ಈ ಕಲ್ಪನೆಯು ಬಾದರಾಯಣರ 'ಅನಾವೃತ್ತಿಃ ಶಬ್ದಾತ್।' (ivೡ-೨೨). 'ಶ್ರುತಿಯ ಅಭಿಮತದ ಮೇರೆಗೆ ಅವರ ಮರಳದಿರುವಿಕೆ' ಎಂಬ ಮೇಲಿಂದ ಮೇಲೆ ಉದಹರಿಸಲಾದ ವಚನವನ್ನು ತುಂಬ ಹೋಲುವುದುಂಟು. ಕೂಡಲೂರೇಶರಿಗೆ ಸಮಾನರಾದ ಗುಲಾಲ ಎಂಬ ಹಿಂದೀ ಸಂತರು, ಪರಮಾನಂದಾನುಭವದ ತರುವಾಯ 'ಅಬ ನಹೀ ಅವನಾ ಜಾವನಾ ಹೋ' 'ಇನ್ನು ಬರ ಹೋಗುವದು ಉಳಿಯಲಿಲ್ಲ' ಎಂಬ ವಚನವನ್ನು ಉಸುರಿರುವರು. ವಿಶ್ವಾತೀತ ಅವಸ್ಥೆಯನ್ನು ಮುಟ್ಟಿದ ಬಳಿಕ ಆತ್ಮನು ಮರಳಿ ಈ ಲೋಕಕ್ಕೆ ಬರುವುದಿಲ್ಲ. ಇದೇ ವಿಚಾರವು ಕಬೀರರ ಮುಂದಿನ ಪ್ರಸಿದ್ಧ ವಚನದಲ್ಲಿಯೂ ಪ್ರತಿಧ್ವನಿತವಾಗಿರುವುದು; 'ಅಮರ ಹೋಯ ಕಬಹೂಂ ನ ಮರೇಂ' 'ಅವನು ಅಮರನಾಗುವ; ಅವನೆಂದೂ ಸಾಯಲರಿಯ'.

ಸಂತರು ಈ ಜಗತ್ತಿಗೆ ಮರಳಿ ಬರುವುದಿಲ್ಲವೆಂಬುದನ್ನು ಕೂಡಲೂರೇಶರು ಕೆಲ ಉದಾಹರಣೆಗಳನ್ನು ಕೊಟ್ಟು ಅರುಹಲು ಪ್ರಾರಂಭಿಸಿರುವರು: ಮೊಸರು, ಬೆಣ್ಣೆ ಎಂಬ ಅವಸ್ಥೆಗಳೊಳಗಿಂದ ಹಾದು ಹಾಲೊಮ್ಮೆ ತುಪ್ಪವಾಯಿತೆಂದರೆ, ಅದು ಮರಳಿ ಎಂದಾದರೂ ಹಾಲಾಗಬಹುದೇ? ಅದೇ ಮೇರೆಗೆ, ಅನುಭಾವದ ಅಂತಿಮ ವಿಷಯವಾದ ತನ್ನ ಆತ್ಮನೊಡನೆ ಏಕರೂಪನಾದವನು ಮರಳಿ ಸಂಸಾರವನ್ನು ಅಪ್ಪಬಹುದೇ? ಅದರಲ್ಲಿ ಸಿಲಕಬಹುದೇ? ಪರ್ವತ ಪ್ರದೇಶದಲ್ಲಿ ಉಗಮ ಹೊಂದಿ ನದಿಯು ಒಮ್ಮೆ ಸಾಗರವನ್ನು ಸೇರಿತೆಂದರೆ, ಅದು ಮರಳಿ ತನ್ನ ಉಗಮದೆಡೆಗೆ ಹರಿಯಬಲ್ಲಿದೇ? ತನ್ನ ಶುದ್ಧ ಅಂತಿಮ ಸ್ವರೂಪವನ್ನು ಅರಿತವನ ಅವಸ್ಥೆಯು ಹಾಗೆಯೆ ಆಗುವುದು. ಅವನು ಈ ಪ್ರಪಂಚದಲ್ಲಿ ಬಾಳಬೇಕಾಗಿ ಬಂದರೆ, ಅವನ ಬಾಳುವ ರೀತಿಯು ಬೇರೆ ಸಾಮಾನ್ಯ ಜನರ ಬಗೆಗಿಂತ ತೀರ ಭಿನ್ನವಾದು ದಿರುವುದು. ಮುತ್ತು ನೀರಿನಲ್ಲಿ ಹುಟ್ಟಿರುವುದೇನೋ ನಿಜ. ಆದರೆ, ಅದೊಮ್ಮೆ ಮುತ್ತಿನ ರೂಪವನ್ನು ತಳೆಯಿತೆಂದರೆ, ಮರಳಿ ಅದು ತನ್ನ ನೀರಿನ ಮೂಲ ರೂಪವನ್ನು ತಳೆಯುವುದು ಎಂದಾದರೂ ಸಾಧ್ಯವಾಗಬಹುದೇ? ಅದೇ ರೀತಿ, ತನ್ನ ಮೂಲ ಪಾರಮಾರ್ಥಿಕ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡ ಮನುಜರು ಮರಳಿ ಎಂದೂ ಜನಿಸಲರಿಯನು. ಅವನು ಸದೈವ 'ಅತ್ಯಂತ ಆನಂದಪೂರ್ಣ'ನಿರುವನು. ಗರುಡನ ಮಂತ್ರವ ಕಲಿತಿರುವವನನ್ನು ಎಂದಾದ ರೊಮ್ಮೆ ಹಾವು ಕಚ್ಚಿತೆಂದರೆ, ಆ ಸರ್ಪದ ವಿಷವು ಆತನನ್ನೆಂದಾದರೂ ಬಾಧಿಸಬಲ್ಲುದೇ? ವಿಷಯಸುಖದ ಕೆಸರಿನಿಂದ ಅಲಿಪ್ತನಾಗಿರುವ ಶಿಷ್ಯನು ಸತ್ಕರ್ಮ-ದುಷ್ಕರ್ಮಗಳಿಂದ ಬಾಧಿತನಾಗ ಬಲ್ಲನೇ? ಅದೇ ಬಗೆಯಾಗಿ, ಜಾತಿಯ ಬಂಧನಗಳನ್ನು ಮೀರಿದವನು ಒಂದು ಜಾತಿಯಲ್ಲಿ ಹುಟ್ಟಿದ್ದರೂ ಅವನ ಮನಸ್ಸು ಜಾತಿಧರ್ಮಗಳ ವಿಚಾರದಿಂದ ಎಂದೂ ಕಲಕಾಗುವುದಿಲ್ಲ.

'ಪಾರಮಾರ್ಥಿಕ ಪ್ರಕಾಶ'ದೊಡನೆ ಏಕನಾದ ಸಂತನು ಐಹಿಕ ಸಂಗತಿಗಳನ್ನೆಲ್ಲ ತ್ಯಜಿಸುವನು ಮತ್ತು ಅನ್ಯರಿಗೆ ಪಾರಮಾರ್ಥಿಕ ಜೀವನದ ಕಾಣಿಕೆಯನ್ನು ದಯಪಾಲಿಸುವ 'ದಾತ'ನೆಂದು ಪ್ರಖ್ಯಾತನಾಗುವನು. 'ಅಮರತ್ವವು ವ್ಯಕ್ತಿಸಾಪೇಕ್ಷವೊ ಇಲ್ಲವೆ ವ್ಯಕ್ತಿನಿರಪೇಕ್ಷವೊ? ಎಂಬ ವಿಪರೀತ ಚರ್ಚೆಗೆ ಎಡೆಗೊಟ್ಟಿರುವ ಪ್ರಶ್ನೆಯನ್ನು ನಾವಿಲ್ಲಿ ವಿಚಾರಿಸುವ ಅಗತ್ಯವಿಲ್ಲ. ಅಂತೂ ಜ್ಞಾನೇಶ್ವರರ ಮಾತಿನಲ್ಲಿ ಈ ರೀತಿ ಹೇಳಿದರೆ ಸಲಕು; ಅಮರತ್ವವು ವ್ಯಾವಹಾರಿಕ ದೃಷ್ಟಿಯಿಂದ ಅಸತ್ಯವಿರುವುದು ಹಾಗೂ ಪಾರಮಾರ್ಥಿಕ ದೃಷ್ಟಿಯಿಂದ ಸತ್ಯವಾದುದಿರುವುದು. ಯಾಕಂದರೆ ಇದೇ ಜೀವನದಲ್ಲಿ ಪರಮಾತ್ಮನೊಡನೆ ಅವರು ಏಕತೆಯನ್ನು ಪಡೆದಿರುವರು.

'ಇದ್ದರಿರಲಿ ದೇಹ ಹೋದರೆ ಹೋಗಲಿ!' ಎಂಬ ಪದದಲ್ಲಿ ಗಿರಿಮಲ್ಲೇಶ್ವರರು ಪಾರಮಾರ್ಥಿಕ ಎತ್ತರದ ಉನ್ನತತಮ ಭೂಮಿಕೆಯ ಮೇಲಿಂದ, ಜೀವನ್ಮುಕ್ತಿಯನ್ನು ಬಣ್ಣಿಸಿರುವರು. ಅವರದರಲ್ಲಿ ಆತ್ಮಜ್ಞಾನಿಯ ವಿವಿಧ ಲಕ್ಷಣ ಗಳನ್ನು ಚಿತ್ರಿಸಿರುವರು. ಅವನ್ನು ಯೋಗಿಕ, ಮಾನಸ-ನೈತಿಕ, ಪರತತ್ವ ವಿಷಯಕ ಹಾಗೂ ಪಾರಮಾರ್ಥಿಕ ಎಂಬ ನಾಲ್ಕು ಶೀರ್ಷಿಕೆಗಳಲ್ಲಿ ವರ್ಗೀಕರಿಸಿ, ಅವುಗಳ ಸ್ವರೂಪವನ್ನು ಅರಿತುಕೊಳ್ಳಬಹುದು. ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡವನು, 'ದೇಹಭಾವವನ್ನು ಮೀರುವನು. ಅದರ ಉಳಿವು ಇಲ್ಲವೆ ಅಳಿವು ಇವುಗಳ ಬಗೆಗೆ ಅವನು ಉದಾಸೀನನಿರುವನು. ಯಾಕಂದರೆ, ಅವನು ಜೀವಿಸಿರುವಾಗಲೇ, ಹಾಗೂ ಜೀವಿಸಿದ್ದರೂ ಮುಕ್ತಿಯನ್ನು ಪಡೆದಿರುವನು.

ಇದರ ಯೋಗಿಕ ಸ್ವರೂಪವನ್ನು ಕುರಿತು, ಗಿರಿಮಲ್ಲೇಶರು ಈ ರೀತಿ ಕೇಳುವರು: "ಉಚ್ಚತಮ ಆಸನ ಮುದ್ರೆಗಳನ್ನು ಯಶಸ್ವಿಯಾಗಿ ಅಭ್ಯಸಿಸಿದ ಮೇಲೆ, ಗಂಗೆಯಮುನೆಗಳ ಇಡಾಪಿಂಗಳಗಳ ಸಂಗಮದಲ್ಲಿ ಮಿಂದು, ಧ್ಯಾನವೇ ಜೀವನದ ನಿತ್ಯನಿಯಮವಾದ ಮೇಲೆ, ದೇಹವು ಇದ್ದರೇನು? ಬಿದ್ದರೇನು? ಅದನ್ನಾರು ಲಕ್ಷಿಸುವರು?' ಇದೇ ಬಗೆಯಾಗಿ ಕಬೀರರು, ಆತ್ಮನು ಈ ಸಂಗಮದಲ್ಲಿ ಮೀಯುವುದನ್ನು ಅರುಹಿರುವರು. ಯೋಗಿಕ ಶರೀರ ಶಾಸ್ತ್ರಜ್ಞರು, ಗಂಗಾ-ಯಮುನಾ-ಸರಸ್ವತಿಯೆಂದು ಕರೆಯಲಾದ, ಇಡಾ-ಪಿಂಗಳಾ-ಸುಷುಮ್ನಾ ನಾಡಿಗಳ ಸಮಗಮವನ್ನು ಬಲ್ಲರು. ಈ ಮೂರೂ ನಾಡಿಗಳು ಮಿದುಳಿನ ಕೇಂದ್ರ ಕುಹರದಲ್ಲಿ ಕೂಡುವವು. ಅದರಲ್ಲಿ ಸಾಧಕನ ಚೇತನವು ಸ್ನಾನ ಮಾಡುವುದು; ಮತ್ತು ಅದಾದ ತರುವಾಯ, ಅವನು ದೇಹದ ವಿಚಾರವನ್ನೆಲ್ಲ ತೊರೆಯುವನು.

ಜೀವನ್ಮುಕ್ತಿಯ ಮಾನಸ-ನೈತಿಕ ಲಕ್ಷಣಗಳನ್ನು ಕವಿಯು ಈ ರೀತಿ ಅರುಹುವನು: ಸಂತರು ತಮ್ಮ ಮನಸ್ಸಿನ ಅಲೆದಾಟವನ್ನು ಯಶಸ್ವಿಯಾಗಿ ತಡೆದಿರುವ ಮೂಲಕ ಹಾಗೂ ಅವರ ಸಂಚಿತ ಕರ್ಮಗಳೆಲ್ಲ ಅಳಿದಿರುವ ಮೂಲಕ, ತಮ್ಮ ಶರೀರದ ಉಳಿವು-ಅಳುವುಗಳು ಬಗೆಗೆ ಅವರು ಉದಾಸೀನರಾಗುವರು. ಇಲ್ಲಿ ನಾವು ಗಿರಿಮಲ್ಲೇಶರ ವೇದಾಂತದರ್ಶನದ-ವಿಶೇಷತಃ ಕರ್ಮವಿಪಾಕ ಸಿದ್ಧಾಂತದ ಮೇಲಿನ ಪ್ರಭುತ್ವವನ್ನು ಕಾಣುವೆವು. ಕರ್ಮ-ಶಾಸನದಲ್ಲಿ ನಾವು ಎರಡು ಅಂಗಗಳನ್ನು ಕಾಣಬಹುದು. ಸರ್ವವ್ಯಾಪಕವಾದ ಕಾರ್ಯಕಾರಣ ಸಂಬಂಧವು ಅದರ ಒಂದಂಗ; ಹಾಗೂ ನೈತಿಕ ಮೂಲ್ಯಗಳ ರಕ್ಷಣೆಯು ಇನ್ನೊಂದು ಅಂಗ. ಈ ವಿಶ್ವದಲ್ಲಿ ಯಾವ ಮಾತೂ ಮನಬಂದಂತೆ ನಡೆಯುವುದಿಲ್ಲ. ವಿಶ್ವದ ವ್ಯಾಪಾರ ಗಳನ್ನೆಲ್ಲ ನಿಯಂತ್ರಿಸುವ ಅಚಲವಾದ ಶಾಸನಗಳಿರುವವು. ವಿಶ್ವದಲ್ಲಿ ಶಾಶ್ವತವಾದ ನೈತಿಕ ನಿಯಮವಿರುವುದು. ಇದು ಕರ್ಮಶಾಸನದ ಮೊದಲನೆಯ ಅಂಗ. ಅದೇ ಮೇರೆಗೆ ಉದ್ದೇಶಪೂರ್ವಕವಾಗಿ ಮಾಡಲಾದ ಯಾವ ಕರ್ಮವೂ ಪ್ರತಿಫಲವನ್ನು ಪಡೆಯದಿರದು. ಆ ಪ್ರತಿಫಲವು ಭಾವಾತ್ಮಕವಿರಬಹುದು ಇಲ್ಲವೆ ಅಭಾವಾತ್ಮ ವಿರಬಹುದು. ಈ ಪ್ರತಿಫಲವನ್ನು ಪಡೆಯುವ ಅಂತಃಸತ್ವವು ಪ್ರತಿಯೊಂದು ಕರ್ಮ ದಲ್ಲಿ ಸಹಜವಾಗಿ ನೆಲೆಸಿರುವದು. ಇದು ಕರ್ಮಶಾಸನದ ಎರಡನೆಯ ಅಂಗ. ಭಾರತೀಯ ವಿಚಾರಪ್ರಣಾಲಿಯ ಕೆಲ ಟೀಕಾಕಾರರು, ಈ ಕರ್ಮಶಾಸನದ ಸಿದ್ಧಾಂತವು ಮಾನವನ ಆತ್ಮಸ್ವಾತಂತ್ರ್ಯವನ್ನು ನಿರಾಕರಿಸುವ ಛಾಯೆಯುಳ್ಳ ದ್ದಿರುವುದು-ಅವರ ಅಭಾವವನ್ನು ಸೂಚಿಸುವುದು ಎಂದು ಪ್ರತಿಪಾದಿಸುವರು- ಅವರ ಅಭಿಮತದ ಮೇರೆಗೆ ಈ ಸಿದ್ಧಾಂತವು ನಿಯತಿವಾದವನ್ನೂ, ಅದರ ಫಲ ವಾಗಿ ಒಂದು ಬಗೆಯ ದೈವವಾದವನ್ನೂ ಸಾರುವುದು. ಆತ್ಮಸ್ವಾತಂತ್ರ್ಯವೇ ಇಲ್ಲ ದಿದ್ದರೆ. ಇಚ್ಛಾಸ್ವಾತಂತ್ರ್ಯವೇ ಇಲ್ಲದಿದ್ದರೆ, ನೀತಿಶಾಸ್ತ್ರದ ಇಡಿ ಕಟ್ಟಡವೆ ಉರುಳಿ ನೆಲ ಸಮವಾಗುವುದು. ಆದರೆ ಈ ಟೀಕೆಯು ನ್ಯಾಯಸಮ್ಮತವೆಂದು-ಸರಿಯಾದು ದೆಂದು ಸಮರ್ಥಿಸಲು ಬರಲರಿಯದು. ವಾಸ್ತವಿಕವಾಗಿ, ಕರ್ಮ-ಶಾಸನವು ಮನುಜನು ತನ್ನ ಕರ್ಮಗಳಿಗೆ ಹೊಣೆಗಾರನು, ಅವುಗಳ ಹೊಣೆಯನ್ನವನು ಸಹಜ ಚಾಪಲ್ಯಕ್ಕೆ ಇಲ್ಲವೆ ಪರಮಾತ್ಮನ ಇಚ್ಛೆಗೆ ಒಪ್ಪಿಸತಕ್ಕದ್ದಲ್ಲ. ಅಂದರೆ ತನ್ನ ಕರ್ಮಗಳು ತನ್ನ ಮನಸ್ಸಿನ ಚಾಪಲ್ಯದ ಮೂಲಕವಾಗಿ ಇಲ್ಲವೆ ಪರಮಾತ್ಮನ ಇಚ್ಛೆಯ ಮೂಲಕವಾಗಿ ಜರುಗಿದವೆಂದು ಹೇಳತಕ್ಕದ್ದಲ್ಲ, ಎಂದು ವಿಧಿಸುವುದು. ಕರ್ಮಶಾಸನದ ನೈತಿಕ ಸ್ಥಿರಗತಿಯು ನಮ್ಮನ್ನು ನೈರಾಶ್ಯದಿಂದ ಹೊರಬೀಳಿಸುವುದು. ಯಾವ ಪಾಪಿಯೂ ಶಾಶ್ವತವಾಗಿ ಪತಿತನಾಗಲರಿಯ ಹಾಗೂ ಸುಧಾರಿಸಲು ಅತೀತ ಸಮಯವು ಎಂದೂ ಇರಲರಿಯದು, ಒಂದಾನೊಂದು ಕಾಲಕ್ಕೆ ಎಲ್ಲರೂ ತಮ್ಮನ್ನು ತಿದ್ದಿಕೊಳ್ಳಬಲ್ಲರು, ಎಂಬುದು ಅದರ ಶುಭಸಂದೇಶವು. ನಮ್ಮ ಹಿಂದಿನ

ಕರ್ಮಗಳ ಸಿಹಿ ಇಲ್ಲವೆ ಕಹಿ ಫಲಗಳನ್ನು ನಾವು ಉಣ್ಣಲೇಬೇಕಾಗುವುದು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಭವಿಷ್ಯವು ನಮ್ಮ ಅಧೀನವಿರುವುದು. ನಾವು ನಮ್ಮ ದೈವದ ನಿರ್ಮಾತರಿರುವೆವು. ನಮ್ಮ ಭವಿಷ್ಯವನ್ನು ನಮ್ಮ ಬಯಕೆಯಂತೆ ರೂಪಿಸಲು ನಾವು ಸವತಂತ್ರರಿರುವೆವು. ಈ ರೀತಿ, ಕರ್ಮ-ಸಿದ್ಧಾಂತವು ನಿಯತಿ ಹಾಗೂ ಅನಿಯತಿ (ಸ್ವಾತಂತ್ರ್ಯ)ಗಳೆಂಬ ಎರಡು ಅಂಗಗಳನ್ನು ಒಳಗೊಂಡಿರುವುದು: ಭೂತಕಾಲವನ್ನು ಕುರಿತು ನಿಯತಿ, ಮತ್ತು ಭವಿಷ್ಯಕಾಲವನ್ನು ಕುರಿತು ಅನಿಯತಿ ಇಲ್ಲವೆ ಸ್ವಾತಂತ್ರ್ಯ. ಜೀವನ್ಮುಕ್ತನ ಸಂಚಿತ ಕರ್ಮಗಳೆಲ್ಲ ನಾಶಹೊಂದಿರುವವು ಎಂದು ಗಿರಿಮಲ್ಲೇಶರು ಹೇಳುವರು. ಕರ್ಮಶಾಸನವು ದಯಾದಾಕ್ಷಿಣ್ಯಶೂನ್ಯವಿರುವ ಮೂಲಕ, ಅದರ ನಿಷ್ಠುರತೆಯಿಂದ ಯಾರೂ ಪಾರಾಗಲರಿಯರು. ನಮ್ಮ ಸಂಚಿತ ಕರ್ಮಗಳ ಫಲಗಳಿಂದ ನಾವು ಮುಕ್ತರಾಗುವದಂತು! ಪ್ರಾರಬ್ಧಕರ್ಮಗಳು ಅವುಗಳ ಫಲಭೋಗದಿಂದಲೇ ಅಳಿಯಬಲ್ಲವು: 'ಪ್ರಾರಬ್ಧಕರ್ಮಾಣಾಂ ಭೋಗಾದೇವ ಕ್ಷಯಃ।' ಎಂಬುದು ಬಾದರಾಯಣರ ತೀರ್ಮಾನ, ನಿರ್ಣಯ. ಇದರ ಬದಲು ಮಹಾರಾಷ್ಟ್ರದ ಹಿರಿಯ ಸಂತರಾದ ಏಕನಾಥರು, 'ಭೋಗ ಪ್ರಾರಬ್ಧಾಚಾ ಹರಿಕೃಪೇ ತ್ಯಾಚಾ ನಾಶ ಆಹೇ' ಎಂದು ಹೇಳುವರು. ಇದೇ ಬಗೆಯಾಗಿ, ಜೀವನ್ಮುಕ್ತನ ಸಂಚಿತ ಕರ್ಮಗಳು ಹರಿದು ಹೋಗುವವು ಎಂದು ಗಿರಿಮಲ್ಲೇಶರು ಅರುಹಿರುವರು.

ಆತ್ಮನ ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಮೂರು ಭೌತಿಕ ಆವರಣಗಳ ಸ್ವರೂಪವೂ ಒಮ್ಮೆ ತಿಳಿಯಿತೆಂದರೆ, ಹಾಗೂ, ಭೂತ, ವರ್ತಮಾನ ಮತ್ತು ಭವಿಷ್ಯತ್ ಎಂಬ ಕಾಲತ್ರಯದ ಭೇದವು ಒಮ್ಮೆ ಅಳಿಯಿತೆಂದರೆ, ಸಂತರಿಗೆ ತಮ್ಮ ದೇಹ ಉಳಿದರೂ ಅಷ್ಟೇ.. ಅಳಿದರೂ ಅಷ್ಟೇ! ಅವರದನ್ನೆಂದೂ ಗಮನಿಸುವುದಿಲ್ಲ. ಈ ಸ್ಥೂಲ, ಸೂಕ್ಷ್ಮ ಶರೀರಗಳ ವಿಚಾರವನ್ನು ಸಾಂಖ್ಯದಾರ್ಶನಿಕರು ಬೆಳೆಸಿರುವರು. ಹಾಗೂ ಅವುಗಳಲ್ಲಿಯ ಎರಡನೆಯದರ ದಿಗ್ದರ್ಶನವು ಅವರ ಪೂರ್ವದಲ್ಲಿಯೆ ಪ್ರಶ್ನೋಪನಿಷತ್ತಿನಲ್ಲಿ ಬಂದಿರುವುದು ಎಂಬುದನ್ನು ನೆನೆಯಬೇಕು. ಸ್ಥೂಲ ಶರೀರವು ಪಂಚಭೂತಾತ್ಮಕವಿರುವುದು; ಮತ್ತು ಸಾಂಖ್ಯದಾರ್ಶನಿಕರು ಅಂಗಶರೀರವೆಂದು ಕರೆಯುವ ಸೂಕ್ಷ್ಮಶರೀರವು, ಬುದ್ಧಿ, ಅಹಂಕಾರ, ಜ್ಞಾನ, ಕರ್ಮೇಂದ್ರಿಯಗಳು ಹಾಗೂ ಪಂಚತನ್ಮಾತ್ರೆಗಳು, ಇವುಗಳಿಂದ ಕೂಡಿರುವುದು. ಸ್ಥೂಲಶರೀರವು ಮರಣಹೊಂದಿದಾಗ ಸೂಕ್ಷ್ಮಶರೀರವು ಅಳಿಯುವುದಿಲ್ಲ. ಅದು ಆತ್ಮನನ್ನು ಹಿಂಬಾಲಿಸಿ, ಎರಡನೆಯ ನಿವಾಸವನ್ನು ಸೇರುವುದು. ಸಾಂಖ್ಯ ಸೂತ್ರಗಳ ಸುವಿಖ್ಯಾತ ಭಾಷ್ಯಕಾರನಾದ ವಿಜ್ಞಾನಭಿಕ್ಷುವು ಕಾರಣಶರೀರವೆಂಬ ಮೂರನೆಯ

ಬಗೆಯ ಶರೀರವನ್ನು ಉಲ್ಲೇಖಿಸಿರುವನು. ಈ ಮೂರೂ ಶರೀರಗಳ ಯಥಾರ್ಥ ಸ್ವರೂಪವನ್ನರಿತ ಅನುಭಾವಿಯು ಅವುಗಳ ಬಂಧನದಿಂದ ಮುಕ್ತನಾಗುವನು.

ಗಿರಿಮಲ್ಲೇಶರು ಇಲ್ಲಿ ಇನ್ನೊಂದು ಮಹತ್ವದ ಮಾತನ್ನು ಅರುಹಿರುವರು. ಜೀವನ್ಮುಕ್ತನಿಗೆ ಕಾಲಭೇದಗಳೆಲ್ಲ ಅಳಿದುಹೋಗುವವು. ಕಾಲವೆಂದರೆ ತನ್ನ ಅತೃಪ್ತ ಆಕಾಂಕ್ಷೆಗಳನ್ನು ಪೂರ್ಣಗೊಳಿಸುವ ಮನುಜನ ಹಂಬಲದ ಅಳತೆ ಹಾಗೂ ಅಭಿವ್ಯಕ್ತಿ ಎಂದು ಟೇಲರ ಮಹಾಶಯರು ಅಂದವಾಗಿ ಅರುಹಿರುವರು. ಅದೊಂದು ಅವನ ಫಲಿಸದ ಬಯಕೆಗಳ ಸಂಕೇತ ಹಾಗೂ ಅನುಭವ. ಪರತತ್ವದ ದೃಷ್ಟಿಯಿಂದ, ಎಲ್ಲಸ 'ಬೇಕು'ಗಳು, ಶಾಶ್ವತವಾದ 'ಉಂಟು' ಆಗುವಂತೆ. ಪರತತ್ವದ ಪ್ರತೀಕ ದಂತಿರುವ, ಪೂರ್ಣತೆಯನ್ನು ಪಡೆದ ಅನುಭಾವಿಯ ಯಾವ ಬಯಕೆಯೂ ಸಫಲವಾಗದೆ ಇರುವುದಿಲ್ಲ. ಆದುದರಿಂದ ಅವರ ದೃಷ್ಟಿಯಿಂದ, 'ಎಂದೂ ಇಲ್ಲ' 'ಇಂದು' ಹಾಗೂ 'ಇನ್ನೂ ಇಲ್ಲ' ಇವುಗಳಲ್ಲಿಯ ಭೇದವೇ ಉಳಿಯುವುದಿಲ್ಲ.

ಕೊನೆಯದಾಗಿ, ಜೀವನ್ಮುಕ್ತಿಯ ಅನುಭಾವವಿಷಯಕ, ಪರಿಣಾಮಗಳನ್ನು ಗಿರಿಮಲ್ಲೇಶರು ಈ ಬಗೆಯಾಗಿ ಅರುಹಿರುವರು: ಸಂತರು ಮೂಲ ಮಂತ್ರದ ಜಪವನ್ನು ಬಲಿಸಿದಾಗ, ಪರಕೆ ಪರವಾದ ಪರತತ್ವದ ನೆರವಿನಿಂದ ತಮ್ಮ ಮನಸ್ಸನ್ನು ತುಂಬಿದಾಗ, ಸದ್ಗುರುವಿನ ಬೋಧೆಯ ಮೇರೆಗೆ, ಅವನ ಕೃಪಾಪ್ರಸಾದದ ಫಲವಾಗಿ, ಪರಮಾತ್ಮನ ರೂಪವನ್ನು ತಮ್ಮ ಕಂಗಳಿಂದ ಕಂಡಾಗ, ಕಣ್ಣಿನಲ್ಲಿ ಕಣ್ಣನ್ನು ಕನ್ನಡಿಯ ಹಿಡಿದು ನೋಡಿದಂತೆ ತಮ್ಮ ಸ್ವರೂಪವನ್ನು ಕಂಡಾಗ, ಅವರು ತಮ್ಮ ದೇಹವು ಉಳಿದಿರುವುದೋ, ಇಲ್ಲವೇ ಅಳಿದಿರುವುದೋ ಎಂದು ಲೆಕ್ಕಿಸುವದಿಲ್ಲ. ಮಹಾರಾಷ್ಟ್ರದ ಶ್ರೇಷ್ಠತಮ ಅನುಭಾವಿಗಳಾದ ಜ್ಞಾನೇಶ್ವರರ, ಕನ್ನಡಿಯಲ್ಲಿಯ. ದರ್ಶನದಂತಿರುವ ಆತ್ಮದರ್ಶನದ ಮುಂದಿನ ಬಣ್ಣನೆಯು ಅಪ್ರತಿಮವಾದುದು ಇರುವುದು: "ಶ್ರೀಕೃಷ್ಣ ಅರ್ಜುನರು ಒಂದರ ಮುಂದೆ ಒಂದಿರಿಸಲಾದ ಎರಡು ನಿರ್ಮಲ ಕನ್ನಡಿಗಳಂತಿದ್ದರು. ಅರ್ಜುನನು ದೇವರಲ್ಲಿ, ತನ್ನನ್ನು ದೇವರನ್ನು ಕಂಡನು; ದೇವರು ಅರ್ಜುನನಲ್ಲಿ ತನ್ನನ್ನೂ ಅರ್ಜುನನನ್ನೂ ಕಂಡನು; ಮತ್ತು ಸಂಜಯನು ಅವರಿಬ್ಬರನ್ನು ಕೂಡಿಯೆ ಕಂಡನು. ಒಂದು ಕನ್ನಡಿಯು ಇನ್ನೊಂದರ ಎದುರುಸ ಇರಿಸಲಾದರೆ ಬಿಂಬ ಹಾಗೂ ಪ್ರತಿಬಿಂಬಗಳಲ್ಲಿ ಭೇದವು ಅಳಿಯುವುದು. ಅಂಥ ಸಮಯದಲ್ಲಿ ಯಾವ ಕನ್ನಡಿಯು ಯಾವುದನ್ನು ಪ್ರತಿಬಿಂಬಿಸುವುದು ಎಂಬುದನ್ನು ಹೇಳುವವರಾರು? ಹೇಳುವುದೆಂತು?

ಈ ಬಗೆಯಾಗಿ ಜೀವಾತ್ಮನು ಪರಮಾತ್ಮನೊಡನೆ ಏಕತೆಯನ್ನು ಪಡೆಯು ವನು. ಆಗ ಜೀವಾತ್ಮನು ಇಡಿ ವಿಶ್ವದ ಶಾಶ್ವತವಾದ ಸಾಕ್ಷಿಯಾಗುವನು. ಸರ್ವಸಾಕ್ಷಿ ಯಾಗುವನೆಂದು ಗಿರಿಮಲ್ಲೇಶರು ಉಸುರುವರು. ಈ ಯೋಗಿಕ ಮಾನಸ ನೈತಿಕ,

ಪರತತ್ವ ವಿಷಯಕ ಹಾಗೂ ಅನುಭಾವವಿಷಯಕ ಲಕ್ಷಣಗಳ ಮೂಲಕ ಮುಕ್ತಜೀವನು-ಜೀವನ್ಮುಕ್ತನು-ಇಡಿ ವಿಶ್ವವನ್ನು ಪಾವನಗೊಳಿಸುವನು. ಸಂತರು ಸಂದರ್ಶನವಿತ್ತಾಗ, ಕ್ಷೇತ್ರಗಳೂ ಕೂಡ ಪಾವನವಾಗುವವೆಂದು ರಾಮದಾಸರು ಈ ಮೊದಲೆ ಅರುಹಿರುವರು. ತಾವು ಪುಣ್ಯಕ್ಷೇತ್ರದಲ್ಲಿ ಮಡಿಯಬೇಕು, ತಮ್ಮ ದೇಹವು ಪುಣ್ಯನದಿಯ ತೀರದಲ್ಲಿ ಬೀಳಬೇಕು ಎಂದು ಅನ್ಯಜನರು ಬಗೆವರು. ಆದರೆ ಶಾಶ್ವತವಾದ ಮುಕ್ತಿಯನ್ನು ಪಡೆದ ಸಂತರು. ಇಡೀ ವಿಶ್ವವನ್ನೇ ಪುನೀತ ಮಾಡುವರು. ಈ ಬಗೆಯಾಗಿ, ಕರ್ಮಪರಿಪಾಕ, ಸ್ಥೂಲ-ಸೂಕ್ಷ್ಮ-ಕಾರಣ ಶರೀರಗಳು, ಸರ್ವ-ಸಾಕ್ಷಿತ್ವ, ಇತ್ಯಾದಿಗಳಂಥ ಅತ್ಯುನ್ನತ ದಾರ್ಶನಿಕ ವಿಚಾರಗಳನ್ನು ಗಿರಿಮಲ್ಲೇಶರು ಚೆನ್ನಾಗಿ ಅರಿತಿದ್ದರೆಂಬುದನ್ನು ನಾವು ಕಾಣಬಹುದು.

ಇನ್ನು ನಾವು ಮುಂದಿನ 'ತನ್ನ ತಾ ತಿಳಿದ ಮೇಲೆ ಇನ್ನೇನಿನ್ನೇನು?' ಎಂಬ ಪದದಲ್ಲಿ ಅರುಹಲಾದ ವಿಶ್ವವಿಷಯಕ ಪರಿಣಾಮಗಳೆಡೆ ತೆರಳುವಾ! ಅದರಲ್ಲಿ ಮಹಂತ ಕವಿಗಳು ತಮ್ಮ ವಿಶ್ವಪ್ರಜ್ಞೆಯ ಅನುಭವವನ್ನು ವಿವರವಾಗಿ ಅರುಹಿರುವರು. ಅದೊಂದು ನಿಜವಾಗಿ ಪಾರಮಾರ್ಥಿಕ ಸಾಕ್ಷಾತ್ಕಾರದ ಉನ್ನತವಾದ ಕುರುಹೇ ಸರಿ. ವೈಯಕ್ತಿಕ ಬಂಧನಗಳು ಅಳಿದುಹೋದಾಗ, ಸಂತರು ಇಡಿ ಸೃಷ್ಟಿಯೊಡನೆ ಏಕತೆಯನ್ನು ಪಡೆಯುವರು. ಅವರು ವಿಶ್ವಜೀವನದಲ್ಲಿ ನೆಲೆಸಿ, ಮಾನವ, ಪ್ರಕೃತಿ, ಹಾಗೂ ಪರಮಾತ್ಮನೊಡನೆ ತಾದಾತ್ಮ್ಯವನ್ನು ಅನುಭವಿಸುವರು. ವಿಶ್ವದ ಮೂಲೆಮೂಲೆಗಳಲ್ಲಿ, ಸಂದಿಗೊಂದಿಗಳಲ್ಲಿ ಅಂತೂ ಇರವಿನ ವಿಶ್ವವಿಷಯಕ, ಮನೋವಿಷಯಕ, ಜ್ಞಾನವಿಷಯಕ ಹಾಗೂ ಅನುಭಾವವಿಷಯಕ ಹಾಗೂ ಅನುಭಾವವಿಷಯಕ ಎಂಬ ಎಲ್ಲರೂಪಗಳಲ್ಲಿ, ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ಸಂತರು ಆಶ್ಚರ್ಯಯುಕ್ತವಾದ ಆನಂದಾತಿರೇಕದಲ್ಲಿ ಮುಳುಗಿಬಿಡುವರು.

ಮಹಾಂತರ ಅಭಿಮತದ ಮೇರೆಗೆ, ಆತ್ಮನ ಜ್ಞಾನವು ವಿಶ್ವಜೀವನದ ಪ್ರತಿಯೊಂದು ಬಗೆಯ ಜ್ಞಾನವನ್ನು ಒಳಗೊಂಡಿರುವುದು. ನಮಗಿಲ್ಲಿ ಗ್ರೀನನೆಂಬ ದಾರ್ಶನಿಕನ ಗಂಭೀರವಾದ ದರ್ಶನವು ಜ್ಞಾಪಕಕ್ಕೆ ಬರುವುದು. ಅವನು ಮಾನವನಲ್ಲಿಯ ಆತ್ಮತತ್ವದ ಸಾದೃಶ್ಯದಿಂದ, ನಿಸರ್ಗದಲ್ಲಿಯ ಅದರ ಅಸ್ತಿತ್ವವನ್ನು ಸಿದ್ಧಪಡಿಸಿ, ಎಲ್ಲ ಮಾನವ ಆತ್ಮರು ಆ ಶಾಶ್ವತ ಆತ್ಮನ ಪ್ರತಿಕೃತಿಗಳು ಎಂದೂ ಹೇಳುವನು. ತನ್ನ ಕಾವ್ಯಮಯ ಕಲ್ಪನೆಗಳಲ್ಲಿ ತಲ್ಲೀನನಾದ ಒಬ್ಬ ಹಿರಿಯ ಕವಿಯು ಆತ್ಮತತ್ವವು ನಿಸರ್ಗದಲ್ಲಿ ಅಂತರ್ಗತವಾಗಿರುವುದು ಎಂಬ ಮೂಲಭೂತ ಸತ್ಯವನ್ನು ಮುಂದಿನ ಮರೆಯಬಾರದ ಸಾಲುಗಳಲ್ಲಿ ತನ್ನ ಭಾವನೆಯನ್ನು ಮೂಡಿಸಿರುವನು.

ಎಲೆ! ಎಳೆಯ ಅರಳೆ!
ನೀನಾರು? ಬಂದೆ ಎಲ್ಲಿಂದ?
ಪೋಪುದಲ್ಲಿಗೆ? ಅರಿತರಿನಿತನೆಲ್ಲ!
ದೇವ-ಮಾನವರಾರು?
ಅವರಿರುವ ಎನಿತಿಹುದು?
ಅರಿಯಬಲ್ಲೆನು ನಾನು ತಾನೆ ಎಲ್ಲ!

ತನ್ನ ಸಾಮಾನ್ಯ ಅನುಭವವನ್ನು ಅರುಹಲು, ಕವಿಯು ಇನಿತು ವಾಕ್ಸಂಪದವನ್ನು ಸೂರೆಗೊಳಿಸಬಲ್ಲವನಾದರೆ, ಪರತಮ ತತ್ತ್ವವಾದ ಪರಮಾತ್ಮನನ್ನು ಅರಿತ ಅನುಭಾವಿಯು ಅರಿಯುವದೇನೂ ಉಳಿಯುವುದೇ ಇಲ್ಲ, ಎಂದು ಅದೆನಿತು ಆವೇಶಪೂರಿತನಾಗಿ ಹೇಳಬೇಡ! ಅವನು ವಿಶ್ವವಿಷಯಕ, ಮಾನಸವಿಷಯಕ, ಜ್ಞಾನವಿಷಯಕ, ಹಾಗೂ ಅನುಭಾವವಿಷಯಕ ಕ್ಷೇತ್ರಗಳಲ್ಲೆಲ್ಲ ಸ್ಪಂದಿಸುತ್ತಿರುವ ಏಕಾತ್ಮನನ್ನು ಸಾಕ್ಷಾತ್ಕರಿಸಿಕೊಂಡಾಗ, ಅವನು ಇಡಿ ವಿಶ್ವರೂಪನೇ ಆಗುವನು; ಮತ್ತು ಅವನ ಜ್ಞಾನಪೂರ್ಣ ಪ್ರಜ್ಞೆಯಿಂದ ಭೇದಭಾವವು ಪೂರ್ತಿಯಾಗಿ ಅಳಿದು ಹೋಗುವದು.

ಮಹಾಂತರು ವಿಶ್ವಪ್ರಜ್ಞೆಯ ಅನುಭವದ ಬೇರೆ ಬೇರೆ ಅಂಗಗಳನ್ನು ಈ ರೀತಿ ಚಿತ್ರಿಸಿರುವರು. ನಾವು, ಪೃಥಿವೀ, ಆಪ, ತೇಜ, ವಾಯು ಮತು ಆಕಾಶ, ಅದೇ ಮೇರೆಗೆ, ಸೂರ್ಯ, ಚಂದ್ರ, ಮತ್ತು ತಾರೆಗಳು-ವಿಶ್ವದಲ್ಲಿಯ ಈ ಎಲ್ಲ ಒಡವೆಗಳೊಡನೆ, ಅಂತೂ ಇಡಿ ವಿಶ್ವದೊಡನೆ ಏಕತೆಯನ್ನು ಅನುಭವಿಸಬೇಕೆಂದೂ ಅವರು ಹೇಳುವರು. ನಿಸರ್ಗನಿಯಮಗಳ ಸಹಕಾರಯುತ ಕಾರ್ಯಾಚರಣೆಯೂ, ಸಮಗ್ರತೆಯೂ. ಒಂದು ಚಿತ್‌ತತ್ವದ ಇರವನ್ನು ಸೂಚಿಸುವದು. ಅದನ್ನು ನೀವು ಚೈತನ್ಯವೆಂದೂ ಇಲ್ಲವೆ ಆತ್ಮವೆಂದೂ ಕರೆಯಬಹುದು. ಈ ಚಿತ್-ತತ್ವವನ್ನೆಯೆ ಮಹಾಂತರು ಕಂಡರು ಮತ್ತು ಅದರ ಮೂಲಕ ಅವರು ವಿಶ್ವಜೀವನದ ಎಲ್ಲ ರೂಪಗಳೊಡನೆ ತದಾತ್ಮರಾಗಬಲ್ಲವರಾದರು.

ಅದೇ ಬಗೆಯಾಗಿ, ನಾವು ಎಲ್ಲ ಮಾನಸಿಕ ಸ್ಥಿತಿಗತಿಗಳೊಡನೆಯೂ, ಹಾಗೂ ಜಿಹ್ವೆ, ಘ್ರಾಣ, ನೇತ್ರ, ಶ್ರೋತ್ರ, ತ್ವಕ್ಕು, ಹೃದಯ, ಅಂದರೆ ಎಲ್ಲ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳೊಡನೆಯೂ ಏಕತೆಯನ್ನು ಅನುಭವಿಸಬೇಕೆಂದು ಮಹಾಂತರು ಅರುಹಿರುವರು. ಅನುಷಂಗಿಕವಾಗಿ, ನಾವು ಮುಂದಿನ ಸಂಗತಿಯನ್ನು ಗಮನಿಸ ಬಹುದು: ಆತ್ಮತತ್ತ್ವವೇ ಇಲ್ಲವೇ, ಕಾಂಟನು ಕರೆಯುವಂತೆ 'ಅನುಬೋಧೆಯ ಏಕತೆ'ಯೆ ಈ ಜ್ಞಾನೇಂದ್ರಿಯ-ಕಮೇಂದ್ರಿಯಗಳನ್ನು ಒಂದೆಡೆ ತರುವುದು. ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳಲ್ಲಿಯ ನಿಯಮಬದ್ಧವಾದ ಏಕತೆಯ ಇರವು.

ವ್ಯಕ್ತಿಯಲ್ಲಿ ಪಾರಮಾರ್ಥಿಕ ತತ್ತ್ವದ ಉಪಸ್ಥಿತಿಯನ್ನು ಸೂಚಿಸುವುದು. ಜ್ಞಾನ-ಕರ್ಮೇಂದ್ರಿಯಗಳಲ್ಲಿ ಅಂತರ್ಗತವಾಗಿರುವ ಈ ಚಿತ್‌ತತ್ವವನ್ನು ಅನುಭಾವಿಯು ಕಾಣುವನು. ಹಾಗೂ ಅದರ ಫಲವಾಗಿ ಅವನು ಮಾನಸಿಕ ಇರವಿನ ಎಲ್ಲ ರೂಪಗಳೊಡನೆ ತದಾತ್ಮನಾಗುವನು.

ಈ ರೀತಿ ವಿಶ್ವವಿಷಯಕ ಹಾಗೂ ಮಾನಸಿಕ ಇರವುಗಳೊಡನೆ ಏಕತೆಯನ್ನು ಅನುಭವಿಸಿದ ತರುವಾಯ, ನಾವು ಪಿಂಡಾಂಡ, ಬ್ರಹ್ಮಾಂಡಗಳೊಡನೆಯೂ ತಾದಾತ್ಮ್ಯವನ್ನು ಪಡೆಯಬೇಕೆಂದುಕವಿಯು ಹೇಳುವನು. ಬ್ರಹ್ಮಾಂಡವು ಪಿಂಡಾಂಡವನ್ನು ಒಳಗೊಂಡಿರುವುದು. ಹಾಗೂ ಪಿಂಡಾಂಡವು ಬ್ರಹ್ಮಾಂಡವನ್ನು ಪ್ರತಿಬಿಂಬಿಸುವದು. ಮಹಾಂತರು ಮತ್ತೂ ಅರುಹುವದೇನೆಂದರೆ: ಲಕ್ಷ, ಸಾವಿರ, ನೂರು, ಹತ್ತು, ಒಂಬತ್ತು, ಎಂಟು, ಏಳು, ಆರು, ಐದು, ನಾಲ್ಕು, ಮೂರು, ಎರಡು, ಒಂದು, ಒಂಬ ಸಂಖ್ಯೆಗಳು ಸೂಚಿಸುವ ಎಲ್ಲ ಸ್ಥಿತಿಗಳು ನಾವೇ ಇರುವೆವು. ಈ ಸಂಖ್ಯೆಗಳು ಗೂಢಾರ್ಥವುಳ್ಳವುಗಳು. ಇವನ್ನು ಈ ಬಗೆಯಾಗಿ ವಿಶದೀಕರಿಸಿ ಬಹುದು: ಒಂದು-ಆತ್ಮ; ಎರಡು-ಪ್ರಕೃತಿಪುರುಷರ ದ್ವಂದ್ವ; ಮೂರು ತ್ರಿಗುಣಗಳು; ನಾಲ್ಕು-ಚಿದವಸ್ಥೆಗಳು; ಐದು-ಮಹಾಭೂತಗಳು; ಆರು-ವಿಕಾರಗಳು; ಏಳು-ಚಕ್ರಗಳು; ಎಂಟು-ಮದಗಳು; ಒಂಬತ್ತು-ದ್ವಾರಗಳು; ಹತ್ತು-ಇಂದ್ರಿಯಗಳು; ಇತ್ಯಾದಿ.

ವಿಶ್ವಪ್ರಜ್ಞೆಯ ಜ್ಞಾನವಿಷಯಕ ಅಂಗವನ್ನು ಕುರಿತು ಮಹಾಂತರು ಈ ರೀತಿ ಅರುಹಿರುವರು: ನಾವು ಸತ್ಯ, ತೋರಿಕೆ, ಪರತತ್ವ ಇವುಗಳಂಥ ಜ್ಞಾನವಿಷಯಕ ಎಲ್ಲ ಇರವುಗಳೊಡನೆ ಕೂಡ ಏಕರೂಪರಿರುವೆವು. ನಾವೀ ವಿಚಾರವನ್ನು, ಪೂರ್ಣ ಧ್ಯೇಯವಾದಿಯಾದ ಬ್ರಡ್ಲೇಯವರ ವಿಚಾರದೊಡನೆ ಸರಿಹೋಲಿಸಬಹುದು. ಶಂಕರಾಚಾರ್ಯರು ಸತ್ಯ-ಅನೃತ ಎಂಬ ಎರಡೇ ತತ್ವಗಳನ್ನು ಮಾನ್ಯಮಾಡುವ ರೆಂಬುದನ್ನು ವೇದಾಂತದ ವಿದ್ಯಾರ್ಥಿಗಳು ನೆನೆಯಬಹುದು. ಮಹಾಂತರು ಇನ್ನೊಂದು ಮಹತ್ವದ ವಿಧಾನವನ್ನು ಮಾಡುವರು: "ಸತ್ತವನು, ಅತ್ತವನು, ಆತನನ್ನು ಹೆಗಲ ಮೇಲೆ ಹೊತ್ತವನು-ಇವರೆಲ್ಲ ಒಂದೇ ಇರುವರು; ಅರಿತವನು. ಮರೆತವನು, ಹಾಗೂ ಅವರಲ್ಲಿ ಬೆರೆತವನು-ಇವರೆಲ್ಲ ಒಂದೇ ಇರುವರು".

ಈ ವರೆಗೆ ನಾವು ವಿಶ್ವವಿಷಯಕ, ಮಾನಸಿಕ ಮತ್ತು ಜ್ಞಾನವಿಷಯಕ ಇರವಿನ ಎಲ್ಲ ರೂಪಗಳೊಡನೆ ಆತ್ಮಜ್ಞಾನಿಯು ಏಕನಾಗುವ ರೀತಿಯನ್ನು ಕಂಡದ್ದಾಯಿತು. ಈ ಸಂದರ್ಭದಲ್ಲಿ ನಾನು ನನ್ನ ಉಪನಿಷತ್ತುಗಳನ್ನು ಕುರಿತ ಗ್ರಂಥದಲ್ಲಿ ಬರೆದುದನ್ನು ಉದ್ಧರಿಸಬಯಸುವೆ: "ವಸ್ತು, ವ್ಯಕ್ತಿ, ಮತ್ತು ವ್ಯಕ್ತಿ ವಸ್ತುಗಳ ಸಂಬಂಧ

ಇವೆಲ್ಲ ಒಂದೇ ಎಂಬುದೇ ಇದರ ಇತ್ಯರ್ಥ. ಪರಮಾನಂದಾನುಭವದ ತರುವಾಯ ಅನುಭಾವಿಯು ಉಸುರಿದ ಸ್ವಗತಭಾಷಣವನ್ನು ನಾವು ಬಲ್ಲೆವು. ಅದನ್ನು ತೈತ್ತಿರೀಯ ಉಪನಿಷತ್ತು ನಮಗಾಗಿ ಕಾಯ್ದಿರಿಸಿರವದು. ಅಲ್ಲಿ ಸಂತರೋರ್ವರು ವಿಶ್ವ-ಸಾಮರಸ್ಯದ ಗೀತವನ್ನು ಮುಂದಿನಂತೆ ಹಾಡುವರು: "ನಾನೇ ಅನ್ನ.........ನಾನೇ ಅನ್ನವನ್ನುಣ್ಣುವವ................... ನಾನೇ ಅವರಲ್ಲಿ ಸಂಯೋಗವನ್ನು ನಿರ್ಮಿಸುವವ." ಜಡವೆಲ್ಲ ತಾನೇ, ಚೇತನವೆಲ್ಲ ತಾನೇ ಹಾಗೂ ಜಡಚೇತನಗಳ ಸಂಯೋಗವೂ ತಾನೇ ಎಂಬುದೇ ಇದರ ತಾತ್ಪರ್ಯಾರ್ಥ. ಇದು ಪರತತ್ವಶಾಸ್ತ್ರದೃಷ್ಟಿ. ಇನ್ನು ಜ್ಞಾನಶಾಸ್ತ್ರದೃಷ್ಟಿಯಿಂದ ಜ್ಞಾತಾ, ಜ್ಞೇಯ ಮತ್ತು ಇವೆರಡರ ಸಂಬಂಧ-ಇವೆಲ್ಲ ತಾನೇ ಎಂಬುದು ಇದರ ಇನ್ನೊಂದು ತಾತ್ಪರ್ಯ. ಇದೊಂದು ಪಾರಮಾರ್ಥಿಕ ಅನುಭವದ ಮೆಟ್ಟಿಲು. ಓರ್ವ ಆಧುನಿಕ ಧ್ಯೇಯವಾದಿಯು ಚೆನ್ನಾಗಿ ಅರುಹಿದ ಮೇರೆಗೆ ಆಗ, ಕ್ಷೇತ್ರ, ಯೋಧ ಹಾಗೂ ಯುದ್ಧ ಇವುಗಳಲ್ಲಿಯ ಭೇದವು ಪೂರ್ತಿಯಾಗಿ ಅಳಿಯುವುಉದ." (ಉಪನಿಷದ್ರಹಸ್ಯ-ಪು. ೩೫೨.)

ಈ ಬಗೆಯ ಪ್ರಜ್ಞೆಯ ವಿಶಾಲತೆಯಿಂದ, ಸಂಕುಚಿತ ಹಾಗೂ ಮರ್ಯಾದಿತ ಅನುಭವಗಳ ಮೂಲಕ ಉಂಟಾದ ಭೇದಗಳು ಅಳಿದು ಬಿಡುವವು. ಕೊನೆಗೆ ಬೆಳೆಯಲಿರುವ ಈ ಪ್ರಜ್ಞೆಯು ಅಂತಿಮ ಪರತತ್ವದಲ್ಲಿ ಏಕತೆಯನ್ನು ಪಡೆಯುವುದು. ಇಂಥ ಏಕತೆಯನ್ನು ಅನುಭವಿಸಿದ ಭಾಗ್ಯವಂತನು ತಾನೆ ಎಲ್ಲಾ ಆಗುವನು ಹಾಗೂ ತಾನೇ ಒಂದಾಗುವನು. ಹೀಗಾಯಿತೆಂದರೆ ಗುರುಶಿಷ್ಯರಲ್ಲಿ ಭೇದವು ಉಳಿಯುವುದಿಲ್ಲ. ನಿಜವಾಗಿ, ಈ ಏಕತೆಯು ಅವರ್ಣನೀಯವು. ಹಾಗೂ ಅನರ್ವಚನೀಯವು. ಈ ರೀತಿ ಇಂಥ ಅಪ್ರತಿಮ ವಿಶ್ವ ಪ್ರಜ್ಞೆಯ ಅನುಭವವು ವಿಶ್ವಕರ್ತನೊಡನೆ ಏಕತೆಯನ್ನು ಪಡೆಯುವದರಲ್ಲಿ ಪರಿಣತವಾಗುವುದುಂಟು.

ನಾವಿನ್ನು ಭವತಾರಕರ 'ದೃಷ್ಟಿಯೊಳಗೆ ದೃಷ್ಟಿನಿಂತಿತು' ಎಂಬ ಅಂದವಾದ ಪದವನ್ನು ವಿವರಿಸುವೆವು. ಅದರಲ್ಲಿ ಭೂಲೋಕದಿಂದ ಪ್ರತ್ಯಕ್ಷ ಸ್ವರ್ಗಲೋಕದ ವರೆಗಿನ ಅನಂತತ್ವದ ದರ್ಶನವು ಅತ್ಯುತ್ತಮವಾಗಿ ಬಣ್ಣಿಸಲಾಗಿರುವುದು. ಅನುಭಾವಿಯು ನಿಷ್ಕಲ ಪರಮಾತ್ಮನ ದರ್ಶನದಿಂದ ಆನಂದಭರಿತನಾದ ಮೂಲಕ, ಅವನಿಗೆ ಇಡಿ ಸೃಷ್ಟಿಯು ಪರಿವರ್ತನಹೊಂದಿದಂತೆ ಕಾಣುವುದು. ವಿಚಾರಪರ ಅನುಭಾವಿಯು ಭಾವನಾಪರ ಅನುಭಾವಿಗಿಂತ ದಾರ್ಶನಿಕ ವಿಚಾರಗಳಿಗೆ ಕೆಲವೊಂದು ಪ್ರಮಾಣದಲ್ಲಿ ಹೆಚ್ಚು ಪ್ರಾಧಾನ್ಯವನ್ನು ಕೊಡುವನು. ಇದೇ ಅವರೀರ್ವರಲ್ಲಿಯ ವಿಭೇದ. ಭವತಾರಕರ ಈ ಪದದಲ್ಲಿ ಮುಂದೆ ಕಾಣಿಸಿದ

ಅನುಭಾವದ ಸ್ಪಷ್ಟವಾದ ದಾರ್ಶನಿಕ ವಿವರಣೆಯು ಬಂದಿರುವುದು: "ದೃಷ್ಟಿಯೊಳ ದೃಷ್ಟಿಯು ನಿಂತಿತು.' ಆಗೊಂದು ಅದ್ಭುತ ಸಂಗತಿಯು ಜರುಗಿತು. ದೃಷ್ಟವೆಲ್ಲ ನಷ್ಟವಾಯಿತು. ದೃಶ್ಯ ಜಗತ್ತೆಲ್ಲ ಅದೃಶ್ಯವಾಯಿತು." ನಮ್ಮ ಕಂಗಳೆದುರಿನ ಆ ದಿವ್ಯ ಕಣ್ಣಿನ ಕಾಣ್ಕೆಯು ದರ್ಶನವು, ಜಗತ್ತಿನ ದರ್ಶನವನ್ನು ಪೂರ್ತಿಯಾಗಿ ಅಳಿಸಿಬಿಡುವುದು.

ಭವತಾರಕರು ಒತ್ತಿ ಹೇಳುವ ಎರಡನೆಯ ಮಾತು ನಿಜವಾಗಿ ದಾರ್ಶನಿಕವಾದುದು ಇರುವುದು. ಅವರು ಸಾಂಖ್ಯದರ್ಶನದಿಂದ ಮಾರ್ಗದರ್ಶಕ ಸುಳಿವನ್ನು ಪಡೆದು, ಅದನ್ನು ಸುಧಾರಿಸಿರುವರು. ಇದನ್ನವರು ಮಾಡಿದ ರೀತಿಯು ತುಂಬ ಸ್ವಾರಸ್ಯಮಯವಿರುವುದು. ಅವರದನ್ನು ಕುರಿತು ಉಸುರುವದೇನೆಂದರೆ: "ಪ್ರಾರಂಭದಲ್ಲಿ ಐದು ಮೂಲ ತತ್ವಗಳಿದ್ದವು; ಮತ್ತು ಸಾಂಖ್ಯದರ್ಶನವು ಅರುಹುವ ಮೇರೆಗೆ, ಈ ಐದು ತತ್ತ್ವಗಳು ಇಪ್ಪತ್ತೈದು ತತ್ತ್ವಗಳನ್ನು ನಿರ್ಮಿಸಿದವು. ಆದರೆ ಈ ಇಪ್ಪತ್ತೈದು ತತ್ತ್ವಗಳು ಬೇರೆ ಬೇರೆಯಾಗಿ ಉಳಿಯಲಿಲ್ಲ. ಅವು ಒಂದಾಗಿ, ಒಂದುಗೂಡಿ ಇದ್ದವು. ಸಂಕೀರ್ಣತೆಯಲ್ಲಿಯ ಇಂಥ ಏಕತೆಯಲ್ಲಿ, ಅವನು ಈ ಇಪ್ಪತ್ತೈದೆಲ್ಲ ತಾನೆ ಆದನಂತೆ. (ಐದಕ್ಕೈದು ತಾನೆ ಎಲ್ಲ) ಮತ್ತು ಜೀವಾತ್ಮನಾದ ತಾನು ಈ ಜಗತ್ತಿನಲ್ಲಿ ಜನಿಸಿದಾಗ, ತಾನು ಈ ಇಪ್ಪತ್ತೈದು ತತ್ತ್ವಗಳ ಮೊತ್ತದಲ್ಲಿ ಇಳಿದನಷ್ಟೇ ಅಲ್ಲದೆ, ಇವುಗಳೊಡನೆ ಅಂತಿಮವಾಗಿ ಬೆರೆತುಬಿಟ್ಟನಂತೆ. ಇದು ನಮಗೆ ಹಿಂದಿನ ಶ್ರುತಿವಚನವನ್ನು ನೆನಪುಮಾಡಿಕೊಡುವುದು. ಈ ತತ್ವಗಳ ಮೊತ್ತದಲ್ಲಿಯ ಜೀವಾತ್ಮನ ಅವತರಣದ ವಿಷಯವು ಅರಿಸ್ಟಾಟಲ್‌ರ ಗ್ರಂಥಗಳಲ್ಲಿಯೂ, ಬಾಯಬಲ್ಲಿನಲ್ಲಿಯೂ ಹಾಗೂ ವೇದಗಳಲ್ಲಿಯೂ ಕೂಡ ನಮಗೆ ಪರಿಚಿತವಾಗಿರುವುದು. ಈ ಭಿನ್ನ ಭಿನ್ನ ತತ್ವಗಳ ಸಮ್ಮಿಶ್ರಣದಲ್ಲಿ ಒಂದು ದೈವೀ ಕ್ರಿಯಾಶಕ್ತಿಯು ಹೊರಗಿನಿಂದ ಬಂದು ನೆಲೆಸುವದೆಂದು ಅರಿಸ್ಟಾಟಲ್‌ರವರು ಹೇಳುವರು. ಪರಮಾತ್ಮನು ಮಾನವನ ಮೂಗಿನ ಹೊಳ್ಳೆಗಳಲ್ಲಿ ಜೀವನದ ಉಸಿರನ್ನು ಊದಿದನು ಹಾಗೂ ಮಣ್ಣಿನ ಮನೆಯನ್ನು ಸಜೀವಗೊಳಿಸಿದನು ಎಂದು ಬಾಯ್‌ಬಲ್ ಅರುಹುವದು. ವೇದಗಳಲ್ಲಿಯೂ ಮುಂದಿನ ಸುಪ್ರಸಿದ್ಧ ವಚನವಿರುವುದು: 'ಅಸ್ಥನ್ವಂತಂ ಯದನಸ್ಥಾ ಬಿಭರ್ತಿ।' 'ಎಲುವಿಲ್ಲದ ಆತ್ಮನು ತನಗಾಗಿ ಎಲುವಿನ ಮನೆಯನ್ನು ನಿರ್ಮಿಸುವನು.' ದಾರ್ಶನಿಕ ಅನುಭಾವಿಗಳಾದ ಭವತಾರಕರ ಈ ಕಲ್ಪನೆಯಲ್ಲಿ, ಸಂಕೀರ್ಣ ವಿವಧತೆಯೊಡನೆ ತನ್ನ ವೈಯಕ್ತಿಕ ಏಕತೆಯನ್ನು ಕಾಯ್ದುಕೊಳ್ಳುವಂತೆ ಹಾಗೂ ಅರಿತುಕೊಳ್ಳುವಂತೆ, ಜೀವಾತ್ಮನು ಬೇರೆ ಬೇರೆ ತತ್ವಗಳ ಮೊತ್ತದಲ್ಲಿ ಅವತರಿಸುವ ವಿಚಾರವು ಒಳಗೊಂಡಿರುವುದು.

ಭವತಾರಕರು ಮತ್ತೂ ಹೇಳುವುದೇನೆಂದರೆ: ಈ ಜೀವಾತ್ಮನು ತನ್ನ ಸ್ವರೂಪವನ್ನು ಅರಿತಾಗ ಕರ್ಮ-ಧರ್ಮಗಳು ಅಳಿಯುವವು. ಕನ್ನಡ ಸಂತರು ಕರ್ಮಧರ್ಮ ಎಂಬ ಶಬ್ದಗಳನ್ನು ಮೇಲಿಂದ ಮೇಲೆ ಬಳಸಿರುವರು. 'ಕರ್ಮವೆಲ್ಲ ಕಾಣದೆ ಹೋಯಿತು.' ಹಾಗೂ 'ಧರ್ಮಪತ್ತೆ ತೂಗಿ ನಿಂತಿತು,'- 'ಈ ಜನ್ಮದ ಹಾಗೂ ಕಳೆದ ಜನ್ಮದ ಕರ್ಮಗಳೆಲ್ಲ ಕರಗಿಹೋದವು' ಮತ್ತು 'ಧರ್ಮವೆಲ್ಲ ಉಯ್ಯಾಲೆಯಂತೆ ಹೊಯ್ದಾಡಿ, ಅತ್ತಿತ್ತ ತೂಗಾಡಿ, ತನ್ನೀ ಪ್ರಯೋಗವನ್ನು ಪೂರ್ಣಗೊಳಿಸಿ, ಅದು ಕೊನೆಗೆ ನಿಂತುಬಿಟ್ಟಿತು. ನಿಶ್ಚಲವಾಯಿತು' ಎಂದು ಕವಿಯು ಹೇಳುವನು. ಈ ರೀತಿ ಕರ್ಮ-ಧರ್ಮಗಳು ಅನುಭಾವಿಯನ್ನು ಬಾಧಿಸುವದು ಪೂರ್ತಿಯಾಗಿ ನಿಂತುಬಿಡುವುದು. ಪೂರ್ಣತೆಯನ್ನು ಪಡೆದ ಆತ್ಮಜ್ಞಾನಿಯ ವಿಷಯದಲ್ಲಿ ಎಲ್ಲ ಕರ್ಮಗಳ ಕಾರ್ಯವು ನಿಂತುಬಿಡುವದೋ ಹೇಗೆಂಬುವ ವೇದಾಂತದರ್ಶನದಲ್ಲಿಯ ಹಿರಿಯ ಪ್ರಶ್ನೆಯನ್ನು ನಾವು ಈ ಮೊದಲೇ ಉಲೇಖಿಸಿರುವೆವು. ಗಿರಿಮಲ್ಲೇಶ್ವರು ಹಿಂದೆ ಅರುಹಿದ ಮೇರೆಗೆ, ಭವತಾರಕರು ಕೂಡ ಈ ರೀತಿ ಹೇಳುವರ ಉ: ಕೊನೆಯಲ್ಲಿ ಈ ಕರ್ಮಗಳೆಲ್ಲ ನಿಲುಗಡೆಗೆ ಬಂದು, ಅನುಭಾವಿಯು ಸೃಷ್ಟಿಯ ಮಧ್ಯದಲ್ಲಿ ತುಷ್ಟಿಯನ್ನು ಅನುಭವಿಸುವನು. ದುಃಖವು ಆತನನ್ನು ಬಾಧಿಸದಂತಾಗುವುದು. ಅವನು ಸೃಷ್ಟಿಯಲ್ಲಿ ಸೃಜನಾತ್ಮಕ ಆನಂದವು ತುಂಬಿರುವುದನ್ನು ಕಾಣುವನು, ಅನುಭವಿಸುವನು. ಅವನೀ ಆನಂದವು ಮುಂದೆ ತೀವ್ರತಮವಾಗಿ, "ಮುಂದೆ ನಾನಿದನ್ನು ಯಾರಿಗುಸರಲಿ? ಕೇವಲನಾದ ಪರಮಾತ್ಮನ ಧ್ಯಾನ-ಸಾಕ್ಷಾತ್ಕಾರಗಳಿಂದ ಅನುಭವಿಸಲಿರುವ ಈ ಪರಮಾನಂದವನ್ನು ಶಬ್ದಗಳಿಂದ ಅರುಹುವದು ಅದೆಂತು ಸಾಧ್ಯ?" ಎಂದವನು ಸ್ವಗತ ಉಸುರತೊಡಗುವನು.

ಕೊನೆಯದಾಗಿ, ಎರಡು ಸುಪ್ರಸಿದ್ಧ ಸಾಲುಗಳಲ್ಲಿ ಭವತಾರಕರು ಪರಮಾತ್ಮನ ಸಾಕ್ಷಾತ್ಕಾರದ ತರುವಾಯ ತಾವು ಸೃಷ್ಟಿಯಲ್ಲಿ ನೂತನ ವೈಭವವನ್ನು ಕಂಡುದನ್ನು ಅರುಹಿರುವರು. ಜಗತ್ತಿನಲ್ಲಿ ನವಜೀವನವು ಇಲ್ಲವೇ ನವನಿರ್ಮಿತಿಯು ಆದಂತೆ ಅವರಿಗನಿಸಿತು. ಪೃಥಿವಿಯ ತಳದಿಂದ ಪರ್ವತದ ತುದಿಯವರೆಗಿನ ಇಡಿ ಜಗತ್ತು ನಿಷ್ಕಲ ಪರಮಾತ್ಮನಿಂದ ತುಂಬಿದಂತೆ ಕಂಡಿತು. ಈ ಬಗೆಯಾಗಿ, ಭವತಾರಕರು ಉತ್ಸಾಹಪೂರ್ಣ ಮಾದರಿಯ ಧ್ಯಾನಪ್ರಿಯ ಅನುಭಾವಿಗಳಿರುವಂತೆ ಕಾಣುವುದು., ಅವರು ನೈರಾಶ್ಯಪೂರ್ಣ ದಾರ್ಶನಿಕರಿಂದ ತೀರ ವಿಭಿನ್ನರು. ಅವರು ಜಗತ್ತಿನ ಧ್ಯಾನ-ಸಹವಾಸಗಳಲ್ಲಿಯೆ ಪರಮಾನಂದವನ್ನು ಅನುಭವಿಸುವರು.

ನಾವಿನ್ನು, ಪರಮಾತ್ಮ ಸಾಕ್ಷಾತ್ಕಾರದ ಉನ್ಮಾದ ವಿಷಯಕ ಅಂಗವನ್ನು ಬಣ್ಣಿಸುವ ಮುಂದಿನ ಪದ-ಪುಂಜದೆಡೆಗೆ ತೆರಳುವೆವು. ಈ ಬಗೆಯ ಪಾರಮಾರ್ಥಿಕ ಉನ್ಮಾದವನ್ನು ಆಗಾಗ ಪಡೆಯುವ ಅನುಭಾವಿಗಳನ್ನು ಹಿರಿಯ ಧರ್ಮಗುರು

ಗಳನೇಕರು ಉಲ್ಲೇಖಿಸುರುವರು. ತುಕಾರಾಮರು ಹೇಳಿರುವುದೇನೆಂದರೆ: ಅನುಭಾವಿಯು ಜನಸಾಮಾನ್ಯರಿಗೆ ಮರುಳನಂತೆ, ಸುಮಾರಾಗಿ ಪಿಶಾಚಿಯಂತೆಯೆ ಕಾಣಬಹುದು. ಆದರೆ ನಿಜವಾಗಿ ಆತನು ತನ್ನ ಅಂತರಂಗದ ಆಳದಲ್ಲಿ ತುಂಬ ಜಾಣನಾಗಿರುವನು. ಯಾಕಂದರೆ ಅವನು ಪರಬ್ರಹ್ಮನಲ್ಲಿ ಪೂರ್ತಿಯಾಗಿ ಬೆರೆತಿರುವನು.

'ಜಗಾತ ಪಿಶಾಚ ಅಂತರೀ ಶಹಾಣಾ।

ಸದಾ ಬ್ರಹ್ಮೀ ಜಾಣಾ ನಿಮಗ್ನೆ ತೋ॥

ನಾರದರು ತಮ್ಮ ಭಕ್ತಿಸೂತ್ರಗಳಲ್ಲಿಯ ಮುಂದಿನ ಸೂತ್ರದಲ್ಲಿ ಇದೇ ವಿಚಾರವನ್ನು ಪುನರುಚ್ಚರಿಸಿರುವರು:

'ಯಜ್ಞಾತ್ವಾ ಮತ್ತೋಭವತಿ। ಸ್ತಬ್ಧೋಭವತಿ। ಆತ್ಮಾರಾಮೋಭವತಿ।' 'ಯಾವುದನ್ನು ಅರಿತೊಡನೆ ಮನುಜನು ಉನ್ಮತ್ತನಾಗುವನು; ಶಾಂತನಾಗುವನು; ಆತ್ಮನಲ್ಲಿ ಆನಂದಿತನಾಗುವನು.' ಕಬೀರರು ಹೇಳುವ ಮೇರೆಗೆ, "ಅನುಭಾವಿಯು ಮದ್ದಾನೆಯಂತೆ ಇಪ್ಪತ್ತು-ನಾಲ್ಕು ಗಂಟೆ ತನ್ನ ಶರೀರವನ್ನು ಅತ್ತಿತ್ತ ತೂಗಾಡಿಸುತ್ತಿರುವನು" ಸಂತರು ಪರಮಾತ್ಮನ ಪ್ರೀತಿಯಿಂದ ಮತ್ತರಾಗುವರು ಮತ್ತು ಅವರು ತಮ್ಮ ದೈವೀ ಉನ್ಮಾದದಲ್ಲಿ ನಲಿದಾಡುವರು. ಆಟೋ ಎಂಬ ದಾರ್ಶನಿಕರು ಇದನ್ನು ಕುರಿತು ಬರೆಯುವುದೇನೆಂದರೆ: ಪರಾತ್ಪರ ಶಕ್ತಿಯು ಜೀವಾತ್ಮನ ಅಂತರಾಳದಿಂದ ಒಮ್ಮೆಲೆ ಸ್ಫೋಟವಾಗುವಂತೆ ಹೊರಹೊಮ್ಮುವುದು. ಆಗ ಉಕ್ಕುಕ್ಕಿ ಬರುವ ಉದ್ರೇಕಗಳೂ, ಸಂಕ್ಷೋಭೆಗಳೂ ಉಂಟಾಗಬಹುದು; ಇಲ್ಲವೆ, ವಿಲಕ್ಷಣತಮವಾದ ಕೆರಳಿಕೆಗಳೂ, ಉನ್ಮಾದಾವೇಗವೂ, ಆನಂದಪರವಶತೆಯೂ, ಹರ್ಷೋನ್ಮಾದವು ಜನಿಸಬಹುದು. (ಪರಮಪವಿತ್ರತೆಯು ಕಲ್ಪನೆ. ಪು ೧೩) ವಿಶ್ವಾತೀತವಾದ ಪರತತ್ವವು ತನ್ನ ಘನತೆ-ಸಮೃದ್ಧಿಗಳ ಮೂಲಕ ಸಾಧಕನನ್ನು ಸ್ವಾಧೀನಪಡಿಸಿಕೊಂಡಾಗ, ಅದು ಅವನ ಬುದ್ಧಿಯನ್ನು ಭ್ರಾಂತಗೊಳಿಸುವುದಷ್ಟೇ ಅಲ್ಲದೆ, ಒಂದು ವಿಲಕ್ಷಣವಾದ ಸಮ್ಮೋಹನದಿಂದ ಅವನನ್ನು ಸೆರೆಹಿಡಿಯುವುದು. ಈ ಸಮ್ಮೋಹನವು ಎಷ್ಟೋ ಸಲ ಸತಿಯಾಗಿ ಬೆಳೆದು ದಿಗ್ಭ್ರಮೆಗೊಳಿಸುವ ಉನ್ಮಾದದ ಮಟ್ಟವನ್ನು ಕೂಡ ಮುಟ್ಟುವುದುಂಟು. (ಅದೇ ಗ್ರಂಥ. ಪು. ೩೧) ಧಾರ್ಮಿಕ ಉನ್ಮಾದದಿಂದ ತುಂಬಿದ ಸಾಧಕನು ದೇವಭರಿತನಾಗುವನು. ದೇವ-ಮತ್ತನಾಗುವನು. ನಾವಿಲ್ಲಿ ಒಂದು ಮಾತನ್ನು ಅರುಹಲು ಬಯಸುವೆವು: ಅದಾವುದೆಂದರೆ, ಜಾಣ್ಮೆ ವಿವೇಕವೆಂದು ಮಿತಿಮೀರಿ ಹೊಗಳಿದ ವಿಷಯವು ದೈವೀ ದೃಷ್ಟಿಯಿಂದ ಕೇವಲ ಶಬ್ದಗಳ ಹಾಳು ಹರಟೆಯಿರುವ ಸಂಭವವಿಲ್ಲದಿಲ್ಲ. ಆದುದರಿಂದ ಸಂತರ ವಿವರಿಸಬಾರದ ನಿಗೂಢ ಕರ್ಮಗಳು ಸಾಮಾನ್ಯ ಕಲ್ಪನೆಯನ್ನು ಮೀರುವುದರ ಮೂಲಕವಷ್ಟೇ ಅನನುಭವಿಗಳಾದ ಬುದ್ಧಿಶೀಲರಿಗೆ, ಕೇವಲ ಮರುಳುತನದಂತೆ ಕಾಣಬಹುದು.

ಜನಸಾಮಾನ್ಯರಿಗೆ ಇರುಳಿನಂತಿರುವದು ಯೋಗಿಗೆ ಹಗಲಾಗುವುದು; ಮತ್ತು ಅವರಿಗೆ ಹಗಲಿನಂತಿರುವದು ಅವನಿಗೆ ಇರುಳಾಗುವುದು' ಎಂದು ಭಗವದ್ಗೀತೆಯು ಹೇಳಿರುವದಿಲ್ಲವೇ?(II-೬೯)

ಇನ್ನು ನಾವು ವಿವರಿಸಲಿರುವ ಮುಂದಿನ ಎರಡು ಪದಗಳಲ್ಲಿ, ಪರಮಾತ್ಮನ ಪ್ರೇಮದಿಂದ ಮತ್ತರಾದ ಸಂತರ ಬೇರೆ ಬೇರೆ ಕರ್ಮಗಳ ರೂಪಕಾತ್ಮಕ ಬಣ್ಣನೆಯು ಬಂದಿರುವುದು. ಮೊದಲನೆಯ ಪದದಲ್ಲಿಯ ದೈವೀ ಉನ್ಮಾದದ ವಿಷಯವನ್ನು ನಾವು ಅಂತಿಮಗತಿಶಾಸ್ತ್ರೀಯ, ಮಾನಸಶಾಸ್ತ್ರೀಯ, ಸಾಮಾಜಿಕ ಹಾಗೂ ಪರಮಾನಂದ ವಿಷಯಕ-ಎಂಬ ನಾಲ್ಕು ದೃಷ್ಟಿಗಳಿಂದ ವಿವರಿಸುವೆವು. ಮೊದಲು ಅಂತಿಮಗತಿ ಶಾಸ್ತ್ರೀಯ ದೃಷ್ಟಿಯಿಂದ ನೋಡೋಣ! "ಎಂಥ ಹುಚ್ಚು ಹಿಡಿದಿತವಗ? ಯಾರು ಕಲಿಸಿಬಿಟ್ಟಾರವ್ವಾ?" ಎಂದು ಕವಿಯು ಕೇಳುವನು; ಮತ್ತು ಅವನು ಅನುಭಾವಿಯ ಅತೀತ-ಸಾಮಾನ್ಯ ಕ್ರಿಯೆಗಳ ಪಟ್ಟಿಯನ್ನು ಕೊಡಲು ಪ್ರಾರಂಭಿಸಿದುವನು. ಕವಿಯು ಹೇಳುವುದೇನೆಂದರೆ: "ಅವನು ಏನು ಮಾಡಿರುವುವನೆಂಬುದನ್ನು ನಿಮಗೆ ಅರುಹುವನು. ಅವನು ಸಂತಾನಾಭಿವೃದ್ಧಿಯ ಪ್ರಕ್ರಿಯೆಯನ್ನು ಅಳಿಸಿ, ಸಂತಾನರಹಿತನಾಗಿರುವನು." ಅವನು ಸಂತಾನ ಸಾತತ್ಯವನ್ನು ಕಡಿದು ಪುನರ್ಜನ್ಮವನ್ನೇ ನಿಲ್ಲಿಸಿಬಿಟ್ಟನು ಎಂಬುದು ಇದರ ಸ್ಪಷ್ಟವಾದ ಸೂಚನೆ. ಕವಿಯು ಮತ್ತೂ ಅರುಹುವದೇನೆಂದರೆ: "ಅವನು ಗಡಿಗಳನ್ನೆಲ್ಲ (ದೇಹಗಳನ್ನೆಲ್ಲ) ಒಡೆದು, ಎಲ್ಲ ಜನ್ಮಗಳನ್ನು ತಡೆಯವನು. ಅವನು ಅಡಿಗೆಯ ಗಡಿಗೆಯನ್ನು ಮಾಡುವಾಗ ಬಳಸಲಾಗುವ ಕಟ್ಟಿಗೆಯ ಹುಟ್ಟನ್ನು ನಾಶಗೊಳಿಸುವನು." ತನ್ನ ನಿಷ್ಕಾಮಕರ್ಮದಿಂದ ಅನುಭಾವಿಯು ಕರ್ಮಗಳಲ್ಲಿಯ ಫಲಿಸುವ ಅಂತಃಶಕ್ತಿಯನ್ನೇ ಸುಟ್ಟುಬಿಡುವನು. ಹಾಗೂ ಈ ಬಗೆಯಾಗಿ ಮುಂದಿನ ಜನ್ಮಗಳ ಸಂಭಾವ್ಯತೆಗಳನ್ನೇ ಪೂರ್ತಿಯಾಗಿ ಅಳಿಸಿಬಿಡುವನು ಎಂಬುದೇ ಇದರ ರಹಸ್ಯಾರ್ಥ. ಆನುಷಂಗಿಕವಾಗಿ, ಇಲ್ಲಿ 'ಹುಟ್ಟು' ಎಂಬ ಶಬ್ದವು ಮುಂದಿನ ಎರಡರ್ಥಗಳಲ್ಲಿ ಬಳಸಲಾಗಿರುವುದು ಎಂಬುದನ್ನು ನಾವು ಕಾಣಬಹುದು: 'ಜನ್ಮ' ಎಂಬುದು ಒಂದು, 'ಕಟ್ಟಿಗೆಯ ಸವುಟು' ಎಂಬುದು ಎರಡನೆಯದು. ಕೂಡಲೂರೇಶನ ಹೇಳಿಕೆಯು ಮೇರೆಗೆ, ದೇವಮತ್ತನಾದ ಅನುಭಾವಿಯು ತಾನು ಧರಿಸಿದ ಅರಿವೆಗಳನ್ನು ಹರಿಯುವನು. ಇಲ್ಲಿ ಅರಿವೆಗಳು ಭಗವದ್ಗೀತೆಯಲ್ಲಿ ಅರುಹಿದ ಮೇರೆಗೆ ದೇಹವನ್ನು ಪ್ರತಿನಿಧಿಸುವವು. ಗೀತೆಯಲ್ಲಿ ಜೀವಾತ್ಮನು ಜನ್ಮ-ಜನ್ಮಾಂತರಗಳಲ್ಲಿ ದೇಹರೂಪಿಯಾದ ವಸ್ತ್ರಗಳನ್ನು ಬದಲಿಸುವನೆಂದು ಅರುಹಲಾಗಿರುವುದು ಎಲ್ಲರೂ ಅರಿತ ವಿಷಯ.

ಇನ್ನು ಅದರ ಮಾನಸಶಾಸ್ತ್ರೀಯ ಅಂಗವನ್ನು ಕುರಿತು ಕೂಡಲೂರೇಶರು ಅರುಹುವದೇನೆಂದರೆ: ಅನುಭಾವಿಯು ಕಟ್ಟಿದ ಗೋಡೆಯನ್ನು ಕೆಡಹುವನು. ಇಲ್ಲಿ

ಗೋಡೆಯೆಂದರೆ ಸಾಧಕರ ಜೀವನದಲ್ಲಿ ಕೋಲಾಹಲವನ್ನು ಎಬ್ಬಿಸುವ ಸುದೃಢವಾದ ಕಲ್ಪನೆಗಳು ಹಾಗೂ ಮನಃಪ್ರವೃತ್ತಿಗಳು. ಸಮಾಜದಲ್ಲಿ ನಿಂದ್ಯವೆಂದು ಬಗೆಯಲಾದ ಬಯಕೆಗಳ ನಿರೋಧದದಿಂದ ಜನಿಸಿದ ಈ ಮನಃಪ್ರವೃತ್ತಿಗಳನ್ನು ಅನುಭಾವಿಯ ಪುಡಿ ಪುಡಿ ಮಾಡುವನು.

ಮೂರನೆಯದಾಗಿ, 'ಸಂತರು ತಮ್ಮ ಸ್ವಂತ ಶರೀರದ ಸುಖವನ್ನು ಕೂಡ ಲೆಕ್ಕಿಸುವುದಿಲ್ಲ. ಹೀಗಿರಲು ಅವರು ಪರರ ಸುಖವನ್ನು ಹೇಗೆ ಗಮನಿಸುವರು?' ಎಂದು ಕವಿಯು ಕೇಳುವನು. ಸಂತರು ಪರಮಾತ್ಮನನ್ನು ತಮ್ಮ ಎಲ್ಲ ಪ್ರಯತ್ನಗಳ ಧ್ರುವತಾರೆಯೆಂದು ಕಲ್ಪಿಸುಉವರು ಮತ್ತು ಆತನ ಬಗೆಗೆ ಅಪಾರವಾದ ಭಕ್ತಿಯಿಂದ ತುಂಬಿತುಳುಕುವರು. ಈ ಕದಲದ ಉತ್ಕಟ ಭಕ್ತಿಯ ಫಲವಾಗಿ, ಅವರು ತಮ್ಮ ದೇಹಸುಖವನ್ನು ತಿರಸ್ಕರಿಸುವರು. ಹಾಗೂ ತಮ್ಮ ಬಾಂಧವರ ಭೌತಿಕ ಆಶೆ ಆಕಾಂಕ್ಷೆಗಳ ಅತಿಯಾದ ಆಸಕ್ತಿಯನ್ನು ಕಂಡು ಅವರು ಆಶ್ಚರ್ಯಪಡಬಹುದು.

ಕೊನೆಯದಾಗಿ, ಈ ದೈವೀ ಉನ್ಮಾದದಲ್ಲಿ ಆನಂದಾಂಶವೂ ಒಂದು ಇರುವುದುಂಟು. ಅನುಭಾವಿಯು ತನ್ನ ಹಮ್ಮುಬಿಮ್ಮುಗಳನ್ನೆಲ್ಲ ಅಳಿಸಿ, ತಾನೇ ಬ್ರಹ್ಮನೆಂಬ ಅರಿವನ್ನು ಪಡೆಯುವನು. ತರುವಾಯ ಅವನು ತನ್ನ ಮಾತನ್ನು ತಾನೇ ಕೇಳಿ, ವಿಶೇಷ ಕಾರಣವೇನೂ ಇಲ್ಲದೆ ತುಂಬ ನಗೆಗಡಲಲ್ಲಿ ಮುಳುಗುವನು. ಅಂದರೆ ಆತ್ಮನನ್ನು ಕುರಿತು ಮಾತಾಡುವಾಗ ಪರಮಾನಂದಭರಿತನಾಗುವನು. ಈ ರೀತಿ ಕೂಡಲೂರೇಶರು ಈ ಜಗತ್ತಿನಲ್ಲಿ ಬಾಳುತ್ತಿರುವಾಗ ಕೂಡ ಅನಂತ ಅಕಾಶವನ್ನು ವ್ಯಾಪಿಸುವ ಹಿರಿಯ ಪ್ರಭೆಯಾದರಂತೆ.

ದೈವೀ ಉನ್ಮಾದವನ್ನು ಕುರಿತ ಮುಂದಿನ ಪದವಾದ 'ಹುಚ್ಚು ಹಿಡಿಯಿತು ಎನಗೆ' ಎಂಬುದು ಪುರಂದರದಾಸರ ಪದವು. ಈ ಪದದಲ್ಲಿಯೂ ಹಿಂದಿನ ಕೂಡಲೂರೇಶರ ಪದದಲ್ಲಿಯೂ ಹಲ ಸಾಮ್ಯಸ್ಥಲಗಳಿರುವವು. ಗೋಡೆ, ಅರಿವೆ, ಮತ್ತು ಪಾತ್ರೆಗಳ ರೂಪಕಗಳು ಪುರಂದರದಾಸ ಕೂಡಲೂರೇಶರ ಎರಡೂ ಪದಗಳಲ್ಲಿ ಸಮಾನವಾದವುಗಳು. ಪುರಂದರದಾಸರು ಪ್ರಾಚೀನರಾಗಿದ್ದರೆ, ಕೂಡಲೂರೇಶರು ಈ ಕಲ್ಪನೆಗಳನ್ನು ಅವರಿಂದ ಸ್ವೀಕರಿಸಬಹುದು. ಪುರಂದರ ದಾಸರ ಹೆಚ್ಚಿನ ಸಾಹಿತ್ಯ-ಶಕ್ತಿಯ ಮೂಲಕ ಅವರ ಪ್ರಸ್ತುತ ಪದದಲ್ಲಿ ಈ ಕಲ್ಪನೆಗಳು ಹೆಚ್ಚು ವ್ಯವಸ್ಥಿತವಾಗಿ ಅರುಹಲಾಗಿರುವುದು ತೀರ ಸಹಜ. ಅದೇನು ಅಷ್ಟೊಂದು ಸೋಜಿಗದ ಸಂಗತಿಯಲ್ಲ.

ಪುರಂದರದಾಸರು ಹೇಳುವುದೇನೆಂದರೆ: "ಹುಚ್ಚು ಹಿಡಿಯಿತು, ಎನಗೆ ಹುಚ್ಚು ಹಿಡಿಯಿತು. ಪರಮಾತ್ಮನ ನಾಮರೂಪಿಯಾದ ನನ್ನ ಮೆಚ್ಚಿಕೆಯ ಮದ್ದು

ತಲೆಗೆ ಏರಿರುವುದರಿಂದ ನಾನು ಉನ್ಮಾದಭರಿತನಾಗಿರುವೆ." ಈ ಉನ್ಮಾದದ ಫಲವಾಗಿ ದಾಸರು ವಿಲಕ್ಷಣವಾದ ಕ್ರಿಯೆಗಳಲ್ಲಿ ರತರಾಗಿರುವರು. ಅವರು ಮಾಯಾಪಾಶವೆಂಬ ಅರಿವೆಯನ್ನು ಹರಿಯುವರು. ತರುವಾಯ ಮಾನವ ಶರೀರಗಳೆಂಬ ಗೋಡೆಗಳಿಂದ ದುರ್ಗುಣಗಳ ಗಿಲಾವನ್ನು ಕೆದರಿಹಾಕುವರು. ಇಲ್ಲಿ ನಾವು ಮುಂದಿನ ಮಾತನ್ನು ಚೆನ್ನಾಗಿ ಗಮನಿಸಬೇಕು. ಮನುಜನು ತನ್ನ ಬಾಲ್ಯದಿಂದಲೇ ದುಷ್ಕರ್ಮಗಳಲ್ಲಿ ನಿರತನಾದ ಮೂಲಕ, ಗೋಡೆಗಳಿಗೆ ಗಿಲಾವು ಅಂಟಿಕೊಳ್ಳುವಂತೆ ಅವು ಅವನ ದೇಹಕ್ಕೆ ಗಟ್ಟಿಯಾಗಿ ಅಂಟಿಕೊಳ್ಳುವವು. ಈ ರೀತಿ ತನ್ನ ದೃಢವಾದ ದುಶ್ಚಟಗಳಿಂದ ಬಿಡುಗಡೆ ಮಾಡಿಕೊಳ್ಳುವುದು ಸಾಧಕನಿಗೆ ಒಂದು ಪ್ರಚಂಡವಾದ ಕೆಲಸವಾಗುವುದು. ನಾವು ಹಿಂದಿನ ಪದದಲ್ಲಿ ಕಂಡ ಮೇರೆಗೆ, ಅನುಭಾವಿಯು ಭವಕಷ್ಟಗಳೆಂಬ ಕುಂಭಗಳನ್ನು ಒಡೆದುಬಿಡುವನು. ಇಂಥ ಪ್ರಮತ್ತ ಪುರುಷನು ದುಷ್ಟರನ್ನು ಕಂಡಾಗ ಅವರ ಮೇಲೆ ಕಲ್ಲುಗಳನ್ನು ಎಸೆಯುವನು. ತರುವಾಯ ಅವನು ಕೇಶವನಿಗೆ ಏರಿಸಿದ ಹೂಗಳನ್ನು ತನ್ನ ಸ್ವಂತ ತಲೆಯ ಮೇಲೆ ಇರಿಸಿ, ಮಗುವಿನಂತೆ ಲೀಲೆಯಿಂದ ಕುಣಿಯತೊಡಗುವನು. 'ದೇವ-ರಾಜ್ಯ'ವು ಮಗುವಿನ ಮನೆ ಎಂದು ಕ್ರೈಸ್ತನು ಹೇಳಿರುವನು. ಆದುದರಿಂದ ನಾವು ಚಿಕ್ಕ ಮಕ್ಕಳಂತಾಗದೆ, 'ದೇವ-ರಾಜ್ಯ'ವನ್ನು ಸಏರಲರಿಯೆವು. ಅನುಭಾವಿಯು ಪರಮಾತ್ಮನಲ್ಲಿ ನಿಷ್ಠೆಯುಳ್ಳವರನ್ನು ಕಂಡಾಗ, ಅವರ ಹಿಂದೆ ಹಿಂದೆ ತಿರುಗುವನು. ಶ್ರೀಕೃಷ್ಣನು ವಿಯೋಗದ ಮೂಲಕ ಅವನು ಆತನ ಅಂಘ್ರಿಕಮಲದಲ್ಲಿ ಸೊರಗಿ, ಕೊರಗಿ ಬೀಳುವನು. ಈ ದೈವೀ ಉನ್ಮಾದದಲ್ಲಿ ಅವನು ಹರಿ! ವಾಸುದೇವ! ಎಂದು ಒರಲುತ್ತ ಅತ್ತಿತ್ತ ಅಲೆಯುವನು. ಗೋಪಿಯರ ಈ ಬಗೆಯ ವರ್ತನೆಯನ್ನು ಮೀರಾಬಾಯಿಯವರು ಅರುಹಿರುವರು. ಗೋಪಿಯರು ಮೊಸರನ್ನು ಮಾರಲು ಹೊರಹೊರಟಾಗ, ಅವರ ಅಂತರಂಗವು ಶ್ರೀ ಹರಿಯ ಉಪಸ್ಥಿತಿ ಪ್ರಭಾವಗಳಿಂದ ತುಂಬಿದ ಮೂಲಕ ಅವರು, 'ಮೊಸರು ಕೊಳ್ಳಿರಮ್ಮಾ!' ಎಂದು ಕೂಗತೊಡಗಿದರಂತೆ. ಕೊನೆಯದಾಗಿ, ಇಂಥ ಅನುಭಾವಿಯು ಸ್ವತಂತ್ರವಾದ ಏಕಾಂತಜೀವನ ಬಾಳುವುದನ್ನು ನಾವು ಕಾಣುವೆವು. ಭಗವಂತನೇ ಆತನ ಏಕಮೇವ ಬಂಧುವಿರುವ ಮೂಲಕ, ಅವನು ಅವರ ಗೊಡವೆಗೆ ಎಂದೂ ಹೋಗುವುದಿಲ್ಲ. ನಿಜವಾಗಿ ನಮ್ಮ ಅನ್ಯ ಬಳಗದವರು ಮೌನಸಮ್ಮತಿಯ ಬಲದಿಂದ ಬಳಗದವರು. ನಮ್ಮ ನಿಜವಾದ ಆಪ್ತಸ್ನೇಹಿತನು ಪರಮಾತ್ಮನೊಬ್ಬನೇ! "ಪ್ರತಿಯೊಂದು ವಿಷಯವು ನಮಗೆ ಆತ್ಮನಿಗಾಗಿ ಪ್ರಿಯವಾಗಬೇಕು. ತನ್ನಷ್ಟಕ್ಕೆ ತಾನೇ ಪ್ರಿಯವಾಗಕೂಡದು". ಎಂದು ಉಪನಿಷತ್ತು ನಮಗೆ ಅರುಹುವದು. 'ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತು!' ಈ ಬಗೆಯಾಗಿ ಅನುಭಾವಿಯು

ಪೂರ್ಣ ಅಲಿಪ್ತನಾಗುವನು. ಅವನು ಸದೈವ ಪುರಂದರ ವಿಠ್ಠಲನನ್ನು ನೆನೆಯುತ್ತ ಆನಂದದಿಂದ ನಲಿದಾಡುವನು, ಕುಣಿದಾಡುವನು.

'ಸದ್ಗುರು ಸಾಕಿದ ಮದ್ದಾನೆ ಬರುತದೆ'ಎಂಬ ಕಲ್ಮೇಶ್ವರರ ಕೊನೆಯ ಪದದಲ್ಲಿ, ಕರ್ಮ-ಪ್ರಧಾನ ಅನುಭಾವಿಯು 'ಸದ್ಗುರು ಸಾಕಿ ಬೆಳೆಸಿದ ಮದ್ದಾನೆ' ಯಂತಿರುವನೆಂದು ಹೇಳಲಾಗಿದೆ. ಈ ಆನೆಯು ಮೊದಲು ಒಂದು ಹಿರಿಯ ಸಾಮಾಜಿಕ ಕಾರ್ಯಮಾಡುವದು: ಅದು ಸಂಸಾರದ ಕೊಳ್ಳದಲ್ಲಿ ಬಿದ್ದು ಒದ್ದಾಡುವ ತನ್ನ ಅನೇಕ ಬಾಂಧವರನ್ನು ಉದ್ಧರಿಸುವುದು-ಮೇಲಕ್ಕೆ ಎತ್ತುವುದು. ಒಂದು. ಒಂದು ತರಬೇತಿಯನ್ನು ಪಡೆದ ಸಾಕಿದಾನೆಯು, ತಗ್ಗಿನಲ್ಲಿ ಕೆಡಹಲಾದ ಬೇರೆ ಆನೆಗಳನ್ನು ಆ ತಗ್ಗಿನೊಳಗಿಂದ ಹೊರತಗೆಯುವ ಬಗೆಯನ್ನು ಅನೇಕರು ಅರಿತಿರಬಹುದು. ಈ ತಗ್ಗಿನಲ್ಲಿಯ ಆನೆಗಳು ಅತಿಯಾಗಿ ಮತ್ತವಾಗಿದ್ದವು. ಆದುದರಿಂದ ಅವನ್ನು ಸಾಧು ಮಾಡಬೇಕಾಗಿದ್ದಿತು. ಅದಕ್ಕಾಗಿ ಅವು ಅಸನ್ನಮರಣವಾಗುವ ವರೆಗೆ ಅವನ್ನು ಉಪವಾಸ ಬೀಳಿಸಲಾಗುತ್ತಿತ್ತು. ಅದರ ಮೂಲಕ ಈ ಸಾಧು ಆನೆಯು ಅವನ್ನು ಹೊರದೆಗೆಯುವುದು ಸುಲಭ ಸಾಧ್ಯವಾಗುತ್ತಿತ್ತು. ಈ ಪದ್ಧತಿಯು ಮೈಸೂರು ಸೀಮೆಯಲ್ಲಿ 'ಖೆಡ್ಡಾ' ಪದ್ಧತಿಯೆಂದು ಪರಿಚಿತವಿರುವುದು.

ಇನ್ನು ಈ ಸಂತರೂಪಿಯಾದ ಮದ್ದಾನೆಯು ಮೊದಲು ಉದ್ಧಾರಕಾರ್ಯವನ್ನು ನೆರವೇರಿಸುವುದು. ತಗ್ಗಿನಲ್ಲಿ ಬಿದ್ದವರನ್ನು ಮೇಲಕ್ಕೆತ್ತುವುದು ಅದರ ಪ್ರಾಥಮಿಕ ಕೆಲಸಗಳಲ್ಲಿ ಒಂದಾಗಿರುವುದು. ಯಾಕಂದರೆ ತಮ್ಮ ಸದ್ಗುರುಗಳಿಂದ ಇಲ್ಲವೆ ಪರಮಾತ್ಮನಿಂದ ಅವರು ಅದರ ತರಬೇತಿಯನ್ನು ಪಡೆದಿರುವರು. ಕಲ್ಮೇಶ್ವರರು ಅರುಹುವ ಈ ಮದ್ದಾನೆಯ ಎರಡನೆಯ ಕಾರ್ಯವು ಸಂತರಿಗೆ ಸಾಮಾನ್ಯವಾಗಿ ಅಂಟಿಸಲಾದ ನಿಷ್ಕ್ರಿಯ ನೈರಾಶ್ಯಮಯ ಕಾರ್ಯವಲ್ಲ, ಆದರೆ ಅದು ವಸ್ತುನಿಷ್ಠ ತುಂಬ ಚಟುವಟಿಕೆಯಿಂದ ಕೂಡಿದ ಕಾರ್ಯವು. ಕೆಡಕು ದಿಟವಾದುದು. ಅದನ್ನಾಗಲಿ, ಇಲ್ಲವೆ ಅದು ಕಾಣಿಸಿಕೊಳ್ಳುವ ಅದರ ವಿವಿಧ ರೂಪಗಳನ್ನಾಗಲಿ, ನಾವು ಅಲ್ಲಗಳೆಯಲರಿಯೆವು. ಕನ್ನಡ ಸಂತರು ಅಷ್ಟಮದಗಳನ್ನು ಅರುಹಿರುವರು. ಈ ಮದಗಳನ್ನು ಪುಡಿಮಾಡಿ ಹುಡಿಗೂಡಿಸುವುದು ಈ ಮದ್ದಾನೆಯ ಕೆಲಸ. ಅದು ಕಾಮ-ಕ್ರೋಧಗಳನ್ನೂ, ಹಾಗೂ ಇಂಥ ದುಷ್ಟಶಕ್ತಿಗಳ ಇಡಿ ಬಳಗವನ್ನೂ ಸೀಳಿಬಿಡುವುದು. ಅವುಗಳ ಹಿರಿಮೆಯನ್ನೂ ಕಾಠಿಣ್ಯವನ್ನೂ ಅದು ಲೆಕ್ಕಿಸುವುದಿಲ್ಲ. ಅವನ್ನು ಕಂಡ ಕೂಡಲೆ ಅದು ಅವನ್ನು ಸೀಳಿಬಿಡುವುದು. ಈ ರೀತಿ ಇಂಥ ಮದ್ದಾನೆಯ ಕಾರ್ಯದಲ್ಲಿ. ವಿನಾಶಕ ಅಂಶವು ಒಂದಿರುವುದೆಂಬುದನ್ನು ನಾವು ನೆನೆಯಬೇಕು. ಕೆಡಕನ್ನು

ನಾಶಗೊಳಿಸಲೇ ಬೇಕು. ಅದನ್ನು ಸಹಿಸಕೂಡದು. ಅದನ್ನು ತುಳಿದು ಅಳಿಸಲೇ ಬೇಕು–ಕೆಡಿಸಲೇ ಬೇಕು. ಅದೇ ಕಾಲಕ್ಕೆ ಇಲ್ಲಿ ವಾಸ್ತವವಾದದ ಒಂದಂಶವೂ ಇರುವುದೆಂಬುದನ್ನೂ ಗಮನಿಸಬೇಕು. ನಾವೀ ಪ್ರಪಂಚದಲ್ಲಿ ವಾಸ್ತವಿಕ ರೀತಿಯಿಂದ ಬಾಳಬೇಕು. ಬರೀ ಕನಸಿನ ನಾಡಿನಲ್ಲಿ ಅಲೆಯಕೂಡದು.

ಈ ಕ್ರಿಯಾಶೀಲ ಆನೆಯು ಮಾಡುವ ಇನ್ನೊಂದು ಕೆಲಸವು ಈ ಬಗೆಯದಿರುವುದು: ಅದು ನಾಲ್ಕು ದಾರಿಗಳು ಕೂಡುವ ಕೂಟದಲ್ಲಿ ನಿಂತು ಅವನ್ನೆಲ್ಲ ತಡೆಗಟ್ಟುವುದು. ಅದು ಪೋಲಿಸರಂತೆ ಯಾರನ್ನೂ ಒಂದು ಬದಿಯಿಂದ ಇನ್ನೊಂದು ಬದಿಗೆ ಹೋಗಗೊಡುವುದಿಲ್ಲ. ದೊಂಬಿಯೆದ್ದಾಗ ಪೋಲಿಸ್ ಸಿಪಾಯಿಗಳು ಈ ಬಗೆಯಾಗಿ ಮಾಡುವುದನ್ನು ನಾವು ಕಾಣುವೆವು. ಅವರು ಒಂದು 'ಚೌಕಿ'ನಲ್ಲಿ ನಿಂತು, ಜನರ ಅಲೆದಾಟವನ್ನು ನಿಲ್ಲಿಸಿಬಿಡುವರು. ಈ ರೀತಿ, ಈ ಮದ್ದಾನೆಯು ಜನನ–ಮರಣಗಳ ದಾರಿಯನ್ನು ಕಟ್ಟಿಬಿಡುವುದು.

ಈ ಆನೆಯು, ವಿಶೇಷತಃ ವಿವಿಧ ದಾರಿಗಳು ಕೂಡುವ ಸ್ಥಲದಲ್ಲಿಯೆ ನಿಲ್ಲುವ ಮೂಲಕ, ನಾವಿದನ್ನು ಒಳ್ಳೆಯದೆಂದೆನಬೇಕೋ ಹೇಗೆಂಬುದು ಒಂದು ಸಮಸ್ಯೆಯಾಗಿರುವುದು. ಆದರೆ ಇದು ಮುಂದಿನ ಜನ್ಮ–ಮರಣಗಳ ಪ್ರಕ್ರಿಯೆಯನ್ನು ನಿಲ್ಲಿಸುವುದೆಂಬುದು ಮಾತ್ರ ನಿಜ. ಆದುದರಿಂದ ಬಹುತರವಾಗಿ ಈ ಪ್ರತಿಬಂಧಕ ಕಾರ್ಯವು ಕೂಡ ಒಂದು ವಿಧಾಯಕ ಅಂಶವನ್ನು ಒಳಗೊಂಡಿರವುದು. ಕಲ್ಮೇಶ್ವರರು ಬಣ್ಣಿಸಿದ ಇಂಥ ಆನೆಯನ್ನು ಕುರಿತು ಇನ್ನೊಂದು ಮಾತು ವಿಚಾರಣೀಯವಿರುವುದು. ಕೆಡುಕನ್ನು ಕೆಡಿಸಿದ ತರುವಾಯ. ಅದು ತನ್ನಲ್ಲಿ ಅಂತರ್ಗತವಾಗಿರುವ ಪರಮಾನಂದವನ್ನು ಸವಿಯುವ ಶಾರೀರಿಕ ಭಾವಗಳು ಸದ್ದೈವ ಇದ್ದೇ ಇರುವುದರಿಂದ ಪರಮಾನಂದವನ್ನು ಸವಿಯುವ ಈ ಮದ್ದಾನೆಯ ಯಾವ ಶಾರೀರಿಕ ಭಾವಗಳು ನಮಗೆ ಕಾಣಬಲ್ಲವು ಎಂಬುದನ್ನು ನೋಡೋಣ! ಅದು ಮೊದಲು ಬಾನಿನೆಡೆ ನೋಡುವುದು. ಅದರರ್ಥವೇನು ಎಂಬುದನ್ನು ಪ್ರತಿಯೊಬ್ಬ ಸಾಧಕನು ಬಲ್ಲನು. ತರುವಾಯ ಅದು ತನ್ನ ಪ್ರಾಣವಾಯುವನ್ನು ನುಂಗುವುದು. ಪಾರಮಾರ್ಥಿಕ ಧ್ಯಾನಕ್ಕಾಗಿ ಅದು ಪ್ರಾಣವಾಯುವನ್ನು ಚೆನ್ನಾಗಿ ಬಳಸುವುದು. ಆಮೇಲೆ ಅದು ಒಂದು ಮಧುರವಾದ ನಾದವನ್ನು ಮಾಡುತ್ತ ಮುಂದುವರಿಯುವುದು; ಮತ್ತು ಕೊನೆಗೆ ತನ್ನ ಸೊಂಡಿಲಿನಿಂದ ನಾಲ್ಕು ಮೂಲೆಗಳುಳ್ಳ ತನ್ನ ಹಣೆಯ ಹಿನ್ನೆಲೆಯಲ್ಲಿ ಓಂಕಾರದ ಆಕೃತಿಯನ್ನು ನಿರ್ಮಿಸುವುದು. ಇದೊಂದು ಅತಿ ಅದ್ಭುತವಾದ ಮಾತು. ನೀವು ಒಂದು ಆನೆಯನ್ನು ನೋಡಿದಿರೆಂದರೆ, ಅದರ ಹಣೆಯ ಮೇಲೆ ನಾಲ್ಕು ಉಬ್ಬುಗಳು ಇರುವುದನ್ನು ಕಾಣಬಹುದು. ಅದರ ಮೆದುಳಿ ಮೇಲ್ಭಾಗದ

ಬದಲಾಗಿ, ಮುಂಭಾಗದಲ್ಲಿ ನಾಲ್ಕು ಹಾಲೆಗಳ ಮಧ್ಯದಲ್ಲಿ ನೆಲೆಸಿರುವಂತೆ ತೋರುವುದು. ಅದರ ಮುಂಭಾಗದ ಉಬ್ಬುಗಳ ಹಿನ್ನೆಲೆಯಲ್ಲಿ ಆನಂದಭರಿತವಾದ ಆನೆಯು ಗಣೇಶನಂತೆ, ಓಂಕಾರದ ಆಕೃತಿಯನ್ನು, ಹೇಗೆ ನಿರ್ಮಿಸುವುದೆಂಬುದನ್ನು ನಾವು ಬಲ್ಲೆವು. ಈ ಓಂಕಾರವನ್ನು ಶ್ರೀ ಜ್ಞಾನೇಶ್ವರರು ಈ ರೀತಿ ಬಣ್ಣಿಸಿರುವರು:

ಓಂ ನಮೋ ಜೀ ಆದ್ಯಾ। ವೇದ ಪ್ರತಿಪಾದ್ಯಾ।

ಜಯ ಜಯ ಸ್ವಸಂವೇದ್ಯಾ। ಆತ್ಮರೂಪಾ॥

ದೇವಾ ತೂಚಿ ಗಣೆಶೂ।

'ಎಲೈ! ವೇದಗಳಿಂದ ಸ್ತುತಿಸಲಾದ, ಓಂಕಾರರೂಪಿಯಾದ ಆದಿಪುರುಷನೇ! ನಿನಗೆ ಜಯಜಯಕಾರವಿರಲಿ! ಆತ್ಮರೂಪಿಯಾದ ಪ್ರಭುವೇ! ನೀನೇ ನಿನ್ನನ್ನು ಅರಿಯಬಲ್ಲಿ! ನೀನೇ ಗಣೇಶನಿರುವಿ!'

ಕೊನೆಯದಾಗಿ ಇಂಥ ಆನೆಯು ಕಾಣಲಿರುವ ಏಕಮೇವ ಲಕ್ಷ್ಯವು ಪ್ರಣವ ಸ್ವರೂಪವು. ಕರುಣಪೂರ್ಣ ಪ್ರಭುವಿನ ದರ್ಶನವೇ ಅದು ತನ್ನೆದುರಿರಿಸಿದ ಏಕಮೇವ ಗುರಿಯು; ಮತ್ತು ಅದರ ಕಂಗಳೆದುರು ಸತತವಾಗಿ ನಿಂತಿರುವ ಆನಂದಭರಿತವಾದ ಈ ದರ್ಶನದ ಮೂಲಕ, ಅದು ಕೊನೆಗೆ ಪ್ರಕಾಶಮಯನಾದ ಆತ್ಮನಲ್ಲಿ ಬೆರೆತುಬಿಡುವುದು, ಚಿನ್ಮಯನೆ ತಾನಾಗುವದು.

■■

ಪ್ರಕರಣ ಇಪ್ಪತ್ತು

ಅನುಭಾವದ ಪರಿಣಾಮಗಳು- (ಭಾಗ ೨)

ಕಳೆದ ಪ್ರಕರಣದಲ್ಲಿ ನಾವು ಆತ್ಮಾನುಭವದ, ಮುಕ್ತಿದಾಯಕ, ವಿಶ್ವವಿಷಯಕ ಹಾಗೂ ಉನ್ಮಾದಕಾರಕ ಪರಿಣಾಮಗಳನ್ನು ವಿವರಿಸಿರುವೆವು. ಈ ಕೊನೆಯ ಪ್ರಕರಣದಲ್ಲಿ ನಾವು ಅದರ ನೈತಿಕ, ಪರಮಾನಂದವಿಷಯಕ, ಹಾಗೂ ದೇವರಾಜ್ಯ ವಿಷಯಕ ಪರಿಣಾಮಗಳನ್ನು ವಿವರಿಸಲು ಪ್ರಾರಂಭಿಸುವೆವು. ಈ ಪರಿಣಾಮಗಳು ಸಂತರು ಜಗತ್ತಿನಲ್ಲಿ ಧರ್ಮಯುಗವನ್ನು ಇಲ್ಲವೆ ದೇವರಾಜ್ಯವನ್ನು ಕಾಣುವುದರಲ್ಲಿ ಪರಿಣಮಿಸುವವು.

ಮೊದಲು ನಾವು ದೈವೀ ಆನಂದವನ್ನು ಪಡೆಯಲು ನಮ್ಮ ಮನಸ್ಸನ್ನು ಅಂತರ್ಮುಖಿಮಾಡುವುದಕ್ಕೂ, ಹಾಗೂ ಅದರ ಮಾಲಿನ್ಯವನ್ನು ತೊಳೆಯುವುದಕ್ಕೂ ಕೊಡಲಾದ ವಿಶೇಷ ಪ್ರಾಧಾನ್ಯವನ್ನು ಗಮನಿಸುವೆವು. ಈ ನೈತಿಕ ಪ್ರಯತ್ನದ ಫಲವಾಗಿ, ಸಂತರು ಪೂರ್ಣ ಸಮತೆಯ ಸಮಾಧಾನವೃತ್ತಿಯನ್ನು ತಳೆದು, ಕೆಳೆಹಗೆಗಳನ್ನೂ, ಸುಖ-ದುಃಖಗಳನ್ನೂ ಸಮನಾಗಿ ಭಾವಿಸುವರು. ಇದಾದ ಮೇಲೆ, ಪರಮಾನಂದ-ಪರವಶತೆಯ ಪ್ರಶ್ನೆಯು ಬರುವುದು. ಆ ಅವಸ್ಥೆಯಲ್ಲಿ ಪರಮಾತ್ಮನ ಉಪಸ್ಥಿತಿಯು ಸಂತರನ್ನು ಸದೈವ ಜಾಗ್ರತಸ್ಥಿತಿಯಲ್ಲಿ ಇರಿಸುವುದು. ನಿರುತ್ಸಾಹ-ನೈರಾಶ್ಯಗಳು ಅವರನ್ನು ಬಾಧಿಸುವುದಿಲ್ಲ. ಮೋಹವಶತೆಯು ಅವರನ್ನು ಆವರಿಸಲರಿಯದು. ನೋವುಗಳು ಅವರನ್ನು ಪೀಡಿಸಲರಿಯವು. ಅವರು ಮರಣಕ್ಕೆ ಮರಣ ತರುವರು. ಸಾಧಕನು ಈ ಬಗೆಯ ನೈತಿಕ ಎತ್ತರವನ್ನು ಪಡೆದಾಗ, ಅವನು ಅನುಭಾವಜನ್ಯ ಪರಮಾನಂದಭರಿತನಾಗುವನು. ಈ ವಿಷಯವನ್ನು ನಾವು ಮಹಿಪತಿದಾಸರ ಹಾಗೂ ಪುರಂದರದಾಸರ ಎರಡು ಪದಗಳ ನೆರವಿನಿಂದ ವಿವರಿಸುವೆವು. ಕೊನೆಯದಾಗಿ, ನಾವು ಅನುಭವ ಮಂಟಪದ ಉಜ್ಜ್ವಲವಾದ ಬಣ್ಣನೆಯೆಡೆ ಬರುವೆವು. ಅದರ ಸದಸ್ಯರಾಗುವುದು ಎಲ್ಲ ಪಾರಮಾರ್ಥಿಕ ಸಾಧನಗಳ ಸಾರಸರ್ವಸ್ವವೇ ಸರಿ!

ದಿನಕರಬಸವರ 'ಬ್ರಹ್ಮಾನಂದದ ಸುಖವೇನು ನಿನಗೆ?' ಎಂಬ ಪದವು ಮಾನವಶಾಸ್ತ್ರೀಯ, ನೀತಿಶಾಸ್ತ್ರೀಯ ಹಾಗೂ ಅನುಭಾವಶಾಸ್ತ್ರೀಯ ವಿಚಾರಗಳಿಂದ

ಕೂಡಿರುವುದು. ಪಾರಮಾರ್ಥಿಕ ಜೀವನವು ನಿಷ್ಕ್ರಿಯವಾದುದು, ನಿವೃತ್ತಿ ಪ್ರಿಯವಾದುದು ಮತ್ತು ಪಾರಮಾರ್ಥಿಕ ಸಾಧನದಲ್ಲಿ ನಿರತರಾದವರು ತಮ್ಮ ಸೆರೆಮನೆಯಲ್ಲಿ ಸುಮ್ಮನೇ ಕುಳಿತು ಆಲಸ್ಯದಲ್ಲಿ ಕಾಲವನ್ನು ಹಾಳು ಮಾಡುವರು ಎಂಬುದಾಗಿ ಪರಮಾರ್ಥವನ್ನೂ, ಪರಮಾರ್ಥಿಗಳನ್ನೂ ಹಳಿಯುವವರ ಮೇಲೆಸೆದ ತೀವ್ರ ಟೀಕಾಸ್ತ್ರವಿರುವಂತೆ ಕಾಣುವದು ಈ ಪದವು. ಪಾರಮಾರ್ಥಿಕ ಜೀವನವು ನಿಜವಾಗಿ ಸಂತತವಾದ ಆಂತರಿಕ ಕ್ರಿಯೆಯಿಂದ ಕೂಡಿರುವದು. ಅಷ್ಟೇ ಏಕೆ? ಶ್ರೇಷ್ಠತಮ ತರಗತಿಯ ಕ್ರಿಯೆಯಿಂದ ಕೂಡಿರುವುದು. ಯಾಕಂದರೆ, ಅಂಥ ಕ್ರಿಯೆಯನ್ನು ನಿರೂಪಿಸುವಾಗ, ಪ್ಲೇಟೋ ಎಂಬ ಗ್ರೀಕ ದಾರ್ಶನಿಕನು ತನ್ನ ಏಳನೆಯಓಲೆಯಲ್ಲಿ ಸಾರುವದೇನೆಂದರೆ:ಇಂಥ ಜೀವನವು ಮಾನವದ ಅತ್ಯುತ್ತಮ ಕೆಲಸವು ಹಾಗೂ ಅದೊಂದು ಮಾನವತೆಯ ಶ್ರೇಷ್ಠತಮ ಸೇವೆಯೂ ಆಗಬಹುದು.

ದಿನಕರಬಸವರು ತುಂಬ ಸಕ್ರಿಯಜೀವನ ಬಾಳಲು ನಮ್ಮನ್ನು ಹುರಿಗೊಳಿಸಿ, ಬ್ರಹ್ಮಾನಂದವನ್ನು ಸೇವಿಸಲು ಅವಶ್ಯವಿರುವ ಕೆಲ ಸಂಗತಿಗಳನ್ನು ಅರುಹಿರುವರು. ನಾವು ಅವನ್ನು ಸ್ಥೂಲರೀತಿಯಿಂದ ಕೆಳಗಿನಂತೆ ಎರಡು ಬಗೆಯಾಗಿ ವರ್ಗೀಕರಿಸ ಬಹುದು: ಮಾನಸ-ನೈತಿಕ ಹಾಗೂ ಅನುಭಾವಿಕ. "ಒಂಬತ್ತು ಇಂದ್ರಿಯಗಳ ಬಾಗಿಲುಗಳನ್ನು ಮುಚ್ಚುವ ತನಕ ಬ್ರಹ್ಮಾನಂದವು ನಿನಗೆ ಹೇಗೆ ಲಭಿಸಬಲ್ಲುದು?" ಎಂದು ಕವಿಯು ಕೇಳುವನು. ಇಲ್ಲಿ ಕಠೋಪನಿಷತ್ತಿನಲ್ಲಿಯ (೨-೪೧) ಪ್ರಸಿದ್ಧ ಭಾಗವು ನೆನಪಿಗೆ ಬರುವುದುಂಟು. ಅದರಲ್ಲಿ ಹೇಳಿರುವದೇನೆಂದರೆ: "ಪರಮಾತ್ಮನು ನಮ್ಮ ಇಂದ್ರಿಯಗಳನ್ನು ಬಹಿರ್ಮುಖವಾಗಿ ನಿರ್ಮಿಸಿರುವನು. ಆದುದರಿಂದ ಮನುಜನು ಒಳಗೆ ನೋಡುವುದಕ್ಕಿಂತ ಹೆಚ್ಚಾಗಿ ಹೊರಗೆ ನೋಡುವುದು ವಾಡಿಕೆ. ಅಮರ ಜೀವನವನ್ನು ಪಡೆಯಬಯಸುವ ಹಾಗೂ ಅಂತರ್ದೃಷ್ಟಿಯಿಂದ ಅಂತರಾತ್ಮನನ್ನು ಕಾಣುವ ಜ್ಞಾನಿಯು ಲಭಿಸುವದು ತೀರ ವಿರಲ". ಈ ರೀತಿ, ಬಾಹ್ಯಜಗತ್ತಿಗೆ ಮರೆಯಾಗಿದ್ದು ಒಳನೋಟವುಳ್ಳವನಾಗಿರುವುದು ಪರಮಾರ್ಥ ಸಾಧಕನ ಮೊದಲನೆಯ ಆವಶ್ಯಕತೆಯು. ಸುವರ್ಣಮಾಧ್ಯಮ ಮಾರ್ಗವನ್ನು ಅನುಸರಿಸುವದು ಅವನ ಎಡರನೆಯ ಆವಶ್ಯಕತೆಯು. ಎರಡೂ ಅತಿಗಳನ್ನು ತೊರೆದು, ನಡುವಿನ ಮಿತಿಯ ದಾರಿಯನ್ನು ಪಿಡಿಯಬಲ್ಲವರಾದಾಗಲೇ ನಾವು ಬ್ರಹ್ಮಾನಂದವನ್ನು ಪಡೆಯಬಲ್ಲೆವು. ನಡುವಿನ ದಾರಿಯಿಂದ ಸಾಗಬೇಕಾದರೆ, ಸಾಧಕನು ಆತ್ಮಲಾಲನ ಹಾಗೂ ಆತ್ಮದಂಡನ ಎಂಬ ಅತಿಗಳನ್ನು ತೊರೆಯಬೇಕು. ನಾವು ಗೀತೆಯ ಮುಂದಿನ ಎಚ್ಚರಿಕೆಯನ್ನು ಬಲ್ಲೆವು: ಅತಿ ಉಪವಾಸ ಹಾಗೂ ಅತಿನಿದ್ರೆ ಮಾಡುವವನು, ಮತ್ತು ಅತಿ ದುಡಿಯುವವನು ಹಾಗೂ ತೀರ ದುಡಿಯದಿರುವನು ಇವರು ಯೋಗಿಗಳಾಗಲರಿಯರು. ಗೀತೆಯು ಯುಕ್ತವಾದ

ಸಮತೋಲ ಜೀವನವನ್ನು ಬಾಳಲು ಆಜ್ಞಾಪಿಸುವುದು. ಸುವರ್ಣ-ಮಧ್ಯದ ಬೌದ್ಧರ ಸಿದ್ಧಾಂತವನ್ನು ಇಲ್ಲಿ ಮರಳಿ ಉಲ್ಲೇಖಿಸುವ ಅಗತ್ಯವಿಲ್ಲ. ಸದ್ಗುಣವು ಎರಡು ಅತಿಗಳಲ್ಲಿಯ ಮಧ್ಯವೆಂದು ಸಾರುವಾಗ ಅರಿಸ್ಟಾಟಲ್‌ರು ಕೂಡ ಇದೇ ಕಲ್ಪನೆಯನ್ನು ವ್ಯಕ್ತಗೊಳಿಸಿರುವರು. ಮನಸ್ಸಿನ ಮೈಲಿಗೆಯನ್ನು ತೊಳೆಯುವುದು ದೈವೀ ಆನಂದವನ್ನು ಪಡೆಯಲು ಬೇಕಾಗುವ ಮೂರನೆಯ ಆವಶ್ಯಕತೆಯು. ಮನಸ್ಸು ನಿರ್ಮಲವಾಗುವವರೆಗೆ ಪರಮಾತ್ಮನ ರೂಪವು ಆ ಕನ್ನಡಿಯಲ್ಲಿ ಪ್ರತಿಬಿಂಬಿತವಾಗಲರಿಯದು. ಆನುಷಂಗಿಕವಾಗಿ ನಾವು ಮುಂದಿನ ಸಂಗತಿ ಯನ್ನೂ ಇಲ್ಲಿ ಗಮನಿಸಬೇಕು: ಮನಸ್ಸಿನ ಮೈಲಿಗೆಯನ್ನು ತೊಳೆಯುವದು ಹಾಗೂ ಪರಮಾತ್ಮನ ರೂಪವು ಪ್ರತಿಬಿಂಬಿತವಾಗುವುದು-ಇವೆರಡು ಪರಸ್ಪರಾ ವಲಂಬಿಗಳಿರುವವು. ಮನಸ್ಸಿನ ಮೈಲಿಗೆಯು ಅಳಿಯದೆ, ಪರಮಾತ್ಮನ ರೂಪವು ಅದರಲ್ಲಿ ಹೊಳೆಯಲರಿಯದು ಮತ್ತು ಪರಮಾತ್ಮನು ಹೊಳೆಯದೆ ಮನಸ್ಸಿನ ಮಲಿನತೆಯೂ ಪೂರ್ತಿಯಾಗಿ ಅಳಿಯದು. ನಾಲ್ಕನೆಯದಾಗಿ, ಆತ್ಮಾನಂದವನ್ನು ಪಡೆಯಲು ನಾವು ಮೂರು ನದಿಗಳ ಸಂಗಮವನ್ನು ದಾಟಬಲ್ಲವರಾಗಬೇಕು. ಇಲ್ಲಿ ಮೂರು ನದಿಗಳೆಂದರೆ ಸತ್ವ, ರಜ, ತಮಗಳೆಂಬ ಮೂರು ಗುಣಗಳಾಗ ಬಹುದು. ಪರಮಾನಂದದಲ್ಲಿ ಪಾಲುಗಾರರಾಗಬೇಕಾದರೆ, ನಾವದನ್ನು ಮೀರಬೇಕು. ಭಾಗವತಕಾರರು ಹೇಳುವ ಮೇರೆಗೆ:

ಸತ್ವೇನಾನ್ಯತಮೌ ಹನ್ಯಾತ್ । ಸತ್ವಂ ಸತ್ವೇನ ಚೈವ ಹಿ॥

'ನೀವು ಸತ್ವದಿಂದ ಉಳಿದೆರಡನ್ನು-ರಜ-ತಮಗಳನ್ನು ಕೊಲ್ಲಬೇಕು ಮತ್ತು ಸತ್ವದಿಂದಲೇ ಸತ್ವವನ್ನು ಕೊಲ್ಲಬೇಕು-ಮೀರಬೇಕು.'

ಈ ಮೇರೆಗೆ, ನೈತಿಕ ಸದ್ಗುಣಗಳ ಸಿದ್ಧತೆಯು ಪೂರ್ಣವಾದಾಗ, ಕೆಲ ಆನುಭಾವಿಕ ಗುಣಗಳ ಸಂಪಾದನವು ಪರಮಾನಂದ ಪ್ರಾಪ್ತಿಯ ಮುಂದಿನ ಆವಶ್ಯಕತೆಯಾಗಿರುವುದು. ಅನಾಹನಾದದಲ್ಲಿ ಮುಳುಗಿದ ಫಲವಾಗಿ ಜನಿಸಿದ ಮೈ ಮರೆವು ಅವುಗಳಲ್ಲಿಯ ಮೊದಲನೆಯ ಗುಣ. ಈ ಸಂದರ್ಭದಲ್ಲಿ ಅನಾಹತನಾದವು ಪಾರಮಾರ್ಥಿಕ ಅನುಭವಗಳಲ್ಲಿಯ ಶ್ರೇಷ್ಠತಮ ತರಗತಿಗಳಲ್ಲಿ ಒಂದಾಗಿರುವದೋ ಹೇಗೆಂಬುದರ ಬಗೆಗೆ ನಡೆದ ಚರ್ಚೆಯನ್ನು ಉಲ್ಲೇಖಿಸ ಬಹುದು. ಈ ಅನಾಹತಕ್ಕೆ ಅಂತವಿರುವುದರಿಂದ ಸಂತರಿದರಲ್ಲಿ ಸಿಲುಕಬಾರ ದೆಂಬುದು ಕಬೀರರ ಅಭಿಮತ. 'ಅನಾಹತ ಹೂಂ ಮರಿ ಜಾಯ।' 'ಅನಾಹತವೂ ಅಳಿಯುವುದು' ಎಂದು ಅವರು ಅರುಹಿರುವರು. ಇದರ ಬದಲು 'ನಾವು ದೈವೀ ಆನಂದವನ್ನು ಸೇವಿಸ ಬೇಕಾದರೆ ಅನಾಹತದಲ್ಲಿ ಮುಳುಗಬೇಕು' ಎಂದು ದಿನಕರಬಸವರು ಒತ್ತಾಯ

ಪಡಿಸುವರು. ಕಬೀರರು 'ಅನಾಹತ' ಮತ್ತು 'ಶಬ್ದ' ಇವುಗಳಲ್ಲಿ ಭೇದವನ್ನು ಕಲ್ಪಿಸಿರುವವರು ಮತ್ತು ಅವುಗಳಲ್ಲಿ 'ಅನಾಹತ'ಕ್ಕೆ ಕೆಳಗಿನ ಸ್ಥಾನವನ್ನು ಸಲ್ಲಿಸಿ, 'ಶಬ್ದ'ವನ್ನು ಶ್ರೇಷ್ಠತಮ ತತ್ತ್ವವೆಂದು ಬಗೆಯುವವರು, ಎಂಬುದನ್ನು ಗಮನಿಸಿದರೆ ಈ ವಿವಾದವು ಅಳಿದುಬಿಡುವುದು. ಉಪನಿಷತ್ತಿನಲ್ಲಿ ಅನಾಹತವು ಪಚನಕ್ರಿಯೆಯ ಪರಿಣಾಮ ವೆಂದು ಹೇಳಿದಂತೆ (ಬೃ.II-೩-೬) ಕಬೀರರು ಅದನ್ನು ಜಠರಾಗ್ನಿಯ ಶಾರೀರಿಕ ನಾದವೆಂದು ಬಗೆದಿದ್ದರೆ, ಅವರ ಬೋಧೆಯು ಯಥಾರ್ಥವಾಗುವುದು. ಇದರ ಬದಲಾಗಿ, ಅನಾಹತ ಹಾಗೂ ಶಬ್ದಗಳಲ್ಲಿ ಯಾವ ಬಗೆಯ ಭೇದವೂ ಇಲ್ಲದಿದ್ದರೆ, ನಾವು ಅದರಲ್ಲಿ ಹೆಚ್ಚೆಚ್ಚು ಮುಳುಗಿದಷ್ಟು, ನಾವು ನಮ್ಮನ್ನು ಹೆಚ್ಚು ಭಾಗ್ಯಶಾಲಿಗಳೆಂದು ಭಾವಿಸಬೇಕು.

ಸಾಧಕನು ತನ್ನೆದುರು ಕಂಗೊಳಿಸುವ ಹಿರಿಯ ದೇವರ ಅರ್ಭಟವನ್ನು ಕೇಳಬಲ್ಲವನಾಗುವವರೆಗೆ, ಅವನು ಪರಮಾನಂದವನ್ನು ಪಡೆಯಲರಿಯನು. ಇಲ್ಲಿ ಬಂದ 'ಕಂಗೊಳಿಸವಾರ್ಭಟ' ಎಂಬ ಪದವಿನ್ಯಾಸದ ಅರ್ಥವು 'ಹೊಳೆಯು ವನಾದ' ಇಲ್ಲವೆ "ಝುಗಝುಗಿಸುವ ಸಿಡಿಲು' ಎಂಬುದಾಗಿಯೂ ಆಗಬಹುದು. ನಿಜವಾಗಿ ಅದೊಂದು ವಿರಲವಾಗಿಲಭಿಸುವ ಪಾರಮಾರ್ಥಿಕ ಅನುಭವವೇ ಸರಿ!

ಇದಾದ ಮೇಲೆ ದಿನಕರಬಸವರು ತೇಜರೂಪದ ಆನುಭಾವಿಕ ಆವಶ್ಯಕತೆ ಗಳನ್ನು ಅರುಹುವರು. ಇವನ್ನು ಕುರಿತು ಅವರು ಹೇಳುವದೇನೆಂದರೆ: 'ಪರಮ ಪ್ರಕಾಶದ ಕದ ತೆರೆದು, ಹಿಂಗದ ರವಿಕೋಟಿ ಪ್ರಭೆಯನ್ನು ಕಾಣುವ ತನಕ, ನೀವು ದೈವೀ ಆನಂದವನ್ನು ಅನುಭವಿಸಲರಿಯರಿ!' ಈ ಬಗೆಯ ನಾದ-ತೇಜಗಳ ಅನುಭವದ ಫಲವಾಗಿ, ಅನುಭಾವಿಯು ಬಗೆಬಗೆಯ ಬಣ್ಣಗಳಿಂದ ಕೂಡಿದ ರಂಗಮಂಟಪವನ್ನು ಸೇರುವನು. ಅಲ್ಲಿ ಸ್ಥಿರವಾಗಿ ನೆಲೆಸಿ, ಪರಮಾನಂದವನ್ನು ಸವಿಯುವ ಅರ್ಹತೆಯನ್ನು ಪಡೆಯುವನು. ತರುವಾಯ ಅವನು 'ಕಂಗಳಲಿ ಕಣ್ಣಿ' ಕಂಡು ಕಂಡು ಅಚ್ಚರಿಯ ಕಡಲಲ್ಲಿ ಮುಳುಗುವನು. ಈ ಬಗೆಯ ವಿವಿಧ ಅನುಭವಗಳನ್ನು ಪಡೆದ ಭಾಗ್ಯವಂತನಾದ ಅನುಭಾವಿಯ ಮುಖದಿಂದ ಭೀತಿ-ಬೆರಗುಗಳನ್ನು ಅರುಹುವ ಮಾತು, ತನ್ನಿಂದ ತಾನೆ ಹೊರಹೊಮ್ಮಿದರೆ, ಅದರಲ್ಲಿ ಸೋಜಿಗವೇನು?

ಕೊನೆಯದಾಗಿ, ನಮ್ಮ ಮೇಲೆ ಪರಮಾತ್ಮನು ದಯೆಯನ್ನು ಕರೆಯುವ ತನಕ ನಾವು ಬ್ರಹ್ಮಾನಂದವನ್ನು ಪಡೆಯಲರಿಯೆವು. ಕೇವಲ ಸ್ವಂತ ಪ್ರಯತ್ನವೇ ಗೆಲವಿನ ವೈಭವವನ್ನು ಪಡೆಯಲರಿಯದು. ಅದರಲ್ಲಿ ಕರುಣದ ಪ್ರಸಾದದ ಅಂಶವೂ ಇರುವುದುಂಟು. ದಿನಕರಬಸವರು ತಮ್ಮೀ ಪದದಲ್ಲಿ ಈ ಅಂಶವನ್ನು ಉಲ್ಲೇಖಿಸಿರುವರು. ಈ ಪ್ರಸಾದದ ಸಿದ್ಧಾಂತವು ಕ್ರಿಶ್ಚನ್ನರ ದೇವಶಾಸ್ತ್ರದಲ್ಲಿಯ ಆಯ್ಕೆಯ ಸಿದ್ಧಾಂತವನ್ನು ಹೋಲುವುದು. ಅದನ್ನು ಕುರಿತು ಆಟೋರವರು ತಮ್ಮ 'ಪರಮಪವಿತ್ರದ ಕಲ್ಪನೆ' (ಪು. ೯೦) ಎಂಬ ಗ್ರಂಥದಲ್ಲಿ ಈ ರೀತಿ ತುಂಬ

ಉತ್ಕಟತೆಯಿಂದ ಬರೆದಿರುವರು: "ತುಂಬ ಪರವಶಗೊಳಿಸುವ ಪರತತ್ತ್ವದ ಅನಂತ ಪ್ರಾಬಲ್ಯಕ್ಕೆ ಪ್ರತಿಯಾಗಿರುವ ತನ್ನ ನಿತಾಂತ ದೌರ್ಬಲ್ಯದ ಅರಿವು, ಪರಮಾತ್ಮನ ಪ್ರಸಾದವೇ ತನ್ನನ್ನು ಪರಮಾನಂದ ವೈಭವ ಪಡೆಯಲು ಆಯ್ದಿರುವದು ಎಂಬುದನ್ನು ಸಾಧಕನಿಗೆ ಮನಗಾಣಿಸುವದು."

ಈ ಬಗೆಯಾಗಿ ಎಲ್ಲರೊಳು ಒಂದನ್ನು ಸಾಕ್ಷಾತ್ಕರಿಸಿಕೊಂಡು ಸಂತರು ಪೂರ್ಣಸಮತೆಯ ಅವಸ್ಥೆಯನ್ನು ಮುಟ್ಟುವರು. ಅವರು ಶತ್ರು-ಮಿತ್ರರನ್ನು ಸಮನಾಗಿ ಬಗೆವರು; ಮಾನಾಪಮಾನಗಳ ಬಗೆಗೆ ಅಷ್ಟೇ ಉದಾಸೀನರಾಗಿರುವರು; ಬಡವರು ಬಲ್ಲಿದರು ಅವರಿಗೆ ಸಮಾನರಾಗಿರುವರು. ಮೇಲು-ಕೀಳು ಒಡವೆಗಳನ್ನೆಲ್ಲ ಅವರು ಸಮನಾಗಿ ಕಾಣುವರು. ಯಾಕಂದರೆ ಅವುಗಳ ಮೂಲಾಧಾರವಾದ ಪರಮಾತ್ಮನನನ್ನೇ ಅವು ಅವರಿಗೆ ಕಾಣಿಸುವವು. ಎಲ್ಲೆಡೆಯಲ್ಲಿಯ ಆತ್ಮದರ್ಶನವು ಸಾಧಕನಿಗೆ ಮಾನಸಿಕ ತೂಕವನ್ನು ದಯಪಾಲಿಸುವುದು. ಜನರು ಆತನನ್ನು ಮಿತಿಮೀರಿ ಹೊಗಳಿದಾಗ ಅವನು ಹಿಗ್ಗುವುದಿಲ್ಲ; ಇಲ್ಲವೆ ತೆಗಳಿದಾಗ ಕುಗ್ಗುವುದಿಲ್ಲ. ಎಲ್ಲರೊಳು ಪರಮಾತ್ಮನನ್ನೂ, ಪರಮಾತ್ಮನಲ್ಲಿ ಎಲ್ಲರನ್ನೂ ಕಂಡಾಗ ಸಂತರು ಪಡೆಯುವ ಈ ಸಮತೆಯು ಸಾಕ್ಷಾತ್ಕಾರದ ಬೇರೊಂದು ನೈತಿಕ ಪರಿಣಾಮವು ಈಶೋಪನಿಷತ್ತಿನಲ್ಲಿಯ (೭) ಮುಂದಿನ ಸುಪ್ರಸಿದ್ಧ ವಚನವು ನಮಗೆ ಪರಿಚಿತವಾದುದು: ಎಲ್ಲ ಒಡವೆಗಳು ಆತ್ಮರೂಪದ ಮನುಜನಿಗೆ, ಎಲ್ಲ ಒಡವೆಗಳಲ್ಲವನು ಈ ಪರತಮ ಏಕತೆಯನ್ನು ಕಾಣುತ್ತಿರುವಾಗ, ಅವನನ್ನು ಅದಾವ ದುಃಖವು, ಮಾಯೆಯು ಇಲ್ಲವೆ ಮೋಹವು ಬಾಧಿಸಬಲ್ಲದು? ಅದೇ ಮೇರೆಗೆ ಗೀತೆಯ ಹದಿಮೂರನೆಯ ಅಧ್ಯಾಯದಲ್ಲಿ (ಶ್ಲೋಕ ೨೮) ಸಮತೆ ಇಲ್ಲವೆ ಸಮತ್ವವನ್ನು ಅರುಹುವಾಗ ಅನುಭಾವಿಯು ಎಲ್ಲ ಭೂತಗಳಲ್ಲಿ ಪರಮಾತ್ಮನನ್ನೂ ಕಾಣುವನು ಹಾಗೂ ಎಲ್ಲ ಪ್ರಾಣಿಗಳನ್ನು ಸಮನಾಗಿ ಭಾವಿಸುವನು ಎಂದು ಹೇಳಿರುವುದು.

ನಾವೀಗ ವಿವರಿಸಲಿರುವ 'ಎಂದು ಮೈಯ ಮರೆಸಿ ಇದರಂತೆ?' ಎಂಬ ಪದದಲ್ಲಿ ಸಂಗಕವಿಗಳು, ಈ ಜಗವೆಲ್ಲ ಶಿವಮಯವಾಗಿ ಕಾಣುವಂತೆ, ಅದರಲ್ಲೆಲ್ಲ ಶಿವನ ಇರವು-ಬಲಗಳು ಕಾಣುವಂತೆ, ಮೈಯ ಮರೆಯಲು ತನ್ನನ್ನು ಸಮರ್ಥ ಮಾಡಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಿರುವರು. ಈ ಸಂತಕವಿಗಳು ಅರ್ಪಣಪ್ರಿಯ ಇಲ್ಲವೆ ನಿವೃತ್ತಿಪ್ರಿಯ ಅನುಭಾವಿಗಳಿರುವಂತೆ ಕಾಣುವದು. ಅವರು ಪರಮಾತ್ಮನಿಗೆ ಸರ್ವಭಾವದಿಂದ ಶರಣು ಹೋಗುವರು. ಕವಿಯು ಪರಮಾತ್ಮನಿಗೆ ಈ ರೀತಿ ಕೇಳುವನು: "ಹುಲಿಕರಡಿಗಳನ್ನು ಆಕಳುಗಳಂತೆಯೂ, ಹಾವು-ಚೇಳುಗಳನ್ನು ಕೇವಲ ಕೂಸುಗಳಂತೆಯೂ ಕಾಣುವ ಸಮಭಾವವನ್ನು ನೀನೆನಗೆ ಅದೆಂದು ದಯಪಾಲಿಸುವಿ?" ಇಲ್ಲಿ ನಾವು ಕೇಡನ್ನು ವಿರೋಧಿಸದಿರುವ

ಅಹಿಂಸಾ ತತ್ತ್ವದ ಬಳಕೆಯ ಪರಿಸೀಮೆಯನ್ನು ಕಾಣುವೆವು. "ಸೂಳಿಗೆಳೆಯರೂ ಕೂಡಿ ನನ್ನೆದುರು ಬಂದಾಗ, ಅವರನ್ನು ನನ್ನ ತಾಯಿ-ತಂದೆ ಎಂದು ಬಗೆದು, ನಾನವರ ಪಾದಕ್ಕೆರಗುವಂತೆ ಮಾಡುವೆ?" ರಾತ್ರಿಯಲ್ಲಿ ನನ್ನ ಮನೆಗೆ ಬಂದ ತುಡುಗರನ್ನು ನನ್ನ ಸದ್ಗುರುಗಳೆಂದು ಬಗೆಯಬಹುದು? ಅವರಿಗೆ ನನ್ನ ಬಳಿ ಇದ್ದದ್ದನ್ನೆಲ್ಲ ಒಪ್ಪಿಸಿ ಅದೆಂದು ವಂದಿಸಬಹುದು? "ಪಾರಮಾರ್ಥಿಕ ಜೀವನವು ಪರಮಾತ್ಮನ ಸಂಪೂರ್ಣ ದರ್ಶನವನ್ನೂ ಹಾಗೂ ಅವನಿಗೆ ಸರ್ವಸ್ವದ ಸಮರ್ಪಣವನ್ನೂ ಒಳಗೊಂಡಿರಬೇಕು ಎಂಬುದನ್ನು ಇದು ಸೂಚಿಸಬಹುದು. ನಾವು ನಮ್ಮ ಶಿರವನ್ನು ಕತ್ತರಿಸಿ, ಪರಮಾತ್ಮನ ವೇದಿಕೆಯ ಮೇಲೆ ಅದನ್ನರ್ಪಿಸಲು ಸಿದ್ಧರಿರಬೇಕೆಂದು ಕಬೀರರು ನಮ್ಮನ್ನು ಎಚ್ಚರಿಸಿರುವರು. ಅಲ್ಲಿಯ ವರೆಗೆ ನಾವು ಬ್ರಹ್ಮರಸವನ್ನು ಇಲ್ಲವೆ ಅಮೀರಸವನ್ನು ಸವಿಯಲು ಆಶಿಸಲರಿಯೆವು. ಕೆಡುಕನ್ನು ಮಾಡಿದವರಿಗೆ ಮರಳಿ ಒಳಿತನ್ನು ಸಲ್ಲಿಸಬೇಕು ಹಾಗೂ ದುರುಳರಿಗೂ ಕೂಡ ಒಳಿತನ್ನು ಮಾಡಬೇಕೆಂಬ ಸಿದ್ಧಾಂತದ ಸತ್ಯತೆಯು ಪ್ರಸ್ತುತ ಕವನದ ಸಾಲುಗಳಲ್ಲಿ ಅಂದವಾಗಿ ಮೂಡಿದೆ. "ವೈರಿಗಳು ನನ್ನನ್ನು ಕೊಲ್ಲಲು ಬಂದರೂ ಕೂಡ, ನಾನು ಅದೆಂದು ನಗಲು ಪ್ರಾರಂಭಿಸಬಹುದು? ಅದೆಂದು ಅವರ ಪಾದಗಳಿಗೆ ಎರಗಬಹುದು? ನನ್ನ ದೇಹವನ್ನು ಕಡಿದು ಅವರಿಗೆ ಅದೆಂದು ಅರ್ಪಿಸಬಹುದು? ಮತ್ತು ಈ ಸುಸಂಧಿಯು ಸದ್ಗುರುವಿನ ಹಿರಿಯ ಆಶೀರ್ವಾದವೆಂದು ಅದೆಂದು ಬಗೆಯಬಹುದು?" ಯೇಸುಕ್ರಿಸ್ತನು, ನಮ್ಮ ವೈರಿಗಳನ್ನು ಪ್ರೀತಿಸಲು, ನಮ್ಮನ್ನು ಶಪಿಸಿದವರನ್ನು ಆಶೀರ್ವದಿಸಲು, ದ್ವೇಷಿಸುವವರನ್ನು ಉಪಕರಿಸುಲು ಹಾಗೂ ನಮ್ಮೊಡನೆ ಮತ್ಸರದಿಂದ ನಡೆದು ನಮ್ಮನ್ನು ಹಿಂಸಿಸುವವರನ್ನು ಉದ್ಧರಿಸ ಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಲು ನಮಗೆ ಕಲಿಸಿರುವನು.

ಕಲಹ-ವಿವಾದಗಳು ಜಗತ್ತನ್ನು ಸೀಳಿರುವವು. ಶಬ್ದಾರ್ಥಗಳ ಬಗೆಗೂ, ವೈಚಾರಿಕ ಭಿನ್ನತೆಯ ಬಗೆಗೂ ನಡೆದ ಹೋರಾಟವು, ಜಾಗತಿಕ ಯುದ್ಧಗಳ ದಾರಿಯನ್ನು ಸುಗಮಗೊಳಿಸಿರುವುದು; ಮತ್ತು ಈ ಯುದ್ಧಗಳು ಮಾನವತೆಗೆ ಬಣ್ಣಿಸಬಾರದ ಅನಾಹುತಗಳನ್ನೂ, ದುಃಖಪರಂಪರೆಯನ್ನೂ ನೀಡಿರುವವು. ಆದು ದರಿಂದ ಕವಿಯು ವಾದಗಳೆಲ್ಲ ತನಗೆ ವೇದಗಳಾಗಿ ಪರಿಣಮಿಸಬೇಕು, ತಾನು ಆ ಬಗೆಯಾಗಿ ಅವನ್ನು ಕಾಣುವ ಪಾತ್ರತೆಯನ್ನು ಪಡೆಯಬೇಕು ಎಂದು ಹವಣಿ ಸುವನು. ವಾದಗಳೆಲ್ಲ ಮೂಲತಃ ದಿವ್ಯವಾದವುಗಳೆಂದು ಅವನ್ನರಿತು ಅರುಹ ಬಯಸುವನು. ಅವನ್ನು ಸಂಗೀತಕ್ಕೆ ಹೊಂದಿಸಲೆತ್ನಿಸಿ, ಅವನ್ನು ಅತ್ಯಾನಂದದಿಂದ ಹಾಡತೊಡಗುವನು. ಎಲ್ಲ ರುಚಿಕಟ್ಟಾದ ಸರಸ ಹಣ್ಣುಗಳನ್ನು ಬೇವಿನ ಕಾಯಿ ಗಳೆಂದು ಬಗೆಯುವನು ಹಾಗೂ ಪರಮಾತ್ಮನ ನಾಮರಸವನ್ನು ಸುಧಾರಸವೆಂದು ಕಾಣುವನು. ಈ ರೀತಿಯ ದುರುಳರ ರೀತಿಯಿಂದ ತೀರ ವಿಪರೀತವಾದುದು.

ಜ್ಞಾನೇಶ್ವರರು ಅಂದವಾಗಿ ಬಣ್ಣಿಸಿದ ಮೇರೆಗೆ:

ವಿಷಯ ವಿಷಾಚಾ ಪಡಿಪಾಡು । ಗೋಡ ಪರಮಾರ್ಥ ಲಾಗೇ ಕಡು
ಕಡು ವಿಷಯ ತೋ ಗೋಡು । ಜೀವಾಸೀ ಜಾಹಲಿ॥

'ಆ ಪ್ರಾಣಿಗಳಿಗೆ ವಿಷಮಯ ಕಹಿ ವಿಷಯಗಳು ಸಿಹಿ ಅನಸುವವು. ಹಾಗೂ ಸಿಹಿಯಾದ ಪರಮಾರ್ಥವು ಕಹಿಯಾಗುವದು." ಪೂರ್ಣಸಮತೆಯ ಅವಸ್ಥೆಯನ್ನು ತಲುಪಿದಾಗ, ಈ ಇಡೀ ದೃಶ್ಯ ಜಗತ್ತನ್ನು ಪರಮಾತ್ಮನ ವ್ಯಕ್ತರೂಪವೆಂದೂ, ಇಲ್ಲವೆ ಅದರ ಬದಲಾಗಿ ಆ ದೇವರೂಪಿಯಾದ ಜೀವನಪ್ರದ ತತ್ತ್ವರಹಿತವಾದಾಗ ಅದನ್ನು ಇರವಿಲ್ಲದ ಶೂನ್ಯವೆಂದೂ ನಾವು ಬಗೆದರೆ ಅದರಲ್ಲಿ ಏನಾಶ್ಚರ್ಯ?

ಈ ಸಂತರು ಮತ್ತೂ ಹೇಳುವದೇನೆಂದರೆ: ಶಬ್ದವು ಶಬ್ದದಲ್ಲಿ ಬೆರೆಯಬೇಕು. ಇಲ್ಲಿ ಜೀವಾತ್ಮನು ಪರಮಾತ್ಮನಲ್ಲಿ ಬೆರೆಯುವ ಉಲ್ಲೇಖವಿರುವುದು. ಅಂತೂ ಈ ಸಂತರು ಹೇಳಬಯಸುವದೇನೆಂದರೆ: ಕಾಲ-ಸ್ಥಲಗಳಿಂದ ಮರ್ಯಾದಿತವಾದ ಸಾಂತ ಶಬ್ದವು ಮೇಲ್ತರಗತಿಯ ಶಬ್ದದಲ್ಲಿ ಬೆರೆತುಬಿಡಬೇಕು. ಅಲ್ಲಿ ಓಂಕಾರವು ಸಂತತವಗಿ ಹಾಡಲಾಗುವುದು.

ಇಂಥ ಮಹಾಪುರುಷನಿಗೆ ಕತ್ತಲೆಯು ಅದೆಂತು ಇರಬಲ್ಲುದು? ತಾನು ಇಲ್ಲಿ, ಅಲ್ಲಿ ಅಥವಾ ಎಲ್ಲೆಲ್ಲಿ ಇರುವನೋ ಇಲ್ಲವೆ ತಾನು ನಿರ್ಬಯಲಲ್ಲಿ ವಾಸಿಸುವನೋ ಎಂಬುದನ್ನು ಅವನು ಮರೆಯುವನು. ಆತ್ಮನಜ್ಞಾನಿಯು ಸರ್ವವ್ಯಾಪಕನಾಗುವ ಹಾಗೂ ಅವನಿಗೆ ಸ್ಥಲ-ಭೇದಗಳೆಲ್ಲ ಅಳಿದುಬಿಡುವವು ಎಂಬುದೇ ಮೇಲ್ಕಾಣಿಸಿದ ಮಾತಿನ ಮಥಿತಾರ್ಥವಿರಬಹುದು. ಆತ್ಮನು ದೂರದಲ್ಲಿರುವ ಹಾಗೂ ನೆರೆಯಲ್ಲಿರುವ; ಅದೇ ಮೇರೆಗೆ ಅವನು ಅತಿ ದೂರದಲ್ಲಿಯ ಒಡವೆಗಿಂತ ದೂರ ಹಾಗೂ ಅತಿ ಸಮೀಪದಲ್ಲಿಯ ಒಡವೆಗಿಂತ ಸಮೀಪ ಇರುವ; ಎಂದು ಬಣ್ಣಿಸುವ ಸಾಹಿತ್ಯ ಭಾಗಗಳು ಈಶೋಪನಿಷತ್ತಿನಲ್ಲಿಯೂ, ಮುಂಡಕೋಪನಿಷತ್ತಿನಲ್ಲಿಯೂ ಇಲ್ಲದಿಲ್ಲ. ಸಮಭಾವದ ಈ ಪೂರ್ಣ ದರ್ಶನವನ್ನು ಸಂಗಕವಿಗಳು ಪಡೆಯಬಲ್ಲವರಾದಂತೆ. ಯಾಕಂದರೆ, ನಕ್ಷತ್ರಲೋಕದಿಂದ ಕೆಳಗಿಳಿದು ಸೂರ್ಯನಂತಿರುವ ಸದ್ಗುರುಗಳ ದಯವು ಅವರಿಗೆ ಲಭಿಸಿದ್ದಿತಂತೆ. ಸದ್ಗುರುಗಳ ಕರುಣವು ಉಲ್ಕೆಯಂತೆ ಇಲ್ಲವೆ ಸವೇಗ ಚಲಿಸುವ ತಾರೆಯಂತೆ ಶಿಷ್ಯನೆಡೆ ಅವತರಿಸುವುದು. ಈ ಘಟನೆಯು ಬಾಯ್‌ಬಲ್ಲಿನಲ್ಲಿ ಅಂದವಾಗಿ ಬಣ್ಣಿಸಲಾದ ಇಂಥ ಬೇರೊಂದು ಘಟನೆಯನ್ನು ನಮಗೆ ನೆನಪು ಮಾಡಿಕೊಡುವುದುಂಟು. ಯೇಸುವಿನ ನಾಮಕಾರಣವಾದಾಗ, ಪರಮಾತ್ಮನು ಕಪೋತರೂಪದಿಂದ, ಆಗಸದಿಂದ ಕೆಳಗಿಳಿದು ಅವನ ಬಳಿ ಬಂದನೆಂದು ಅದರಲ್ಲಿ ಹೇಳಲಾಗಿರುವುದು.

ಮುಂದಿನ ಪದವಾದ 'ದಣಿಯದೆ ಮಲಗಿದೆನೋ!' ಎಂಬಲ್ಲಿ ಸಾಧಕನು ದಿವ್ಯ ಪರಮಾನಂದವನ್ನು ಪಡೆಯಲು ನಡೆಯಿಸುವ ಉತ್ಕಟವಾದ ಚಟುವಟಿಕೆಯ ಅತ್ಯುತ್ತಮ ವೃತ್ತಾಂತವು ಬಂದಿರುವುದು. ಈ ಪಾರಮಾರ್ಥಿಕ ಚಟುವಟಿಕೆಯ ಉತ್ಕಟತೆಯನ್ನು ಇಲ್ಲಿ ಸಮರ್ಪಕವಾಗಿ ಬಣ್ಣಿಸಲಾಗಿದೆ. ಅದೊಂದು ಹೋರಾಟ ವೆಂದು, ನೈತಿಕ ಹೋರಾಟವೆಂದು ಎಣಿಸಲಾಗಿದೆ. ಅದರಲ್ಲಿ ಹೋರಾಡುವ ವೃತ್ತಿಯುಳ್ಳ ಭಕ್ತನು ಸಂದೇಹ, ಗರ್ವ ಇತ್ಯಾದಿ ತನ್ನ ಶತ್ರುಗಳೊಡನೆಯೂ, ಬೇರೆ ಆತಂಕಗಳೊಡನೆಯೂ ಯುದ್ಧವನ್ನು ಹೂಡುವನು.

ನಾವಿಲ್ಲಿ ಎರಡು ಬಗೆಯ 'ಮಲಗುವವರು' ಇರುವರೆಂಬುದನ್ನು ಗಮನಿಸಬೇಕು; ಒಬ್ಬರು ಮುಚಕುಂದನಂತೆ, ಎಚ್ಚರಾಗದೆಯೆ ಮಲಗುವರು ಮತ್ತು ಎರಡನೆಯವರು ಈ ಕವನದ ಕರ್ತರಾದ ಚಿದಾನಂದರಂತೆ, ಮಲಗದೆಯೆ ಮಲಗುವರು ಅಂದರೆ ನೈತಿಕ ಹೋರಾಟವನ್ನು ನಡೆಯಿಸಿ, ಅದರಲ್ಲಿ ಗೆಲವನ್ನು ಪಡೆದು, ಪರಮಾನಂದ ಪರವಶತೆಯ ನಿದ್ರೆಯನ್ನು ಅನುಭವಿಸುವರು. ಈ ಸಂದರ್ಭದಲ್ಲಿ ಭಾಗವತದಲ್ಲಿ ಹೇಳಲಾದ ಮುಚಕುಂದನ ಕಥೆಯನ್ನು ಉಲ್ಲೇಖಿಸುವುದು ಅನುಚಿತವಾಗಲರಿಯದು.

ಒಂದಾನೊಂದು ಕಾಲಕ್ಕೆ ಇಂದ್ರಾದಿ ದೇವತೆಗಳು ಮುಚಕುಂದರಾಜನೆಡೆ ಹೋಗಿ, ತಮ್ಮನ್ನು ರಾಕ್ಷಸರಿಂದ ಕಾಪಾಡಬೇಕೆಂದು ಅವನ್ನು ಬೇಡಿಕೊಂಡರು. ಆತನವರನ್ನು ಬಹುಕಾಲ ರಕ್ಷಿಸಿನು. ಮುಂದೆ ದೇವತೆಗಳು ಕಾರ್ತಿಕೇಯನನ್ನು ತಮ್ಮ ಸೇನಾನಿಯನ್ನಾಗಿ ಪಡೆಯಬಲ್ಲವರಾದಾಗ, ಅವರು ತಮ್ಮನ್ನು ರಕ್ಷಿಸುವ ಪ್ರಯಾಸಕರ ಕೆಲಸವನ್ನು ತೊರೆದು, ವಿಶ್ರಾಂತಿಯನ್ನು ಪಡೆಯಲು ಮುಚಕುಂದ ನನ್ನು ಬಿನ್ನವಿಸಿದರು; ಮತ್ತೂ ಅವರಾತನಿಗೆ ಈ ಬಗೆಯ ವರವನ್ನಿತ್ತರು: "ನಿನ್ನ ಈ ವಿಶ್ರಾಂತಿಯುತ ನಿದ್ರೆಯಿಂದ ನಿನ್ನನ್ನು ಎಚ್ಚರಿಸಿದವರು, ನಿನ್ನ ಬರಿ ನೋಟ ದಿಂದಲೇ ಸುಟ್ಟು ಬೂದಿಯಾಗಿ ಬಿಡುವರು" ಆ ಮೇಲೆ ಕೃಷ್ಣನನ್ನು ಕೊಲ್ಲುವುದ ಕ್ಕಾಗಿ ಕಾಲಯವನನು ಆತನನ್ನು ಹಿಂಬಾಲಿಸಿದಾಗ, ಕೃಷ್ಣನು ಆತನನ್ನು ಮುಚ ಕುಂದನು ಗಾಢವಾಗಿ ನಿದ್ರೈಗೈದ ಪರ್ವತ-ಗುಹೆಗೆ ಒಯ್ದನು. ಆಗ ಅಲ್ಲಿ ಮಲಗಿ ದವನು ತಾನು ಇನಿತುಕಾಲ ಹಿಂಬಾಲಿಸಿರುವ ಕೃಷ್ಣನೇ ಇರುವನೆಂದು ಬಗೆದು, ಕಾಲಯವನನು ಆ ಮಲಗಿದ ಮನುಜನನ್ನು ಕಾಲಿನಿಂದ ಒದೆದು ಆತನನ್ನು ಎಚ್ಚರಿಸಿದನು. ಆದುದರಿಂದ ಮುಚಕುಂದನು ತನ್ನ ಕೆಂಗಣ್ಣುಗಳನ್ನು ತೆರೆದು, ತನ್ನ ನೋಟವನ್ನು ಎಲ್ಲೆಡೆ ಹೊರಳಿಸಿ, ಮೂಲೆಯಲ್ಲಿ ನಿಂತ ಕಾಲಯವನನ್ನು ಕಂಡನು. ಕೂಡಲೆ, ಉರಿಯುವ ಕೆಂಡದಂತಹ ಅವನ ನೋಟದಿಂದ ಕಾಲಯ ವನನು ಸುಟ್ಟು ಬೂದಿಯಾದನು. ಈ ಬಗೆಯಾಗಿ ಕಾಲಯವನನು ಕೊಲ್ಲಲ್ಪಟ್ಟಾಗ ಕೃಷ್ಣನು ತುಂಬ ಸಂತುಷ್ಟನಾಗಿ, ಮುಚಕುಂದನಿಗೆ ತನ್ನ ನಿಜರೂಪವನ್ನು ಕಾಣಿಸಿದನು.

ಆದರೆ ಚಿದಾನಂದರು ಈ ಹೋರಾದ ದಣಿವಿನಿಂದ ಬಳಲದೆ ಮಲಗಿದರಂತೆ. ನಿಜವಾಗಿ ಚಿದಾನಂದರು ಅರುಹುವ ನಿದ್ರೆಯು ಇಂದ್ರಿಯಗಳನ್ನು ನಿಶ್ಚೇತನಗೊಳಿಸುವ ಸಾಮಾನ್ಯ ನಿದ್ರೆಯಲ್ಲ. ಅದು ಪರಮಾನಂದ ಪರವಶತೆಯ ನಿದ್ರೆ, ಆಗ ಸಾಧಕನು ಪರಮಾತ್ಮನ ಅರಿವುಳ್ಳ ಪೂರ್ಣ ಎಚ್ಚರದಲ್ಲಿ ಇರುವನು. ಆ ಉನ್ಮನಿಯ ಇಲ್ಲವೆ ಅತೀಂದ್ರಿಯ ಅವಸ್ಥೆಯಲ್ಲಿ, ಅವನು ಧಣಿ, ಧಣಿ, ಧಣಿ ಎಂಬ ನಾದವ ಕೇಳುವನು, ಸುರಿ, ಸುರಿ, ಸುರಿವ ಸುಧಾರಸ ಕುಡಿಯುವನು. ಈ ಬಗೆಯ ಪರಮಾನಂದದಲ್ಲಿ ಪರವಶನಾದಾಗ ಮೈಮರೆತಾಗ ಅನುಭಾವಿಯು ಬೇರೆ ಜನರಿಗೆ ಮಲಗಿದಂತೆ ಕಾಣಬಹುದು. ಆದರೆ ನಿಜವಾಗಿ ಆತನು ಪೂರ್ಣಜಾಗ್ರತನಾಗಿರುವನು. ಪರಮಾತ್ಮನ ಉಪಸ್ಥಿತಿಯು ಆತನನ್ನು ಸದೈವ ಜಾಗೃತಿಯಲ್ಲಿಡುತ್ತಿರುವಾಗ, ಇಂಥ ಪುರುಷನು ಅದೆಂತು ಮಲಗಬಲ್ಲನು?

ಪ್ರಸ್ತುತ ಕವನವು ಭಕ್ತಿಯಲ್ಲಿಯ ವೀರರಸದ ಅತ್ಯುತ್ತಮ ನಿದರ್ಶನವು. ಚಿದಾನಂದರು ಈ ಬಗೆಯಾಗಿ ಅರುಹುವರು: "ನಾನು ಗುರುವಿಗೆ ಮಣಿದೆ; ಮೋಹ, ಸಂದೇಹ, ದರ್ಪ, ವ್ಯಸನ ಹಾಗೂ ಆಸಕ್ತಿ ಇತ್ಯಾದಿ ಒಳಗಣ ಹಗೆಗಳನ್ನು ಹಣಿದೆ. ಈ ನೈತಿಕ ಹೋರಾಟವು ದುರ್ಗುಣರೂಪಿಯಾದ ಶತ್ರುಗಳ ಕೊಲೆಯಲ್ಲಿ ಪರಿಣಮಿಸಿ ಅವರ ನೆತ್ತರದ ಹೊಳೆಯನ್ನು ಹರಿಸಿತು. ಸಾಧಕ-ಯೋಧನು ಅವರ ರುಂಡಗಳನ್ನು ಕತ್ತರಿಸಿದನು; ಮತ್ತು ಅವು ತಮ್ಮಿಂದ ತಾವೇ ಕುಣಿಯ ತೊಡಗಿದವು. ಈ ನೈತಿಕ ಹೋರಾಟದ ತರುವಾಯ ನಾನು ಉನ್ಮನಿಯ ಬಯಲಲ್ಲಿರುವ ಮಣಿಮಂಟಪದಲ್ಲಿ ಮಲಗಿದೆನು. ಅನಾಹತದ ಗಂಟೆಗಳು ತಮ್ಮ ಜೋಗುಳದಿಂದ ನನ್ನನ್ನು ಮಲಗಿಸಿದವು. ಸಹಸ್ರದಳಕಮಲದ ಹೊಳೆವ ಮಂಚದ ಮೇಲೆ ನಾನು ಮಲಗಿದೆನು. ಹಾಗೂ ಬಿಡಿ ಮುತ್ತುದುರುವ ಹಂಸತಲ್ಪದ ಮೇಲೆ ವಿಶ್ರಮಿಸಿದೆನು."

ಕೊನೆಯದಾಗಿ, ಈ ಕವನದಲ್ಲಿ, ಚಿದಾನಂದರು ಪಡೆದ ತೇಜ-ನಾದ-ರಸಗಳ ಅನುಭವಗಳನ್ನು ಬಣ್ಣಿಸುವ ಕೆಲ ಅಂದವಾದ ಸಾಲುಗಳನ್ನು ನಾವು ಕಾಣಬಹುದು. ಅವರಿಗೆ ಸದ್ಗುರುಗಳ ಕರುಣದ ಬೆಳದಿಂಗಳಲ್ಲಿ ಮಲಗುವ, ಹಾಗೂ ಸದೈವ ಅಲೆಯಲೆಯಾಗಿ ಮೊಳಗುವ ಗಂಟೆಗಳ ಅನಾಹತನಾದವನ್ನು ಕೇಳುವ ಭಾಗ್ಯವು ಲಭಿಸಿತು. ಈ ಎರಡೂ ಘಟನೆಗಳು ಕೊನೆಗೆ ಮೇಲಿಂದ ಮೇಲೆ ಸರಸ ಸುಧೆಯ ಸೇವನದಲ್ಲಿ ಪರಿಣಮಿಸಿದವು. ಇಲ್ಲಿ 'ದಣಿದು ಮಲಗಿದೆನೋ' ಎಂಬ ಒಂದು ಪಾಠವಿರುವುದು. ಆದರೆ 'ದಣಿಯದೆ ಮಲಗಿದೆನೋ' ಎಂಬ ಪಾಠವೇ ನಮಗೆ ಹೆಚ್ಚು ಒಳ್ಳೆಯದೆಂದು ಕಾಣುವುದು. ಯಾಕಂದರೆ, ಈ ಪದದಲ್ಲಿಯ, ಉತ್ಸಾಹಪೂರ್ಣ ಹಾಗೂ ಚೈತನ್ಯಪೂರ್ಣ ಚಟುವಟಿಕೆಗಳನ್ನು ಬಣ್ಣಿಸುವ ಪ್ರಧಾನ ಕಲ್ಪನೆಗಳು ನಾವು ಆಯ್ದ ಪಾಠಭೇದಕ್ಕೆಯೆ ಅನುರೂಪವಾದವುಗಳಿರುವವು.

ಈ ಗುಂಪಿನಲ್ಲಿಯ ಕೊನೆಯ ಪದವಾದ 'ಕಾಲಕರ್ಮವ ಕಾಲಿಲೆ ಒದಿದವ' ಎಂಬುದು ಭವತಾರಕರ ಕವನವು. ಸಂತರು ಅಂಜಿಕೆಯನ್ನು ಹೇಗೆ ಗೆದ್ದಿರುವರು, ಕ್ಷಣಭಂಗುರ ಇರವಿನ ಬಗೆಗೆ ಅವರು ಹೇಗೆ ಅನಾಸಕ್ತರಿರುವರು, ನಿರುತ್ಸಾಹ ನೈರಾಶ್ಯಗಳಿಂದ ಅವರು ಹೇಗೆ ಮುಕ್ತರಿರುವರು, ಮತ್ತು ಪರತತ್ವ ದೊಡನೆ ಏಕತೆಯನ್ನು ಪಡೆದ ಮೂಲಕ, ಅವರು ದ್ವೈತಭಾವದಿಂದ ಹೇಗೆ ಅಲಿಪ್ತರಿರುವರು. ಒಂದೇ ಮಾತಿನಲ್ಲಿ ಅರುಹಬೇಕಾದರೆ, ಅವರು ಎಲ್ಲ ಕೆಳಗಿನ ನೀಚ ಭಾವನೆಗಳನ್ನು ಹೇಗೆ ಮೀರಿರುವರು ಹಾಗೂ ಈ ಅರ್ಥದಲ್ಲಿ ಹೇಗೆ ನಿಜವಾದ ವಿಜಯಿಗಳಾಗಿರುವರು ಎಂಬುದನ್ನು ಈ ಪದವು ಅತ್ಯುತ್ತಮ ರೀತಿ ಯಿಂದ ವಿಶದಗೊಳಿಸುವುದು. ಸಂತರು ಶ್ರೇಷ್ಠತಮ ನೀತಿಯ ಪ್ರತೀಕರಾಗುವರು. ಅವರು ಆತ್ಮಾನಂದದಿಂದ ಪೂರ್ಣರಾಗಿರುವಾಗ, ಕ್ಷಣಿಕ ಹಾಗೂ ನಶ್ವರ ವಸ್ತು ಗಳನ್ನು ಪಡೆಯಲು ಹಾತೊರೆಯಬಹುದೇ? ವಿಷಯಸುಖವು ಅವರನ್ನು ಯಾವ ಬಗೆಯಾಗಿಯೂ ಆಕರ್ಷಿಸಲರಿಯದು. ಈ ಪದವನ್ನು ಸಾವಳಸಂಗದ ಸಂಗೀತ ಪ್ರಿಯ ಸಂತರು ನಿಂಬರಗಿಯ ಗುಡಿಯಲ್ಲಿ ಒಳ್ಳೇ ಜೋರಾಗಿ, ದೊಡ್ಡಧ್ವನಿಯಿಂದ ಹಾಡುತ್ತಿದ್ದರು. ಅದರ ಮೂಲಕ ಅಲ್ಲಿಂದ ಸುಮಾರು ಎರಡು ಫರ್ಲಾಂಗ ಅಂತರ ದಲ್ಲಿರುವ ನಿಂಬರಗಿ ಗ್ರಾಮದಲ್ಲಿ ಅದು ಸ್ಪಷ್ಟವಾಗಿ ಕೇಳಿಬರುತ್ತಿದ್ದಿತು. ಅವರು ಮೇಲಿಂದ ಮೇಲೆ ಹಾಡಲಿರುವ ಎರಡನೆಯಪದವು 'ಸಗುಣರೂಪ ನಯನೀ ಮಜ ದಾವಾ' 'ನನಗೆ ಭಗವಂತನ ಸಗುಣರೂಪವನ್ನು ತೋರಿಸಿರಿ.' ಎಂಬುದಿರುವುದು.

ಕಾಲಕರ್ಮಗಳನ್ನು ಕಾಲಿನಿಂದ ಒದೆದ ಮನುಜನು ಕತ್ತಲೆಗೆ ಎಂದಾದರೂ ಅಂಜುವನೇ?' ಎಂದು ಭವತಾರಕರು ಕೇಳುವರು. 'ದೃಷ್ಟಿಯೊಳಗೆ ದೃಷ್ಟಿನಿಂತಿತು' ಎಂಬ ಅವರ ಪದದಲ್ಲಿ, ಕರ್ಮವು ಯಾವ ಬಗೆಯಾಗಿಯೂ ತಮ್ಮನ್ನು ಬಾಧಿಸ ದಂತಾಯಿತು, ಎಂಬ ಅವರ ಹೇಳಿಕೆಯನ್ನು ನಾವು ಕಂಡಿರುವೆವಷ್ಟೇ? ಈ ಪದದಲ್ಲಿ ಅದೇ ಮಾತನ್ನು ಹೆಚ್ಚು ಪ್ರಬಲವಾಗಿ ಹೇಳಿರುವರು. ತಾವು ಕರ್ಮವನ್ನು ತುಳಿದ ಮೂಲಕ ತಮಗೆ ಕತ್ತಲೆಯ ಹೆದರಿಕೆಯೂ ಉಳಿಯಲಿಲ್ಲ ಎಂದವರು ಉಸುರುವರು. ಅವರು ಮತ್ತೂ ಈ ರೀತಿ ಕೇಳುವರು: "ತನ್ನ ಆಲಿಯ ಮೇಲೆ ಪರಮಾತ್ಮನನ್ನು ಕುಳ್ಳಿರಿಸಿದ ಪುರುಷನು ತರುಣ ಬಾಲೆಯರನ್ನು ಕಂಡು ಮರುಳಾಗಬಲ್ಲನೇ?" ಪರಮಾತ್ಮನ ದರ್ಶನವು ಎಲ್ಲ ಬಗೆಯ ಕಾಮ ವಿಕಾರಗಳನ್ನು ಅಳಿಸುವದೆಂಬುದನ್ನು ನಾವು ಗಮನಿಸಬೇಕು. ಈ ಅರ್ಥದಲ್ಲಿ ಸಂತರು ಜಾಗತಿಕ ವಸ್ತುಗಳ ಬಯಕೆಯಿಂದ ಮುಕ್ತರಾಗುವರೆಂಬುದು ಭವತಾ ರಕರ ಅಭಿಮತ. ಇದು ಬೃಹದಾರಣ್ಯಕೋಪನಿಷತ್ತಿನಲ್ಲಿ ಯ (IV-೪-೧೨) ಮುಂದಿನ ಭಾಗವನ್ನು ನಮ್ಮ ಜ್ಞಾಪಕಕ್ಕೆ ತರುವದುಂಟು: 'ಆತ್ಮನಲ್ಲಿ ಏಕತೆಯನ್ನು

ಪಡೆದವನು ಮತ್ತು ತಾನೆ ಆತ್ಮನೆಂಬುದನ್ನು ಅನುಭವಿಸಿದವನು, ಯಾವದೇ ಉದ್ವೇಗಪೂರ್ಣ ಶಾರೀರಿಕ ಕ್ರಿಯೆಯಲ್ಲಿ ಅದೇತಕ್ಕೆ ತೊಡಗಬೇಕು? ಅವನ ಬಯಕೆಗಳೆಲ್ಲ ಸಫಲವಾಗಿ ರುವವು. ಹಾಗೂ ಅವನ ಅಂತಿಮವು ಅವನಿಗೆ ಲಭಿಸಿರುವುದು."

ಗೀತೆಯು ಹೇಳಿರುವದೇನೆಂದರೆ: "ವಿಷಯ ಸುಖವನ್ನು ಕುರಿತ, ದುರ್ನಿವಾರಕವಾದ ಅಂತರಿಕ ಆಸಕ್ತಿಯು ಇಲ್ಲವೆ ರಸವೂ ಕೂಡ, ಪರಮಾತ್ಮನ ದರ್ಶನದಿಂದ ಅಳಿಯುವುದು ಹೇಳಹೆಸರಿಲ್ಲದಂತಾಗುವುದು." "ಅಮೃತರಸವನ್ನು ಸೇವಿಸಿದ ಮಹಾಮಹಿಮ ಅಂಬಲಿಯನ್ನೆಂದಾದರೂ ಸೇವಿಸಬಹುದೇ?" ಎಂದು ನಮ್ಮ ಕವಿಗಳು ಕೇಳುವರು. ಜ್ಞಾನೇಶ್ವರರ ಕೆಳಗಣ ಅವತರಣದಲ್ಲಿ ನಾವು ಇದೇ ಮಾದರಿಯ ಕಲ್ಪನೆಯನ್ನು ಕಾಣಬಹುದು:

ಜೋ ಅಮೃತಾಸಿ ದಿಠೀ ಠೇವೀ । ತೋ ಜೈಸಾ ಕಾಂಜೀ ನ ಸೇವೀ।
ಜೋ ಜೇವಿಲಾ ಚಂದ್ರಕಿರಣೇ ಚೋಖಟೇ।
ತೋ ಕಾ ವಾಳವಂಟೇ ಚುಂಬೀತ ಅಸೇ॥

"ಅಮೃತವನ್ನು ಸೇವಿಸುವವನು ಗಂಜಿಯನ್ನೆಂದಾದರೂ ಸೇವಿಸಬಹುದೇ? ಚಂದ್ರ ಕಿರಣಗಳನ್ನುಂಡ ಚಕೋರನು ಉಸುವನ್ನೆಂದಾದರೂ ಚುಂಬಿಸಬಹುದೇ?"

ಕವಿಯು ಅರುಹುವ ಮುಂದಿನ ವಿಷಯವು ಶಾರೀರಿಕ ಸ್ವರೂಪದ್ದಿರುವುದು ಕುಂಭಕದಲ್ಲಿ ಪ್ರಾಣವಾಯುವನ್ನು ನಿಲ್ಲಿಸಿದ ಮನುಜನು ಅಸಮಾಧಾನದಿಂ ಎಂದೂ ಕುದಿಯುವುದಿಲ್ಲ. ಇಂಥ ಪುರುಷನು ವೇದ-ಆಗಮಗಳ ಶ್ರೇಷ್ಠತ ಬೋಧೆಯನ್ನು ಸಾಧಿಸಿರುವುದರಿಂದ, ಅವನು ಭವದ ಬಾಧೆಯಿಂದ ಎಂ ದರೂ ತೊಳಲಬಲ್ಲನೇ? ಅವನು ನಿತ್ಯದ ಆನಂದವನ್ನು ಸೇವಿಸುತ್ತಿರುವುದರಿಂದ ಅವನ ಮನಸ್ಸು ಅನಿತ್ಯ ಸುಖದೆಡೆ ಮರುಳಬಲ್ಲದೇ? ಭವತಾರಕರು ವೇದಾಂತ ದರ್ಶನದಲ್ಲಿ ಪಾರಂಗತರಿರುವಂತೆ ಕಾಣುವದು. 'ತತ್ತ್ವಮಸಿ'-ಅದೇ 'ಅದೇ ನೀನಿರುವಿ' ಎಂಬ ಮಹಾವಾಕ್ಯದ ಬೋಧೆಯನ್ನು ಅನುಭವಿಸಿದವನು ಮೃತ್ಯುವಿಗೆ ಎಂದಾದರೂ ಹೆದರಬಹುದೇ?" ಎಂದು ಕವಿಯು ಕೇಳುವನು. ತನ್ನ ನಿಜ ರೂಪವು ಕೇವಲ ಶಾರೀರಿಕವಿರುವುದಿಲ್ಲ, ಆದರೆ ಅದು ತತ್ವತಃ ತಾನು ಕಾಣುವಂತೆ, ಪಾರಮಾರ್ಥಿಕವಿರುವುದು ಎಂಬುದನ್ನು ಸಾಕ್ಷಾತ್ಕರಿಸಿಕೊಂಡಾಗ, ಸಂತರಿಗೆ ಮರಣದ ಹೆದರಿಕೆಯೇ ಇಲ್ಲದಂತಾಗುವುದು. ಆಗ ಅನುಭಾವಿಯು ಪರಮಾತ್ಮ-ಸದ್ಗುರುಗಳಲ್ಲಿ ಭೇದವನ್ನು ಕಲ್ಪಿಸುವದೆಂತು? ಅವನು ಅವರಿಬ್ಬರನ್ನು ಪೂರ್ಣ ಅಭಿನ್ನರೆಂದು ಬಗೆಯುವನು. ಭವತಾರಕರಂತೆ, ಜೀವನದ ಏಕತೆಯನ್ನು ಅನುಭವಿಸಿದವನು ದ್ವೈತಭಾವನೆಯಿಂದ ಅದೆಂತು ಬಾಧಿತನಾಗಬಲ್ಲನು? 'ತತ್'- 'ಅದು', ಹಾಗೂ 'ತ್ವಂ'- 'ನೀನು', ಅಂದರೆ ಪರಮಾತ್ಮ ಮತ್ತು ಜೀವಾತ್ಮ

ಇವರಲ್ಲಿಯ ಭೇದವು ಅಳಿಯುವುದು. ಇಲ್ಲಿಮ ನಾವು, (೧) ಜಡ-ಜಡ, (೨) ಜಡ-ಜೀವ, (೩) ಜಡ-ಈಶ್ವರ, (೪) ಜೀವ-ಜೀವ, ಹಾಗೂ (೫) ಜೀವ-ಈಶ್ವರ ಈ ಪಂಚಭೇದಗಳನ್ನು ಅರುಹುವ ದ್ವೈತಸಿದ್ಧಾಂತವು ಅಂಶತಃ ಟೀಕಿಸ ಲಾಗಿರುವುದನ್ನು ಕಾಣಬಹುದು.

ಈ ವರೆಗೆ ನಾವು ಪರಮತ್ಮನ ಅನುಭಾವದ ವಿವಿಧ ನೈತಿಕ ಪರಿಣಾಮ ಗಳನ್ನು ಕಂಡದ್ದಾಯಿತು. ನಾವಿನ್ನು ಎರಡು ಸ್ವಗತ ಭಾಷಣಗಳೆಡೆ ತೆರಳುವೆವು. ಅವುಗಳಲ್ಲಿ ನಾವು ಬ್ರಹ್ಮಾನಂದ-ಪರವಶತೆಯ ಸಾರಸರ್ವಸ್ವವನ್ನು ಕಾಣಬಹುದು. ಶ್ರೇಷ್ಠತಮ ಕನ್ನಡ ಅನುಭಾವಿಗಳಲ್ಲಿ-ಅದೇಕೆ ಇಡಿ ಜಗತ್ತಿನ ಅನುಭಾವಿಗಳಲ್ಲಿ ಒಬ್ಬರಾದ ಮಹಿಪತಿರಾಯರು, ನಮಗೆ 'ಇನ್ನೇನಿನ್ನೇನು?' ಎಂಬ ಪರಮಾನಂದ ತರುವಾಯದ ತಮ್ಮ ಸ್ವಗತಭಾಷಣವನ್ನು ಸಲ್ಲಿಸಿರುವರು. ಪಾರಮಾರ್ಥಿಕ ಅನು ಭವವನ್ನು ನಿಚ್ಚಳವಾಗಿ ಬಣ್ಣಿಸುವ ಕಲೆಯಲ್ಲಿ ಅವರನ್ನು ಮೀರುವವರು ವಿರಲ. ಅವರ ಅನುಭಾವದ ಎತ್ತರ, ವಿಚಾರದ ಆಳ, ಹಾಗೂ ಅವರ ಶಕ್ತಿಯುತ ಶೈಲಿ, ಇವು ಓದುಗರ ಮನಸ್ಸಿನ ಮೇಲೆ ಶಾಶ್ವತವಾದ ಸಂಸ್ಕಾರವನ್ನು ಮೂಡಿಸು ವುದುಂಟು.

ಪರತತ್ವದ ಆಂತರತಮ ರಹಸ್ಯಗಳನ್ನು ಕಂಡಾಗ ಮಹಿಪತಿರಾಯರು ಪರಮಾನಂದ ಭರಿತರಾಗಿ ಮೈಮರೆಯುವರು. ಆಗವರು ಈ ರೀತಿ ಉದ್ಘೋಷಿಸುವರು: "ನಾನು ಎಂದಾದರೂ ಆಲೋಚಿಸಬಲ್ಲ ಶ್ರೇಷ್ಠತಮ ಬಯಕೆಯು ಫಲಿಸಿರುವಾಗ, ಇನ್ನು ಪಡೆಯುವುದಾದರೂ ಏನನ್ನು? ನನ್ನ ಸದ್ಗುರುಗಳು ತಮ್ಮ ಉನ್ನತತಮ ರಹಸ್ಯವನ್ನೇ ನನಗೆ ತೋರಿಸಿರುವರು, ಇನ್ನು ಅರಿಯುವದಾದರೂ ಏನನ್ನು? ನನ್ನ ಸಂಚಿತ ಕರ್ಮಗಳೆಲ್ಲಾ ನಿರ್ಮೂಲ ವಾಗಿರುವವು. ಆಗಾಮೀ ಕರ್ಮಗಳ ಜನನವೂ ಅಳಿದಿರುವುದು. ಇನ್ನು ಮಾಡುವುದಾದರೂ ಏನನ್ನು?" ಸಂಚಿತ ಕರ್ಮವು ಅಳಿದಿರುವುದು. ಪ್ರಾರಬ್ಧ ಹಾಗೂ ಕ್ರಿಯಾಮಾಣ ಕರ್ಮಗಳು ಅರ್ಥವಿಹೀನವಾಗಿರುವವು. ಯಾಕಂದರೆ ಈಗವು ಭಗವಂತನಿಂದ ಪ್ರೇರಿತವಾಗಿರುವವು. ಎಲ್ಲ ಕರ್ಮಗಳ ಬೀಜಗಳೇ ಸುಟ್ಟುಹೋದ ಮೂಲಕ, ಆಗಾಮೀ ಕರ್ಮಗಳು ಉಳಿಯುವುದೇ ಸಾಧ್ಯವಿಲ್ಲ. ಆನುಷಂಗಿಕವಾಗಿ, ನಾವು ಮುಂದಿನ ಮಾತನ್ನು ಗಮನಿಸಬಹುದು: ಆಗಾಮಿ ಕರ್ಮಗಳು ಜೀವನವೃಕ್ಷದ ಎಲೆ-ಹೂ-ಹಣ್ಣುಗಳು; ಸಂಚಿತಕರ್ಮವು ಅದರ ಮೂಲ; ಹಾಗೂ ಪ್ರಾರಬ್ಧಕ್ರಿಯಾಮಾಣ ಕರ್ಮಗಳು ಅದರ ಕಾಂಡ ಹಾಗೂ ಟೊಂಗೆಗಳು ಇದ್ದಂತೆ. ಮಹಿಪತಿರಾಯರು ಮತ್ತೂ ಹೇಳುವುದೇನೆಂದರೆ: 'ಎನ್ನೊಳು ಆತ್ಮದರ್ಶನದ ಕುರುಹು ಎನಗೆ ಕಾಣಿಸಿತು-ಆದುದರಿಂದ ನಾನಿನ್ನು ಕಾಣುವದೇನುಳಿಯಿತು?" 'ಕುರುಹು' ಅಂದರೆ ಗುರುತು ಎಂಬುದು ಕನ್ನಡ

ಅನುಭಾವ ಸಾಹಿತ್ಯದಲ್ಲಿಯ ಒಂದು ಮಹತ್ವದ ಶಬ್ದವಿರುವುದು. 'ಕುರುಹು ಕಂಡರೆ ಮರಳಿ ಭವಕ್ಕೆ ಬರಲಾರಿ!' ಎಂಬ ಕನ್ನಡ ಸೂತ್ರವು ಸುಪ್ರಸಿದ್ಧವಿರುವುದು. ಪರಮಾತ್ಮನು ಯಾವ ರೂಪದಿಂದ ಉತ್ಕಾಂಕ್ಷಿಯಾದ ಸಾಧಕನ ಕಂಗಳೆದುರು ನಿಲ್ಲಬಯಸುವನೋ–ನಿಲ್ಲುವನೋ– ಆ ರೂಪವೇ 'ಕುರುಹು' ಎಂಬುದು ಸ್ಪಷ್ಟವಾದುದು. ಈ ರೀತಿ, ಸಾಧಕನ ನೈತಿಕ ಶುದ್ಧತೆಯ ಹಾಗೂ ತಲ್ಲೀನ ಏಕಾಗ್ರತೆಯ ಮೂಲಕ, ಅವನೆದುರು ಕಾಣಿಸಿಕೊಳ್ಳುವ ಪರಮಾತ್ಮನ ರೂಪವೇ 'ಕುರುಹು'. ಈ ಕುರುಹುರೂಪಿಯಾದ ಬೆಳಕನ್ನು ಪಡೆದು ಮಹಿಪತಿರಾಯರು ಪರಮಾತ್ಮನಿಗೆ ತನ್ನನ್ನೆ ಅರ್ಪಿಸಿಬಿಡುವರು. ನಾವು ಪರಮಾತ್ಮನನ್ನು ಕಂಡಮೇಲೆಯೇ ಸಂಪೂರ್ಣ ಶರಣಾಗತಿಯು ಆತ್ಮಸಮರ್ಪಣವು ಸಾಧ್ಯವಾಗುವುದು ಎಂಬುದು ಮಹಿಪತಿರಾಯರ ಅಭಿಮತ. ಬಹುತರವಾಗಿ ಇದೇ ಕಾರಣಕ್ಕಾಗಿ, ಅಷ್ಟೊಂದು ಪ್ರಸಿದ್ಧ ರಲ್ಲದ, ಬಹಿರೋ ಎಂಬ ಹಿಂದೀ ಸಂತಕವಿಗಳು, ಒಂದಕ್ಕಿಂತ ಒಂದು ಮಿಗಿಲಾದ ವಿವಿಧ ಮುಕ್ತಿಗಳನ್ನು ಅರುಹಿ, ಕೊನೆಗೆ ಶರಣಗಮನ ಮುಕ್ತಿಯು ಅವುಗಳಲ್ಲಿ ಶ್ರೇಷ್ಠತಮವಾದುದೆಂದು ಬಗೆಯುವನು–ಅರುಹುವನು.

ತಮ್ಮ ಪ್ರಜ್ಞೆಯ ಜಾಗೃತಿ, ಸ್ವಪ್ನ, ಸುಷುಪ್ತಿ ಹಾಗೂ ತುರೀಯ ಎಂಬ ಎಲ್ಲ ಅವಸ್ಥೆಗಳನ್ನು ಪರಮಾತ್ಮನ ಸೇವೆಗಾಗಿ ಮೀಸಲಾಗಿರಿಸಿದ ವಿರಲ ಅನುಭಾವಿಗಳಲ್ಲಿ ಮಹಿಪತಿರಾಯರು ಒಬ್ಬರು. "ಈ ಬಗೆಯ ಪೂರ್ಣ ಶರಣಾಗತಿಯನ್ನು ಪಡೆದಾಗ ನನ್ನ ಭಾವದ ಬಯಲಾಟದ ಆಮತರತಮ ರಹಸ್ಯವು ಸುವ್ಯಕ್ತವಾಯಿತು. ಮನಸ್ಸಿನ ಗುಹ್ಯವು ತಿಳಿದು ಪಡೆಯುವಂತಹದೇನೂ ಉಳಿಯಲಿಲ್ಲ. ಭಾವನೆ ವಿಚಾರಗಳ ದೃಶ್ಯವು ನಿಜ ಅನುಭವದಲ್ಲಿ ಪರಿವರ್ತನ ಹೊಂದಿತು" ಎಂದು ರಾಯರು ಹೇಳುವರು. ಅವರು ಮುಂದೆ ತಮ್ಮ ಏಕತೆಯ ಅನುಭವವನ್ನು ಈ ಬಗೆಯಾಗಿ ಬಣ್ಣಿಸಿರುವರು: "ನಾನು 'ಸೋಹಂ' 'ಅವನು ನಾನು' ಎಂಬುದರ ಸತ್ಯತೆಯನ್ನು ಅನುಭವಿಸಿದ ಕೂಡಲೆ, ಜೀವ–ಶಿವರ ನಿಜವಾದ ಸ್ವರೂಪವೂ, ಅವರ ಪರಸ್ಪರ ಸಂಬಂಧವೂ ನನಗೆ ತಿಳಿಯಿತು. ಈ ಏಕತೆಯ ಅವಸ್ಥೆಯ ಅನುಭವವು ಬಂದ ಮೇಲೆ ಇನ್ನು ಪಡೆಯುವುದೇನನ್ನು? ಸ್ಥಿತಿಯು ಜನ್ಮ–ಮರಣದ ಜಂತ್ರವನ್ನು ಮುರಿಯುವುದು–ಚಕ್ರವನ್ನು ನಿಲ್ಲಿಸುವುದು, ಮತ್ತು ಮಹಿಪತಿ ರಾಯರು ಅಮರತ್ವದ ಆನಂದವನ್ನು ಸವಿಯುವರು.

ತರುವಾಯ ರಾಯರು, 'ಸಂದೇಹ ಸಂಕಲ್ಪ ಸೂತ್ರವು ಹರಿಯಿತು' ಎಂದು ಅರುಹುವರು. ಮುಂಡಕೋಪನಿಷತ್ತಿನ ಹಿರಿಯ ಅನುಭಾವಿಗಳು ಕೂಡ ಇದೇ ಬಗೆಯಾಗಿ ಸಾರಿರುವರು: "ಹಿರಿಯರಲ್ಲಿ ಹಿರಿಯನಾಗಿರುವ ಪರಮಾತ್ಮನನ್ನು

ಅವನೊಮ್ಮೆ (ಅನುಭಾವಿಯು ಒಮ್ಮೆ) ಕಂಡಾಗ, ಅವನ ಹೃದಯಗ್ರಂಥಿಗಳೆಲ್ಲ ಕಡಿಯಲಾಗುವವು; ಸಂದೇಹಗಳೆಲ್ಲ ಅಳಿಯುವವು; ಮತ್ತು ಕರ್ಮಗಳ ಪರಿಣಾಮಗಳೆಲ್ಲ ನಾಶಹೊಂದುವವು" ಸಾಧಕನನ್ನು ಸಂದೇಹ-ಸಂಕಲ್ಪಗಳು ಬಾಧಿಸುತ್ತಿರುವವರೆಗೆ-ಕಾಡುತ್ತಿರುವವರೆಗೆ-ಅವನು ಪರಮಾತ್ಮನಿಂದ ದೂರನಿದ್ದನು; ಮತ್ತು ಅವನಲ್ಲಿಯ ದ್ವಿಧಾವೃತ್ತಿಯು ಹಾಗೆಯೆ ಉಳಿಯಿತು. ಆದರೆ ಈ ವರೆಗೆ ಅವನ ಮನಸ್ಸನ್ನು ಸಂತ್ರಸ್ತಗೊಳಿಸಿದ ಸಂದೇಹಗಳೂ, ಮತ್ತು ಅದನ್ನು ಅತ್ತಿತ್ತ ಸೆಳೆದ-ಎಳೆದ ಸಂಕಲ್ಪಗಳೂ ಮಾಯವಾದಾಗ, ಅವನ ಉದ್ದೇಶದಲ್ಲಿ ಏಕತೆಯು ಉಂಟಾಗಿ, ಅವನ ಮನಸ್ಸು ಶಾಂತವಾಯಿತು. ಕವಿಯು ತನ್ನೀ ಅವಸ್ಥೆಯನ್ನು 'ಇಮ್ಮನವಿದ್ದದ್ದು (ಕಾಳು) ಒಮ್ಮನವಾಯಿತು' ಎಂದು ಬಣ್ಣಿಸಿರುವನು. 'ಎರಡು ಮನಗಳು ಈಗ ಒಂದಾದವು' ಮತ್ತು ಭಕ್ತ-ಭಗವಂತರಲ್ಲಿ ಏಕತೆಯುಂಟಾಯಿತು ಎಂಬುದನ್ನು ಕೂಡ ಇದು ಸೂಚಿಸ ಬಹುದು. ಈ ಕಲ್ಪನೆಯನ್ನು ಮೌಲಾ ಎಂಬ ಸುಪ್ರಸಿದ್ಧ ಹಿಂದೀ ಸಂತಕವಿಯು ಮುಂದಿನ ಕಲ್ಪನೆಯೊಡನೆ ಸಹಜವಾಗಿ ಹೋಲಿಸಬಹುದು: 'ಬೇನಾಮ ಕಾ (ಏಕ) ನಾಮ ಹೋಕರ ರಹಟಾನಾ ರಹಾ.'- 'ಎರಡು ನಾಮಗಳು ಒಂದಾಗಿ, ಜೀವನಚಕ್ರವು ನಿಂತಿತು' ಜೀವನದ ಇಡಿ ರಹಸ್ಯವೇ ತಿಳಿದಾಗ, ಸಂಚಿತ ಕರ್ಮಗಳೆಲ್ಲ ಅಳಿದಾಗ, ಪೂರ್ಣ ಶರಣಾಗತಿಯು ಜೀವನಸೂತ್ರವಾದಾಗ, ಕಿರಿದರಲ್ಲಿ ಅರುಹಬೇಕಾದರೆ, ರಾಯರು ತಮ್ಮ ಸದ್ಗುರುಗಳೊಡನೆ ಏಕತೆಯನ್ನು ಪಡೆದಾಗ-ಅನನ್ಯರಾದಾಗ, ಅವರು ಪೂರ್ತಿಯಾಗಿ ಪರಮಾತ್ಮಮಯರಾದರೆ ಅದರಲ್ಲೇನಾಶ್ಚರ್ಯ?

ನಾವಿನ್ನು 'ಹರಿದಾಸರ ಸಂಗ ದೊರಕಿತು' ಎಂಬ ಬೇರೊಂದು ಪರಮಾನಂದೋತ್ತರದ ಸ್ವಗತಭಾಷಣವನ್ನೊಳಗೊಂಡ ಪದವನ್ನು ವಿವರಿಸಲಿರುವೆವು. ಇದು ಪಾರಮಾರ್ಥಿಕ ಜೀವನದ ಇಡಿ ಪ್ರಗತಿಯ ಸಾರವನ್ನೇ ಕೊಡುವದೆಂದು ಹೇಳಬಹುದು. ಇದು ಪುರಂದರದಾಸರ ಪದ. ಪರಮಾನಂದವನ್ನು ಪಡೆದ ತರುವಾತಯ ಸಂತರು ಪಡೆಯಬೇಕಾದುದೇನೂ ಉಳಿಯಲಿಲ್ಲ. ಅವರ ಸಂದೇಹವು ಪೂರ್ತಿಯಾಗಿ ಅಳಿಯುವುದು ಹಾಗೂ ಅವರಿಗೆ ಪರಮಾತ್ಮನ ಪ್ರಸಾದವು ದೊರೆತ ಬಗೆಗೆ ಪೂರ್ಣ ಮನವರಿಕೆಯಾಗುವುದು.

'ಹರಿದಾಸರ ಸಂಗ ದೊರಕಿತು ಎನಗೀಗ! ಇನ್ನೇನಿನ್ನೇನು?' 'ನನ್ನ ಸದ್ಗುರುವಿನ ಬೋಧೆಯು ಸಫಲವಾಯಿತು, ಇನ್ನೇನಿನ್ನೇನು?' ಎಂದು ಪುರಂದರ ದಾಸರು ಉದ್ಗರಿಸುವರು. ಇಲ್ಲಿ 'ಸಫಲವಾಯಿತು' ಎಂಬ ಪಾಠವು 'ನೆರವಾಯಿತು' ಎಂಬುದಕ್ಕಿಂತ ಹೆಚ್ಚು ಒಳ್ಳೆಯದಿರುವುದು. ಯಾಕಂದರೆ ಸದ್ಗುರುವಿನ ಬೋಧೆಯು ಬರೀ ನೆರವನ್ನು ನೀಡುವುದಿಲ್ಲ. ನಿಜವಾಗಿ ಅದಕ್ಕಿಂತ ಹೆಚ್ಚಿನ ಕಾರ್ಯವನ್ನು

ಅದು ಮಾಡುವುದುಂಟು. "ಗರುಡನ ಮರಿಯು ತನ್ನ ತಾಯಿಯ ರಕ್ಷಕ ರೆಕ್ಕೆಗಳ ಆಶ್ರಯದಲ್ಲಿ ಸುರಕ್ಷಿತವಾಗಿರುವಂತೆ, ನನ್ನ ಸದ್ಗುರುವಿನ ಬೋಧೆಯ ಆಶ್ರಯದಲ್ಲಿ ನಾನು ಕೂಡ ಸುರಕ್ಷಿತನಿರುವೆನು. ಸದ್ಗುರುವಿನ ಅನಂತ ಆಶ್ರಯ ರಕ್ಷಣಗಳಿರುವಾಗ, ಹಲವು ದೇವತೆಗಳನ್ನು ಹಿಂಬಾಲಿಸುವ ನನ್ನ ಹಂಬಲವು ಅಳಿಯಿತು", ಎಂದು ದಾಸರಾಯರು ಹೇಳುವರು. ಜಾಗತಿಕ ಜೀವನದ ಆಸಕ್ತಿಯೆಲ್ಲ ಅಳಿಯುವುದು, ದಿವ್ಯಾನಂದವು ಭಕ್ತನಿಗೆ ನೀಡುವ ಇನ್ನೊಂದು ಸುಫಲ ಎಂಬುದು ದಾಸರ ಅಭಿಮತ. ಆ ಮೇಲೆ ಭಗವಂತನ ನಾಮವು ಭಕ್ತನ ನಾಲಿಗೆಯಲ್ಲಿ ನೆಲೆಸುವುದು. ಆಗ ದೇವರರೂಪವು ಅವನೆದುರು ಸ್ಥಿರವಾಗುವುದು. ಇಲ್ಲಿ ದೇವ-ದರ್ಶನದ ಸ್ಥಿರತೆಯು, ಸಾಧಕನ ಮನದ ನಿಶ್ಚಲತೆಯನ್ನು ಹಿಂಬಾಲಿಸುವುದು ಎಂಬುದು ಸೂಚಿಸಲಾಗಿರುವುದು. ಪುರಂದರದಾಸರಿಗೆ ಭಗವಂತನೇ ತಂದೆತಾಯಿಯಾದ. ತಾವು ಭಗವಂತನ ಪ್ರಸಾದವನ್ನು ಪಡೆದ ಬಗೆಗೆ ಅವರಲ್ಲಿ ಸಂದೇಹವುಳಿಯಲಿಲ್ಲ. ಭಗವಂತನ ಪ್ರಸಾದದ ಸೌಮ್ಯ ಮಳೆಹನಿಗಳು ದಾಸರಾಯರ ಮೇಲೆ ಉದುರಿದಾಗ ಅವರು ಆನಂದಮಂದಿರವನ್ನು ಸೇರಿದರು. ಆಗ ಅಂತರಂಗದಲ್ಲಿ ಅನುಭವಿಸಿದ ಆನಂದಸಂಭ್ರಮವನ್ನು ಉಸುರುವುದು ಅವರಿಗೆ ಅಸಾಧ್ಯವಾಯಿತು. ಕೊನೆಯದಾಗಿ, "ಎನ್ನ ವಂಶಗಳೆಲ್ಲ ಪಾವನವಾದವು! ಎನಗೆ ಚಿನ್ನ ವಿಠ್ಠಲನೆ ದೊರಕಿದ! ಇನ್ನೇನಿನ್ನೇನು?" ಎಂದು ದಾಸರಾಯರು ಉದ್ಘೋಷಿಸುವರು.

ನಾವಿನ್ನು ಕೊನೆಯ ಪದವಾದ 'ಇದೇ ಅನುಭಾವ ಮಂಟಪವು' ಎಂಬುದನ್ನು ವಿವರಿಸಲು ಪ್ರಾರಂಭಿಸುವೆವು. ಇದು ಸಂತರ ಪಾರಮಾರ್ಥಿಕ ಪರಿಷತ್ತಿನ ಅತ್ಯುತ್ತಮ ವೃತ್ತಾಂತವನ್ನು ನೀಡುವುದು. ಕೇವಲ ಉತ್ಕಟ ಭಕ್ತಿಯಿಂದ ಕೂಡಿದ ಹಾಗೂ ಅನುಭವದ ಉನ್ನತ ನೆಲೆಯನ್ನು ಮುಟ್ಟಿದ ಸಂತರಷ್ಟೇ ಈ ಭವ್ಯ ಪರಿಷತ್ತಿನ ಸದಸ್ಯರಾಗಿದ್ದರು. ಭಗವಂತನ ವೈಭವದ ಪ್ರಸಾರಕ್ಕಾಗಿಯೂ, ಮಾನವ-ಜೀವನದ ಮಾಂಗಲ್ಯ ವೃದ್ಧಿಗಾಗಿಯೂ, ತಮ್ಮ ಸರ್ವಸ್ವವನ್ನು ಸಮರ್ಪಿಸುವುದೇ ಅವರ ಏಕಮೇವ ಉದ್ಯಮವಾಗಿದ್ದಿತು. ವಿಶ್ವವ್ಯಾಪಾರದ ಅಂತಿಮ ಪರಿಣತಿಯು ನೀತಿ ಹಾಗೂ ಅಂತಃಪಾವಿತ್ರ್ಯ ಇವುಗಳ ಮೂಲಾಧಾರದ ಮೇಲೆ ನೆಲೆಸಿದ ಪರಿಪೂರ್ಣವಾದ ಸಮಾಜ ರಚನೆಯಲ್ಲಿ ಆಗುವುದುಂಟು ಎಂಬುದು ಹಲ ಹಿರಿಯ ವಿಚಾರವಂತರ ಆಶೆ. ಅನಾದಿಕಾಲದಿಂದ, ಆದರ್ಶ ಸಮಾಜವನ್ನು ಕಟ್ಟುವುದು ಇಡೀ ಮಾನವತೆಯ ಒಂದೇ ಒಂದಾದ ಶ್ರೇಷ್ಠತಮ ಮಹದಾಕಾಂಕ್ಷೆ. ನಾವದನ್ನು ಬಾಯ್ಬಲ್ಲಿನ ಹಳೆಯ ಒಡಂಬಡಿಕೆ, ಹೊಸ ಒಡಂಬಡಿಕೆ, ಸಂತ ಅಗಸ್ಟಾಯಿನರವರ 'ದೇವರ ನಗರ (Civitas Dei) ಇವುಗಳಲ್ಲಿಯೂ ಮತ್ತು ಜಗತ್ತಿನ ಎಲ್ಲ ಧರ್ಮಗ್ರಂಥಗಳಲ್ಲಿಯೂ ಕಾಣಬಹುದು.

ಜಗತ್ತಿನಲ್ಲಿ ದೈವೀರಾಜ್ಯವು ನೆಲೆಗೊಳ್ಳುವದು; ಆಗ ದೇವರು ಮಾನವತೆಯನ್ನು ಮುಕ್ತಮಾಡಿ ಅವರಿಗೆ ಶಾಶ್ವತ ಶಾಂತಿಯನ್ನು ದಯಪಾಲಿಸುವನು; ಎಂಬ ಭವಿಷ್ಯವನ್ನು ಹಿರಿಯ ಪ್ರವಾದಿಗಳು ಈ ಮೊದಲೇ ಅರುಹಿರುವರು. ಯೇಸುಕ್ರಿಸ್ತನು ದೇವರ ಸ್ವರ್ಗೀಯ ಆಳಿಕೆಯು ಸನ್ನಿಹಿತವಾಗಿರುವದೆಂಬ ಶುಭವಾರ್ತೆಯನ್ನು ತಂದನು. ಅವನು ದೈವೀರಾಜ್ಯವನ್ನು ಕಂಡನು; ಅದರಲ್ಲಿ ಪ್ರತಿಯೊಬ್ಬ ಮನುಜನು ದೇವರ ಕುಟುಂಬದವನಾದನು. ಈ ದೈವೀರಾಜ್ಯವು ಸಲ್ಲಿಸಿದ ವರಪ್ರಸಾದವು ಆಂತರಿಕವಿದ್ದಿತು, ಪಾರಮಾರ್ಥಿಕವಿದ್ದಿತು; ಅದು ಭೌತಿಕ ಇಲ್ಲವೆ ಬಾಹ್ಯವಿರಲಿಲ್ಲ. ಪಾರಮಾರ್ಥಿಕ ದೈನ್ಯವು (ವಿನಯವು) ಈ ದೇವೀರಾಜ್ಯವನ್ನು ಸೇರಲು ಬೇಕಾದ ಪ್ರಧಾನ ಆವಶ್ಯಕತೆಗಳಲ್ಲಿ ಒಂದಾಗಿದ್ದಿತು. ಸಂತ ಆಗಸ್ಟಾಯಿನರವರು ಕಂಡ ಆದರ್ಶ ಸಮಾಜವು ದೇವರ ಬಯಕೆಯಂತೆ ಹಾಗೂ ಶಾಸನದಂತೆ ನಡೆಯುವ ಮತ್ತು ಅವನ ಚೈತನ್ಯವನ್ನೂ, ಪ್ರಸಾದವನ್ನೂ ಪಡೆದ ಜನರಿಂದ ಕೂಡಿದಿದಿರುವುದು.

ಇನ್ನು ನಾವು ಈ ಆದರ್ಶರಾಜ್ಯದ ತಾತ್ವಿಕ ಪ್ರತಿಪಾದನೆಗಳೆಡೆ ಕೊಂಚ ಹೊರಳಿದೆವೆಂದರೆ, ತಮ್ಮ ತಮ್ಮ ಆದರ್ಶವನ್ನು ತಮ್ಮ ತಮ್ಮ ರೀತಿಯಿಂದ ನಿರ್ಮಿಸುವ ವಿಚಾರವಂತರ ಪರಂಪರೆಯನ್ನೇ ಕಾಣಬಹುದು. ಪ್ಲೇಟೋನ ಆದರ್ಶ ಸಮಾಜವು, ದಾರ್ಶನಿಕರು ಅರಸರಿದ್ದರೆ ಇಲ್ಲವೆ ಅರಸರು ದಾರ್ಶನಿಕ ರಿದ್ದರೇನೇ ಅಸ್ತಿತ್ವದಲ್ಲಿ ಬರುವುದು-ನೆಲೆಗೊಳ್ಳುವುದು. ಕಾಂಟನ 'ಅಂತಿಮಗಳ ರಾಜ್ಯವು' ಸ್ವಾರ್ಥಪರತೆ ಹಾಗೂ ಪರಾರ್ಥಪರತೆ ಇವುಗಳಲ್ಲಿಯ ಹಿರಿಯ ಅಂತರವನ್ನು ಅಳಿಸಲು ಯತ್ನಿಸಿ, ನೀತಿಶಾಸ್ತ್ರದ ಸಾಮಾಜಿಕ ಸ್ವರೂಪವನ್ನು ಪ್ರಕಟಗೊಳಿಸುವುದು. ಅದೊಂದು ಬುದ್ಧಿನಿಷ್ಠ ಜನರ ಸಮುದಾಯವನ್ನು ಪ್ರತಿನಿಧಿಸುವುದು. ಅದರಲ್ಲಿ ಬುದ್ಧಿನಿಷ್ಠರಾದ ಯಾವುದೇ ಮನುಜನು ಇನ್ನೊಬ್ಬ ನಿಗಾಗಿ ಶಾಸನವನ್ನು ಮಾಡಬಲ್ಲನು. ಯಾಕಂದರೆ ಎಲ್ಲ ಬುದ್ಧಿನಿಷ್ಠ ಸಂಕಲ್ಪಗಳು ಒಂದೇ ಬಗೆಯ ಶಾಸನಗಳನ್ನು ನಿರ್ಮಿಸುವವು. ಸ್ವರ್ಗೀಯ ರಾಜ್ಯದ ಮಾದರಿ ಯಲ್ಲಿ ಕಲ್ಪಿಸಲಾದ ಕಾಂಟನ ನೈತಿಕ ರಾಜ್ಯವು, ಪೂರ್ಣ ನೈತಿಕ ಪ್ರಜಾಪ್ರಭುತ್ವದ ನಿದರ್ಶನವಿರುವುದು. ಯಾಕಂದರೆ ಎಲ್ಲ ವ್ಯಕ್ತಿಗಳು ತಮ್ಮಷ್ಟಕ್ಕೆ ಅಂತಿಮಗಳೆಂದೇ ಬಗೆಯಲಾಗಿರುವುದು. ದೇವರಾಜ್ಯದ ಕಲ್ಪನೆಯು ತುಂಬ ಭವ್ಯವಾದುದಿದ್ದರೂ, ಅದು ಕೇವಲ ಆದರ್ಶವೆಂದೇ-ಕನಸೆಂದೇ ಉಳಿದಿರುವದು. ಗ್ರೀನನ ರಾಜಕೀಯ ದರ್ಶನವು ಭವ್ಯ ಪರತತ್ತ್ವಶಾಸ್ತ್ರವನ್ನು ಆಶ್ರಯಿಸಿರುವುದು. ಅವನ ರಾಜ್ಯದ ಕಲ್ಪನೆಯ ಮೂಲಾಧಾರವು ಪಾರಮಾರ್ಥಿಕ ತತ್ತ್ವದ ಆದರ್ಶವಿರುವುದು. ಆ ಪಾರಮಾರ್ಥಿಕ ತತ್ತ್ವವು ಮಾನವನ ಪ್ರಜ್ಞೆಗೆ ಸಾಮಾಜಿಕ ಕಲ್ಯಾಣದ ಕಲ್ಪನೆಯನ್ನು ಅರುಹುವದು; ಮತ್ತು ಈ ಕಲ್ಪನೆಯ ಪೂರ್ಣತೆಗಾಗಿ, ಮಾನವನ ಪ್ರಜ್ಞೆಯು ಸದೈವ ಯತ್ನಿಸುವುದು. ಪರತತ್ವಶಾಸ್ತ್ರದ ತಳಹದಿ ಹಾಗೂ ನೈತಿಕ ಅಂತಿಮವುಳ್ಳ

ಸಮಾನ ಆದರ್ಶದ ಸಮಾನ ಪ್ರಜ್ಞೆಯಿಂದ ಕೂಡಿದ ಸದಸ್ಯರುಳ್ಳ ಗ್ರೀಸನ ರಾಜ್ಯದ ಸಿದ್ಧಾಂತವು, ರಾಜಕೀಯ ದರ್ಶನಕ್ಕೆ ಸಲ್ಲಿಸಲಾದ ಪ್ರಖ್ಯಾತ ಕಾಣಿಕೆಗಳಲ್ಲಿ ಒಂದಾಗಿರುವುದು.

ಈ ವರೆಗೆ ನಾವು ಪ್ರವಾದಿಗಳು, ಅನುಭಾವಿಗಳು, ಹಾಗೂ ದಾರ್ಶನಿಕರು ಕಂಡುಹಿಡಿದ ಆದರ್ಶ ಹಾಗೂ ಪರಿಪೂರ್ಣ ಸಮಾಜದ ಕಲ್ಪನೆಗಳನ್ನು ಉಲ್ಲೇಖಿಸಿರುವೆವು. ಹನ್ನೆರಡನೆಯ ಶತಮಾನದಲ್ಲಿ, ಇಂದು ಕಲಬುರ್ಗಿ ಜಿಲ್ಲೆಯಲ್ಲಿರುವ, ಅಂದಿನ ಕಲ್ಯಾಣಪಟ್ಟಣದಲ್ಲಿ ಬಿಜ್ಜಳಭೂಪಾಲನು ಆಳುತ್ತಿರುವಾಗ, 'ಅನುಭವ ಮಂಟಪ' ಇಲ್ಲವೆ ಪಾರಮಾರ್ಥಿಕ ಅನುಭವದ ಸಭಾಮಂದಿರ ಎಂಬ ಸಂಸ್ಥೆಯು ಸಾಧಕರು ಹಾಗೂ ಭಕ್ತರು ನೆರೆಯುವ ಪವಿತ್ರಸ್ಥಲವಾಗಿತ್ತು. ಅಲ್ಲಿ ಅವರು ಭಗವಂತನ ನಾಮದ ಸಂಕೀರ್ತನದಿಂದಲೂ ಜಯಜಯಕಾರದಿಂದಲೂ, ಆಗಸವನ್ನೇ ತುಂಬುಬಿಡುತ್ತಿದ್ದರು. ಪರಮಾತ್ಮನನ್ನು ಅರಸುವ ಪ್ರತಿಯೊಬ್ಬ ಉತ್ಕಟ ಸಾಧಕನು, ತುಂಬ ವಿನಯಪೂರ್ವಕವಾಗಿ, ತನ್ನ ಪಾರಮಾರ್ಥಿಕ ಅನುಭವವನ್ನು ಈ ಪಾರಮಾರ್ಥಿಕ ಪರಿಷತ್ತಿನಲ್ಲಿ ಅರುಹುತ್ತಿದ್ದನು; ಮತ್ತು ಅಲ್ಲಿ ತನ್ನ ಅನುಭವಕ್ಕೆ ಅನುಗುಣವಾದ ಸ್ಥಾನವನ್ನು ಆಕ್ರಮಿಸುತ್ತಿದ್ದನು. ಧರ್ಮವನ್ನು ಕರ್ಮನಿಷ್ಠೆಯ ಕರ್ಮಠತನದ ಹಾಗೂ ಕಾಲ್ಪನಿಕ ತತ್ತ್ವವಾದದ ಬಂಧನಗಳಿಂದ ಮುಕ್ತಮಾಡಿ, ಅದನ್ನು ಜನಸಾಮಾನ್ಯರಲ್ಲಿ ಹಬ್ಬಿಸುವುದೇ ಆ ಸಂಸ್ಥೆಯ ಪ್ರಧಾನ ಉದ್ದೇಶಗಳಲ್ಲಿ ಒಂದಾಗಿದ್ದಿತು. ಅದು ಜಾತಿ, ಮತ, ಹಾಗೂ ಲಿಂಗಗಳ ಭೇದಗಳನ್ನೆಲ್ಲ ಅಳಿಸಿಬಿಟ್ಟಿತು. ಸಮರ್ಪಣ ಭಾವದಿಂದ ಮಾಡಲಾದ ನಮ್ಮ ನಿಯತಕರ್ಮವು, ನಮ್ಮನ್ನು ಕೈಲಾಸಕ್ಕೆ ಒಯ್ಯುವುದು. (ಕಾಯಕವೇ ಕೈಲಾಸ) ಎಂಬ ಸಿದ್ಧಾಂತವನ್ನು ಎತ್ತಿಹಿಡಿಯಿತು. ಪರಸ್ಪರ ಪ್ರೀತಿಯೂ ಸಮಾನ ಪಾರಮಾರ್ಥಿಕ ಗುರಿಯ ಅನುಸರಣವೂ, ಅದರ ಸದಸ್ಯರನ್ನು ಕಟ್ಟುವ ಶಕ್ತಿಯಾಗಿತ್ತು. ಈ ಪಾರಮಾರ್ಥಿಕ ಬಾಂಧವ್ಯಕ್ಕೆ ಸೇರಿದ ಪ್ರತಿಯೊಬ್ಬ ಸದಸ್ಯನು, ವಿನಯದಿಂದ ತನ್ನ ಬಾಂಧವನಿಗಿಂತ ಕಿರಿಯನೆಂದು ಬಗೆಯುತ್ತಿದ್ದನು. ವೀರಶೈವ ಸಂತರ ಪಾರಮಾರ್ಥಿಕ ಆಗಸದಲ್ಲಿಯ ಉಜ್ವಲತಮ ನಕ್ಷತ್ರಗಳಲ್ಲಿ ಒಬ್ಬರಾದ ಬಸವಣ್ಣನವರು ಕೂಡ, ತಾವು ಶಿವಶರಣರ 'ದಾಸಾನುದಾಸ'ರೆಂದು ಭಾವಿಸುತ್ತಿದ್ದರು. ಇದೇ ಮಂಟಪದಲ್ಲಿ ಪರತತ್ವನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಧನದ ತಾತ್ವಿಕ ಹಾಗೂ ವ್ಯಾವಹಾರಿಕ ಅಂಗಗಳ ಶ್ರೇಷ್ಠ ತರಗತಿಯ ದಾರ್ಶನಿಕ ಚರ್ಚೆಯು ನಡೆಯುತ್ತಿದ್ದಿತು. ಈ ದೃಷ್ಟಿಯಿಂದ 'ಅನುಭವ ಮಂಟಪ'ವು ಉಪನಿಷತ್ಕಾಲದ ಜನಕರಾಜನ ಓಲಗವನ್ನು ಹೋಲುತ್ತಿತ್ತು.

ಈ ವರೆಗೆ ವಿವರಿಸಲಾದ ಪದಗಳು ಬಹುಮಟ್ಟಿಗೆ ಶಾಂತವಾದ ಇಲ್ಲವೆ ಸೌಮ್ಯವಾದ ಪಾರಮಾರ್ಥಿಕ ಅನುಭವಗಳನ್ನು ಅರುಹಿರುವವು. ಅವು ಬಣ್ಣ

ಬಣ್ಣಗಳಿಂದ ತುಂಬಿದ ಸಭಾಗೃಹಗಳನ್ನೂ, ಸುಧಾರಸದಂತೆ ಸವಿಯಾದ ಪರಮಾತ್ಮನ ನಾಮವನ್ನೂ, ಬೆಳುದಿಂಗಳನ್ನೂ, ಬಿಡಿಮುತ್ತುಗಳು ಉದುರುತ್ತಿರುವ ಮೃದು ಹಂಸತಲ್ಪವನ್ನೂ, ಇಲ್ಲವೆ ಬಹಳವಾದರೆ ಯುದ್ಧರಂಗವನ್ನು ಉದಹರಿಸಿರುವವು. ಅದರ ಬದಲು ಪ್ರಸ್ತುತ ಪದದಲ್ಲಿ ನಾವು ಸಂತರ ಪಾರಮಾರ್ಥಿಕ ಅನುಭವದಲ್ಲಿಯ ಭೀಕರ ಅಂಶವನ್ನು ಕಾಣುವೆವು. ಅದರಲ್ಲಿ ವಡವಾಗ್ನಿ, ಗುಡುಗು, ಕಂಗಳನ್ನು ಕುಕ್ಕಿಸುವ ಮಿಂಚಿನ ಹೊಳೆಯುವ ಜ್ಯೋತಿ, ಕಡಲು ಉಕ್ಕುವುದು, ಗಿರಿಯು ಕರಗುವುದು, ಶೂನ್ಯ ನುಂಗಿದ ಹೊನ್ನ ಕಳಸ- ಈ ಘಟನೆಗಳೆಲ್ಲ ಜಲಪ್ರಳಯಕ್ಕೆ ಇಲ್ಲವೆ ದಳ್ಳುರಿಯಿಂದುಂಟಾದ ವಿಶ್ವದ ಆತ್ಯಂತಿಕ ವಿನಾಶಕ್ಕೆ ಸಂಬಂಧಿಸಿರುವವು. ಆದರೆ ಈ ಭೀಕರ ಅಂಶವು ಕೂಡ ಮೋಹಕತೆಯ ಹಾಗೂ ಪರಮಾನಂದದ ಅಂಶವನ್ನು ಒಳಗೊಂಡಿರುವುದು ಎಂಬುದನ್ನು ನಾವು ಗಮನಿಸಬೇಕು. ಈ ಕ್ಷೇತ್ರದಲ್ಲಿಯೆ ಭಕ್ತರು ಪರಮಾತ್ಮನ ಸ್ತುತಿಸ್ತವನವನ್ನು ಸಲೀಲವಾಗಿ ಪಾಡುವರು ಮತ್ತು ಅದರಿಂದ ಇಡಿ ವಿಶ್ವವನ್ನು ತುಂಬಿಬಿಡುವರು. ಇದೇ ಅನುಭವ ಮಂಟಪದಲ್ಲಿ ಬಸವಸಂತತಿಯು ಪರಮಾನಂದವನ್ನು ಅನುಭವಿಸಿತು. ಇದೇ ಮಂಟಪದಲ್ಲಿ ಕೋಟ್ಯವಧಿ ಜನರ ಆಶಾಂಕುರವಾದ ಪರಮಾತ್ಮನ ನೆರವಿನ ಆಶ್ವಾಸನವು ಲಭಿಸಿತು.

ಪ್ರಸ್ತುತ ಕವನವು ಪೂರ್ಣ ಪಾರಮಾರ್ಥಿಕ ಪ್ರಜಾಪ್ರಭುತ್ವದ ಅತ್ಯುತ್ತಮ ನಿದರ್ಶನವಿರುವುದ. ಅದು ಕೆಲ ಉನ್ನತತರ ನಾದಗಳನ್ನು ಬಾರಿಸುವುದು ಅಂದರೆ ಕೆಲ ಉನ್ನತತರ ವಿಚಾರಾಂಶಗಳನ್ನು ಅರುಹುವದು. ಈ ಅನುಭವ ಮಂಟಪವು ಶರೀರದಲ್ಲಿಯೆ ಇರುವುದೊ ಹೇಗೆಂಬುದನ್ನು ಕುರಿತು ನಾವು ಆದಿಯಲ್ಲಿಯೆ ವಿಚಾರಿಸಲಿರುವೆವು. ಎರಡನೆಯದಾಗಿ, ನಾವು ಕಲ್ಯಾಣದಲ್ಲಿಯ ಐತಿಹಾಸಿಕ ಅನುಭವ ಮಂಟಪದ ಕಣ್ಣಿಗೆ ಕಟ್ಟುವಂಥ ಬಣ್ಣನೆಯನ್ನು ಉಲ್ಲೇಖಿಸುವೆವು. ಪರಮಾತ್ಮನ ಜಾಗತಿಕ ಪ್ರತಿರೂಪವಾದ ಸದ್ಗುರುಗಳ ಮಂಟಪ ಪ್ರವೇಶವು ಭಾವಿಕ ಸಾಧಕರಿಗೆ ಪರವಶತೆಯಿಂದ ಕೂಡಿ ಪರಮಾನಂದವನ್ನು ನೀಡುವುದು ತೀರ ಸಹಜವು. ತರುವಾಯ ನಾವು, ವಿರಲವಾಗಿ ಲಭಿಸುವ ಪಾರಮಾರ್ಥಿಕ ಅನುಭವದ ಉಜ್ವಲ ವರ್ಣನೆಯನ್ನು ಕಾಣುವೆವು. ಅಂಥ ಅನುಭವವು ಭಯ-ಹರ್ಷಗಳೆಂಬ ಉಭಯ ಭಾವನೆಗಳನ್ನು ಹುಟ್ಟಿಸುವುದು. ಅದರ ನಾವೀನ್ಯ-ವೈಲಕ್ಷಣ್ಯಗಳಿಂದ ಭಯವೂ, ಪಾರಮಾರ್ಥಿಕ ಪರವಶತೆಯಿಂದ ಹರ್ಷವೂ -ಆನಂದವೂ ಜನಿಸುವುದುಂಟು. ಮುಂದೆ ಆತ್ಮಾನುಭಾವಿಯು ಆತ್ಮಾನುಭವವನ್ನು ಪಡೆದಾಗ, ಅವನ ಪ್ರಭೆಯು ವಿಶ್ವಪ್ರಭೆಯಲ್ಲಿ ಬೆರೆತು ಬಿಡುವುದು. ಕೊನೆಯದಾಗಿ, ಪರವಸ್ತುವಿನೊಡನೆ ಸಾಕ್ಷಾತ್ಸಂಪರ್ಕವು ಬಂದ

ಮೂಲಕ, ಅನುಭಾವಿಯು ಒಂದು ಬಗೆಯಾಗಿ, ಪರಮಾತ್ಮವಸ್ತುವನ್ನು ತನ್ನಲ್ಲಿ 'ಸಂಗ್ರಹಿ' ಸುವನು;ಮತ್ತು ಪರಮಾತ್ಮನ ಪ್ರಸಾದವೂ, ಅದರ ಫಲವಾಗಿ ವಿಜಯವೂ ಆತನ ಪ್ರೀತಿಯ ಭಕ್ತರಿಗೆ ಲಭಿಸುವುದು ಎಂಬ ಆಶ್ವಾಸನವನ್ನು ನಮಗೆ ಸಲ್ಲಿಸುವನು.

ಕವಿಯು* ಇಲ್ಲಿ ಉಲ್ಲೇಖಿಸಿರುವ ಅನುಭವ ಮಂಟಪವು ಅದೆಂತಹುದು? ಈ ಕವನದಲ್ಲಿಯ ಮೊದಲನೆಯ ಕೆಲ ಸಾಲುಗಳು ಸೂಚಿಸುವ ಮೇರೆಗೆ, ಅದು ಶರೀರದಲ್ಲಿಯ ಅನುಭವ ಮಂಟಪವೂ ಇರಬಹುದು. ನಾವು ಈ ಮೊದಲು ವಿವರಿಸಿದ ಗುರುಸಿದ್ಧರ 'ಶ್ರೀಗಿರಿಯ ಸುಕ್ಷೇತ್ರಕಿಂದು' ಎಂಬ ಕವನದಲ್ಲಿ 'ಶ್ರೀಗಿರಿಯು ಸರೀರದೊಳಗುಂಟು'–ಅಂದರೆ ಮಾನವನ ದೇಹವು ನಿಜವಾಗಿ ಶ್ರೀಶೈಲವೇ ಇರುವುದು ಎಂದು ಉಸುರಲಾಗಿದೆ. ಈ ಕವಿಯು ಕೂಡ, 'ಅನುಭವ ಮಂಟಪವನ್ನು ಇದೇ ಶರೀರದೊಳಗಲ್ಲದೆ ಬೇರೆಲ್ಲಿ ಪಡೆಯುವಿರಿ?' ಎಂದು ಕೇಳುವನು. ಅವನು ಮುಂದೆ ಈ ಆಂತರಿಕ ಅನುಭವ ಮಂಟಪವನ್ನು ಬಣ್ಣಿಸಿದ ರೀತಿಯೂ ಕನ್ನಡ ಧಾರ್ಮಿಕ ಸಾಹಿತ್ಯದ ಇತಿಹಾಸದಲ್ಲಿಯೆ ಮೀರಲು ಬಾರದಂತಹದು. 'ಇದೇ ಉನ್ಮನಿಯ ಮುಖಾಂತರ ದೊರೆವ ಮೋಕ್ಷದ ಸಾಧನವು'. 'ಈ ದಿವ್ಯ ಆಲಯವೇ, ಕರಸ್ಥಲದಲ್ಲಿಯ ಇಷ್ಟಲಿಂಗಕ್ಕೆ ಅರ್ಪಿಸಲಾದ ಪ್ರಣವಮಂತ್ರ, ಇದೇ ಷಟ್‌ಸ್ಥಲಗಳಲ್ಲಿ ನಿನದಿಸುವ ಬ್ರಹ್ಮಘೋಷವು. ನಿಜವಾಗಿ ಇದೇ ಪ್ರಾಂಜಲ ಬ್ರಹ್ಮಜ್ಞಾನವು' ಎಂದು ಕವಿಯು ಉಸುರುವನು.

ಆದರೆ ಈ ಕವನದಲ್ಲಿಯ ಉಲ್ಲೇಖಗಳು, ಅದರ ಐತಿಹಾಸಿಕ ಅಂಗವು ಕೂಡ ನಿರ್ವಿವಾದವೆಂಬುದನ್ನು ಸುಚಿಸುವವು. ಇದರಲ್ಲಿ ನಾವು ಕಲ್ಯಾಣದಲ್ಲಿಯ ಅನುಭವ ಮಂಟಪದ ಸ್ಪಷ್ಟವಾದ ಬಣ್ಣನೆಯನ್ನು ಕಾಣುವೆವು. ಕಲ್ಯಾಣದಲ್ಲಿಯ ಅನುಭವ ಮಂಟಪವು ಒಂದು ಪಾರಮಾರ್ಥಿಕ ಪರಿಷತ್ತಾಗಿದ್ದಿತು. ಅಲ್ಲಿ

---

* ಈ ಕವನದ ನಿಜವಾದ ಕರ್ತನಾರು ಎಂಬುದನ್ನು ನಿರ್ಣಯಿಸುವುದು ಬಲುಬಿಗಿಯಾದುದು. ಷಡಕ್ಷರಿಯು ಕರ್ತನೋ ಇಲ್ಲವೆ ಬೆರಟುರಪತಿಯು ಕರ್ತನೋ? ಷಡಕ್ಷರಿಯಿದ್ದರೆ ಅವನುಬೆರಟುರಪತಿಯ ಶಿಷ್ಯನಿರಬೇಕು. ಬೆರಟುರಪತಿಯಿದ್ದರೆ, ಷಡಕ್ಷರಿ ಎಂಬುದು ಆರಕ್ಷರಗಳ ಮಂತ್ರವಿರಬೇಕು. ಕರ್ತನನ್ನು ಉಲ್ಲೇಖಿಸುವ, ಕವನದ ಕೊನೆಯ ಎರಡು ಸಾಲುಗಳ ಪ್ರತ್ಯಕ್ಷ ಸೂಚನೆಯನ್ನು ಗ್ರಹಿಸುವುದು ಸ್ವಲ್ಪ ಬಿಗಿಯಾಗಿರುವುದು. ಈ ಸಾಲುಗಳು ಕೆಳಗಿನಂತಿರುವವು:

ಕಾಯರಹಿತಾ, ಜೀವರಹಿತಾ। ಮಾಯಾರಹಿತಾ ಬೆರಟೂರೇಶಾ॥
ಛಾಯಾರೂಪಾ ಷಡಕ್ಷರಿ ಮನ । ವಾಯಿತಿಂದನುಭಾವ ಮಂಟಪ॥

ಅನುಭವ ಮಂಟಪದ ಬಗೆಗೆ ಆಲೋಚಿಲಾಗಿ, ಈ ಬಗೆಯ ಅನುಮಾನವು ಲಭಿಸಿತು: ಬೆರಟೂರೇಶನು ಕಾಯರಹಿತ, ಛಾಯರೂಪ ಹಾಗೂ ಮಾಯರಹಿತನಾಗಿದ್ದನು ಈ ಮೂರು ಪ್ರಭುದೇವ ವರ್ಣನೆಯನ್ನು ಅನುಕರಿಸುವವು.

ಪ್ರಖ್ಯಾತರಾದ ಹಿರಿಯ ಸಾಧುಸಂತರು ಆಮಂತ್ರಿಸಲಾಗುತ್ತಿದ್ದರು. ಪರಮಾತ್ಮನೇ ಅಲ್ಲಿಯ ಶ್ರೇಷ್ಠತಮ ಚರ್ಚೆಯ ವಿಷಯವಾಗಿದ್ದನು. ಅಲ್ಲಿ, ಹೃದಯ ಕನ್ನಡಿಗಳು ಪಾರಮಾರ್ಥಿಕ ಅಲಂಕಾರಗಳಿಂದ ಸಿಂಗರಿಸಲಾಗಿದ್ದವು. ಜಂಗಮರ ಪುಣ್ಯ ಪಾದಗಳು ಇಲ್ಲಿ ವಿಧಿಪೂರ್ವಕ ಪೂಜಿಸಲಾಗುತ್ತಿದ್ದವು; ಅಲ್ಲಿ ಕರಡಿ, ಕೌಸ್ತುಳ, ರುದ್ರವೀಣೆ, ಝಾಂಗಟೆ, ತಾಳ, ಮದ್ದಲಿಗಳೆಂಬ ವಾದ್ಯಗಳು ಬಾರಿಸಲಾಗುತ್ತಿದ್ದವು; 'ಘನರಾದ' 'ಸುರರೇ' ಅಲ್ಲಿ ಲೀಲೆಯಿಂದ ಪಾಡುತ್ತಿದ್ದರು; ಮತ್ತು ಇಡಿ ಆಕಾಶವೇ ಬಗೆಬಗೆಯ ನಾದಗಳಿಂದ ಪ್ರತಿಧ್ವನಿಸುತ್ತಿದ್ದಿತು.

ಒಮ್ಮೆ ಒಂದು ಉತ್ಸವದ ಸಮಯಕ್ಕೆ, ದೇಶಕ್ಕೆ ಬೇರೆ ಬೇರೆ ಭಾಗಗಳಿಂದ ನೆರೆದ ಭಕ್ತರು ಧ್ಯಾನದಲ್ಲಿ ತಲ್ಲೀನರಾದಾಗ ಮತ್ತು ಭಸ್ಮರುದ್ರಾಕ್ಷಿಗಳಿಂದ ಶೋಭಿಸುವ ಜಂಗಮರಲ್ಲಿ ವಿಖ್ಯಾತತಮರಾದ ಪ್ರಭುದೇವರು ಅಲ್ಲಿ ಕಾಣಿಸಿಕೊಂಡಾಗ ಆಗಮಿಸಿದಾಗ, ಬಸವಣ್ಣನವರ ಶಿಷ್ಯರೂ ಅನುಯಾಯಿಗಳೂ ಅತ್ಯಾನಂದದಿಂದ ಶಿಶುಗಳಂತೆ, ಪರಮಾತ್ಮನ ನಾಮವನ್ನು ತೊದಲುನುಡಿಯಿಂದ ಹಾಡತೊಡಗಿದರು ಮತ್ತು ಇಡಿ ಮಂಟಪವೇ ಅತ್ಯಾನಂದದಿಂದ ತುಂಬಿತುಳುಕಿತು.

ಕವಿಯು ಮುಂದೆ, ಅನುಭವಮಂಟಪದಲ್ಲಿಯ ಒಂದು ಪಾರಮಾರ್ಥಿಕ ಅನುಭವವನ್ನು ಅದ್ಭುತವಾಗಿ ಬಣ್ಣಿಸರುವನು. ಅದೊಂದು ವಡವಾಗ್ನಿ ಇಲ್ಲವೇ ಪಾತಾಳದಲ್ಲಿಯ ಅಗ್ನಿಯ ಅನುಭವವಿರುವುದು. ಶರಣರ ಈ ಉಜ್ವಲ ಅನುಭಾವದಿಂದಲೂ, ಭಕ್ತರ ಉತ್ಕಟ ಭಕ್ತಿಯಿಂದಲೂ ಶಿವನು ತುಂಬ ಸಂತುಷ್ಟನಾದುದು ಇಲ್ಲಿಯೆ. ಇಲ್ಲಿಯೆ ಕಡಲು ಉಕ್ಕಿತು, ಗಿರಿಯು ಕರಗಿತು. ಷಟ್‌ಸ್ಥಲಗಳು ತುಂಬಿ ತುಳುಕಿದವು, ಸಿಡಿಲು ಮಿಂಚಿತು, ಗುಡುಗು ಹೊಡೆಯಿರು ಮತ್ತು ಜಲದೊಳು ಜ್ಯೋತಿ ಬಿಡದೆ ಉರಿಯಿತಂತೆ.'

ಕಾಯಬಲಿದಡೆ ಮಾಯೆ ಬಲಿವುದು
    ಮಾಯೆ ಬಲಿದಡೆ ಛಾಯೆ ಬಲಿವುದು
ಕಾಯ ಮಾಯಾ ಛಾಯನಾದರೆ
    ಶಬ್ದನಾನಲ್ಲಾ; ಬಲಿದಡೆ ಸಿದ್ಧನಾನಲ್ಲಾ!

ಶ್ರೀವಿಯೋಗಿ ಹರಿಯವರು ಇತ್ತೀಚೆಗೆ ಪ್ರಸಿದ್ಧಿಸಿದ 'ಸಂತಸುಧಾಸಾರ' ಎಂಬ ಗ್ರಂಥದಲ್ಲಿ, ಗೋರಕ್ಷನಾಥರ 'ಮರಾಠಿ' ಕವನವೊಂದಿರುವದು ಸೋಜಿಗದ ಸಂಗತಿ. ಗೋರಕ್ಷರು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಸಹಜವಾಗಿ ಬಂದಿರಬಹದು. ಪ್ರಭುದೇವರು ಗೋರಕ್ಷರನ್ನು ಕಂಡಾಗ ಯೋಗಬಲದಿಂದ ತಾನು ತನ್ನ ಕಾಯವನ್ನು ವಜ್ರಕಾಯ ಮಾಡಿರುವುದನ್ನು ಅವರು ಪ್ರಭುವಿಗೆ ಹೇಳಿದರು. "ಕಾಯೆ ಛಾಯೆ ಮಾಯೆ ತೋರಿಕೆ" ಎಂದು ಉತ್ತರಿಸಿದರು.

ಇದೇ ಅನುಭವಮಂಟಪದಲ್ಲಿಯ ರತ್ನ ಕೆಚ್ಚಿದ ಸಿಂಹಾಸನದ ಮೇಲೆ, ವಿವಿಧ ಬಣ್ಣಗಳು ಹೊಳೆಯತೊಡಗಿದವು, ಇಡೀ ದೃಶ್ಯವೇ ಸುವರ್ಣವಾಯಿತು; ಅವರ ಹೊನ್ನ ಕಳಸವನ್ನು ಶೂನ್ಯ ನುಂಗಿತು. ಚೆನ್ನಬಸವನು ತನ್ನಲ್ಲಿ ತನ್ನನ್ನು ಕಂಡಾಗ, ಅವನನ್ನೇ ಹಿರಿಯ ಜ್ಯೋತಿಯು ನುಂಗಿಬಿಟ್ಟಿತು.

ಕೊನೆಯದಾಗಿ, ಬಯಲನ್ನು ಸೇರಿದವರು ಬಯಲಾಗಿ ಹೋದರು. ನಿರ್ಬಯಲಿನ ಹಿರಿಯ ದೊರೆಯನ್ನು ಬಿಗಿಯಾಗಿ ಹಿಡಿದರು. ಅವರು ಸನ್ಮಾರ್ಗದಿಂದ ನಡೆದ ಮೂಲಕ, ಅವರು ಪರಮಾತ್ಮನಿಂದ ಪ್ರಸಾದ–ವಿಜಯ–ವೈಭವಗಳನ್ನು ಪಡೆದರು. ಪರಮಾತ್ಮನು ಸದೈವ ಭಕ್ತರನ್ನು ಬೆಂಬಲಿಸುವನು. ಯಾಕಂದರೆ, ಅವರು ಉತ್ಕಟ ಭಕ್ತಿಯಿಂದ ತುಂಬಿರುವರು ಹಾಗೂ ಪೂರ್ತಿಯಾಗಿ ಆತ್ಮಸಮರ್ಪಣ ಮಾಡಿರುವರು–ಶರಣಾಗತರಾಗಿರುವರು. ಹೀಗಿರುವದರಿಂದ ಪರಮಾತ್ಮನ ಸ್ವಭಾವವೇ ಆದ ಅಂತಿಮ ವಿಜಯವು ಹಾಗೂ ಅನಂತ ಕಲ್ಯಾಣವು, ಅವನ ಭಕ್ತರಿಗೂ ಕೂಡ ಲಭಿಸಿದರೆ ಅದರಲ್ಲಿ ಆಶ್ಚರ್ಯವಿಲ್ಲ. ಯಾಕಂದರೆ ಅವರು ಭಗವತ್‌ಪ್ರೀತಿಯ ಉರಿವ ಜ್ವಾಲೆಯಲ್ಲಿ ತಮ್ಮನ್ನೆ ಸುಟ್ಟುಕೊಂಡಿರುವರು. ಈ ಆತ್ಮಾನುಭವಿಗಳದು ಒಂದು ಸುಮಂಗಲ ಸಮುದಾಯವಿರುವುದು. ಬಳಲುವ ಮಾನವತೆಯ ಬಗೆಗೆ ಅವರು ತಳೆಯುವ ಉತ್ಕಟ ಪ್ರೀತಿಯ ಮೂಲಕ, ಅವರು ಕೇವಲ ಅದರ ಕಲ್ಯಾಣಕ್ಕಾಗಿಯೇ, ಉದ್ಧಾರಕ್ಕಾಗಿಯೇ ಬಾಳುವರು. ವಿಶ್ವದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ, ಭಗವಂತನ ಶಾಶ್ವತ ಸಂದೇಶವನ್ನು ಅನಾದಿಕಾಲದಿಂದ ಅನಂತ ಕಾಲದ ವರೆಗೆ, ಗುಡುಗುವ ಮೋಡದಂತೆ ಸಾರುತ್ತ ಸಾಗುವರು.

■■

ಅನುಬಂಧ–೧

ಸಂಸ್ಕೃತ ಶಬ್ದಗಳ ಲಘುಕೋಶ

ಅ

ಅಜ್ಞಾನ : ಮರೆವು.

ಅನಾಹತನಾದ : ಒಂದು ಅತೀಂದ್ರಿಯ ನಾದ.

ಅನುಭವ ಮಂಟಪ : ಕಲ್ಯಾಣ ಪಟ್ಟಣದಲ್ಲಿ ಶರಣರು ನೆರೆಯಲಿರುವ ಒಂದು ಸಭಾಮಂಟಪ

ಅಂತರ್ಯಾಮಿನ್ : ಅಂತರಂಗದಲ್ಲಿಯ ಪರಮಾತ್ಮ.

ಅಭಂಗ : ಮರಾಠಿಯಲ್ಲಿಯ ಅದೇ ಹೆಸರಿನ ವೃತ್ತದ ಪದ್ಯ.

ಅಮೀರಸ : ಅಮೃತ. ಸಾಧನದ ಒಂದು ಅವಸ್ಥೆಯಲ್ಲಿ ಯೋಗಿಗಳು ಅಂತಸ್ರಾವದಿಂದ ಪಡೆಯುವ ತನಿರಸ.

ಅರ್ಥಾಂತರನ್ಯಾಸ : ಒಂದು ಅಲಂಕಾರದ ಹೆಸರು.

ಅಶ್ವಮೇಧ : ಕುದುರೆಯನ್ನು ಅರ್ಪಿಸಲಾಗುವ ಒಂದು ಯಜ್ಞ

ಆ

ಆಚಾರ್ಯ : ಗುರುಗಳು, ಭಾಷ್ಯಕಾರರು.

ಆತ್ಮನ್ : ಜೀವ, ಪರಮಾತ್ಮ.

ಆಶ್ರಮ : ಋಷಿ–ಮುನಿಗಳ ನಿವಾಸ

ಆಸನ : ಯೋಗದಲ್ಲಿ ನಿಲವು.

ಇ

ಇನಾಮದಾರ : ಭೂಮಿಯನ್ನು ಇನಾಮ ಪಡೆದವ.

ಉ

ಉನ್ಮನಿ : ಪರಮಾತ್ಮನೊಡನೆ

ಕ

ಕಲಿಯುಗ : ಹಿಂದೂಗಳ ಕೊನೆಯ ಕಾಲ ಚಕ್ರ ವಿಭಾಗ

ಕಲ್ಪವೃಕ್ಷ : ಬಯಕೆಯನ್ನು ಪೂರೈಸುವ ಮರ

ಕಾಮಧೇನು : ಬಯಕೆಯನ್ನು ಪೂರೈಸುವ ಆಕಳು

ಕಾರಭಾರಿ : ವ್ಯವಸ್ಥಾಪಕ

ಕುಂಡಲಿನಿ : ಸರ್ಪಶಕ್ತಿ, ಮಾನವನಲ್ಲಿಯ ಸೂಕ್ಷ್ಮಶಕ್ತಿಯ ಕೇಂದ್ರ

ಕ್ಷೀರಸಾಗರ : ಹಾಲು ಸಮುದ್ರ, ಅಲ್ಲಿ ವಿಷ್ಣು ವಿಶ್ರಮಿಸಲಿರುವ ಎಂದು ನಂಬಲಾಗಿದೆ.

ಖ

ಖೆಡ್ಡಾ ಕಾರ್ಯಕ್ರಮ : ತರಬೇತಿ ಪಡೆದ ಆನೆಗಳ ನೆರವಿನಿಂದ ಕಾಡ ಆನೆಗಳನ್ನು ಹಿಡಿಯುವ ಪದ್ಧತಿ.

ಗ

ಗುರು : ಪಾರಮಾರ್ಥಿಕ ಅನುಗ್ರಹವನ್ನು ದಯಪಾಲಿಸುವವ

ಚ

ಚಕ್ರ : ಆರು ಚಕ್ರಗಳು, ಮೆದುಳು ಹಾಗೂ ಮೆದುಳು ಬಳ್ಳಿಯಲ್ಲಿಯ ಕೆಲ ಕೇಂದ್ರಗಳು

ಚಿಂತಾಮಣಿ : ಬಯಕೆಯನ್ನು ಪೂರೈಸುವ ಮಣಿ

ಜ

ಜಂಗಮ : ಲಿಂಗವಂತರಲ್ಲಿಯ ಸನ್ಯಾಸಿಗಳು

ತ

ತಂತ್ರಗಳು : ಪರಮಾರ್ಥಿಕ ಸಾಧನದ ತಂತ್ರಕ್ಕೆ ಪ್ರಾಧಾನ್ಯವನ್ನು ಕೊಡುವ ಧಾರ್ಮಿಕ ಗ್ರಂಥಗಳು

ತತ್ತ್ವಮಸಿ : 'ಅದು ನೀನಿರುವಿ'. ಇದೊಂದು ಉಪನಿಷತ್ತಿನಲ್ಲಿಯ ವಚನ. ಜೀವವು ಶಿವ ಸ್ವರೂಪವಿರುವುದು ಎಂಬುದು ಅದರ ಅರ್ಥ.

ದ

ದಾಸಕೂಟ : ಕನ್ನಡ ನಾಡಿನಲ್ಲಿಯ ವೈಷ್ಣವ ಸಂತರ ಗುಂಪು–ಪಂಥ

ದ್ರಷ್ಟಾ–ಸಾಕ್ಷೀ : ಕಾಣುವವ.

ಧ

ಧ್ಯಾಸ : ಸಂತತವಾದ ಏಕಾಗ್ರ ಧ್ಯಾನ

ನ

ನಾಥರು : ಗೋರಖನಾಥರ ಶಿಷ್ಯರಾದ ಯೋಗಿಗಳ ಪಂಥ.

ನಿರ್ಗುಣ : ಗುಣರಹಿತ

ನಿಶ್ಚಿಂತತಾ : ಚಿಂತೆ ಇಲ್ಲದಿರುವಿಕೆ.

ಪ

ಪುರುಷ–ಪ್ರಕೃತಿ : ಚೈತನ್ಯತತ್ತ್ವ ಹಾಗೂ ಭೌತಿಕ ತತ್ತ್ವ

ಬ

ಬಹಿರ್ಯಾಮಿನ್ : ಬಾಹ್ಯ ವಸ್ತುಗಳಲ್ಲಿ ವ್ಯಕ್ತವಾಗುವ ಪರಮಾತ್ಮ ತತ್ತ್ವ

ಬ್ರಹ್ಮರಂಧ್ರ : ಮೆದುಳಿನಲ್ಲಿಯ ಒಂದು ವಿವರ. ಅದರೊಳಗಿಂದ ಹಾದು ಜೀವಾತ್ಮನು ದೇಹದಲ್ಲಿಯ ಪರಮಾತ್ಮನ ಉಚ್ಚತಮ ನೆಲೆಯನ್ನು ಸೇರುವನು.

ಭ

ಭಾವ : ಭಗವಂತನ ಮೇಲಿನ ಪ್ರೀತಿಯ ಭಾವನೆ

ಭೋಗಿ : ಜೀವನದ ಸುಖವನ್ನು ಸವಿಯುವವ

ಮ

ಮಂತ್ರ : ಅಂತಃಶಕ್ತಿಯಿಂದ ಪೂರಿತವಾದ ಒಂದು ಶಬ್ದ ಇಲ್ಲವೆ ಪದವಿನ್ಯಾಸ

ಮಹಾಯಾನ : ಬೌದ್ಧರಲ್ಲಿಯ ಒಂದು ಪಂಥ

ಮುದ್ರಿಕಾ : ಸಂತಕವಿಗಳು ಇಟ್ಟುಕೊಂಡ ಕಾವ್ಯನಾಮ.

ಮೋಕ್ಷ : ಪೂರ್ಣ ಅಂತಿಮ ಪಾರಮಾರ್ಥಿಕ ಬಿಡುಗಡೆ

ಲ

ಲಾಕ್ಷಾಗೃಹ : ಅರಗಿನ ಮನೆ

ಲಿಂಗಾಯತ : ವೀರಶೈವರು. ಶಿವಭಕ್ತರ ಒಂದು ಪಂಥ.

ವ

ವಚನ : ವೀರಶೈವ ಶರಣರು ಬಳಸಿದ ಒಂದು ಕಿರಿಗಾತ್ರದ ಹಿರಿಯರ್ಥದ ನುಡಿ

ವೀರಶೈವ : ಲಿಂಗಾಯತ

ಶ

ಶ್ವಾಸ–ಉಚ್ಛ್ವಾಸ : ಒಳಸೇರುವ ಹೊರಹೋಗುವ ಉಸಿರು

ಸ

ಸಗುಣ : ಗುಣ ಸಹಿತ

ಸಂಕೀರ್ತನ : ಭಗವಂತನನ್ನು ಸ್ತುತಿಸಲು ಹಾಡುವುದು, ಕುಣಿಯುವುದು.

ಸಚ್ಚಿದಾನಂದ : (ಸತ್–ಚಿತ್–ಆನಂದ) ಪರಮಾತ್ಮನನ್ನು ಬಣ್ಣಿಸಲು ಸಾಮಾನ್ಯವಾಗಿ ಬಳಸಲಾಗುವ ಮೂಲಭೂತ ಶಬ್ದಗಳು

ಸಮಾಧಿ : ಶ್ರೇಷ್ಠತಮ ಪಾರಮಾರ್ಥಿಕ ಅನುಭವ.

ಸಮಾಧಿಗಳು : ಸಂತರ ಪಾರ್ಥಿವ ಅವಶೇಷಗಳ ಮೇಲೆ ರಚಿಸಲಾದ ಕಟ್ಟಡ–ಗದ್ದುಗೆ

ಸಹಸ್ರಾರ ಚಕ್ರ	: ಮೆದುಳಿನಲ್ಲಿಯ ಉಚ್ಚತಮ ಪಾರಮಾರ್ಥಿಕ ಪ್ರಜ್ಞೆಯ ಕೇಂದ್ರ
ಸಾಧಕ	: ಪರಮಾರ್ಥವನ್ನು ಪಡೆಯಲು ಯತ್ನಿಸುವವ.
ಸಾಧನ	: ಪಾರಮಾರ್ಥಿಕ ಅಭ್ಯಾಸ
ಸಿದ್ಧ	: ಶ್ರೇಷ್ಠ ಪಾರಮಾರ್ಥಿಕ ನಿಲುವನ್ನು ಮುಟ್ಟಿದವ.
ಸಿದ್ಧಾಂತಿ	: ಪಾರಮಾರ್ಥಿಕ ಅನುಭವವಿಲ್ಲದ, ತರ್ಕಪ್ರವೀಣ ದಾರ್ಶನಿಕ
ಸುಭಾಷಿತ	: ನಲ್ನುಡಿ
ಸೋಹಂ	: 'ಅವನೇ ನಾನು'. ಅದ್ವೈತಿಗಳು ನೆನೆಯಲಿರುವ ಒಂದು ಮಂತ್ರ

■■

ಅನುಬಂಧ: ೨

ಗ್ರಂಥಗಳ ಪಟ್ಟಿ

(ಕೆಳಗಣ ಆಂಗ್ಲ, ಕನ್ನಡ ಮತ್ತು ಬೇರೆ ಭಾಷೆಗಳಲ್ಲಿಯ ಗ್ರಂಥಗಳು ಈ ವಿಷಯದಲ್ಲಿ ಅಧ್ಯಯನಕ್ಕೆ ಉಪಯುಕ್ತವಾದವುಗಳು)

1. History of Philosophy, by *Windelband*
2. An Introduction to Philosophy, by *Windelband*
3. Critical Philosophy of Kant, Vols I&II, by *E. Caird*
4. Elements of Metaphysics, by *A.E.Taylor*
5. The Vedantsutras with the Commentary by *Sankaracharya,* Vol. I&II, by *George Thibaut*
6. Naturalism and Agnosticism, *by J. Ward*
7. Agnosticism, by *Flint*
8. Will to Believe, by *W. James*
9. Realm of Ends, by *J. Ward*
10. Ethics, by *Aristotle*
11. Plato's Dialogues, by *Jowett*
12. Faith of a Moralist, by *A.G.Taylor*
13. Enneads, by *Plotinus*
14. Idea of the Holy, by *R. Otto*
15. Mysticism, by *Miss Underhill*
16. Varieties of Religious Experience, by *W. James*
17. Essays on Gita and Synthesis of Yoga, by *Shri Aurobindo*
18. Christian Mysticism, by *Dean Inge*
19. The Confessions, by *St. Augustine*
20. World and Individual-Mystical Conception of Being, *by Royce*
21. Reign of Religion in Conteporary Philosophy, by *Radhakrishnan*
22. Indian Theism, by *Macnicole*
23. Rajayoga, by *Vivekanand*
24. Mystische Schriften Sermons, by *Ekhart*
25. Constructive Survey of Upanishadic Philosophy by *Dr. Ranade*
26. Maharashtra Mysticism, by *Dr. Ranade*
27. Pathway to God in Hindi Literature, by *Dr. Ranade*

ದಾಸ ಸಾಹಿತ್ಯ

೧. ಶ್ರೀ ಕರ್ನಾಟಕ ಭಕ್ತವಿಜಯ (ಭಾಗ ೧-೨)-ಬೇಲೂರ ಕೇಶವದಾಸ
೨. ಶ್ರೀ ಕರ್ನಾಟಕ ಹರಿದಾಸ ಕೀರ್ತನ ತರಂಗಿಣಿ(ಭಾಗ ೧-೮)-ಸುಬೋಧ ಪ್ರಕಟನಾಲಯ, ಬೆಂಗಳೂರು
೩. ದಾಸರಪದಗಳು (ಉದಯರಾಗ) (ಭಾಗ ೧-೨) ಪಾವಂಜೆಗುರುರಾವ ಪ್ರಕಟಿತ
೪. ಕನಕದಾಸರ ಕೀರ್ತನೆ-(ಭಾಗ ೧-೨) ಪಾವಂಜೆ ಗುರುರಾವ ಪ್ರಕಟಿತ
೫. ವಿಜಯದಾಸರ ಕೀರ್ತನೆ-(ಭಾಗ ೧-೨) ಪಾವಂಜೆ ಗುರುರಾವ ಪ್ರಕಟಿತ
೬. ಗೋಪಾಲದಾಸರ ಕೀರ್ತನೆ-(ಭಾಗ ೧-೨) ಪಾವಂಜೆ ಗುರುರಾವ ಪ್ರಕಟಿತ
೭. ಪುರಂದರದಾಸರ ಕೀರ್ತನೆ-(ಭಾಗ ೧-೪) ಪಾವಂಜೆ ಗುರುರಾವ ಪ್ರಕಟಿತ
೮. ಶ್ರೀಪಾದರಾಯರ ಮತ್ತು ವ್ಯಾಸರಾಯರಕೀರ್ತನೆ-ಪಾವಂಜೆ ಗುರುರಾವ ಪ್ರಕಟಿತ
೯. ಕೇಶವದಾಸರ ಕೀರ್ತನೆ-ಪಾವಂಜೆ ಗುರುರಾವ ಪ್ರಕಟಿತ
೧೦. ಹರಿಭಕ್ತಿಸಾರ (ಕನಕದಾಸರು) ಪಾವಂಜೆ ಗುರುರಾವ
೧೧. ಉಗಾಭೋಗಗಳು
೧೨. ದಾಸವರ್ಯ ಶ್ರೀ ಕನಕದಾಸರು-ಸುಬೋಧ
೧೩. ದಾಸವರ್ಯ ಶ್ರೀ ಪುರಂದರದಾಸರು-ಸುಬೋಧ
೧೪. ಕವಿ ಕನಕದಾಸರು-ಕೇಶವಾಚಾರ್ಯ ಕಟ್ಟಿ
೧೫. ಶ್ರೀಮಜ್ಜಗನ್ನಾಥರಾಯ ಚರಿತ್ರೆ-ಕಮಲದಾನಿ
೧೬. ಹರಿಕಥಾಮೃತಸಾರ-ಜಗನ್ನಾಥದಾಸ ಕೃತ
೧೭. ದಾಸಸಾಹಿತ್ಯ ವಿಮರ್ಶೆ-ಬೇಲೂರು ಕೇಶವದಾಸರು
೧೮. ಶರೀಫಸಾಹೇಬ, ಮಹಿಪತಿದಾಸ ಇತ್ಯಾದಿಗಳವರ ಭಕ್ತಿಗೀತಗಳು

ವಚನ ಸಾಹಿತ್ಯ

೧. ಶೂನ್ಯಸಂಪಾದನೆ
೨. ಕೈವಲ್ಯ ಕಲ್ಪವಲ್ಲರಿ-ಸರ್ಪಭೂಷಣ ಶಿವಯೋಗಿಗಳು
೩. ನಿಜಗುಣ ಶಿವಯೋಗಿಗಳ ಕೃತಿಗಳು
೪. ಅಖಂಡೇಶ್ವರ ವಚನಗಳು
೫. ಬಸವೇಶ್ವರ ವಚನಗಳು
೬. ಚನ್ನಬಸವೇಶ್ವರ ವಚನಗಳು
೭. ಸಿದ್ಧರಾಮೇಶ್ವರ ವಚನಗಳು
೮. ಅಕ್ಕಮಹಾದೇವಿ ವಚನಗಳು

೯. ವಚನಶಾಸ್ತ್ರ ರಹಸ್ಯ- ಆರ್.ಆರ್.ದಿವಾಕರ
೧೦. ವಚನಧರ್ಮ ಸಾರ-ಎಂ.ಆರ್.ಶ್ರೀನಿವಾಸಮೂರ್ತಿ
೧೧. ಸರ್ವಜ್ಞನ ವಚನಗಳು-ಉತ್ತಂಗಿ ಚನ್ನಪ್ಪ
೧೨. ಪ್ರಭುಲಿಂಗಲೀಲೆ
೧೪. ಕವಿ ಕನಕದಾಸರು-ಕೇಶವಾಚಾರ್ಯ ಕಟ್ಟಿ
೧೫. ಶ್ರೀಮಜ್ಜಗನ್ನಾಥರಾಯ ಚರಿತ್ರೆ

ಇತರ ಸಾಹಿತ್ಯ

೧. ಕುಮಾರವ್ಯಾಸ ಭಾರತ
೨. ಕರ್ನಾಟಕ ಕವಿ ಚರಿತೆ
೩. ಹರಿಹರನ ರಗಳೆಗಳು
೪. ಚಿದಾನಂದರ ಚೌಪದಿಗಳು
೫. ಶ್ರೀಗುರುದೇವರ ಜೀವನ ಜ್ಯೋತಿ- ಮ.ಶ್ರೀ ದೇಶಪಾಂಡೆ

ಅನುಬಂಧ : ೩

ಸಾಮಾನ್ಯ ಸೂಚೀಪತ್ರ

(ಕಂಸಗಳಲ್ಲಿಯ ಅಂಕಿಗಳು ಪುಟಗಳನ್ನು ಸೂಚಿಸುವವು)

ಅಖಂಡೇಶ್ವರ ವಚನ. ಅದರಲ್ಲಿ ಇಂದ್ರಿಯಗಳು, ಪ್ರಾಣಿಗಳು ಹಾಗೂ ವಿಷಯಗಳು, ಇವುಗಳಲ್ಲಿಯ ವಿಲಕ್ಷಣ ಸಾದೃಶ್ಯವು ಕಾಣಿಸಲಾಗಿದೆ(೨೦)

ಅನುಭವ ಮಂಟಪ. ಸುವಿಖ್ಯಾತ ಸಂತರ ಸಭಾಭವನದ ಅಂದವಾದ ಬಣ್ಣನೆಯುಳ್ಳ ಕವನದಲ್ಲಿ (೨೯೪); ದೇವರ ನಾಮದ ಮಹಿಮೆಯಿಂದ ಆಕಾಶವನ್ನು ತುಂಬಿಡುವ ಆರಾಧನ ಮಂದಿರ(೨೯೬); ಧರ್ಮವನ್ನು ಜನತೆಯಲ್ಲಿ ಬೀರುವಂತಹದು;(೨೯೬); ಜನಕರಾಜನ ಓಲಗಕ್ಕೆ ಹೋಲಿಸ ಲಾದುದು(೨೯೬); ಭೀತಿ-ಆನಂದಗಳ ಅನುಭವವನ್ನು ಬಣ್ಣಿಸಲಾದ ಕವನದಲ್ಲಿ(೨೯೭); ಶ್ರೀಶೈಲದಂತೆ ಶರೀರದಲ್ಲಿರುವ(೨೯೮); ಐತಿಹಾಸಿಕ ಸಂತರ ಸಭಾಭವನ. ಪ್ರಭುದೇವರ ಅಧ್ಯಕ್ಷತೆಯಲ್ಲಿ ಕಲ್ಯಾಣದಲ್ಲಿ ನೆರೆದ ಸಭೆ(೨೯೯); ಬಂಗಾರದ ಸಿಂಹಾಸನವುಳ್ಳದ್ದು; ಚೆನ್ನಬಸವರಿಗೆ ಆತ್ಮದರ್ಶನ ವನ್ನು ದಯಪಾಲಿಸಿದುದು(೩೦೦); ಮಾನವತೆಯ ಕಲ್ಯಾಣಕ್ಕಾಗಿ ಬಾಳುವ ಅನುಭಾವಿಗಳ ದಿವ್ಯ ಸಮಾಜ(೩೦೦).

ಅನುಭಾವ: ಆತ್ಮಸಾಕ್ಷಾತ್ಕಾರದ ದರ್ಶನ(೨); ದರ್ಶನದೊಡನೆ ಅದರ ಸಂಬಂಧ(೯೬); ಕನ್ನಡ ಅನುಭಾವದಲ್ಲಿಯ ಪ್ರೇರಣೆಗಳನ್ನು ಹಿಂದಿ ಅನುಭಾವದಲ್ಲಿಯ ಪ್ರೇರಣೆಗಳೊಡನೆ ಸರಿಹೋಲಿಸಿದುದು(೩೨)

ಅನುಭಾವಗಳು : ಬೆಳಕಿನ ವಿತಾನ-ನಾದ ಇತ್ಯಾದಿ(೯೮)

ಅನುಭಾವಿಗಳು: ಕರ್ನಾಟಕದವರು-ಯೋಗಿಕ ಶರೀರಶಾಸ್ತ್ರ ಹಾಗೂ ಅಂಗರಚನಾ ಶಾಸ್ತ್ರದ ಯಥಾರ್ಥಜ್ಞಾನದಲ್ಲಿ ಅಸಮರು(೯೭); ಬೇರೆ ಸಂತರೊಡನೆ ತುಲನೆ(೬-೭).

ಅಲ್ಲಮಪ್ರಭು : ಜೀವನಚರಿತ್ರೆಯ ರೂಪಾತ್ಮಕ ವಿವರಣ (೧೭೧); ಹೆಸರಿನ ಅನುಭಾವಿಕ ವಿಶದೀಕರಣ(೧೯೨); 'ಪರಮಾರ್ಥಿಕ ಬೀಜಗಳನ್ನು' ಕದ್ದ ಕಳ್ಳರನ್ನು ಸರಿಯಾಗಿ ಶಿಕ್ಷಿಸಿದುದು(೨೧೨)

ಅಸಂಪಾತರೇಖೆ: ಪರಸತ್ಯವನ್ನು ಸಮೀಪಿಸುವದು, ಪಾರಮಾರ್ಥಿಕ ಅನುಭವದ ಒಂದು ವಿಶೇಷ(೪)

ಆಗಸ್ಟಾಯಿನ್-ಸಂತ : ದೇವರ ಇಚ್ಛೆಯ ಹಾಗೂ ಶಾಸನದ ಮೇರೆಗೆ ಬಾಳುವ ಆದರ್ಶ ಸಮಾಜವನ್ನು ಕುರಿತು (೨೯೫)

ಆತ್ಮ: ಇಡೀ ವಿಶ್ವದ ಶಾಶ್ವತ ದೃಷ್ಟಾರನು(೨೬೬); ಪೂರ್ಣ ಆತ್ಮನಿಗೆ ಎಲ್ಲ 'ಬೇಕು'ಗಳು, ಶಾಶ್ವತ 'ಉಂಟು'ಗಳಾಗುವವು(೨೬೫)

ಆತ್ಮ-ಸಾಕ್ಷಾತ್ಕಾರ : ಮುಕ್ತಿದಾಯಕ, ವಿಶ್ವವಿಷಯಕ ಹಾಗೂ ಉನ್ಮಾದದಾಯಕ ಪರಿಣಾಮಗಳು (೨೫೧); ತುಕಾರಾಮ, ನಾರದ, ಕಬೀರ, ಆಟೊ, ಇತ್ಯಾದಿ ಸಂತರ ಮೇಲಾದ ಉನ್ಮಾದದಾಯಕ ಪರಿಣಾಮ(೨೭೨-೨೭೩); ನೈತಿಕ ಪರಮಾನಂದದಾಯಕ ಹಾಗೂ ದೇವರಾಜ್ಯ ವಿಷಯಕ ಪರಿಣಾಮಗಳು (೨೮೦)

ಆದರ್ಶ ಸಮಾಜ : ಪ್ಲೇಟೊ-ಪಣೀತ. ದಾರ್ಶನಿಕರು ಅರಸರಾದಾಗಲೇ ನಿರ್ಮಿಸಲಾಗುವುದು(೨೯೫)

ಆನಂದ-ಗುಹೇಶ್ವರ : ಶಾಶ್ವತ, ಅನಂತ, ಸರ್ವವ್ಯಾಪಕ ದೇವರನ್ನು ಕುರಿತು(೮೬); ದೇವರ ಎಲ್ಲೆಡೆಯ ದರ್ಶನವೇ ಮುಕ್ತಿ(೮೭)

ಉಪಕುಲಗುರುಗಳು ಅದರಲ್ಲಿ ಇಂದ್ರಿಯಗಳು, ಪ್ರಾಣಿಗಳು ಹಾಗೂ ವಿಷಯಗಳು, ಇವುಗಳಲ್ಲಿಯ ವಿಲಕ್ಷಣ ಸಾದೃಶ್ಯವು ಕಾಣಿಸಲಾಗಿದೆ(   )

ಉಮದಿ ಮಹಾರಾಜರವರು: ಗುರು, ಇಲ್ಲವೆ ಪೀರರ ಹಿರಿಮೆಯನ್ನು ಕುರಿತು.(೨೪೪)

ಉರಗಗಿರಿ:ಶರೀರದಲ್ಲಿಯ ಮೆದುಳುಬಳ್ಳಿಯೊಳಗಿನ ಸರ್ಪದ ರೂಪಿನದು(೧೯೩)

ಕನಕದಾಸ: ಅದ್ಭುತ ಬುದ್ಧಿವೈಭವ. ದಾರ್ಶನಿಕ ಜ್ಞಾನ(೧೪೩)

ಕರ್ಪುರಾರತಿ : ಕವನದಲ್ಲಿ 'ಉದಾಸ' ಹಾಗೂ 'ಸೋಲ್ಲಾಸ'ರ ಭಾವ-ವೃತ್ತಿಗಳ ಸಮನ್ವಯ(೯೫)

ಕರ್ಮ : ವ್ಯಕ್ತಿಯು ತನ್ನ ಕರ್ಮಗಳಿಗೆ ಹೊಣೆಗಾರನು ಎಂಬುದನ್ನು ಒಳಗೊಂಡಿರುವದು(೨೬೪); ಸಂತರ ಮೇಲೆ ಕರ್ಮದ ಪರಿಣಾಮ ವಾಗುವುದಿಲ್ಲ.(೨೮೯)

ಕಲ್ಮೇಶ್ವರ : ಆತ್ಮಸಾಕ್ಷಾತ್ಕಾರದ ಆನಂದದ, ಪರಿಣಾಮಗಳನ್ನು ಕುರಿತು(೨೫೩); ಗುರುಗಳಿಂದ ಪಾಲಿತ-ಪೋಷಿತವಾದ ಮದೋನ್ಮತ್ತ ಆನೆಯ(ಶಿಷ್ಯನ) ಬಣ್ಣನೆ(೨೭೭-೭೮)

ಕಾಡಸಿದ್ಧ : ಅವರ ಪರಮಾರ್ಥಪರಂಪರೆಯೂ ಅದರ ಐತಿಹಾಸಿಕ ಮಹತ್ವವೂ (೧೪)

ಕಾಂಟ : ಪೂರ್ಣ ನೈತಿಕ ಪ್ರಜಾಪ್ರಭುತ್ವವಿರುವ 'ಅಂತಿಮಗಳ ರಾಜ್ಯ'ವನ್ನು ಕುರಿತು(೨೯೫)

ಕುಂಡಲಿನಿ : ಡಾ. ರೇಳೆಯವರ ಹೇಳಿಕೆಯ ಮೇರೆಗೆ ಮೆದುಳಿನ ಕೋಶದ ಹತ್ತನೆಯ ನರ(೧೯೨); ಜ್ಞಾನೇಶ್ವರರ ಬಣ್ಣನೆ(೧೯೨)

ಕೂಡಲೂರೇಶ : ಮಾನವ ಜೀವನದ ಮೇಲಿನ ಅಜ್ಞಾನದ ಪರಿಣಾಮವನ್ನು ಕುರಿತು(೫೬); ಮಗುವಿನ ಅಳುವಿಕೆಯನ್ನು ಕುರಿತು ಕಲ್ಪನಾಮಯ ಹಾಗೂ ದಾಶ್ನಿಕ ವಿಚಾರಗಳು (೧೮); ಸಂತರ ಕರ್ತವ್ಯ-ಕರ್ಮಗಳನ್ನು ಕುರುಬರ ಕರ್ತವ್ಯ-ಕರ್ಮಗಳೊಡನೆ ಹೋಲಿಸಿದುದು(೧೦೨); ಪ್ಲೇಟೋನ ವಿಚಾರಗಳೊಡನೆ ಸಾದೃಶ್ಯ (೧೦೩); ಜನ್ಮ ಮರಣ ಮುಕ್ತಿಯನ್ನು ವಿಶದೀಕರಿಸಲು ವಿವಿಧ ನಿದರ್ಶನಗಳು(೨೬೨)

ಗಂಗಾಧರ ಕವಿ : ಸಂತತವಾದ ಲಿಂಗಪೂಜೆಯ ಆಗ್ರಹ (೨೩೧); ಮರಣ ಸಮಯಕ್ಕೆ ಶಿವನನ್ನು ನೆನೆಯಬೇಕೆಂಬುದನ್ನು ಕುರಿತು(೨೩೨)

ಗಿರಿಮಲ್ಲೇಶ : ಪರಮಾರ್ಥದ ಉನ್ನತತಮ ನೆಲೆಯಿಂದ ಜೀವನ್ಮುಕ್ತಿಯನ್ನು ವಿವರಿಸುವ (೨೬೩); ಕನ್ನಡಿಯಲ್ಲಿ ಕಂಡಂತೆ ತನ್ನ ಸ್ವರೂಪವನ್ನು ಕಾಣುವ(೨೬೬)

ಗೀತೆ : ಪರಮಾತ್ಮನ ದರ್ಶನವು ವಿಷಯ ಭೋಗದ ಆಂತರಿಕ ರಸವನ್ನು ಅಳಿಸುವುದು(೨೯೦)

ಗುರು-ಸದ್ಗುರು : ಗಾರುಡಿಗನಂತೆ(೫೮); ಶಿಷ್ಯನಿಗೆ ಅಮೃತದ ಪ್ರಸಾದ(೭೧); ಹಿರಿಮೆಯಿಂದ ಜಗತ್ತನ್ನು ತುಂಬಲು ಬಿನ್ನಹ(೯೧); ಅವನ ಬೆಳಕಿನಲ್ಲಿ ಮತಿ-ಮತು-ಕೃತಿಗಳು ಬೆಳಗಲಿ(೯೧); ಶಿಷ್ಯನ ಕಿವಿಯಲ್ಲಿ ಮೂಲಮಂತ್ರ ವನ್ನು ಉಸುರಿ, ಅವನಿಗೆ ನಿರ್ಬಯಲಿನ ಅನುಭವ-ದಾನ(೯೯); ಶಿಷ್ಯನನ್ನು ನಿಷ್ಕಲ ಬೆಳಕಿನ ಮಂಟಪದಲ್ಲಿ ಕುಳ್ಳಿರಿಸಿ, ನಲಿದಾಡಿಸುವುದು (೧೦೭); ಪರಮಾತ್ಮನ ಅಸಂಖ್ಯ ನಾಮಗಳ ಶ್ರವಣದ ವಿರಲ ಅನುಭವವನ್ನು ತನ್ನ ಶಿಷ್ಯನಿಗೆ ದಯಪಾಲಿಸುವುದು(೧೦೯); ಹಾವಾಡಿಗನಂತಿರುವ (೧೯೪)

ಗುರುಸಿದ್ಧ : ನಮ್ಮ ಹೃದಯದಲ್ಲಿಯ ವಿಕಾರರೂಪಿಯಾದ ಕಾಡುಮೃಗಗಳನ್ನು ಅಟ್ಟಿ ಕೊಲ್ಲಲು ಬೋಧೆ(೨೭); ಪುರಂದರದಾಸ ಬನಿಯನ್‌ರೊಡನೆ ಹೋಲಿಕೆ (೨೭); ಪರಂಪರಿತ ಕೃಷಿರೂಪಕ ಅನುಭಾವದ ಪೈರನ್ನು ಬೆಳೆಸಲು ಬೋಧೆ(೪೮); ಗುರುವಿನ ಉಪಕಾರಕ್ಕೆ ಮೇರೆಯಿಲ್ಲ(೯೦); ಯೋಗ-ಶಕ್ತಿಯಿಂದ ಪಡೆದ ಶ್ರೇಷ್ಠತಮ ಅನುಭವಗಳ ಬಣ್ಣನೆ(೧೩೩); ದೃಷ್ಟಿ-ಮನ-ಪವನಗಳ ಬೆರಕೆಯಿಂದ ಪರಬಿಂದು ದರ್ಶನ(೨೨೩); ಅಂತರಂಗದಲ್ಲಿ ಪ್ರಾಣಲಿಂಗ ಪೂಜೆ(೨೨೯); ತನ್ನಲ್ಲಿಯ ಶ್ರೀಶೈಲದ ಸ್ಪಷ್ಟವಾದ ವರ್ಣನೆ(೧೯೮) (ಸರ್ಪಭೂಷಣವನ್ನು ನೋಡಿ)

ಗೋಪಾಲದಾಸ : ತನ್ನ ರೋಗವನ್ನು ಕುರಿತು(೨೦)

ಗ್ರೀನ-ಟೀ-ಎಚ್ : ಪಾರಮಾರ್ಥಿಕ ತತ್ವವನ್ನು ಆಶ್ರಯಿಸಿದ ಅವನ ರಾಜ್ಯದ ಕಲ್ಪನೆ (೨೯೫)

ಚಿದಾನಂದ : ಸದ್ಗುರುವನ್ನು ಗಾರುಡಿಗನೆಂದು ಬಣ್ಣಿಸುವ(೬೧); ಸದ್ಗುರು ಶಿಷ್ಯನ ಕಿವಿಯಲ್ಲಿ ದಿವ್ಯನಾಮವನ್ನು ಉಸುರುವ(೬೨); ಗುರು-ಅನುಗ್ರಹವು ಶಿಷ್ಯನತಮ ಆದರ್ಶ(೬೩); ಶ್ರೇಷ್ಠತಮವಾದ ಸುಖ ಸಮುಚ್ಚಯವಾದವನ್ನು ಬೋಧಿಸುವ(೬೩); ಗುರುಗಳ ಮೂಲ್ಯಶಾಸ್ತ್ರೀಯ ಕಾರ್ಯವನ್ನು ಕುರಿತ(೭೬); ಅಷ್ಟಮದಗಳನ್ನು ತುಡುಗರೆಂದು ಬಣ್ಣಿಸಿದುದು(೭೬); ಬಣ್ಣಬಣ್ಣದ ಬ್ರಹ್ಮಲೋಕವೆಂಬ ದಿವ್ಯಮುತ್ತನ್ನು ಕುರಿತು(೨೨೦); ನಾದದ ನೈತಿಕ ಪರಿಣಾಮವನ್ನು ಕುರಿತು(೨೩೫); ಪರಮಾತ್ಮ-ಪ್ರೀತಿಯ ಸ್ವಭಾವವೇ ಆದ ಪರಮ ಅತೃಪ್ತಿಯನ್ನು ಕುರಿತು(೨೩೬); ರತ್ನಗಳಿಂದ ಅಲಂಕೃತವಾದ ಮಂಟಪದಲ್ಲಿಯ ಆತನ ಆನಂದಪರವಶತೆಯ ನಿದ್ರೆ(೨೮೮)

ಚಿಂತೆ : ಪರಮಾತ್ಮನಿಗೆ ಶರಣಾಗತರಾಗಿ, ಅದನ್ನು ಅಳಿಸುವುದು(೩೮)

ಜಗನ್ನಾಥದಾಸ : ಅವರ ಜೀವನಕ್ಕೆ ಸಂಬಂಧಿಸಿದ ಕಥೆ(೯೨-೯೩); ಇಡಿ ಸಮಾಜದ ಪಾತಕಗಳನ್ನು ಕ್ಷಮಿಸಲು ತಮ್ಮ ಗುರುಗಳನ್ನು ಬಿನ್ನವಿಸಿದುದು (೯೨); ಅಂಜಿಕೆ, ದುಃಖ, ಪಾಪಗಳನ್ನು ನಿವಾರಿಸುವ ದೇವರನ್ನು ಕುರಿತು(೧೨೬); ಮಾನವನ ಸ್ವಾತಂತ್ರ್ಯವನ್ನು ಮತ್ತು ದೇವರ ಪೂರ್ವಜ್ಞಾನ ಹಾಗೂ ಸರ್ವ ಸಮರ್ಥತೆಯನ್ನು ಕುರಿತು(೧೩೨)

ಜನ್ಮ-ಮಾನವ : ಆತ್ಮಸಾಕ್ಷಾತ್ಕಾರಕ್ಕೆ ಅದರ ಮಹತ್ವ (೧೨)

ಜೇಮ್ಸ್-ವುಲಿಯಮ್ : 'ಧಾರ್ಮಿಕ ಅನುಭಾವದ ವಿವಿಧತೆ' ಎಂಬ ಗ್ರಂಥದ ಕರ್ತ(೩)

ತುಲಸಿದಾಸ : ಚಂಪಕ ಹೂವಿನ ಬಗೆಗೆ ಅವರ ಸ್ವತಂತ್ರ ಕಾಲ್ಪನಿಕ ವಿಚಾರ(೨೧); ನಿರುಪಾಧಿಸಿದ್ಧರಂಥ ಕವನವನ್ನು ರಚಿಸಿದರು (೫೩)

ದಿನಕರಬಸವ : ಬ್ರಹ್ಮಾನಂದವನ್ನು ಕುರಿತು ಅವರ ಮಾನಸಶಾಸ್ತ್ರೀಯ, ನೀತಿ ಶಾಸ್ತ್ರೀಯ, ಹಾಗೂ ಅನುಭಾವಶಾಸ್ತ್ರೀಯ ವಿಚಾರಗಳು(೨೮೦)

ದೈವೀ ಉನ್ಮಾದದ : ಅಂತಿಮಗತಿಶಾಸ್ತ್ರೀಯ, ಮಾನಸಶಾಸ್ತ್ರೀಯ ಸಾಮಾಜಿಕ ಹಾಗೂ ಆನಂದ ವಿಷಯಕ ಅಂಗಗಳು (೨೭೩)

ದ್ವೈತವಾದ : ಅದರ ಪಂಚಭೇದಗಳ ಸಿದ್ಧಾಂತವನ್ನು ಟೀಕಿಸಿದುದು(೨೯೧)

ಧ್ಯಾನಪದ್ಧತಿ : ಧ್ಯಾನಪದ್ಧತಿಯಲ್ಲಿಯ ಆರು ವಿಷಯಗಳು (೧೮೭)

ಧ್ಯಾಸ : ಧ್ಯಾನಪದ್ಧತಿಯ ಒಂದಂಗ(೫೯)

ನಂದ್ಯಾಳ ಸಂತರು : ಗುರುಕರುಣವು ಜೀವನದಲ್ಲಿಯ ಮುಳ್ಳುಗಳನ್ನೆಲ್ಲ ಸುಡುವದು (೮೦)

ನರಸಪ್ಪ : ಹಿರಿಯ ಸಂತರು. ೧೦೫ ವರುಷ ವಯಸ್ಸು. ದೇವರ ಸೂಕ್ಷ್ಮ ಸುಳುವನ್ನು ಕುರಿತು ಹೇಳುವರು(೮೨)

ನಾಥರು : ಒಂಬತ್ತು ಜನರ ಹೆಸರುಗಳು (೧೫)

ನಾದ : ಭೇರಿಯ ನಾದ, ಹೊಳೆಯುವ ಪ್ರಭೆ ಹಾಗೂ ದೇವರ ರೂಪ-ಇವುಗಳ ಏಕಕಾಲದ ಅನುಭವ (೨೩೦)

ನಾಮ : ಪುರಂದರದಾಸ ತುಕಾರಾಮರು ಅರುಹಿದ ದಿವ್ಯನಾಮದ ಅರ್ಥ(೧೭೮); ಈ ದಿವ್ಯನಾಮವನ್ನು ಪಡೆಯಲು ತೆರಬೇಕಾದ ಹೆಚ್ಚಿನ ಬೆಲೆ(೧೭೮); ಅದನ್ನು ಗುಪ್ತಪರಾಮಾರ್ಥಿಕ ಕಿಡಿಯಂತೆ ನಮ್ಮ ಹೃದಯಲ್ಲಿ ಇರಿಸತಕ್ಕದ್ದು(೧೮೦); ದೇವರ ನಾಮ-ರೂಪಗಳ ಏಕಕಾಲಕ್ಕೆ ಲಾಭ(೧೮೧); ದೇವರ ನಾಮವನ್ನು ಪುರಂದರದಾಸರು ಅಕ್ಷಯ ಕಲ್ಲು ಸಕ್ಕರೆಯೊಡನೆ ಹೋಲಿಸಿದುದು(೧೮೧); ಹಿಂದೀ ಪದವೊಂದರಲ್ಲಿ ಅದನ್ನು ವಿವಿಧ ಪಕ್ವಾನ್ನಗಳೊಡನೆ ಹೋಲಿಕೆ(೧೮೧); ಮರಣದ ಅಂಜಿಕೆಯನ್ನು ಅಳಿಸುವುದು(೧೮೧); ದೇವರಿಗಿಂತ ಮಿಗಿಲಾದುದು(೧೮೨-೧೮೩); ದೇವರ ನಾಮದ ಬಲವು ಅಗಾಧವಾದುದು(೧೮೩); ಸಂತರಿಗೆ ಅಮೃತವನ್ನು ನೀಡುವುದು(೧೮೩); ದೇವರ ತೇಜ, ನಾದ, ಹಾಗೂ ರೂಪಗಳ ವಾಹಕ(೧೮೯)

ನಾಲಿಗೆ : ದೇವರ ನಾಮವನ್ನು ಉಚ್ಚರಿಸುವುದು ಅದರ ಪ್ರಧಾನಕಾರ್ಯ(೫೨)

ನಿಜಗುಣ ಶಿವಯೋಗಿ : ಇಷ್ಟ, ಪ್ರಾಣ, ಭಾವಲಿಂಗಗಳ ಧ್ಯಾನವನ್ನು ಕುರಿತು (೨೦೨); ಭಾವಲಿಂಗವನ್ನು ಮೂಲಕಾರಣ, ಸಾಕ್ಷಿ ಮತ್ತು ಆನಂದಮಯ ಎಂದು ಬಣ್ಣಿಸುವ ಶ್ರೇಷ್ಠ ಅದ್ವೈತಿಯು(೨೦೪); ಶಾಂತಿಯು ಉದಾಸೀನತೆ ಇಲ್ಲವೆ ನಿರ್ಲೇಪತೆ ಇವುಗಳಿಗಿಂತ ಶ್ರೇಷ್ಠವಾದುದು(೨೦೫)

ನಿಂಬರಗಿ ಮಹಾರಾಜರು : ಅವರ ೧೨ ಒಳ್ಳೆಯ ಪದಗಳು(೪೬); ಮನಸ್ಸಿನ ಮುರಗಿಯ ತಿದ್ದಲು ದೇವರಿಗೆ ಪ್ರಾರ್ಥನೆ(೫೦); ಅಮೃತರೂಪಿಯಾದ ಪರ ಮಾನ್ನ ಪಾಯಸ ನಿರ್ಮಿತ ಹಾಗೂ ಗುರು ಮತ್ತು ಗುರುಬಂಧುಗಳೊಡನೆ ಅದರ ಸೇವಕ ಇವನ್ನು ಕುರಿತ ಪರಂಪರಿತ ರೂಪಕ(೨೩೭); ಅನುಭಾವ ವನ್ನು ತನ್ನಲ್ಲಿ ಬೆಳೆಸಲು ಹಾಗೂ ಅನ್ಯರಲ್ಲಿ ಹಬ್ಬಿಸಲು ಸತ್ಸಂಗದ

ಮಹತ್ವವನ್ನು ಕುರಿತು(೨೩೭); ಹೃದಯದ ಕಲ್ಲನ್ನು ಮೆತ್ತಗೆ ಮಾಡಿಕೊಳ್ಳುವುದನ್ನು ಕುರಿತು(೨೩೩); ದೇವರ ಕಲ್ಪವೃಕ್ಷ ಇಲ್ಲವೆ ಪರುಷರೂಪದ ದರ್ಶನ(೨೩೩)

ನಿರುಪಾಧಿ ಸಿದ್ಧರು : ತಮ್ಮ ನಾಲಿಗೆಗೆ ಮೌನವನ್ನು ತಳೆಯಲು ಬೋಧಿಸುವರು(೫೧); ಯೋಗಿಕ ಧ್ಯಾನದ ಪ್ರಕ್ರಿಯೆಯನ್ನು ಕುರಿತು(೫೫); ಸಂತರ ಒಂಬತ್ತು ಲಕ್ಷಣಗಳನ್ನು ಅರುಹುವರು(೧೨೯–೧೩೦)

ನಿರ್ಬಯಲು : ಅಂದರೆ ಅವಕಾಶವಿಲ್ಲದ ಹಾಗೂ ಮೂಲಸತ್ಯ (೧೭)

ನಿರ್ವಾಣ : ಬೌದ್ಧರ ಕಲ್ಪನೆಯನ್ನು ರೇವಣಸಿದ್ಧರ ನಿರ್ಬೈಲುನೋಡನೆ ಹೋಲಿಸಿದುದು(೧೭); ಅದರ ಆನಂದಪೂರ್ಣತೆ ಎಂಬ ಭಾವಾತ್ಮಕ ಅರ್ಥ(೧೭).

ನಿಶ್ಚಿಂತ : ಅಂದರೆ ದೇವರ ಇಚ್ಛೆಗೆ ತಲೆಬಾಗುವುದು(೧೭೯)

ನೀತಿ : ಬುದ್ಧಿ–ಭಾವಗಳೊಡನೆ ಅದರ ಸಂಬಂಧ(೨೦೯)

ನೀರಲಕೇರಿ ಸಂತರು : ಸಂತರ ಸಂಗದಲ್ಲಿ ದೇವರೊಡನೆ ನಮ್ಮ ಏಕತೆಯ ಅನುಭವವನ್ನು ಕುರಿತು(೧೭೫)

ನ್ಯಾಸ : ಧ್ಯಾನಪದ್ಧತಿಯಲ್ಲಿಯ ಒಂದು ಉಪಾಂಗ(೫೯)

ಪರತಮ ಅನುಭವಗಳು : ಪುರಂದರದಾಸ, ಜಗನ್ನಾಥದಾಸ, ತುಕಾರಾಮ, ನಾಮದೇವರು ಬಣ್ಣಿಸಿದ 'ಭಕ್ತನು ಮಲಗಿ ಪಾಡಲು ದೇವರು ನಿಂತು ಕೇಳುವ' ಅನುಭವ(೨೫೫)

ಪರಮಾನಂದಮಯತೆ : ಅನುಭಾವದ ತೀರ ಯಥಾರ್ಥವಾದ ನಿಕಷ(೫); 'ಪುಷ್ಟೀಕರಣ'ವನ್ನು ಅಂದರೆ ಅತೀಂದ್ರಿಯ ಅನುಭವಗಳ ಸಮಗ್ರತೆಯನ್ನು ಒಳಗೊಂಡಿರುವುದು(೫); ಸಂತರ ಸಂಘವನ್ನು ಕಟ್ಟುವುದು(೬)

ಪುರಂದರದಾಸ : ಅವರ ವೈಚಾರಿಕ ಮೂರು ಅವಸ್ಥೆಗಳು(೮); ತಮ್ಮ ಕಾಳ ರಾತ್ರಿಯ ಅನುಭವವನ್ನು ಕುರಿತು(೨೩–೨೪); ಜೀವನದ ತಿರುಗಣಿಯಲ್ಲಿ ಸಿಲುಕಿದುದು(೨೬); ದೇವರ ಕರುಣವನ್ನು ಪಡೆದಿಲ್ಲವೆಂಬ ದೂರು(೨೭); ಏಕನಾಥರೊಡನೆ ಸಾದೃಶ್ಯ(೩೫); ಚಿಂತೆಯ ಸಾರ್ವತ್ರಿಕ ಸಾಮ್ರಾಜ್ಯವನ್ನು ಕುರಿತು(೩೬); ದೇವರ ಸೇವೆಗಾಗಿ ಇಂದ್ರಿಯಗಳ ಉಪಭೋಗ(೪೯); ಸಂಜೀವರಾಯರ ಮೂರು ಅವತಾರಗಳು(೪೯); ಸಂತರು ಹಿಂಸೆಗೆ ಗುರಿಯಾಗರು(೧೨೮); ದೇವರ ನಾಮದ ರಹಸ್ಯವನ್ನು ಅರುಹುವ ಪರಂಪರಿತ

ಕೃಷಿರೂಪಕ(೧೭೭); ದೇವರ ಪ್ರೀತಿಯು ಸಂಗೀತದ ಅತ್ಯುನ್ನತ ಲಕ್ಷಣ (೧೮೫); ದಾಸರ ಯೋಗಿಕ ಅನುಭವಗಳು(೧೯೭); ಧ್ಯಾನಪದ್ಧತಿ (೧೯೪); ಅನುಬೋಧೆಯ ಪಾರಮಾರ್ಥಿಕ ಸ್ವರೂಪ(೨೧೩); ಮುತ್ತಿನ ದರ್ಶನವು ಪಾರಮಾರ್ಥಿಕ ಜೀವನದ ಪ್ರಾರಂಭ(೨೧೫); ವಿಠ್ಠಲನೆಂಬ ದಿವ್ಯ ಮುತ್ತು (೨೧೬); ನಿಜವಾದ ಬ್ರಾಹ್ಮಣನ ಲಕ್ಷಣಗಳು(೨೪೨); ನಿರ್ಗುಣ ದೇವರ ದರ್ಶನ(೨೫೫); ದೇವರ ನಾಮದ ಮದಿರೆಯಿಂದ ಹುಚ್ಚು ಹಿಡಿದುದು (೨೭೫); ಪರಮಾನಂದಜನಿತ ಸ್ವಗತ ಭಾಷಣ(೨೯೩); ದೇವರ ನಾಮವು ಅವರ ನಾಲಿಗೆಯಲ್ಲಿ ನೆಲೆಸುವುದು(೨೯೩); ದೇವರಪ್ರಸಾದವನ್ನು ಪಡೆದ ಮನವರಿಕೆ(೨೯೩); ಅವರ ಪರತಮ ಪಾರಮಾರ್ಥಿಕ ಅನುಭವಗಳು (೨೯೩)

ಪ್ರತಿಭೆ : ಬುದ್ಧಿ-ಭಾವನೆ-ಸಂಕಲ್ಪಗಳನ್ನು ಮೀರಿರುವುದು(೩); ಅತೀಂದ್ರಿಯ ಅನುಭವಗಳನ್ನು ಪಡೆವ ಶಕ್ತಿ(೩)

ಪ್ರಮಾಣ : ಭಾರತೀಯ ಹಾಗೂ ಯುರೋಪೀಯ ದರ್ಶನಗಳಲ್ಲಿಯ ವಿವಿಧ ಸಿದ್ಧಾಂತಗಳು(೨೦೬); ಅತೀಂದ್ರಿಯ ಅನುಭವರೂಪಿಯಾದ(೨೧೦)

ಪ್ರಸಾದ : ಕರುಣಗಳ ವಿವರಣ(೪೨)

ಪ್ರಹ್ಲಾದ : ಶ್ರೇಷ್ಠತಮ ಸಂತ(೧೭೭)

ಬಲಭೀಮ : ಗುರುವಿನ ಮಂತ್ರವು ಸರ್ಪದ ಹೆಡೆಯನ್ನು ಮೇಲಕ್ಕೆತ್ತಲು ಶಿಷ್ಯನಿಗೆ ನೆರವಾಗುವುದು(೬೬)

ಬಸವ : ಈ ಹೆಸರಿನ ಪಾರಮಾರ್ಥಿಕ ವಿವರಣೆ(೧೭೨)

ಬಸವ ಪುರಾಣ : ಘಂಟಾಕರ್ಣನೆಂಬ ಶರಣರ ವೃತ್ತಾಂತ-ಕಥನ(೨೪೬)

ಬಸವೇಶ್ವರ-(ಬಸವಣ್ಣ) : ಸಂತರನ್ನು ಕಾಡುವ ಅಸಾಧ್ಯತೆಯನ್ನು ಕುರಿತು(೧೨೮); ಪರಮಾತ್ಮನು ಜಗತ್ತನ್ನು ಸುತ್ತುವನು. ಭಕ್ತನು ಪರಮಾತ್ಮನನ್ನು ಪ್ರತಿಬಿಂಬಿಸುವನು ಎಂದು ಬಣ್ಣಿಸುವ(೧೩೪-೧೩೫); ನಾಲ್ಕು ಉದಾಹರಣೆಗಳಿಂದ ಪರಮಾತ್ಮನ ಸರ್ವಸಮರ್ಥತೆಯನ್ನು ನಿದರ್ಶಿಸುವ (೧೩೬-೩೭); ತನ್ನನ್ನು ವಿನಮ್ರಭಕ್ತನೆಂದು ಬಣ್ಣಿಸುವ (೧೮೫); ತನ್ನ ಅಪ್ರತಿಮ ಅನುಭವಗಳನ್ನು ಬಣ್ಣಿಸುವ(೨೪೬)

ಬಳಿತ್ಥಾಸೂಕ್ತ : ಋಗ್ವೇದದಲ್ಲಿಯದು. ಸಂಜೀವರಾಯರ ಮೂರು ಅವತಾರಗಳಿಗೆ ಅನುಗುಣವಾದ ಮೂರು ಅವತಾರಗಳನ್ನು ಬಣ್ಣಿಸುವುದು(೧೭೫)

ಬಿಲ್ವಪತ್ರ : ಎರಡು ಕಂಗಳು ಒಂದು ಮೂಗು ಇವುಗಳಿಂದ ಕೂಡಿದುದು(೧೮೮)

ಬೀಜ : ಪಾರಮಾರ್ಥಿಕ ಬೀಜದ ಸ್ವರೂಪ(೨೧೧)

ಬ್ರಹ್ಮ : ಅವನಿಗೆ ಬಾಣವನ್ನು ಎಸೆಯುವ ಅಭ್ಯಾಸ(೧೮೯); ಆಗ ಮೈಮರೆಯುವ ಆವಶ್ಯಕತೆ (೧೯೦); ಶರೀರವನ್ನು ತುಬಾಕಿಯಂತೆಯೂ ಅನುಗ್ರಹವನ್ನು ಮದ್ದು ಇತ್ಯಾದಿಯಂತೆಯೂ ಉಪಯೋಗಿಸುವ(೧೯೧–೧೯೨)

ಭಗವಂತ : ಅನುಭವವೂ ಪಾಪವಿಹೀನತೆಯೂ ಪರಸ್ಪರಾವಲಂಬಿಗಳು(೧೭೯)

ಭಗವಂತಪ್ಪ : ಉಮದಿಯ ಮಹಾರಾಜರವರ ಶಿಷ್ಯ. ತನ್ನ ಸದ್ಗುರುಗಳ ಕರುಣವನು ಬಣ್ಣಿಸುವ(೧೦೮)

ಭವತಾರಕ : ಪ್ರೀತಿಭಕ್ತಿಯಿಂದ ಪರಮಾತ್ಮನ ಧ್ಯಾನವನ್ನು ಕುರಿತು(೬೦); ಭಗವಂತನು ತನ್ನ ಭಕ್ತರನ್ನು ಕಾಯಲು ಧಾವಿಸುವನೆಂಬ ಆಶ್ವಾಸನ(೬೦) ಧ್ಯಾನ ಪದ್ಧತಿಯನ್ನು ಕುರಿತು(೫೯); ಸದ್ಗುರುಗಳ ಪರತತ್ತ್ವಶಾಸ್ತ್ರೀಯ ಹಾಗೂ ಮೂಲ್ಯಶಾಸ್ತ್ರೀಯ ಕಾರ್ಯ(೭೪); ಶಿಷ್ಯನಿಗೆ ಮುಕ್ತಿಯ ಶಿಖರವನ್ನು ಕಾಣಿಸುವ ಗುರುವನ್ನು ಕುರಿತು(೭೫); ತನ್ನ ಅನಂತ ಪರಮಾತ್ಮನ ಆನಂದಮಯ ದರ್ಶನ(೨೭೧); ಸಾಂಖ್ಯದರ್ಶನವನ್ನು ಸುಧಾರಿಸುವ(೨೭೧); ಕರ್ಮ-ಧರ್ಮಗಳು ಅನುಭಾವಿಯನ್ನು ಯಾವ ವಿಧದಿಂದಲೂ ಬಾಧಿಸಲರಿಯವು(೨೭೨); ಸಾಕ್ಷಾತ್ಕಾರದ ತರುವಾಯ ಜಗತ್ತಿನಲ್ಲಿ ನವವೈಭವವನ್ನು ಕಾಣುವ(೨೭೨); ಸಂತರು ಉಚ್ಚತಮ ನೀತಿಯ ಪ್ರತೀಕರು ಎಂಬುದನ್ನು ಕುರಿತು(೨೮೯); 'ತತ್ತ್ವಮಸಿ'ಯ ರಹಸ್ಯವನ್ನು ಅನುಭವಿಸಿದವನು ಮರಣಕ್ಕೆ ಹೆದರುವದಿಲ್ಲ(೨೯೦–೨೯೧)

ಭೀಮ : ಅವನನ್ನು ಕುರಿತು ಒಂದು ಸ್ವಾರಸ್ಯಮಯ ಕಥೆ(೧೨೩)

ಮಡಿವಾಳಯೋಗಿ : ಗುರುಗಳ ಹಿರಿಯ ಉಪಕೃತಿಯನ್ನು ಕುರಿತು(೮೪); ತನ್ನನ್ನು ತನ್ನ ಗುರುವಿನ ಗುಲಾಮನೆಂದೂ, ಗೂಳಿಯೆಂದೂ ಕರೆದುಕೊಳ್ಳುವ(೯೪); ತನ್ನ ಗುರುವಿನ ಮಹಿಮೆಯನ್ನು ಹಾಡುವುದೇ ಅವನ ಕರ್ಮಗಳ ಪ್ರಧಾನ ಉದ್ದೇಶ(೯೪)

ಮಧ್ವಾಚಾರ್ಯರು : ವಿಠ್ಠಲಮಂದಿರದ ಸಂಸ್ಥಾಪನೆಯಾದ ಮೇಲೆ ಹಿಂದಿನಿಂದ ಜನಿಸಿದವರು(೧೨೪); ಪರಂಪರಿತ ರೂಪಕದಿಂದ ಅವರ ದರ್ಶನದ ಬೆಳವಣಿಗೆಯಲ್ಲಿಯ ವಿವಿಧ ಸ್ಥಲಗಳ ವಿಶದೀಕರಣ(೧೭೭)

ಮಹಾಂತ : ವಿಶ್ವಪ್ರಜ್ಞೆಯ ಅನುಭವವನ್ನು ಕುರಿತು (೧೬೭)

ಮಹಾಲಿಂಗರಂಗ : ದೇವರ ಚರಣದರ್ಶನವೇ ಶ್ರೇಷ್ಠತಮ ಅನುಭವ(೯೬); ಸಮತರು ದ್ವಂದ್ವಾತೀತರು(೧೩೦); ಎಲ್ಲ ಅವಸ್ಥೆಗಳಲ್ಲಿ ದೇವರ ನಾಮವನ್ನು ನೆನೆಯಬೇಕೆಂಬ ಆಗ್ರಹ(೧೭೪); ಎಲ್ಲೆಡೆ ನೆಲೆಸಿರುವ ರತ್ನದರ್ಶನ(೨೨೧); ಪಾರಮಾರ್ಥಿಕ ಅನುಭವ ಹಾಗೂ ಪಾಪವಿಹೀನತೆ ಇವುಗಳಲ್ಲಿ ಪರಸ್ಪರ ಸಂಬಂಧ(೨೨೨)

ಮಹಿಪತಿ : ದೇವರು ಅವರಿಗೆ ಐದು ಮಾತುಗಳನ್ನು ದಯಪಾಲಿಸಿದುದು(೪೪–೪೫); ಪ್ರಪಂಚದಲ್ಲಿಯೂ ಅವರಿಗೆ ದೇವರ ಪೂರ್ಣದರ್ಶನ(೬೯); ಪರಸತ್ಯದ ಜ್ಞಾನವು ನೀತಿಯ ಮುಗುಟಮಣಿ(೨೦೯); ಪಾರಮಾರ್ಥಿಕ ಅನುಭವದಲ್ಲಿ ಬೇರೆ ಬೇರೆ ಇಂದ್ರಿಯಗಳ ಅನುಬೋಧೆಯ ಸಾಧ್ಯತೆ(೨೧೩೦); ವಸ್ತು ಸಂತರ ಹೃದಯದಲ್ಲಿಯ ಚಿದ್ಘನ ದೀಪ(೨೭೭); ದ್ವಾದಶವಿಧ ಅನಾಹತ ನಾದಗಳ ಅನುಭವ(೨೪೧); ಅವರ ಕೆಲ ಪರತಮ ಅನುಭವಗಳು(೨೫೩); ದೇವರ ಆಟದ ವರ್ಣನೆ(೨೫೬); ಪರಮಾನಂದ ಜನಿತ ಸ್ವಗತ ಭಾಷಣ(೨೯೧); ತಮ್ಮ ನಾಲ್ಕು ಅವಸ್ಥೆಗಳನ್ನು ದೇವರ ಸೇವೆಗಾಗಿ ಮೀಸಲಿರಿಸಿದುದು(೨೯೨); ಪರಮಾತಮನೊಡನೆ ಸಾಮರಸ್ಯದ ಅನುಭವ(೨೯೨)

ಮಹಿಪತಿನಂದನ–ಮಹಿಪತಿಸುತ(ಕೃಷ್ಣರಾಯ) : ಭಕ್ತರ ಪ್ರಾರ್ಥನೆಯನ್ನು ಪರಮಾತ್ಮನು ಸಫಲಗೊಳಿಸಿದ ವಿವಿಧ ಉದಾಹರಣೆಗಳು(೧೩೯–೧೪೦); ಗುರು ತನ್ನ ಆತ್ಮಾನುಭವದಲ್ಲಿ ಅವನನ್ನು ಪಾಲುಗಾರ ಮಾಡಿದುದು(೭೦); ಹರಿನಾಮ ಕಾಮಧೇನುವಿನ ವರ್ಣನೆ(೧೮೩)

ಮಿಲ್ಟನ್ : ಅವನ 'ಸೋಲ್ಲಾಸ' 'ಉದಾಸ'ಗಳ–ಉತ್ಸಾಹಯುತ–ವಿಷಾದಯುತ ಮನೋವೃತ್ತಿಗಳು(೯೬); ಮಡಿವಾಳಯೋಗಿ ಹಾಗೂ ಜಗನ್ನಾಥದಾಸರು ಇವುಗಳ ಪ್ರತಿನಿಧಿಗಳು(೯೭)

ಮುಕ್ತಿ : ಪ್ರಕಾರಗಳ ವರ್ಣನೆ(೨೨೮)

ಮುಚಕುಂದ : ಈ ಅರಸನ ನಿದ್ರೆಯ ವರ್ಣನೆ(೨೮೬–೨೮೭)

ಮುತ್ತುಗಳು : ದಿವ್ಯಮುತ್ತುಗಳನ್ನು ಧ್ಯಾನದ ಹಾಗೂ ವಿನಯಭಾವದ ಬೆಲೆಯಿಂದಕೊಳ್ಳುವದು(೨೧೫); ಅವುಗಳ ಮೂರು ಲಕ್ಷಣಗಳು(೨೧೬); ಅವುಗಳ ದರ್ಶನದಿಂದ ಅಮರತ್ವ(೨೨೧)

ಮುಪ್ಪಿನ ಮುನಿ : ಕಾಡಸಿದ್ಧರ ಪರಂಪರೆಯಲ್ಲಿಯ ಓರ್ವ ಸಂತರು(೧೪)

ಮೌನ : ಸುಮ್ಮನಿರುವುದು. ತಾನು ಮೌನವನ್ನು ಆಚರಿಸಿರುವ ಎಂಬ ಅಭಿಮಾನ ವಿರಹಿತವಾದುದು ಮೇಲು(೫೧)

ಯೋಜನೆ : ಪ್ರಸ್ತುತ ಗ್ರಂಥದ ಯೋಜನೆ(೧೦)

ರಾನಡೇ : ದಿವಗಂತ ಡಾ. ರಾ.ದ. ರಾನಡೆಯವರ ಜೀವನದಲ್ಲಿಯ ಚಿಂತೆಯ ಉದಾಹರಣೆ(೩೭)

ರಾಮರಾಯರು : ಹೊರ್ತಿಯವರು. ಅನುಭಾವದ ಮಾನಸಶಾಸ್ತ್ರಕ್ಕೆ ಇವರ ಕಾಣಿಕೆ(೮೨); ಗುರುಗಳು ಶಿಷ್ಯರ ನೈತಿಕ ಅಧಃಪತನವನ್ನು ತಡೆಯುವರು(೮೩)

ರುದ್ರಯ್ಯಸ್ವಾಮಿ : ಡೋಮನಾಳದವರು. ಭಕ್ತರ ಹೃದಯದಲ್ಲಿಯ ಹರಳಿನಂತಿರುವ ದೇವರ ಬಣ್ಣನೆ(೮೦)

ರೇವಣಸಿದ್ಧರು : ಹಿರಿಯ ಯೋಗಿಗಳು. ತಮ್ಮ ಪಾರಮಾರ್ಥಿಕ ಅನುಭವಗಳನ್ನು ಬಣ್ಣಿಸುವರು(೧೩); ಬಯಲಿಗೆ ಬಯಲು ನಿರ್ಬಯಲು ಎಂಬುದನ್ನು ಕುರಿತು(೧೭); ದೇವರ ಸೇವೆಯು ಸಾಕ್ಷತ್ಕಾರದೆಡೆ ಒಯ್ಯುಯುವ ಕೊನೆಯ ಹೆಜ್ಜೆ(೧೯); ಸಾಕ್ಷಾತ್ಕಾರ ಪ್ರಕ್ರಿಯೆಯಲ್ಲಿ ಪರಂಪರೆಯ ಮಹತ್ವ(೨೧೭); ಪಾರಮಾರ್ಥಿಕ ಜೀವನದ ನೈತಿಕ ಲಕ್ಷಣಗಳು(೨೧೭)

ವರ್ಡ್ಸ್‌ವರ್ಥ : ಶ್ರೇಷ್ಠ ಕ್ರಿಶ್ಚನನು. ಪೂರ್ವಜನ್ಮವನ್ನು ನಂಬುವ(೧೮)

ವಸ್ತು : ಭಾವದಿಂದಲೇ ಲಭಿಸುವುದು(೨೨೬)

ವಾಲ್ಮೀಕಿ : ದೇವರ ನಾಂದ ರುಚಿಯನ್ನು ಸವಿಯುವವ(೧೮೩)

ವಾಸ್ತವಿಕತೆ : ಪಾರಮಾರ್ಥಿಕ ಅನುಭವದ ಪ್ರಮಾಣ(೪)

ವಿಜಯದಾಸ : ದೇವರ ಪದಾಬ್ಜದರ್ಶನವು ಸಾಕ್ಷಾತ್ಕಾರದ ಪರಿಣತಿಯು ಎಂದರುಹುವರು(೪೨)

ವಿಶ್ವರೂಪ : ಶಿವಗೀತೆಯಲ್ಲಿ ರಾಮನಿಗೆ ಕಾಣಿಸಲಾದುದು(೧೯೦)

ವಿಜ್ಞಾನ : ದೇವರ ಸಾಮರ್ಥ್ಯದ ನಿದರ್ಶನ(೩೯)

ವೀರಶೈವಮತ : ಅದರ ಬೆಳವಣಿಗೆಯಲ್ಲಿಯ ಎರಡು ಅಂಗಗಳು-ಎಳೆಗಳು(೧೪)

ವ್ಯಾಸರಾಯ : ಅಂಬರೀಷ ಇತ್ಯಾದಿ ಸಂತರು ದೇವರ ನಾಮದ ದಿವ್ಯರಸವನ್ನು ತುಂಬಿಕೊಂಡರು(೧೮೩); ತಮ್ಮ ಶಿಷ್ಯರಾದ ಪುರಂದರದಾಸರನ್ನು ಹೊಗಳುವರು(೧೮೪)

ಶಂಕರೆಪ್ಪಾ : ಕತಮರಿಯವರು. ಗುರುವಿನಲ್ಲಿಯ ಶ್ರದ್ಧೆಯ ಮೂಲಕ ಸರ್ಪದಂಶದಿಂದ ಉಳಿದ(೬೬)

ಶಾಸ್ತ್ರೀ : ಜಮಖಂಡಿಯವರು. ಅವರನ್ನು ಕುರಿತ ಒಂದು ಸಂಗತಿ(೭೪-೭೫)

ಶಿವಲಿಂಗಪ್ಪ : ತಮ್ಮ ಸಂತಸಭೆಯ ದರ್ಶನವನ್ನು ಬಣ್ಣಿಸುವವರು(೨೪೭); ಪಾರಮಾರ್ಥಿಕ ಮಗನ ಜನನದ ಪರತಮ ಅನುಭವ(೨೫೯)

ಶಿಶುನಾಳಧೀಶ : ಶಿಗ್ಗಾವಿಯವರು. ಶಿವನ ನಮಗಳ ಅನುಭಾವವಿಷಯಕ ಅರ್ಥ ವಿವರಣೆ(೧೭೩); ಕುಂಡಲಿನಿಯ ಮಾನಸಶಾಸ್ತ್ರವನ್ನು ಕುರಿತು(೬೪)

ಶೂನ್ಯಸಂಪಾದನೆ : ಪ್ಲೇಟೋನ 'ಸಂಭಾಷಣೆ'ಗಳೊಡನೆ ಹೋಲಿಕೆ(೬)

ಶೇಷ : ಶೈವ-ವೈಷ್ಣವರಲ್ಲಿ ಸಮನ್ವಯ ನಿರ್ಮಿಸುವ(೬); ಕೆಳಮುಖವಾದಾಗ ವೈಷಯಿಕ ಜೀವನವನ್ನು ಸೂಚಿಸುವುದು(೬೩)

ಸಂಗ : ತನ್ನನ್ನು ದ್ವಂದ್ವಾತೀತ ಮಾಡಲು ದೇವರನ್ನು ಪ್ರಾರ್ಥಿಸುವ(೨೮೪)

ಸದಾಶಿವೇಂದ್ರ ಸರಸ್ವತಿ : ಪಾರಮಾರ್ಥಿಕ ಸರ್ಪವು ವಿಷಯಾಸಕ್ತಿಯ ಪ್ರತೀಕವು(೬೩)

ಸಂತರು : ಶಾಂತಿಯ ಪ್ರತೀಕರು(೪೭); ಭಾಗವತದಲ್ಲಿಯ ಒಂಬತ್ತು ಸಂತರ ಕೆಲ ದೋಷಗಳನ್ನು ವಿನೋದಾತ್ಮಕ ರೀತಿಯಿಂದ ಕಾಣಿಸಿದುದು(೧೧೯); ಉಣ್ಣದೆ ಉದರ ತುಂಬಿದ ಭಾವನೆ(೧೨೯); ಅವರ ಹೃದಯದಲ್ಲಿ ಹರಿದು ಬಂದ ದೇವರ ಬಲದ ಮೂಲಕ ಅವರು ಸರ್ವಸಮರ್ಥರಾದುದು(೧೩೭); ನಿಜವಾದ ಸಂತರು, ಸುಳ್ಳು ಸಂತರು ಇವರಲ್ಲಿಯ ವಿರೋಧ(೧೮೪); ಪಾರಮಾರ್ಥಿಕ ಜೀವನದ ಕಾಣಿಕೆಯನ್ನು ಅನ್ಯರಿಗೆ ನೀಡುವುದು(೨೬೬)

ಸರ್ಪವೀ ಗೊರಲಿ : ಎಂಪಿಡೋಕ್ಲೀಸರವರ ಕಲಹ-ಪ್ರೇಮಗಳೊಡನೆ ಹೋಲಿಕೆ(೬೭); ಹುತ್ತಿನ ತೂತುಗಳೊಳಗಿಂದ ಒಳಸೇರುವುದು, ಆದರೆ ಗೊರಲಿಯು (ಚೈತಾನ್ಯಾಣು) ಮರಳಿ ಹುತ್ತಿನಲ್ಲಿ ಸೇರಿ, ಹಾವನ್ನೂ ಹುತ್ತನ್ನೂ ಕೂಡಿಯೆ ನುಂಗುವುದು(೬೭-೬೮); ಸದ್ಗುರುವಿನ ಕರುಣದಿಂದ ಅದು ದುರ್ಬಲವಾಗುವುದು(೬೭); ಕುಂಡಲಿನೀ ಮಣಿಪುರ ಚಕ್ರದಲ್ಲಿ, ಕುಂಕುಮದಲ್ಲಿ ಮಿಂದು ಮಲಗಿರುವಳು(೬೬)

ಸರ್ಪಭೂಷಣ : ಮುತ್ತಿನಹಾರ-ವಿದ್ರುಮ ಬಳ್ಳಿ ಇತ್ಯಾದಿ ಅನುಭವಗಳು(೨೨೫); ಪಳುಕಿನ ಕೊಡದಲ್ಲಿಯ ದೀಪದಂಥ ಆತ್ಮಲಿಂಗ ದರ್ಶನ(೨೨೬); ನಿಜಗುಣರ ಪರಮಾರ್ಥ ಪರಂಪರೆಯನ್ನು ಮುಂದುವರಿಸಿರುವ(೨೩೨); (ಗುರುಸಿದ್ಧರನ್ನು ನೋಡಿ)

ಸಾಂಖ್ಯ : ದರ್ಶನದಲ್ಲಿಯ ಸ್ಥೂಲ–ಸೂಕ್ಷ್ಮ–ಕಾರಣ ಶರೀರಗಳ ವರ್ಣನೆ(೨೬೭)

ಸಾತತ್ಯ : ಪಾರಮಾರ್ಥಿಕ ಅನುಭವದ ನಿಕಷ(೩)

ಸದೃಶ್ಯಗಳು : ಕನ್ನಡ–ಗ್ರೀಕ ಅನುಭಾವಿಗಳಲ್ಲಿ(೬)

ಸಾರ್ವತ್ರಿಕತೆ : ಪಾರಮಾರ್ಥಿಕ ಅನುಭವದ ಪ್ರಮಾಣ(೪)

ಸಿದ್ಧಲಿಂಗ : ಸಾಧುಗಳು. ತುಮಕೂರ ಬಳಿಯ ಯಡೂರ ಗ್ರಾಮದವರು. ಅವರ ಜೀವನದಲ್ಲಿಯ ಒಂದು ಸ್ವಾರಸ್ಯಮಯ ಪ್ರಸಂಗ(೧೮೪)

ಸಿದ್ಧೇಶ್ವರ : (ಶರಣಬಸವ) ಬಂದೇನವಾಜರೊಡನೆ ಅವರ ಸಂಬಂಧ(೨೪೩); ಪೀರ ಇತ್ಯಾದಿ ದರ್ಶನಗಳನ್ನು ಕುರಿತು(೨೪೪)

ಸೋಽಹಂ : 'ತತ್ತ್ವಮಸಿ'ಯೊಡನೆ ಅದರ ಸಂಬಂಧ(೨೦೯)

ಕ್ಷಣಭಂಗುರತೆ : ಒಂದು ಪರಮಾರ್ಥ ಪ್ರೇರಣೆ(೩೪)

■■

ಅನುಬಂಧ : ೪

ಪ್ರಧಾನ ಅವತರಣಗಳ ಅಕ್ಷರಾನುಕ್ರಮ

(ಅಂಕಿಗಳು ಪುಟಗಳನ್ನು ಸೂಚಿಸುವವು)

ಅಣೋರಣೀಯಾನ ೧೫೯, ೨೨೦
ಅನಂತಯುಗಾಚ್ಯಾ, ೧೬೮
ಅಭಿತೊ ಬ್ರಹ್ಮನಿರ್ವಾಣಂ, ೬೯
ಅಪಾಣಿಪಾದೋ ಜವನೋ, ೧೬೨
ಅಶಬ್ದಮಸ್ಪರ್ಶಮರೂಪ ೧೫೮
ಅನಾವೃತಃ ಶಬ್ದಾತ್, ೨೬೨
ಅಸ್ಥನ್ವಂತಂ ೪೦,೧೪೩,೨೭೧
ಅಬ ನಹೀ ಆವಾನ ಜವಾನ ೨೬೨
ಅಂತರ್ಜಾಮಿಹು, ೧೨೭
ಅನಾಹತ ಹೂಂ ಮರಿಜಾಯ, ೨೮೨
ಅಂಜಲೌ ಪತನ, ೯೦,೨೨೧
ಅಹಂ ಮನುರ್ಭವಂ, ೧೪೪
ಅಮರ ಹೊಯೆ, ೨೬೨
ಅಂಧಳ್ಯಾನೆ ದೇಖಿಲೆ, ೩
ಅಂಜಿಕಿ ೧೨೧
ಅಂದಿಲ್ಲ ಸ್ವಾಮಿ ಇಂದಿಲ್ಲ ೧೪೫
ಅಂತರಂಗದ ಏಕಾಂತ ೪೩
ಅಂತರಂಗದ ಕದವು(೧೪೯
ಅಡವಿಯೊಳಗೆ ೫೨
ಅಚ್ಚೇರುಹಾಲುಕುಡಿದ್ದಾಂಗ ೧೧೬,೧೨೯
ಅಚ್ಯುತನ ನಾಮ ೧೮೦
ಅಂಡಜದೊಳಾಡುತಾನೆ ೯೭
ಅಂದವಾದ ಶ್ರೀಗಂಧ ೨೧೦
ಅಖಂಡವನದೊಳುಅಮೃತಕೊಡ ೨೪೧
ಅನುದಿನ ಮಹಿಪತಿ ೨೫೦
ಅಕೋ ಇದೆ ೨೫೧
ಅರ್ಥಿಯಾಗಿ ಬನ್ನಿ ೨೫೦-೨೫೨
ಅದು ಮೂಲ ಬ್ರಹ್ಮ ೧೮-೧೯
ಅನುಗಾಲವು ಚಿಂತೆ (೩೭)
ಅರಸು ಪರಿವಾರ ಕೈವಾರ ೧೩೭
ಅಯ್ಯಾ ಪಾತಾಳವಿತ್ತಿತ್ತ ೧೫೯
ಅಭಿಮಾನದಿ ಗವಿ ಹೋಗಬೇಕು ೨೧೯
ಅದು ಬಣ್ಣ ಬಣ್ಣದ ೨೨೦
ಅಲ್ಲಮಪ್ರಭು ಶಿಲೆಯ ಒಡೆದು ೨೩೩
ಅರಿತು ಅಮೃತ ೨೪೯
ಆನಂದಮಯಾ ೧೬೫
ಆಳುತಿದ್ಯಾ ಕಂದಾ ೧೨-೧೯-೩೧
ಆತ್ಮನಸ್ತು ಕಾಮಾಯ ೨೭೬
ಆನಂದಂ ಬ್ರಹ್ಮಣೋ, ೮೫
ಓಮಿತ್ಯೇಕಾಕ್ಷರಂ ೨೨೯
ಓಂ ನಮೋ ಜಿ ೨೭೯
ಆಂಧೆ ಕೊ ಸಬ, ೩
ಆನಂದ ನ ಹಾಯಾ ೨೪೫
ಆತಾ ದೃಷ್ಟಿ ಪುಢೆ ೨೧೮
ಆರಕತ ಪರಕೋಟ ೨೧೧
ಆಸಿನೋ ದೂರಂ ವ್ರಜತಿ, ೮೭
ಆತ್ಮನಸ್ತು ಕಾಮಾಯ ೨೭೬
ಆನಂದಂ ಬ್ರಹ್ಮಣೋ ೮೫
ಓಮಿತ್ಯಕಾಕ್ಷರಂ ೨೨೯
ಓಂ ನಮೋ ಜಿ ೨೭೯
ಆಂಧೆ ಕೊ ಸಬ ೨೪೫
ಆತಾ ದೃಷ್ಟಿ ಪುಡೆ ೨೧೮

ಆರಕತ ಪರಕೋಟ ೨೧೧
ಆಸಿನೋ ದೂರಂ ವ್ರಜತಿ ೮೭
ಆಗ ಈಗ ಎನ್ನೆ ೨೩೦
ಆನಂದವಾದ ಚಿದ್ಘನ ೫೫, ೨೪೦
ಆರು ಅಕ್ಷರ ಭೇದ ೧೭೧
ಆರಿಗೆ ಕಾಣದೀ ಮುತ್ತು ೨೧೬-೨೧೭
ಆರು ಮೂರು ಕಟ್ಟಬೇಕಣ್ಣಾ ೨೨೯
ಆವರೋಗವು ಎನಗೆ ೨೦
ಇದು ಕಲ್ಲು ಮೆತ್ತಗೆಮಾಡಿದವನೆ ೨೧೮
ಇದೇ ಬ್ರಹ್ಮಜ್ಞಾನ ೩೧, ೧೬೫
ಇದೇ ಸಮಯ ಹರಿಯೆ ೪೧,೪೨
ಇಂದು ಎನಗೆ ಗೋವಿಂದ ೧೩೭
ಇನ್ನು ಆದರೂ ೪೯
ಇನ್ನೇಕೆ ಯಮನ ಬಾಧೆಗಳು ೧೮೧
ಇನ್ನೇನಿನ್ನೇನು ೨೯೧
ಇಂಥಾದಲ್ಲದೆ ತಾ ನೋಡಿ ೨೪೧
ಇದ್ದರಿರಲಿ ದೇಹ ೨೬೩
ಇಮ್ಮನವಿದ್ದದ್ದು ೨೯೩
ಇದೇ ಅನುಭವಮಂಟಪವು ೨೯೪
ಇವರ ನಂಬಿದ ಮೇಲೆ ೬೩
ಈದ ಹುಲಿಯಂಥ ೧೧೦
ಈಶನು ರೂಪವ ೨೪೭
ಉತ್ತಮ ಸಹಸ್ರ ಕಮಲ ೨೪೨
ಏಕಾಜನಾರ್ದನಿ ೨೬೪
ಎಲೋ ದಾರಿಕಾರನೆ ೨೮, ೩೨
ಎಲ್ಲಿದ್ದ್ಯೋ ಹರಿ ೪೧,೪೩
ಎಂಥ ಗಾರುಡಿಗ ೬೧
ಎನ್ನ ನೀನು ಬಿಡಲು ಸಲ್ಲ ೧೪೭
ಎತ್ತ ನೋಡಿದಡತ್ತ ೧೯೬
ಎಂಥ ಹುಚ್ಚು ಹಿಡಿದಿತಿವಗೆ ೨೭೪
ಎಂದು ಮೈಯ ನರಸಿ ೭೯, ೨೮೪
ಎಲೇ ಎಳೆಯ ೨೬೮
ಏಸೆ ಅಸಾವೆ ಸಂಸಾರಿ ೩೫
ಏನು ಮಾಡಿದಿ ಕೇಳೆನ್ನ ೧೪೨
ಏನು ಮಾಡಿದ್ದ್ಯೋ ೨೪-೨೫
ಏನು ಹೇಳಲಿ ಎನ್ನ ೫೬
ಏನು ಕಾರಣ ೫೭
ಏನ ಸವಿ ಏನ ಸವಿ ೧೭೬, ೧೮೩
ಏನ ಭರಾ ೭೮
ಏನು ಅನ್ಯಾಯ ತಿಳಿಯದು ೮೨
ಒಮ್ಮೆಲೆ ಕೀಲೀ ಹಾಕಿದ ೧೦೮
ಒಳಗಿರೋ ತ್ರಿಕೋಣ ೧೯೩
ಓ ಎನ್ನಬಾರದೇ ಹರಿಯೆ ೧೩೯
ಓಂ ನಂ ಶಿವ ಎನ್ನಿರೋ ೧೬೮
ಓಸ ಚಾಟನೆ, ೧೯೪
ಕಲಿ-ಕಲುಷ-ಕೃತಾನಿ ೧೦೬
ಕೋಹಿ ಸಮರ್ಥೂವೊ ೩೩
ಕಾಹೆ ನ ರಸನಾ ೫೩
ಕೃಷ್ಣಾ ಹಾಲ ಕಾರೆ, ೧೯೭
ಕಡಕೊಳ್ಳದ ನಾ ಗುಲಾಮಾ ೯೪
ಕಂಗಳ ಕೊನೆಯಲ್ಲಿ ೭೦
ಕರ್ಪೂರಾರತಿಯನ್ನು ೯೫
ಕಂಡೆ ನಾ ಕನಸಿನಲಿ ೧೫೪, ೨೭೯
ಕಂಗಳ ಬರ ೧೫೬
ಕಂಡ ಸುಖವ ಕೇಳಿದರೆ ೧೬೦
ಕಂಡಿರೇನೋ, ಮಹಾಕಾರಣ ೩೧
ಕರೆಯದಲೆ ಬಂದಿಹುದು ೧೭೬,೧೮೬
ಕಲ್ಲುಸಕ್ಕರೆ ಕೊಳ್ಳಿರೊ ೧೮೦
ಕಟಬಾಯ ಒಳಗಿನ ೧೯೩
ಕಣ್ಣಿನೊಳಗೆ ನೋಡೋ ಹರಿಯ ೧೯೪
ಕಣ್ಣಿಲೆ ಕಂಡು ೨೦೯
ಕಲ್ಲುಮೆತ್ತಗೆ ಮಾಡಿಕೊಳ್ಳಣ್ಣ ೨೧೮,೨೩೩

ಕಣ್ಣಿನೊಳು ಕಣ್ಣು ಕಂಡೆ ೨೫೦
ಕಣ್ಣಿನೊಳಗೆ ನೋಡಿ ಕೈವಲ್ಯವ ೨೫೦,೨೫೪
ಕಣ್ಣಾರೆ ಕಂಡೆವು ೨೫೧, ೨೫೫
ಕರುಣಿಸೋ ಗುರು ೬೮
ಕರ್ಮವೆಲ್ಲ ಕಾಣದೆ ಹೋಯಿತು ೨೭೨
ಕಾಳಿಂಗನ ಹೆಡೆಯನೇರಿ ೧೫೪
ಕಾಣಬಾರದಂಥ ವಸ್ತು ೧೫೯
ಕಾಲಿಲ್ಲದ ಗಮನ ೨೧೧
ಕಾಲಿಲ್ಲದೆ ನಡೆವುದು ೨೧೨
ಕಾಣುತಿದೆ ಪರಬಿಂದು ೨೨೩
ಕಾಲಮಕರ್ಮವಕಾಲಿಲೆ ಒದಿದವ ೨೮೯
ಕಾಯಕಾಂತಾರ ೨೭
ಕಾಯ ರಹಿತ ಛಾಯ ರಹಿತ, ೨೯೮
ಕಾಯಬಲಿದಡೆ ಮಾಯ ಬಲಿವುದು ೨೯೯
ಕುದಿಯುವ ಸಮಯದಲ್ಲಿ ೨೩೮
ಕುರುಬರೋ ನಾವು ೧೦೨
ಕುರುಹನು ತೋರದೆ, ೧೧೬-೧೧೭
ಕುರುಹು ಕಂಡರೆ ೨೯೨
ಕೂಸನು ಕಂಡೀರಾ ೧೫೧,೧೫೫,೨೮೯
ಕೂದಲ ಎಳೆಗಿಂತ ಸಣ್ಣ, ೨೨೦
ಕೆಂಡಕ್ಕೆ ಗೊರಲಿ ೧೨೭
ಕೇಳನೋ ಹರಿ ತಾಳನೋ ೧೭೭, ೧೮೬
ಕೇಳಿಕೆಯೆ ತಾನಾಗಿಹುದು ೨೫೫
ಕೋಣ ಆಗಬೇಡ ೧೦೭
ಕೃಷ್ಣಾವತಾರದೊಳೊಮ್ಮೆ ೧೨೪
ಕೃಷ್ಣಮೂರ್ತಿ ಕಣ್ಣಮುಂದೆ ೧೫೧-೧೫೨
ಖಾಲತಾ ಸಪ್ತಹೀ ಪಾತಾಳ ೧೬೦
ಖತಾಲಯೆಂಬೊ ಕತ್ತಲೆಯೊಳಗೆ ೨೪೬
ಖೂನ ದೊರೆಯದಿದ್ದರೆ ೬೮
ಗುರುಘೋಷದೊಳಗೆ ೧೭
ಗುರುಬೋಧದಿ ಅರಿತು ೫೫
ಗುರುರಾಯನಂಥ, ೬೫
ಗುರುವೇ ನಿಮ್ಮ ೭೮
ಗುರುವೇ ನೀ ಮಾಡಿದ ೮೯
ಗುರುತ ತೋರಿದ ೯೯
ಗುರುಚರಣ ೧೦೧
ಗುರುಲಿಂಗ ಜಂಗಮ ೧೪೬
ಗುರುವಿನ ಹ್ಯಾಂಗ ೧೦೮
ಗುರುವೆ ಗುರುವೆ ಕಲ್ಪತರುವೆ ೧೭೪
ಗುರಿಯ ಒಗೆದೆನೋ ಬ್ರಹ್ಮಕ್ಕೆ ೧೮೯
ಗುರುವೆ ನಿಮ್ಮಾಜ್ಞೆಯನು ೨೬೧
ಗೋರಕ್ಷ ಜಲಂಧರ ೧೫
ಗೊಲ್ಲರೋ ನಾವು ೬೫, ೧೯೧
ಗೊರಲಿ ಹಾವಿಗೆ ನುಂಗಿ ೬೭
ಚಢತಿ ವಾಢತಿ ಭಕ್ತಿ ೫೫
ಚಂದ್ರ ಸೂರ್ಯನ ಬೀದಿಗಳೊಳಗೆ ೨೨೦
ಚಿಂತೆ ಯಾತಕೋ, ೩೮
ಚಿಂತ್ಯಾಕ ಮಾಡುತಿ, ೪೦
ಚಿತ್ತ ನಿತ್ಯದಲ್ಲಿ ೭೫
ಚಿಂತೆ ಎಲ್ಲಾ ಬಿಟ್ಟು ೧೮೦
ಜಗಾಂತ ಪಿಶಾಚಂ ೨೭೩
ಜೋ ದೇಖೆ ಸೋ ಕಹೆ ೨೧೪
ಜೋ ಪೀರ ಮೇರಾ ೨೪೪
ಜೋ ಅಮೃತಾಸಿ ೨೯೦
ಜಂಗಮರು ನಾವು, ೮೨
ಜಗವ ಸುತ್ತಿಪ್ಪುದು, ೧೩೪
ಜಪವಿಲ್ಲ ತಪವಿಲ್ಲ ೧೬೦
ಜಪ ತಪ ವ್ರತವ್ಯಾತಕೆ ೧೬೮
ಜನ್ಮಜನ್ಮಾಂತರದ, ೧೭೯
ಜಾ ದಿನ ಮನ ಪಚ್ಛಿ ೩೩
ಜಾಲಿಯಾ ೨೧೦

ಜಾಕೆ ಪ್ರಿಯ ೩೬
ಜೀವನ್ಮುಕ್ತಿಗೆ ಮೂಲ, ೨೨೮
ಜ್ಯೋತಿರ್ಲಿಂಗವು ಕರದಿ ೨೦೦
ಟುಟಿ ನಾವ ೬೦
ಡೋಳ್ಯಾಂಚಿ ಭೂಕ ೧೫೭
ತತ್ಸುಖ ಉಂಡು, ೯೮
ತದಾ ದೃಷ್ಟಃ ೬೨, ೨೦೨
ತನ್ನಂತೆ ತಾ ೧೧೧
ತನಗೆ ತಾನಾಗಿ ಆಧಾರವಾಗಿರ್ಪ ೨೦೨
ತತ್ತ್ವಮಸಿ ಮಹಾವಾಕ್ಯ ೭೫, ೨೧೦
ತನ್ನ ನೆಲೆ ನಿಭದೋರುತ ೨೫೮
ತನ್ನ ತಾ ತಿಳಿದ ಮೇಲೆ, ೨೬೭
ತಾಳುತಾಳೆಂದರೆ, ೪೯
ತಾನೆ ಬಲ್ಲುದು ತನ್ನ, ೧೫೬
ತಾಳಮಾನ ಸರಿಸವನರಿಯೆ, ೧೬೭
ತಾನೆ ತಾನಾದದ್ದು, ೨೫೭
ತಿಳಿಯಬೇಕು, ೫೪
ತತ್ತ ಹಿಂದೋಲವಾ ೨೬೦
ತುಕಾ ಮ್ಹಣೆ ೮೫
ತುಲಸೀ ಘರ ೧೩೦
ತೂ ಕೃಪಾಳು ೧೫೫
ತುತ್ತು ತುತ್ತಿಗೆ, ೬೮
ತುಂಬಿಕೊಂಡರು, ೮೨
ತುಂಬಿಕೊಂಡರು ತಾವು, ೧೮೩
ತೊರೆದ ಜೀವಿಸಬಹುದೆ, ೮೧
ತೋಯ ತೋಯವ, ೯೮
ದಣಿಯದೆ ಮಲಗಿದೆನೊ, ೨೮೭
ದಾಸನೆಂದರೆಪುರಂದರದಾಸ ೧೭೭, ೧೮೪
ದಾಸರಿಗುಂಟೇ ಭವಶೋಕಾ, ೧೨೬
ದೇವನಲ್ಲವೇನೋ, ೫೯
ದೇವರ ಕರುಣೆಯಿಂದ, ೬೬
ದೇವಹಿರಿಗುರುರಾಯ, ೯೦
ದೇವಗಂಗೆಯೊಳುಳ್ಳವಗೆ, ೧೩೧
ದೇಹಕರನಿಕರಣ, ೨೦೩
ದೃಷ್ಟಿ ಮನ ಪವನ, ೨೭೭
ದೃಷ್ಟಿಯೊಳಗೆ ದೃಷ್ಟಿ, ೨೭೧, ೨೮೯
ದೃಷ್ಟವೆಲ್ಲ ನಷ್ಟವಾಯಿತು, ೨೭೧
ದ್ವಾರತೆರೆದು ಅವನ ನೋಡುವೆ, ೨೪೭
ದ್ವಿತೀಯಾದ್ವೈಭಯಂ ೮೫
ಧರ ಪಗಡೀ ಮೇ ಘೂಲ ೧೭೫
ಧರೂ ಜಾತಾಂ ೧೫೮
ಧರ್ಮವೆಲ್ಲ ತೂಗಿ ನಿಂತಿತು, ೨೭೨
ಧನ್ಯ ಮಾಡಿದ, ೭೦
ಧರಣಿಯೊಳು ನರನಾಗಿ, ೧೨೪
ಧ್ಯಾನದಿಂದ ಭಜಿಸುವ, ೧೪೬
ಧಿಮಿಗೂಡುತದೆ ಆನಂದದ ಘೋಷ ೨೪೧
ಧೂಮಕೇತು ಭುಂಜಿಸುವಂದದಿ, ೧೨೭
ಧೋಕೇ ಹಿ, ೩೩
ನಜರನ ಆವೈ ೨೧೬
ನಯನ ಕೋ ಲಗೀ ಷ್ಯಾಸ ೨೧೪
ನ ಸ್ತ್ರೀ ನಪುಮಾನ ೧೬೨
ನಯನೇಂದ್ರಿಯವಿಷಯದಿಂದ ೨೦,೩೨
ನಮ್ಮ ಪರಮಗುರು, ೧೨೪
ನನ್ನಿಂದ ನಾನೆ, ೧೪೨
ನಾದಾನುಸಂಧಾನ ೨೩೫
ನಾರಾಯಣನು ನಾಮ ೩೬
ನಾರಿಣೇಚಿ ಪಿಲೆ ೬೫
ನ ಸಂವಾರಿತಾ ೨೫೭
ನಿಜಲ್ಯಾನೆ ೨೫೧, ೧೫೫
ನಾನಾ ಜನ್ಮದಿ ಬಂದು, ೪೨

ನಾ ಮಾಡಿದ ಫಲವೇನು? ೧೮೩
ನಾದವ ಕೇಳುತ ೨೩೩
ನಾನಾವರ್ಣದ ಛಾಯವ ೨೩೬
ನಾಗಸ್ವರಧನಿ, ೨೪೨
ನಿರುಪಾಧಿಯಾಗುವ, ೫೭
ನಿನ್ನ ಕಿಂಕರನೆಂದು, ೧೮
ನಿಜಹೃದಯ ಕಮಲದೊಳು, ೧೬೫
ನಿನ್ನ ನಿಜವ ನೀ ನೋಡೊ, ೧೭೫
ನಿನ್ನ ಊಹಿಸಬಾರದು, ೨೦೬
ನಿಜಗುಹ್ಯದ, ೨೦೮
ನಿತ್ಯಜ್ಞಾನಪರಿಪೂರ್ಣ, ೨೦೭
ನಿಮ್ಮ ನೋಟ, ೨೪೬
ನೀನು ಜಗಕ್ಕೆ ಬಲ್ಲಿದನು, ೧೩೬
ನೀ ಯಾಕೋ ನಿನ್ನ ಹಂಗ್ಯಾಕೊ ೧೭೬,೧೮೧
ನೀತಿಗೆ ನಿಜವಾಗಿಹ, ೨೦೯, ೨೧೭
ನೀರು ನೀರು ಕೂಡಿದ ಬಳಿಕ, ೨೩೪
ನೀಲಮನೆಯೊಳು, ೨೪೯
ನೆಲೆಯಿಲ್ಲದ ಭೂಮಿಯ ಮೇಲೆ, ೧೬೩
ನೆಲ್ಲು ಕುಟ್ಟೋಣು ಬಾರಮ್ಮಾ ೨೩೭
ನೇತ್ರದ್ವಾರದಿ ಹೊರಹೊಮ್ಮಿ ೨೨೭
ನೋಡಿರಿ ಬ್ರಹ್ಮನಾಟವ ೧೪೯, ೧೬೧
ಪತಂಗ ಮಾತಂಗ ೨೨
ಪಶ್ಯತ್ಯಚಕ್ಷು: ೧೬೨
ಪ್ಯಾರೆ ಲವೆ ಜಾನೆ ೨೪೫
ಪ್ರಣವೊ ಧನು ೭೭, ೧೪೯
ಪ್ರಥಮೊ ಹನುಮನ್ನಾಮ ೧೨೧
ಪ್ರಾರಬ್ಧಕರ್ಮಾಣಾಂ ೨೬೫
ಪ್ರಭುವಿನ ಮಹಿಮೆಯೊಳಗೆ ೧೬
ಪರರ ಬೇಡಿಪ್ಪಂತೆ, ೨೬
ಪರುಷವು ತನ್ನಲ್ಲಿ ೫೭
ಪ್ರತ್ಯಕ್ಷನಾದಂಥ ೫೯
ಪರತತ್ವ ತಿಳಿದು, ೧೦೨
ಪಳಕ ಕೊಡದೊಳು, ೨೨೬
ಪಾರೀತಿಯೇ ಸಾದ್ಯಂತೇ ೮೭
ಪಾದಪೂಜೆಯ ಮಾಡಿ, ೯೬
ಪೃಕ್ಷೋವಪುಃ ೧೨೬
ಪುತ್ರೈಷಣಾಯಾಶ್ಚ ೧೯೫
ಪುರಂದರ ವಿಠ್ಠಲ ಪಾದ ೧೨೪
ಪುಣ್ಯವಂತರಿಗೆ ಹೊಳೆದೀತು ೨೦೯
ಪೇಳಲಳವೆ ೨೫೦, ೨೫೩
ಫಾಸಿಯ ಜರಿದು, ೧೪೨
ಬಾನಿಕೃಟಿಬಾಸ ೨೧೪
ಬಾಲಗ್ರಶಾತಭಾಗಸ್ಯ ೨೨೦
ಬಿನುಪಗ ಚಲೆ, ೩,೧೬೧,೨೦೧
ಬೆ ನಾಮಕಾ ಏಕನಾಮ ೨೯೩
ಬಲ್ಲಿದ ನಮ್ಮ, ೧೫೮
ಬಯಲಿಗೆ ಬಯಲು, ೧೭,೧೮, ೧೦೦ ೨೦೧
ಬಹುದೊಡ್ಡದೀ ಜನ್ಮ ೧೨,೧೩, ೧೬, ೨೧೭
ಬಲ್ಲವರಿಗೆ ಅರ್ಜವ, ೫೦
ಬ್ರಹ್ಮನಳಿನದೊಳಗೆ, ೫೬
ಬಂದ ದುರಿತ, ೮೧
ಬ್ರಹ್ಮಾನಂದದ ಸಭೆಯೊಳಗಲ್ಲಿ ೧೫೧, ೧೫೭, ೨೧೫
ಬ್ರಹ್ಮಾನಂದದ ಸುಖವೇನು, ೨೮೦
ಬಾ ಬಾ ಬಾ ಎನ್ನ, ೭೪,೨೪೮
ಬಡಿಮುತ್ತುದುರುವ, ೨೪೯
ಬಿಲ್ವಪತ್ರಿಯ ಧರಿಸಬೇಕಣ್ಣ, ೧೮೭
ಬ್ರಾಹ್ಮಣನೆಂದರೆ, ೨೪೨
ಬುಧಜನರನುದಿನ, ೨೪೧

ಬೇಡಿದ ಪದಾರ್ಥ, ೭೮
ಬೋಧಮಂಟಪದಲ್ಲಿ, ೯೮
ಬೋಧಿಸೆನ್ನನು, ೧೧೩
ಬೆಟ್ಟವನೇರುವಾಗ, ೧೭೪
ಮಕ್ತೇಃ ಫಲಂ ೨೩೭
ಭ್ರಮನ್ ವಾನಂತೆ ೨೧
ಭಕ್ತಿಭಾವವ ೬೦
ಭವತಾರಕನ ಪಾದ ೭೫
ಭಕ್ತಹರಳ ೮೧
ಭಕ್ತನೆಂದರೆ ಭಕ್ತ ಪ್ರಲ್ಹಾದ, ೧೧೯
ಭಕ್ತಿರಸದಲ್ಲಿ ತನ್ನ, ೧೭೯
ಭಾವಿಕ ಬಲ್ಲನು, ೨೧೯, ೨೨೮
ಭೂರಿ ಬ್ರಹ್ಮಾನಂದ, ೭೧
ಭೋಜನ ಮಾಗತಿ ೧೫೪
ಭೋರನೆಂಬುವ ನಾದದಲ್ಲಿ, ೧೮೮
ಮದ್ವಭಕ್ತಾಯತ್ರ ಗಾಯಂತಿ ೧೫೮
ಮೀ ಮೀನಿ ೫೨
ಮುಸಾಫೀರ ಸೋತಾ ಹೈ ೩೦,೭೬
ಮನಹೋಗಿ ಮಾಧವನ, ೩೭,೩೮
ಮಸ್ತಕದಲಿ ಮಾಣಿಕದ, ೪೩
ಮನಸಿನ ಮುರಗಿಯ, ೫೦
ಮರುಳು ಎನ್ನ ಮನ, ೬೨
ಮಂಗಲವಾಗಿಹುದು, ೭೦
ಮಂತ್ರ ಹೇಳಿದ ಪ್ರಣವ, ೬೬
ಮತ್ತೆ ಮತ್ತೆ, ೮೮
ಮಗಾ ಹುಟ್ಟಿದವ್ವ ೧೫೫, ೨೫೧, ೨೫೮, ೨೫೯
ಮಳೆಗಾಳಿಸಿಡಿಲಿನ, ೧೮೪
ಮರ್ತ್ಯದೊಳು ಚಲಿಸುವಂಥ, ೧೪೯
ಮಂಡಲದೊಳಗಾಡುವದೋ, ೨೪೧
ಮಸೂತಿಯೊಳಗಿನ ಮೂಲ, ೨೬೬
ಮಲಗಿ ಪರಮಾದರದಿ, ೨೫೪
ಮಾನವ ಜನ್ಮ ದೊಡ್ಡದು, ೪೭, ೪೯
ಮಾಂತ್ರಿಕರೊಳು ಬಲು, ೬೨
ಮಾತುಮಾತಿಗೆ ಶಂಕರ, ೧೭೪
ಮುಪ್ಪಿನ ಮುನಿಯ, ೧೫
ಮುಟ್ಟಿಕೊಟ್ಟಾ ಗುರುರಾಯ, ೧೫೬
ಮುತ್ತು ಕೊಳ್ಳಿರೊ, ೨೧೫
ಮುತ್ತಿನ ಮೂಗುತಿ, ೨೧೬
ಮುತ್ತು ಬಂದಿದೆ, ೨೧೯
ಮುಂದೆ ನಾನು ಯಾರಿಗುಸರಲಿ, ೨೭೨
ಮೂಗಿಲೆ ವಾಯುವ, ೨೪೨
ಮೂಲಸಾಲಿ ಬೀಜ ಮಂತ್ರ, ೨೪೯
ಮೂಡುತ ಆಡುತ, ೨೫೮
ಮೊದಲ ಭಕ್ತಿಗೆ, ೫೫
ಮೌನ ಹಿಡಿದು, ೯೭
ಯಥಾ ನಧ್ಯ ೨೩೯
ಯಜ್ಞಾತ್ವಾ ಮತೊ ಭವತಿ ೨೭೪
ಯತಿ ಮುನೀಶ್ವರರಿಗೆ, ೨೪೮
ಯಾ ಲಾಗೀ ಶತಜರ್ಜರ ೩೬, ೬೦
ಯರು ಕೈಬಿಟ್ಟರೂ, ೨೫
ಯಾಕೆ ದಯಮಾಡಲೊಲ್ಲೆ, ೪೧
ಯಾರಿಲ್ಲದೆ ನೋಡಿ, ೬೧
ಯಾವ ಸ್ಥಾನದಲ್ಲಿ, ೬೮
ಯೋಗಿ ಬಂದನೋ, ೭೩, ೭೪
ಯೋಗಿ ಆಗಿ, ೧೬೭
ಯೋಗಿಗಳ ಲೀಲೆ, ೨೪೦
ರಾತ್ರಿರ್ಗಮಿಷ್ಯತಿ ೨೦
ರಾಮಾ ರಾಮ ರಾಮ ೧೭೯
ರೆ ದಿಲ ಗಾಫಿಲ ೩೬
ರೋಮ ರೋಮ ರಂಗ ೨೪೬
ರಸರಾಯ ಹೋಳಗಿ, ೯೫

ರತ್ನಬಂದದೆ ನೋಡಿರೊ, ೨೨೧
ರಾಮಾವತಾರದೊಳೊಮ್ಮೆ, ೧೨೪
ರೋಮರೋಮಂಗಳೆಲ್ಲ, ೫೬
ರೋಮರೋಮಕೆ, ೧೨೧,೧೨೨
ಲಿಂಗಪೂಜೆ ಆಗುತದಣ್ಣ, ೨೨೮
ಲಿಂಗಪೂಜೆಯ ಮಾಡಿರೊ, ೨೩೧
ಲೇ ಪರಿವಾರ ತರಿ ೭೫
ಲೋಕವಿಲಕ್ಷಣ ಅಪ್ರಾಕೃತ, ೨೧೫
ವಸಂತಿ ಯತ್ರ ಪುರುಷಾಃ ೧೫೦
ವ್ಯಸೇನ ವ್ಯಪ್ತಬೀಜಃ ೧೭೫
ಬಿಲಕ್ಷಣವಾದಸ್ಯ ೨೦೭
ವಿಷಯ ವಿಷಜಾ ೨೮೬
ವಚನಕೆ ಗೋಚರಮಲ್ಲೆಂದು, ೨೦೭
ವಸ್ತು ಕಂಡೆನೊ ಒಂದು, ೨೨೭
ವಾದವಿವಾದಿಗಳ, ೧೧೧
ವೇದಾಂತತದೊಳು ಗೌಪ್ಯವಾದ, ೧೧೨
ಶರೀರವೆಂಬುವ, ೫೪
ಶರೀರವ ಮರೆತು, ೬೨
ಶರಣು ಮಾಡುವೆ ನಾನು, ೧೪೫
ಶಿವದರ್ಶನ, ೮೩
ಶ್ವಾನಸೂಕರನಂತೆ, ೫೭
ಶ್ರವಣ ಸಮುದ್ರಾ ಸಮಾನ ೬೧
ಶಾಸ್ತ್ರಯೋನಿತ್ವಾತು ೨೦೮
ಶ್ರೀಗಿರಿಯ ಸುಕ್ಷೇತ್ರವಿಂದು, ೧೯೮
ಶ್ರೀಗುರುಮಂತ್ರವ, ೧೭೫
ಶುಭ ನುಡಿತದೆ, ೭೬
ಸಪೆತಿ ಮತ್ವಾ ೧೨೦
ಸಗುಣ ೨೮೯
ಸ ತ್ವೇ ನ್ಯಾನ್ಯತಮೋ ೨೮೨
ಸಮಚರಣವಿಟೇವರಿ ೧೬೬
ಸಬ ಮೆ ರಾಮ ರಹಾ ೧೯೮
ಸೋ ಅಂಗ ವೇದ ೬೭
ಸವಿತೃಮಂಡಲ ೧೯೮
ಸಾಕ್ಷಿ ಹಯ ೧೩೯
ಸಿದ್ಧಿ ತಥಾ ೨೦೧
ಸದ್ಭಕ್ತಿಯೆಂಬ, ೨೮
ಸತ್ತೆ ಸತ್ತೆನಂತ, ೫೧
ಸಂದಿ ಸಂದಿಗೆ, ೮೭
ಸಕಲ ಪ್ರಪನ್ನರ ೯೬
ಸದಮಲ ಮಹಾಜ್ಯೋತಿಯ, ೧೦೭
ಸದರಿನ ಮೇಲೆ ಕುಳ್ಳಿರಿಸಿ, ೧೦೭
ಸರ್ವ ಮನಃಪ್ರೇರಕ, ೧೩೬
ಸದಾ ಎನ್ನ ಹೃದಯದಲ್ಲಿ, ೧೪೬
ಸ್ವಮೂರ್ತಿಗಣ ಮಧ್ಯೆ, ೧೫೦
ಸ್ಮರಣೆ ಒಂದೇ ಸಾಲದೆ, ೧೮೧
ಸಪ್ತವರ್ಣದ ಲಿಂಗ, ೨೦೦
ಸಜ್ಜನ ಹೃದಯದಿ, ೨೨೭
ಸ್ವಹಿತಸುಖದ ಸುಧಾರಸಗರೆವ, ೨೪೧
ಸವಿ ಸವಿ ಸವಿ ಪ್ರಸಾದ, ೨೪೩
ಸಭೆಯೊಳಗೆ ಸಾಂಬನ, ೨೪೭
ಸದಾ ಬೆಳಗುತಿದೆ, ೨೫೦, ೨೫೧
ಸದ್ಗುರು ಸಾಕಿದ ಮದ್ದಾನೆ, ೨೭೭
ಸಾರಿ ಚೆಲ್ಲಿದೆ ಮುಕುತಿ, ೮೬, ೮೭
ಸಾಧಕ ಜನರಿಗೆ, ೮೬
ಸ್ವಾನುಭವಾಮೃತ ಸವಿದು, ೧೦೨
ಸ್ವಾನುಭವದ ಖೂನ, ೨೫೧
ಸಾಲಿಟ್ಟು ಸುರಿತಿರ್ಪ, ೧೧೬
ಸಾರಿ ಶಿವನ ಬೆಳಕು ತೋರುವದು,೧೮೮
ಸುಮ್ಮನಿರು ನಾಲಿಗೆ, ೫೧
ಸುಮ್ಮನೆ ದೊರಕುವದೇನೋ, ೧೭೮, ೧೭೯
ಸುತ್ತಮುತ್ತಲು, ೮೭

ಸುಳುವು ಅರಿವುದು, ೫೬
ಸೂಸಿರ್ದ ತಮಸದಿಂದ, ೧೪೯
ಸೂಸುವ ನದಿಯಂದೀಸಲು, ೨೬
ಸೂಸುವ ಸುಖಮಯ, ೨೦೭
ಸೂತ್ರದ ಬಲವಿರಬೇಕು, ೨೧೮
ಸೇರಿ ಸೇರದಂತೆ, ೬೩
ಸೆಳೆಮಿಂಚಿನಂತೆ, ೨೨೬
ಸೈಶಬಾಸ ಗಬರು, ೭೬
ಸೈ ಸೈ ಸೈ ಕುಂತಿದೇನೆ, ೨೪೭
ಸೈ ಸೈ ಸೈ ಸದ್ಗುರುವಿನ ೧೧೦
ಹರಿ ಹಾ ೬೯
ಹರನೀವ ಕಾಲಕ್ಕೆ, ೧೩೪
ಹರನು ತಾನು, ೫೮
ಹಳೆಯ ದೋಷದ ರಗಟೆ, ೧೦೬
ಹರಿನಾರಾಯಣ ಗುರುನಾರಾಯಣ ೧೭೬, ೧೭೭
ಹನ್ನೆರಡು ಹದಿನಾರು, ೨೩೭
ಹರಿನಾಮಾಮೃತ, ೨೪೩
ಹರಿದಾಸರ ಸಂಗ ದೊರೆಯಿತು, ೨೯೩
ಹರಿ ಚಿಂತನೆ ೮೫
ಹಾವು ಕಚ್ಚಿತಮ್ಮ, ೬೩,೬೪,೬೫
ಹಾವು ತುಳಿದೆನೆ, ೬೩, ೬
ಹಾವಿನ ಹೆಡೆಯ, ೭೩, ೧೨೮
ಹಾದಿ ನಾಲ್ಕರ ನಡುವೆ, ೧೧೪
ಹೀನ ಮನಸಿನ, ೧೧೦
ಹ್ಯಾಗೆ ಇರಬೇಕು, ೩೪
ಹ್ಯಾಗೆ ಬರೆದಿದೆ, ೩೪
ಹ್ಯಾಂಗ ತೀರೀತು ೮೪
ಹ್ಯಾಂಗ ಹಿಂಗಿಸಲಿ, ೮೪
ಹ್ಯಾಂಗೆ ಮುರಿಯಲಿ, ೧೦೯
ಹಿಂದಿಲ್ಲಸ್ವಾಮಿ, ೨೬
ಹಿಂದೆ ಹಲವು, ೩೦
ಹುಚ್ಚು ಹಿಡಿಯಿತು, ೨೭೬
ಹುಸೇನಸಾಹೇಬರ ಬದಿಲೆ, ೨೪೩
ಹೆಡೆಯ ಮೇಲಕ್ಕೇರಿಸಿ, ೧೯೩
ಹೇಗಿದ್ದರೂ ಚಂದ, ೧೩೦
ಹೊಳೆವ ಕೆಂಜೆಡೆಗಳು, ೧೫೬
ಹೌದಪ್ಪ ಹೌದಪ್ಪ, ೧೨೯
ಕ್ಷುರಶ್ಯ ಧಾರಾ ೧೮೦
ಜ್ಞಾನದೇವ ಚಕ್ರಪಾಣಿ ೮೫
ಜ್ಞಾನಿ ಮುಕ್ತ ಹೋವುನ ಗೆಲೆ ೧೫೩
ಜ್ಞಾನಜ್ಯೋತಿಯೊಳಗೆ ೧೦೨
ಜ್ಞಾನವೆಂಬ ನವರತ್ನದ ೧೪೬

ACADEMY OF COMPARATIVE PHILOSOPHY & RELIGION (ACPR)

Founded by Dr. R. D. Ranade



ACPR'S AGENDA

Pursuit of Global awareness for

ONE GOD ONE WORLD ONE HUMANITY

World Unification

ACPR

"ACPR is the Global Call for Awareness of Unity given by the Modern Prophet Gurudeo Dr. R. D. Ranade. Humanity is the New Religion. Rational Mysticism is the new secular language, where faith joins Reason .... Divine Art of Living and Growing in Peace is the wisdom to be acquired and ever updated .... ACPR is Humankind's school for continuous learning .... A new Temple of knowledge .... with Unity of God .... Religion may vanish if philosophies dawn to assert; Philosophies may vanish if Mysticism dawns to assert, and Holistic welfare of entire humankind may dawn if God asserts the mission of ACPR.

- Prof. N. R. Deshpande

ತ್ವರಿತ ಮುದ್ರಣ, ಗದಗ. ☎ 08372-237566